UNIVERSAL
LIBRARY
OU_200424
UNIVERSAL
LIBRARY

ಶ್ರೀ

ಬ್ರಹ್ಮ ಪುತ್ರ ಥಾ ಮಂಜರಿ.

ಎಂಬ

ಈ ವಚನಕಾವ್ಯವು,

ಗೂಡಪಲ್ಲಿ ರಾಮಾಶಾಸ್ತ್ರಿಗಳಿಂದ ಪರಿಶೋಧಿಸಲ್ಪಟ್ಟು

ರಾಜಮೇಯಂ ಕೃಷ್ಣಯ್ಯನವರು ಮತ್ತು

ಬಿ. ಗೋವಿಂದಯ್ಯನವರ ಸ್ವಕೀಯ

ಬೆಂಗಳೂರ ಬುಕ್ ಡಿಪೊ ಪವರ್ ಪ್ರೆಸ್ಸಿನಲ್ಲಿ ಮುದ್ರಿಸಿ

ಪ್ರಕಟಿಸಲ್ಪಟ್ಟಿತು.

ಬೆಂಗಳೂರು.

1914.

ರೈಟ್ಸ್ ರಿಸರ್ವ್ಡ್

ಬೆಂಗಳೂರು ಬುಕ್‌ಡಿಪೋ ಮುದ್ರಾಕ್ಷರ ಶಾಲೆಯಲ್ಲಿ ಮುದ್ರಿಸಿ
ಪ್ರಕಟಿಸಲ್ಪಟ್ಟಿತು.

ವಿಷಯಾನುಕ್ರಮಣಿಕೆ.

ಶೃಂಗಾರಾದ್ಭುತರುಚೀಚಿತ್ರಬೃಹತ್ಕಥಾಮಂಜರಿ.

ವಿಷಯಸಂಖ್ಯೆ.	ವಿಷಯ	ಪುಟಸಂಖ್ಯೆ.
೧	ವಿಕ್ರಮಾದಿತ್ಯ ಜನ್ಮಾದಿ ಕಥಾ ನಿರೂಪಣಂ	೧
೧	ಮಾಲವದೇಶಾದಿವರ್ಣನಂ	೧
೨	ವಿಕ್ರಮಾದಿತ್ಯಂ ಭಟ್ಟಿಪ್ರಭೇತಾಳರಂ ಕೂಡಿ ದೇಶಾಂತರ ಸಂದರ್ಶನಾರ್ಥ ಹೊರಡಿದಿಕೆ	೩೪
೩	ಭೇತಾಳನು ಮಣಿಪ್ರದೀಪದ ಗುಣಾವಿಗಳಂ ಬಣ್ಣಿಸುವಿಕೆ	
೪	ವಿಕ್ರಮಾದಿತ್ಯಂ ನದ್ಯಾಶ್ರಮಕ್ಕೆಯಂ ಬೈಸುವದಕ್ಕನುವಾಗುವಿಕೆ	೭
೫	ತೆರೆಯ ಹಜ್ಜೆ ಪದಲ್ಲಿ ಚಿತ್ರಿತವಾದ ಗಿಣಿಯು ಪೂರ್ವಜನ್ಮದೊಳು ಹೇಳುವ ಕಥೆ	೮
೬	ಎರಡನೇ ಯಾಮದೊಳು ತೆರೆಯನವಿಲು ಹೇಳುವಕಥೆ	೩೩
೭	ಮೂರನೇ ಯಾಮದೊಳು ಚಿತ್ರದ ಕೋಗಿಲೆಯುಹೇಳುವ ಕಥೆ	೪೪
೮	ನಾಲ್ಕನೇ ಯಾಮದೊಳು ಕಾಂಡಪಟದ ಚಿತ್ರದ ಹಂಸಪಕ್ಷಿಯು ಹೇಳುವ ಕಥೆ	೫೩
೧	ಲೀಲಾವತಿಯ ಅಭಿಮಾನಭಂಗದಿಂದ ಎರಡನೇ ಭಾಗದ ಕಥಾರಂಭವು	೬೪
೨	ಚಾಮರ ಗ್ರಾಹಿಣಿಯಾದ ಪುತ್ಥಳಿಕೆಯು ಹೇಳುವಕಥೆ	೬೫
೩	ಎರಡನೇ ಯಾಮದಲ್ಲಿ ಚಾಮರಗ್ರಾಹಿಣಿಯಾದ ಗೊಂಬೆಯು ಹೇಳುವ ಕಥೆ	೧೦೩
೪	ಸೋಮಶೇಖರ ರಾಯಂಗಾತನ ಮಂತ್ರಿಯು ವೃಷ್ಟ್ಯಾಂತಮಾಗೊರೆಯುವ ಕಥೆ	೧೩೪ ೧೩೪
೫	ನಂದಿನಿಯಂ ಕಾಷ್ಠಪಾಲು ಮಾಡುವಿಕೆ, ಮತ್ತು ನಂದಿನಿಯು ಆಲಾಪಿಸುವಿಕೆ	೧೪೦
೬	ಮೂರನೇ ಯಾಮದೊಳು ದೀಪದ ಗೊಂಬೆ ಹೇಳುವಕಥೆ	೧೪೩
೭	ಶಾರಿಕಾಯುಗ್ಮದೊಳು ಸ್ತ್ರೀ ಪಕ್ಷಿಯಂ ಕುರಿತು ಗಂಡು ಪಕ್ಷಿಯು	

ವಿಷಯಸಂಖ್ಯೆ	ವಿಷಯ	ಪುಟಸಂಖ್ಯೆ
	ಹೇಳುವ ಕಥೆ	೧೪೪
೪	ರಾಯಂಗೆ ಅಪ್ತ ನುಂತ್ರಿಯು ದೃಷ್ಟಾಂತ ಮಾಗೊರೆಯುವ ಕಥೆ	೧೪೭
೯	ನಂದಿಯು ಗರ್ಭವತಿಯಾದ್ದಕ್ಕೆ ಹಂಬಲಿಸುವಿಕೆ ಮತ್ತು ಪುತ್ರನಂ ಪ್ರಸವಿಸುಕೆ	೧೫೫
೧೦	ಲೀಲಾವತಿಯಾರಾಧಿಸುತ್ತಿದ್ದ ಗೌರಿಯು ನಾಲ್ಕನೆ ಯಾಮದೊಳು ಹೇಳುವ ಕಥೆ	೧೬೨
೧೧	ಮಂತ್ರಿಯು ನಂದಿನಿಯಂ ಕಾಣುವಿಕೆ, ನಂದಿನಿಯು ವತಿಯನ್ನು ಶೀಘ್ರಿ ಸುಖವಾಗಿ ಬಾಳುವಿಕೆ	೧೬೯
೧	ತೆರೆ ಹಜ್ಜಡವು ಪ್ರಥನು ಯಾಮದಲಿ.. ನುಡಿಯುವ ಕಥೆ	೧೮೩
೨	ರಾಜಾತ್ಮಜೆಯಾವಿಯಾದ ನಾಲ್ಕು ಮಂದಿಯೂ ಸೇರಿ ಯೋಚಿಸುವಿಕೆ	೧೯೬
೩	ರಾಜಾತ್ಮಜೆಯಾಗಬಯಾದವರು ಯೋಚಿಸಿದಂತೆ ಕೋರಿಕೆಯು ಕೈಸಾರಿಕೊಳ್ಳುವಿಕೆ	೨೦೦
೪	ಎರಡನೇ ಯಾಮದೊಳು ಕಲಾವತಿಯ ಬುರುಕಿಯು ಹೇಳುವ ಕಥೆ	೨೦೫
೫	ರಾಜಪುತ್ರಿಯು ದೃಷ್ಟಾಂತವಾಗಿ ಹೇಳುವ ಕಥೆ	೨೦೭
೬	ರಾಜಾತ್ಮಜೆಯಾದ ನಂದಿನಿಯು ಗರ್ಭವಂತಳಾಳಿ ಪುತ್ರನಂ ಪಡೆದು ತೊರೆದು ಹೋಗುವಿಕೆ	೨೨೩
೭	ಕಲಾವತಿಯ ಕಂಚುಕವ್ಯ ಮೂರನೇ ಯಾಮದೊಳು ಹೇಳುವ ಕಥೆ	೨೨೮
೮	ನಾಲ್ಕನೆ ಯಾಮದೊಳು ಕಲಾವತಿಯುಟ್ಟಿದ್ದ ಶೀರೆಯು ಹೇಳುವಕಥೆ	೨೪೪
೯	ಸೂಚಾರಿಯು ರಾಯಂಗೆ ದೃಷ್ಟಾಂತವಾಗಿ ಹೇಳುವಕಥೆ	೨೪೮
೧೨	ಬಲಿಗಾಗಿ ತಂದಿದ್ದ ಬಾಲನಂ ತನ್ನ ಮಗನೆಂದು ರಾಯಂ ತಿಳಿಯುವಿಕೆ, ಸ್ವದೇಭಿಮುಖವಾಗಿ ಕುಟುಂಬದೊಡನೆ ಹಿಂತಿರುಗಿ ಬರುವಿಕೆ	೨೫೧
೧	ಪದ್ಮಾವತಿಯ ವನವಿಹಾರಂ ...	೨೬೪
೨	ಪದ್ಮಾವತಿಯು ತನ್ನ ಕಾಂತನಾದ ವಿಕ್ರಮಾರ್ಕರಾಯನ ಆಜ್ಞಾನುಸಾರವಾಗಿ ಸತ್ಯಪಿಜಯನ ಕಥೆಯಂ ಹೇಳುವಿಕೆ	೨೬೫
೧	ಭೋಗವತೀ ಪರಾಭವಮೆಂಬ ೫ನೇ ಭಾಗ ಮತ್ತು ಚಂದ್ರಧ್ವಜ ಮಹಾರಾಯಂ ತನ್ನ ಮಕ್ಕಳ ವಿಷಯದೊಳು, ತನ್ನ ಕಾಂತೆಯೊಂದಿಗೆಆಲೋಚಿಸುವಿಕೆ	೨೮೯
೨	ಅಣ್ಣತಮ್ಮಂದಿರಾದ ಮಣಿವರ್ಮ, ಚಿತ್ರವರ್ಮರೀರ್ವರೂ ತಾವು ಮಾಡಬೇಕಾದ ಕಾರ್ಯವಂ ಆಲೋಚಿಸುವಿಕೆ	೩೦೪

ವಿಷಯಸಂಖ್ಯೆ	ವಿಷಯ	ಪುಟಸಂಖ್ಯೆ
೩	ರತ್ನಪ್ರಭೆಪ್ರಾಪ್ತಿಯೂ ರಾಜಕುಮಾರರದಂ ಭಕ್ಷಿಸುವಿಕೆ	೩೨೬
,,	ಮಣಿವರ್ಮ ಚಿತ್ರವರ್ಮರೀರ್ವರು ಪರಸ್ಪರ ಅಗಲುವಿಕೆ ಮಣಿವರ್ಮನಿಗೆ ರಾಜ್ಯಾಪಗಳ ಸಂಪ್ರಾಪ್ತಿಯು	೩೨೮
೪	ಚಿತ್ರವರ್ಮಂ ತನ್ನ ಅಣ್ಣನಂ ಹುಡುಕುತ್ತಾ ಗಂಧೇಭನಗರದ ಬಳಿ ಕುಂತಳೆಯೆಂಬ ವೇಶ್ಯಾಂಗನೆಯುಂ ಶೀರುವಿಕೆ	೩೩೦
೪	ಚಿತ್ರವರ್ಮಂ, ವೇಶ್ಯೆಯಿಂದ ವಂಚಿತನಾಗಿ ಕನಕಪ್ರಭ ಶಿಲೆಯುಂ ಸಂಪಾದಿಸಿ ಮರಳೀ ಆ ವೇಶ್ಯೆಯುಂ ಸೇರುವಿಕೆ	೩೩೫
೬	ಕನಕಪ್ರಭಶಿಲಾವಹಾರಾರ್ಥಂ ರಾಜಕುಮಾರನಂ ಕೊಲ್ಲಲೆತ್ನಿಸುವಿಕೆ	೩೩೯
೭	ಎರಡನೆ ಯಾಮದೊಳು ಚಕ್ರಾಯುಧಸ್ತೋತ್ರಂ ನುಡಿಯುವ ಕಥೆ	೩೪೨
೮	ಚಿತ್ರವರ್ಮಂ ವಂಚನೆಯಿಂದ ಪಾದುಕೆಗಳಂ ಸಂಪಾದಿಸಿ ಅದ್ಕೇ ಸೊಳೆಯುಂ ಸೇರುವಿಕೆ	೩೪೯
೯	ಮೂರನೇ ಯಾಮದೊಳು ಚಕ್ರಾಯುಧಸ್ತೋತ್ರ ಪಿಗ್ರಹಂ ಪೇಳುವಕಥೆ	೩೫೩
೧೦	ಚಿತ್ರವರ್ಮಂ ಮರಳಿ ವೇಶ್ಯಾಂಗನೆಯುಂ ಸಾರಿ ಆವಳಂ ಮೋಸಗೊಳಿಸಿ ರೂಪಾಂತರವಾಗಗೊಳಿಸುವಿಕೆ ...	೩೫೮
೧೧	ಚಿತ್ರವರ್ಮಂ ಅಣ್ಣನಂ ನೋಡುವಿಕೆ ಸಿದ್ಧರಸಮಂ ಸಂಪಾದಿಸುವಿಕೆ	೩೬೦
೧೨	ನಾಲ್ಕನೇ ಯಾಮದೊಳು ಭೋಗವತಿಯ ಪ್ರತಿಬಿಂಬವು ಪೇಳುವಕಥೆ	೩೬೩
೧೩	ಚಿತ್ರವರ್ಮಂ ಕನಸ ಚಂಪಕೆಯುಂ ಮದುವೆಯಾಗುವಿಕೆ	೩೬೪
೧೪	ಚಿತ್ರವರ್ಮಂ ಶಿಲಾರೂಪಳಾದ ತನ್ನತ್ತೆಗೆಯುಂ, ಮನುಜಳಾಗಿಸಿ ತಂದೆ ತಾಯಿಗಳಂ ಸಂದರ್ಶಿಸಲು, ಎಲ್ಲರೊಡನೆ ತೆರಳುವಿಕೆ	೩೬೬

ಬೃಹತ್ಕಥಾಮಂಜರಿ ವಿಷಯಾನುಕ್ರಮಣಿಕೆ

ಸಂಪೂರ್ಣವು.

ಶ್ರೀ ರಸ್ತು.

ಜಯ ಶ್ರೀಕೃಷ್ಣಭಗವರ್ಮ.



ನೃತ್ತಂ॥ ವೇದಾನೀಕಶುಕೋದರೀ ಕುಚಭರಾಲಂಕಾರಸೆದ್ಭೂಷಣಂ ।
ಪಾದಾಕ್ರಾಂತಸಮಸ್ತಭೂತದುರಿತಾರಣ್ಯೌಘದಾವಾನಲಂ ॥ ನಂದೀ
ಶಾದ್ಯಖಿಲಾಪ್ತ ಭಕ್ತಹೃದಯಾಂಭೋಜೋಲ್ಲಸನ್ಮಿತ್ರನುಂ । ಸಂಧ್ಯಾ
ಕಾಲನಟನ್ಮಹಾಪಶುಪತೇ ರಂಭ್ರಿದ್ವಯಂ ಪಾಯಲೇ ॥

ಕಂದಂ ॥ ತರುಣೇಂದುಶೇಖರಸತಿಯ । ಹರುಷಿಸುವಂತೊರೆದನಂದು
ಕನಿನರಸಿಹ್ಮಂ ॥ ವರರುಚಿಸಂಸ್ಕೃತಭಾಷೆಯೊ । ಳೊರೆದುದಕನ್ನಡನು
ಡಿಯೊಳಗೊರೆವೆನೆನುರುಚಿರಂ ॥೧॥ ಅರಸುತಶ್ರಮಿಯಸುತಾಳ್ಪ್ರಭು ।
ಸರಿಯಹವಾತ್ರಕೆದೊರೆಯುಪಕಥವಿಂ ವಿದನಂ ॥ ಪರಿಪರಿಚಿತ್ರದಸೊಬ
ಗಿನೆ । ಹರುಷಾವಹಮುಹಕಥೆಗಳಕಲ್ಪಿಸಿ ಸೂತ್ರಿಸಿನುಡಿವೆಂ ॥೧॥

ಧರಾಮಂಡಲದೊಳು ಪರಿರಂಜಿಸುತ್ತಿರುವ ಭವ್ಯನ್ನ ದೇಶಂಗಳೊಳು ಸೆಸೆ
ರಿನಿಂ ನೆಗಳ್ತ್ವಡೆದ ಸೂರಸೇನಗಳೆಂಬ ದೇಶಮುಂ ಸಮಸ್ತ ರಾಜಧರ್ಮಾನುಸಾರ
ಮಾಗಿ ಪರಿಪಾಲಿಸುತ್ತಿರ್ದ ವೀರಸೇನನೆಂಬ ಧರಾನಲ್ಲಭಂ ಒಂದಾನೊಂದು ಸಮ
ಯದೊಳು ಸಮಸ್ತ ಪರಿಜನ ಸಾಮಂತ ಪರಿವೃತನಾಗಿ ಒಡ್ಡೋಲಗದಿಂ ಸಿಹ್ಮಾ
ಸನಾರೂಢನಾಗಿ ಕುಳಿತು ತನ್ನ ಪ್ರಧಾನಮಂತ್ರಿಯಾದ ಚಿತ್ರಸೇನನೆಂಬುವನಂಕುರಿತು
ಎಲ್ಲೆ ಮಂತ್ರಿಶಿರೋಮಣಿಯೇ ನಿನ್ನಿಂದಲ್ಪವರೆಗಂ ಸಕಲಪುರಾಣೇತಿಹಾಸಚಿತ್ರಚರಿ
ತಂಗಳನೆಲ್ಲವಂ ಕೇಳಿ ಮಹದಾನಂದ ತುಂದಿಲನಾದೆನು. ಧರಾಮಂಡಲದೊಳು
ಜನಿಸಿ ವಿಕ್ರಮಾದಿತ್ಯನೆಂದು ನಾಮಧೇಯನಾಮನಾಗಿ ನೆಗಳ್ತ್ವಗೊಂಡು ಮಹಾಶಕ್ತಿಸಾಹ
ಸಂಗಳಂ ತಾಳಿ, ಲೋಕೈಕವೀರನಾಗಿ, ದೇವಾಸುರರಿಂದಲೂ, ಮಾಡಲಸದಳವಾ
ದ ಅತ್ಯಾಶ್ಚರ್ಯ ಕಾರ್ಯಗಳಂ ಮಾಡಿದನೆಂದು ಸಂಕ್ಷೇಪವಾಗಿ ಕೇಳಿರುವೆನು. ಆ
ಮಹಾರಾಯನ ಚರಿತ್ರಮಂ ಅನುಪೂರ್ವಿಯಾಗಿ ಕೇಳಲ್ಕೇಕೆಂದು ಕಳವಳವಂ ಹೊಂ
ದಿರುವ ನನ್ನ ಮನಮಂ ಸಂತಸಗೊಳಿಸೆಂದು ಸಂಪ್ರಾರ್ಥಿಸಲಾ ಮಂತ್ರಿಶೇಖರಂ
ತನ್ನ ನೆಲದಾಣ್ಮನಂ ಕುರಿತು, ಲಾಲಿಸ್ಯೆ ಮಹಾರಾಜನೇ ! ಎಂದೆನುತಂಸೇಳಲಾರಂ
ಭಿಸಿದಂ.

ರುವಂತೆಮಾಡಿ ಕಳೇಬರವುಂ ಭೂಮಿಯೊಳು ತೊರದು ಆ ಪರಮಶಕ್ತಿಯುಂ ಎ
ಲ್ಲಿಗೆಸೇರಿಸಬೇಕೋ ಆ ನೆಲೆಯುಂಶೇರುವಂತೆ ಅನಿಗೊಳಿಸಿದಂ ತದನಂತರಂ ತತ್ಕಾ
ಲೋಚಿತ ಕೃತ್ಯಂಗಳನೆಲ್ಲಮಂ ಯಥಾವಿಧಿಯಾಗಿ ನೆರವೇರಿಸಿದನಂತರವಾ ವಿಕ್ರ
ಮಾರ್ಕಾವನೀಂದ್ರಂ ಪರಮ ಧಾರ್ಮಿಕನಾಗಿ ರಾಜ್ಯಭಾರಮುಂ ನಿರ್ವಹಿಸುತ್ತಾ
ಪ್ರಜಾರಂಜನೈಕ ತತ್ಪರನಾಗಿ ದೇಶಮುಂ ಸಂತೋಷಗೊಳಿಸುತ್ತಿರುವ ಸಮಯ
ದೊಳು ಶಾಂತ ಶೀಲನೆಂಬೋರ್ವ ಮುನೀಂದ್ರಂ ತಾನು ಮಹಾಕಾಳಿಯುಂ ಸ್ವಾ
ಧೀನಪ ಡಿಸಿಕ್ಕೊಳ್ಳಬೇಕೆಂದು ಯೋಚಿಸಿ ಆ ಮಹಾದೇವಿಯುಂ ಕುರಿತು ತಪವಂ
ಮಾಡಲಾ ಭವಾನಿಯು ಪ್ರತ್ಯಕ್ಷಮಾಗದೆ ಆಕಾಶದೊಳೊಂದು ಶಬ್ದಮುಂಪುಟ್ಟಿ
ಸಿದಳು ಯೆಂತೆನೆ ಎಲ್ಲೆ ಮುನಿಯೇ ನೀಂ ಮಾಡುತ್ತಿರುವೀತಪಸ್ಸಿನಿಂದ ನಾಂ
ತೃಪ್ತಿಯಂತಾಳ್ ನಿನಗಭಿಮುಖವಾಗಿ ನಿನ್ನಿಷ್ಟಾಪೂರ್ತಿಯುಂ ಮಾಡಲಾರೆನು, ನ
ನ್ನಂ ಸಂತಸಗೊಳಿಸಿ ನಿನ್ನಿಚ್ಛೆಯಂ ಕೈಗೂಡಿಸಿಕೊಳ್ಳಬೇಕಾವರೆ, ಭೂಮಿಯುಂ ಪರಿ
ಪಾಲಿಸುತ್ತಿರುವ ಆರಸರಂ ನೂರುಮಂದಿಯುಂ ವರಶೆಯಾಗಿ ನನಗೆ ಬಲಿಯುಂ
ನೆಮುಖಿಸಲು ನಂತರ ತೃಪ್ತಳಾಗಿ ನಾಂ ನಿನ್ನಿಷ್ಟಂ ಸಲ್ಲಿಸುವನೆಂದು ಕೇಳಲಂ
ತೆಯೇ ತೊಂಭತ್ತೊಂಭತ್ತುಮಂದಿ ಭೂಪಾಲರಂ ಆ ದೇವಿಗೆ ಬಲಿಯಾಗಿತ್ತು
ನೂರನೇಯವಂ ದೊರೆಯದೇ ಬಹುಕಾಲವಾಗಿ ನಿರೀಕ್ಷಿಸುತ್ತಿರ್ದ ಆ ಮುನಿಯು ವಿಕ್ರ
ಮಾರ್ಕರಾಯನ ರಾಜಧಾನಿಗೆ ಬಂದು ತನ್ನ ಕೃತ್ರಿವಾಭಿಪ್ರಾಯಮುಂ ಹೊ
ರಹೊರೆದೆ, ರಾಜಾಸ್ಥಾನಮಂ ಸೇರಿ, ಒಹ್ವೋಲಗದೊಳು ಕುಳಿತಿರ್ದ ವಿಕ್ರ
ಮಾರ್ಕರಾಜನ ಎದುರಾಗಿನಿಲ್ಲಲು ಮುಯೂದೆಯಿಂ ಕುಳ್ಳಿರಿಸಿ ಸತ್ಕರಿಸಲು ಆ
ಮುನಿಯು ಮುಂತಾಪ್ರಹ್ಲತೆಯೊಂದಿಗೆ ಬಂದು ದಾಡಿಪಿರಾ ಫಲಮುಂ ಆಶೀರ್ವದಿಸಿ
ವಿಕ್ರಮಾದಿತ್ಯಂಗಿತ್ತು ತನ್ನಕಾರ್ಯಮಂ ಬೇಳೆದೆ ಹೊರಟುಹೋದನು ಪ್ರತಿದಿನದ
ಲ್ಲಿಯೂ ಇದೇರೀತಿಯಾಗಿ ದಾಳಿಂಬೇಹಣ್ಣಂ ತಂದುಕೊಟ್ಟು ಆಶೀರ್ವದಿಸಿ ಹೋ
ಗುತ್ತಾ ಇರಲಾ ಫಲಂಗಳನೆಲ್ಲಮಂ ರಾಯಂ ಕೋಶಾಗಾರದೊಳು ಇಡುವಂತೆ
ಕೋಶಾಧ್ಯಕ್ಷರ ಕೈಗೆ ಕೊಡುತ್ತಿರ್ದಂ.

ಈ ರೀತಿಯೊಳು ಅನೇಕಕಾಲಂ ಕಳೆಯಲೊಂದಾನೊಂದು ದಿನದೊಳು ಯ
ಥಾಪ್ರಕಾರವಾ ಕೃತ್ರಿವಾಶಯಮುನೀಶನ್ಸೇತಂದು ತನ್ನ ಪದ್ಧತಿಯಂತೆ ದಾಳಿಂಬೇ
ಹಣ್ಣಂ ಆಶೀರ್ವದಿಸಿ ಕೊಟ್ಟು ಹೊರಟುಹೋಗಲಾ ಫಲವಂಕೈಯ್ಯೊಳಾಂತಿರುವ
ವಿಕ್ರಮಾದಿತ್ಯರಾಯನಂ ಕಂಪಾತನೆ ತನೂಭವಂ ತಂದೆಯೆ? ಈ ಫಲಮುಂ ತನ
ಗೆದಯವಾಡಬೇಕೆಂದು ಪ್ರಾರ್ಥಿಸಿ ಕೈಗೊಂಡು ಬರುತ್ತಿರಲು ದಾರಿಯೊಳಾಪಲ
ಮಂಕೆಂಡ ಮಂಗನೊಂದದಂ ಆಪಹರಿಸಲಳಸಿ ಆ ಬಾಲಶಿರೋಮಣಿಯ ಕೈಯಿಂದ
ಕಿತ್ತುಕ್ಕೊಂಡು ಪಲಾಯನಂಗೈದು ದೂರದೊಳುಕುಳಿತಾ ಫಲಮಂ ತನ್ನ ಹಲ್ಲು
ಗಳಿಂಚ ಕೇಳುತಿತ್ತು. ಆ ಸಮಯದೊಳು ವಿಕ್ರಮಾರ್ಕ ಭೂನಿಂದ್ರಂ ಮತ್ತೊಂ

ದುಕಾರ್ಯಕ್ಕಾಗಿ ಹೊರಗೆ ಬಂದವಂ ಅಕಸ್ಮಾತ್ತಾಗಿ ಕೋಡಗನನೋಡಲು ಕಿ
ತ್ತುಬಿಸುಡುತ್ತಿದ್ದ ದಾಳಿಂಬೀಹಣ್ಣಿನಿಂದ ಸುರಿಯುತ್ತಿದ್ದ ವಿಧವಿಧವಾದ ರತ್ನಂ
ಗಳನ್ನು ನೋಡಿ ಕುರುಹಿನಿಂದಾನಲವುಂ ಮುನೀಂದ್ರಂ ತನಗಿತ್ತುದೆಂದರಿತು
ನರವೂಶ್ಚರ್ಯಮಗ್ನನಾಗಿ ಬಳಿಯೊಳಿರ್ದ ಸೇವಕರಂಕಳುಹಿ ಆಕೋಡಗನ ಕೈಯೊಳಿ
ರ್ದ ಆ ಹಣ್ಣಂ ತರಿಸಿ ಅದರೊಳಗಣ ರತ್ನಂಗಳನ್ನೆಲ್ಲವುಂ ತೆಗಿಸಿನೋಡಲು ಸ
ರ್ವೋತ್ತಮಂಗಳಾದ ರತ್ನಂಗಳಂಕಂಡು ಅಸದೃಶಾಶ್ಚರ್ಯಮಂತೊಂದಿ ಕೋ
ಶಾಧ್ಯಕ್ಷನಂ ಕರೆಯಿಸಿ ಅವನಂಕುರಿತು ಎಲ್ಲಿ ಕೋಶಾಧ್ಯಕ್ಷನೇ ಈವರಿವಿಗೂ ಸ್ಥ
ತಿನಿದೊಳು ನಿನ್ನಸ್ಥಾನಕ್ಕೆ ಕಳುಹಿಸುತ್ತಿದ ದಾಳಿಂಬೀ ಹಣ್ಣುಗಳೇನಾದ್ದು
ವೆಂದೆನಲು ಆ ಕೋಶಾಧಿಪಂ ಸ್ವಾಮಿ ಅವುಗಳನ್ನೆಲ್ಲಾ ಒಂದೆಡೆಯೊಳು ಭದ್ರಪ
ಡಿಸಿರುವೆನು ಇಪ್ಪಷ್ಟೆಯಾದರೆ ತರಿಸುತ್ತೇನೆಂದು ಬೇಳ ರಾಜಾಜ್ಞಾನುಸಾರವಾಗಿ
ಆ ಹಣ್ಣುಗಳನ್ನೆಲ್ಲವುಂ ತರಿಸಿ ರಾಯನ ಮುಂಗಡೆಯೊಳಿರಿಸಲದಂ ನೋಲಿಸಿ
ನೋಡಿ ಅಂಥಾ ಅಮೌಲ್ಯರತ್ನಂಗಳೇ ಇರಲು, ಪಾರಮಿತಾಶ್ಚರ್ಯವಶನಾಗಿ
ನರ್ಕಕಾಗ್ರಣಿಗಳಂ ಕರೆಯಿಸಿ ಆರತ್ನಂಗಳಂ ಸರೀಕ್ಷೆಮಾಡುವಂತೊರೆಯಲಾ ರ
ತ್ನಪರೀಕ್ಷಕರು ಆ ರತ್ನಂಗಳಿಂಕೋಡಿ ಎಲ್ಲಿ ಮಹಾರಾಯನೇ ನಾವೀವರಿವಿಗೆ
ನೋಡಿದ ರತ್ನಂಗಳಲ್ಲಿ ಇಂಥಾವರೊತ್ತಮಂಗಳಾದ ರತ್ನಗಳಂ ಕಂಡದ್ದೇ ಇ
ಲ್ಲವು ಈ ರತ್ನಗಳಿಗೆ ಬೆಲೆಯುಂ ನಿಶ್ಚಯಿಸುವುದಕ್ಕೆ ಯಾರಿಗೂ ಶಕ್ತಿಸಾಲದ್ದು
ಎಂದು ವಿಜ್ಞಾಪಿಸಲಾ ಸಕ್ರವರ್ತಿರಾಯಂ ಈ ರತ್ನಂಗಳಂ ಬ್ರಾಹ್ಮಣ ವಿನಿಯೋ
ಗಮಂಮಾಡಬೇಕೆಂದು ಯೋಚಿಸಿ ಕೆಲವುಮಂದಿ ವಿಪ್ರೋತ್ತಮರಿಂಕರಸಿ ಆ ಭೂ
ಸುರಾಳಿಗಿತ್ತು ಸಂತೋಷಚಿತ್ತನಾಗಿರುತ್ತಿರಲು ಆ ವಾರನೇವಿನ ಯಥಾಪ್ರಕಾರ
ಮಾಗಿ ಆ ಕೃತ್ರಿಮಾಶಯಮುನಿಯು ದಾಡಿಮಿಯಲ ಹಸ್ತನಾಗಿ ಬಂದಾಸ್ಥಾನಮಂ
ಪ್ರವೇಶಿಸಲು ರಾಜಂ ಭಕ್ತಿಪರನಾಗಿ ಅದಮುಖಮಾಗಿ ಬೋಗಿ ಪಾದಂಗಳಂತೊ
ಳಿದು ಅರ್ಘ್ಯಪಾದಾದ್ಯವಿಗಳಿಂ ಸತ್ಕರಿಸಿ ವಿಸ್ತರತ್ಪಾಸನದೊಳು ಕುಳ್ಳಿರಿಸಿ ಎಲ್ಲಿ
ಮಹಾನುಭಾವರೇ ! ವ್ರದಿನದೊಳು ಅಮೌಲ್ಯವಂದ ಫಲಮಂ ತಂದಿತ್ತು ಆಶೀ
ರ್ವದಿಸಿ ತಮ್ಮ ಮನೋಭಾವಮನ್ನೊರೆಯದೆ ಮೌನದೊಳೇ ದಯವಾಡಿಸುವಿರಿ
ತಮ್ಮ ಮನೋಗತಮನೆಂದಾದರೂ ದಯವಾಡಿ ಅನುಗ್ರಹಿಸಬೇಕು ಯೆಂದು
ವಿನಯದಿಂ ನುಡಿಯಲಾ ಕೃತ್ರಿಮಾಶಯಮುನಿಯು ಎಲ್ಲಿ ಪಿಕ್ರಮಾದಿತ್ಯನೇ ಲಾ
ಲಿಸು ನಾನೊಂದು ಯಾಗಮಂ ಮಾಡಲು ಉದ್ದೇಶಿಸಿರುವೆನು ಅದು ನಿನ್ನಿಂದ
ಲ್ಲದೇ ಮತ್ತೋರ್ವನಿಂದ ನಿರ್ವಿಘ್ನಮಾಗಿ ನಡಿಸಲಾಗದು ಅದಕ್ಕಾಗಿಂಬೇ ನಿ
ನ್ನಂಕಾಯುವನೆನೆಲು ರಾಜಂ ಆ ಮುನಿಯಂ ಕುರಿತು ಸ್ವಾಮಿ ಮಹನೀಯ್ಯರೇ !
ತಮ್ಮಸೇವೆಯಿಂದಲ್ಲದೇ ಈ ದೇಹವು ಸಾರ್ಥಕಮಾಗುವುದೆಂತು ಕಾಲಾದಿ
ಗಳಂ ಪೇಳಲು ಶಿರಸಾವಹಿಸಿ ಮಾಡುವೆನೆನಲು ಆ ಮುನಿಯು ಎಲ್ಲಿ ಭೂಮೀಂ

ದ್ರನೇಲಾಲನು ಇಂದಿಗೆ ಹದಿನಾಲ್ಕನೇ ದಿನದೊಳು ರಾತ್ರಿಯೊಳಾಯಾಗಂ ಪ್ರಾರಂಭಿಸುವದು ನಮ್ಮ ತಪೋವನವು ಪಲಾಶಾರಣ್ಯ ಮಧ್ಯದೊಳಿಹುದು ಆ ಕಾಲಕ್ಕೆ ಸರಿಯಾಗಿ ನೀಂ ಬಂದು ನೆನ್ನ ಮನೋರಥ ಸಿದ್ಧಿಯನ್ನಾಗಗೊಳಿಸಬೇಕೆಂದು ಹೇಳಿ ರಾಜನನುಮತಿಯಂಗೊಂಡು ಪೋಗಲು ವಿಕ್ರಮಾದಿತ್ಯಂ ಆ ಸಮಯಮಂ ನಿರೀಕ್ಷಿಸುತ್ತಿರ್ದು ಅಂದಿನದುದಯದೊಳೆದ್ದು ಪ್ರಾತಃಕಾಲಕೃತ್ಯಂಗಳನ್ನೆಲ್ಲಮಂ ನೆರವೇರಿಸಿ ಭೂಸುರೋತ್ತಮರಿಗೆಲ್ಲ ಗೆ ಧನಕನಕ ವಸನಾದಿಗಳನೆಲ್ಲಮನ್ನಿತ್ತು ಭೋಜನಮುಂಮಾಡಿ ದಿವ್ಯಾಭರಣಾಂಬರಾಲಂಕೃತಗಾತ್ರನಾಗಿ ಧನುರ್ಬಾಣಂಗಳಂ ದಿವ್ಯಚಂದ್ರಾಯುಧಮುಂ ಕೊಂಡು ರಥಾರೂಢನಾಗಿ ಪುರದಿಂ ಹೊರಟು ಆ ಪಲಾಶವನಮುಂ ಹುಡುಕುತ್ತಾ ಬಂದಂ.

ಹೀಗೆ ಹುಡುಕುತ್ತಾ ಬಂದವಂ ಆ ಮುನಿಯ ತಪೋವನಂ ದೊರೆಯದೇ ಹೋಗೆ ಘೋರಾರಣ್ಯಮಂ ಹೊಕ್ಕು ಆ ವನದೊಳು ಕಂಗೊಳಿಸುತ್ತಾ ಬಂದ ಸಿಹ್ಮ, ಶಾರ್ದೂಲ, ಶರಭ, ಗಂಡ ಭೀರುಂಪ, ಭಲ್ಲೂಕ ಲುಲಾಯ ಹರಿಣಾಲಪ್ಯನೇಕ ಮೃಗಂಗಳಂ ನೋಡಿ ದಿವ್ಯಜಾಣಂಗಳಿಂ ಶೀಳುತ್ತಾ ಇಂತೆಯೇ ಆ ಮುನೀಂದ್ರಂ ಹೇಳಿದ್ದ ಕುರುಹುಗಳ ಮೇಲೆ ಅಲ್ಲಿಂದ ಹೊರಟು ಬರುತ್ತಾ ಆಮ್ರ ಪನಸ ತಿಂತ್ರಿಣೀ ಜಂಬೂ ಪ್ಲಕ್ಷ ನಾರಿಂಗ ನಾರೀಕೇಳಿ ಬದರಿ ನಿಂಬಾಶ್ವತ್ಥ ಕಪಿತ್ಥ ವಾಪಲ ಧಾತಾತ್ರ್ಯದ್ಯನೇಕ ಫಲ ವೃಕ್ಷಂಗಳಿಂದಲೂ ವಕುಳಕುಟಜಪಾಟಲ ಚಂಪಕಾಮಲ್ಲೀ ಮತಲ್ಲಿಕಾಕೇತಕೀ ಬಿಲ್ವಾಶೋಕಕದಂಬ ಸುರಕಾಂಚನಾದ್ಯನೇಕ ಪುಷ್ಪಲತಾ ವೃಕ್ಷಂಗಳಿಂದಲೂ ಸಾಲತಮಾಲ ಬಿಲ್ವಾರ, ಬಿಗುನಿ ಜೇವು ಕ್ಕೇಗುಮೊದಲಾದ ವೃಕ್ಷಸಮೂಹಂಗಳಿಂದಲೂ ಎಲ್ಲೆಲ್ಲಿಯೂ ಕೆಂಗುಕೌಂಗುಗಳ ವನಂಗಳಿಂದಲೂ, ವಿಧವಿಧಮಾದ ಪಕ್ಷಿಜಾತಿಗಳೆಲ್ಲವೂ ತಮ್ಮ ವೈರಭಾವಮಂ ಬಿಟ್ಟು ವಿನೋದವಾಗಿ ಇಂಪಾದ ಸ್ವರಂಗಳಿಂದ ಧ್ವನಿಗೈಯುತ್ತಲೂ, ಸಿಹ್ಮಶಾರ್ದೂಲ ಗಂಡಭೀರುಂಡ ನಾಗಕಾಸುರ ಸೂಕರ ಕೃಷ್ಣಮೃಗ ಜಂಬುಜ ನ್ಯುಗಧೂರ್ತಕಾದ್ಯನೇಕ ಮೃಗನಿವಹಂಗಳು ತಮ್ಮ ಜಾತಿವೈರಂಗಳಂ ಬಿಟ್ಟು ಮೈತ್ರೀಭಾವದೊಳು ಸಂಚರಿಸುತಾ ಕಾಂಬುವದರಿಂದಲೂ ಅಲ್ಲಲ್ಲಿ ಕಾಸಾರಸರೋವರಂಗಳು ಕಣ್ಮಂಗಳ ನಾಡುತ್ತಿ ಬಂದದ್ದರಿಂದಲೂ ಇದಾದರೋ ತಪೋವನವಾಗಿರ ಬಹುದೆಂದರಿತು ಹುಡುಕುತ್ತಾ ಬರಲಲ್ಲೊಂದು ಪರ್ಣಶಾಲೆಯು ದೃಷ್ಟಿಗೆ ಗೋಚರವಾಗಲಾಯೆಡೆಯೊಳು ತನ್ನ ರಥಮಂ ಬಿಟ್ಟು ವಾದಜಾಲಿಯಾಗಿ ಯಾ ಆಶ್ರಮವಂ ಪ್ರವೇಶಿಸಿ ನೋಪಲು ಸಕಲ ಸಾಮಗ್ರಿಗಳನ್ನೆಣಿಮಾಡಿಕೊಂಡು ಹೋಮದ ಕುಂಡದ ಬಳಿಯೊಳು ಕುಳಿತುಕೊಂಡಿರುವ ಕಪಟಾಶನಂ ಕಂಡು ವಿಕ್ರಮಾರ್ಕಭೂಪಾಲಾಂಪ್ರಂ ಸಾಷ್ಟಾಂಗಮಾಗೆರಗಿ ನಿಂದು ಕೈಗಳಿಂ ಜೋಡಿಸಿಕ್ಕೊಂಡು ಸ್ವಾಮಿನಾ ತಪೋಧನರೇ! ಭವದಾಜ್ಞಾನುಸಾರವಾಗಿ ಬಂದಿರುವೆನು ನಂನಿಂದಾಗಬೇಕಾದ ಕಾರ್ಯಮುಂ ಆಜ್ಞಾಪಿಸಬೇಕೆಂದು ವಿನಯ

ಮಾಗಿ ಪ್ರಾರ್ಥಿಸಲು ಆ ಕೃತ್ರಿಮಾಶಯಂ ಹೀಗೆಂದು ಯೋಚಿಸಿದಂ ಇದು ಸೂರ್ಯಾಸ್ತಮಯ ಕಾಲವಾಗಿಪ್ಪದು ನಾಂ ಮಾಡುವಕಾರ್ಯಕ್ಕೆ ಇದು ಸಕಾಲವಲ್ಲವು ಆದ್ದರಿಂದ ಈ ರಾಯಂ ಆ ಮಹಾನಿಶಿಕಾಲಂ ಬರುವವರಿಗೂ ನೀರೆ ಕೆಲಸದೊಳು ನೇಮಿಸಿ ನಂತರ ನನ್ನಿಷ್ಟಮಂ ಕೈಗೂಡಿಸಿಕೊಳ್ಳುವೆನೆಂದು ಎಲ್ಲಿ ವಿಕ್ರಮಾದಿತ್ಯ ಮಹಾರಾಯನೆ ನಿನ್ನಂಥಾ ಸತ್ಯಭಾಷಿಯನ್ನೂ ಪರೋಪಕಾರಾದಿ ಸದ್ಗುಣಾಭರಣನಂ ನಾನಾರಂಕಾಣೆನು ಎಂದು ಹೊಗಳುತ್ತಾ ಈ ಆಶ್ರಮಕ್ಕೆ ಪೂರ್ವದಿಕ್ಕೆನೊಳು ಪಲಾಶವನ ಮೊಂದಿಹುದು ಆ ವನಮಧ್ಯದೊಳು ಒಂದು ಮುಳ್ಳುಮುತ್ತುಗದ ಗಿಡ ವಲ್ಲಿ ತಲೆ ಕೆಳಿಕಾಗಿ ಹಿರ್ವಭೂತಾಧಿಪಂ ಆವಾಸವಾಗಿರುವಂ ಅವನಂ ಅತ್ಯುಪಾಯು ದಿಂದ ಹಿಡಿತರಬೇಕು. ಕೈಗೆ ದೊರೆಯುವವೇ ಸ್ರಯಾಸವು, ಒಂಪುವೇಳಿ ಕೈವ ಶನಾದರೆ ಅನೇಕ ವಿಧಂಗಳಾದ ಕಥೆಗಳಂ ಹೇಳುವನು, ಅವುಗಳಿಗೆ ಸದುತ್ತರಂಗಳಂ ಹೇಳದೇ ಪೋದರೆ ಅಪಾಯಮುಂ ಉಂಟುವಾಡುವನು ತಕ್ಕ ಉತ್ತರಂಗಳಿಂ ಹೇಳಿದರೂ, ಕೇಳಿ ನಂತರ ತಪ್ಪಿಸಿಕ್ಕೊಂಡು ಹೋಗಿ ಅದೇ ಗಿಡವನ್ನೇ ಸಾರುವನು ಆದುದರಿಂ ನಿನ್ನ ಸಾಹಸವನೆಲ್ಲವಂ ತೋರಿ, ಆಭೂತಾಧಿಪನಾದ ಭೇತಾಳನಂ ಹಿಡಿದು ತರಬೇಕೆಂದೊರೆಯಲು ವಿಕ್ರಮಾರ್ಕರಾಜಂ ಆ ಭೂತಾಧಿಪನಾರು? ಆ ಮುಳ್ಳುಮುತ್ತುಗದ ಗಿಡದೊಳು ಆವಾಸಿಸಲು ಕಾರಣವೇನು ಇದರ ಪರಿಯನೆಲ್ಲಮಂ ಕೇಳಬೇಕೆಂದು ಕುತೂಹಲಮಿಪ್ಪುದು ದಯಮಾಡಿ ನನ್ನ ನುನಃ ಸಂಶಯ ನಿವೃತ್ತಿಯಂ ಮಾಬೇಕೆಂದು ಮರಳೀ ಪ್ರಾರ್ಥಿಸುತ್ತಿರುವ ವಿಕ್ರಮಾರ್ಕಾವನೀಶನಂ ಕುರಿತು, ನಿನ್ನೀ ಪ್ರಶ್ನೆಗಳಿಗೆಲ್ಲಾ ಆ ಭೂತಾಧಿಪನೇ ಸದುತ್ತರವಂ ಪೇಳುವನೆಂದೊರೆಯಲು ಆ ಭೂಪಿನಾಂದ್ರಂ ಅಲ್ಲಿಂ ಪೂರ್ವಾಭಿಮುಖಿಯಾಗಿ ಹೊರಟ್ಟು ಆ ವನಮುಂಸಾರಿ ಹುಡುಕುತ್ತಾ ಮುಳ್ಳುಮುತ್ತುಕದ ಗಿಡದ ಬಳಿಯಂ ಸೇರಿ ನೋಡಲು, ಗಾಢಾಂಧಕಾರವಾದ್ದರಿಂದ ಇಂಥಾ ರೆಂಬೆಯೊಳಗಿರುವನೆಂದು ವ್ಯಕ್ತವಾಗದೇ ಪ್ರಯಾಸದಿಂದ ಭೇತಾಳನಿರುವ ಶಾಖೆಯಕಂಡು ಗಿಡಹತ್ತಿ ಪಿಡಿತರಲು ಆಸಾಧ್ಯವೆಂದರಿತು ತನ್ನ ಕೈಯೊಳಿದ್ದ ದಿವ್ಯ ಖಡ್ಗವನ್ನೆತ್ತಿ ಆ ಭೇತಾಳಂ ತಲೆ ಕೆಳಕಾಗಿ ತೂಗಾಡುತ್ತಿರುವ ರೆಂಬೆಯಂ ಛೇದಿಸಲು ಆ ಭೇತಾಳಂ ಆಶಾಖೆಯೊಂದಿಗೆ ಭೂಮಿಯೊಳು ಬಿದ್ದು ಏಹೋ ಇದೇನು ನಾನು ವಾಸವಾಡುವೀ ತಡವ ರಂಬೆಯಂ ನಿವರಿಗಂ ಥೈರ್ಯವಾಗಾರೂ ಛೇದಿಸಿದವರೇ ಇಲ್ಲವ್ವ. ಇವನಾರೋ ಮಹಾಥೈರ್ಯಶಾಲಿಯಾಪ ಮಹಾಪುರುಷನಂತೆ ಕಾಣುತಾನೆ ಈತನಿಂದ ನನ್ನ ಶಾಪವೇನಾದರೂ ಪರಿಹಾರವಾಗುವದೊ ಯೇನೋ ಈತನಂ ವಿಚಾರಿಸಿ ನೋಡುವೆನೆಂದು ವಿಕ್ರಮಾರ್ಕರಾಯನಂ ಕುರಿತು ಎಲ್ಲೈ ಪುರುಷೋತ್ತಮನೆ ನೀನಾರು ನನ್ನ ವಾಸಸ್ಥಾನದಿಂದೀ ವಿಧವಾಗಿ ಭೂಮಿಯೊಳು ಕೆಡಹಲು ಕಾರಣವೇನು? ಎಂದು ಕೇಳುತ್ತಲಿರುವಾ ಭೂತಾಧಿಪನಂ ಕುರಿತು ಕೇಳ್ದೆ ಭೂತಾಧಿಪತಿಯೆ ನಾಂ ಕ್ಷತ್ರಿ

ಯವಂಶಜಾತಂ ಉಜ್ಜಯಿನೀ ಪುರಾಧೀಶನಾಗಿರುವೆಂ ಇಲ್ಲಿಗೆ ಸಮೀಪದೊಳಿರುವ ಪಲಾಶಾರಣ್ಯದೊಳು ವಾಸಮಂ ಮಾಡುತ್ತಿರುವ ಯೋಗೀಂದ್ರನ ಆಜ್ಞಾನುಸಾರ ವಾಗಿ ನಿನ್ನಂ ಹಿಡಿದುಕೊಂಡು ಹೋಗಲೋಸುಗಂ ಬಂದಿರುವೆನು ನೀಂ ನನ್ನ ಮಾತುಗಳಂತೆ ಜೊತೆಯೊಳು ಬಾರದಿದ್ದೊಡೆ ಅಂತಕ್ಕೈವುದೇ ವಾಸ್ತವ್ಯಮೆಂದೊರೆದು ಸುಮ್ಮನಾಗಲಾ ಭೇತಾಳಂ ಈ ಪುರುಷನ ಆಕೃತಿಯಂ ನೋಡಿದರೆ ಸಾಮಾನ್ಯನಂತೆ ತೋರುವದಿಲ್ಲ. ನಾಂ ಜೊತೆಯೊಳು ಪೋಗದೇ ವಿಮುಖನಾದರೆ ನನ್ನಂ ಪಂಪಿಸಿ ಕೊಂಡೊಯ್ಯುದೇ ಪಿತಲಾರನು ಎಂದು ಯೋಚಿಸಿ ಅಂತೆಯೇ ಇವನ ಶಕ್ತಿಯಂ ಪರೀಕ್ಷಿಸಿ ನೋಡಬೇಕೆಂದು ಯೋಚನೆಯಂಮಾಡಿ ಎಲ್ಲೆ ಪುರುಷೋತ್ತಮನೇ ನಾಂ ನಿನೊಂದಿಗೆ ಬರುವೇಕಾದರೆ ನನ್ನ ಪ್ರಶ್ನೆಗಳಿಗೆ ಸದುತ್ತರಂಗಳಂ ಕೊಡುವೇಕು ಎಂದೊರೆದು ಆಂತೆಯೇ ಆ ಮುಳ್ಳುಮುತ್ತುಗದ ಗಿಡವಂಸಾರಿದವನಾಗಿ ವಿಕ್ರಮಾರ್ಕಂ ಈ ಭೂತಾಧಿಪಂ ಹೀಗೆ ಯುಕ್ತವಾದ ಮಾತುಗಳಿಗೆ ಶಿಕ್ಕುವನಲ್ಲ. ಹಿಡಿದು ಹೊತ್ತುಕೊಂಡೇ ಹೋಗುವೇಕೆಂದು ನಿಶ್ಚೈಸಿ ಆಗಿದವಂಹತ್ತಿ ಭೇತಾಳನಂ ಹಿಡಿದುಕೊಂಡು ಹೆಗಲಮೇಲೆ ಹೊತ್ತುಕೊಂಡವನಾಗಿ ಗಿಡದಿಂದಿಳಿದು ಮುನ್ಯಾಶ್ರಮಾಭಿಮುಖನಾಗಿ ಹೊರಟು ಬರುತ್ತಿರಲಾ ಭೇತಾಳಂ ರಾಯನನ್ನು ಕುರಿತು ಒಂದು ಕಥೆಯಂ ಹೇಳಲಾರಂಭಿಸಿ ಆ ಕಥೆಯು ಪೂರ್ತಿಯಾಗುವವರಿಗೂ ಆ ಕಥೆಗೆ ರಾಯಂ ಸದುತ್ತರವಂ ಹೇಳುವ ಪರಿಯಂತಂ ವಿಕ್ರಮಾರ್ಕರಾಯನ ಹೆಗಲಿನಮೇಲೆಯೇ ಕುಳಿತಿದ್ದು ತರುವಾಯ ಮಾಯಮಾಗಿ ಬಂದು ಆ ಮುತ್ತುಕದ ಮರವಂ ಶೇರಿದನು ಈಪರಿಯನ್ನೆಲ್ಲಮಂ ಕಂಡಾಭೂವರಂ ಆಚ್ಚರಿಯಬಟ್ಟು ಮರಳಿ ಬಂದು ಆ ಮ್ಯಶ್ಮಾನದೊಳು ನೋಪಲು ಯಥಾ ಪ್ರಕಾರವಾಗಿ ಜೋಲಾಡುತ್ತಿರುವ ಭೇತಾಳನಂ ಹಿಡಿದು ಹೊತ್ತುಕೊಂದು ಬರಲಾಭೇತಾಳಂ ಪುನಹಾ ಅಂತೆಯೇಗೈಯ್ಯಲು ರಾಯಂತಾನು ಮುನ್ನಿನೊಲು ಸಾಗುತ್ತಿರಲ್ಕೆ ಈಪರಿಯೊಳು ಇಪ್ಪತ್ತುನಾಲ್ಕು ಬಾರಿ ಭೇತಾಳಂವಾಡುವ ಪ್ರಶ್ನೆಗಳಿಗೆ ಉತ್ತರಂಗಳಂ ಕೊಡುತ್ತಾ ಹಿಡಿದು ಹೊತ್ತುಕ್ಕೊಂದು ಬರುತ್ತಾ ಬರಲು ಆ ರಾಯನ ಬುದ್ಧಿ ಸಾಹಸ ಶಕ್ತಿ ಸ್ಥೈರ್ಯಾದಾರ್ಯಗಳಂ ನೋಡಿ ಸರ್ವಜ್ಞನೆಂದತ್ಯಾಶ್ಚರ್ಯಪರವಶನಾಗಿ ಈತನಂ ಆಶ್ರಯಿಸಿ ಸೇವೆಯಂ ಮಾಡಿಲು, ನನ್ನ ವಾರಪರಿಹಾರವಾಗುವದೇ ನಿಶ್ಚಯವೆಂದು ನಂಬಿದವನಾಗಿ ಆ ಭೂಪಾಲಾಗ್ರಣಿಯ ಮುಂಗಡೆಯೊಳು ನಿಂತು ಮುಕುಳಿತ ಕರಕಮಲನಾಗಿ ನಾನೀವರೆಗಂ ನಿನ್ನಂ ಪರಿಕಿಸಲೋಸುಗಂ ಈವಿಧವಾದ ತೊಂದರೆಗಳಂ ಉಂಟುಮಾಡಿದೆನೇತೂರ್ತ ಮತ್ತೊಂದಲ್ಲವು ಈಗ ನಿನ್ನ ವಿದ್ಯಾಬುದ್ಧಿ ಶಕ್ತಿಸಾಹಸಂಗಳಂ ಕಂಡು ಮಹದಾನಂದ ತುಂದಿಲನಾದೆನು ಆದರೆ ನನ್ನ ಮನವಿಯೊಂದಿಹುದು ಲಾಲಿಸಿ ಕರುಣಿಪುದು. ನಿನಗ್ಕುವಿಲ್ಲೋ ನಾನೋರ್ವ ಮಹಸ್ಸಿಯರ ಶಾಪಕಾರಣದಿಂದ ಈ ರೂಪವಂ ತಾಳಿರುವೆನು. ನನ್ನ ವಶದೊಳು ಸಪ್ತಕೋಟಿ ಮಹಾ

ಭೂತಂಗಳು ಇಹವು. ನನಗೀ ಶಾಪಮುಂ ಪರಿಹಾರ ಮಾಡಬೇಕೆಂದಾ ಶಾಪಾಯುಧ ರಂಪ್ರಾರ್ಥಿಸಲು ಕಲಿಯುಗದೊಳು ವಿಕ್ರಮಾರ್ಕಭೂಮೀಶನೆಂಬೋರ್ವ ಮಹಾರಾಯನುಜನಿಸುವನು ಆತನ ವಶವರ್ತಿಯಾಗಿ ಒಂದುಸಾವಿರ ವರುಷಂಗಳು ಆ ಮಹಾಪುರುಷನಂ ಪೂಜಿಸಿ, ನಿನ್ನೀಶಾಪವನ್ನು ವಿನೋಚನೆಯಂ ಹೊಂದುವದೆಂದಾಜ್ಞೆಯನ್ನಿತ್ತಿರುವರಾಗಿ ಅಂದಿನಿಂದ ನಿನ್ನ ಗಮನವನ್ನೀ ನಿರೀಕ್ಷಿಸುತ್ತಿದ್ದೇನು. ನನ್ನ ಪುಣ್ಯಯೋಗದಿಂದ ಇಂದಿನೊಳು ನಿನ್ನ ಸಂದರ್ಶನವಾಯಿತು. ಇಂದು ನಾನು ಧನ್ಯನಾದೆನು ಎಂದೊರೆದು ಎಲ್ಲೆ ಮಹಾರಾಯನೇ ನಿನ್ನಮೇಲೆ ಕುಳಿತುಕೊಳ್ಳುವನಾಗು ನಾನು ಆ ಮುನಿಯ ಆಶ್ರಮಕ್ಕೆ ಕೊಂಡೊಯ್ವೆನೆಂದು ವಿನಯಾವನಿತನಾಗಿ ಸಂವ್ಯಾಧಿಸಿರುವ ಭೇತಾಳನಂಕುರಿತು ಎಲ್ಲೆ ಭೂತಾಧಿಪನೇ ! ನೀನು ಮಾಡಿದ ಈವರಿವಿಗೆ ನಿತಂಕೊಪ್ಪಾಯಗಳಿಂದ ನಿನ್ನೀ ಮೇಲ್ನುಡಿಗಳಂ ನಾನು ನಂಬಲಾರೆನೆನಲಾಗಿ ಭೇತಾಳನು ನಂಬುಗೆಯಂಪುಟ್ಟಿಸಲು, ಪ್ರಮಾಣಮುಂ ಮಾಡಿನುಡಿಯಿಸಿ ಅದಕ್ಕೆ ನೆಚ್ಚಿದ ವಿಕ್ರಮಾರ್ಕಭೂವರಂ ಆತನಮೇಲೆ ಕುಳಿತುಕೊಳ್ಳಲು, ಆ ರಾಜನಂ ಹೊತ್ತುಕೊಂಡು ಭೂಚರಿಸುತಾದ ಭೇತಾಳನು ಕೃತಯುಗಸಮಯದೊಳು ಶ್ರೀರಾಮಚಂದ್ರಶಿಕ್ಷೆಯಂ ವಾನರರಾತ್ಮಜಂ ತನ್ನ ಮೇಲೆ ಸರಿಸಿಕೊಂಡು ಹೊರಟಂತೆ ನಡೆದುಬರುತ್ತಾ ವಿಕ್ರಮಾರ್ಕಕ್ಷ್ಮಾಣೀಧವನಂ ಕುರಿತು ಎಲ್ಲೆ ರಾಜಾಧಿರಾಜನೇ ಈಗ ನಿನಗೊಂದ ಪಾಯಂ ಪ್ರಾಪ್ತಿಯಾಗುವದು ಅವನ್ನು ಪೇಳ್ದಿಸಿ ಪರಿಹಾರವಂ ನಿಶ್ಚೈಸಿರುವೆನು ಈ ತಪೋವನದೊಳು ಆಪಾದವಾಗಿ ನಿನ್ನೆಂ ಯಾಗರಕ್ಷಣಾರ್ಥವಾಗಿ ಬರುವಂತೆ ಮಾಡುವ ಮುನಿಯ ಕೃತ್ರಿಮವಾಶಯಮುಂ ನೀನರಿಯುವುದುತ ಅತಂ ನಿಜವಾದ ಮುನೀಂದ್ರನಲ್ಲ. ಆ ಮುನಿಯು ಪೂರ್ವದೊಳು ಪಾಪಾತ್ಮಜಬ್ರಾಹ್ಮಣನಾಗಿದ್ದು ಮಹಾವೇದಿಯಂ ಕುರಿತು ತಪಸ್ಸಂಗೈದು ಆ ವಾಕ್ಯೆಯಂ ಮೆಚ್ಚಿಸಿ ವರಗಳಂಪಡೆದು, ಮಹತ್ಪಪಿಯಂತಾಗಿ ಬಾಳಬೇಕೆಂದು ನಿಶ್ಚಯಿಸಿದವನಾಗಿ ಘೋರಾರಣ್ಯಮಂ ಸಾರಿ ಅನ್ನಾಹಾರಗಳಂಬಿಟ್ಟು ತಪ್ತೇಕಾಯತಪ್ತಚಿತ್ತನಾಗಿ ಧ್ಯಾನಮಂ ಮಾಡುತ್ತಾ ಬಿಕ್ಕು ಮುಳಿಪಾದ ಕಾಲದೊಳು ಕ್ಷೀವಾಷ್ಟಾಹಾ ಪರಿಹಾರಾರ್ಥನಾಗಿ ಶುಷ್ಕಪರ್ಣಜಲ ವಾಯುಗಳಂ ಆಹಾರಮಾಡುತ್ತಾ ಯೋಗಾರೂಢನಾಗಿ ಧ್ಯಾನದೊಳು ಒಹುಕಾಲತಪಸಂ ಗೆಯ್ದು, ಶಂಕರಾರ್ಧಾಂಗಿಯು ಆತನ ತಪಸ್ಸಿಗೆ ಮೆಚ್ಚಿ ವರಗ ನಡೊಳು ನೀನಿಂತು ತಪಮಂ ಮಾಡಲು ನಾತ್ಯನ್ನಿಯನ್ನಾಂತು ನಿನ್ನಿಷ್ಟಾಪೂರ್ತಿಯಂಮಾಡೆನು ನನ್ನಂ ಮೆಚ್ಚುವಂತೆ ಮಾಡುವೆಯಾದೆ, ಭೂಮಿಯನ್ನಾಳುವ ರಾಜೋತ್ತಮರ ನೂರುಮಂಯ್ಯ ಶಿರಂಗಳಂ ಛೇದಿಸಿನನಗೆಸನುವಿತಿಸಿವಯಾದರೆ ಆಗ್ಗೆ ನಾನು ನಿನ್ನ ಇಷ್ಟವನ್ನು ಸಲ್ಗಿಸುವೆನೆಂದು ಒಂದು ಶಬ್ದಮಂ ಪುಟ್ಟಿಸಲು ಕೇಳುತ್ತಾ ಬ್ರಾಹ್ಮಣನು ತದಾಜ್ಞೆಯಾಗಿ ರಾಜೋತ್ತಮರೋರ್ವರನ್ನೀ ನಿನ್ನಂದದೆ ನೋಸದೊಳುಶಿಲುಕಿಸಿ ಕರೆತಂದು ಅತನಾಶ್ರಮದ ಮುಂದೆಸಂಯೊಳಿರುವ ಮಹಾಕಾಳಿಯ

ಮುಂದೆ ಬಲಿಯಾಗಿ ಸಮರ್ಪಿಸುತ್ತಿರುವನು. ಈವರಿವಿಗೆ ಈವರಿಗೆ ಈ ಪರಿಯೊಳು ತೊಂಭತ್ತೊಂಬತ್ತು ಮುನಿಯುಂ ಬಲಿಯಾಗಿ ಶಿರಚ್ಛೇದನಂಗಳಂಮಾಡಿರುವನು, ನೂರನೇ ಬಲಿಗಿಾಗಿ ನಿನ್ನಂ ಸಿದ್ಧಗೊಳಿಸಿಕ್ಕೊಂಡಿರುವಂತೆ ಕಾಣುವದು, ಎಂದೊರೆಯಲು, ಕೇಳುತ ಕಳವಳವನ್ಯಾಂತ ಭೂಮೀಶಂ ತನ್ನೊಳುತಾಂ ಯೋಚಿಸಿದನು. ಈದಿನ ಮಾದರೋ ದಕ್ಷಿಣಾಯನದೊಳಗಣ ಕೃಷ್ಣಪಕ್ಷಚತುರ್ದಶಿಯಾಗಿರುವದು ಯಜ್ಞವನ್ನು ಮಾಡುವದಾಗಿಯೂ, ಅದಕ್ಕೆ ಸಂಭವಿಸುವ ವಿಘ್ನುಪರಿಹಾರಾರ್ಥವಾಗಿ ನನ್ನಂ ಬರುವಂತೆ ಆಜ್ಞಾಪಿಸಿರುವನು. ಯಜ್ಞವಂ ಮಾಡಬೇಕಾಗಿದ್ದರೆ ಋತ್ವಿಗ್ಜನಗಳೂ ಅಧ್ವರ್ಯುವೂ, ಆಗ್ನೀಂದ್ರರೇ ಮೊದಲಾವ ಯಜ್ಞಕಾರ್ಯನಿರ್ವಾಹಕರು ಬಂದಿರಬೇಕು. ಆಶ್ರಮದೊಳು ನೋಡಿದರೆ ಆ ಮುನಿಯೋರ್ವನೆಲ್ಲದೆ ಮತ್ತಾರೂ ಗೋಚರಿಸುವದೇ ಇಲ್ಲವು.

ಯಜ್ಞೋಪಕರಣ ಸಾಮಗ್ರಿಗಳೊಂದೂ ಆ ಬಳಿಯೊಳಿಲ್ಲವು ಈ ಪರಿಯನೆಲ್ಲಮಂ ನೋಡಿದರೆ ಈ ಭೂತಾಧಿಪನೊರೆವುದೇ ಯಥಾರ್ಥವಾಗಿರುವದೆಂದು ನಿಶ್ಚೈಸಿದವನಾಗಿ ಭೀತಾಳಿನಂ ಕುರಿತು ಎಲೈ ಭೂತಾಧಿಪನೇ ! ನಿನ್ನೀಮಾತುಗಳಂ ನಂಬತಕ್ಕದ್ದಾಗಿರುವದು ನೀಂ ನನಗಿಂತು ದಯವಾಂತು ಮಾಡಿದ ಸಹಾಯದಿಂದ ನಿನ್ನಂ ಇಂದು ಮೊದಲಾಗಿ ಪರಮಾಪ್ತ ಮಿತ್ರನೆಂದು ಕರಿಯಬೇಕೇ ಹೊರತು ಮತ್ತಾವರೀತಿಯಿಂದಲೂ ಕರೆಯಬಾರದು ನಾನೇ ವಿಪತ್ತಿನಿಂದ ವಂಚಕ್ತನಾಗುವದೆಂತು ತಕ್ಕ ಉಪಾಯಾಂತರವನ್ನೂ ಹೇಳೆಂದೊರೆಯಲು ಕೇಳ್ದೆ ಮಹಾರಾಜನೇ ನನ್ನಂ ಹಿಡಿದು ತಂದೆನೆಂದು ಆ ಮುನಿಯೊಳು ನೀಂ ವಿಜ್ಞಾಪಿಸಲು, ಕೇಳುತ್ತಾ ಕಪಟ ಹರ್ಷಮಂ ತೋರಿದವನಾಗಿ ನಿನ್ನಂ ದೇವಾಲಯಾಗ್ರದೊಳಿರುವ ಸರೋವರದೊಳು ಸ್ನಾನವಂಮಾಡಿ ಶುಚಿಯಾಗಿ ದೇವಾಲಯಮಂ ಸಾರಿ ಆದೇವಿಗೆ ಅಭಿಮುಖವಾಗಿ ಸಾಷ್ಟಾಂಗ ನಮಸ್ಕಾರಮಂಮಾಡಿ ಈ ಯಜ್ಞಕಾರ್ಯ ವಿಘ್ನಕರ್ತರಂ ಜೈಸುವಂತೆ ವರಮಂಕೇಳಕ್ಕೊಂದು ಬರುವಂತೆ ಆಜ್ಞಾಪಿಸಿ ನೀಂ ವಂದನಂಗೈಯ್ಯುವಕಾಲಕ್ಕೆ ಸರಿಯಾಗಿ ಖಡ್ಗಪಾಣಿಯಾಗಿ ತಾಂ ಬಂದು ನಿನ್ನ ಶಿರಮಂ ಛೇದಿಸುವನು ಆ ಮುನಿಯುಂತು ಸೇಳಲು ಸ್ವಾಮಿಯಾ ಶಾಪಾಯುಧರೇ ಸ್ವಾನಾವಿಗಳಂ ಎಂತುಮಾಡಬೇಕೋ ಆ ಕ್ರಮುವೊಂದೂ ನನಗೆ ತಿಳಿಯದು ತಾವು ದಯಮಾಡಿ ಆ ಕ್ರಮವನೆಲ್ಲಮಂ ಒಂದನ್ನೂ ಬಿಡದೆ ತಾವು ಮಾಪುತ್ತಾ ಬಂದರೆ ಜೊತೆಯೊಳೀ ನಾನು ಮಾಡುವೆನೆಂದೊರೆಯುವನಾಗು ಅಲ್ಲಿ ಮಾಡಬೇಕಾದ ಸ್ನಾನಾದಿಗಳನೆಲ್ಲಮುಂಮಾಡಿ ತೋರಿಸುತ್ತಾ ಬರುವನು ಅಂತೆಯೇ ನೀನೂ ಮಾಪುತ್ತಾ ಬಂದು ಆತಂ ದೇವಿಗೆ ಸಾಷ್ಟಾಂಗವೆರಗಿ ತೋರಲು ದೇಹಮಂ ಭೂಮಿಯೊಳು ಕೆದಹಿರುವ ಸಮಯದೊಳು ಕೆಡಹಿರುವ ಸಮಯದೊಳು ನಿನ್ನ ಕೈಯ್ಯೊಳಿರುವೀ ಚಂದ್ರಾಯುಧದಿಂದ ಆತನ ಶಿರಮಂ ಭರದಿಂದಾದೇವಿಗೆ ಬಲಿಯಾಗಿ ಛೇದಿಸಲು

ನಿನಗಾದೇವಿಯು ಪ್ರತ್ಯಕ್ಷಳಾಗಿ ನಿನ್ನಿಷ್ಟಾಪೂರ್ತಿಯಂ ಕೈಗೂಡಿಸುವಳೆಂದು ಉಪಾಯಮುಂ ಅರುಹಲು ವಿಕ್ರಮಾರ್ಕ ಮುನೀಂದ್ರಂ ಬ್ರಹ್ಮಹತ್ಯೆಯಾಡುವ ದೆಂತು ಇದರಿಂದ ಮಹಾದೋಷ ಪ್ರಾಪ್ತಿಯಾಗುವದೆಂದು ವಿಮುಖಮಾನಸನಾ ಗಲಾ ಭಾವವಂತಿಳಿದಾ ಭೀತಾಳಂ ಸ್ವಾಮಿಾಮಹಾರಾಜರೇ ನೀವು ಸಂಶಯಂ ತಾಳಲಾಗದು ಈ ಮುನಿಯು ಹೀಗೆಯೇ ರಾಜಕುಮಾರರ ನೋರ್ವೋರ್ವರಂ ಕರತಂದು ಈ ದೇವಿಗೆ ಬಲಿಯಾಗಿ ಸಮರ್ಪಿಸಿದ ಕಾಲದೊಳು ಅತನ ಉಪಾಸನಾದೈವವಾಗಿದರ್ ಅಂಜನೇಯ ಮೂರ್ತಿಯುಂ ಈ ರಾಜಕುಮಾರರಂ ವೋಸಗೊಳಿಸಿ ಕೊಂದ ನಿನ್ನ ತಲೆಯಂ ಕಲಿಯುಗದೊಳು ಜನಿಸಿ ಶಕಪುರುಷನೆಂದು ಖ್ಯಾತಿಯನ್ನಾಂತ ವಿಕ್ರಮಾರ್ಕ ಭೂಮೀಂದ್ರಂ ಇಂತೆಯೇ ನಿನ್ನಂ ವೋಸಗೊಳಿಸಿ ಕೊಲ್ಲುವನೆಂದು ಶಾಪವನ್ನಿತ್ತಿರುವನಾಗಿ ನೀನೀತನಂ ಕೊಲ್ಲುವದರಿಂದ ದ್ರೋಹಿಯಾಗಲಾರೆಯೆಂದು ಸನ್ಮತಿಗೊಳಿಸಿ ಅದಕೊಪ್ಪಿದವನಾಗುತಾಶ್ರಮವಂ ಹೊಕ್ಕು ಯಾಗಶಾಲೆಯಂ ಸಾರಿ ಹೋಮಗುಂಡದ ಮುಂಗಡೆಯೊಳು ಕುಳಿತಿರುವ ಮುನಿಯಂಕಂಡು ಸಾಷ್ಟಾಂಗವಾಗೆರಗಿ ಕೈಗಳಂ ಜೋಡಿಸಿಕೊಂಡು ಶಾಪಾಯುಧರೇ ತಮ್ಮಾಜ್ಞಾನುಸಾರವಾಗಿ ಭೂತಾಧಿಪನಂ ಹಿಡಿದುತಂದಿರುವೆನೆಂದೊರೆಯಲು ನೋಡುತಾ ಮುನಿವರಂ ಆ ಭೂಮಿಪನ ಸಾಹಸಾವಿಗಳಿಗೆ ಮೆಚ್ಚಿ ಆ ವಿಕ್ರಮಾರ್ಕನಂ ಕುರಿತು ಎಲೈ ಮಹಾರಾಜನೇ ನಿನ್ನಂಥಾ ಮಹಾಶೂರನಂ ನಾನೀ ಭೂಮಂಡಲದೊಳೆಲ್ಲಯುಂ ಕಾಣೆನು ನಿನ್ನಿಂದಲೀ ನನ್ನ ಯಜ್ಞವು ನಿರ್ವಿಘ್ನವಾಗಿ ನಡೆಯುವದೆಂದು ದೃಢವಾದ ಹೃದಯ ನಾದನೆಂದೊರೆದು ರಾಜಾಗ್ರೇಸರನೇ ಮಹಾನಿಶಿಯು ಕಳೆಯುತ್ತಾ ಬಂದುದು. ಕಾಲಯಾಪನೆಯನ್ನು ಮಾಡಬಾರದಾಗಿ ಈ ತಪೋವನಾಭಿಮಾನದೇವತೆಯಂ ಈ ಯಜ್ಞ ರಕ್ಷಣಾರ್ಥವಾಗಿ ಅಭಿವಂದಿಸಿ ಬರುವನಾಗು ದೇವಾಲಯಮಂ ಪ್ರವೇಶಿಸಬೇಕಾದರೆ ಈ ಸರೋವರದೊಳು ಮಿಂದು ಶುಚಿಭೂತನಾಗಿರಬೇಕು. ಎಂದಾಜ್ಞಾಪಿಸಿದ ಮುನಿಯಂಕುರಿತು ಸ್ವಾಮಿಾ ತಪೋಧನರೆ ನನಗಾವಿಧಾನವೊಂದೂ ತಿಳಿಯದು ತಾವು ದಯಮಾಡಿ ತೋರಿಸುತ್ತಾ ಬಂದರೆ ನಾನಂತೆಯೇ ಆಚರಿಸುವೆನೆನಲು ಅವಿಕ್ರಮಾರ್ಕಾವನೀಂದ್ರನ ಭಾವವನ್ನರಿಯದ ಆಮುನಿಯು ಹಾಗೆಯೇ ಆಗಲೆಂದು ಸಮ್ಮತಿಸಿದವನಾಗಿ ಸ್ನಾನಾವಿಗಳಂಮಾಡಿ ತೋರುತ್ತಾ ಬರಲಂತೆಯೇ ಆ ರಾಯನೂ ಮಾಡುತ್ತಾ ದೇವಾಲಯಮಂ ಹೊಕ್ಕು ಮಹಾಕಾಳಿಯ ಮುಂಭಾಗದೊಳು ಸಾಷ್ಟಾಂಗವಾಗೆರಗಿ ತೋರಲಾ ಮುನೀಂದ್ರಂ ದೇವಿ ಗರ್ಭಹೃದಯಮಂ ಸಾರಿ ಅಡ್ಡಬೀಳಲದೇ ತಕ್ಕ ಸಮಯವೆಂದರಿತಾ ರಾಯಂ ಭರದೊಳು ತನ್ನ ಸೊಂಟದೊಳಗಣ ದಿವ್ಯಕೃಪಾಣಮಂ ವರೆಯಿಂ ಹೊರತೆಗದು ಅತಿಭರದಿಂದಾ ಮುನಿಯ ಶಿರಮಂ ಮೇಲಕ್ಕೆ ಯೇಳುವನಿತರೊಳು ತರಿದುತುಂಡುಮಾಡಿದಂ. ಆ ತಂತ್ರಮುಂಕಂಡು ಹೀಗೆನಡಿಯಬೇಕಾದುದೇ ಭಗವತ್ಸಂ

ಕ್ಷಮೆಯಿಂದರಿತು ಆ ವಿಕ್ರಮಾದಿತ್ಯನ ಭವಿತವ್ಯಮಂ ಯೋಚಿಸಿ ಇವನಂ ಕಟಾಕ್ಷಿಸೆ ಬೇಕೆಂದು ಮನವಾಂತು ತನ್ನ ಸರ್ವೋತ್ತಮವಾದ ರೂಪಮಂ ತಾಳಿದ ಮಹಾದೇವಿಯು ರಾಯನಕಣ್ಗೆ ಮಂಗಳವಾಗಲು ಅಸರ್ವೋತ್ತವವಾದ ಲೋಕೈಕ ಸುಂದರೀ ಮೂರ್ತಿಯಂ ಕಾಣುತ ಸಾಷ್ಟಾಂಗವಾಗಿ ನಮಸ್ಕರಿಸಿ ಯೆದ್ದುನಿಂತು ಮುಕುಳಿತ ಹಸ್ತನಾಗಿ ಯಲೌ ಮಹಾದೇವಿಯೇ ತ್ರಿಲೋಕಜನನೀ ಜಗದ್ವಂದ್ಯೆ ಸ್ತುತಿಮಾತ್ರ ತೃಪ್ತಳೇ ಭಕ್ತಜನಾ ಭೀಷ್ಟಾಮರಧೇನವೆ ನಿನ್ನ ಸಂದರುಶನದಿಂ ದೀ ನನ್ನ ಜನ್ಮಂ ಸಾರ್ಥಕವಾಯಮದು. ನನ್ನ ಕೋಟಿ ಜನ್ಮಾರ್ಜಿತಂಗಳಾದ ಪಾಪಂಗಳೆಲ್ಲಾ ಭಸ್ಮೀಭೂತಂಗಳಾದವ್ವ ಅನೇಕಯುಗಂಗಳು ನಿನ್ನಂಕುರಿತು ಘೋರ ತಪಂಗಳಂ ಮಾಡಿದರೂ ದೃಷ್ಟಿಗೋಚರವಾಗದೀ ರೂಪಮಂ ತೋರಿದುದರಿಂದ ಭಕ್ತಪರವಶಳೆಂಬ ಬಿರುದು ನಿನಗಲ್ಲದೇ ಮತ್ತಾವ ದೈವಕ್ಕೂ ಸಲ್ಲದೆಂದು ಬಗೆ ಬಗೆಯಾದ ಸ್ತೋತ್ರಂಗಳಂ ಮಾಡುತ್ತಾ ಅಂಜಲಿಬದ್ಧನಾಗಿ ನಿಂತಿರುವಾ ರಾಯನಂ ಕುರಿತಾದೇವಿಯು ಎಲ್ಲೆ ರಾಜಾಗ್ರಾಣಿಯೇ ! ನಿನ್ನ ಶಕ್ತಿಸಾಹಸಾದಿಗಳಿಗಾಂ ಮೆಚ್ಚಿದೆನು ನಿನ್ನಿಂದಲಖಿಸಿದೀ ಬಲಯಿಂ ನಾತೃಪ್ತಳಾದೆನು.

ಈತಂ ಈ ಪರಿಯೊಳು ಮೃತ್ಯುಯಂ ತಾಳುವದು ಯುಕ್ತವಾದುದರಿಂದ ನಿನಗೀಹತ್ಯಾ ದೋಷನೊಂದೂ ಇಲ್ಲಮೆಂದೊರೆದು ಲೋಕದೊಳು ನಿಕವೀರನಾಗಿಯೂ ಯಾರಿಂದಲೂ, ಮಾಡಲಸಮಳವಾದ ಕಾರ್ಯಂಗಳಂ ಮಾಡುತ್ತಾ ಸಕಲ ಸುಖಂಗಳಿಂ ಬಹುಕಾಲವಿರಾ ಭೂಮಿಯೊಳು ಜಾಳೆಂದು ವರವನ್ನಿತ್ತಂತೆಯೇ ಅಂತರ್ಧಾನವಾಗಲಾ ಭೂದೇವಿ ಬಿಲದೊಳು ನಿಂತಿರ್ದ ಭೂತಾಧಿಪನಾದ ಭೀತಾಳನಂ ಕಂಡು ಪರಮಾನಂದ ಭರಿತನಾಗಿದ್ದವನು ಮತ್ತಷ್ಟು ಉಬ್ಬಿದ್ದು ಎಲ್ಲೆ ಮಹಾನುಭಾವನೇ ನೀ ಮಾಡಿದ ಉಪಕಾರಕ್ಕಂದ ಈ ಮಹಾದೇವಿಯ ಕರುಣಾಕಟಾಕ್ಷಲಬ್ಧನಾಗಿ ವರಗಳಂ ಹೊಂದಿದೆನು ಪ್ರಾಣಾಪಹಾರಕಮಾದ ವಿಷಶಕ್ತಿನಿಂದ ನಿವೃತ್ತಿಯಂತಾಳಿದೆನು ನಿನ್ನಂಥಾ ಪರಮಾಪ್ತನೂ ಹಿತಜಂತಕನೂ ಈ ಲೋಕದೊಳು ನನಗಾರೂ ಇಲ್ಲವು ನಿನ್ನ ಗುಣಾತಿಶಯಂಗಳಂ ಬಣ್ಣಿಸಲು ಯಾರಿಂದಲೂ ಸಾಧ್ಯಮಲ್ಲವೆಂದು ಹೊಗಳುತ್ತಾ ಬರಲು ಆ ಭೂಮೀಂದ್ರನಂ ಕುರಿತಾ ಭೂತಾಧಿಪಂ ಎಲ್ಲೆ ಮಹಾರಾಜನೇ ? ನೀನಿಂತು ನನ್ನಂ ಹೊಗಳಲಾಗದು, ನಾಂ ನಿನ್ನ ಪಾದಸೇವೆಯಂ ಮಾಡಿ ಧನ್ಯನಾಗುವೆಕೇ ಹೊರ್ತು ಮತ್ತೊಂದಲ್ಲವು. ಇಂದು ಮೊದಲು ತಾವು ಮಾಡುವ ಕಾರ್ಯಂಗಳೊಳು ದುಸ್ತರಮೆಂದು ತೋರುವವುಗಳಿಗೆಲ್ಲಾ ನನ್ನಂ ಸ್ಮರಿಸಿದರೆ ಬಂದು ಶಿರಸಾವಹಿಸಿ ಕಾರ್ಯಮಂ ಕರಗತಮಾಗಗೊಳಿಸುವೆನು ಈ ಯರ್ಥದೊಳು ಎಳ್ಳನಿತಾದರೂ ಸಂದೇಹಮಿಲ್ಲವು ಎಂದು ಪ್ರತಿಜ್ಞಾಪೂರ್ವಕಮಾಗಿ ನುಡಿಯುತ್ತಿರುವ ಭೀತಾಳನಂ ನೋಡಿಮೆಚ್ಚಿ ಅಂತೆಯೇ ಮಾಡುವೆನೆಂದು ಸಮ್ಮತಿಸಿ ನುಡಿಯುತ್ತಾ ಅನುಜ್ಞೆಯನ್ನಿತ್ತು ಭೀತಾಳನಂ ಕಳುಹಿಕೊಡ್ಡು ಅಲ್ಲಿಂ

ಹೊರಗೆಬರುವ ಕಾಲಕ್ಕೆ ಸೂರ್ಯೋದಯ ಸೂಚಕಂಗಳಾದ ಚಿಹ್ನೆಗಳು ಕಾಣಬರ
ಲದಂನೋಡುತ್ತಾ ಆಶ್ರಮಂ ತೊರದು ಬರುವ ಸಮಯಕ್ಕೆ ಕಮಲದಾಂಧವಂ ಪೂ
ರ್ವಾಚಲದೊಳು ರಾರಾಜಿಸುತ್ತಾ ಬರಿತತ್ಕಾಲೋಚಿತ ಕರ್ಮಂಗಳನ್ಮಾಚರಿಸುವದ
ಕ್ಕಾಗಿ ಮುಂಗಡೆಯೊಳು ಕಂಗೊಳಿಸುವ ಮುಂಗಳತರವಾದ ತರಂಗಿಯಂಸಾರಿ
ಸ್ನಾನ ಸಂಧ್ಯಾದಿಗಳಂ ಮಾಡಿಕ್ಕೊಂಡು ತನ್ನ ರಥಮಂಸಾರಿ ರಥಾರೂಢನಾಗಿ ಅ
ಲ್ಲಿಂ ಹೊರಟು ತನ್ನ ರಾಜಧಾನಿಯಂ ಸೇರಿ ಸಕಲಧರ್ಮಶಾಸ್ತ್ರಾನುಸಾರಮಾಗಿ ರಾ
ಜ್ಯಮಂ ಪೊರೆಯುವ ಪ್ರಜಾರಂಜಕನಾಗಿ ಪತ್ನೀಪುತ್ರರೊಂಗೂಡ ಸಮಸ್ತಭೋಗಂ
ಗಳಂ ಅನುಭವಿಸುತ್ತಿದ್ದನು.

ಎಂದು ಪೇಳಿದಾ ಮಂತ್ರಿಯಂ ಕುರಿತಾ ವೀರಸೇನ ಮಹಾರಾಯಂ ಎಲ್ಲೆ
ಮಂತ್ರಿವರೇಣ್ಯನೇ ! ಮಹಾದೇವೀ ಕರುಣಾಕಟಾಕ್ಷ ಪಾತ್ರನಾಗಿಯೂ ಅಸಮ
ಶಕ್ತಿ ಸಾಹಸಾದಿಗಳನ್ನೊಡಗೂಡಿದ ಭೇತಾಳನ ಸಹಾಯ ಮುಳ್ಳವನಾಗಿಯೂ ಇದ್ದ
ಅ ವಿಕ್ರಮಾರ್ಕ ಭೂಮೀಂದ್ರಂ, ಈ ಭೂಮಂಡಲದೊಳು ಮಾಡಿದ ಪರಮಾದ್ಭು
ತಂಗಳಾದ ಕಾರ್ಯಂಗಳೊಳು ಕೆಲವು ಮುಖ್ಯೆತರವಾದವ್ಯಗಳಂ ತಿಳುಹಿ ಸಂತಸಗೊ
ಳಿಸೆಂದು ಸಂಪ್ರಾರ್ಥಿಸುವ ಆ ರಾಯನೆಂ ಕುರಿತು, ಕೇಳ್ದೆ ಭೂಮೀಶನೇ ! ಧರಾ
ಮಂಡಲದೊಳು ಆ ಮಹಾರಾಯನು ಮಾಡಿದವ್ರಗಳೆಲ್ಲಾ ಅಸಮ ಕಾರ್ಯಂಗಳೇ
ಹೊರ್ತು ಇತರರಿಂದ ಮಾಡಬಹುದಾದ ಕಾರ್ಯಂಗಳೇ ಇಲ್ಲವು ಅವುಗಳೊಳು ನೀ
ತಿಪ್ರಧಾನವಾಗಿಯೂ, ರಸಾಲಂಕಾರ ಚಿತ್ರವಾಗಿಯೂ ಅತ್ಯದ್ಭುತವಾಗಿಯೂ
ಇರುವ ಕೈಲಾಸವಾಸನಾದ ಚಂದ್ರಮೌಳಿಯು ಸಂತೋಷವಾಗಿ ತನ್ನೊಡನೆ ಕುಳಿ
ತು ಹೊತ್ತು ಹೋಗುವಂತೆ ಕಥೆಯಂ ಪೇಳುತ್ತಿರ್ದು ಪ್ರಾರ್ಥಿಸುವ ತನ್ನ ಪ್ರಾಣ
ಕಾಂತೆಯಾದ ಕಾತ್ಯಾಯನೀ ದೇವಿಯ ಇಷ್ಟಾನುಸಾರಮಾಗೊರದಚ ರಿತ್ರಮೊಂ
ದಿಹುದು ಅದಂ ಕೇಳಿದರೆ ಆ ಮಹಾರಾಯನ ಸಾಹಸಾದಿಗಳೆಲ್ಲವೂ ತಿಳಿಯಬರು
ವದು ಈ ಚರಿತ್ರೆಯು ಪೊದಲೊಳು ಕವಿಕಂಠೀರವನಾದ ವರರುಚಿಯೆಂಬೋರ್ವ
ವಿಪ್ರಚೂಡಾಮಣಿಯಿಂದ ನಿರ್ಮಾಣಮಾಗೆಂಬೊಳು ರಚಿಸಲ್ಪಟ್ಟಿಹುದು ಎಂದು
ಪೇಳುವ ಸಮಯಕ್ಕೆ ಸಾಯಂಕಾಲ ಸಭಾವಿರಾಮ ಸೂಚಕಂಗಳಾದ ವಾದ್ಯಂಗ
ಳು ಪೋರ್ಗರೆಯುತ್ತಾ ಬರಲು ಅದಂಕೇಳುತಾ ವೀರಸೇನ ಮಹಾರಾಯಂ ಎಲ್ಲೆ
ಮಂತ್ರಿ ಶಿರೋಮಣಿಯೇ ! ನೀನೊರೆಯುವ ಸೊಬಗಿನ ಕಥೆಗೆ ಅವಕಾಶವಾದದೊ
ಇಂದಿನೊಳು ವಿಹರಿಸೋದುದು ಸೂರ್ಯಾಸ್ತಮಯಕಾಲಂ ಸಮೀಪವಿಸುತ್ತಾ ಬಂದು
ದಾದ್ದರಿಂದ ನಾಳೇ ಯಿಂದೀ ಸರ್ವೋತ್ತಮವಾದ ಚರಿತ್ರೆಯಂ ಹೇಳವ ನಮಂ
ಸಂತೋಷಗೊಳಿಸುವಂ ತೊರೆದು ಆ ಮಂತ್ರಿಗೆ ಬಹುಮಾನವನ್ನಿತ್ತು ಅಂದಿನೋಲ

ಗವುಂ ಬೀಳ್ಕೊಟ್ಟನೆಂಬಲ್ಲಿಗೆ ಕರ್ಣಾಟಕ ಭಾಷಾ ವಚನರಚಿತ ಸೌಂದರ್ಯಾದ್ಭುತ ರುಚೀ ಚಿತ್ರ ಬೃಹತ್ಕಥಾಮಂಜರಿಯು ಪೂರ್ವಭಾಗಂ ಪರಿಸಮಾಪ್ತಮಾದುದು.

ಜಯತು ಜಗದೀಶಃ.

ಶ್ರೀರಸ್ತು

ಲಾವಣ್ಯಾದ್ಭುತ ರುಚೀಚಿತ್ರ ಬೃಹತ್ಕಥಾಮಂಜರಿ.

ಕಂ ॥ ಭಾವುಕಮುಂಪರಿರಚಿಸುಗೆ । ಜೈವಾತೃಕಧರಮಗಜಾಸಾಬುಜಮಿತ್ರಂ ॥ ಶ್ರೀವಿಲಸಿತನುತಕಂಠಂ । ಭಾವಜಜನಕಾದ್ಯಖಿಲಾಮರವರವಂದ್ಯಂ ॥೧॥ ನುತತರ ಮಾದೀಕೃತಿಯೊಳು । ಮತಿಪೂರ್ವಕಮಲ್ಲ ದೊದಗಿಕಾಂಬುವತಪ್ಪಂ ॥ ವಿತತದ ಯಾಪರವಿಬುಧರ್ । ಹಿತದಿಂತಿದ್ದಿಗೊಡಲತಿವಿನಯದೊಳು ಜೇಷ್ಮಂ ॥ ॥೨॥

ಸಪ್ತಶರಧಿ ಪರಿವೇಷ್ಟಿತಮಾದೀ ಧರಾಮಂಡಲದೊಳು ಭರತಖಂಡವೆಂಬ ವಿಸ್ತಾರಮಾದೊಂದು ಭಾಗದೊಳು ಮಾಳವ ಎಂಬ ದೇಶವು ಭೂಕಾಂತಾ ಮುಖಾಬ್ಜದಂತೆ ಅತ್ಯಂತ ರಮಣೀಯವಾಗಿ ರಾರಾಜಿಸುತ್ತಲಿರುವುದು. ಈ ದೇಶವು ನಿಗಮಾಗಮ ಸಾಂಗಾಧೀತ ನಿಷ್ಠಾಗರಿಷ್ಠರಾದ ಬ್ರಹ್ಮಜ್ಞಾನ್ಯೈಕ ಪರರಾದ ಬ್ರಾಹ್ಮಣರಿಂದಲೂ, ಮಂತ್ರೋತ್ಸಾಹ ಶಕ್ತಿ, ಧೈರ್ಯ ಶಮದಮದಾಕ್ಷಿಣ್ಯಬುದ್ಧಿ ಪರಾಕ್ರಮಗ್ಗಳಿಂದೊಪ್ಪುತ್ತಲಿರುವ ರಾಜಾಗ್ರಣಿಗಳಿಂದಲೂ, ಶಸ್ಯ ಸಮುಸ್ತೆ ರತ್ನಪರಿಪೂರ್ಣರಾಗಿ ಸಕಲೈಶ್ವರ್ಯ ಸಂಪನ್ನರಾಗಿರುವ ವೈಶ್ಯರಿಂದಲೂ ಉತ್ತಮಾಚಾರಪರರಾಗಿಯೂ, ಸೇವಾಪರ ತಂತ್ರರಾಗಿಯೂ ಇರುವ ಶೂದ್ರರಿಂದಲೂ, ನಾಗ ಪುನ್ನಾಗ ಮಲ್ಲಿಕಾ ಚಂಪಕ ಕುರುವಕಪಾಟಲೀ ಪಾರಿಜಾತ ವಕುಳಜಾತಿ ಕುಂದಮಂದಾರ ಮುಖ್ಯ ಪುಷ್ಪವೃಕ್ಷ ನಿಬಿಡಮಾಗಿಯೂ ಕದಳೀ ನಾರಿಕೇಳ ಪನಸಾಬ್ರವಾದಳಿ ದಾಳಿಂಬ ಜಂಬು ಕಪಿತ್ಥ ಕ್ರಮುಕ ಜಂಬೀರ ಖರ್ಜೂರ ನಾರಿಂಗ ತಿಂತ್ರಿಣೀ ಮೊದಲಾದ ಫಲ ವೃಕ್ಷಂಗಳಿಂದಲೂ, ದ್ರಾಕ್ಷೆ, ಬಿಂಜಾದಿಳಿಲತಾವ್ಯಾ ವೃತಮಾಗಿಯೂ, ವಾಪೀಕೂಪ ತಟಾತ ಕಾಸಾರಸ್ಸಂತೀ ಪುಂಜರಂಜಿತವಾಗಿಯೂ ಸಾಲ ತಮಾಲತಾಲ ತಿಲಕ ಜಾಂಪೇಯ ಪ್ಲಕ್ಷಾಶ್ವತ್ಥ ನಿಂಬಬದರ್ಯಾದಿ ವೃಕ್ಷ ಸಮುದಾಯದಿಂದಲೂ, ಸಿಂಹ, ಶಾರ್ದೂಲ, ಲುಲಾಯ, ಸಾರಂಗ, ಶಶ, ಕುರಂಗ, ನಾಗ, ಭಲ್ಲೂಕ, ಗೋಮಾಯು ಪ್ರಮುಖಮೃಗಜಾಲ ಭರಿತಮಾಗಿಯೂ, ಶುಕ ಪಿಕ ಮಯೂರಸಾರಸಜಾತಕ ಚಕೋರಚಕ್ರವಾಕ ಕ್ರೌಂಚ ಬಕ ಕಳಿಂಗ ಕಲವಿಂಕ ಗಿಡಗ ಕರ್ಬಕ್ಕಿ ಸಾರಾವಾಣ ಚರಣಾಯುಧ ತಿತ್ತಿರಿ, ಕಾಕೋಲೂಕ ಮೊದಲಾದ ಪಕ್ಷಿಸಂಕುಲಕಲಿತಮಾಗಿಯೂ, ಇರುವ ಕಾಂತಾರಂಗಳಿಂದಲೂ. ಅನೇಕ ಋಷ್ಯಾಶ್ರಮಗಳಿಂದಲೂ ಪುಣ್ಯಕ್ಷೇತ್ರಗಳಿಂದಲೂ, ದೇವಾಲಯಾರಾಮಂಗಳಿಂದಲೂ, ನೀರಾವರಿ ಜೆಳೆಗಳಿಂದ ಸರ್ವದಾ ಶೋಭಿಸುತ್ತಿರುವ ಪ್ರದೇಶಗಳಿಂದ

ಲೂ, ಬಂಧುರಸುಂದರವಾಗಿರುವ ದೇಶಕ್ಕೆ ರಾಜಧಾನಿಯಾಗಿ ಉಜ್ಜಯನಿ ಎಂಬ ಪಟ್ಟಣವು ನೆಲೆಗೊಂಡಿರುವದು. ಈ ಪಟ್ಟಣವು ಯುಕ್ತ ಧರ್ಮಾಚರಣಪರರಾಗಿಯೂ, ಸಕಲಕಲಾಪ್ರವೀಣರಾಗಿಯೂ, ಸಕಲ ಶಕ್ತಿ ಯುಕ್ತೆಪರರಾಗಿಯೂ, ರಾಜ ಭಕ್ತಿಯುತರಾಗಿಯೂ, ಇರುವ ಪ್ರಜೆಗಳಿಂದಲೂ, ಸಕಲಯುದ್ಧತಂತ್ರ ಕುಶಲರಾದ ಸಮಸ್ತ ವಾಹನಾರೋಹಣ ಕುಶಲಪ್ರವೀಣರಾದ ಧೀರರಾದ ಭಟರಿಂದಲೂ, ಮಹ ದೈಶ್ವರ್ಯಯುತರಾದ ಧರ್ಮಜ್ಞರಾದ ವೈಶ್ಯಶಿರೋಮಣಿಗಳಿಂದಲೂ, ನಾಟ್ಯಾಭಿನ ಯಗಾನವಿದ್ಯಾಪ್ರವೀಣರಾದ ಲೋಕೋತ್ತರಸುಂದರಿಯರಾದ ವಾರನಾರಿಯರಿಂದ ಲೂ, ಸೌಧಚಂದ್ರಶಾಲಾಗೋಪುರಗಳಿಂದಲೂ, ಪುಣ್ಯವೀಥೀ ಹರಿಹರಾಲಯಾದಿ ದೇವಾಲಯಗಳಿಂದಲೂ, ಹಸ್ತ್ಯಶ್ವರಥಸದಾತಿಸಾಂದ್ರವಾದ ನಿಲಯಂಗಳಿಂದಲೂ ಚತುಷ್ಪಂಥಂಗಳಿಂದಲೂ, ಕೊಟೆಕೊತ್ತಳ ಅಳ್ಳೀರಿಡೆಂಕಣಿಗಣಿಂದಲೂ, ಉದ್ಯಾ ನವಾಪೀಕೂಪ ತಟಾಕಗಳಿಂದಲೂ, ನೋಡುವದಕ್ಕತ್ಯಾಶ್ಚರ್ಯಾನಂದಗಳಂ ನೊಡ ಗೊಳಿಸುತ್ತಿತ್ತು. ಈ ರಾಜಧಾನಿಯನ್ನು ವಿಕ್ರಮಾರ್ಕನೆಂಬ ಮಹಾರಾಜನು ಬಹು ಕಾಲಂ ಸಕಲಸಂಪತ್ತುಗಳೊಂದಿಗೆ ಸುಖದಿಂದ ಪರಿಪಾಲಿಸುತಿರ್ದನು. ಹೀಗಿರು ತ್ತಾ ಒಂದಾನೊಂದುದಿವಸ ರಾತ್ರಿಯೊಳು ಮಲಗಿ ಸುಖನಿದ್ರೆಯಂ ಗೈಯ್ಯುತ್ತಿದ್ದು ಹಾಗೆಯೇ ಭೂಸಂಚಾರವಂಮಾಡುವ ಆಖಿಲಾಷೆಯಂ ತಾಳಿ ಆರಾತ್ರಿಯಂಕಳದು ಮರುದಿವಸ ಉದಯದೊಳೆದ್ದು ನಿತ್ಯಕರ್ಮಂಗಳಂ ನೆರವೇರಿಸಿ ರಾಜಾಸ್ಥಾನವಂ ಹೊಕ್ಕು ತನ್ನಾಪ್ತಮಂತ್ರಿ ಯಾದ ಭಟ್ಟಿಯೊಡನೆ ತನ್ನಾಲೋಚನೆಯಂತಿಳುಹಿ ಆತ ನನುಮತಿಯಂ ಹೊಂದಿ ಆತನೊಡನೆ ಹೊರಬಲನುವಾಗಿ ರಾಜ್ಯಭಾರಮಂ ಯುಕ್ತ ಮಂತ್ರಿಯೊಳಿರಿಸಿ ರಾಜಧಾನಿಯಂ ತೊರೆದು ಅಂಗ, ವಂಗ, ಕಳಿಂಗ, ಕಾಳಿಂಗ, ಕಾಂಭೋಜ, ಸವ್ವೀರ, ಸೌರಾಷ್ಟ್ರ, ಮಗಧಾಜೊಗಧ್ಯಾಪಾಂಜಾಲಾದ್ಯನೇಕದೇ ಶಂಗಳೊಳು, ಚರಿಸುತ್ತಾ ಅಲ್ಲಿನತಿಶಯಂಗಳಂ ಕಂಡಚ್ಚರಿಗೊಳ್ಳುತ್ತಾ, ರಾಜ್ಯಭಾರಾ ತಿಶಯಂಗಳಂ ಕೇಳಿ ಸಂತಸಗೊಳ್ಳುತ್ತಾ ಬಹುದೂರ ದೇಶಾಟನಂಗೈದು, ಕಡೆಗೆ ಅ ಪರಾಂಬುಧೀತೀರಕ್ಕೈದಿದನು. ಆಗ ಭೇತಾಳನನ್ನು ಸ್ಮರಿಸಲಾಗಿ ತನ್ನ ಇಪ್ಪತ್ತೈದು ಕಥೆಗಳಗೂ ಸದುತ್ತರದಾಯಿಯಾದ ಈ ವಿಕ್ರಮಾರ್ಕನೊಳು, ಪರಮವಿಶ್ವಾಸಮುಳ್ಳ ವನಾದ್ದರಿಂದ ಕೂಡಲೇ ಭೇತಾಳನು ವಿಕ್ರಮಾರ್ಕನ ಬಳಗ್ಬಂದಿ ಮುಕುಳಿತಹಸ್ತನಾ ಗಿ ಭಕ್ತಿಪೂರ್ವಕಮಾಗೆರಗಿ, ಎಲ್ಲೆ ಮಹಾರಾಜನೇ ! ನನ್ನನ್ನು ಸ್ಮರಿಸುವದಕ್ಕೆ ಕಾರಣವೇನು ? ಆಜ್ಞಾಪಿಸಬೇಕೆಂದು ವಿನಯಪರನಾಗಿ ಕೇಳುತ್ತಿರುವ ಭೇತಾಳನ ನ್ನು ಕುರಿತು ಎಲ್ಲೆ ಭೂತಾಧಿಪತಿಯಾದ ಭೇತಾಳನೇ ಕೇಳು, ನಾನೀಚಪ್ಪನ್ನಾರು ದೇಶಂಗಳಂ ಸಂಚರಿಸಿ ಅಲ್ಲಿನ ಅತಿಶಯಂಗಳನ್ನೆಲ್ಲವಂ ತಿಳಿದು ಸಂತೋಷಿತನಾದ ರೂ ದ್ವೀಪಾಂತರಂಗಳೊಳಗಿನ ಅತಿಶಯಂಗಳಂ ಪರಿಕಿಸಬೇಕೆಂಬ ಕುತೂಹಲದಿಂದ ತೃಪ್ತನಾಗದೇ ಇದ್ದೇನೆ. ನೀನು ಸತ್ಯವಂತನೆಂತಲೂ, ಕೊಟ್ಟಭಾಷೆಗೊಣೆಯಂ

ಗೊಳಿಸಿದವನೆಂತಲೂ, ಕೊಂಡಾಡಲಶಕ್ತ ನಾಗಿದ್ದೇನೆ. ನನ್ನ ಮನೋರಥಮುಂ ಕೈಗೂಡಿಸೆಂದು ಪೇಳುವ ವಿಕ್ರಮಾರ್ಕನನ್ನು ಕುರಿತು, ಎಲೈ ರಾಜಾಗ್ರಣಿಯೇ ನಿನ್ನಿ ಷ್ಟಾನುಸಾರವಾಗಿರುವೆನೆಂದುಹೇಳಿಅತನನ್ನು ತನ್ನ ಬಲಭುಜದಮೇಲೂ, ಮಂತ್ರಿಯಾ ದ ಭಟ್ಟಿಯನ್ನು ಎಡಭುಜದಮೇಲೂ, ಹತ್ತಿಸಿಕೊಂಡು ಅಲ್ಲಿಂದ ಹೊರಟು ಮ ನೋ ವೇಗದಂತೆ ಸಮುದ್ರದ ಮೇಲೆ ಹಾರಿಬರುತ್ತಾ ಪಶ್ಚಿಮಾಂಬುಧಿಮಧ್ಯಭಾಗ ದೊಳು ಹೊಳೆಯುತ್ತಿರುವ ರಮಣೀಯತರವಾದ ರಮಣೀದ್ವೀಪದೊಳೊಂದು ಭಾಗಕ್ಕೆ ಬಂದು ಅಲ್ಲಿನ ಚಿತ್ರಂಗಳಂ ನೆರುಕಿಸಬೇಕೆಂತಲೂ, ಈ ಭಾಗದೊಳು ಸರ್ವೋ ತ್ತಮವಾಗಳಾದ ನವರತ್ನಂಗಳು ಅತಿಶಯವಾಗಿ ದೊರಕುವುವು. ನೀಕಾಡಪ್ಪು ಆರಿ ಸಿಕೊಳ್ಳಬಹುದು. ನಾಲ್ಕಾರುದಿನಗಳಿಗಿಂತಲೂ ಹೆಚ್ಚಾಗಿ ಈಬಂಗಯಲ್ಲಿ ನಿಂತಿದ್ದಾ ದರೆ ಅಪಾಯಾಂತರಗಳು ಗಳಿಸುವವೆಂತಲೂ, ವಿನಯಪೂರ್ವಕವಾಗಿ ಬೇಡಿಕೊಳ್ಳುತ್ತಿ ರುವ ಭೇತಾಳನನ್ನು ಕುರಿತು ಎಲೈ ಭೂತಾಧಿಪತಿಯಾದ ಭೇತಾಳನೇ ನಿನ್ನ ಮಾತುಗಳಿಂದ ಇಲ್ಲಿನ ಅತಿಶಯಂಗಳೆನ್ನೆಲ್ಲಮಂ ಸವಿಸ್ತಾರವಾಗಿ ತಿಳಿಯಲೋಸು ಗ ನನ್ನ ಮನವಾದರೆ ಕಳವಳಿಮಂ ಹೊಂದುತ್ತಲಿಹುದು ಆಹುದಂದೀಗಲೆಲ್ಲಮಂ ಮುಂಗೈಯ್ಯದೆ ವಿಸ್ತಾರವಾಗಿ ನುಡಿದು ನನ್ನನ್ನು ಆನಂದಗೊಳಿಸಬೇಕೆಂದು ಬಯ ಸಿ ಬೇಡುತ್ತಿರುವ ವಿಕ್ರಮಾದಿತ್ಯನಂ ಕುರಿತು ಅಲ್ಲಿನ ಸಮಾಚಾರಮಂ ಪೇಳಲು, ಸಂ ತೋಷಭರಿತನಾದ ಭೇತಾಳನು ಪೇಳತೊಡಗಿದನೆಂತೆದ.

. ಎಲೈ ಭೂನಿಪಾಂದ್ರನೇ ಲಾಲಿಸು ? ಈ ದ್ವೀಪವು ಪುರುಷರಹಿತವಾಗಿಯೂ, ಸ್ತ್ರೀಭರಿತವಾಗಿಯೂ ಇರುವದು. ಇದರ ರಾಜಧಾನಿಯು ಮಣಿಪುರವೆಂಬುವದು. ಇಲ್ಲಿಗೆ ರಾಣಿಯಾದ ಪದ್ಮಾವತೀ ಯೆಂಬುವಳು ತನ್ನ ಸೋದರಿಯರಾದ ಲೀಲಾ ವತೀ, ಕಳಾವತೀ, ಭೋಗವತೀ ಯೆಂಬವರೊಂದಿಗೆ ಕೂಡಿ ಸುಖಿಸುತ್ತಿರುವಳು. ಈ ರಾಜಧಾನಿಯೊಳು ಈಕೆಯ ಮಂದಿರವಾದರೋ ನೀಲರತ್ನಂಗಳ ನೆಲಗಟ್ಟುಗ ಳಿಂದಲೂ, ಕೆಂಪುಗಳ ಸುಣ್ಣಪಾಡಗಳಿಂದಲೂ, ವಜ್ರಪಕೆಂಭಂಗಳಿಂದಲೂ, ನಜ್ಜಿ ಗಳ ತೊಲೆ ಜೋಡಿಗೆಗಳಿಂದಲೂ, ಪುಷ್ಯರಾಗಂಗಳ ಜಂತೆಗಳಿಂದಲೂ, ಗೋಮೇ ಧಿಕಂಗಳ ಬಾಗಲ್ಗಳಿಂದಲೂ, ವಜ್ರದ ಕದಗಳಿಂದಲೂ ನಿರ್ಮಾಸಲ್ಪಟ್ಟು ರತ್ನ ಚಿತ್ರಿತಂಗಳಾದ ಭಿತ್ತಿಗಳಲ್ಲಿ ಒಳ್ಳಿಗಳೂ, ಗಿಳಿಗಳೂ, ನಾನಾವಿಧಂಗಳಾದ ಮೃ ಗಪಕ್ಷಿಗಳೂ ಸಜೀವವಾಗಿರುವವೋ ಎಂಬಂತೆ ರಚಿಸಲ್ಪಟ್ಟಿರುತ್ತವಲ್ಲದೆ, ಕಲಶ ಗನ್ನಡಿಗಳಿಂದಲೂ, ಮುತ್ತುಗಳಿಂದಲೂ, ರತ್ನಂಗಳಿಂದಲೂ ಮಾಡಲ್ಪಟ್ಟ ಗೊಂ ಡಲುಗಳಿಂದಲಂಕರಿಸಿ ರತ್ನಹೇಮ ವಿಚಿತ್ರ ಚಿತ್ರಿತಂಗಳಾದ ದಿವ್ಯದುಕೂಲಗಳ ಮೇ ಲ್ಕಟ್ಟುಗಳಂ ರಚಿಸಿಪ್ಪಳು. ಇದುಮಲ್ಲದೆ ದಿವ್ಯರತ್ನ ದೇದೀಪ್ಯಮಾನಂಗಳಾ ದ ಹಂಸತೂಲಿಕಾ ತಲ್ಪಂಗಳಿಂದೊಡಗೂಡಿದ ಮಂಚಗಳಿಂದಲೂ, ಸಿಂಹಾಸನಗಳಿಂ ದಲೂ, ವಿಶ್ರಾಂತಾಸನಗಳಿಂದಲೂ ಹೊಳೆಯುತ್ತಿರುವ ಶಯ್ಯಾಗಾರ, ಮಂತ್ರ

ಶಾಲೆ, ವಸ್ತ್ರಶಾಲೆ, ಭೂಷಣಶಾಲೆ, ಅಲಂಕಾರಶಾಲೆ, ಗೀತಶಾಲೆ ಇವುಗಳಿಂದೊಪ್ಪುತ್ತಿರುವದಲ್ಲದೆ ಭೋಜನ ಸ್ನಾನ ಸೊಸ ಉಗ್ರಾಣಗಳಿಂದಲೂ, ನಿಯೋಗದ ವರಿಷ್ಠ ಚಾವಡಿಗಳಿಂದಲೂ ಹೊಳೆಯುತ್ತಿರುವದಲ್ಲದೇ ಚೈತ್ರರಥಮಂ ನಗುತಲಿರುವ ಗೃಹೋದ್ಯಾನವೂ, ಪುಷ್ಪಪರಾಗತಭರಿತವಾದ ಲತಾವೃಕ್ಷಗಳಿಂದಲೂ, ಪಲಭಾರನಮ್ರಿತ ಶಾಖಾನಿವಿವಾದ ಪಾದಪಂಗಳಿಂದಲೂ, ಜಲಪಕ್ಷಿಕಮಲೋತ್ಪಲಮಂತಂಗಳಾಗಿ ಸ್ಪಟಿಕಸೋಪಾನಂಗಳಿಂ ಕೂಡಿ ತಿಳಿನೀರ್ಗಳಿಂದೊಪ್ಪುತ್ತಿರುವ ಸರೋವರಂಗಳೊಡಗೂಡಿದ್ದಾಗಿಯೂ, ಕುಂಜಪುಂಜವಾದ ವಿಹಾರಶಾಲೆಗಳುಳ್ಳದ್ದಾಗಿಯೂ ರಂಜಿಸುತ್ತಲೆಲ್ಲಿಲ್ಲಿಯೂ ರನ್ನರಾಸುಗಳಿಂದಲೂ, ಜಗಲಿಗಳಿಂದೂಲಗೋಪುರಗಳಿಂದಲೂ, ಹೊಳೆಯುವದಲ್ಲದೆ ಸಮಸ್ತ ವ್ಯಾಗಪಕ್ಷಿ ಶಾಲೆಗಳಿಂದಲೂ ರಾರಾಜಿಸುತ್ತಲಿರುವದು.

ಅಂದ್ರಭವನದಂತೊಪ್ಪುತ್ತಿರುವ ಈ ಸುಂದರ ಮಂದಿರದೊಳು ತನ್ನ ಸಹೋದರಿಯರೊಂದಿಗೆ ವಾಸಿಸುತ್ತಿರುವ ಪದ್ಮಾವತಿಯನ್ನು ಒಲ್ಮೆಸುತ್ತಿರುವವರೆಲ್ಲರೂ ಪೆಣ್ಮಣಿಗಳೇ ಹೊರತು ಪುರುಷರ ಸುಳಿವೇಯಿಲ್ಲವು. ಒಂದುವೇಳೆ ಪುರುಷರಾದವರು ಈ ಸ್ತ್ರೀಸಮುಂಸಾರಿ ಒಂದುತಿಂಗಳು ವಾಸವಾಡಿದ ಮಾತ್ರಕ್ಕೇನೇ ಅವರ ಪುಂಸತ್ವ ಸುತರಾಂ ನಷ್ಟವಾಗುವದು ಈ ಸ್ತ್ರೀಪವಾಸಿಗಳೆಲ್ಲರೂ ಮಣಿಮಂತ್ರೌಷಧಿಗಳಲ್ಲಿ ಬಹಳ ಪ್ರವೀಣರಾಗಿರುವದ್ದರಿಂದ ಇವರನ್ನು ಜೈಸುವದು ಬಹು ದುಸ್ಕರವಾಗಿರುವದು. ಈ ಸ್ತ್ರೀಯರೆಲ್ಲರೂ ತಮ್ಮ ತಮ್ಮ ಅವಾಸ ಸ್ಥಾನಗಳಲ್ಲಿ ಪುರುಷಾಕಾರವಾದ ಶಿಲಾಪ್ರತಿಮೆಗಳಂ ಪ್ರತಿಷ್ಠೆಮಾಡಿಟ್ಟುಕೊಂಡಿರುವರು. ಇವರು ಕಾಮುಕೀಡಿತರಾದರೆ, ಆ ರಾತ್ರಿಯೊಳು ಶ್ರದ್ಧಾಭಕ್ತಿಸಂಯುತರಾಗಿ ಆ ಶಿಲಾವಿಗ್ರಹಂಗಳಂ ಪೂಜೆಗೈದು ಬಲಿಯನ್ನರ್ಪಿಸುವರು, ಆ ರಾತ್ರಿಯುಲ್ಲಿ ಮಲಗಿದ ಆ ಕಾಮಿನಿಯರೊಳು, ಈ ಶಿಲಾಪ್ರತಿಮೆಗಳು ಪುರುಷಾಕಾರಮಂತಾಳಿ ರತಿಯಂಗೈದು ಅನಂತರ ತ್ಯಕ್ತಗೊಳಿಸುವನ್ತೆ. ಜ್ಯೇಷ್ಠಾಷಾಢ ಮಾಸೆಗಳಘಾಳಿಪೇಸುವಾಗ ಇಲ್ಲಿನ ಸ್ತ್ರೀಯರಲ್ಲಿ ಯಾರು ರುತುಮತಿಗಳಾಗಿರುವರೋ ಅವರೆಲ್ಲರೂ ಗರ್ಭವಂತರಾಳ್ವ, ರತಿ, ಪಾರ್ವತಿ, ದ್ರೌಪದಿ ಮೊದಲಾದ ಸುಂದರಿಯರಿಗಿಂತಲೂ, ಸರ್ವೋತ್ತಮ ಸೌಂದರ್ಯಯುಕ್ತರಾದ ಸ್ತ್ರೀಶಿಶುಗಳನ್ನೇ ಪಡೆವರು. ಈ ಪದ್ಮಾವತಿಯು ಅನೇಕ ಶೂರರನ್ನು ಜೈಸಿ ತನ್ನರಸುನೆಯ ಮುಂದೆಜಯಭೇರಿಯನ್ನು ಹಾಕಿಸಿರುವಳು.

ಶೂರರಾದವರಾರು ಬಂದು ಜಯಭೇರಿಯುಪೊಯ್ದರೆ, ಅಲ್ಲಿನ ಕಾವಲಿಗಾರರಾಗಳೇ ಛೇತರಾಗಿ ರಾಣಿವಾಸವಂಸಾರಿ ರಾಜ್ಞಿಯೊಳಗಿರಿಕೆಯುಂಗೈಯ್ಯಲು, ಆಕೆಯು ಮುವರಂಕರಿಸಿ ಯುಕ್ತೋಪಚಾರಗಳಿಂದ ಸಂತಸಗೊಳಿಸುವಳು. ಹೀಗಿರುವದರಿಂದ ಲೋಕದಲ್ಲಿರುವ ಶೂರಾಗ್ರಗಣ್ಯರೆಲ್ಲರೂ, ಈಕೆಯಂ ಜೈಸುವದೇ ಪರಮಕಷ್ಟವೆಂದ

ರಿತಿರುವರು ಆದ್ದರಿಂದ ನೀವವರ ದೃಷ್ಟಿಗೋಚರರಾಗದೇ ಜಾಗ್ರತೆಯಾಗಿ ಇಲ್ಲಿಂದ ತೆರಳಬೇಕು, ಇದ್ದ ಸಂಗತಿಯನ್ನು ಮರೆಗೈಯ್ಯದೆ ಅರಿಕೆ ಮಾಡಿದ್ದೇನೆ ಇದರ ಮೇಲೆ ಸ್ವಾಮಿಚಿತ್ತವಿದ್ದಂತೆ ಮಾಡಬಹುದೆಂದು ಪೇಳುತ್ತಿರುವ ಭೀತಾಳನಂ ಕುತು ಎಲೈ ಭೂತಾಧಿಪತಿಯೇ ! ಪ್ರಪಂಚದಲ್ಲಿ ಇಂಥಾ ಶೌರ್ಯವುಳ್ಳ ಪ್ರೌಢಾಂಗನೆಯರಿರುತ್ತಾರೆಯೇ ? ಅಹಹಾ ! ಇದು ಪರಮಾಶ್ಚರ್ಯಕರವಾಗಿರುವದು, ಅಕೆಯಂ ಕಂಡು ಮಾತಾಡಿದ ಹೊತ್ತು ಮನಃ ಚಾಂಚಲ್ಯವಂ ಹೋಗಗೊಳಿಸಲಾರೆನು, ಈಘಾಗದೊಳು ನೀನೂ ಪ್ರತಿಕೂಲನಾಗದೇ ಸಹಾಯಕನಾಗಿರಬೇಕೆಂದು ಬೇಡಿಕೊಳ್ಳುತ್ತೇನೆಂದು ಹೇಳಿ ಆ ಪದ್ಮಾವತಿಯನೋಡುವ ತವಕದಿಂದ ಹೊರಟು ಮಣಿಪುರವಂ ಪ್ರವೇಶಿಸಿ ಅರಮನೆಯಬಾಗಿಲಂ ಸಾರಿ ಆ ಬಳಿಯೊಳು ನಿಂತಿದ್ದ ದ್ವಾರಪಾಲಕಳಿಂ ಸವಿಾಪಕ್ಕೆ ಕರೆದು ಎಲೌ ರಾಜ್ಞೀಸೇವಕಳೇ ನಾನು ವಿಕ್ರಮಾದಿತ್ಯರಾಯನು, ನಿನ್ನೊಡೆಯಳಾದ ಪದ್ಮಾವತಿಯೊಳು ಸಂಭಾಷಿಸೆ ಕೌತುಕನಾಗಿ ಬಂದಿರುವೆನು ಈ ವಾರ್ತೆಯಂ ಅತಿಭರದೊಳು ಅರಿಕೆ ಮಾಡುವದೆಂದು ಪೇಳಲಾಗಿ ಆ ದೌವಾರಿಯು ಮಂದಿರದೊಳು ಹೊಕ್ಕು ಪದ್ಮಾವತಿಯಂ ಕಂಡು ಭಯಭಕ್ತಿಗಳೊದನೆ ನುತಿಗೈದು ಎಲೌ ತಾಯಿಯೇ ವಿಕ್ರಮಾರ್ಕರಾಯನೆಂತೆ ತಮ್ಮನ್ನು ಸಂದರ್ಶಿಸಿ ಸಂಭಾಷಿಸಲೋಸುಗ ಕಾದಿರುವನೆಂದರಿಕೆ ಮಾಡುತ್ತಿರುವ ದ್ವಾರಪಾಲಕಿಯನ್ನು ನೋಡಿ ಎಲೌ ಸೇವಕಳೇ ಇದೇನು, ವಿಕ್ರಮಾರ್ಕರಾಯನೇ ಬಂದಿರುವನು ? ಆತನ ಮಹಿಮೆಯನ್ನೆಲ್ಲವಂ ಪರೋಕ್ಷವಾಗಿಯೆಂ ಕೇಳಿಬಲ್ಲೆ, ಎಂದು ಮಲಗಿದ್ದವಳು ಧಿಗ್ಗನೆದ್ದು ಕುಳಿತು ನಾನು ಹೇಳುವ ಮಾತುಗಳನ್ನೆಲ್ಲಾ ಆರಾಯನಿಗೆ ಅರುಹಿ ಅದಕ್ಕೆ ಆತನಂಗೀಕರಿಸಿದರೆ, ಒಳಹೊಗಿಸು, ಇಲ್ಲವಾದರೆ ಬೇಡವೆಂದು ಹೇಳಿ ಆತನೊಳು ಹೇಳುವ ಮಾತುಗಳಂ ಹೇಳುವಳು. ನಮ್ಮಾ ಪೊಳಲನ್ನು ಹೊಗುವದಕ್ಕೆ ಯಾರಿಗೂ ಸಾಧ್ಯವಿಲ್ಲ ಯಾರ ಸಹಾಯವಿಂಡಲೋ ಬಂದಿರಬಹುದು. ಆದರೂ ಚಿಂತೆಯಿಲ್ಲ ಒಳಗೆ ಹೋಗಲು ಇಷ್ಟವಾದರೆ ನಮ್ಮ ಪ್ರತಿಜ್ಞೆಯನ್ನು ಅನುಸರಿಸಿ ಕಾಂಡಪಟದ ಹೊರಗೆ ಕುಳಿತು ನಮ್ಮನ್ನು ಮಾತಾಡಿಸಬೇಕು, ನಾವಾಗಿ ನಾವೇ ಮೂರು ಮೂರು ಮಾತುಗಳನ್ನಾಡಿದ್ದೇ ಆದರೆ, ಆಗ ಅವನ ವರ್ತಿಗಳಾಗಿ ನಡೆದು ಕೊಳ್ಳುವೆವು. ಆತನಲ್ಲಿ ಅಂಥಾ ಸಾಹಸಧೈರ್ಯಲಕ್ಷ್ಮೀಯು ನೆಲಗೊಂಡಿದ್ದರೆ ಬರಬಹುದು ಎಂದು ತಿಳಿಯುವಾಡುವಂತೆ ಆಜ್ಞಾಪಿಸಿದ ವಡತಿಯ ಆಜ್ಞೆಯನ್ನು ಶಿರಸಾವಹಿಸಿದವಳಾಗಿ ಹಿಂತಿರುಗಿ ಬಂದು, ತಮ್ಮರಾಣಿಯ ಪ್ರತಿಜ್ಞಾಪೂರ್ವಕವಾದ ಮಾತುಗಳನೆಲ್ಲಮಂ ವಿಕ್ರಮಾದಿತ್ಯರಾಯನಿಗೆ ಅರಿಕೆಮಾಡಲಾಗಾ ರಾಯನದಕೊಪ್ಪಲು ಈ ರಾಜನ ಅನುಮತಿಯಂ ತನ್ನೊಡತಿಗಾ ದೂತಿಕೆಯರುವಿದ ಕೂಡಲೆ ವಿಕ್ರಮಾದಿತ್ಯನಂ ಮರ್ಯಾದೆ ಪೂರ್ವಕಮಾಗಿ ಒಳಹೊಗಿಸಿ ರಾಜೋಪಚಾರಾರ್ಹಂಗಳಾದ ಸಮಸ್ತ ಸಾಮಗ್ರಿಗಳೊಡನೆ ಸತ್ಕರಿಸಿ ಭೋಜನವಂಗೈಸಿ ರಾತ್ರಿಯಾಗುತ್ತಲೇ ಈ ವಿಕ್ರ

ಮಾದಿತ್ಯನೆಂ ತನ್ನ ಅಂತಃಪುರಮುಂ ಹೊಗಿಸಿ ರತ್ನಪರ್ಯಂಕದೊಳು ಮಲಗುವಂತೆ ನಿಯಮಿಸಿ ತಾನು ಮಣಿ ಮಂಚಾಸೀನನಳಾಗಿ ಇಬ್ಬರ ಮಧ್ಯದೊಳು ಕಾಂಡಪಟಮುಂ ಬಿಡಿಸಿ ಮೌನಧಾರಿಣಿಯಾಗಿ ಕುಳಿತುಕೊಳ್ಳಲು ವಿಕ್ರಮಾದಿತ್ಯರಾಯನು ತನ್ನ ಬಳಿ ಇರುವ ಭೇತಾಳನಂ ಕರೆದು ಎಲ್ಲೆ ಪರಮಾಪ್ತನೇ! ನನಗೆದುರಾಗಿ ಮಂಡಪದೊಳು ಕುಳಿತಿರುವ ಪದ್ಮಾವತಿಯನ್ನು ಮಾತನಾಡಿಸಿ ನನ್ನ ಮನಸ್ಸನ್ನು ಸಂತೋಷಗೊಳಿಸಬೇಕು ಇದಕ್ಕಾಗಿ ನಮ್ಮಗಳ ಮಂಚದಮಧ್ಯದೊಳಿರುವ ಕಾಂಡಪಟದ ಪಕ್ಷಿ ಮೃಗಾದಿಗಳೊಳು ನೀ ಸೇರಿಕೊಂಡು ಅತ್ಯಾಶ್ಚರ್ಯಂಗಳಾದ ಕಥೆಗಳಂ ಹೇಳಿದರೆ ಕಾರ್ಯವು ಅನುಕೂಲಿಸುವದು ಎಂದಮಾತಿಗೆ ಮಹಾಪ್ರಸಾದವೆಂದು ಭೇತಾಳನು ಆ ಕಾಂಡಪಟವಂ ಸಾರಿದನು.

ಆಗ ವಿಕ್ರಮಾರ್ಕನು ನಿದ್ದೆ ಬಾರದವನಂತಭಿನಯಿಸುತ್ತಾ ಪೇಳುತ್ತಾನೆ ಎಲೆ ಕಾಂಡಪಟ ಚಿತ್ರಸ್ಥ ಶುಕವೇ ಹೊತ್ತು ಹೋಗದು ನಿದ್ದೆ ಬಾರದು ಪದ್ಮಾವತಿಯಾದರೋ ಮಾತನ್ನೇ ಆಡಳು ನೀನಾದರೂ ಕರುಣಿಸಿ ಹೊತ್ತುಹೋಗುವಂತೆ ಒಂದು ಕಥೆಯಂ ಪೇಳಿನಲು ಭೇತಾಳನು ಕಾಂಡಪಟಸ್ಥ ಚಿತ್ರದ ಗಿಣಿಯಾಕಾರಮಂತಾಳಿ ಕಥೆಯಂ ಪೇಳತೊಡಗಿದನದೆಂತೆನೆ.

ಚಿತ್ರದಗಿಣಿಯು ಪೂರ್ವಯಾಮದಲ್ಲಿ ಪೇಳುವಕಥೆ

ಎಲ್ಲೆ ವಿಕ್ರಮಾರ್ಕಮಹಾರಾಯನೇ ಕೇಳು! ಗಾಂಧಾರದೇಶಾಧಿಪತಿಯಾದ ದೇವಶೇನನೆಂಬ ರಾಯನು ಆ ದೇಶಕ್ಕೆ ರಾಜಧಾನಿಯಾಗಿಯೂ ಸಕಲ ಸಂಪತ್ತುಗಳಿಂದೊಡಗೂಡಿದ ಕರನೀರಪುರವೆಂಬ ಪೊಲಲಂ ಸಮಸ್ತರಾಜಧರ್ಮಂಗಳಿನಾಶ್ರಯಿಸಿ ಪ್ರಜೆಗಳ ಹಿತಚಿಂತಕನಾಗಿ ಪರಿಪಾಲಿಸುತಿರ್ದನು. ಹೀಗಿರುವಲ್ಲಿ ಆತನ ಧರ್ಮಪತ್ನಿಯಾದ ಸುಮತೀದೇವಿಯ ಗರ್ಭಾಂಬುಧಿಯೊಳು ಸುಧಾನು, ಉದಯಧಾನುಗಳೆಂಬೀರ್ವರು ಸುಕುಮಾರರು ಮನ್ಮಥಜಯಂತರನ್ನು ಜರಿಯುವ ರೂಪುಲಾವಣ್ಯಯುಕ್ತರಾಗಿ ಜನಿಸಿದರು. ಆ ಧೊರೆಗೆ ರಾಜಕಾರ್ಯನಿರ್ವಾಹನಾಗಿಯೂ, ಸ್ವಾಮಿಭಕ್ತಿಸಂಯುಕ್ತನಾಗಿಯೂ, ಸಕಲಕಲಾಪ್ರವೀಣನಾಗಿಯೂ, ಸಕಲಶಕ್ತಿಸಂಯುತನಾಗಿಯೂ ಇರುವ ಅಕಳಂಕನೆಂಬ ಮಂತ್ರಿಯೋರ್ವನಿರುತಿರ್ದನು.

ಆ ಮಂತ್ರಿಗೆ ದುರ್ಜಯನೆಂಬ ಗುಣನೋರ್ವನಿರುತಿರ್ದಂ. ಆ ಮಂತ್ರಿಕುವರನು ಆ ಬಾಲ್ಯಮಾಗಿ ಆ ರಾಜಕುಮಾರನೊಂದಿಗೆ ಅಸ್ತ್ರಶಸ್ತ್ರಾದಿ ಸಕಲಕಲೆಗಳನ್ನಭ್ಯಾಸಮಾಡುತ್ತಾ ಅವರೊಂದಿಗೆ ಬಹುಸಂಪ್ರೀತಿಯಂತೋರುತ್ತಾ ಅಂತರಹಿತನಾಗಿರುವ ದುರ್ಗ್ಗುಣಂ ಹೊರಪಡಿಸದೆ ಕಪಟಮಿತ್ರನಾಗಿರ್ದಂ. ಆ ರಾಜಕುಮಾರರಾದರೋ ಈ ಕಪಟವನ್ನರಿಯದೆ ಆ ಮಂತ್ರಿಕುಮಾರನೊಳು ಅತ್ಯಂತ ಅನುರಾಗನಂಬಿಕೆಗಳಿಂದ ವರ್ತಿಸುತ್ತಿರ್ದರು. ಹೀಗಿರುತ್ತ ಆ ರಾಯನ ಜ್ಯೇಷ್ಠಕುಮಾರನಾವ ಸುಧಾನುವೆಂಬುವನು ಪ್ರಾಯಸಮರ್ಥನಾಗಲು, ನಿವಾಹವಂ ಮಾಡಬೇಕೆಂದಾಲೋಚಿಸಿ ಆಪ್ತ

ಮಂತ್ರಿಯಾದ ಅಕಳಂಕನಂ ಕರಸಿ, ಎಲೈ ಅಸ್ತಸಚಿವನೇ ! ನನ್ನ ಸುಕುಮಾರನಾದ ರೊ, ಪ್ರಾಯಸಮುಪ್ತನಾಗಿದ್ದಾನೆ. ಇವನಿಗೆ ಮದುವೆಯಂ ಮಾಡಬೇಕಾಗಿ, ಆನು ರೂಪಳಾಗಿಯೂ, ರೂಪಲಾವಣ್ಯಾದಿ ಸಕಲಸದ್ಗುಣಸಂಪನ್ನಳಾಗಿಯೂ ಇರುವಕ ನ್ಯಕಾಮಣಿಯಂ ಹುಡುಕಿತರಬೇಕೆಂದು ನೀವಿಸಲು, ಒಡೆಯಾದಂತೆಂದು, ವಿನಯ ವನಿತನಾಗಿ ಅಲ್ಲಿಂದಮೊರಟು ಮಾರನೇದಿನ, ಪ್ರಯಾಣಮುಂಮಾಡಿ ಸಕಲಸನ್ನಾ ಹಗಳಿಂದೊಪಗೂಡಿ ಅನೇಕದೇಶಂಗಳಂಸಂಚರಿಸುತ್ತಾ ಅಲ್ಲಿನ ರಾಜಕುಮಾರಕಿಯ ರಂಕಂಡು ತಕ್ಕಂಥಾ ಕನ್ಯಾರತ್ನವ್ರು ಲಭಿಸದೇಹೋಗಲು, ಮುಂದರಿದುಹೋಗುತ್ತಾ ಹೀಗೆಯೇ ಮಾಳವದೇಶಾಧೀಶ್ವರನಾದ ಸುಹೋತ್ರರಾಯನ ರಾಜಧಾನಿಯಾದ ಧಾರಿಣೀ ಪುರವಂಪ್ರವೇಶಿಸಿ, ಆ ರಾಯನ ಸೀಮಂತಪುತ್ರಿಯಾಗಿಯೂ ರಾತ್ರಾ ಚಂದಿರಸುಂದರಾಸ್ಯೆಯಾಗಿಯೂ, ಅಷ್ಟಮಿಚಂದ್ರನಂತೊಪ್ಪುವ ಫಾಲವನ್ನುಳ್ಳವ ಳಾಗಿಯೂ, ಕಮಲಗರ್ಭಂತಿ ಸುಂದರವಾದ ಕಂಗಳ್ಳುಳ್ಳವಳಾಗಿಯೂ, ಬಿಂಬೋಷ್ಠೆ ಯಾಗಿಯೂ, ಕಂಬುಕಂಠಿಯಾಗಿಯೂ, ಕಮಲಕುಟ್ಮಲಸ್ತನಿಯಾಗಿಯೂ, ರಂ ಭೋರುವಾಗಿಯೂ, ಕಮಲಬ್ಯೂಹಲಸದಳಾಗಿಯೂ, ಸಂಪಿಗೆಬಣ್ಣಮಂ ಜರಿಯು ವ ದೇಹಕಾಂತಿಯುಳ್ಳವಳಾಗಿಯೂ, ಸಕಲಕಲಾಪ್ರವೀಣಳಾಗಿಯೂ, ವಿನಯಭಕ್ತಿ ದಯಾದಿ ಸಮಸ್ತ ಸದ್ಗುಣ ಸಂಪನ್ನಳಾಗಿಯೂ, ಲೋಕೋತ್ತರ ಸುಂದರಿಯಾಗಿ ಯೂ ಇದಾಳೆಂದು ತಿಳಿದು ಆಕೆಯಂ ಕಾಣಲೋಸುಗ ಸುಹೋತ್ರರಾಯನ ಸಂದ ರ್ಶನಕ್ಕಾಗಿ ಹೇಳಿ ಕಳುಹಿಸಿದನು. ಆಗಲಾರಾಯನು ಮುರ್ಖಾದೆಯೊಡನೆ ಎದು ಗೊಂಡು ತನ್ನಾಲಯಮುಂಪೊಗಿಸಿ ಉಚಿತಾಸನವಲ್ಲಿ ಸುಖಾಸೀನವಂಗೈಸಿ, ಸ ಕಲ ರಾಜೋಪಚಾರಂಗಳಿಂ ಸನ್ಮಾನಿಸಿ ಕುಶಲಪ್ರಶ್ನೆ ಪೂರ್ವಕವಾಗಿ, ಎಲೈ ಮಂ ತ್ರಿಶ್ವರನೇ ? ನಿನ್ನ ಸುಖಾಗಮನಕ್ಕೆ ಕಾರಣವಂ ತಿಳಿಯುವಳಿಸುವೆನೆಂದು ಕೇಳು ವ ಸುಹೋತ್ರರಾಯನೊಳು ಮಂತ್ರಿಯು ಹೇಳುತ್ತಾನೆ. ಎಲೈ ರಾಜಾಗ್ರಣಿಯೆ ! ಲಾಲಿಪುದು. ನಾನು ನಮ್ಮ ಇಳಿಯಣ್ಣನ ಸುಕುಮಾರನಿಗೆ ಕನ್ಯಾರ್ಥಿಯಾಗಿ ದೇ ಶಂಗಳಂ ಹುಡುಕುತ್ತಾ ಬಂದಿರುವೆನೆಂದು ಹೇಳುವನಿತರೊಳು, ಎಲೈ ಮಂತ್ರಿಶ್ವ ರನೇ ? ನಾನೂ ನಿನ್ನ ನನ್ನ ಪುತ್ರಿಗೆ ತಕ್ಕಂಥಾ ವರನು ದೊರಿಯದೇ ಹಂಬಲಿ ಸುತ್ತಾ ಇದ್ದೇನೆ ತವ್ಮಾಗಮನವು ಪ್ರೀತಿಕರವಾದುದು ನನ್ನ ಕುವರಿಯಂ ಕಣ್ಣಿಂ ದ ನೋಡಿ ಜಾತಕಭಾವಮಂ ಪರೀಕ್ಷಿಸಿರಿ, ದೈವಾನುಕೂಲವಿದ್ದರೆ ಸಂತೋಷ ವಾಗಿ ಲಗ್ನವಂ ಮಾಡಿಕೊಡುವೆನು, ವರನನ್ನು ನೋಡುವದಕ್ಕಾಗಿ ನನ್ನ ಮಂ ತ್ರಿಯನ್ನು ತವ್ಮೊಡನೆಯೇ ಕಳುಹಿಸುವೆನೆಂದು ಹೇಳುತ್ತಾ ಮಂತ್ರಿಯ ಕೈಹಿಡಿ ದು ಅಂತಃಪುರವಂ ಪ್ರವೇಶಿಸಿ, ಉಚಿತಾಸನದೊಳು ಮಂತ್ರಿಯಂ ಕುಳ್ಳಿರಿಸಿ, ಶೀಲ ವತಿಯೆಂಬ ಸೆಸರಿಟ್ಟು ತನ್ನ ಮೋಹದ ಕುಮಾರಿಯಂ ಕರೆಯಲು ಮಾರನಂಗಿಣಿ ಯಂತೆ ಮತ್ತಗಾಮಿನಿಯಾದಾ ನವ ಮೋಹನಾಂಗಿಯ್ಯಾತಂದು ತಾತನಾಜ್ಞಾನ

ಸಾರಮಾಗಿ ನಿಂತಿರುವ ರಾಜ ಕುಮಾರಿಯಂ ಕಂಡು, ಆಹಾ ! ಸಕಲಾಂಗ ಸುಂದರಿಯಾದ ಈ ಕನ್ಯಾರತ್ನವು ದೈವಯೋಗದಿಂದ ನಮ್ಮ ರಾಜನ ಸೊಸೆಯಾದರೆ ಆ ರಾಜಾತ್ಮಜನ ಪುಣ್ಯಕ್ಕೆಣೆಯೇ ಇಲ್ಲವು. ರತೀ ಶಚೀ ಪಾರ್ವತೀ ದೇವಿಯರಗಿಂತಲೂ ಈಕೆಯು ಸರ್ವೋತ್ತಮ ಸುಂದರಿಯಾಗಿರುವಳಲ್ಲಾ ? ಎಂದು ಆಶ್ಚರ್ಯಗೊಳ್ಳುತ್ತಾ ಬಾಬಾರ್ಕರಿಗೂ ಆಕೆಯನ್ನೇ ನೋಡುತ್ತಾ ನಮ್ಮ ರಾಜಾತ್ಮಜನಿಗಾಗಿಯೇ ಸುರಜ್ಯೇಷ್ಠನು ಈ ಕನ್ಯಾರತ್ನವಂ ನಿರ್ಮಿಸಿರುವನೋ ಎಂದುಬ್ಬಿ ರಾಕಾಜಂದ್ರನೇಳಿಗೆಯಂ ಕಂಡು ತುಳುಕಾಡುವ ಸಮುದ್ರರಾಜನಂತೆ ಲೋಲನಾಗಿ ಕುಲ ಗೋತ್ರಂಗಳನ್ನೂ ಕನ್ಯಾಜಾತಕವನ್ನೂ ಕುರಿತು ಪ್ರಶ್ನೆಯಾಗಿತ್ತಲೇ ಆ ರಾಜನು ಮಂತ್ರಿ ಪುರೋಹಿತರಂ ಕರಿಸಿ ತನ್ನ ಕುವರಿಯ ಜಾತಕಮುಂ ತೆಗಿಸಿ ಈ ಮಂತ್ರಿ ಬಳಿಯೊಳಿದ್ದ ದೇವಸೇನ ಮಹಾರಾಯನ ಮಗನ ಜಾತಕವಂ ತೆಗೆಯಿಸಿ ದಾಂಪತ್ಯಾನುಕೂಲಕ್ಕೆ ತಕ್ಕ ಫಲಿತಾರ್ಥವನ್ನು ನೋಡಿಸಲಾಗಿ ಆ ರಾಜ ಪುರೋಹಿತನು ಚನ್ನಾಗಿ ಆ ಜಾತಕಂಗಳಂ ಪರಿಕಿಸಿ ನೋಡಿ ಎಲೈ ರಾಜನೇ ! ಈ ಸ್ತ್ರೀಪುರುಷ ಜಾತಕಂಗಳಿಗೆ ದ್ವಾದಶಕೂಟವೇ ಮೊದಲಾದ ಸಮಸ್ತ ಭಾಗಗಳೂ ಬಹು ಪ್ರಶಸ್ತವಾಗಿರುವದಲ್ಲದೆ, ಇವರಿಬ್ಬರೂ ದಂಪತಿಗಳಾಗುವರಾದರೆ, ಮಹತ್ಸಾಮ್ರಾಜ್ಯ ಸಂಯುಕ್ತರಾಗಿಯೂ, ಮಹದಾಶ್ಚರ್ಯವಂತರಾಗಿಯೂ, ಚಿರಾಯುಗಳಾಗಿಯೂ ಬಾಳುವರು. ಇಂಥಾ ಅನುಕೂಲ ಜಾತಕಂಗಳಂ ನಾನು ಎಂದೆಂದಿಗೂ ನೋಡಿದ್ದೇ ಇಲ್ಲವೆಂದು ಹೇಳುತ್ತಿರುವ ಮಾತುಗಳನ್ನಾಲೈಸುತ್ತಾ, ರಾಯನು ಹರುಷಾಂಬುಧಿ ಲೋಲನಾಗಿ ನಾಳೀದಿವಸ ಲಗ್ನಪತ್ರಿಕೆಯಂ ಬರಸಿ ನಮ್ಮ ಮಂತ್ರಿಯೊಂದಿಗೆ ನಿಮ್ಮ ರಾಯರಲ್ಲಿಗೆ ಕಳುಹಿಸುವಂತೆ ಅನಲಂಕನೆಂಬ ಮಂತ್ರಿಗೆ ಹೇಳಿ ಆತನು ಇಳಿದಿರುವ ಬಿಡಾರಕ್ಕೆ ಕಳುಹಿಸಿದಂ.

ಇತ್ತಲಾ ಅಕಳಂಕನೆಂಬ ದೇವಸೇನ ಮಹಾರಾಯನ ಮಂತ್ರಿಯು ತಾನಿಳಿದಿದ್ದ ಬಿಡಾರವಂ ಸಾರಿ, ತನ್ನ ಸಂಗಡಲ್ಕೈದಿದ್ದ ತನ್ನ ಕುವರನಾದ ಪುಜ್ಯಯನೆಂಬುವನೊಳು ಈ ನಡಪ ವೃತ್ತಾಂತಮನೆಲ್ಲಮಂ ಅರುಹಲು, ಆ ಪುಜ್ಯಯಂ ಅಪ್ಪಾಜಿಯವರೇ ? ಹೀಗೆ ಯಾಕೆ ಮಾಡಿದವರಾರಿ ? ಮುಂದಿನಕಜ್ಜಮಂ ಕೆಡಿಸಿದಿರಲ್ಲಾ, ಕಾರ್ಯವು ಮುಂಚಿ ಹೋಗುವದಕ್ಕಿಂತ ಹೊದಲೇ ಯಾವದಾದರೂ ಒಂದುಪಾಯಾಂತರವಂ ಮಾಡಬೇಕು. ನೀವು ಮರಳ್ದು ಆ ಇಳಿಯಾಣ್ಮನ ಬಳಿಗೈದಿ ಅಯ್ಯಾ ನಾನು ವೃದ್ಧಾಪ್ಯದ ದೆಸೆಯಿಂದ ಬುದ್ಧಿಭ್ರಷ್ಟ ವೃದ್ಧನಾದ್ದರಿಂದ ನಿನ್ನೆಯ ದಿವಸ ರಾಜನ ಕುಮಾರನ ಜಾತಕಮುಂ ಕೊಡುವದಕ್ಕೆ ಬದಲಾಗಿ ಬೇರೊಂದು ಜಾತಕವಂ ಕೊಟ್ಟಿರುವೆನು, ರಾಜಕುಮಾರಕನ ಜಾತಕ ನನ್ನಲ್ಲಿಯೇ ಇರುವದೆಂದು ಸ್ಫುಟಿತಾರ್ಥವನುಕೂಲಿಸದ ಜಾತಕಮುಂ ಕೊಟ್ಟು, ಆ ರಾಜಕುಮಾರನಿಗಾಗದಂತೆ ಮಾಡಿ, ಆ ಕನ್ಯೆಯಂ ನನಗೆ ಮದುವೆಯಂ ಮಾಡಬೇ

ಸು. ಇದು ತಪ್ಪಿದರೆ ನಾನು ಈಗಲೇ ದುರ್ಮರಣವಂ ಹೊಂದಿಪಡುವೆನು, ಇದೇ ನಿಶ್ಚಯಾರ್ಥವೆಂದು ನುಡಿಯುತ್ತಿರುವ ತನ್ನ ಮಗನ ಮಾತಂ ಕೇಳಿ, ಛೀ ಛೀ ಮೂಢನೇ ದುರಾತ್ಮಕನೇ ನೀಚನೇ ಸ್ವಾಮಿ ದ್ರೋಹವಾಡುವ ಕಾರ್ಯಮಂ ನೋಚಿಸುವಿಯಾ ವೃಥಾ ಕೆಡಬೇಡ ಎಂದು ಹರಿಧ್ಯಾನೆ ಪರನಾದ ಪ್ರಹ್ಲಾದನ ಮೇಲೆ ಹಿರಣ್ಯಾಕ್ಷನು ಕೋಪಮಂ ತಾಳಿದಂತೆ ಕೋಪಾರೂಢನಾದ ತಂದೆಯುಂ ಕಂಡು, ಆಗ್ಗೆ ಸುಮ್ಮನಿದ್ದು ದುರಾಲೋಚನೆಯುಂ ಮನದೊಳ್ ಸ್ಮರಿಸಿ, ಶೀಲವತಿಯ ಗೆಳತಿಯಾದ ಮಂತ್ರಿ ಕುವರಿಯುಂ ಕಂಡು, ಆಕೆಯೊಡನೆ ಎಲೌ ಪಿಚಿವ ತನುಸಂಜಾತೆಯೇ ಕೇಳು ? ನಿಮ್ಮಾ ತಂದೆಯು, ನಮ್ಮಾ ರಾಜ ಕುವ ರಿಗೆ ವರ ನಿಶ್ಚಯಮುಂ ಮಾಡಿಕೊಂಡು ಹೋಗುತ್ತಾನೆ. ಆ ವರನಾದರೋ ಶಂಗಹೀನನು, ಅದಂ ನಮ್ಮ ಮಂತ್ರಿಯು ಮರೆವಾಚಿದ್ದಾನೆ. ಇಂಥಾ ಸರ್ವಾಂ ಗಸುಂದರಿಯಾಗಿಯೂ, ಸರ್ವ ಸದು ಗುಣಾಢ್ಯಳಾಗಿಯೂ ಇರುವವಳಿಗೆ ಅಂಥಾವ ನೇ ಗಂಡನು, ಎಂದು ಅತಿ ದುಃಖಿತನಾಗಿಪ್ಪಡಂ ನಿನ್ನೊಳುಸುರಿದೆನು. ಇದಂ ನಾನು ಹೇಳಿದೆನೆಂದುಪ್ರಕಟಮಾಡಬೇಡ. (ಸರ್ವೇಂದ್ರಿಯಾಣಾಂ ನಯನಂಪ್ರಧಾನಂ) ಎಂಬ ನ್ಯಾಯಾನುಸಾರವಾಗಿ ಎಲ್ಲಾ ಇಂದ್ರಿಯಗಳಿಗಿಂತಲೂ ಕಂಗಳೇ ಅತಿಶಯಂ ಗಳೇ ಹೊರ್ತು ಅನ್ಯಮಲ್ಲವ್ವ. ನೀನು ಇದಂ ಅರಿತಿರುವಿ. ಆ ರಾಜಾತ್ಮಜನಾದರೋ ವಿಕಾ ಕ್ಷನು ನನ್ನನ್ನು ನೋಡು. ನಿನ್ನ ಗೆಳತಿಗೂ ನನಗೂ ವಾಂಸತ್ಯವಾದರೆ, ಆಕೆ ಯು ಇಚ್ಛಾನುಸಾರವಾಗಿ ನಡಪುಕೊಳ್ಳಲು ಸಿದ್ಧನಾಗಿದ್ದೇನೆ. ನಾನಿಬ್ಬರೂ ಮಂತ್ರಿ ತನೂಭವರಾದ್ದರಿಂದ ನಿನ್ನೊಳು ಹೇಳಿದೆನು ಎಂದು ನುಡಿದ ಮಂತ್ರಿಪು ತ್ರನ ಮಾತುಗಳಂ ನಂಬಿದ, ಆ ಮಂತ್ರಿಪುತ್ರಿಯು ಅಂತರಂಗದಲ್ಲಿ ರಾಜಾತ್ಮಜಿ ಯಾದ ಶೀಲವತಿಯಂ ಕರೆಸಿ ಮೇಲೆ ಪೇಳಿದ ಮಂತ್ರಿನಂದನನ ಮನೋಗತಮಂ ತೊಚಿಸಿದ್ದನ್ನು ಕೇಳಿದಾ ಶೀಲವತಿಯು, ತನ್ನಲ್ಲಾನೇ ಯೋಚಿಸಿದಳದೆಂತೆನೆ.

ಈ ಮಂತ್ರಿ ಪುತ್ರನು ನಿಜರಾತ್ಮನೊಳು ದೋಷಾರೋಪಣೆಯನ್ನೆಸಗಿ ಆತನಿಗ ಪ್ರತಿಕೂಲವಾದ ಕನ್ಯಾರತ್ನಮಂ ತಾನೇ ವರಿಸಬೇಕೆಂದು ಯೋಚಿಸಿದವನಾಗಿ ಈಗೆ ಹೇಳುತ್ತಾನೆ. ಇವನು ಮಹಾ ಪಾಪಿಯಾದವನು ಇವನ ಮುಖಾವಲೋ ಕನಂ ಮಾಡಬಾರದು, ಎಂದಾಲೋಚಿಸಿ ಹಾಗೆಯೇ ಈ ಮಂತ್ರಿಪುತ್ರನ ಮಾ ತುಗಳು ನಿಜವಲ್ಲವೆಂದು ಹ್ಯಾಗೆ ನಂಬುವದು ? ಆ ರಾಜನಂದನನನ್ನು ನೋಡಿದ ವರಾದವರನ್ನು ಯಾರನ್ನು ಕಾಣೆ, ಆತನು ಸುರೂಪಿಯೋ ಕುರೂಪಿಯೋ ಹ್ಯಾಗಿ ರುವನೋ ಹ್ಯಾಗೆ ಕಾಣಲಿ ಎಂಬಾಲೋಚನಾ ಪರವಶಳಾಗಿ ಪ್ರತ್ಯುತ್ತರಮುಂ ತೊಲ್ಲದೆ ಮೌನದೊಳಿದ್ದಳು.

ಇತ್ತಲಾ ಮರುದಿನದೊಳಾ ಸುಹೋತ್ರರಾಯಂ ತನ್ನಾಪ್ತಮಂತ್ರಿಯಂ ಕರೆಸಿ ನಿನ್ನಾತ್ಮಜೆಯ ಜಾತಕಮನಿತ್ತು ಪೇಳಿದ್ದೇನೆಂದರೆ ?— ಎಲೈ ಮಂತ್ರಿಯೇ !

ನೀನುದೇವಸೇನ ಮಹಾರಾಯನ ಪೊಳಲಂ ಸಾರುತ ಮೊದಲು ವರನಂನೋಡು, ಪಶ್ಚಾತ್ ದೇವಸೇನ ಮಹಾರಾಯನಂ ಕಾಂಬುವದು, ವರನು ನಮ್ಮ ಸುಕುಮಾರಿಗೆ ತಕ್ಕವನೆಲ್ಲದೊಡೆ ಈ ಜಾತಕಮುಂ ಆ ರಾಯುಂಗೀಯ್ಯದಿರು, ಕಾರ್ಯಮುನು ಕೂಲಮಾಗಿದ್ದರೆ ತಕ್ಕಂತೆ ಮಾತಾಡಿ, ಅವರೊಪ್ಪುವದಾದರೆ ಲಗ್ನಪತ್ರಿಕೆಯುಂ ಬರೆದು ಕಳುಹಿಸುವೆನೆಂದಂ ತನ್ನ ಮನೋಗತಮೆಲ್ಲಮುಂ ತನ್ನ ಮಂತ್ರಿಯೊಳೊರೆದು ದೇವಸೇನ ಮಹಾರಾಯನ ಮಂತ್ರಿಯುಂ ಯೋಗ್ಯಮಾಗಿ ಸನ್ಮಾನಿಸಿ ತನ್ನ ಮಂತ್ರಿಯೊಡನೆ ಪ್ರಯಾಣಮುಂ ಬೆಳೆಯಿಸಿ ಕಳುಹಲು, ಈ ದೇವಸೇನಮಹಾರಾಜನ ಮಂತ್ರಿಯು ಎಳಗಂದಿಯು ತನ್ನ ಕರುವಂ ನೆನೆದು ಬರುವಂದದಿಂ ಅತ್ಯಾತುರಾದರದೊಳು ತನ್ನ ರಾಜಧಾನಿಯುಂ ಸಾರಿ, ತನ್ನೊಡೆಯನಂ ಕಂಡು, ವಿಜಯಿಯನ್ನಪಿಸಿ ಸಾಷ್ಟಾಂಗಮೆರಗಿ, ಎಲ್ಲೈ ಮಹಾರಾಜನೇ ಲಾಲಿಸು, ಮಾಳವ ದೇಶಾಂಗನೆಯ ಅಸ್ಯಾಬ್ಜದಂತತಿ ಸುಂದರಮಾದ ಭಾಂಡೀಪುರದರಸು ಸುಹೋತ್ರರಾಯನ ಕುವರಿಯುಂ ನಿನಗೆ ಸೊಸೆಯನ್ನಾಗಿ ನಿಶ್ಚೈಸಿಕೊಂಡು ಬಂದಿರುವೆನು.

ಆ ಕನ್ಯಾಮಣಿಯಾದರೋ ಲೋಕೋತ್ತರ ಸುಂದರಿಯು, ಎಂದು ಅಲ್ಲಿ ನಡೆದ ಸಮಾಚಾರಮನ್ನೆಲ್ಲಮುಂ ವಿಸ್ತಾರಮಾಗಿ ಬಿನ್ನೈಸಿ ವರಪರೀಕ್ಷಾರ್ಥಮಾಗಿ, ಆ ರಾಯುಂ ತನ್ನ ಮಂತ್ರಿಯಂ ನೆನ್ನೊಡನೆ ಕಳುಹಿಸಿದ್ದಾನೆಂದೊರೆಯಲು, ರಾಯುಂ ಪರಮಾಶ್ಚರ್ಯಮಗ್ನನಾಗಿ, ಸುಹೋತ್ರರಾಯನ ಮಂತ್ರಿಯಂ ಕರೆಯಿಸಿ, ಉಚಿತಾಸನಾಸೀನನನಂಮಾಡಿ, ಸಕಲೋಪಚಾರಗಳಿಂ ಬಹುವಾನಿಸಿ, ಕುಶಲ ಪ್ರಶ್ನೆಗಳಂ ಮಾಡುತ್ತಿರುವಲ್ಲಿ ತಮ್ಮ ರಾಜಪುತ್ರಿಯ ಜಾತಕವಂ ತೆಗದು ದೇವಸೇನ ಮಹಾರಾಯುಂಗೀಯಲು, ಆಗಲಾರಾಯುಂ ತನ್ನ ಪುರೋಹಿತನಂ ಕರಿಸಿ, ತನ್ನಕುಮಾರನ ಜಾತಕದೊಂದಿಗಾಕನ್ಯಾಜಾತಕವಂನಿಕ್ಕಿ, ಅವುಗಳಂಪರಿಕಿಸುವಂತೊರೆದು, ತನ್ನಕುಮಾರನಾಪ ಸುಭಾನುವಂ ಬರಿಸಿ, ಆತನೆಲ್ಲನ ವಿದ್ಯಕೌಶಲ್ಯಗಳಂ ಮಂತ್ರಿಶೇಖರಂಗರ್ಪಿಸುತ್ತಲಿದರ್ಂ. ಈ ವರನಂ ಕಂಡಾಮಂತ್ರಿಯು, ಕನ್ಯೆಗೆ ತಕ್ಕ ವರನೇ ದೊರತನೆಂದಾನಂದದೊಳಿರ್ದಂ.

ಆ ರಾಜಪುರೋಹಿತನಾಜಾತಕಂಗಳಂ ಪರಿಕಿಸಿ ರಾಜನೊಡನೆ ಎಲ್ಲೈ ಮಹಾರಾಜನೇ ? ಈ ಕನ್ಯಾವರರಿಗೆ ಇರುವ ಘಟಿತಾರ್ಥವೂ, ದಾಂಪತ್ಯಾನುಕೂಲವೂ, ಸರ್ವೋತ್ತಮವಾಗಿರುವದು. ಈ ದಂಪತಿಗಳು ರೋಹಿಣೀ ಚಂದ್ರರಂತೆಯೂ, ಶಚೀಂದ್ರರಂತೆಯೂ, ಪಾರ್ವತೀ ಪರಮೇಶ್ವರರಂತೆಯೂ, ವಾಣೀಕಮಲಜರಂತೆಯೂ ಒಪ್ಪುತ್ತಾ ದೀರ್ಘಾಯುರಷ್ಟೈಶ್ವರ್ಯ ಪುತ್ರ ಮಿತ್ರ ಬಾಂಧವಯುಕ್ತರಾಗಿಯೂ ಬಾಳುವರೆನಲು ದೇವಸೇನ ಮಹಾರಾಯನು ಸುಹೋತ್ರ ಮಹಾರಾಯನು ಲಗ್ನಕ್ಕೆ ಪ್ರಯತ್ನವಂ ಮಾಡಿಹೇಳಿ ಕಳುಹಿಸಿದ ಕೂಡ್ಲೆ ಹೊರಟುಬರುತ್ತೇವೆಂದು ಆ

ಮಂತ್ರಿಗೊರೆಯೆ ಸಕಲೋಪಚಾರಂಗಳಿಂ ಮನ್ನಿಸಿ ಕಳುಹಿ ಸಂತೋಷ ಸ್ವಾಂತನಾಗಿ ಮುದುವೇ ಸಾಮಗ್ರಿಗಳಂ ಮಾಡಲೆತ್ತಿಸುತ್ತಿರ್ದಂ.

ಆ ರಾಜಾತ್ಮಜನಾದ ಸುಭಾನುವು ಆ ರಾಜಕುವರಿಯ ರೂಪಲಾವಣ್ಯಾದಿಗಳಂ ಅರಿಯಬೇಕೆಂಬಾಶೆಯಿಂದ ಮನೋವೀಡಿತನಾಗಿ ತಮ್ಮ ಮಂತ್ರಿಕುಮಾರನಾದ ದುರ್ದ್ಧರನಂ ಕರೆಸಿ ಎಲ್ಲೆ ಸಖನೇ ಕೇಳು ಈ ಭಾಗದೊಳು ನಾನರಿತಪ್ಪನ್ನು ಸುರುವೆನು ಘಟಿಯನ್ನೆರುಪಲಾರೆನು. ಆಕೆಯು ಅಂಥಾ ಸುಂದರಿಯೂ ಎಲ್ಲವಲ್ಲದೆ ಮಾತಾಡುವದೇ ಇಲ್ಲವಂತೆ ನಾವುನೋಡಿದಾಗ ಥಳಿಕ್ ಬೆಳಿಕ್ ಮಾಡಿ ಕುಳ್ಳಿರಿಸಿದ್ದರು. ಮಾತನಾಡಿಸುವ ಸಂದರ್ಭ ದೊರೆಯದೆಹೋದ್ದರಿಂದ ಅವರ ಪರಿಕ್ಷೆ ಮಾಡಲಿಲ್ಲವೆಂದು ಆ ಕನ್ಯಾಮಣಿಯನ್ನೀತನಿಗೆ ತಪ್ಪಿಸಿ ತಾನೇವರಿಸಬೇಕೆಂಬ ದುರಾಲೋಚನೆಯಂ ಹೊಂದಿದವನಾಗಿ ಅದಂ ಹೊರಪಡಿಸದೆ ಹೀಗೆ ಮಾತನಾಡುತ್ತಾಇರಲು, ಕಪಟಿಯು ರಿಯದಾರಾಜಾತ್ಮಜನದಂ ನಿಜವೆಂದು ನಂಬಿ ಈ ಭಾಗದೊಳು ತಂದೆಯೊಳಿರುಹಲು ನಾಚಿ ಚಿಂತಾಕ್ರಾಂತನಾಗಿ ಯಾವದನ್ನೂ ಅರಿಯದೆ ಕಳವಳಿಸುತ್ತಾ ಯಿದ್ದನು.

ಇತ್ತಲಾ ಸುಹೋತ್ರರಾಯನ ಮಂತ್ರಿಯು ತಮ್ಮ ರಾಜಧಾನಿಯಾದ ಭಾಂಡೀಪುರವನ್ನೈದಿ ತಮ್ಮ ಇಳೆಯರಣ್ಮನಂಕಂಡು ವಿನಯಪೂರ್ವಕವಾಗಿರಗಿ ನಜರನ್ನರ್ಪಿಸಿದಬಳಿಕ ನಮ್ಮ ಪೆಣ್ಮಣಿಗೆ ಅನುಕೂಲವಾದ ವರನೇ ಸಂಘಟಿಸಿದ ದೇವರನ್ನೇ ಕೊಂಡಾಡುತ್ತಾ ದೇವಸೇನರಾಯಂಗೆ ಜಾತಕವನಿತ್ತನು ಮತ್ತು ಆ ರಾಜಾತ್ಮಜನ ಧನುರ್ವಿದ್ಯಾದಿ ಸಕಲಕಥೆಗಳಂ ಪರಿಕಿಸಿ ಮುಕಾಧೀರನಾಗಿಯೂ ಶೂರನಾಗಿಯೂ, ವಿನಯಾದಿ ಸಕಲಸದ್ಗುಣಭರಿತನಾಗಿಯೂ, ತೋರಿದನು. ವಿವಾಹಕ್ಕೆ ಲಗ್ನವಂ ನಿಶ್ಚೈಸಿ ಬರಸೇಳಿಕಳುಹಿದಕೂಲೆ ಬರುವದಾಗಿ ದೇವಸೇನಮಹಾರಾಯನು ಹರುಷಿತನಾಗಿ ಹೇಳಿವನೆಂದು ವಿಜ್ಞಾಪಿಸಿ ತನ್ನವಾಸಕ್ಕೆ ತಾನೈದಿದನು.

ಅನಂತರದೊಳಾ ಸುಹೋತ್ರಾತ್ಮಜೆಯು, ವರನು ನಿಕಾರ್ಷ್ಣನೆಂಬುದನ್ನರಿತು ಬಂದೆಯಾ ? ಎಂದು ಮಂತ್ರಿಯಂ ಕೇಳುವದಕ್ಕೆ ಲಜ್ಜಾನ್ವಿತಳಾಗಿ, ಲೋಕದೊಳು ವರನಕಡೆಯವರು ಅವನ ಅಂಗೀಕೃತಿಯಂ ಪೂರಪಡಿಸದೆ ಮದುವೆಯಂ ಮಾಡುವದುಂಟು. ಬಳಿಕ ಹ್ಯಾಗಾದರು ಅನುಭವಿಸೆದೇ ಬಿಡಲಾಗದು, ನಾನು ಹಾಗೆ ಮಾಡದೇ ನಿಶ್ಚಯಾರ್ಥವು ತಿಳಿದು ಬಳಿಕ ಅಂಗೀಕರಿಸುವೆನೆಂದು ತನ್ನಲ್ಲಿ ತಾನು ಯೋಚಿಸಿ ನಿಶ್ಚೈಸಿಕೊಂಡು ತನ್ನ ತಾಯಿಯಬಳಿಯನ್ನೈದಿ ಎಲೌ ಮಾತೆ ಲಾಲಿಪುದೆಂದು ಅಂತರಂಗವನೆಲ್ಲವಂ ಅಕೆಗೆ ಪೇಳಲು, ಗುಣಗ್ರಾಹಿಯಾದಾ ರಾಜಾಂಗನೆಯನಂ ಯುಕ್ತವೆಂದು ಭಾವಿಸಿ, ಆರಾತ್ರಿಯೊಳು ಕಾಂತನೊಜನೆ ಸವಡಿಸಿ ಸರಸಸಲ್ಲಾಪಗಳಂ ಮಾಡುತ್ತಿರುವಾಗ ಎಲ್ಲೆ ಪ್ರಾಣಕಾಂತನೆ ನಮ್ಮ ಕುವರಿಯು ವರನಂನೋಡಿ ಮೆಚ್ಚಿ ಮದುವೆಯಾಗುವೆನೆಂಬ ಬ್ರಾಂತಿ ಸಂಯುತಳಾಗಿಧಾಳಿ ಹಾಗೆ ಮಾಡುವದು ಯುಕ್ತವಲ್ಲವೆ ಎನಲು ರಾಯಂ ಅದಕ್ಕೊಪ್ಪಿ ಹಾ

ಗೆಯೇ ಮಾಡಿಸುವೆನೆಂದಾರಮಣಿಯೊಳ್ಕೂರಿದು ಅರಾತ್ರಿಯಂ ಸುಖವಾಗಿತೊರೆದು ಮರುದಿನದೊಳುದಯದಲ್ಲಿ ಸಮಸ್ತ ಪರಿಜನಪರಿವೃತನಾಗಿ ಒಡ್ಡೋಲಗದೊಳು ರಾಜಾಸ್ಥಾನಮಂ ಸಾರಿ ಸಿಹ್ಮಾಸನಾರೂಢನಾಗಿರುವಾಗ ಈ ಸಂಗತಿಯಂ ಜ್ಞಾತಕಕ್ಕೆ ತೆಗದುಕೊಂಜು ಮಂತ್ರಿಯಂ ಬಳಿಗೆಕರೆದು ಎಲ್ಲೆ ಮಂತ್ರಿಶ್ರೇಖರನೇ ನಮ್ಮ ಸುಕುಮಾರಿಗೆ ಸ್ವಯಂವರಮುಂ ಮಾಡಿಸಿ ಲಗ್ನಮಂ ಬಿಳಿಸಬೇಕೆಂಬ ಕುತೂಹಲಮುಳ್ಳನನಾಗಿದ್ದೇನೆ ಇದಂ ನೆರವೇರಿಸಬೇಕೆಂದಾಜ್ಞೆಯನ್ನೀಯಲು ರಾಜಪುರೋಹಿತರಂ ಕರೆಸಿ ಲಗ್ನಮಂ ಗೊತ್ತುಮಾಡಿಸಿ, ದೇವಸೇನರಾಯನೇ ಮೊದಲಾದಖಿಲ ಭೂಪಾಲಕರಿಗೂ ಲಗ್ನಪತ್ರಿಕೆಯುಂ ಕಳುಹಿ ಅತಿರಮ್ಯವಾಗಿಯೂ, ಬಹುವಿಸ್ತಾರವಾಗಿಯೂ ಸ್ಥಳವನ್ನೇರ್ಪಡಿಸಿ ಮಲಯಜಸ್ಪರ್ಶಭಗಂಧದಲೂ, ನಾನಾವಿಧವಾದ ಚಿತ್ರಪುತ್ಥಳಿಗಳಿಂದಲೂ, ಪುಷ್ಪಭರಿತಂಗಳಾದ ಲತಾಪೊಗೆಂದಲೊಪ್ಪುತ್ತಿರುವಂತೆ ಅತಿರಮಣೀಯವಾಗಿ ಸ್ವಯಂವರಮಂಟಪಮಂ ನಿರ್ಮಿಸಿ ರತ್ನಖಚಿತವಾದ ಮಂಚಂಗಳಿಂದಲೂ, ಸಿಹ್ಮಾಸನಂಗಳಿಂದಲೂ, ವಿಶ್ರಾಂತ್ಯಾಸನಂಗಳಿಂದಲೂ, ಪಟ್ಟಕಪೂರ್ಣರವ ನೇಲಕಟ್ಟುಗಳಿಂದಲೂ, ಪ್ರಸಗು ಜಪಾಪುಜಿ ಕುಂಕುಮದ ಸಾರಣೆಯಿಂದ ಅಗರುಧೂಪದಿಂದಲೂ, ದ್ಪಜಪತಾಕ ಮುಲ್ಲರಿಗಳಿಂದಲೂ ಅಲಂಕರಿಸಿ ಬರುವ ರಾಜಾಧಿರಾಜರಿಗೆಲ್ಲರಿಗೂ ಯುಕ್ತಾಲಯಗಳಂ ಸಕಲೋಪಚಾರಂಗಳಿಗೆ ಯೋಗ್ಯವಾದ ಉಗ್ರಾಣಗಳಂ ಹಸಾಶ್ವಾಶ್ವರಥಶಾಲೆಗಳಂ, ಜಲಂತ್ರಾಪಸಮಸ್ತ ಪರಿಕರಂಗಳ ನಣಿಗೊಳಿಸಿ ಪುರಮಂ ಶೃಂಗರಿಸಿ, ಬರುತ್ತಿರುವ ರಾಜರಿಗೂ, ರಾಜಾಶ್ವರಿಗೂ ತಕ್ಕ ಪಚಾರಂಗಳಂ ತೋರಿ ಉಪಚರಿಸುತ್ತಿರ್ದಂ.

ಇತ್ತಲಾ ಸ್ವಯಂವರಲಗ್ನಪತ್ರಿಕೆಯುಬಂದು ತಲುಪುತ್ತಲಾ ದೇವಸೇನಮಹಾರಾಯನಪಜಂಗೊಡಿ ಅರಾಯನಿಷ್ಪಯತ್ನಾಂತರಾಗಲೆಂದು ನಿಶ್ಚೈಸಿ ಸಕಲಸಾಮಗ್ರಿಗಳಂತುಂಬಿ ಅನೇಕಸರಿ ಜನಯುಕ್ತನಾಗಿ ಚತುರಂಗಬಲಸಮೇತನಾಗಿ ಪತ್ನೀಪುತ್ರಯುತನಾಗಿ ಸರಮಸಂಭ್ರಮದೊಂಗೆ ಪ್ರಯಾಣಮಂ ಬಿಳಿಸಿ ಅಟ್ಟಹಾಸದೊಳು ಬಂದುಪಾಂಡ್ಯಪುರದ ಬಳಿಯಂ ಸಾರುವಕಾಲಕ್ಕೆ ಸಮಸ್ತಸೇನಾಪರಿವೃತನಾಗಿಯೂ, ಸಕಲಸಾಮ್ಯ ವಾರಾಂಗನಾನಿಕರದಿಂದಲೂ, ನುಂಗಳೆದ್ರವ್ಯಗಳಿಂದಲೂ, ಕೂಡಿದವನಾಗಿ ಸುಹೋತ್ರರಾಯಂಬಂದು ಎದುರ್ಗೊಂಡು ಪುರಮಂಕೊಗಿಸಿಯುಕ್ತವಾಪದಿಚಾರದೊಳಿಳಿಸಿ ಸಕಲಸಿಯೋಗಿಗಳಿಂನೇಮಿಸಿ, ನಿಜಾಲಯಮಂಸಾರಿ ಮರುದಿನ ಉದಯದೊಳು ಸಮಸ್ತ ರಾಜಾಧಿರಾಜಕುಮಾರರನ್ನೆಲ್ಲರಂ ಸಿಂಗರಿಸಿ ಮಾಡ ಸ್ವಯಂವರಮಂಟಪಕ್ಕೆ ಬಂದು ಉಚಿತಾಸನಂಗಳೊಳು ಕುಳಿತುಕೊಳ್ಳುವಂತೆ ನೇಮಿಸಿ ತನ್ನ ಮುದ್ದುಕುವರಿಗೆ ಮಂಗಳಸ್ನಾನವಂಗೈಸಿ ನವರತ್ನಖಚಿತಭೂಷಣಂಗಳಿಂದಲಂಕರಿಸಿ ದಿವ್ಯಪೀತಾಂಬರಮಂ ರತ್ನಕುಪ್ಪಸವನ್ನುಧರಿಸಿ ಗಂಧವುಷ್ಪತಾಂಬೂಲಗಳಿಂಸಿಂಗರಿಸಿ ಕೈಯೊಳು ಪೂಮಾಲೆಯನ್ನಿತ್ತು ಅಕೆಯ ಸಖೀಜ

ಕೊಂದಿಗೆ ಕರೆತಂದು ಸ್ವಯಂವರನುಂಟಸಮಧ್ಯಭಾಗದೊಳು ನಿಲ್ಲಿಸಲು ಸಭಾ
ವರಾದ ರಾಜಕುವಾರರೆಲ್ಲರೂ ಈ ಸರ್ವೋತ್ತುಸುಂದರಿಯುಂ ಕಾಣುತ್ತಲೇ
ರವಾಶ್ಚರ್ಯ ಮಗ್ನರಾಗಿ ಚಿತ್ರಾರ್ಪಿತಪ್ರಥಿಮೆಗಳಂತೆ ಸ್ತಬ್ಧರಾದರು.

ತರುವಾಯ ರಾಜಕುವಾರಿಯಾದ ಪೆಣ್ಮಣಿಯು, ಮುಂತ್ರಿಪುತ್ರಿಯಾದ ಉ
ುಯನ್ನೂ, ಕೆಲರಾದಾಪ್ತಸಖಿಯರೊಪಗೂಡಿ ಕೈಯೊಳು ಪೂವಾಲೆಯುಂಪಿಡಿದು
ಳಿಬರುತ್ತ, ರಾಜಸವಾಜವನ್ನೆಲ್ಲರಿ ಎಲೌ ಪ್ರಿಯಸಖಿ ಉವೆಯೇ ನಿಮ್ಮತಂದೆ
ು ರಾಜಕುವಾರರಿಂಪಾವರೆಂದುಪೇಳಿ ತೋರಿಸುವದಕ್ಕಾಗಿ ಸಂಗದಬರುವನೆಷ್ಟೆ
ತನೊಳು ನಾನು ಪ್ರತ್ಯಕ್ಷಳಾಗಿ ಮಾತನಾಡಲು ನಾಚಿಕೆಯಾಗಿರುವದ್ದರಿಂದ ನಿನ್ನ
ನ್ನ ಗುರಿವಾಡಿಕೊಂಡುಎಲ್ಲಾ ಸಂಗತಿಗಳಂಕೇಳಿ ತಿಳಿದುಕೊಳ್ಳುತ್ತಾ ಬರುವೆನೆಂದು
ಮುಂತ್ರಿಕುವರಿಯನೊದಗೊಂಡು ರಾಜಕುವಾರಪಂಗ್ತಿಯೊಳು ಮೆಲ್ಲಮೆಲ್ಲನೆ ಮು
ಥನ ಪಟ್ಟುದಾನೆಯಂತೆ ಬರುತ್ತಿರುವಳಂ ಕರವೀರಪುರದ ರಾಜಾತ್ಮಜನಾದ ಸುಭಾ
ುವನ್ನೋಡಿ ಹಾಹಾ ! ಇಂಥಾಸವರ್ವಾಂಗಸುಂದರಿಯೂ, ಮೃದುಮಧುರಗಾಂಭೀ
ವಾಗಿ ನುಡಿಯುತ್ತಿರುವೀ ನೋಹಸಾಂಗಿಯನ್ನಗಲಿಸಬೇಕೆಂದು ನಮ್ಮ ಮುಂ
ಕುಮಾರನು ದುಷ್ಪಾಭಿಪ್ರಾಯ ಮುಳ್ಳವನಾಗಿ ಮೂಗಳಿಂದೂ ಸಾಮಾನ್ಯಕನ್ಯೆ
ಎಂತಲೂ ಪೇಳಿದನಲ್ಲಾ ಅಹಾ ಈಕೆಯಮುಖವಾದರೋ ರಾಕಾಚಂದಿರನಂತೊಪ್ಪು
ವಲ್ಲಾ ಕಂಗಳು ಸರಸಿಜದಳಗಳಂ ಗೆಲ್ಲುವವು ನಾಸಿಕವು ಚಂಪಕಕೋರಕಮಂ ಜರೆ
ದು ದಂತಪಂಕ್ತಿಯು ಕುಂದಕುಟ್ಮಲನೆಂದವಂಪಳಿವುದು, ಈಬಿಂಬಾಧರೆಯುಯಾವ
ರಯುಂಗಳಲಿ ್ಲಯೂ ಸ್ವಲ್ಪವೂ ವ್ಯತ್ಯಾಸವಿಲ್ಲದ ಈ ಲೋಕೈಕ ಸುಂದರಿಗೆ
ಕೆಯಾರು, ಸರಸ್ವತೀ, ಶಚೀ, ಪಾರ್ವತಿಯರೇ ಸರ್ವೋತ್ತಮ ಸುಂದರಿಯ
ುದು ಪೇಳುತ್ತಿರುವರು. ಈ ಕಾಂತಾಮಣಿಯುಂ ಪೋಲುವರೇ ? ಇಂಥಾ
ುಣಿಯು ಈ ರಾಜಮುಂಡಲಿಯುಲ್ಲಿ ಯಾರ ಕೈಯಾಗುವಳೋ ಕಾಣೆನಲ್ಲಾ,
ನಿಗಿಂತಲೂ ಸುಂದರರಾವವರು ಬಹುಮುಂದಿ ಬಂದಿರುವರು. ಮುಂದೆಂತಿಹು
ೋ ದೈವಸಂಕಲ್ಪವೆಂದು ಚಿಂತಾಕ್ರಾಂತನಾಗಿರುತ್ತಿರುವಲ್ಲಿ ರಾಜಪಂಕ್ತಿಯೊಳು
ತಿಯುತೊಡಗೊಂಡು ಬರುತ್ತಿರುವ ರಾಜಾತ್ಮಜಿಗೆ ವರಿಸೆಯಾಗಿ ಈತನಿಂಥವ
ುು ರಾಜಕುವಾರರನ್ನೆಲ್ಲರಂ ತೋರುತ್ತಾ ಅವರ ಚರಿತ್ರೆಯುಂ ಪೇಳುತ್ತಾ
ುವ ಮುಂತ್ರಿಯ ಮಾತುಗಳನ್ನೆಲ್ಲವಂ ಕಿವಿಗೊಟ್ಟು ಕೇಳುತ್ತಲಾ ರಾಜ
ವಾರರೊಳಾರನ್ನಂಗೀಕರಿಸದೇ ಹೊರಟು ಬಂದು ಸಭಾಮಧ್ಯಭಾಗದೊಳು
ತು ಕೈಲಿದ್ದ ಪೂವಾಲೆಯಾ ಗೆಳತಿಯ ಕೈಯೊಳಿತ್ತು, ಹುಬ್ಬುಗಳೆಂಬ ಬಿ
ೊಳು ನೇತ್ರಗಳೆಂಬ ಬಾಣಂಗಳಂ ಪೂಡಿ, ರಾಜಾತ್ಮಜರೆಂಬ ಹುಲ್ಲಿಗಳಂ
ಟೆಯಾಡುತ್ತಾ ನಿಂತ ಕಾಂತಾಮಣಿಯು ಮುಂತ್ರಿ ನಂದನೆಯನ್ನು ಕುರಿತು,
ೈ ಉವೆಯೇ ನೆನ್ನೆನ್ನು ಕೇಳುವದಕ್ಕೆ ಬಂದು ಜಾತಕನ ಕೊಂಡೊಯಿದರಾಜಾ

ತ್ಮಜನಾರೆಂದು ಪ್ರಶ್ನೆಯಂಮಾಡಲು ಸವಿಾಪದೊಳಿರ್ದ ಉಭಯಮಂತ್ರಿಗಳೂ ಕೇಳುತ್ತಾ ಪರಮಾನಂದತುಂದಿಲರಾಗಿ ದೇವಸೀನಾತ್ಮಜನಾದ ಸುಧಾನುವಿನ ಸವಿಾಪವನ್ನೈದಿಸಿ ತೋರಿಸಲು ಪರಮಾಹ್ಲಾದಭರಿತಳಾಗಿ ಎಲೈ ಸಖೀ ! ಕೋಟಿಮನ್ಮಥನಂತೊಪ್ಪುವ ವಿಶಾಲಾಕ್ಷವಕ್ಷನಾಗಿಯೂ, ಪರಮ ತೇಜೋವಂತನಾಗಿಯೂ, ಒಪ್ಪುತ್ತಿರುವೀ ರಾಜಕುಮಾರನಂ ಎನಗೆ ತಪ್ಪಿಸದೀಗಂದು ಕೃತ್ರಿಮತಂತ್ರದಿಂದ ಅಂಧನೆಂದೆನಗೊರವೆಯಲ್ಲಾ ಎಂದು ಮೆಲ್ಲನೆಉಸುರುತ್ತಾ ಬೆಂಬಿಡದಿರ್ದ ಸುಶೀಲೆಯಂಕುರಿತು ಎಲೈ ದೇವಿಯೇ ನಾನೇನುಮಾಡಲಿ, ಆರಾಜನ ಮಂತ್ರಿಪುತ್ರನೇ ಹಾಗೆಂದು ನನ್ನೊಳಿರೊದಿನು ನಾನುಮೀಪಮನಃಪೂರ್ವಕ ತಿಳಿದುನುಡಿಯಲಿಲ್ಲವೆಂದು ಬಿನ್ನೈಸಲು ಆಮಂತ್ರಿಸುತನು ಸ್ವಾಮಿದ್ರೋಹಿಯಂದರಿತು ಸಖೀಕರಗತವಾದಪೂಮಾಲೆಯಂ ಕೈಯ್ಯೊಳುತೆಗಮುಕೊಂಡು ಕಮಲನುಕರಂದಮು ಬೈಸಿದ ಭ್ರಮರವ್ರ ಸವಿಾಪವನ್ನೈದುವಂತೆ ಆ ರಾಜಕುಮಾರನ ಬಳಿಗೈದಿವರಿಶಯಿದಂತೆ ರಂಜಿಸುವಾತಿರೆ ಯಾಣ್ಮನಮುಮ್ಮುಕುಮಾರನ ಕಂಠದೊಳು ಸವಮರ್ಿಸಿ ನಮಸ್ಕಾರವಂಗೈದು ಮುಕುಳಿತ ಕರಪುಟಳಾಗಿ ಎಲೈ ಮಹಾರಾಜನೇ ! ನಾನು ಜನ್ಮಾಂತರದಲ್ಲಿಮಾಡಿದ ಈಶ್ವರಾರಾಧನೆಯಿಂದ ತನುಗೆ ದಾಸಳಾಗುವೆನೆಂಬ ಬಯಕೆಯು ತಲೆದೋರ್ದುದು ಎನ್ನೊಳು ಕರುಣಿಸಬೇಕೆಂದು ಬಿನ್ನೈಸಿ ಚಂಪ್ರನೇಳಿಗೆಯಂ ಕಂಡ ಕುಮುದಿನಿಯೊಳು ಪರಮಾನಂದ ಸಂಯುತಳಾಗಿ ಗೌತಿಯುರೊಡಗೂಡಿ ನಿಜಮಂದಿರವನ್ನೈದಿದಳು.

ನಂತರದೊಳಾಕೆಯ ತಂದೆಯಾದ ಸುಹೋತ್ತರರಾಯನು ದೇವಸೇನಮಹಾರಾಯನ ಸನ್ನಿಧಿಗೈದಿ ಎಲೈ ಮಹಾರಾಯನೇ ! ನಿನ್ನಮಗಳು ಈ ಸಿಂಗರವಾದ ಸ್ವಯಂವರ ಮಂಟಪದೊಳು ರಾಜಧರ್ಮಾನುಸಾರವಾಗಿ ನಿಮ್ಮ ಕುವರಂವರಿಸಿಕ್ಕಿಯೊಳಿದ್ದ ಕುಸುಮಮಾಲೆಯನ್ನಾತನಕೊರಳೊಳುಸಮರ್ಿಸಿದಳು. ಇದೇಗಾಂಧರ್ವವಿವಾಹವಾದುದು, ಆದರೂ ಸಲ್ಲಗ್ನದಲ್ಲಿ ಕನ್ಯಾದಾನಮಾಡಿ ಶಾಸ್ತ್ರೋಕ್ತವಾಗಿ ಉತ್ಸವಂ ಜೆಳಿಸಿ ಸಂತೋಷಿಸಬೇಕೆಂದು ಅಪೇಕ್ಷಿಸಿರುತ್ತೇನೆಯಾಗಿ ಎನ್ನ ಕೋರಿಕೆಯಂ ಈಡೇರಿಸಿ ಸೊಸೆಯೊಂದಿಗೆ ರಾಜಧಾನಿಯಂ ಪ್ರವೇಶಿಸಬೇಕೆಂದು ಬಿನ್ನೈಸಿ ಉಳಿದರಸರಕಡೆತಿರುಗಿ ಕೈಮುಗಿದು ಮಹಾತ್ಮರುಗಳಿರಾ! ಲಾಲಿಸಬೇಕು. ರಾಜಕುಲಪದ್ಧತಿ ಪ್ರಕಾರ ನನ್ನ ಕುಮಾರಿಯು ನೆರದಿನ್ನೀರಾಜಮಂಡಲಿಯೊಳು ತಾನೊಪ್ಪಿದ ವೋರ್ವರಾಜನಂ ಸ್ವಯಂವರಮುಮಾಡಿದಳು. ಹ್ಯಾಗಾದರೂಬಂಧುಮಿತ್ರರೆಲ್ಲರೂ ದಯಮಾಡಿ ಕಲ್ಯಾಣೋತ್ಸವವನ್ನು ಆಗಮಾಡಿಸಿ ಮನಸ್ಸಂತೋಷಪಡಿಸಬೇಕಾದ್ದಷ್ಟೇ ಮುಂದುನಡೆಯುವ ಈ ಲಗ್ನವಂ ತಾವೆಲ್ಲರೂ ಇದ್ದು ಉತ್ಸವಂ ಜೆಳಿಸಿ ಮುಂದಶೋಭಾಯಮಾನವಂಮಾಡಿ ಮನಸ್ಸಂತೋಷಪಡಿಸಬೇಕೆಂದು ಪ್ರಾರ್ಥಿಸುತ್ತೇನೆ.

ಶ್ಲೋಕ॥ ಕನ್ಯಾವರಯತೇರೂಪಂ ಮಾತಾವಿತ್ತಂಪಿತಾಶ್ರುತಂ ।
ಬಾಂಧವಾಃ ಕುಲಮಿಚ್ಛಂತಿಮ್ಯಷ್ಟಾನ್ನಮಿತರೇಜನಾಃ ॥

ಎಂಬರೀತ್ಯಾ ಕನ್ಯೆಯು ವರನುರೂಪವಂತನಾಗಿ ಪ್ರಾಯಸಮರ್ಥನಾಗಿಯೂ ಇರಬೇಕೆಂತಲೂ, ಕನ್ಯಕಾಮಾತೃವು ತನ್ನ ಮಗಳಿಗೆ ಉಡಿಗೆತೊಡಿಗೆಗಳನ್ನಿಡುವ ವರನಾಗಬೇಕೆಂತಲೂ, ಕನ್ಯೆಯ ತಾತನಿವರನು ವಿದ್ಯಾವಿನಯ ಸಂಪನ್ನನಾಗಿರಬೇಕೆಂತಲೂ ಹೆಣ್ಣಿನ ಬಾಂಧವರೆಲ್ಲರೂ ಭೋಜನಾದಿಗಳಿಗೆ ತಕ್ಕ ಕುಲವಾಗಿರಬೇಕೆಂತಲೂ ಇತರರಾದವರು ವರನು ಧಾನ್ಯಶಾಲಿಯಾಗಿದ್ದರೆ ತಮಿಗೆ ಮೃಷ್ಟಾನ್ನಗಳು ದೊರೆಯುವವೆಂತಲೂ ಬೈಸುಕತ್ತಿರೆ ಈರೀತ್ಯಾ ನಸ್ಮ ಕುಮಾರಿಯು ತನಗೆಬೇಕಾದವರನ್ನು ವರಿಸಿದಳು ಅವಳ ಇಷ್ಟಾನುಸಾರವಾಗಿ ಅವರನಿಗೇನೇ ಕನ್ಯಾದಾನವಂ ಮಾಡಬೇಕೆಂದು ಸಂಕಲ್ಪಿಸಿದ್ದೇನೆ. ಎಂದು ಏನಗುದೊಳು ಪೇಳುತ್ತಿರುವ ಸುಹೋತ್ರರಾಯನಂಕುರಿತು ಎಲ್ಲ ಭೂಪಾಲನೆ! ಕನ್ಯೆಯನ್ನು ಹತ್ತು ಮಂದಿ ಬಂದು ಕೇಳುವರು ವರನಿರುನಕಡೆ ಹತ್ತುಮಂದಿ ಬಂದು ವಿಚಾರಿಸುವರು ಈ ಪ್ರಕಾರವು ನೃಪಕುಲಧರ್ಮವಾಗಿರುತ್ತೆ. ನೀನು ಮಾಡಿದ್ದೇನು ವಿರುದ್ಧಧರ್ಮವಲ್ಲವವು ನಿನ್ನಿಷ್ಟಾನುಸಾರಮಾಗಿಯೇ ನಾವೆಲ್ಲರೂಇಪ್ಪು ವಿವಾಹಮಹೋತ್ಸವಂ ನೆರವೇರಿಸಿಕೊಂಡು ಹೋಗುವೆವೆಂದು ಸಮಸ್ತಭೂಪಾಲರೂ ಅನುಮತಿಯನ್ನೊರೆಯಲು, ಪರಮಾನಂದಭರಿತನಾದ ಸುಹೋತ್ರರಾಯನು ಮರುದಿನದೊಳು ಸುಮುಹೂರ್ತದಲ್ಲಿ ದೇವಸೇನೆಮಹಾರಾಜಾತ್ಮಜನಾದ ಸುಭಾನುರಾಯನಿಗೆ ತನ್ನನಂದನೆಯಾದ ಸುಸೀಲೆಯನ್ನು ದಾನಧಾರಾಪೂರ್ವಕವಾಗಿ ಕನ್ಯಾಪ್ರದಾನಮಂಮಾಡಿದನೆಕನಕವಸ್ತುವಾಹನಾದಿಗಳನ್ನು ಕೊಟ್ಟು ಗೋಭೂದಾನಂಗಳೇ ಮೊದಲಾದ ಮಹಾದಾನಂಗಳಂಮಾಡಿ ಸುರತ್ನಚಿತ್ರಿತವಾದಾಭರಣಂಗಳಂ ಅಮೂಲ್ಯವಸ್ತ್ರಂಗಳಂ ದಾಶೀಸಹಸ್ರಮಂ ಸಕಲವಸ್ತೂತ್ಕರಂಗಳಂ ತನ್ನ ನಂದನೆಯಂಗಿತ್ತು ಸೆಸಿದಿದ್ದ ಸಕಲವಿಪ್ರೋತ್ತಮರಿಗೆ ತಾರತಮ್ಯಂಗಳನರಿತು ಬಹುಮಾನಂಗಳನ್ನಿತ್ತು ಭೂಪೋತ್ತಮರಿಗೆ ವಸ್ತ್ರಾಭರಣಂಗಳಿಂದು ಪಚರಿಸಿ ಭಕ್ಷ್ಯ ಭೋಜ್ಯಮೃಷ್ಟಾನ್ನಂಗಳಿಂದ ಕೆಲನರಂ ಸಂತುಷ್ಟಿಗೊಳಿಸಿ ಒಡ್ಡೋಲಗಮಾಗಿ ಕಲ್ಯಾಣೋತ್ಸವಮಂ ನಾಲ್ಕುದಿನಗಳೂ ಮಾಡಿ ಅನಂತರ ನಾಕೀಬಲೇಉತ್ಸವಂಗೈಸಿ ಇಷ್ಟಮಿತ್ರಾಪ್ತಬಳಿ ಭೂಪಾಲಾದಿಗಳಂ ಸಕಲೋಪಚಾರಂಗಳಿಂ ಸತ್ಕರಿಸಿ ಬೀಳ್ಕೊಟ್ಟು ದೇವಸೇನಮಹಾರಾಯನಂ ಉಡುಗೆರೆ ಉತ್ಸಾಹಗಳಿಂ ಒಹುಮಾನಮಾಡಿ ಹಸ್ತ್ಯಶ್ವರಥಪದಾತಿಗಳಂ ಧನಕನಕವಾಹನಂಗಳಂ ಚಿತ್ರವಸ್ತ್ರಾದ್ಯನೇಕ ವಸ್ತೂತ್ಕರಂಗಳಂ ಕೊಟ್ಟು ಮಗಳನ್ನೂ ಅಳಿಯನನ್ನೂ ಮನ್ನಿಸಿ ಎಲ್ಲರಂ ಪ್ರಯಾಣವಂ ಮಾಡಿಸಿ ಕರವೀರಪುರಕ್ಕೆ ಕಳುಹಿಸಿಕೊಟ್ಟನು.

ಇತ್ತಲಾ ಸುಹೋತ್ರರಾಯನಿಂದನುಜ್ಞಾತಾದಾ ದೇವಸೇನ ಮಹಾರಾಯಂ ಸೊಸೇಮಕ್ಕಳೊಂದಿಗೆ ಹೊರಟು ಕೆಲವು ದಿನಗಳು ಮಾರ್ಗಸಂಕ್ರಾಗುತ್ತಾ

ಸ್ವಂತ ರಾಜಧಾನಿಯನ್ನೈದಿ ಸರ್ವಾಲಂಕಾರ ಶೋಭಿತವಾಗಿ ಸಮಸ್ತಜನರಿಂದೆ ಶೋಭಿಸುತ್ತಿರುವ ರಾಜಬೀದಿಯೊಳು ಹೊರಟು ನಿಜಾಲಯಮಂ ಪೊಂದಿ ಸಮಸ್ತ ಭೋಗಂಗಳನ್ನನುಭವಿಸುತ್ತಿರುವಾಗಳ್ ಕೆಲಕಾಲಂ ತೊರದು ಹೀಗಿರುತ್ತಾ ಒಂದಾನೊಂದುಕಾಲದೊಳು ಕಾಂಭೋಜದೇಶದಿಂದೂರ್ವ ಶಿಲ್ಪಿಯು, ಮುರಡಿ ಕೇಲ್ದುಡುಪೆಯಂ ರಚಿಸಿಕೊಂಡೀ ದೇವಸೇನ ಮಹಾರಾಜನ ಬಳಿಗೈದಿ, ಆ ಕುದುರೆಯಂ ತೋರಿಸಿ, ಸ್ವಾಮಿ ಭೂಪಾಲರೇ ? ನನ್ನ ವಿಜ್ಞಾಪನೆಯಂ ಲಾಲಿಸಬೇಕು, ಕುತೂಹಲದೊಡನೆ ಸನ್ನಿಧಿಗೆ ಸಮರ್ಪಿಸಲೋಸುಗ ತಂದಿರುವೀ ಕುದುರೆಯು, ಸಾಧಾರಣಮಾದುದಲ್ಲಂ ಇದರಲ್ಲಿನ ಅತಿಶಯಮಂ ವಿಜ್ಞಾಪಿಸುವೆನು, ಈ ಕುದುರೆಮೇಲೆ ಕುಳಿತು ಇದರ ಬಲಕಿವಿಯಂ ತಿರುಗಿಸಿದ ಮಾತ್ರಕ್ಕೆ ಮೇಲಕ್ಕೆಹಾರಿ ಆಕಾಶಮಾರ್ಗದಲ್ಲಿ ವಾಯುವೇಗಮಾಗಿ ಸಂಚರಿಸುತ್ತದೆ, ಎಡಗಿವಿಯಂ ತಿರುಗಿಸಿದರೆ ಭೂಮಿಗೆ ತರುವದು. ಒಂದು ಪಕ್ಷದ ಕೀಲುಬಂಧದಮೇಲೆ ಕಾಲೂರಿ ಮೇಲೆಹತ್ತಿ ಮತ್ತೊಂದು ಭಾಗಮಂ ಮೇಲೆ ಕಾಲಿನಿಂತಾಡಿಸಿದರೆ, ಕಾಲೂರಿ ಹತ್ತಿದಕಡೆ ತಿರುಗುವದು. ಈಗೆಯೇ ಮತ್ತೊಂದುಕಡೆಯೂ, ತಿರಗಿಸಬಹುದು. ಇದರುದರದಲ್ಲಿ ಸ್ವಲ್ಪ ದ್ರವ್ಯಮಂ ಗರ್ಭೀಕರಿಸಬಹುದು, ಮೂರು ವರುಷಗಳಿಂದಲೂ ಶ್ರಮಿಸಿಹೊಂದಿದನೆಂಗೈವಿರುವೆನು ಇದಕ್ಕೆ ಹನ್ನೆರಡುಸಾವಿರ ವರಹಗಳು ಮುಟ್ಟಿರುವದು ಶಿಲ್ಪಿಶಾಸ್ತ್ರಾನುಸಾರವಾಗಿ ಮಾಡಿರುವೇಂ ಇದರಮೇಲೆ ಚಿತ್ತವಿಡ್ಡಂತೆ, ನಿನಗೆ ಬಹುಮಾನಮಂ ಸಹಾ ಕೊಡಬೇಕೆಂದು ಪೇಳಿ, ಆ ಕುದುರೆಯಂ ಸಮರ್ಪಿಸಲು, ದೇವಸೇನಮಹಾರಾಯನದಂ ಪರೀಕ್ಷಿಸಿ, ಅತ್ಯಾನಂದಾಶ್ಚರ್ಯನುಗ್ನನಾಗಿ ಅದಂತನ್ನ ಕುಮಾರಕರಿಗೂ, ಅಂತಃಪುರಾಂಗನೆಯರಿಗೂ, ತೋರಿಸುವಂತೆಕಳುಹಿಸಿಕೊಟ್ಟನು, ಅವರೆಲ್ಲರೂನೋಡಿದ ಬಳಿಕಲಾ ಕುದುರೆಯಂ ಸೌಂದರ್ಯದಾತ್ರಿ ಶೀಲವತಿಯ ಅಂತಃಪುರಕ್ಕೆ ಕಳುಹಿಸಿದರು. ಆಕೆಯೆದ ನೆರುಕಿಸಿ, ಅದರ ಚರಿತ್ರವನ್ನೆಲ್ಲಾ ಮಾಕರ್ಣಿಸಿ, ಪರಾಕ್ಷಪರವಶಳಾಗಿ, ಎಷ್ಟೊತ್ತಿಗೀ ಗೌಡಿಯಂ ಕರೆಸು,ಸುವರ್ಣಾಂಗಿಯೀ ಕೇಳು ! ನಮ್ಮ ತಮ್ಮನೆಯು. ಇಲ್ಲಿಗೆ ಬಹುದೂರವಾಗಿಪ್ಪುದು. ಹೋಗಿಬರುವದಕ್ಕೆ ಈ ಪ್ರಾಯನದವೆಮೇಲೆ ಹೊರಟು ಬರುವನು ಬಹಳ ಸುಲಭವಾಗಿಪ್ಪುದು ಅವಶ್ಯಕವಾದ ಕಾಲಕ್ಕೆ ಇವು ಬಹು ಸಹಾಯಕರವಾನುದು, ಈ ಅಶ್ವಮಂ ಅವಶ್ಯಕವಾಗಿ ಪರಿಗ್ರಹಿಸುವೆನೆಂಬ ತನ್ನ ಮನವೆಯಂ ಮಾವಾಜೀಯವರಿಗೆ ಬಿನ್ನೈಸುವವೆಂದು ಹೇಳಿಕಳುಹಿಸೆ, ಆದರಂತೆಯಾಸೇನಕಳ ಆ ರಾಯನೊಳರಿಕೆಮಾಡೆ, ಅದನಾಲೈಸಿದಾತನೆಯಣ್ಣನು ಹನ್ನೆರಡು ಸಹಸ್ರವು ಹಗಳಂ ಮತ್ತೂ, ಬಹುಮಾನಾರ್ಥಮಾಗಿ ವಸ್ತ್ರಾಭರಣಗಳನ್ನ ಶಿಲ್ಪಿಕನಿಗಿತ್ತು, ಆ ಅಶ್ವಮಂ ಭಂಡಾಗಾರದೊಳು ಭದ್ರಪಡಿಸಿದಂ.

ಆ ಶೀಲವತಿಗೆ ನಿಷೇಕಪ್ರಸ್ತುವಾಗಿ, ದಂಪತಿಗಳೀರ್ವರೂ ಸಕಲ ಭೋಗಂಗಳನ್ನ

ನುಭವಿಸುತ್ತಾ ಮಹತ್ಸೌಖ್ಯ ಸಂಯುತರಾಗಿ ಬಾಳುತ್ತಿರಲತ್ತಲಾ ಶೀಲವತಿಯ ಮಾತಾ ಪಿತೃಗಳು ತಮ್ಮ ಕುಮಾರಿಯಾದ ಶೀಲವತಿಯು ಗರ್ಭಧಾರಿಣಿಯಾದಳೆಂಬ ಸುದ್ದಿಯಂ ಕೇಳಿ ಪರಮಾನಂದ ಪರವಶರಾಗಿ, ತಮ್ಮ ಕುವರಿಯನ್ನಿರುಕಿಶಿ ಕರತರ ಲೋಸುಗ ಪ್ರಯಾಣಮುಂಮಾಡಿ, ಧಾಂಡೀ ಪುರಮುಂ ತೊರೆದು ಬರುತ್ತಾ ಕರವೀರಪುರಮುಂ ಸಾರಿ, ಬೀಗರಂಕಂಡು, ಪರಸ್ಪರಮುರ್ಯಾದಾ ಪೂರ್ವಕ ಕುಶಲ ಪ್ರಶ್ನೆಗಳಂ ಮಾಡಿದನಂತರ ನಮ್ಮ ಕುವರಿಯು ಸುಖ ಪ್ರಸವಾಗುವವರಿಗೂ ನಮ್ಮಮನೆಯಲ್ಲಿರಬೇಕೆಂಬ ಕುತೂಹಲಮುಂ ನೆರವೇರಿಸಬೇಕೆಂದು ವಿನಯವಾಗಿ ಪ್ರಾರ್ಥಿಸುವ ಸುಹೋತ್ರರಾಯನ ಇಷ್ಟಾನುಸಾರ ಮಾಗಬಹುದೆಂದನುವೋದಿಸಿ ಸಕಲೋಪಚಾರಂಗಳಿಂ ಮನ್ನಿಸಿ ವುಡುಗರೆಗಳಿಂ ಸತ್ಕರಿಸಿ,ತನ್ನ ಸೊಸೆಯು, ಅರಾಯನೊಂದಿಗೆ ಪ್ರಯಾಣಮುಂ ಮಾಡಿಕಳುಹಿಸಲಾನಂದನೆಯ ನೊಡಗೊಂಡು ತನ್ನ ಪುರಮುಂ ಸಾರಿ ನಿಜಾಲಯದೊಳು ಇರುತ್ತಾ ಗರ್ಭಸ್ಥಿತಳಾದ ಹುಡಿಗಿಯಂ ಕಾಣುತಾನಂದಮಂತಾಳುತ್ತ ಆಕೆಯು ಬೈಸಿದ ವಸ್ತ್ರಗಳನೆಲ್ಲವುಂ ತತ್ಕ್ಷಣದೊಳೀತರಿಸಿಕೊಟ್ಟು ಸಂತೋಷಿಸಿ ಪೋಷಿಸುತ್ತಾ, ಬರಲಾ ಸೌಣ್ಮಣಿಯು ಗರ್ಭವ್ಯ, ಶುಕ್ಲಪಕ್ಷೇಂದು ವಂತಭಿವೃದ್ಧಿಯನ್ನೈದುತಾ ನವಮಾಸ ಪರಿತುಂಬಿ, ಮುತ್ತಾತೇಜಸ್ವಿಯಾಪಡಕುವರನುದಯಿಸಿದಂ ಆ ವಾರ್ತೆಯನ್ನು ಸುಹೋತ್ರರಾಯನುಪಾಕರ್ಣಿಸಿ ಮಹದಾನಂದ ತುಂದಿಲನಾಗಿ ಜ್ಯೋಯಿಸರ ಕರೆಯಿಸಿ ಜಾತಕಮುಂ ಬರೆಯಬೇಳಲಾ ಜ್ಯೋತಿಷ್ಕರು ಗ್ರಹಸ್ಪುಟಾದಿಗಳಂ ಗೈಡು ತಾತ್ಕಾಲಿಕ ಲಗ್ನಮುಂ ಕಂಡು ಜಾತಕಮುಂ ಒರೆದು ಗ್ರಹಬಲಾಬಲಂಗಳನ್ನೆಲ್ಲವುನರಿತು, ಈ ಶಿಶುವು ವೃದ್ಧಿಯೊಂದಿದವನಾಗಿ ಮಹದ್ಗುಣಂಗಳಂ ಹೊಂದುವವನೆಲ್ಲದೇ ಮಾತಾ ಪಿತೃಗಳು ಕೇಡಂ ಹೊಂದುವನೆಂದರಿತರೂ ರಾಯನೊಳು, ಪೇಳುವದಕ್ಕೆ ಶಂಕಿಸಿ, ಈ ಕುಮಾರನು, ತಂದೆತಾಯಿಳೂ ಗಂಡಾಂತರವಂ ಹೊಂದಿದರೂ ಕಾಲಾಂತರಕ್ಕೆ ಸೌಖ್ಯಮುಂ ತಾಳುವರೆಂದು ಆ ಸುಹೋತ್ರರಾಯನೊಳು ಪೇಳ್ದರು.

ದೌಹಿತ್ರಜನದಾಯಂನಂದದೊಳದಂಗವನಿಸವೆ, ಆ ಜ್ಯೋತಿಷ್ಕರಿಗೆ ಬಹುಮಾನಂಗಳನ್ನಿತ್ತು ಕಳುಹಿ ಈ ಸಮಾಚಾರಮಂ ಪತ್ರದೊಳು ಬರೆಸಿ ಗಂಧಕುಂಕುಮ ಪ್ರಸೆತೆಗಳಿಂದಲಂಕರಿಸಿ, ರಾಜಭೃತ್ಯರ ಕರದೊಳಿತ್ತು ದೇವಸೇನರಾಯುಂಗೆ ಕಳುಹಲು, ಬಂದೊದಗಿದ ಸುಭಶೂಚಕಮಾದ, ಆ ಪತ್ರಮುಂ ಕಾಣುತ್ತ ಲತಾ ಹ್ಲಾದ ಚಿತ್ತನಾಪದಂನೋಡಿ ಸಂತಸಗೊಳ್ಳುತ್ತಾ, ಮಗನಂಕರೆಯಿಸಿ, ಮಂಗಳಸ್ನಾನಮುಂ ಮಾಡಿಸಿ ಪೌತ್ರನ ಆಯುರಾರೋಗ್ಯಾಭಿವೃದ್ಧ್ಯರ್ಥವಾಗಿ ಪುತ್ರೋತ್ಸವಮುಂ ಮಾಡಿಸಿ ಸಕಲ ಮಹಾದಾನಂದಗಳಂ ಕೊಡಿಸಿ, ಭೂಸುರಾವಿಗಳನ್ನ ವಸ್ತ್ರಾಭರಣಗಳಿಂ ತೃಪ್ತಿಗೊಳಿಸಿ ಸಕಲ ಸಂಭಾರಸಂಯುತನಾಗಿಯೂ, ಸಮಸ್ತ ಬಂಧೂಜನಪರಿವೃ

ತನಾಗಿಯೂ ಪ್ರಯಾಣಮುಂಮಾಡಿ ಭಾಂಡೀಪುರಮುಂ ಸಾರಿ ಮಹದ್ವಿಭವದೊಂದಿಗೆ ನಾಮಕರಣೋತ್ಸವಮುಂ ಪೆಳಯಿಸಿ ಸಮಸ್ತಜನರಂ ಧನಕನಕಾಭರಣ ವಸ್ತ್ರಕಂಡ ಗಳಿಂ ತೃಪ್ತಿಗೊಳಿಸಿ ಸಕಲ ಬೀಗರಿಂದಜಿಸಲ್ಪಟ್ಟಸನ್ಮಾನಗಳಂ ಸಂತೋಷದೊ ಳಂಗೀಕರಿಸಿ ಪುರಪ್ರಯಾಣ ಸಂರಂಭದೊಳು ತನ್ನ ಜ್ಯೇಷ್ಠ ಪೌತ್ರರನ್ನು ಐದು ತಿಂಗಳು ತುಂಬುವದರೊಳಗಾಗಿಯೇ ತನ್ನ ರಾಜಧಾನಿಗೆ ಕಳುಹಿಸುವಂತೆ ಬೀಗ ನೊಳು ಪೇಳಿ, ತೆರಳಿಬಂದು ತನ್ನ ರಾಜಧಾನಿಯುಂ ಸಾರಿ ಪ್ರಜಾಪಾಲನತತ ರನಾ ಗಿಯೂ ಧರ್ಮೈಕಪರನಾಗಿಯೂ ರಾಜ್ಯಪರಿಪಾಲನೆಯುಂ ಮಾಮುತ್ತಾ ಸಮಸ್ತಸು ಖಗಳಂ ಹೊಂದುತ್ತಿರ್ದಂ.

ಅತ್ತಲಾ ಸುಹೋತ್ರರಾಯನು ಪತ್ನೀಸಮೇತನಾಗಿ ದಿನೇದಿನೇ ಶುಕ್ಲಪಕ್ಷದ ಮೃತಾಂಶುವಿನಂತೆ ವೃದ್ಧಿಯುಂ ಹೊಂದುತ್ತಾ ಇರುವ ದೌಹಿತ್ರನ ಬಾಲಲೀಲೆಗಳಂ ನೋಡಿ ಸಮುದ್ರಾಹ್ಲಾದ ತುಂದಿಲ ಸ್ವಾಂತನಾಗುತ್ತಾ ಕಾಲವಂ ಅತಿ ವಿನೋದ ವಾಗಿ ಕಳೆಯುತ್ತಿರಲು ಇತ್ತಲಾ ದೇವಸೇನರಾಯನು ಐದು ತಿಂಗಳು ತುಂಬು ವದರೊಳಗಾಗಿಯೇ ಸೊಸೆಯಾದ ಶೀಲವತಿಯುಂ ಪುತ್ರಸಮೇತನಾಗಿ ಬರಮಾಡಿ ಕೊಳ್ಳಲೆಂದು ಕುತೂಹಲಗೊಳ್ಳುತ್ತಾ ತನ್ನ ಮಂತ್ರಿ ಕುಮಾರನಾದ ದುರ್ಜಯ ನಂ ಕರೆಮು ನೀನತಿಜಾಗರೂಕತೆಯಿಂ ಭಾಂಡೀಪುರಕ್ಕೆ ಹೋಗಿ ಪುತ್ರವತಿಯಾಗಿರುವ ಶೀಲವತಿಯುಂ ಕರದುಕೊಂಮು ಬರಬೇಕೆಂದಾಜ್ಞಾಪಿಸಿ ಅವನೊಡನೆ ತಕ್ಕ ಪರಿವಾರ ಮುಂ ಹೋಗುವಂತೆ ನೇಮಿಸಿ, ವಯೋನೈಪುಣ್ಯರಾಗಿಯೂ, ನಂಬಿಕೆಯುಳ್ಳವರಾಗಿ ಯೂ ಇರುವ ದಾಸೀಜನಮುಂಕೊಟ್ಟು ಮೋಲೆಯುಂ ಬರಿಸಿತ್ತು ಕಳುಹಿಸಲಾದು ರ್ಜಯನು, ತನ್ನ ಮನೋರಥವು ಕೈಸಾರುವದಕ್ಕೆ ದೈವಕೃಪೆಯು ಅನುಕೂಲಿಸು ವ ಕಾಲವದಗಿತೆಂದುಸಂತಸಗೊಳ್ಳುತ್ತಾ ಸಕಲ ಪರಿವಾರಸಮೇತನಾಗಿ ಹೊರಟು ದಾರಿಯೊಳೆಲ್ಲಿಯೂ ನಿಲದೆ, ಸುಹೋತ್ರರಾಯನ ಪಟ್ಟಣಮುಂ ಸಾರಿ ನೃಪನಂ ಕಂಡು ತನ್ನ ರಾಜನಿತ್ತ ಪತ್ರಮನಾತನ ಕೈಯೊಳಿತ್ತು ಅತಿಜಾಗ್ರತೆಯಿಂದಿಲ್ಲಿಂದ ಹೊರಡಬೇಕು. ಕಾರ್ಯಾಂತರ ಅತವ್ಯಾವಶ್ಯಕವಿರುವದೆಂದಾ ರಾಯನೊಳು ಪೇಳಿ, ಸುಹೋತ್ರರಾಯನು ತನ್ನ ರಾಜಪತ್ನಿಯುಂ ಕರದುಕೊಂಡು ಹೋಗುವದಕ್ಕಾಗಿ ಬಂದಿರುವೀ ಮಂತ್ರಿನಂದನನು, ಸಾವಕಾಶಮಿಲ್ಲವೆಂದು ಇಷ್ಟಬಂಡಿತವಾಗಿ ಪೇ ಳಿದಮೇಲೆ ಕಳುಹಿಸಬೇಕಾದ್ದೇ ಯುಕ್ತವು. ಬಾಲಲೀಲೆಗಳಂ ನೋಡಲಕಿಲ್ಲದೇ ಹೋಗುವದಲಾ ಎಂದು ಚಿಂತಾಕ್ರಾಂತನಾಗಿ ಅಂತಃಪುರಮುಂಸಾರಿ, ತನ್ನ ಕಾಂ ತೆಯನ್ನು ಕಂಮು ಎಲ್ಲೆ ಪ್ರಾಣಕಾಂತೆ, ನಿನ್ನ ಮಗಳನ್ನು ಅತ್ತೆಯ ಮನೆಯುವ ರು ಕರೆಯುವದಕ್ಕೆ ಬಂದಿದ್ದಾರೆ, ಅವರಾವರೋ ಅತ್ಯಾತುರಪೊಳಿರುವರು ನಿನ್ನ ದೇಹಸ್ಥಿಯಾದರೊ ಆಯಾಸ ಸೂಚಕವಾಗಿ ಇರುವದು, ಸಂಗಡಯಾರಂ ಕಳುಹಿ ಸೋಣ, ಇದಕ್ಕೇನಂ ಪೇಳುವೆಯೆಂದು ಕೇಳಲು, ಅವರು ತ್ವರಿತರಾದರೆ ಕೆಲವು

ತ್ರೀ ಜನವೊಂದಿಗೆ ಮಂತ್ರಿಕಾಂತೆಯನ್ನು ಕಳುಹಿಸಬೇಕೆಂದು ಪೇಳುವ ಸತೀ ಮಾತಂ ಯುಕ್ತವೆಂದು ತಿಳಿದು, ಮರುದಿನದೊಳಾದುರ್ಜಯನಿಗೆ ಅಭ್ಯಂಜನವಂ ಮಾಡಿಸಿ, ಸಕಲಭಕ್ಷ್ಯಭೋಜ್ಯಾದಿಗಳಿಂದೂಟಮಂ ಮಾಡಿಸಿ, ವುಡುಗರೆ ಉತ್ಸಾಹಗಳನ್ನಿತ್ತು ಶಿಶು ಬಾಣಂತಿಯರಂ ಬಹು ಜೋಪಾನವಾಗಿ ಮಾರ್ಗದೊಳು ಕಾಪಾಡುತ್ತಾ ಕರದುಕೊಂಡು ಹೋಗಬೇಕೆಂದೊರೆದು ಆಸ್ಥ ಮಂತ್ರಿಯನ್ನೂ, ಅತನ ಪತ್ನಿಯನ್ನೂ ಸಂರಕ್ಷಣೆಗಾಗಿ ಸಂಗಡ ಹೋಗುವಂತೊರೆದು, ರತ್ನಾಭರಣಾದ್ಯನೇಕ ಸಾಮಗ್ರೀಗಳಂ ಮಗಳಿಗಿತ್ತು, ಶಿಶುಬಾಣಂತಿಯರಂ ಹರಿಸಿ, ಅಂದಳವನ್ನೇರಿಸಿ, ತಾನೂ ಕೆಲವುದೂರ ಜೊತೆಯೊಳು ಬಂದು ಅವರಂ ಮುಂದುಳುಸಿ, ತಾಂ ಹಿಂತಿರುಗಿ, ಅರಮನೆಯಂ ಸೇರಿದನು.

ಇತ್ತಲಾ ದೇವಸೇನರಾಯನ ಮಂತ್ರಿ ಪುತ್ರನಲದಾ ಮಜಯನು, ಈಗಲೆನ್ನ ಮನೋರಥಸಿದ್ಧಿಗೆ ತಕ್ಕಸಮಯವು ಒಂದುಪಾಯದಿಂದ ಕಾರ್ಯಮಂ ಸಾಧಿಸಿ ಈ ರಾಜಾಂಗನೆಯೊಳು ಬೆರತು ಸುರತಾನಂದಮಂ ಹೊಂದುವರಲು ಇಂಥಾ ಸಮಯವು ಮತ್ತಾವಾಗಲೂ ಸಂಭವಿಸಲಾರದು ಎಂದು ವಿಚಾರಿಸಿ ನಿರ್ಣಯಿಸಿ, ಆ ದಿನವೇ ವೃದ್ಧನಾದ ಸುಹೋತ್ರರಾಯನ ಮಂತ್ರಿಗೆ ಭೋಜನದೊಳು ವಿಷ ಪ್ರಯೋಗಮಂ ಮಾಡೆ ವಿಷಾನ್ನ ಭುಂಜಿತನಾದಾ ವೃದ್ಧಮಂತ್ರಿಯು ದೇಹಾಯಾಸಮಂ ಹೊಂದಿ ಈ ನೀಚನು ಮಾಡಿದ ದುಷ್ಕೃತಂತ್ರಮನರಿಯದೆ, ಆ ಪಾಪಿಯನ್ನೇ ಸವಿಾಪಕ್ಕೆ ಕರೆದು, ಅಯ್ಯಾ ಮಂತ್ರಿಸುತನೇ ! ನಿಹೇತುಕವಾಗಿಯೇ ನನ್ನ ದೇಹಕ್ಕೆ ಉಪದ್ರವವು ಸಂಘಟಿಸಿತು, ನಿನ್ನ ಸಂಗಡ ಬರುವದಕ್ಕಾಗಲಾರದು, ನಾನು ಹಿಂತಿರುಗಿ ಕೋಗಿ ನನ್ನ ಮಗನಂ ಕಳುಹುವೆ ಅವರಿಗಂ ನೀನೀಲ್ಲಿಯೇ ಇದ್ದು ಸಂಗಡ ಹೊರಟು ಹೋಗಬಹುದೆಂದು ಹೇಳಿ, ಆ ಮಂತ್ರಿಯು ಹಿಂತಿರುಗಲು. ತನ್ನ ಭೀಷ್ಟಸಿದ್ಧಿಗೆ ಇದೀಗ ತಕ್ಕ ಸಮಯವೆಂದು ನಿಶ್ಚೈಸಿ ಪಟ್ಟಣವಂ ಸಾರಿ, ತನ್ನ ಮಗಳನ್ನೂ, ಮಗನನ್ನೂ ಕಳುಹಿಸುವದರೊಳಗಾಗಿಯೇ ನಾನಿಲ್ಲಿಂದ ಹೊರಟು ಮುಂದರಿದಿರಬೇಕು. ಆ ಮಂತ್ರಿನಂದನನು ಬಂದರೆ ಕಾರ್ಯವು ಕೆಡುವದೆಂದು ಯೋಜಿಸಿ, ಪರಿವಾರವನ್ನೆಲ್ಲವುಂ ಕರೆದು, ನಮ್ಮೂರೆಯವರಾದರೋ ಅತಿ ತ್ವರ್ಯದಿಂ ಬರಬೇಕೆಂದು ಆಜ್ಞಾಪಿಸಿರುವರು, ಈವರಿಗಾನಿವ್ಮ ಮಂತ್ರಿನಂದನರು ಬಂದೊದಗಲಿಲ್ಲ ಅವರು ಬಿರುವನರಿಗೂ ಸಾವಕಾಶ ಮಾಡಲಾಗಲಾರದಾಗಿ ನೀವೆಲ ರೂ ಪ್ರಯಾಣಮಂ ಮಾಡಬೇಕೆಂದಾಜ್ಞಾಪಿಸಿ, ಹೊರಟು ಆ ಮಂತ್ರಿಕುಮಾರರು ಬರುವದರೊಳಗಾಗಿ ಬಹು ದೂರಮಂ ಸಾರಿರಲು ಅವರು ಬಂದೊದಗಲಾರರು. ಇವರಿಂದ ನನ್ನ ಕೋರಿಕೆ ಈಡೇರುವದೆಂದರಿತು ವಾಯುವೇಗ, ಮನೋವೇಗವಾಗಿ ರಥಗಳಂ ನಡಿಸುತ್ತಾ ಮೂರು ದಿನಗಳೆ ಪ್ರಯಾಣಮಂ ಒಂದೇದಿನದೊಳು ಮಾಡಿ, ಲೋಕಜಾಂಧವ ನಸ್ತೆಮಯಾಚಲಮಂಸಾರಲು,

ಮುಂದರಿಯದೇ ಆ ಎಡೆಯೊಳೀ ಪಟಗೃಹಗಳಂ ನಿಲ್ಲಿಸಿ ಆಯುಜಪಾಣಿಗಳಾದ ಕೆಲವು ಭಟರಂನಿಲಿಸಿರಲು, ಪರಿವಾರಜನಮೆಲ್ಲಂ ತಮ್ಮ ಕಾರ್ಯಾನಂತರದೊಳು ಮಾರ್ಗಾಯಾಸಮುಳ್ಳವರಾದ ಕಾರಣ ಎಲ್ಲಿನವರಲ್ಲಿಯೇ ಮೈಮರದೊರಗಲು ತತ್ಕಾಲದೊಳು ದುಷ್ಟಾಶಯಿಯಾದೀ ಮಂತ್ರಿನಂದನನು ಸ್ವಾಮಿದ್ರೋಹಮೆಂದರಿಯುದೆ, ಆಕುಭುಕುವಿನೋಲ್ಕಾಲಮಂ ನಿರುಕಿಸುತಿರ್ದು, ರಾತ್ರಿಯೊಳು ತಾಂಬೂಲವಂ ಸವಿಯುತ್ತಾ ಹೊರಟು ಶಿಶುವಿಗೆ ಸ್ತನ್ಯಪಾನವಂ ಮಾಡಿಸುತ್ತಾ ಹಾಸಿಗೆಯೊಳು ಕುಳಿತಿರುವ ರಾಜಾಂತಃಪುರಕಾಂತೆಯು ಸಮೀಪಕ್ಕೈದಿ ಬರಲು, ಶೀಲವತಿಯು ಅವನಂ ನೋಡಿ ಮನದೊಳೊಂದು ವಿಧನಾದ ಭೀತಿಯುಂ ತಾಳಿ ತಬ್ಬಿಬ್ಬಾಗಿ ಚಕಿತವಾಪ ಹುಲ್ಲೆಯೋಪಾದಿ ನೋಡುತ್ತಲಿರ್ದಾ ರಮಣಿಯುಂ ಕಂಡು ಮನಃಪ್ರಶಾಸಿದ ನಾಪ ಈ ಬುದ್ಧಿಶೂನ್ಯನು ವಿನೋದವಾಗೀ ಸರಿಯೊಳು ವಾರ್ತಾಡಕೊಡಗಿದಂ. ಎಲೆ ಮನ್ಮಥ ತಂತ್ರದೀಪತೆಯಪಾಪ ಕಾಂತಕಾಶಿರೋಮಣಿಯೀ ? ಕನಕಲತಾಗರ್ವ ಸರ್ವಸ್ವಾಪಹಾರಕವಾದೀ ನಿನ್ನ ತನುಲತೆಯುಂ, ಅರುಣನವಾಂಬುಜ ಚಳ್ಳಾಪಹಾರಕಂಗಳಾದ ನಿನ್ನ ಪಾದಾಬ್ಜಗಳ ಕಾಂತಿಯುಂ ರಂಭಾಸ್ತಂಭ ಡಂಭಾಪಹಾರಕಂಗಳಾಪ ನಿನ್ನ ಊರೂ ಸ್ತಂಭಂಗಳನುಣ್ಣಾ, ರಥಚಕ್ರನುಖಿ ವಿಮುಖೀಕರಣ ಧುರೀಣಂಗಳಾಪ ನಿನ್ನ ಕಟಿಪಶ್ಚಾದ್ಭಾಗಂಗಳೂ, ಒಪ್ಪಿಡಿಯೊಳೊಪ್ಪಿ ಕಾಮನೆರೂಪನೊಳಗೊಂಪ ನಿನ್ನ ಮಧ್ಯನೂ ವಟಪತ್ರಮಂ ಧಿಕ್ಕರಿಸುವ ನಿನ್ನ ಶಾಕೋದರವೂ ಮನ್ಮಥ ಮದಕರಿ ಕುಂಭಸ್ಥಲವೋ ಅಲ್ಲದೇ ತರುಣಜರ ಮನಃಸೂಚಿಕಾ ಕರ್ಷಣ ಬ್ರಹ್ಮ ನಿರ್ಮಿತ ಆಯಸ ಕಾಂತಗೊಳಿಕಂಗಳೋ, ಕಾಮರಾಜ್ಯ ಸಾಧಕ ಸಾಕ್ಷಾಪಿತ ಪರದೇವತಾತ್ಮಕ ಕಲಶಂಗಳೋ ಎಂದು ರಾದಾಬಿಸುವ ನಿನ್ನ ಕುಚಯುಗಳ ಲಾವಣ್ಯವೂ ಶಂಖಿವಂ ವಳಿಯುವ ನಿನ್ನ ಕಂಠದ ಸೊಬಗೂ, ಪೂರ್ಣಚಂದ್ರನಂ ಈಗ್ಗೈದು ಮೇನಾರೂ ಈ ನಿನ್ನ ಕಪೋಲಂಗಳಂ ರಚಿಸಿರುವನೋ ವಿನೋ ಎಂಬಂತೆ ತೋರುತ್ತಿರುವ ಕಪೋಲಂಗಳ ನುಣ್ಪುವೂ, ಕಮಲದಳಂಗಳೋ ಕಾಮಬಾಣಂಗಳೋ ಅಲ್ಲದೊಡೆ ಆ ಕರ್ಣಾಂತಗಳಾಪ ನಯನಂಗಳೋ ಎಂದು ಹೊಳಿಹೊಳಿವ ನಿನ್ನ ಕಂಗಳ ರಾಮಣೀಯ್ಯಕವೂ, ರಾಕಾಚಂದಿರನ ಸೊಬಗಂ ಪೋಲ್ವ ನಿನ್ನ ಮುಖಾಬ್ಜದ ಸೌಂದರ್ಯವೂ ಮುಖಕಮಲ ಮಕರಂದಾಸ್ವಾದನ ಲೋಲನಾದ ಅಳಿಜಾಜಿಯು ನಾಸಾಚಂಪಕದಿಂ ಭೀತಿಯಂತಾಳಿ ನಿಂತಿರಲು, ರಾರಾಜಿಪ ಕುಟಿಲಾಲಕಾ ಲಾವಣ್ಯವೂ, ದೀರ್ಘಬಾಹು ಲತಾ ಸೌಂದರ್ಯವೂ, ಎನ್ನಂ ಮೋಹಗೊಳಿಸಿ, ಅಯಸ್ಕಾಂತಶಿಲೆಯು, ಉಕ್ಕಿನ ಪದಾರ್ಥಮಂ ತನ್ನೆಡೆಗೆ ಶಳದುಕೊಳ್ಳುವವೊಲು ನನ್ನ ಮನಸ್ಸನ್ನು ಶಳಕೊಂಡಿರುವಕಾರಣ ಅದರ ಪರಿಯನ್ನೊರೆಯಲೆನಗಳವಲ್ಲಂ. ನಿನಗಿಂತಲೂ ಈ ಲೋಕಜಾತರಲ್ಲಿ ಸುಂದರಿಯರಾದವರಾರೂ ಇಲ್ಲನೆಂತಲೂ, ರತೀಶಚಿ

ಯರು ಸಹಾ ನಿನ್ನಂ ವೋಲರೆಂದುನೂ, ಮನಃಪೂರ್ತಿಯಾಗಿ ತ್ರಿಕರಣ ಶುದ್ಧಿಯಾಗಿ ಪೇಳುತ್ತೇನೆ. ಮಾರಸುಂದರರಾದ ಪುರುಷರೊಡಗೂಡಿ, ರತಿಸೌಖ್ಯಮುಂ ತಾಳದೆ ರೂಪಹೀನನಾದ ಪತಿಯೊಡಗೂಡಿ ಸುರತ ಸುಖಮುಂ ಹೊಂದುವದು ನಿನ್ನೀ ರೂಪ ಲಾವಣ್ಯಾದಿಗಳಿಗೆ ಅನುಗುಣಮಾದುದಲ್ಲವೆಂದು ವ್ಯಸನಾಕ್ರಾಂತನಾಗಿದ್ದೇನೆ, ಪರಪುರುಷ ಸಮಾಗಮ ಸಂಭಾಷಣಾದಿಗಳಂ ಮಾಡಬಾರದೆಂಬ ಕಾಡುಜನರ ಎಲೆಗಳ ಲಿಖಿಯುಂ ನಂಬಬಾರದು. ಅರಣ್ಯವಾಸವಂ ಮಾಡುತ್ತಾ ಎಲೆಮನೆಗಳೊಳು ಗೆಡ್ತೇ, ಜೇರು ತರುಗುಗಳಂ ಆಹಾರವಾಡುತಾ, ಕಾಂತಾ ಸಂಭೋಗ ಸೌಖ್ಯಮನೀಷತ್ತಾದರೂ ಮರಿಯದೇ ಮನಸ್ಸಿಗೆ ತೋರಿದಂತೆ ಹುಚ್ಚು ಚ್ಚಾಗಿ ಬರದಿಟ್ಟು, ಅದಕ್ಕೆ ಧನುರ್ಶಾಸ್ತ್ರಗಳೆಂದು ಹಸರುಗಳಂ ಕಲ್ಪಿಸಿಕೊಂಡಿರುವ ಸುಖಗಳಂ ವಂಚಿಸುವ, ವೈದಿಕವಿಶಾಚಿಗಳ ಜಾಳುನುಡಿಗಳಂ ನೆಚ್ಚಿ, ಪರಮ ಸುಖಕ್ಕಿಂತಲೂ ಅಧಿಕಮಾದೀ ಸುಖಮಂ ಬಿಡಬಾರದು. ಅವೋಪಮಾದ ಈ ರೂಪಲಾವಣ್ಯಾತಿಶಯುಕ್ತ ತರುಣಿ ಯೌವನವನ್ನು ಕಾನನ ಚಂದ್ರಿಕೆಯಂತೆ ನಿಷ್ಫಲಮುಂ ಮಾಡುವದು ಪ್ರಾಜ್ಞಳಾದ ನಿನಗೆ ಯುಕ್ತಮಲ್ಲ. ಕ್ಷಣಿಕಮಾದೀ ಮನುಜದೇಹಮುಂ ತಾಳಿ, ವಿಷಯೋಪಭೋಗ ಸಮಯದಲ್ಲಿ ಹಿತಕರಕಾರಿಗಳಾದ ಪದಾರ್ಥಗಳಂ ಸೇವಿಸದೇ ಬಿಡುವದು ಯುಕ್ತವೇ? ರಮಣಿಯರು ಸುಂದರರಂ ಬೈಸುವದು ಅವರಿಗೆ ದೋಷಾವಹಮಲ್ಲ. ಪ್ರಾಗ್ಜನ್ಮವಿಯೋ ಪೂರ್ವದೊಳು ಅಹಲ್ಯೆಯೂ, ತಾರೆಯೂ, ಸುರತಸುಖಾಪೇಕ್ಷೆಯಿಂದ ಅನ್ಯಪುರುಷರಂ ಬೈಸಿಕೂಡಿ ಸುಖಿಸಿದರು. ಕುಂತಿಯು, ಇಂದ್ರಾದಿಗಳಂ ಕೋರಿ ತವರೊಳು ಮನ್ಮಥ ಕೇಳೀ ಸೌಖ್ಯಮಂ ಹೊಂದಿ ಧರ್ಮಾದಿ ನಂದನರಂ ಪಡೆದಳು. ಇವರೆಲ್ಲರೂ ಲೋಕದೊಳು ಪತಿವ್ರತಾ ಸಿರೋಮಣಿಗಳೆಂದು ಕೊಂಡಾಡಲ್ಪಡುವದಿಲ್ಲವೇ ? ಮನುಷ್ಯದೇಹಿಗಳಿಗೀ ಯೌವನವೆಂಬುವದು ಮರಣಾಂತ್ಯಮಿರಲಾರದ, ಕುಂದಚ ಕೋರಕಕ್ಕೆ ಮುಕುಳತ್ವವು ಹ್ಯಾಗೆಯೋ ಪಾಗೆಯೇ ನಮಿಗೂ ಯವ್ವನಮಿರುವಿಕೆಯು ಈ ಅಲ್ಪಕಾಲದಲ್ಲಿ ನಿನ್ನೀಸಕಲೋಪಕರಣ ಸಂಯುಕ್ತವಾದ ಯೌವನಂ ವ್ಯರ್ಥವಾಗಾಡದೇ ನನ್ನೊಳು ಸ್ನೇಹಮಂ ಮಾಡಿ ಇಷ್ಟೋಪಭೋಗಂಗಳಂ ತಾಳು.

ಶ್ಲೋ॥ ಅಧ್ಯಾಜರಾಮನುಜಾ ಮನಧ್ವವಾಜಿನಾಂಜರಾ ।
ಅಮ್ಬೈಥುನಂಜರಾಸ್ತ್ರೀಣಾಂ ವಸ್ತ್ರಾಣಮಾತಪೋಜರಾ ॥

ಎಂಬ ನ್ಯಾಯಾನುಸಾರವಾಗಿ ಮನುಷ್ಯರಿಗೆ ಸರ್ವದಾ ವಿಶೇಷ ಸಂಚಾರದಿಂದ ವಾರ್ಧಿಕ್ಯವು ಕುದುರೆಗಳಿಗೆ ಸವಾರಿಯಿಲ್ಲದೇ ಇರುವಿಕೆಯೇ ಮುಪ್ಪು, ಕಾಮಿನಿಯರಾದವರಿಗೆ ಇಷ್ಟರಾದ ಪುರುಷರು ಸೇರಿ ಮನ್ಮಥ ಪರಸ್ಪರಾಲಿಂಗನಮಾದ ರತಿಕೇಳಿಯಂ ಸಲುಪದಿರುವಿಕೆಯೇ ವಾರ್ಧಿಕ್ಯವು. ವಸ್ತ್ರಗಳಿಗೆ ಬಿಸಿಲಿನಲ್ಲಿ ಸದಾ ಒಣಗುವಿಕೆಯೇ ಜೀರ್ಣತ್ವವು, ಎಂದು ನೀನೆರಿತಿದ್ದರೂ, ಇಂಥಾ ತಾರುಣ್ಯಮುಂ

ವ್ಯರ್ಥಾಗೊಳಿಸುವಿಕೆಯೆ ಎಂದು ಸಂತಪ್ತನಾಗಿರುವೆನು, ಇದು ಅಲ್ಲದೇ ಸ್ವೇಚ್ಛಾವಿಹಾರದಿಂ ತೃಪ್ತಿಗೊಳುವವು ಪಶುಗಳು ಬ್ರಾಹ್ಮಣರು ಸುಭೋಜನದಿಂ ಸಂತೃಪ್ತರಾಗುವರು ಕಳಾಶಾಸ್ತ್ರಕೋವಿದರಾದ ಕಾಮಿನಿಯರನ್ನೇ ಕರು ತಮ್ಮ ಪತಿಗಳಿಳು, ಇಷ್ಟವಾದ ರತಿಸೌಖ್ಯಂಗಳು ಸಾಲದೆ, ಅತಿ ಸುಂದರರಾಗಿಯೂ, ದ್ರವ್ಯಸಂಪನ್ನರಾಗಿಯೂ, ಪ್ರಭುತ್ವಮುಳ್ಳವರಾಗಿಯೂ, ಸರಸಾಲಂಕಾರ ಚಿತ್ರಜ ಮತ್ಕೃತಿಯುಳ್ಳವರಾಗಿಯೂ, ಇರುವ ಸುಂದರ ಯೌವನ ಪುರುಷರಂ ಸೇರಿ ಗರ್ವಿತನಾದ ಮದನನಶರಾಧಿಯುಂ ಲಕ್ಷಿಸದೆ ಕೇಳಿಕಾಗಾರಂಗದೊಳು ಸಾರಿ, ಅವನಂ ಪರಾಜಯಗೊಳಿಸಿ, ಸೋತುಹೋದ ಅನಂಗನನ್ನು ಮುಖತಿರುಗಿಸದೇ ಹೋಗುತ್ತಿರುವ ಕಾಮುನಂ ಕಂಡು ಹರುಷಿತರಾಗಿ ನಸುನಗುತ್ತಾ ತೃಪ್ತಿಗೊಳ್ಳುವರು. ನಿನ್ನಂಥಾ ಶ್ಯಾಮೆಯರಾದ ಕೆಲವು ಜನ ತರುಣೀಮಣಿಯರು ಅನ್ಯರ ಸಹಾಯ ಸಂಪತ್ತುಂ ಹೊಂದದೇ ಸ್ವತಂತ್ರಿಸಿ ಮದನನ ಭಾಧೆಗೆ ಪ್ರತಿಕ್ರಿಯೆಯುಂ ಮಾಡಲಶಕ್ತರಾಗಿ ಬಾಧೆಯುಂ ತಾಳಲಾರದೆ, ಯವ್ವನಸ್ಥರಾದ ಸರ್ವ ಸ್ತ್ರೀಪುರುಷರ ಮೇಲೂ ನಮ್ಮಧಿಕಾರವು ಸಲ್ಲುವೆಂಬ ನಿನ್ನ ಗರ್ವಮುಂ ಭಂಗಗೊಳಿಸುವವೆಂದು ಶಪಥಮುಂ ಮಾಡಿ, ಅಂತರಂಗದೊಳು ಕಾಮ ಮೋಹಿತರಾಗಿಯೂ ಯವ್ವನಸ್ಥರಾಗಿಯೂ ಇರುವ ಪರಪುರುಷರಂ ಪರಿಗ್ರಹಿಸಿ, ಅವರ ಸಹಾಯದಿಂದ ತಮಿಗೆ ದ್ವೇಷಿಯಾದ ಕಾಮನಂ ಜಯಿಸಿ, ಅವರಂ ಸಂತೋಷಿಸುವರು. ಹೀಗಿರುವಲ್ಲಿ ಅಸದೃಶವಾದ ಸೌಂದರ್ಯವನ್ನೂ, ಅಸಂಖ್ಯಾತ ದ್ರವ್ಯೋತ್ಪತ್ತಿಯನ್ನೂ, ಅಸೋಪಮವಾದ ಯವ್ವನವನ್ನೂ ಹೊಂದಿ, ಮೆರೆಯುವ ನಿನ್ನನ್ನು ಯಾತಕ್ಕುಪೇಕ್ಷಿಸುವಿ? ಹೇ! ಸರೋರುಹ ಸುಂದರಾಯತಾಕ್ಷಿಯೇ, ನೀಂ ನನ್ನೊಳು ಕೃಪಾಳುವಾಗಿ ಕಟಾಕ್ಷಿಸಿ, ಎನ್ನಾಲಗಳಿಗಮೃತಕಲಶಗಳಂತೆಕಾಂಬ, ಕಾನುಸಾವರ್ಭೌಮ ದುರ್ಗಸಾಮ್ರಾಜ್ಯನಗಳಂತೊಪ್ಪುತ್ತಿರುವ, ನಿನ್ನ ವೃತ್ತಪೀನೋನ್ನತ್ತಾಯೋಧರಂಗಳಿಂ ನನ್ನ ವಕ್ಷಸ್ಥಳದೊಳಿರಿಸಿಯೊತ್ತಿ, ಸುಕುಮಾರಗಳಾವೀ ನಿನ್ನ ಬಾಹುಲತೆಗಳಿಂ ಕಾಮ ಬಾಧಾಭೀತನಾದೆನ್ನ ದೇಹಮನಪ್ಪಿ, ಜನ್ಮಾದಾವಸ್ಥೆಯೆಂಬ ನನ್ನ ರೋಗಕ್ಕೆ, ನಿನ್ನ ಜಿಂಬೋಷ್ಠಗಳಲ್ಲಿ ನೆಲೆಗೊಂಡಿರುವ ಅಮೃತವೆಂಬ ಸಂಜೀವಿನಿಯನಿತ್ತು ಆನಂದಗೊಳಿಸು, ಮಣಿಮಂಜೀರಗಳಿಂದಲಂಕೃತವಾಗಿರುವ ನಿನ್ನ ಮೆಲ್ಲಡಿದಾವರೆಗಳಿಂದೆನ್ನ ನೊದ್ದು ಹರುಷಿಸು. ಎಲೆ ಶೋಭನಾಂಗಿಯೇ, ಕಲಕೇರನುಡಿಗಳಿಂ ಜರೆವ ನಿನ್ನ ಮೃದು ತರವಾದ ಮೆಲ್ನುಡಿಗಳಿಂದೆನ್ನ ನಾಹ್ವಾಲಿಸು. ನನ್ನ ದೇಹಮುಂ ನಿನಗೊಪ್ಪಿಸಿರುವೆನು, ನಿನ್ನ ದಾಸನಾಗಿ ಆಜ್ಞಾಧೀನನಾಗಿರುವೆನು, ಮುನ್ನ ಮೇನನೊರೆಯಲಾರೆನು, ನೀನುಪೇಕ್ಷಿಸಿದೊಡೆ ಈಗಲೇ ನಿನ್ನ ಮುಂದೆಯೇ ಪ್ರಾಣತ್ಯಾಗಮಂ ಮಾಡಿಕೊಳ್ಳುವೆನು, ಎಂದು ನುಡಿಯುತ್ತಾ ಮುನ್ಮಥಾತುರನಾದ ದುರ್ಜಯನ ದುರುಕ್ತಿಗಳಂ ಕೇಳ್ದು ಸಾಧ್ವೀಶಿರೋಮಣಿಯು, ಆತ್ಮ ಪುರುಷನಂ ಜೆರೆದು ತೊರೆದು ಅನ್ಯ

ನೊಳು ಸೇರಲೆಳಸಿದರೆ, ಅಪಾರವಾದ ಪಾಪಸಂಘಟನೆಯೂ, ದುರ್ಯಶವೂ, ಕುಲ ಚ್ಯುತಿಯೂ, ಮಾನಹಾನಿಯು ಜನಿಸುತ್ತದೇ ಹೊರ್ತು ಮತ್ತೊಂದಾಗಲಾರದೆಂದು ಯೋಚಿಸಿ, ಈ ಕೆಲಸಕ್ಕೆ ಒಳಗಾಗ ಬಾರದೆಂದು ನಿಶ್ಚೈಸಿ ಮಾನವೆ ಭೂಷಣವೆಂದೆಣಿಸಿ, ಪ್ರತ್ಯುತ್ತರಮಂ ನುಡಿಯದೇ.

ಶ್ಲೋ॥ ಯವ್ವನಂಧನಸಂಪತ್ತಿಃಪ್ರಭುತ್ವಮವಿವೇಕತಾ ।
ಏಕೈಕಮಪ್ಯನರ್ಥಾಯಕಿಮುತತ್ರಚತುಷ್ಟಯಂ ॥

ಎಂಬೀ ನ್ಯಾಯಾನುಸಾರವಾಗಿ, ಯವ್ವನವೂ, ಧನಸಂಪತ್ತಿಯೂ, ಅಧಿಕಾರವೂ, ಅವಿವೇಕವೂ, ನಾಶಹೊಂದುವದಕ್ಕೆ ಇವುಗಳೊಳು ಒಂದೊಂದೇ ಸಾಕಾದ್ದಾಗಿರುವಲ್ಲಿ ಈ ನಾಲ್ಕೂ ನೆಲಗೊಂಡಿರುವೀ ಅವಿವೇಕಿಯೊಳು, ಒಂದು ಮಾತಾಡಿದರೆ ಹೆಚ್ಚು, ಒಂದು ಮಾತಾಡಿದರೆ ಕಡಿಮೆ, ಮಾತಾಡದೆ ಸುಮ್ಮನಿರುವೆನೆ, ವಿಕಾಂಗಿಯಾದ ನನಗೀ ಬಳಿಯೊಳು ರಕ್ಷಕರಾರು, ಎಂದು ಮುಕುಳಿತ ನೀರೇಜನೇತ್ರಿಯಾಗಿ ನಿಂದು ಲೋಕೈಕ ರಕ್ಷಕನೇ, ಅಪದ್ಬಾಂಧವನೇ ಜಗನ್ನಾಥಾ ಅನಾಥರಕ್ಷಕ, ದೀನ ದಯಾಳೋ, ಸ್ವಾಮಿ, ಪರಮಪುರುಷನಾದಾ ದುರ್ಯೋಧನನೆಂದು, ಸಾಂದ್ರವಾದ ರಾಜಸಭೆಯೊಳು, ದ್ರೌಪದೀ ಮಾನಭಂಗಮಂ ಮಾಡಲೋಸುಗಯತ್ನಿಸಿ ಶೀರೆಗಳಂ ಶಳಿಯುವಾಗ, ದೈನ್ಯಳಾಗಿ ನಿನ್ನಂ ಸ್ಮರಿಸಿದ ಮಾತ್ರದಿಂದಾಪಣ್ಣಾಣಿಯ ಮಾನಮಂ ಕಾಯಲಿಲ್ಲವೇ ಹಾಗೆಯೇ ಎನ್ನೊಳು ದಯಾಪರನಾಗಿ ಈ ದುರ್ಜನನಾದ ದುರ್ಜಯನವಮಾನಸ ವೃತ್ತಿಯಂ ನಾಶಗೊಳಿಸಿ ನನ್ನಂಕಾಪಾಡನಿರುವೇಕೆ, ಇಲ್ಲದೇ ಮನೋವೃತ್ತಿಯಂ ಪರೀಕ್ಷಿಸುವಿಯೋ, ಅದಕ್ಕೀಗ ಸಮಯವುಮಿಲ್ಲವೆಂದು ಸರ್ವೇಶ್ವರನಂ ಮನಃ ಪೂರ್ವಕವಾಗಿ ಧ್ಯಾನಿಸುತ್ತಾ, ವಿನೊಂದಂ ನುಡಿಯದಿರು ವನಿತರೊಳು. ಮಾತಾರ್ಥಂದ ಮಂಡಲವೇಳಿಗೆಯ ಸೂಚನೆಗಳು ಪೂರ್ವಾಚಲ ಶಿಖರಾಗ್ರದೊಳು ಕಾಣುತ್ತಿರಲೆ ಈ ದುರುಳನಾದ ದುರ್ಜಯನು ದಗ್ಧ ಹೃದಯನಾಗಿ, ಉಪಾಯಾಂತರ ಮನಾಲೋಚಿಸಿ ಹಿಂತಿರುಗಿ ಬಂದು ತನ್ನಾವಾಸಕ್ಕೈದಿ ಆಹಾರವ್ಯವಹಾರಂಗಳನ್ನಗಲಿ ಆವಿನದ ಪಗಲಿರುಳಂ ಅತಿ ವ್ಯಥೆಯಿಂ ಕಳೆಯುತ್ತಾ ನಾನಾವಿಧಮಾಗಿ ಚಿಂತಿಸುತ್ತಿರ್ದಂ. ಆ ಮರುದಿನದೊಳು ಎಂದಿನಂದದಿ ಭೃತ್ಯರೈತಂದು ವರ್ತಿಯಂ ಪೇಳುತಿರುವಲ್ಲಿ ಅವರೊಳೋರ್ವಂ ಸ್ವಾಮಿಯಾ ಈ ಯೆಡೆಯೊಳು ಒಂದು ಪರ್ವತ ಶ್ರೇಷ್ಠವಿಪ್ಪುದು ಅದರೊಳುಕಾಳಿಕಾದೇವಿ ದೇವಾಲಯವು ಪರಿಶೋಭಿಸುತ್ತಿರುವದೆಂದೊರೆಯೆ ಆಮಾತಂ ಕೇಳಿದ ದುರ್ಜಯನು ಈ ಕಾಳಿಕಾದರುಶನ ವ್ಯಾಜಮಾಗಿ ಸಕಲಸೇನಾ ಜನರಂ ಪರ್ವತಾಧಃ ಪ್ರದೇಶದಲ್ಲಿಯೇ, ಬಿಟ್ಟು ತನಗಾಪ್ತರಾದ, ಕೆಲವು ಮಂದಿ ಪರಿವಾರಾವೃತನಾಗಿ ಈ ರಾಪ್ರಜಾತ್ರಿಯನ್ನು ಶಿಶು ಸೆನೇತಮಾಗಿ ಬಿಟ್ಟುದೊಳಿರುವ ಕಾಳಿಕಾಲಯದ ಬಳಿಯಿರಿಸಿ ರಾತ್ರಿಯಾಗೆ ನನ್ನ ಕಾರ್ಯಮುಂ ಕೈಗೂಡಿಸಿ ಕೊಳ್ಳುವೆನೆಂದು ನಿಶ್ಚೈಸಿ ಇದಕ್ಕನುಸಾರ

ಮಾಗಿ ಯೊಂದು ಪಟಗೃಹಮಂಕಾಳಿಕಾ ದೇವಾಲಯದ ಮುಂಗಡಿಯೊಳು ನೆಲ ಗೊಳಿಸಿ ತಂದೆಮನಯು ವಾಗಿಪ್ಪ ಕೆಲವರೆನ್ನೇ ಮೈಗಾವಲಿಗಾಗಿ ನೇಮಿಸಿ ಶಿಶು ಸಹಿತವಾಗಿಯಾ ಶೀಲವತಿಯುಂ ಕರತಂದು ಈ ಗುಡಾರದೊಳು ನೆಲೆಗೊಳಿಸಿ ಆಕೆಯುಬಳಿ ಆಕೆಗೆ ಆಪ್ತರನ್ನೇ ಪರಿಚಾರಿಣಿಯರನ್ನಾಗಿ ನೇಮಿಸಿ, ಬಾಗಿಲೊಳು ತನ್ನವರಂ ಕಾವಲುಗಾಗಿರಿಸಿ, ಕಾಳಿಕಾ ಪೂಜಾವ್ಯಾಜಕಾರಣನಾಗಿ ಕಾಲಮುಂ ಕಳೆಯುತ್ತಿರ್ದಂ. ಕಮಲಮಿತ್ರನಸಾಚಲಮುಂ ಸಾರಲಾ ರಾತ್ರಿ ಮಂಗಳಾರತಿಯುಂ ಮಾಡಿ ಕೊಂಡು ಬರುವಂತೆ, ಹೆಚ್ಚಾದ ಜನರೆಲ್ಲರುಂ ಕೆಳಕ್ಕೆ ಕಳುಹಿ, ಕತ್ತಲೆಯಾಗೆ, ಶೀಲವತಿಯ ಪರಿಚಾರಿಣಿಯರಿಗೆ, ಯುಕ್ತ ಕಾರ್ಯಂಗಳ ನೊಪ್ಪಿಬ್ಬರಿಗೊಂದೊದಂ ನಿಯಮಿಸಿ ಕಳುಪೆ, ಮಿಕ್ಕವರೆಲ್ಲರೂ, ನಿದ್ರಾಂಗನಾಲಿಂಗನದೊಳು ಮೈಮರದೊರಗಲು, ಶೀಲವತಿಯು ಶಿಶುವನು, ಪೊಗ್ಗಲೊಳಿರಿಸಿಕ್ಕೊಂಡು ಭಯರಹಿತಳಾಗಿ ಮಲಗಿನಿದ್ರೆಯುಂ ಹೊಂದಿರೆ, ಎಲ್ಲರೂ ನಿದ್ರೆಯಿಂದ ಮತ್ತರಾಗಲರಿತೀ ದುರ್ಜಯನು ಇದೀಗ ಸಮಯಮೆಂದರಿತು, ಶೀಲವತಿಯ ಪಟಗೃಹವಂ ಮೆಲ್ಲನೆ ಪೊಕ್ಕು, ಶಿಶುವಿನೊಡನೆ ಮಲಗಿ ನಿದ್ರೆಯಂ ಪೋಗುತ್ತಿರ್ದಾ ನವಮೋಹನಾಂಗಿಯ ಬಳಿಗೈದಿ ತಟ್ಟಿ ಆಕೆಯನೆಬ್ಬಿಸಿ, ಎಲೆ ರಾಜಾತ್ಮಜೆಯೇ, ದೇವತಾ ಸಂದರ್ಶನೆವಂ ಮಾಡಿ ಬರುವೆಯಂತೆ ವಿಳು, ಎಂದಾಕೆಯ ಕರಕಮಲವನಂ ಪಿಡಿದೆಬ್ಬಿಸಿ, ಜೆನ್ನಂತಟ್ಟಿ, ನಿದ್ದೆಯಲುಗುವಂತೆ ತಣ್ಣೀರಿಂದಾಕೆಯ ಕಣ್ಣುಗಳನ್ನೊರಿಸೆ, ಎಚ್ಚರಗೊಂಡಾ ಶೀಲವತಿಯು, ಅವನ ಮುಖಮುಂ ನಿರುಕಿಸಿ, ಭಯಗ್ರಸ್ತಳಾಗಿ, ಹಾಗೆಯೇ ಸ್ತಬ್ಧತೆಯುಂ ಹೊಂದಿ, ತೆನಗಿರುವ ಜನಸಹಾಯಮುಂ ಆಲೋಚಿಸಿ, ಪ್ರಾಪ್ತಿಸಿರುವ ಸ್ಥಿತಿಯುಂ ತಿಳಿದು, ಅತಿನಿವೇಕಿಯಾದ್ದರಿಂದ, ಶಬ್ದನುಂ ಮಾಡದೇ ಸಮಾಧಾನಮುಂ ತಂದು ಕೊಂಡು, ಉಪಾಯಾಂತರದಿಂವಿವನಂ ಸಮಾಧಾನಗೊಳಿಸಿದೊಡೆ, ಕೆಲಸವು ಕೆಡುವದು, ಎಂದೆಣಿಕೆ ಗೊಂಡವಳಾಗಿ, ಸ್ವಾಮಿ ಇದು ಮಧ್ಯರಾತ್ರಿಯಾಗಿರುವದು, ದೇವತಾದರ್ಶನಕ್ಕೆ ತಕ್ಕ ಕಾಲವಲ್ಲವಾಗಿ ನಾಳೇ ಪ್ರಾತಃಕಾಲ ಹೋಗೋಣವೆನೆಲಾ ಪಾಪಿಯು ಹರುಷಂತಾಳಿ, ನಾಂ ಪೇಳುವ ನುಡಿಗಳನ್ನೀಗ ನೀನಾಲೈಸು, ಉಪೇಕ್ಷಿಸಿದೆಯಾದೊಡೆ, ವೃಥಾ ಕೆಟ್ಟುಹೋಗುವೆ. ಮೂರ್ಖತನವಂ ಹೊಂದದೆ ಮಕರಧ್ವಜ ಸಮರಕ್ಕನುವಾಗಿರುವೆನಗೆ ಅನುಕೂಲೆಯಾಗಿ ನಿನ್ನೊಳಹ ಆಯುಧಂಗಳನ್ನಿತ್ತು ಸಹಾಯಮುಂ ಮಾಡು, ಹಾಗೆಸಗದೆ ಉದಾಸೀನಮುಂ ಮಾಡಿದೊಡೆ, ಸ್ವಜನರಹಿತಳಾಗಿ, ಏಕಾಂಗಿಯಾಗಿರುವೆ, ಬಲಾತ್ಕಾರವಿಂದಲಾದರೂ ನನ್ನ ಮನೋರಥ ಸಿದ್ಧಿಯುಂ ಹೊಂದುವೆನು, ಇದೇ ಖಂಡಿತೋಕ್ತಿಯೆಂದು ಪೇಳುವೀ ಪಾಪಕರಂಗಳಾದ ದುಷ್ಟನ ನುಡಿಗಳಂ ಕೇಳಲಾರದೆ, ಕೈಬೆರಳುಗಳಿಂ ಕರ್ಣರಂಧ್ರಂಗಳಿಂ ಮುಚ್ಚಿಕೊಂಡು, ಹರಿಹರಿ ಜಗದ್ರಕ್ಷಕನೇ, ಕರುಣಾಳುವೇ ನಿನ್ನನ್ನು ಸ್ಮರಿಸಿದ ಮಾತ್ರದಿಂದಲೇ ಸಮಸ್ತವಿಪಜ್ಜಾಲಂಗಳೂ ಪೊರೆ

ದು ಪೋಪುವಲ್ಲಾ, ಸಕಲ ಶೃತ್ಯರ್ಥ ಸ್ವರೂಪನೇ ನನ್ನೀ ವೊರೆಯನ್ನಾಲೈಸಿ, ಈ ಮಹದ್ವಿಪತ್ತಿನಿಂ ಪರಿಪಾಲಿಸೆಂದು ದೃಢಚಿತ್ತ ವೃತ್ತಿಯುಳ್ಳವಳಾಗಿ ಧ್ಯಾನೈಕ ಪರಳಾಗಿರುವಲ್ಲಿ,, ಈ ದುರುಳಂ ತನ್ನ ಬಾಹುಪಾಶಂಗಳಿಂದಾ ಪತಿವ್ರತಾ ಶಿರೋಮಣಿಯನ್ನಾಲಿಂಗಿಸಲೆತ್ನಿಸುವನಿತರೋಳಾಕೆ ಯೆಚ್ಚತ್ತು, ಮತ್ರಿನಂದನನೇ, ತಾಳು ತಾಳು, ಕಾಮಮುದಾಂಧನಾಗಿರುವ ನಿನಗೆ ಕಾಲಾಕಾಲಗಳೆಂಬ ಭೇದವೇತೋರದಿ ರ್ಪುದು. ನಿನ್ನ ಮನೋಗತವಾದಭೀಪ್ಸಾಯವು ಅತುರದಿಂ ಪೂರ್ತಿಯಾಗುವದಲ್ಲ. ಇದು ಪರಸ್ಪರಾನುರಾಗಾತಿ ಶಯದಿಂ ಲಭ್ಯವು, ಬಲಾತ್ಕಾರದಿಂದಲಭಿಸಲಾರದು, ಸಮಯಮುಂ ಕಂಡು, ನಡಯಲು ಸುಖಂಪೆಂಪಪ್ಪುವದು, ನಿನ್ನಿಚ್ಛಾ ಪೂರ್ತಿಯ ಮಾಡಿಯೇ ಕಳುಹಿಸೆಂ, ಎಂದು ಹಿತೋಕ್ತಿಗಳಂ ನುಡಿದು ನಂಬುಗೆಯುಂ ಪುಟ್ಟಿಸಿ, ನೀರಿನೆಡೆಗೈದಿ ಬರುವೆನೆಂದೊರೆದು, ಆತನಿಂ ಶಿಶುವಿನ ಬಳಿಯೊಳು ಕುಳ್ಳಿರಿಸಿ, ವಾರಿವ್ರೋರಿತ ಪಾತ್ರೆಯ ಕೈಯೊಳಾಂತು ಪಟಗೃಹವಿಂ ಪೊಮಟ್ಟು, ಮಹಾಕಾಳೀ ದೇವಾಲಯವುಂ ಸಾರಿತೆರದುರ್ ಜಾಗಲುಗಳುಳ್ಳ ನೆಭಾಗಾಗಾರವುಂಪೊಕ್ಕು ಬಾಗಲ್‌ಗಳಂ ಭದ್ರಪಡಿಸಿ, ಲಾಳಾಂಡಿಗೆಯ ಹಾಕಿ ಒವೆಮುರವನ್ನೊತ್ತಿಟ್ಟು, ಭಯರಹಿತಳಾಗಿ ದೇವಿಯ ಎದುರೊಳು ಕುಳಿತುಕೊಂಡಳು. ಇತ್ತಲಾ ದುರ್ಜಯನಾಜ್ಞಾನುಸಾರವಾಗಿ ಪೋಗಿಪ್ಪ ಶೀಲವತಿಯು ವಾಸಿಯಲು ಹಿಂತಿರುಗಿ ಬಂದು ನಪೆದಸರಿಯಂ ಮುಂತ್ರಿನಂದನಂ ಗೊರೆಯುತೋಸುಗ ಮಾತನ ಗುಡಾರಮುಂ ನೈದಿ ಆ ಯೆಡೆಯೊಳಿವನಂ ಕಾಣದೆ ಘಾಬರಿಯುಂಗೊಂಡು, ಈ ನೀಚನೇನೋ ಪ್ರಮಾದಮುಂ ನಡಿಸಲೋಸುಗವೇ ತೆರಳಿರುವನೆಂದಾಲೋಚಿಸಿ, ನಿಮಿಷಮಾತ್ರದೊಳಾ ಶೀಲವತಿಯ ಪಟಗೃಹಮುಂ ಸಾರಿ ಶೀಲವತಿಯಂ ಕಾಣದೇ ಶಿಶಿವಿನೆಡೆಯೊಳು ಕುಳಿತಿರುವ, ದುರಾತ್ಮಕನಾದ ದುರ್ಜಯನನ್ನು ಕಾಣುತಲತಿಭೀತರಾಗಿ ಸ್ತಬ್ಧತೆಯುಂಗೊಂಡು ಹಾಗೆಯೇ ವ್ರಜ್ಞೆಯುಂತಾಳಿ ಎಲ್ಲೆ ಮುಂತ್ರಿನಂದನನೇ? ನೀನಿಲ್ಲಿ ಬರಲೇಂ ಕಾರಣಮೆಂದು ಕೇಳಲು ನೀರೆಡೆಗೆ ಹೋಗಿ ಬರುವೆನೆಂದುಸುರಿ ಯಾ ಶೀಲವತಿಯು ಹೊರಟುಹೋದಳು. ಶಿಶುವಂ ಒಂಟಿಯಾಗಿ ಬಿಟ್ಟರಲಾರದಾಗಿ ಇಲ್ಲಿ ಕುಳಿತಿರುವೆನು ನಿಮ್ಮಾಗಮನವನ್ನಿದಕ್ಕಾಗಿಯೇ ನಿರೀಕ್ಷಿಸುತಲಿರುವೆನೆನಲದಂ ಕೇಳುತತಿ ಭೂಕ್ರಾಂತರಾಗಿ, ಒಡನೆ ಹೊರಗೆ ಬಂದೆಲ್ಲೆಲ್ಲಿಯೂ, ಮಾಕೆಯಂ ಕಾಣದೆ ಒಳಹೊಗಲು, ಅವರನ್ನಾ ಬಳಿಯೊಳಿರಿಸಿ, ತಾಂ ಹೊರಬಂದು ಬಹುಕಾಲ ಮಾಕೆಗಾಗಿ, ನಿರೀಕ್ಷಿಸುತ್ತಿದ್ದರೂ, ಶೀಲವತಿಯ ಸುಳಿವನ್ನೇ ಕಾಣದೆ, ಹಂಬಲಿಸುತ್ತಾ, ಹಾ! ವಂಚಿಸಿ ಪೋದಳೆಂದು ವ್ಯಥೆಯನ್ನಾಂತು ಎಲ್ಲೆಲ್ಲಿ ಹುಡುಕಿದರೂ ಕಾಣದೆ ಕಡೆಯೊಳು ಕಾಳಿಕಾ ದೇವಾಲಯಮುಂ ಸಾರಿ ಕಂಡಿಗಳೊಳು ನಿರುಕಿಸೆ,ಗರ್ಭಗೃಹದೊಳಿವಳ ಆಸ್ಯಾಬ್ಜಮುಂ ಕಂಡು ಎಲೆ ಮಾಯಾಂಗನೆಯೇ ನಾನೇ ಬಗೆಯೊಳೊರೆದರೂ ನನ್ನ ಮಾತಂ ಲಕ್ಷ್ಯಮಾಡದೆ ವಂಚಿಸಿ ಈ ಬಳಿಯೊಳಿನಿತು ಕೊಂಡಿರುವೆಯಾ, ಒಳ್ಳಿತು ಎಂ

ದು ನಯಭಯೋಕ್ತಿಗಳಿಂ ಪೇಳಿನೋಡಿದರೂ, ಇತ್ತ ಶಿರುಗದೇ ಇರುವ ಶೀಲವತಿಯುಂ ಕುರಿತು, ಎಲ್ಲೆ ದುಷ್ಟಾಂಗನೆಯೇ? ನಿನಗಾಗುವ ಸಂಕಟವಂ ತಾಳಿಕೊ ಎಂದು ಕರಗತವಾದ ಖಡ್ಗಮಂ ವರೆಯೊಳಿಂ ಕಿತ್ತು ಝಳಿಪಿಸುತ್ತಾ ಹಿಂತಿರುಗಿ ರೌದ್ರಾವೇಶವನಾಂತು ಆಕೆಯ ಪಟಗೃಹವುಂ ಸಾರಿ ಶಿಶುವಿನ ಬಳಿಯೊಳಿರ್ದ ದಾದಿಯರಂತರಿದು, ಆ ಶಿಶುವಂ ಎತ್ತಿಕೊಂಡು ಗುಡಿಯಬಾಗಲಿಗೆ ಬಂದು, ಇಗೋ ನಿನ್ನ ಮಗುವಂ ಈ ಖಡ್ಗದಿಂದ ಛೇದಿಸುತ್ತೇನೆಂದು ನುಡಿಯುವಾ ದುರಾತ್ಮನ ದುರುಕ್ತಿಗಳನ್ನಾಲೈಸಿ ಕವಗಳ ಸಂದಿಯೊಳು ಶಿಶುವನ್ನೆತ್ತಿಕೊಂಡು ಕೃಪಾಣ ಪಾಣಿಯಾಗಿರುವಾ ಚಂಡಾಲನಂ ನೋಡಿ, ಮಹದ್ವ್ಯಸನಾಕ್ರಾಂತಳಾಗಿ,

ಹರಿರಾಪಿ ಹರೇಣಾಪಿ ಬ್ರಹ್ಮಣಾಪಿಸುರೈರಪಿ । ಲಲಾಟಲಿಖಿತಾರೇಖಾ
ಪರಿವಾಪ್ತುರ್ನಶಕ್ಯತೆ ॥

ಫಣೆಯೊಳು ಬರದ ವಿಧಿಯುಲಿಪಿಯಂ ಹರಿಹರ ಬ್ರಹ್ಮಾದಿಗಳಿಂದಲಾದರೂ, ಒರಿಸಲಸದಳವಾಗಿಪ್ಪುದಾದ್ದರಿಂದ ನನ್ನಿಂದಾ ಶಿಶುವಿನ ಹಣೆಯಬರಹವುಂ ತೊಡೆಯಲಾಗುವದೇ, ಆದದ್ದೆಲ್ಲಾ ಆಗಲಿ ಎಂದು ಧೈರ್ಯಮುಂತಾಳಿ, (ಸ್ತ್ರೀಣಾಂಪಾತಿವ್ರತ್ಯಂಹಿ ಭೂಷಣಂ) ಎಂಬ ನ್ಯಾಯೋಕ್ತವಾಗಿ ತನ್ನ ಪಾತಿವ್ರತ್ಯವುಂ ಕಾಪಾಡಿಕೊಳ್ಳುವ ದಾರಿಯುಂ ಯೋಚಿಸುತ್ತಾ, ಕುಳಿತಿರಲಾ ದೂತನು ಶಿಶುವಂ ಛೇದಿಸಿ, ಬಾಗಿಲೊಳು ಬಿಸುಟು ಅಲ್ಲಿಂದ ಪೊರಮಟ್ಟು ನಿದ್ದೆಹೋಗುತ್ತಲಿದ್ದೆಲ್ಲರನ್ನೆಬ್ಬಿಸಿ, ಶಿವಶಿವಾ! ಈ ಶೀಲವತಿಯು ಸ್ತ್ರೀಯಲ್ಲವೇ ಅಲ್ಲವು. ಭೂತವೇನಾದರೂ ಇಂತು ಸ್ತ್ರೀರೂಪವಾಂತುದೋ ಏನೋ. ಅಲ್ಲಿನೋಡಿ ಮಹಾನಿಶಿಯೊಳು ತನ್ನ ಪರಿವಾರವುನೆಲ್ಲವುಂ ತರಿದು ಉದರೋದ್ಭವವಾದ ಮಗುವಂ ಛೇದಿಸಿ ಮಾಯವಾಗಿ ಪೋಗಿರುವಳು. ಎಲ್ಲಿಗೆನ್ನಿದಳೋ ತಿಳಿಯದೆಂದು ಪೇಳುತ್ತಾ ಪಂಜುಗಳಿಂ ಹಿಡಿತರಿಸೆರೆಂದೂರೆದು, ತಾನೂ ಹುಡುಕುವವನಂತೆ ಹುಡುಕುತ್ತಾ ನಾಲ್ಕಾರು ಘಳಿಗೆವರಿಗವರಂ ಶ್ರಮಿಗೊಳಿಸಿ, ನಾವುಗಳಿಯೇ ಇದ್ದಾದ್ದಾದರೆ ನಮ್ಮುಗಳ ಗತಿಯುಂತಾಗುವದೋ ತಿಳಿಯಲಾಗದೆಂದು ನಡೆದ ಸಂಗತಿಯುಂ ಬಿನ್ನೈಸಿಬಿಡುವ ನಡೆಯಿರಿ, ಎಂದೆಲ್ಲರಂ ಪರ್ವತದಿಂದಿಳುಹಿ, ಕರವೀರ ಪುರವುಂ ಕುರಿತು ತೆರಳಿದನು.

ಅತ್ತಲರುಣೋದಯ ವಾಗಲಾ ಶೀಲವತಿಯು ಗರ್ಭಗೃಹದಿ ಬಾಗಿಲ್ಗಳಂ ತೆಗದು ಹೊರಟುಬಂದು ಛೇದಿಸಲ್ಪಟ್ಟಿರ್ದ ತನ್ನ ಮೊಗುವಂಕಾಣುತ ತೆಗದ ಬಿಲ್ಲು, ಶೋಕಾಂಬುಧಿ ಮಗ್ನಳಾಗಿ, ಹಾ ದೈವವೇ ಹುಣಿಸೆಮೇಲೆ ಜೊಕ್ಕೆಯೆದ್ದಂತೆ ಮೊದಲೇ ಪತಿವ್ರತಾ ಭಂಗ ಭೀತಿಜನಿತಶೋಕದಿಂ ತಸ್ತಳಾದೆನ್ನಂ ಈ ಪುತ್ರ ಶೋಕಾಗ್ನಿಯಿಂ ತಪಿಸುವವನಾದೆಯಾ, ಹಾಹಾ! ಎಂದು ಮಿತಿಯಿಲ್ಲದೆ ಶೋಕಿಸುತ್ತಾ ತನ್ನ ಶಿಬಿರಮುಂಸಾರಿ, ತರಿಯಲ್ಪಟ್ಟಿರುವ ತನ್ನಾಪ್ತ ದಾಸಿಯರಂಕಂಡು

ಮತ್ತಷ್ಟು ಗೋಳಾಡುತ್ತಾ ಮೂರ್ಛಿತಳಾಗಿ ಹಾಗೆಯೇ ಚೇತರಿಸಿಕೊಂಡು ಧೈರ್ಯಮುಂತಾಳಿ, ಆ ಶವಗಳ ತುಂಡುಗಳಂ ಜೋಡಿಸಿ ತಂದು ಭಕ್ಷಾದಿಗಳು ತಂದು ಸುರಿಯುವ ದೇವಾಲಯದ ಯೆಣ್ಣೆಗೊಪ್ಪರಿಗೆಯೊಳಾ ಶವಗಳನ್ಯೆದು ಕಾಳಿಕಾದೇವಿಗಂ ವಂದಿಸಿ ಬದ್ಧಾಂಜಲೀ ಪುಟಳಾಗಿ ನಿಂತು ಎಲೌ? ಲೋಕ ಮಾತೆಯಾದ ಮಹಾಕಾಳಿಯೆ? ನಾನು ಪತಿವ್ರತೆಯಾಗಿರುವದು ಸತ್ಯವಾದರೆ, ನನ್ನ ಪತಿಯಂ ಸಾರುವೆನು. ಆಗಲಾತನೊಡಗೊಂಡು ಸನ್ನಿಧಿಯ ದರುಶನಾರ್ಥಮಾಗಿ ಬರುನೆ. ಆ ದುಷ್ಪರಿಯಂತವಿಾ ಶವಗಳು ಕೆಟದೇ ಇರುವವಾದರೆ ನಿನಗೊಂದು ನರಬಲಿಯಂ ಸಮರ್ಪಿಸುವೆನೆಂದು ಪ್ರಾರ್ಥನೆಯಂ ಮಾಡಿ, ಇಲ್ಲಿದ್ದಲ್ಲೇ ಆದರೆ ಮುಂದೇನಪಾಯಂ ಬರುವದೋ ಎಂದು ಭೀತಳಾಗಿ ಪರ್ವತವನಿಳಿದು, ಘೋರಾರಣ್ಯಮಂ ಪೊಕ್ಕು ನಡಿಯುತ್ತಾ ಕಡೆಗೊಂದು ರಾಜಮಾರ್ಗಮುಂ ಕಂಡು ಆ ಬಳಿಯೊಳು ವಿಶ್ರಮಾರ್ಥಮಾಗಿ ಕುಳಿತಳು,

ಶ್ಲೋ॥ ಮಾಂಸಂನ್ಯುಗಾಣಾಂದಶನಾಗಜಾನಾಂ ಮೃಗದ್ವಿಷಚ್ಚರ್ಮಫಲಂ
ದ್ಯುಮಾಣಾಂ ಸ್ತ್ರೀಣಾಂಸ್ವರೂಪಂಚ ನೃಣಾಂಹಿರಣ್ಯಮೇತೇಗು
ಣಾನಾಶಕರಾಭವಂತಿ ॥

ವಿಶೇಷಮಾಂಸವಿಷವಿಕೆಯು ಮೃಗಗಳಿಗೂ, ಬಲವಾದ ದಂತಗಳಿರುವಿಕೆಯು ಆನೆಗಳಿಗೂ, ಹುಲಿಯೇ ಮೊದಲಾದ ಕೆಲವು ಜಂತುಗಳಿಗೆ ಸುಂದರಮಾದ ಚರ್ಮವಿರುವಿಕೆಯು, ಫಲೋತ್ಪತ್ತಿಷ್ಟಾಧಿಕ್ಯಂಗಳಿರುವಿಕೆಯು ವೃಕ್ಷಂಗಳಿಗೂ ಸ್ತ್ರೀಯರಿಗೆ ಸೌಂದರ್ಯವೂ, ಮನುಷ್ಯರಿಗೆ ದ್ರವ್ಯವೂ, ನಾಶಕರಂಗಳೆಂಬ ನ್ಯಾಯಾನುಸಾರಮಾಗಿ ನನ್ನ ರೂಪಾತಿಶಯವೇ ನನಗೆ ಮೃತ್ಯುವಾಯಿತಲ್ಲಾ, ಈ ಎಡೆಯೊಳು ಕುಳಿತಿರ್ದರೆ, ಈರಾಜಮಾರ್ಗದೊಳು ಸಂಚರಿಸುವ ಕಾಮುಕರಾರಾದರೂ ಮೋಹಿಸುವರೋವಿನೋ ಇದರಿಂದಲೂ ಅಪಾಯವೇ ಇರುವದು ಎಂದು, ಬಗೆಬಗೆಯಾಗಿ ನೆನೆನೆನದು ದುಃಖಿಸುತ್ತಾ ಕುಳಿತಿದ್ದಳು.

ಇತ್ತಲಾ ಮಂತ್ರಿಸುತನಾದ ದುರ್ಜಯನು ಕರವೀರಪುರಂ ಸೇರಿ ಸುಭಾನುರಾಯನಂ ಕಂಡು, ಪತ್ನಿಯು, ಮಹಾ ಕೂರವಾದ ವಿಶಾಚಕೃತ್ಯಮುಂಗೈದು, ಎಲ್ಲಿಗೈದಿದಳೋ ಕಾಣೆವು. ನಾನೆಲ್ಲೆಲ್ಲಿ ಹುಡುಕಿನೋಡಿದರೂ ದೊರೆಯಲೇ ಇಲ್ಲವೆಂದು ಸಟೆಯನುಡಿಯೆ, ಆ ರಾಜಾತ್ಮಜನದಂ ಕೇಳಿದಮಾತ್ರದಿಂದಲೆ ಚಿಂತಾಶೋಕಸಾಗರಮಗ್ನನಾಗಿ ಮೂರ್ಛಾಕ್ರಾಂತನಾಗೆ, ಶೈತ್ಯೋಪಚಾರಗಳಿಂ ಸ್ಮೃತಿಯನಾಂತು ಮಂತ್ರಿ ಪುತ್ರನ ಮಾತುಗಳೊಳು ನಂಬಿಕೆ ಸಾಲದೆ, ಸಂಗಡ ಹೋಗಿದ್ದವರಂ ಕೇಳಲಾ ಜನರೆಲ್ಲರೂ ಸ್ವಾಮಿ, ಭೂಪಾಲಕರೇ? ತಮ್ಮಾಜ್ಞಾನುಸಾರಮಾಗಿ ನಾವಾತನ ಸ್ವಾಧೀನದಲ್ಲಿದ್ದೆವು. ಆತನ ಆಪ್ತಪರಿವಾರ ಸಂಗಡಲದ್ದುದು ನಮಗಾವ ಸಂಧರ್ಭವೂ ತಿಳಿಯದೆಂದೊರೆಯಲು, ಪರಮ ಶೋಕಪೀಡಿತನಾದ ಶ್ರೀರಾಮಮೂ

ತೀ ಪೂರ್ವದೊಳು ಜಾನಕಿಯಂ ಹುಡುಕಿಕ್ಕೊಂಡು ಕಾಂತಾರಮಂ ಪೊಕ್ಕಂದದಿಂ, ಆ ಪಾಪಿಯಾದ ದುರ್ಜಯನೊದಗೊಂಡು ಹೊರಟು ಕಾಂತಾರದೊಳು ಪೊಕ್ಕು ಮರುದಿನ ಮಾರ್ತಾಂಡ ಮಂಡಲಾಸ್ತಮಾನ ದೊಳಗಾಗಿಯೇ, ಆ ಕಾಳಿಕಾಲಯದ ಬಳಿಯಂ ಸಾರಿ ನೋಡಲಾಬಳಿ ಶೀಲವತಿಯು ಕಾಣದೇ ಹೋಗಲು, ದುರ್ಜಯಂ ಭಯಗ್ರಸ್ತನಾಗಿ, ಫಲಾಯನಂಗೈಯ್ಯೆ ಸುಬಾನುರಾಯಂ ಪತ್ನೀಮೋಹ ಪರವಶನಾಗಿ ಹುಡುಕಿದೊಡೆ ಎಲ್ಲಿಯೂ ಕಾಣದೇ ಹೋಗಲು ದುಃಖಾಗ್ನಿ, ದಂದಹ್ಯ ಮಾನಾಂತರಂಗನಾಗಿ ಇಷ್ಟಜನಕ್ಕೆ ಮುಖವಂ ತೋರಲಾರದೆ, ವ್ಯಾಮೋಹ ಪರವಶನಾಗಿ ನಿದ್ರಾಹಾರಂಗಳಂ ಬಿಟ್ಟು, ಮಾತಾಪಿತೃ ಭ್ರಾತೃಾದಿ ಬಾಂಧವರಂ ತೊರೆದು ರಾಜ್ಯ ಕೋಶಾದಿಗಳನ್ನಗಲ, ಸಮಸ್ತ ಭೋಗವಸ್ತುಗಳಿಲ್ಲಿಯೂ ಅಶಾರಹಿತನಾಗಿ ಅನುಗತರಾದ ಸೇನಾಜನರಂ ವಂಚಿಸಿ, ಸ್ಫೋರಾರಣ್ಯಮಂ ಸಾರಿದಂ. ಪರಿವಾರಜನಮೆಲ್ಲಂ ಸುಭಾನುರಾಯನಂ ಕಾಣದೆ ಹುಡುಕಿನೋಡೆ ದೊರೆಯದೇ ಹೋಗಲು, ಕರವೀರಪುರಮಂ ಸಾರಿ, ನಡೆದ ವೃತ್ತಾಂತಮಂ, ದೇವಸೇನ ಮಹಾರಾಯಂಗರುಹಲು, ದೇವಸೇನ ಮಹಾರಾಯನು ಪತ್ನಿಯೊಡನೆ ಪುತ್ರಶೋಕಸಾಗರದಲ್ಲಿ ಮುಳುಗಿ ಕಳವಳಿಂಹೊಂದಿದರ್ಂ. ಎನ್ನುತ ಆಶುಕವು ಮುಂದೊರೆಯೆ, ಎಲೈ ಮಹಾರಾಜನೇ? ಒಂದು ಯಾಮವಾದರೋ ಮುಗಿದು ಹೋದುದು. ಮುಂದು ವಿಶ್ರಾಂತಿಯಂಹೊಂದಲಾಂ ಅನುಜ್ಞೆಯಂ ಜೀದುವೆನು, ಎಂದೊರೆಯಲು ವಿಕ್ರಮಾರ್ಕರಾಯನಾ ಕಾಂಡಪಟಸ್ಥ ಶುಕಕ್ಕೆ ವಿಶ್ರಾಂತಿಯಂ ಕೊಟ್ಟನೆಂಬಲ್ಲಿಗೆ ಕರ್ನಾಟಕ ಭಾಷಾರಚಿತವಚನ ಬೃಹತ್ಕಥಾಮಂಜರಿಯೊಳು ಪದ್ಮಾವತೀ ಪರಾಜಯವೆಂಬ ಪ್ರಥಮಭಾಗ ಪೂರ್ವಯಾಮ ಶುಕಪ್ರೋಕ್ತ ಕಥಾ ಸಮಾಪ್ತವು.

ಎರಡನೇ ಯಾಮದ ಕಥಾ ಪ್ರಾರಂಭವು

ತದನಂತರ ಮಾ ವಿಕ್ರಮಾರ್ಕರಾಯಂ ಕಾಂಡಪಟಸ್ಥವಾದ ನೌಲಂ ಕುರಿತು, ಎಲೈ ಹೀರಬಹೀಯೇ ; ಸೊತ್ತು ಕಳೆಯುವಂದದೊಳೊಂದು ಯಾಮವವರಿವಿಗೂ, ನೀನೊಂದು ಕಥೆಯಂ ಪೇಳಿಂದಾಜ್ಞಾಪಿಸೆ, ಜೇತಾಳನಾ ಕಾಂಡಪಟಸ್ಥ ಮಯೂರಾಕಾರಮಂ ತಾಳಿ, ಲಾಲಿಸೆ ವಿಕ್ರಮಾರ್ಕ ಭೂಪನೆ? ಒಂದಾನೊಂದು ಪುಟಭೀದನದೊಳು ದೀರ್ಘಕೋಪಿಯೆಂಬ ಪೆಸರಿಂದೊಪ್ಪುವ ಒಬ್ಬ ಬ್ರಾಹ್ಮಣನಟುನಿರ್ದನು ಯೆನಲು ಆ ಪದ್ಮಾವತಿಯು, ನೊದಲಿನ ಕಥೆಯಂ ಕೇಳಿ ಬಹುದುಃಖಾಕ್ರಾಂತಳಾಗಿ, ಆ ಮಯೂರಮಂ ಕುರಿತು, ಎಲೈ ಚಿತ್ರದನೌಲೇ, ಚಿತ್ರಶುಕವು ಪೇಳಿ ನಿಲ್ಲಿಸಿದ ಶೀಲವತಿಯ ಚರಿತ್ರೆಯನ್ನೇ ಮುಂದುಸುರೆಂದಾಜ್ಞಾಪಿಸಲು, ನೀನೆನಗೆ ಒಡತಿಯಲ್ಲ, ನಿನ್ನಾಜ್ಞಾನುಸಾರವಾಗಿ, ನಾನೊರೆಯುವನಲ್ಲ, ಹಾಗೆ ನಿನಗಿಷ್ಟವಿರಲು, ಈ ಮಹಾರಾಜನಂ ಪ್ರಾರ್ಥಿಸು, ಆ ರಾಯನೆನಗಾಜ್ಞೆಯಂ ಮಾಡೆ ಪೇಳುವೆನೆನಲಾ ಪದ್ಮಾವತಿಯು, ರಾಯನ ಕಡೆತಿರುಗಿ ಎಲೈ ಮಹಾರಾಜನೇ, ಅರಣ್ಯದಲ್ಲಿ ಹೊರಟು

ಹೋದಾ ಶೀಲವತಿಯನೆಲೆಯೇನಾದುದೋ, ಅವಂಕೇಳ್ಬಿಕೆಂಬ ಕುತೂಹಲವು ಎನ್ನಂಕಳವಳಿಪುದು, ನನ್ನೊಳು ಕೃಪಾಪರಿಪೂರ್ಣನಾಗಿ ನುಡಿಯುವಂತೀ ಬರ್ಹಿರಾಜಂಗಾಜ್ಞಾಪಿಸಬೇಕೆಂದು ಬಿನ್ನೈಸೆ, ರಾಯಂ ನಸುನಗುತ್ತ, ಆತೆರನಂ ಬರದು ಕೊಡೆಂದೊರೆದು, ಅವಳಿಂದಾ ಬಗೆಯೊಳು ಬರಸಿಕೊಂಡು ನಂತರದೊಳಾ ಮಂಯೂರಕ್ಕಾಜ್ಞಾಯಿತ್ತಂ.

ದ್ವಿಶೀಯ್ಯಂಯಾಮದೊಳು ತೆರೆಯು ಮೇಲೆ ನುಡಿಯುವ ಕಥೆ

ಎಲ್ಲೈ,- ಸಾರ್ವಭೌಮನೇ ಲಾಲಿಸು, ಸಹಾಯ ಮರಿಯದೇ ಮುಂತೋರದೆ ವ್ಯಸನಾಕ್ರಾಂತಳಾಗಿ ಕುಳಿತ್ತಿರ್ದಾ ರಾಜಾಂಗನೆಯಾದ ಶೀಲವತಿಯು, ದೂರದೊಳು ಬರುತ್ತಿರುವ ಸಕುಟುಂಬಿಯಾದ ವೃದ್ಧಬ್ರಾಹ್ಮಣನಂ ಕಂಡು, ಸ್ವಲ್ಪ, ಧೈರ್ಯವನ್ನಾಶ್ರಯಿಸೆ, ಆ ವೃದ್ಧಂ ಈಕೆಯು ಕುಳಿತಿರುವ ದಾರಿಯಲ್ಲಿ ಬಂದು ಸಮೀಪಗತನಾಗಿ, ದುಃಖಾಕ್ರಾಂತಳಾಗಿಯೂ, ಸರ್ವಾಂಗ ಸುಂದರಿಯಾಗಿಯೂ, ತರುಣಿಯಾಗಿಯೂ, ಇರುವಈಕೆಯೋರ್ವಳೀ ಘೋರಾರಣ್ಯ ಮಧ್ಯದಾರಿಯೊಳು ಕುಳಿತಿರುವಳಲ್ಲಾ ಕಾರಣಮೇನಿರಬಹುದೆಂದು, ಅವಂತಿಳಿಯಲೋಸುಗ, ಗಿಡದ ನೆರಳೊಳು ಕುಳಿತಿರುವ ಶೀಲವತಿಯಂ ಕುರಿತು, ಎಲೌತಾಯಿ ನೀನಾರು, ಈ ಬಟ್ಟೆಯೊಳೋರ್ವಳೀ ಕುಳಿತಿರೆ ಕಾರಣಮೇನು, ನಿನ್ನ ಮುಖವಾದರೋ ದುಃಖಸೂಚಕವಾಗಿಪ್ಪುದು, ಭೀತಳಾಗಿಯ್ದೂ ಕಾಂಬೆ ಎನೆ, ಆ ಶೀಲವತಿಯು, ನಿಜಸ್ಥಿತಿಯಂ ಮರೆಮಾಚಿ, ಸ್ವಾಮಿಾ, ವೃಡಬ್ರಾಹ್ಮಣರೇ, ನಮ್ಮವರೆಲ್ಲರೂ, ಮುಂದರಿದು ಪೋದರು, ನನಗೆ ದಾರಿಯಾಯಾಸ ಮೊದಗಲು, ಈಬಳಿಕುಳಿತು ಕೊಂಡೆನು,ನನ್ನಾಣ್ಮಂಸಮೀಪದೊಳು ಕಾಂಬ ಕೆರಗೆ ಹೋಗಿಪರ್ಕಂ, ಆತಂಬರುವನನ್ನೇ ಎದುರು ನೋಡುತ್ತಿರುವೆನು, ಎಂದೊರದು ,ಸ್ವಾಮಿ, ತಾನೆಲ್ಲಿಗೆ ಹೋಗುವಿರಿ, ಈಕೆಯಾರು ಈ ಮುಕ್ಕಳಾರದು ಎಂದಪರಯೋಗಕ್ಷೇಮಂಗಳಂ ವಿಚಾರಿಸಲಾ ವೃದ್ಧದ್ವಿಜಂ ಎಲೌ! ತಾಯಿಯೇ ನಾನುಕಾಶಿಯಾತ್ರೆಯಂ ರಚಿಸಿ ಸಮಸ್ತ ಪಿತೃಮೋಕ್ಷಸಂದಾಯಕವಾದ ಗಯಾಶ್ರಾದ್ಧಂಮಾಡಿ ಗಯಾಕ್ಷೇತ್ರಮಂ ಪೊಕ್ಕು ಗಂಗಾತೀರದೊಳು ಕೆಲಕಾಲಂ ವಾಸಮಂಗೈದು ಬರಬೇಕೆಂದು ನಿಶ್ಚೈಸಿ ಹೊರಟಿರುವೆನು ಈಕೆಯು ನನ್ನ ಕೈಪಿಡಿದವಳು, ಇವರೆಲ್ಲರೂ ನನ್ನ ಮಕ್ಕಳು ದರಿದ್ರದೋಷದಿಂದ ಈ ರೀತಿಯಾಗಿ ನಡೆದು ಹೋಗುವೆವು ಯೆಂದಾ ಪಾರ್ವನೊರೆಯಲು ಆ ಶೀಲವತಿಯು ದೇವರೇ ಈ ಯೋಗ್ಯವಾದ ಸಹವಾಸಮುಂ ಜೊತೆಗೊಳಿಸಿದನೆಂದರಿತು ಹರುಷಿಸುತ್ತಾ ಆ ಬ್ರಾಹ್ಮಣ ದಂಪತಿಗಳಂ ಕರೆದು ಬಳಿಯೊಳು ಕುಳ್ಳಿರಿಸಿಕೊಂಡು ನೀವು ಯಾವದಕ್ಕೂ ಚಿಂತಿಸಬೇಡಿ ನನಗೆ ಸಹಾಯವಿರಲಿಲ್ಲ. ನೀವು ದೊರೆತದ್ದು ನನಗೆ ಪರಮಾನಂದ ಮಾದುದು. ನನ್ನೆ ಗಂಡನಾದರೋ ಈ ವರಿವಿಗೂ ಬರಲಿಲ್ಲ. ಸೂರ್ಯನಾದರೋ ಮಧ್ಯಾಹ್ನವಂ ನೀರುತ್ತಾ ಬಂದನು, ನಾನೀಗಿಲ್ಲಿ ಅತನಿಗಾಗಿ ಕಾಯುವದು ಯುಕ್ತಮುಲ್ಲ ಮುಂದರಿದು ಪೋಗುತ್ತಿದ್ದರೆ ಅತಂ

ಬಂದುವದುಗುವನು ಅವರು ಬಂದಮೇಲೆ ನಿಮ್ಮದಾರಿಯ ಖರ್ಚಿಗೂ ಕೊಡಿಸಿಕೊಡುವೆನು ಯೆಂದುಸುರುತ್ತಾ ಅವರನ್ನೊದಂಬಡಿಸಿ ಅವರೊಂದಿಗೆ ತಾನೂ ಹೊರಟಳು.

ಇತ್ತಲಾ ದೇವಸೇನ ಮಹಾರಾಯನು ಪುತ್ರ ಶೋಕಾಗ್ನಿಯಲ್ಲಿ ಮಾನ ಸ್ವಾಂತನಾಗಿ ರಾಜ್ಯಭಾರಾದಿ ಕೃತ್ಯಗಳಂ ತೊರೆದು ನಿದ್ರಾಹಾರಂಗಳೊಳು ಮನಸಿಲ್ಲದೇ ಸರ್ವದಾಹುಚ್ಚನಂತೆ ಕಳವಳಿಸುತ್ತಿರೆ, ಯಿರಡನೆಯ ಮಗನಾದ ಉದಯ ಭಾನುರಾಯನು ಇದಂ ಕಂಡು ತಂದೆಯ ಸವಿಾಪಮುಂಸಾರಿ, ನಮಸ್ಕರಿಸಿ ಸ್ವಾವಿಾ ತಂದೆಯವರೆ ಈ ವ್ಯಥೆಯುಂದಿಡಿಸಿ, ಅಣ ನವರು ಯಾವ ಕಡೆಯೊಳಿದ್ದರೂ, ಹುಡುಕಿ ಕರತರುವೆನು ಪ್ರಯಾಣಕ್ಕಾಗಿ ಅನುಜ್ಞೆಯುಂ ಜೀದುವ ನನಿಗೆ ಆಜ್ಞೆಯುಂಪಾಲಿಸಬೇಕೆಂದು ಕೇಳಿಕೊಳ್ಳುತ್ತಾ ಮುಕುಳಿತಹಸ್ತನಾಗಿರುವ ನಂದನಂ ಕಂಡು, ಹರ್ಷಿತನಾಗಿ ಅವನ ಮನವಿಯಂ ನಿರವೇರಿಸಿಕ್ಕೊಡೆ ಆರಾಜಾತ್ಮಜಂ ತಂದೆಯಿಂ ಆಶೀರ್ವಾದಗಳಂ ಹೊಂದಿ ಭಂಡಾರದೊಳಿರ್ದ ಕೀಲ್ಬೆರಂಯಂತೆಗಿಸಿ ಅದರುದರೊಳು ಜೀಕಾದಷ್ಟು ದ್ರವ್ಯಮುಂಗಭೀಕರಿಸಿ ಆ ಕುದುರೆಯನ್ನೇರಿ ಅಲ್ಲಿಂದ ಹೊದಂ,

ಶ್ಲೋ॥ ಉಷಶ್ಯಸಂಸೆಗಾರ್ಗ್ಯೇಸ್ತು ಶಕುನಂತ ಬೃಹಸ್ಪತಿಃ।
ಮನೋಜಯತ್ರವಾಂಡವ್ಯೋವಿಪ್ರವಾಕ್ಯಂಜನಾರ್ದನಃ

ಪಂಚಪಂಚಲಉಷಃಕಾಲವೂ ಅಂದರೆ ಅರುಣೋದಯ ಸಮಯವೇ ಪ್ರಯಾಣಕ್ಕೆ ಸರ್ವೋತ್ತಮವಾದ ಮುಹೂರ್ತವೆಂದು ಗಾರ್ಗ್ಯಮತವೆಂತಲೂ ಶಕುನಗಳನ್ನು ನೋಡಿಕೊಂಡು ಪ್ರಯಾಣಮಂ ಬೆಳಸಬೇಕೆಂದು ಬೃಹಸ್ಪತ್ಯಾಚಾರ್ಯರು ಹೇಳಿರುತ್ತಾರೆಂತಲೂ, ಮನೋಜಯವೇ ಸರ್ವೋತ್ತಮವಾದ ಲಗವೆಂದು ಮಾಂಡವ್ಯರು ಹೇಳಿರುತ್ತಾರೆಂತಲೂ, ಬ್ರಾಹ್ಮಣರನ್ನು ಕೇಳಿ ಅನುಜ್ಞೆಯುಂಕೊಂಡು ಪ್ರಯಾಣಮಂ ಬೆಳಸುವದುತ್ತಮವೆಂದು ಜನಾರ್ದನರ ಮತವೆಂಬದಾಗಿಯೂ ಇರುವ ಪ್ರಮಾಣಂಗಳೊಳು ಕಲಿಯುಗಕ್ಕೆ ಮಾಂಡವ್ಯಮತವೇ ಸರ್ವೋತ್ತಮವಾದುದೆಂದರಿತು ಯಾವದೊಂದಂ ನೋಡದೇ ಅಕಾಶಮಾರ್ಗವಾಗಿ ಸಂಚರಿಸುತ್ತಾ ಅನೇಕ ರಾಷ್ಟ್ರಂಗಳಂ ದಾಂಟಿ ಸೂರ್ಯಾಸ್ತವಾನದ ವರಿಗೂ ತಿರುಗಿ ಸಾಯಂಕಾಲಕ್ಕೆ ಸರಿಯಾಗಿ, ಕೌಶಾಂಜೀಪಟ್ಟಣದ ನೈರ್ಋತಿಗವನ್ನೈದಿ ಸ್ಕಂದಾವಾರವೆಯು ಆಕಾಲಕ್ಕೆ ಮುಂದರಿಸದೆ ಪೀಡಿಸುತ್ತಾ ಬಂಕಾರಣ ಅದರ ನಿವಾರಣೆಗೋಸ್ಕರ ಆ ಪುರಪ್ರಾಂತ್ಯದೊಳು ತನ್ನ ತೇಜಿಯನಿಳಿಸಿ ಪೊಳಲಂಸಾರಿದಂ ಆ ಪುರದೊಳಿಡಗೊಲಜ್ಜೆಯ ನಿಳಯಮುಂ ಪೊಕ್ಕು ಸ್ಕಂದಾವಾರವೆಯಂ ಕಳಕೊಂಡು ಮಾರ್ಗಶ್ರಮದಿಂದಾ ಯಿರುಳಲ್ಲಿಯೇ ಮಲಗಿನಿದ್ರಿಸಿ ಮರುದಿನದುದಯದೊಳು ಅಂಣನಂ ಹುಡುಕಲು ಯತ್ನಿಸಿ ಆಪಟ್ಟಣದೊಳೆಲ್ಲೆಲ್ಲಿ ಹುಡುಕಿ ಹುಡಿಕಿಯೆಲ್ಲಿಯೂ ಕಾಣದೆ ಆಯಾಸಮಂತಾಳಿ ಮಧ್ಯಾಹ್ನ ಕಾಲವಿಾರುವ ಸಮಯದೊಳು, ಅಡಗೊಲಜ್ಜೆಮನೆಯುಂಸಾರಿ, ಸಖ್ಯಸಂಭೋಜನಾದಿಗಳಂ ಮಾಡಿಕೊಂಡು

ೀಲ್ಗುದುರೆಯಂ ಹತ್ತಿ ಸೂರ್ಯಾಸ್ತಮಾನ ಕಾಲದೊಳು ಆಕಾಶಮಾರ್ಗವಾಗಿ ಹೊ
ಟ್ಟು ಆ ಪೊಳಲಿಗೆರಿಸಾಯಕನಾ ಕರಾಳರಾಯನ ಹವ್ಯಾಗ್ರಮಾರ್ಗವಾಗಿ ಬರು
ಲಿರೆ ಚಂದ್ರಶಾಲೆಯೊಳು ನಿಂತಿರ್ದಾರಾಜಾತ್ಮಜೆಯಾದ ಸುದರ್ಶನೆಯು ರಾಜನಂ
ನಂನೋಡಿ ಮನ್ಮಥನೇನಾದರೂ ಮೂರ್ತೀ ಭವಿಸಿ ಇಲ್ಲಿರುವನೋ ಅಲ್ಲಿ ದೊಡೆ
ಯಂತನೋ ನಳಕೂಬರನೊ ಎಂಪತ್ಯಾಶ್ಚರ್ಯ ಪರವಶಳಾಗಿ ಜನ್ನಾಗಿನೋಡಿ ಇವನ
ರೂಪಾತಿಶಯವಂ ಕೊಂಡಾಡುತ್ತಾ ಇವನೇ ನನಗೆ ತಕ್ಕನಲ್ಲನೆಂದು ನಿಶ್ಚಯಿಸಿ
ಕೊಂಡು ಸಂಜ್ಞೆಯಂಮಾಡೆ ಪುಷ್ಪಾಸವಮಂ ಕಂಡ ಭ್ರಮರಂ ಬಂದೆಗುರುವಂತೆ
ೀಲ್ಗುರೆಯಂ ತಿರುಗಿಸಿ, ಅದು ಅಸೌಧಾಂತರಕ್ಕಿಳಿಯಲು ಮಹದಾನಂದ ತುಂದಿ
ಲನಾಗಿ ರಾಜಪುತ್ರಿಯ ಸನಿಯಾಸಕ್ಕಿಳಿದು ಬರಲಾಕೆಯು ರಾಕಾಚಂದಿರನೆಂ ಕಂದ
ಮುದ್ರನಂತೆಯೂ ಸೂರ್ಯನಂಕಂಡ ಪದ್ಮಿನಿಯಂತೆಯೂ ಆನಂದಾರ್ಣವಮಗ್ನ
ಳಾಗಿ ದಿಗ್ಗನೆದ್ದು ಬಂದು ಅಮೃತಪೂರಿತಕನಕ ಕಲಶಗಳೋ, ಕಾಮುಕಜನಚಿತ್ತಾ
ಷ್ಣಮಂತ್ರದೇವತಾ ಮೂರ್ತಿಗಳೋ ಎನೆರಾರಾಜಿಸುವ ತನ್ನ ಒಟ್ಟಕುಚಂಗ
ಳಿತನವಕ್ಷಸ್ಥಲಮನ್ನೊತ್ತುವಂತಾಲಿಂಗಿಸಿಕೊಂಡು ಸರಸೋಕ್ತಿಸೀತ್ಕಾರ ಪ್ರೂತ್ಕಾ
ಚುಂಬನಾದಿ ಮನ್ಮಥವಿಲಾಸಚೇಷ್ಟೆಗಳಂ ಗೈಯುತ್ತಾ ಅಂತಃಪುರಕ್ಕೆ ಎಳದೊ
ಯ್ದು ಮಣಿಮಂಚಮುಂಸಾರಿ ಸಂತೋಷಸ್ನಾತಳಾಗಿ, ಅತನೊಳು ಮನ್ಮಥಕೇಳಿ
ಗೊಳು ಸುಖಿಸುತ್ತಿರ್ದು, ನಂತರಮೆಲ್ಲಿ ಪೋದುತೋತ್ತಮನೇ ನೀನೇ ನನ್ನ ಪ್ರಾಣವ
ಲ್ಲಭನು ಗಾಂಧರ್ವರೀತಿಯಿಂನಿನ್ನುಂಕೈಯಂವಿಡಿರುವೆನು ನೀವು ಪ್ರತಿದಿನದ ರಾ
ತ್ರಿಯೂ ಬಂದು ನನ್ನೊಳು ಸುಖಿಸುತ್ತಿರ್ದು ಅರುಣೋದಯಾತ್ಪೂರ್ವವೇ ತೆರಳ
ಬಹುದು ಈ ಪ್ರಾರ್ಥನೆಯಂ ನೆರಸೇರಿಸಬೇಕೆಂದು ವಿನಯಳಾಗಿಬೇಡುವ ಸುದರ್ಶ
ನೆಯಂ ವಿಶ್ವಾಸ ಪೂರ್ವಕವಾಗಿ ಕಟಾಕ್ಷಿಸಿ ಕೆರುನಗೆಯಿಂಕೂಡಿ ಆಕೆಯಂ ಬಿಗಿದ
ಪ್ಪಿ ತನ್ನ ತೊಡೆಯಮೇಲೆ ಕುಳ್ಳಿರಿಸಿಕೊಂಡು ಮುದ್ದಾಡುತ್ತಾ ಸರಸಸಲ್ಲಾಪಗ
ಳಿಂದಾಕೆಯ ಅಂತರಂಗಮಂ ಪುಚ್ಚಿಸುತ್ತಾ ಅನ್ನಿಷ್ಟಾನುಸಾರವಾಗಿ ನಡದುಕೊ
ಳ್ಳುತ್ತೇನೆಂದು ವಾಗ್ದಾನವಂ ಕೊಟ್ಟು ಆ ರಾತ್ರಿಯಂ ಸುಖವಾಗಿ ಕಳೆದು ಸೂ
ರ್ಯೋದಯ ಕಾಲಕ್ಕೆ ಮುನ್ನ ಮೇ ಆಕೆಯಂ ಸಮಾಧಾನಗೊಳಿಸಿ ಅನುಮತಿಯಂ
ಕೊಂಡು ಕೀಲ್ಗುದುರೆಯನ್ನೇರಿ ಅಲ್ಲಿಂದ ಹೊರಟು ಮುಂದಿಳಿದಿರ್ದ ನೆಲೆಯೊಳಾ
ಕುದುರೆಯನ್ನೇರಿಸಿ, ಅಡುಗೂಲಜ್ಜಿಯ ಮನೆಯಂ ಸೇರಿ, ಸ್ನಾನ ಭೋಜನಾದಿ
ಗಳಂ ಮಾಡಿಕೊಂಡು, ರಾತ್ರಿಯಾಗುವದಂ ನಿರೀಕ್ಷಿಸುತಿರ್ದು, ನಂತರದೊಳಾ
ಕೇಜಿಯನ್ನೇರಿ, ರಾಜಾತ್ಮಜೆಯಾದ ಸುಂದರೀಮಣಿಯ ಸೌಧಮಂ ಸಾರಲಾಕೆ
ಯೆದುಗೊಂಡು, ವಿಕಾಂತಪುರಮಂ ಸೇರಿ, ವಿವಿಧಭಕ್ಷ್ಯ ಭೋಜ್ಯಾದಿಯಿಂದೀರಾ
ಜನಂ ಉಪಚರಿಸಿ, ದಿವ್ಯ ಗಂಧ ಪುಷ್ಪ, ತಾಂಬೂಲಗಳಿಂ ದುಪಭೋಗಗಳಂ ಗೊಳಿ
ಸುತ್ತಾ, ಹುಜೆಚಿತ್ರಮುಂಚದೊಳಾತನೊಡನೆ ಸೇರಿ ಪಡಿಸಿ, ಅತ್ಯಾನಂದಪುನಸು

ಧವಿಸುತ್ತಾ ಇದ್ದಳು. ಯಥಾಪ್ರಕಾರವಾಗಿ ರಾಜಾತ್ಮಜನು, ಅನುಕೂಲಸಮಯದೊಳಿದ್ದು, ತನ್ನನೆಲೆಯಂ ಸಾರಿದೆಂ. ಈ ಕಾರ್ಯದೊಳು ತನ್ನ ಕಾರ್ಯಮುಂ ಸಂಪೂರ್ಣವಾಗಿ ಮರತು, ಆ ಸುದರ್ಶನೆಯೋಳ್ ಸಿಲುಕಿದ ಮನೋವೃತ್ತಿವುಳ್ಳವನಾಗಿ, ಆಕೆಯೊಳು ಸುಖಸುತ್ತಲೇ ಇರುವಲ್ಲಿ, ಗರ್ಭವಂತಾಳಿದಳು ರಾಜಾತ್ಮಜೆಯುಂ ಆಕೆಯ ಪರಿಚಾರಿಣಿಯರಿತು ರಾಜ ಭಾರ್ಯೆಯೊಳು ರಹಸ್ಯವಾಗಿ ಪೇಳಲು, ತನ್ನ, ಕುವರಿಯ ಸ್ಥಿತಿಯನೆಲ್ಲವುಂ, ನೋಡಿ, ಲಕ್ಷಣಂಗಳಿಂ ಗರ್ಭವತಿಯೇ ಹೌದೆಂದರಿತು, ರಹಸ್ಯವಾಗಿ ಕರೆಳರಾಯನೊಳು ತಿಳುಹಲು, ಚಿಂತಿಸುತ್ತಾ ರಾಯಂ ರಹಸ್ಯವಾಗಿ ಆಪ್ತಮಂತ್ರಿಯುಂ ಕರೆಸಿ, ಈ ಸಂಧರ್ಭವನ್ನೆಲ್ಲವುಂ ಪೇಳಲು, ಆಮಂತ್ರಿಯು ಕುಶಲ ತಂತ್ರನಾಪ್ಪರಿಂದ ಉಪಾಯವನನ್ನಾಲೋಚಿಸಿ, ಇದಂಕಂಡು ಹಿಡಿಯಬೇಕೆಂದು, ದಿವ್ಯವಾದಪರಿಮಳಗಂಧವುಂ ಮಾಡಿಸಿ, ಆಕೆಯ ಅಂತಃಪುರಕ್ಕೆ ಕಳಿಸಿ, ಈ ಗಂಧವನಾಸನೆಯನು, ಯಾರಲ್ಲಿ ತೋರುವದೋ ಅವರಂ ರಹಸ್ಯವಾಗಿ ತನ್ನೆಳು ಕರತರುವಂತೆ, ಆಸ್ಥಭೃತ್ಯರೊಳು ರಹಸ್ಯವಾಗಿ ಪೇಳಿ ಅವನಿರೀಕ್ಷಿಸುತ್ತಿರ್ದಂ. ಆಮಂತ್ರಿಭಟರು ಪ್ರಭುವಿನ ಆಜ್ಞೆನುಸಾರವಾಗಿಯೇ ಗಂಧದವಾಸನೆಯುಂ ಕಂಮುಹಿಡಿದುವುದರಲ್ಲಿ ವಿದಲ್ಭಶಯರಾಗಿ ರಾಜಕುಮಾರಿಯ ಅಂತಃಪುರದೆಡೆಯೊಳು ಕಾಯುತ್ತಿರೆ ಉದಯ ಭಾನುರಾಯನು ಯಥಾಪ್ರಕಾರವಾಗಿ ಬಂದು ತನ್ನ ಕಾಂತೆಯೊಪ್ಪಗೂಡಿ ಈ ಗಂಧವುಂ ತನ್ನೂ ಈಕೆಯಿಂದ ಕೊಡಲ್ಪಡುವ ಭೋಗವಸ್ತುಗಳನ್ನು ಆಕೆಯೊಂದಿಗೆ ಸೇವಿಸಿ ಭೋಗಿಸುತ್ತಾ ಇದ್ದನು. ಮೂರುತಿಂಗಳು ವರೆವಿಗೂ ಆಮಂತ್ರಿಭಟರುತಾದು ಯಾವದಂಕಾಣದೆ ಮಂತ್ರಿಯೊಳು ಬಿನ್ನೈಸೆ ಈ ಉಪಾಯದಿಂದ ಸಾಧ್ಯವಾಗಲಿಲ್ಲವೆಂದರಿತು, ಚಿಂತಾಲೋಲನಾಗಿ, ಧೈರ್ಯಗೆಡದೆ, ಉಪಾಯಾಂತರವಾದ ಕಾರ್ಯವಾಲೋಚಿಸಿ, ಭಂಗಾರದ ವರಕು ಹಾಕಿದ ಗಂಧವುಂ ಪರಿಚಿಸಿ, ಸುದರ್ಶನೆಯ ಅಂತಃಪುರಕ್ಕೆ ಮಾತ್ರಾಕಳುಹಿಸಿ, ಊರುಬಾಗಲು ಕಾವಲಗಾರರಂ ಕರೆಯಿಸಿ, ಇಂದಿನಿಂ ಉದಯಕಾಲದೊಳಾರಾವರು ಭಂಗಾರದ ವರಕುಹಾಕಿದ ಗಂಧವುಂ ಹಚ್ಚಿಕೊಂಡು ಬಂದರೆ, ಅವರಂ ಚೆನ್ನಾಗಿ ಪರಿಕಿಸಿನೋಡಿ ನನ್ನೆದುರಿಗೆ ಕರತರಬೇಕೆಂದು ರಹಸ್ಯವಾಗಿ ಅವರಿಗೆ ಆಜ್ಞಾಪಿಸಿ ಕಳುಹಿದಂ. ಈ ತಂತ್ರವನರಿಯದೆ ಯಾ ರಾಜಾತ್ಮಜೆಯು ಆ ಗಂಧವುಂ ತನ್ನ ಕಾಂತನಿಗೂ ಲೇಪನಂಗ್ಯೈಯ್ಯುತ್ತಾ, ತಾನೂ ಮೈಳದುಕೊಳ್ಳುತ್ತಾ, ಮುನ್ನಿನೊಲು ಅನ್ಯೋನ್ಯನುರಾಗವಾಗಿ ಭೋಗಂಗಳಂಹೊಂದುತ್ತ ಇರೆ, ಒಂದಾನೊಂದುದಿನ ವಿಚಾರಾಜಕುಮಾರನಾದ ಉದಯಭಾನು ರಾಯನು ಉದಯದೊಳೆದ್ದು, ಯಥಾಪ್ರಕಾರವಾಗಿ ಕೇಲ್ಗುದುರೆಯಂಹತ್ತಿ ಹೊರಟು, ಅದರ ನೆಲೆಯೊಳದಂ ನಿಲ್ಲಿಸಿ, ಪಾದಚಾರಿಯಾಗಿ ಬರುತ್ತಿರಲಾತನ ದೇಹದಲ್ಲಿನ ಗಂಧವು ಸರ್ವೋತ್ತಮ ದ್ರವ್ಯಗಳಿಂ ಮಾಡಿರುವದಾದ್ದರಿಂದದರ ಪರಿಮಳವು ದಿಕ್ಕು

ಗಳಂವ್ಯಾಪಿಸುತ್ತಿರೆ, ಈ ಗಂಧದ ವಾಸನೆಯಂ ಕಾಣುತ್ತಾ ಛದರಂ ಈತನ ಬಳಿ ಗೈದಿ ಪರಿಕಿಸಿ, ಮೈಯ್ಯುಡುಪಂ ತೆಗಿಸಿನೋಡಿ ಕುರುಹವುಂನೋಡಿ, ಈತನೆಂ ವಿಡಿತಂದು ಮುಂತ್ರಿಗೊಪ್ಪಿಸಲು ಮುಂತ್ರಿಯು ತಾನುಮಾಡಿದ ಉಪಾಯಾಂತರದಿಂದ ಕಳ್ಳನು ಶಿಕ್ಕಿದನೆಂದು ಬಹು ಸಂತೋಷಮಂ ತಾಳಿ, ಆ ರಾಜಾತ್ಮಜನೊಡಗೊಂಡು ಕರಾಳರಾಯನ ಬಳಿಗೈದಿ ಸ್ವಾಮಿಾ! ತವಾಜ್ಞಾನುಸಾರಮಾಗಿ ಕಳ್ಳನಂ ಪತ್ತೇ ಮಾಡಿ ತರಿಸಿರುವೆನೆಂದರುಹಲು ರಾಯಂ ಮುಂತ್ರಿ ಪ್ರಧಾನರೊಡಗೂಡಿ ಕುಳಿತು, ರಾಜಕುಮಾರನಂ ಕುರಿತು ಈ ಗಂಧವು ನಿನಗೆಲ್ಲಿಯದು ಎಂದು ವಿಚಾರಿಸುತ್ತಿರುವ ರಾಜನಿಗೆ ಸರಿಯಾದ ಉತ್ತರವಿಾಯದೆ ಅ ಸುಛಾನುರಾಯನು ಆ ರಾಯನ ಕೋಪಾಗ್ನಿಯು ಉರಿಯುತ್ತಿರೆ, ಅದರೊಳು ಅಜ್ಯಮುಂ ಹಾಕಿದಂತೆಗೈದೆಂ. ಮತ್ತಷ್ಟು ಕೋಪಮಂ ತಾಳುತ್ತಾ ಕರಾಳರಾಯಂ, ಈ ನೀಚನಂ ಕೇಳುವದೇನು? ಇವನಂ ಶೂಲಕ್ಕೆ ಹಾಕಬಿಡಿರಿ, ಎಂದಾಜ್ಞಾಪಿಸೆ ರಾಜಾಜ್ಞೆಯಂ ನೆರವೇರಿಸುವದಕ್ಕಾಗಿ ದೂತರ ಆತನಂ ಕರದೊಯ್ದರು.

ಇತ್ತಲಾ ಶೀಲವತಿಯು ಕಾಶೀ ಯಾತ್ರಾರ್ಥಮಾಗಿ ಬಂದಿದ್ದ ಬ್ರಾಹ್ಮಣನಿಗೆ ದ್ರವ್ಯ ಸಹಾಯವಂ ಮಾಡಿ ಅವನ ಕುಟುಂಬದೊಳು ಸೇರಿ ಅವರಾವೆಡೆ ನಿಲ್ಲುವರೋ ತಾನೂ ಅಲ್ಲಿ ನಿಲ್ಲುತ್ತಾ ಅವರೊಡನೆ ಭೋಜನಾದಿಗಳಂ ಸಲುವುತ್ತಾ ರಾತ್ರಿಕಾಲದೊಳಾ ಬ್ರಾಹ್ಮಣ ಪತ್ನಿಯೂ ತಾನು ಸೇರಿ ಜೀರೇ ಮಲಗುತ್ತಾ ಈ ರೀತಿಯಾಗಿ ಅವರೊಂದಿಗೆ ಮಾರ್ಗವಂ ನಡೆಯುತ್ತಾ ಲೊಂದಾನೊಂದು ದಿನದೊಳು ಬಟ್ಟೆಯೊಳು ಬರುತ್ತಿರೆ ಕಳ್ಳನೋರ್ವಂ ಇವರಂ ಕಂಡು ತನ್ನ ಸಹವಾಸಿಗಳಂ ಸೇರಿಸಿಕ್ಕೊಂಡು ಬಂದು ಈ ಬ್ರಾಹ್ಮಣ ದಂಪತಿಗಳಂ ಹೊಡದು ಭಂಗಿಸಿ, ಹೆಂಗಳಂ ಬೆದರಿಸಿ ಅವರಲ್ಲಿರುವದನ್ನೆಲ್ಲಮುಂ ಕಸುಗೊಂಡು ಆ ಶೀಲವತಿಯ ಬಳಿಗೆ ಬರಲು ಇವಳು ಬಹಣ ಚದುರೆ ಯಾದ್ದರಿಂದ ಕಳ್ಳರ ಯಜಮಾನನಿಂಗಿತವನ್ನರಿತು ಎಲೈ ಚೋರ ಸಿಖಾಮಣಿಯೇ! ನನ್ನನ್ನು ಯಾಕೆ ತೊಂದರೆ ಪಡಿಸಲಿಳಸುವೆ ನಾನೇ ನಿನ್ನೊಂದಿಗೆ ಬರುವೆನು ನಡೆ ಎನೆ ಆ ಚೋರಾಗ್ರಗಣ್ಯನದಕ್ಕೆ ಮೆಚ್ಚಿ ಈ ಜನಗಳೊಳು ತಾನಪಹರಿಸಿದ್ದೆಲ್ಲಾ ಪದಾರ್ಥಗಳಂ ಶೀಲವತಿಯ ಕೈಗೆ ಕೊಟ್ಟು ಹರುಷಚಿತ್ತನಾಗಿ ಆಕೆಯನೊಡಗೊಂಡು ತನ್ನ ನಿವೇಶನದ ಕಡೆಗೆ ಬರುತ್ತಿರೆ ಪರಮ ದುಃಖಾಕ್ರಾಂತಳಾದ ಶೀಲವತಿಯು ಅವನ ಇರವನ್ನೂ ಅವನ ನೀಚಾಭಿಪ್ರಾಯವನ್ನೂ, ಅರಿತವಳಾಗಿ, ಆಹಾ ವಿಧಿಯೇ! ಇದೊಂದು ದುಷ್ಕರ್ಮವಾದ ವಿಪತ್ತು ಸಂಭವಿಸಿರುವದೇ, ಇದಂ ಹ್ಯಾಗೆ ಪರಿಹರಿಸಿಕೊಳ್ಳಲಿ ನನ್ನ ವಿಧಿಯು ಇನ್ನೂ ಹ್ಯಾಗೆಹ್ಯಾಗೆ ಪರಿಣಮಿಸುವುದೋ ಎಂದು ಮಹದ್ವ್ಯಾಕುಲಾಂತರಂಗಳಾಗಿ ವ್ಯಸನಾಂಬುಧಿಯೊಳು, ಮುಳುಗಿದಳೆಂಬಲ್ಲಿಗೆ, ಆ ಮಯೂರವು, ಸ್ವಾಮಿಾ! ವಿಕ್ರಮಾದಿತ್ಯರೇ! ದ್ವಿತೀಯ ಯಾಮವು ಕಳೆಯುತ್ತಾ ಬಂದುದು. ಅನುಜ್ಞೆಯಾದರೆ

ವಿಶ್ರಾಂತಿ ಸುಖಮುಂ ತಾಳುವೆನು. ಎನಲಾರಾಯನಂ ಅನುಮತಿಯನಿತ್ತನೆಂಬಲ್ಲಿಗೆ ಕರ್ಣಾಟಕಭಾಷಾವಿರಚಿತ ಸೌಂದರ್ಯಾದ್ಭುತ ರುಚಿರಚಿತ್ರ ಬೃಹತ್ಕಥಾಮಂಜರೀ ವಚನ ಕಾವ್ಯದೊಳು ಪದ್ಮಾವತೀ ಪರಾಜಯಾಖ್ಯ ದ್ವಿತೀಯ ಯಾಮ ಕಥಾವಿರಾಮವಾದುದು.

ತದನಂತರದೊಳಾ ವಿಕ್ರಮಾರ್ಕರಾಯಂ ಅದೇ ಕಾಂದಪಟಸ್ಥಮಾದ ಕೋಗಿಲೆಯಂ ಕುರಿತು, ಎಲ್ಲೆ ವಿಕನೇ ! ನೀನೊಂದು ಝಾಮದ ಪರಿಯಂತರವೂ ಒಂದು ಕಥೆಯಂ ಹೇಳಿಂದಾಜ್ಞೆಯಂ ಕೊಡಲು, ಭೀತಾಳನಾ ಕೋಕಿಲಾರೂಪಂ ತಾಳಿ, ಕಥೆಯುಂ ಹೇಳಲುಪಕ್ರಮಿಸಿದಂ. ಕೇಳ್ಮೆಯ್ಯಾ ಭೂವಿಾಂದ್ರನೇ ! ಒಂದುಗ್ರಾಮದಲ್ಲಿ, ಪರಮ ದರಿದ್ರ ಪೀಡಿತನಾದ ಬ್ರಾಹ್ಮಣನೋರ್ವ ನಿರ್ದನೆಂಬುವ ದರೊಳಗಾ, ಪದ್ಮಾವತಿಯು ಶೀಲವತಿಯ ಗತಿಯೇನಾದುದೋ ಎಂದು ಕಳವಳದಿಂದೀ ಕಥೆಯಂ ಕೇಳಲಾರದೆ, ನೀನಿಲು ಹೇಳಿದ ಕಥೆಯನ್ನೇ ಮರಳಿ ಹೇಳಬೇಕೆಂದು ರಾಯನೊಳು ಬಿನ್ನೈಸಿ, ರಾಯನಿಗೆ ಬರದು ಕೊಡೆ, ಆ ರಾಜಾಜ್ಞಾನುಸಾರವಾಗಿ ಕೋಗಿಲೆಯು ನೀನಿಲು ಹೇಳಿ ನಿಲ್ಲಿಸಿದ ಕಥೆಯನ್ನೇ ಹೇಳಲುಪಕ್ರಮಿಸೆ ರಾಯಂ ನಸುನಗುತ್ತಾ, ಎರಡಾವರ್ತಿ ಮಾತನಾಡಿದ್ದಾಯಿತೆಂದು ಹರುಷಿಸುತ್ತಲಿರ್ದಂ



ಮೂರನೆ ಯಾಮದಲ್ಲಿ ತೆರೆಯ ಚಿತ್ರದಕೋಗಿಲೆ ಹೇಳುವಕಥೆ.

ಈ ಪ್ರಕಾರವಾದ ಕಳ್ಳನೊಡಗೊಂಡು, ಬಂದಾ ರಾಜಾಂಗನೆಯಾದಾ ಶೀಲವತಿಯು ಬಹು ವಿವೇಕಶಾಲಿಯೂ, ಚದುರೆಯೂ ಆದ್ದರಿಂದ, ಆ ಚೋರನಂ ಸವಿಾಪಕ್ಕೆ ಕರದು, ಎಲ್ಲೆ ಚೋರಾಗ್ರಗಣ್ಯನಾದವನೇ ! ನಾನು ಬಹಿಷ್ಟೆಯಾಗಿರುವೆನು, ಮನೆಯಂ ಹೊಗಲಾಗದು, ನನಗಾಗಿ ನಿನ್ನ ಹಳ್ಳಿಯ ಮುಂಗಡೆಯೊಳೊಂದು ಗುಡುಸಲಂ ಹಾಕಿಕೊಡಲಾನಲ್ಲಿ ಮೂರು ದಿನಗಳವರೆಗೆ ಇರುವೆನು, ನನಗೆ ಭೋಜನ ಸಾಮಗ್ರಿಗಳು ಬೇಕಾಗಿರುವುವು, ಅವು ನಿನ್ನೊಳಿನಿಯೋ ಎನೆ, ಯಾವ ಯಾವ ಸಾಮಾನುಗಳು ಬೇಕೋ ಪೇಳ್ದೊಡೆ ತಂದು ಸಿದ್ಧಗೊಳಿಪೆನೆನೆ ದಿವ್ಯವಾದ ಸಂಣಕ್ಕಿ, ರವೆ, ಸಕ್ಕರೆ, ತುಪ್ಪ, ಬೆಂಣ್, ಹಾಲು, ಮೊಸರು, ಇವು ಭೋಜನಕ್ಕೆ ಬೇಕಾದ ಪದಾರ್ಥಗಳು, ಭೋಜನಾನಂತರ, ಪಚ್ಚಕರ್ಪೂರ, ಕುಂಕುಮಕೇಸರಿ, ಕಸ್ತೂರಿ, ಜವಾಜಿ ಮಿಶ್ರಿತವಾದ ಗಂಧವು, ದಿವ್ಯವಾದ ದುಂಡುಮಲ್ಲಿಗೆ ಕಟ್ಟಿರುವ ಪೂಮಾಲೆಯೂ, ಬೆಳ್ಳಿಯ ರೇಖೆಗಳೋ ಎಂಬಂತೆ ಥಳಥಳಾಯಮಾನವಾಗಿ ರಂಜಿಸುತ್ತಿರುವ ಚಿಗುರು ವೀಳ್ಯದೆಲೆಯೂ, ಕಾಯಿಪತ್ರಿ, ಲವಂಗ, ಯಾಲಕ್ಕಿ, ಪಚ್ಚಕರ್ಪೂರ, ಕುಂಕುಮಕೇಸರಿ, ಕಸ್ತೂರಿ ಮಿಶ್ರಿತವಾದ ದಿವ್ಯವಾದ ಅಡಿಕೆ ಪುಡಿ ಈ ಮೊದಲಾದ ಸಾಮಗ್ರಿಗಳು ಬೇಕಾಗಿರುತ್ತವೆ, ಖರ್ಚಿಗಾಗಿ ನಿನ್ನೆಡೆಯೊಳು ಹಣ

ವಿರುವದೋ ಇಲ್ಲವೋ ? ಈ ಯಾಭರಣವನ್ನಾದರೂ ತೆಗದುಕೊಂಡು ಪೋಗಿ ಆ ಸಾಮಾನುಗಳಂ ತರಹೇಳಲಾ, ದುಷ್ಟಾಶಯನು ತನ್ನ ಪರಿವಾರವುಂ ಸಂಗಡ ಗೊಂಡು ಸಮೀಪದೊಳಿರುವ ಊರಂ ಕುರಿತು ತೆರಳಿದಂ.

ಇತ್ತಲಾ ಶೀಲವತಿಯು ಆ ರಾತ್ರಿಯೇ ಅಲ್ಲಿಂದ ಹೊರಟುವಳಾಗಿ ಘೋರಾರಣ್ಯ ಮಾರ್ಗವುನ್ನೈದಿ, ಹುಲಿ, ಕರಡಿ, ಹಂದಿ, ಕೆರಬ, ಶೀಳುನಾಯಿಯೇ ಮೊದಲಾದ ಕ್ರೂರಮೃಗಂಗಳ ಬಾಯಿಗೆ ತುತ್ತಾಹೇನೆಂಬ ಭೀತಿಯನ್ನು ತೊರೆದು, ಕಲ್ಲುಮುಳ್ಳು ಹಳ್ಳಕೊಳ್ಳಗಳಂ ಶಂಕಿಸದೆ, ಕತ್ತಲೆಯುಂಬುದಂ ಲೆಕ್ಕಿಸದೆ, ಈ ದುರಾತ್ಮಕನ ಬಾಧೆಪರಿಹಾರವಾದುದಲ್ಲಾ ಎಂದಣಿಕೆಗೊಂಡವಳಾಗಿ ಅತಿ ವೇಗದಿಂ ಹೊರಟು ಬರುತ್ತಾ ಸೂರ್ಯೋದಯವಾಗಲು ಮುನ್ನವೆ ರಾಜಮಾರ್ಗವುಹೊಂದು ಕಂಡು ಆ ಬಳಿ ಕುಳಿತುಕೊಂಡಳು.

ಅತ್ತಲಾ ಕಳ್ಳನು ಶೀಲವತಿಯು ಲೇಖನಂತೆ ಸಾಮಾನುಗಳಂ ತರಲು ನಾನಾಕಡೆಯೊಳಲಿಯುತ್ತಾ, ಅಸ್ಖಂಧಾವ್ಯಾ ತರಲತಿ ಪ್ರಯಾಸವುನ್ನೈದಿ ಯಲ್ಲಾ ವಸ್ತುಗಳಿಂ ಗ್ರಹಿಸಿಕೊಂಡು ಬಂದು ಗುಡುಸಲಿನ ಬಳಿ ನೋಡಲಾ ಶೀಲವತಿಯುಂ ಕಾಣದೆ, ಹಾಹಾ ! ಮೋಸವಾದುದೇ, ನಾನೇ ಲೋಕವಂಚಕನೆಂದರಿತಿದ್ದೆನು ನನಗಿಂತಲೂ ಈ ತರುಣಿಯು ವಂಚಕಳಾದಳಲ್ಲಾ ? ಎಂದು ಚಿಂತಾಕ್ರಾಂತನಾಗಿ ಹ್ಯಾಗಾದರೂ ಅವಳಿಂ ಕಂಡುಹಿಡಿಯಬೇಕೆಂದು, ಅಲ್ಲಿಂದ ಹೊರಟು ಮತ್ತೊಂದುವಾರ್ಗವಾಗಿ ಅರಸುತ್ತಾ ಹೊರಟುಂ.

ಇತ್ತಲಾ ಶೀಲವತಿಯು ಕುಳಿತಿದ್ದ ಮಾರ್ಗವಾಗಿಯೇ ಇಬ್ಬರು ಜೀರಿಗರು ವೃಷಭಾರೂಢರಾಗಿ, ಸಾಗಿ ಬರುತ್ತಾ, ಈ ಲೋಕೋತ್ತರ ಸುಂದರಿಯುಂ ಕಂಡು ಮೋಹಪರವಶರಾಗಿ ಇವಳ ಯೋಗಕ್ಷೇಮವುಂ ವಿಚಾರಿಸುವ ವ್ಯಾಜದಿಂದ ಸಮೀಪವನ್ನೈದಿ, ನೀನಾರು, ಯೇನುಕಾರಣವಿಲಾ ಬಳಿಯೊಳು ಕುಳಿತಿರ್ಪೆ, ಎಂದಾಡ್ವ ವಾತುಗಳ ರೀತಿಯುಂ ಕೇಳುತ್ತಾ ಕಳಂತಶೀಲೆಯು ಚತುರೆಯಾದುದರಿಂದ ಅವರಭಿಪ್ರಾಯವುಂ ಕಂಡು, ಶಾ ! ಪಾಪಿನಿಧಿಯೇ ? ಒಂದು ತೊಲಗಲು ಮತ್ತೊಂದು ವಿಪತ್ಪ್ರಾಪ್ತಿಯಾಗುವದಲ್ಲಾ, ಎಂದು ಚಿಂತಾವಿಷ್ಟಳಾಗಿ ಇವರ ಸಹಾಯದಿಂದ ಆ ಕಳ್ಳನ ಭಯವೊಂದು ಪರಿಹಾರವಾಗುವದಕ್ಕೆ ಕಾರಣವಾಹುದಲ್ಲಾ, ಮುಂದೀ ದುಷ್ಟರಂ ಹ್ಯಾಗಾದರೂ ವಂಚಿಸಬಹುದೆಂದು ಹಾಗೆಯೇ ಧೈರ್ಯವುಂ ಹೊಂದಿ, ಕೇಳಿರೈ ವ್ಯಾಪಾರಾಗ್ರಗಣ್ಯರೇ ! ನನ್ನ ಗಂಡನು ದಾರಿತಪ್ಪಿ ಯತ್ತಲೋ ಪೋದನು, ನೀವು ಜೊತೆಯಾದರೆ ನಿಮ್ಮೊಂದಿಗೆ ನಿಮ್ಮ ಊರಿಗೆ ಬರುವೆನು ಎನಲವರೀರ್ವರುಂ ಸಂತೋಷಸ್ವಾಂತರಾಗುತ್ತಾ, ಈಕೆಯೊಂದಿಗೆ ತಾವೂ ನಡದು ಬರುತ್ತಾ ವಿನೋದವಾಗಿ ಸ್ವೀಚಾ ಲಾಪಗಳನ್ನಾಡ ತೊಡಗಲಾ ವಿವೇಕಶಾಲಿಯಾದ ಶೀಲವತಿಯು, ಎಲ್ಲಿ ಶ್ರೇಷ್ಠರೇ ! ನೀವಿಬ್ಬರೂ ವಿಕಕಾಲದಲ್ಲಿ ನನ್ನ ಬೈಸು

ವದೊ ಮಾರ್ಗದೊಳು, ಈ ರೀತಿಯಾಗಿ ಹಾಸ್ಯಂಗಳಾಡುವದೂ ಯುಕ್ತವಲ್ಲವು, ಸ್ತ್ರೀವಿಷಯದಲ್ಲಿ ಇಬ್ಬರು ಪುರುಷರು ಪರ್ಯಾಲೋಚಿಸದೇ ಪ್ರವರ್ತಿಸಿದರೆ, ಸುಂದೋಪ ಸುಂದರೆಂಬ ದೈತ್ಯರ ಗತಿಯನ್ನೈದುವಿರಿ, ಅದು ಹ್ಯಾಗೆನ್ನುವಿರೋ—

ಶ್ಲೋ ॥ ಏಕಸ್ಮಿನ್ಸೈ ಕಪುರುಷಾಳೂನಾಮಿಷ್ಟಾಯು ಸುಧಿಯಾಮಪಿ ॥
ಕರಸ್ಥಮೇವಬ್ರುವತೇ ಕಲಹಂನಿಧನಾವಧಿ ॥

ಒಳ್ಳೀದಾವ ಒಂದು ವಸ್ತುವಂ ಕುರಿಪು, ಇಬ್ಬರು ಬ್ಯಿಸಿದವರಾದರೇ ಅವರಿಬ್ಬರೂ ಬುದ್ಧಿವಂತರಾದರೂ ವಿರೋಧವು ಮರಣಕಾಲದ ನರಿಗೂ ಕರಗತವಾಗಿಯೇ ಇರುವದು, ಆಮದರಿಂದೀ ಭಾಗದೊಳು ಚನ್ನಾಗಿ ಯೋಚಿಸಬೇಕೆಂದು ಸಮಾಧಾನೋಕ್ತಿಗಳಂ ಹೇಳುತ್ತಾ ಬಯದೂರನಡದು ಇನ್ನು ಮುಂದೆ ನಡೆಯಲು ನನ್ನ ಕಾಲುಗಳು ಬಹಳ ಬ್ಯೋಯುತ್ತವೆ, ಎಂದು ದಾರಿಯೊಳು ಕುಳಿತು, ಎತ್ತಿನ ಮೇಲೆ ಕುಳಿತುಕೊಳ್ಳುವ ಅಭ್ಯಾಸವುಳ್ಳವು, ಇಗೋ ನನ್ನೀಯಾಭರಣವುಂ ತೆಗದುಕೊಳ್ಳಿರಿ, ಈವರ್ತಕರೊಳೊಬ್ಬರಿಲ್ಲೀ ಇದ್ದು ಮತ್ತೊಬ್ಬರು ಸಮೀಪವಡೊಳು ಕಾಂಬುವ ಗ್ರಾಮಕ್ಕೆ ಹೋಗಿ, ಈ ಯಾಭರಣವುಂ ವಿಕ್ರಯಿಸಿ, ಒಂದು ಶಕಟವುಂ ತಂದರೆ ಈ ಯೆತ್ತುಗಳಂ ಕಟ್ಟಿಕೊಂಡು ಅದರೊಳೆಲ್ಲರೂ ಕುಳಿತು, ಸುಖವಾಗಿ ಪ್ರಯಾಣವುಂ ಮಾಡಬಹುದೆಂದು ಅಂತಃ ಕರಣವಾಗಿ ಬಹಿಃ ಇವರಿಗೆ ಹಿತತೋರುವಂತೊರೆಯುವ ಈ ಪಣ್ಯಾಣಿಯ ಮೋಸತಂತ್ರವನರಿಯದೆ ಈವರ್ತಕರೂ ಸೇರಿಹೋಗಿ, ಆ ಆಭರಣವುಂ ಮಾರುವೇಕೆಂದು ಯೋಚಿಸಿ, ತಮ್ಮಲ್ಲಿನ ಸಾಮಾನುಗಳನೆಲ್ಲವುಂ ಅಕೆಯೆಡೆಯೊಳಿರಿಸಿ, ಇವಳಾಡುವ ಮಾತುಗಳಿಂದಲೂ ಇವಳ ಮೇಲಿನ ಮೋಹದಿಂದಲೂ ಭ್ರಾಂತರಾಗಿ ಆಹಾರಾಶೆಯಿಂದ ಇಲಿಗಳು ಕಿಡಿಯೊಳು ಬಿಲುಕಿಕೊಂಡ ತೆರದೊಳು ಮೋಹವಶಬದ್ಧರಾಗಿ ತಮ್ಮ ವ್ಯಷಭಗಳನೇರಿ ಆ ಅಡವಿಪೆಗೊಂಡು ಬೀಯುಣ ಹಳ್ಳಿಯುಂ ಸಾರಿ ಅಲ್ಲಿನ ವರ್ತಕರಿಗೀ ಯಾಭರಣವಂ ಮಾರಲು, ತೋರಿಸುತ್ತಾ ಬರೆ, ಆ ಗ್ರಾಮದ ವರ್ತಕರೊಳೊಬ್ಬನಂ ಈ ಯಾಭರಣ ಮಾದರೋ ನವರತ್ನಮಯವಾಗಿಯೂ ಮಹಾರಾಜರು ಧರಿಸೆ ಯೋಗ್ಯವಾಗಿರುವದು, ಇವರಾಪರೆ ಈ ವ್ಯಾಪಾರ ಮಾಡಲು ಅರುಹರಾದವರೆಂದು ಕಾಂಬುವದಿಲ್ಲ, ಈ ಭಾಗದೊಳೇನೋ ಅನುಮಾನ ತೋರುವದೆಂದು ಆ ಆಭರಣದೊಂದಿಗೆ ಅವರೀರ್ವರಂ ಆ ಗ್ರಾಮದ ಕೊತ್ತವಾಲರ ಬಳಿಗೆ ಕರದೊಯ್ದು ಬಿಟ್ಟಂ.

ಈ ಬೇರಿಗರು ಹೊರಟುಹೋದ ಸ್ವಲ್ಪಹೊತ್ತಿನಮೇಲೆ ಆ ಶೀಲವತಿಯು ಅವರ ವಸ್ತುಗಳಂ ತಾಹೊತ್ತುಕೊಂಡು, ಬೇರೆ ಮಾರ್ಗದೊಳು ಹೊರಟು ಚೋರನಿಗೂ ವರ್ತಕರಿಗೂ ಮೋಸವಾಡಿ ಬಂದಿರುವೆನು, ಅವರು ನನ್ನಂ ಮತ್ತೆ ಕಂಡರೆ ನನ್ನ ಗತಿ ಯೇನಾಗುವದೋ ಎಂದು ಭೀತಿಗೊಳ್ಳುತಾ ಹೊರಟು ಬರುತ್ತಿದ್ದಳು.

ಈ ವರ್ತಕರಿಬ್ಬರೂ ಮೂರು ದಿನಗಳವರೆಗೂ ಅಬಳಿ ಪೇಚಾಡಿ ವಡಿನೆಯಂ ಮಾರಲು ಸಂದರ್ಭಿಸದೇ ದಾರಿಯೊಳು ಬಂದು ಶೀಲವತಿಯಂ ನೋಡಲು ಕಾಣಿಸದೇ ಹೋದಕಾರಣ ಅಯ್ಯೋ ಮೋಸಹೋದೆವಲ್ಲಾ ಅವಳೇನಾದಳೋ ಹ್ಯಾಗಾದರೂ ಅವಳಂ ಕಂಡು ಹಿಡಿಯುವೀಕೆಂದು ಹುಡುಕುತ್ತಾ ಮತ್ತೊಂದುಮಾರ್ಗವಾಗಿ ಹೊರಟುಹೋದರು.

ಇತ್ತ ಭೀತಳಾಗಿ ಬರುತಿರ್ದ ಶೀಲವತಿಯು ಸ್ವಲ್ಪದೂರ ವಿಾಪರಿಯೊಳು ಯೋಚಿಸುತ್ತ ಬರುತಿರೆ ಅಶ್ವಾರೂಢನಾಗಿ ಆಯುಧಪಾಣಿಯಾದ ಒಬ್ಬ ನ್ಯೋಚ ರಾವ್ತನು ಅದೇಮಾರ್ಗವಾಗಿ ಬರುತ್ತಾ, ದೂರದಿಂದೀ ಸುಂದರಿಯಂ ಕಂಡು ಅಲ್ಲಿಂದಾ ಕುದುರೆಯಂ, ಮಹಾ ವೇಗವಾಗಿ ದವಡಾಯಿಸಿಕೊಂಡು ಬಂದು ಸವಿಾಪಗತನಾಗಿ ರೂಪಲಾವಣ್ಯಾದಿಗಳಂ ನೋಡಿ, ಭ್ರಾಂತನಾಗಿ ! ಎಲ್ಲಿಗೆಹೋಗುವಿ ? ಎಂದು ಮಾತಾಡಿಸಲು, ಇವನಿಗೆ ಪ್ರತ್ಯುತ್ತರವಂ ಹೇಳದೆ ಮೆಲ್ಲಮೆಲ್ಲನೆ ನಡೆದು ಪೋಗುತ್ತಿರುವೀಕೆಯಂ ಬಾರಿಬಾರಿಗೂ ನೋಡಿನೋಡಿ ದಣಿಯದೆ ಕಾಮಬಾಣವೀಡಿತನಾಗಿ ಎಲೆ ಹೆಂಗಸೆ ! ನೀನು ಮಾತಾಡದಿದ್ದರೆ ಇಗೋ ಇತ ನೋಡು, ಈ ಕೃಪಾಣದಿಂದ ನಿನ್ನ ಶಿರವಂ ತರಿದುಬಿಡುವೆನೆಂದು ಘಟ್ಟಿಯಾಗಿ ಘರ್ಜಿಸಲು, ನೋಡುತ್ತಾ ಶೀಲವತಿಯು ಭಯವಂ ತಾಳಿ ಉಪಾಯವಾಗಿ ಈ ದುಷ್ಟನಂ ನಿಗ್ರಹಿಸದಿದ್ದೊಡೆ ಇವನೇ ನನಗೆ ಮೃತ್ಯುವಾಗುವನೆಂದು ಯೋಚಿಸಿ, ಎಲ್ಲಿರಾಹುತ ಶ್ರೇಷ್ಠನೇ ! ನಿನ್ನನ್ನೇ ಹುಡುಕುತ್ತಾ ಬಂದಿರುವೆನು ನಿನ್ನ ಹೆಸರು ಬಾಯೊಳೇ ಇರುವದು ತಾಳು ಹೇಳುತ್ತೇನೆ. ವಿದ್ಯಾಹೀನನಾದಕಾರಣ ಇವನಿಗೆ ಆಪ್ಪರಲ್ಲಿಯೇ ಈಕೆಯ ಮಾತಿನೊಳು ನಂಬಿಕೆಹುಟ್ಟಿ ಸಮಸ್ತ ಪುಷ್ಪಮಕರಂದಾಸ್ವಾನ ಶಕ್ತಿಯು ತನಗಿಹುದುದೆಂದು ಮಹದಹಂಕಾರದಿಂದ ದಾರಡಿಯು ಜಂಘಕ ಕುಸುಮ ರಸಾಸ್ವಾದನಕ್ಕೆಳಸಿ ಯೆರಗಿದಂತಾ ಸಾದ್ವೀಮಣಿಯ ಮೇಲ್ವಾಯ್ದು ಕುಚಗ್ರಹಣಮಂ ಮಾಡಲು ಯತ್ನಿಸೆ ಹಾ ಮುಂದೇನುಗತಿ ಕೆಲಸಕೆಟ್ಟಿತಲ್ಲಾ ಎಂದು ಯೋಚಿಸಿ, ಹಾಹಾ ಮುಟ್ಟದಿರು, ಮುಟ್ಟದಿರು, ಹಿಂದೆಡೆಯೋಳು ನಮ್ಮ ಜನರು ಬರುತ್ತಿರುವರು ಕಂಡರೆ ಅಪಾಯವು ಸಂಭವಿಸುವದು ಈಗ ಸುಮ್ಮನಿರು, ನಾನೇ ನಿನ್ನ ಜೊತೆಯೊಳು ಬರುವೆನು, ನಿಮ್ಮೂರೊಳು ನಾವೀರ್ವರೂ ಸೇರಿ ಪರಸ್ಪರವಿಶ್ವಾಸಾತಿಶಯದಿಂದ ಸುಖಿಗೊಳ್ಳುವ ಎಂದುಸುರೆ, ಆ ಅವಿವೇಕ ಶಿಖಾಮಣಿಯು ಈಕೆಯ ಕಪಟೋಪಾಯಂ ನಿಜವಾದುದೆಂದು ನಂಬಿ, ಆ ತೇಜೀಯ ಮೇಲಾಕೆಯನ್ನೇರಿಸಿ ಕಡಿವಾಣಕ್ಕೆ ರಶ್ಮಿಯಂ ಕಟ್ಟಿ ತನ್ನ ಕರದೊಳಿದಂ ಬಿಡಿದುಕೊಂಡು ಸೇವಕನಂತೆ ನಡೆದು ಬಹುದೂರ ಮಾರ್ಗಂ ನಡೆದು ಬರೆ ಆಯಾಸವಾಗಲು ಪರಿಹಾರಾರ್ಥವಾಗಿ ಬಟ್ಟೆಯಬಳಿಯೊಳಿಹ ಸೇರಾಲಹಸು

ರದ ನೆಳಲಂಸಾರಿ, ಕುದುರೆಯಿಂದಾಕೆಯನಿಳುಹಿಸಿ, ತಾನೂ ವಿಶ್ರಾಂತಿಗೋಸ್ಕರ ಆ ನೆಳಲೊಳು ಕುಣಿತುಕೊಂಡನು.

ಇತ್ತಲಾ ಕೌಶಾಂಬೀಪಟ್ಟಣದೊಳು ಕರಾಳರಾಯನಾಜ್ಞಾನುಸಾರಮಾಗಿ ಶೂಲಕ್ಕೆ ಹಾಕಲು ಕರದುಕ್ಕೊಂಪುಹೋಗುತ್ತಿದ್ದ ತನ್ನ ಕಾಂತನ ಗತಿ ಯೇನಾಗುವದೋ ಎಂದು ಚಂದ್ರಶಾಲೆಯಂ ಹತ್ತಿನೋಡುತ್ತಿದ್ದ ಸುದರ್ಶನೆಯು ತನ್ನ ಪತಿಯನ್ನ ವಿನುಮಾಡುವರೋ ನಿಜವಾಗಿ ಶೀಕ್ಷೆಗೆ ಗುರಿಯಾಗುವನೇ? ಒಂದುವೇಳೆ ಹಾಗಾದರೆ ನಾನೀಯುಸ್ಪರಿಗೆಯಿಂದ ಬಿದ್ದು ಪ್ರಾಣತ್ಯಾಗವಂ ಮಾಡುವದೇ ನಿಜವೆಂದು ಸಂತಾಪಯುಕ್ತಳಾಗಿ ಹಂಬಲಿಸುತ್ತಿರಲು, ಯಮದೂತರಂತೆ ಸಂಗಡ ಬರುತ್ತಿದ್ದ ರಾಜಭಟರೊಂದಿಗೆ ಸೇರಿ ಬರುತ್ತಿದ್ದ ಉದಯಭಾನುರಾಯನು ನಾನು ಇಲ್ಲಿಗೆ ಬರುವಾಗ್ಯೆ ಸ್ವಲ್ಪ ಧನಮಂತಂದಿದ್ದೆನು ಅದನ್ನು ನಿಮಗಾದರೂ ಕೊಡುವೆನು, ಯಾಕೆ ವ್ಯರ್ಥವಾಗಿ ಇಟ್ಟೆಡೆಯೊಳೇ ಹಾಳಾಗಬೇಕು, ಎಂದು ಅವರೊಳು ಹೇಳುತ್ತಾ ಇದೊ ಈ ಆಲದಮರದೊಳು ಇಟ್ಟಿರುವೆನು, ಈ ಮಾರ್ಗದೊಳು ಬನ್ನಿ ಎಂದು ಸೇಳಲು, ಆಭಟರು ದ್ರವ್ಯದಾಸೆಯೊಳು ಅದರಂತೆ ಒಪ್ಪಿ ಈ ರಾಯನೊಪನೆ ಬರಲು ವಟವೃಕ್ಷದಬಳಿಗ್ಯೆದು, ಭಟರಂ ಕೆಳಗೆ ನಿಲ್ಲಿಸಿ ಉದಯಭಾನುರಾಯನು ಮರವನ್ನೇರಿ ಕೀಲ್ಕುದುರೆಯನ್ನು ತೆಗದು ಅದರ ಹೊಟ್ಟೆಯೊಳಿರಿಸಿದ್ದ ವರಹಗಳೊಳೊಂದು ಬಗುಸೆಯಂತೆಗದು ಕೆಳಗೆ ಚಲ್ಲಲು, ಈ ರಾಜಭಟರದನ್ನಾರಿಸಿಕೊಳ್ಳುವದರೊಳಗೆ ಕೀಲ್ಕುದುರೆಯಮೇಲೆ ಕುಳಿತು, ಪುನಹ ಕೆಲವು ವರಹಗಳಂ ತೆಗದು ನೆಲದೊಳಿರಚಿ ಕುದುರೆಯ ಕಿವಿಹಿಂಡಲು ಆ ವಾಜಿಯು ಆಕಾಶವಾರ್ಗಕ್ಕೆ ಹಾರಿಹೋಗುತ್ತಿರೆ, ಎಲ್ಯೆ ರಾಜಭಟರೇ ಈವಾರ್ತೆಯಂ ನಿಮ್ಮರಾಯರಿಗೆ ಅರುಹಿರಿ, ಎಂದು ಘಟ್ಟಿಯಾಗಿ ಕೂಗಿಹೇಳುತ್ತಾ ಈಸುದರ್ಶನೆಯಸೌಧಮಾರ್ಗವಾಗಿಬರುತ್ತಾ ಮೇಲೆನಿಂತು, ತನ್ನ ಪತಿಯೇನಾದನೋ ಎಂದು ಹಂಬಲಿಸುತ್ತಿರುವ ರಾಜನೆಂದನೆಯಂ ಕಂಡು ನಿನ್ನ ಸಹವಾಸವೇ ಸಾಕು ನಾನು ಹೋಗಿಬರುವೆನೆಂದು ಕೂಗಿಹೇಳುವ ತನ್ನ ಪತಿಯಂ ಕಂಡು ಹರುಷ ಸ್ವಾಂತಳಾಗಿ, ಎಲ್ಯೆ ಪ್ರಾಣಕಾಂತನೇ ! ನೀನಾಮಾತ ನನ್ನೊಡನಾಡಲಾಗದು ನಿನ್ನಗತಿ ವಿನಾಯಿತೋ ಎಂದು ಕಳವಳಪಡುತ್ತ ಈ ಪ್ರಾಸಾದಾಗ್ರಮಂಸಾರಿ ಇಲ್ಲಿಂದ ಕೆಳಗೆಬಿದ್ದು ಪ್ರಾಣತ್ಯಾಗಮಂ ಮಾಡಕೊಳ್ಳಬೇಕೆಂದಿರುವಲ್ಲಿಯೇ ಸುಕ್ಷೇಮಿಯಾದ ನಿನ್ನ ಮುಖಚಂದ್ರನಂನೋಡಿದೆನು, ಇಲ್ಲಿ ನಾನೊಂದು ನಿಮಿಷವಾದರೂ ನಿನ್ನನ್ನಗಲಿರಲಾರೆನು ನಿನ್ನ ಜೊತೆಯೊಳು ಹೀಗೆಯೇ ಹೊರಟುಬರುವೆನು, ಎಂದತಿವಿನಯುಳಾಗಿ ಪ್ರಾರ್ಥಿಸುತ್ತಿರುವ ಗರ್ಭವತಿಯಾದ ಕಾಂತಾಮಣಿಯೊಳು ಕನಿಕರಗೊಂಡು ಕೀಲ್ಕುದುರೆಯಂ ಆ ಪ್ರಾಸಾದಾಗ್ರಕ್ಕೆಳುಹಿ, ಆಕೆಯನ್ನೆತ್ತಿ ತನ್ನ ಮುಂಭಾಗದೊಳು ಆ ಕೀಲ್ಕುದುರೆಯಮೇಲೆ ಕುಳ್ಳಿರಿಸಿಕೊಂಡು ಯಥಾಪ್ರಕಾರವಾಗಿ ಕುದುರೆಯಂ ಕೀಲುತಿರುಗಿಸಲು ಆಕಾಶಮಾರ್ಗಮಂ ಹಾದುಬರುತ್ತಲಿರ್ದ್ದು.

ಅಷ್ಟರೊಳಗಾಚಾರರಮುಖೇನ ಈ ಸುದ್ದಿಯನ್ನೆಲ್ಲಮುಂ ಕೇಳಿದ ಕರಾಳರಾಯನು, ಅಯ್ಯೋ! ನಾನು ಬಹುಪಾಪಿಯು, ಬುದ್ಧಿಹೀನನು, ಅಜ್ಞಾನಿಯೂ ನ್ಯಾಯನ್ಯಾಯಗಳು ವಿಮರ್ಶೆಮಾಡದ ನೀಚನೂ ಆದೆನಲ್ಲಾ ಅಪುರುಷನು ಎಂಥಾಮಹನೀಯ್ಯನೋವಿನೋ ಎಂದುಬಹುಚಿಂತಾಂಬುಧಿಮಗ್ನನಾಗಿ ಕಣ್ಣೊಳಾದರೂ ಆತನಂ ಇನ್ನೊಂದಾವರ್ತಿಯಾದರೂ ನೋಡೋಣವೆಂದು ತನ್ನ ಪ್ರಾಸಾದಾಗ್ರಮಂಹತ್ತಿ, ಆಕಾಶಮಾರ್ಗದೊಳು ಈ ಉದಯಭಾನುರಾಯನ ಸುಳಿವನ್ನಾರೈಸುತ್ತಾ ನೋಡುತ್ತಿರಲು, ಆಮಾರ್ಗವಾಗಿ ಸುದರ್ಶನೆಯೊಪನೆ ಕುದುರೆಯನ್ನೇರಿ ಬರುತ್ತಿರುವವನಂ ಕಂಡು, ಸ್ವಾಮಿ ಮಹನೀಯರೆ ನಿಮ್ಮ ಮುಖಮಾತಿಶಯವನ್ನರಿಯದೆ ಸಾಮಾನ್ಯ ಮನುಜನೆಂದು ಅಜ್ಞಾನಪೂರ್ವಕಮಾಗಿ ನಾಂಮಾಡಿದ ಅಪರಾಧಮುಂ ಕ್ಷಮಿಸಬೇಕು ಈಚಿಗೆ ಚಾರರ ಮುಖಾಂತರವಾಗಿ ನಿಮ್ಮ ಮಹಿಮೆಯನ್ನೆಲ್ಲಮುಂ ತಿಳಿದುಕೊಂಡೆನು. ಈಗ ನನ್ನ ವಿಜ್ಞಾಪನೆಯುಂ ಲಾಲಿಸಬೇಕು, ನನ್ನೊಳು ಕನಿಕರಮಾಂತು ದಯಮಾಡಿದರೆ ಮಹಮುಖ್ಯಾಹವೆಂಬದನೆ ಮದುವೆಯುಂ ಮಾಡಿಕೊಡುವೆನು, ನಂತರ ತಮ್ಮ ಪತ್ನಿಯನ್ನೊಡಗೂಡಿ ಸುಖವಾಗಿ ತೆರಳಬಹುದು ಎಂದು ವಿನಯವಾಗಿ ಬೇಡಿಕೊಳ್ಳುತ್ತಿರುವಾ ರಾಯನ ವಾಕ್ಯಗಳಂಕೇಳಿ ನಿಮ್ಮ ಉಪಚಾರೋಕ್ತಿಗಳುಸಾಕು, ನಾವು ಯಥಾವಿಧಮಾದ ಗಾಂಧರ್ವವಿವಾಹವಂ ಮಾಡಿಕೊಂಡಿರುವೆವು, ಎಂದುಹೇಳುತ್ತಿರಲಾ ರಾಜನಂದನೆಯು ಅಪ್ಪಾ ಜಿಯವರೇ ಇಗೋ ನಮಸ್ಕರಿಸುವೆನು, ನಾನು ಯುಕ್ತನಾದ ಪತಿಯಂಸೇರಿ, ಸುಖಿಯಾಗಿ ಪತಿಮಂದಿರಮಂ ಸಾರುವೆನೆಂದು ಹೇಳಿದ್ದಾಗಿ ತಾಯಿಯವರಿಗೂ ಹೇಳಿ ಎಂದು ಸ್ಪಷ್ಟವಾಗಿ ಕೂಗಿಹೇಳುತ್ತಾ ಕಾಂತನೊಳು ಸರಸೋಕ್ತಿಗಳನ್ನಾಡುತ್ತಾ ಹೊರಟು ಹನ್ನೆರಡುಗಾವ್ರದ ದೂರದವರೆಗೂ ಬರಲು, ಸುಕುಮಾರಿಯೂ, ಗರ್ಭಿಣಿಯೂ, ಅಪ್ಪರಿಂದ ತಪಿಸುವ ಚಂಡರಶ್ಮಿಯ ಆತಪವಂ ತಾಳಲಾರದೆ ಬಾಯಾರಿದವಳಾಗಿ ಪತಿಯನ್ನು ಕುರಿತು, ಎಲೈಪ್ರಾಣೇಶನೆ ನೀರಡಿಕೆಯು ಶಾನೇ ಬಾಧೆಗೊಳಿಸುತ್ತಿಪ್ಪುದು. ಶೀತಲಮಾದ ವಾರಿಯಂ ತಂದು ಕೊಟ್ಟು ನನ್ನಂ ಸುಖಗೊಳಿಸೆಂದು ಬೇಡುವ ಕಾಂತೆಯ ಆಶಯಮುಂ ನೆರವೇರಿಸೆಲೋಸುಗ ಆ ಕುದುರೆಯುಂ ಭೂಮಿಗಿಳುಹಿ ಛಾಯಾವೃತನೂಾದ ವಟವೃಕ್ಷದ ನೆಳಲಂಸಾರಿ, ಆಬಳಿಯಾಣ್ಮಣಿಯಂಕುಳ್ಳಿರಿಸಿ ನೀರಂತಪಕುತ್ತಾ ಹೋಗಿ ಎಲ್ಲಿಯೂ ಕಾಣದೆ ಒಂದು ಶುಷ್ಕಸರೋವರದಬಳಿಗೈದಿ ದೂರದೊಳುಗೋಚರವಾಗದಿರ್ದಾನೀರಂಕಂಡು ಬಹುಕಾಲವಾದುದೆಂದು ವೇಗವಾಗಿ ಬರುತ್ತಾ ಅಲ್ಲಿನ ಉಸುಬಲಂಕಾಣದೆ ಅದರೊಳು ಕಾಲಿಡೆ ಜಾರು ಕಳ್ಳುಸುಬುಲಾದ್ದರಿಂದ ಕಂಠದವರೆಗೂ ಇಳಿದಿದ್ದು, ಮುಳುಗಿಹೋಗುವಷ್ಟರೊಳು ಬಳಿಯಲಿದ್ದಬಳ್ಳಿಗಳಂಪಿಡಿದು, ತೀರಾಮುಳುಗಿಹೋಗದೆ ದಾರಿಯಲ್ಲಿ ಸಂಚರಿಸುವವರಂ ತನ್ನನ್ನು ತೆಗಿಯಲೋಸುಗಂ ನಿರೀಕ್ಷಿಸುತಿರ್ದಂ

ಇತ್ತಲಾ ಮರದಡಿಯೊಳು ಕುಳಿತಿದ್ದಾಸುದರ್ಶನೆಯು ಎಷ್ಟುಹೊತ್ತು ನಿರೀ

ಕ್ಷೆಶಿದರೂ ಪತಿಯು ಬರುವಿಕೆಯೇ ಕಾಣದೇ ಹೋಗಲು ಏನುಕಾರಣವಿಪರಿಯಂತುಂ ಬಾರದಿರುವನೋ ಎಂದು ಚಿಂತಿಸುತ್ತಾ ಇದು ಪರಪುರುಷರು ಸುಳಿದಾಡುವ ರಾಜ ಮಾರ್ಗವು, ನಾನಾದರೆ ಸುಂದರಿಯಾಗಿಯೂ ತರುಣಿಯಾಗಿಯೂ ಇರುವೆನು, ಸಹಾ ಯಜನರಹಿತೆಯಾಗಿ ಒಬ್ಬಳೇ ಈಬಳಿ ಕುಳಿತಿದ್ದರೆ ಕಾಮುಕರು ಮೇಲ್ಬಾಯ್ದು ಪಾತಿ ವ್ರತ್ಯವುಂ ಭಂಗಗೊಳಿಸಿದರೆ ನಂತರ ನಾನು ಬದುಕಿದೂ ಪ್ರಯೋಜನವಿಲ್ಲ. ಆದು ದರಿಂದಿಲ್ಲಿರುವದು ಯುಕ್ತವಲ್ಲವು ಪತಿಯನ್ನು ಹುಡಿಕಿಕೊಂಡು ಹೋಗುವೆನೆಂದು ಆ ಕೀಲ್ಬುದುರೆಯನ್ನೇರಿ, ಬಲಗಿವಿಯಂತಿರುವಲು ಅದು ಯಾವಮುಖವಾಗಿ ತಿರು ಗಿಸಿ ನಿಲ್ಲಿಸಿತ್ತೋ ಅದೇಮುಖನಾಗಿ ಸೇಲಕ್ಕೆಸಾರಿ, ತನ್ನ ಕಾಂತನು ನೀರುತರ್ಪು ವುದಕ್ಕಾಗಿ ಹೋದದಾರಿಯಂತೊರೆದು ಮತ್ತೊಂದು ಮಾರ್ಗವಾಗಿ ಹೊರಟುಹೋ ದುದು. ಪತಿಯು ಹೋದದಾರಿಗೆತಿರುಗಿವಲು ತಿಳಿಯುವೇಹೋದ್ದರಿಂದ ಅತ್ಯಂತವಾಗಿ ದುಃಖಿಸುತ್ತಾ ಕುದುರೆ ಹೋದಂತೆಯೇ ಹೊರಟುಹೋದಳು. ಪತಿಯೊಂದುದಾರಿಯಾ ದನುಸತಿಯೊಂದುದಾರಿಯಾದಳು ಎಂಬಲ್ಲಿಗೆಎಲ್ಬಿಮಹಾರಾಜನೇ ಒಂದರಾಮವನ್ನಅ ತಿಕ್ರಮಿಸಿದುದು ವಿಶ್ರಾಂತಿಯಂಬೇಪುನೆನೆಂದು ಕಾಂಪಪಟದ ವಾದ ಕೋಕಿಲೆಯು ವಿಕ್ರಮರಾಯಂಗರುಹಿ ಆತನಿಂದಾಜ್ಞೆಯಂಹೊಂದಿ ವಿಸ್ರಾಂತಿಯಂ ಪೊಂದಿತೆಂಬ ಲ್ಲಿಗೆ ಸೌಂದರ್ಯಾದ್ಭುತರುಚಿರಚಿತ್ರ ಬೃಹತ್ಕಥಾಮಂಜರೀವಚನೆ ರಜನೆಯೊಳು ಪ ದ್ಮಾವತೀ ಪರಾಜಿತವೆಂಬ ಮೊದಲನೇಭಾಗದ ಮೂರನೇಯಾಮದ ಕಥಾ ಸಂಪೂರ ಮಾದುದು.

ನಾಲ್ಕನೇಯಾಮದಲ್ಲಿ ತೆರೆಯು ಹಂಸಪಕ್ಷಿಯು ಹೇಳುವ ಕಥೆ.

ತದನಂತರಾ ವಿಕ್ರಮಾದಿತ್ಯರಾಯನು ತೆರೆಯು ಹಚ್ಚಡಪೊಳು ಚಿತ್ರಿತವಾದ ಹಂಸಪಕ್ಷಿಯನ್ನು ಕುರಿತು ಎಲೈ ಪಕ್ಷಿಶ್ರೇಷ್ಠನೇ ಬೆಳಕರಿಯುವವರೆಗೂ ನೀನೊಂದು ಪರಮಚಿತ್ರತರವಾದ ಕಥೆಯಂ ಹೇಳಿನೆ ಭೀತಾಳನು ಯಥಾಪ್ರಕಾರವಾಗಿಹಂಸಪಕ್ಷಿ ಯ ರೂಪವಂತಾಳಿ ಕಥೆಯಂ ಹೇಳಲಾರಂಭಿಸಿ, ಎಲ್ಲೆ ವಿಕ್ರಮಾರ್ಕಭೂಮಿಪಾಂದ್ರ ನೇಲಾಲಿಸು. ಒಂದುಪಟ್ಟಣದೊಳುಒಬ್ಬ ಸನ್ಯಾಸಿಇದ್ದನೆನೆ, ಪದ್ಮಾವತಿಯು ಬಹುದುಃಖಾಂತರಂಗಳಾಗಿ ಇಬ್ಬರು ದಂಪತಿಗಳಲ್ಲಿ ಒಬ್ಬೊಬ್ಬರು ಒಂದೊಂದುಮಾ ರ್ಗವಾಗಿ ವೇಧೆಯೊಳು ಅನಾಥರಾಗಿ ಅಲಿಯುತ್ತಲಿಹುದಂ ಪೂರೈಸದೆ ಬೇರೊಂದು ಕಥೆಯಂ ಪೇಳ್ವೊಡೆ ಪಾಪವಹವಲ್ಲವೆ !

ಶ್ಲೋ॥ ನಿದ್ರಾಭಂಗಃಕಥಾಚ್ಛೇದೋ ದಂಪತ್ಯೋಃ ಪ್ರೀತಿಭೇದನಂ ।
ಮಿತ್ರಭೇದಸ್ತಥಾವಿದ್ಯಾ ವಿಘ್ನಃಪರಮಪಾಪಂ ॥

ನಿದ್ರಾಭಂಗವಂ ಮಾಡುವದೂ, ಕಥೆಗಳಂಹೇಳುತ್ತಾ ಅರ್ಧದಲ್ಲಿ ನಿಲ್ಲಿಸು ವದೂ, ಪರಮಸ್ನೇಹದೊಳಿರುವ ದಂಪತಿಗಳ ಸ್ನೇಹತೆಯನ್ನಗಲಿಸುವದೂ, ಸ್ನೇ ಹಿತರಿಗೆ ಭೇದವನ್ನುಂಟುಮಾಡುವದೂ, ವಿದ್ಯಾಭ್ಯಾಸಕ್ಕೆ ವಿಘ್ನಮಂ ಗೊಳಿಪುದೂ

ಪಾಡಬೇಕೆಂದು ಬೇಡುವಾ ಕಾಂತಾಮಣಿಯಂ ನೋಡಿ ಕನಿಕರಮಾಂತು ತನ್ನೆಡೆಯೊಳಿಹ ಶೀನೀರಂ ಕೊಡೆ ಅದನ್ನು ಆಕೆ ಕುಡಿದು ವಿಶ್ರಾಂತಳಾದ ಬಳಿಕ ತಾಯೇ ನೀನಾರಮ್ಮಾ ? ಎಂದು ವಿನಯೋಕ್ತಿಗಳಿಂ ಮಾತಾಡಿಸಲು ಗದ್ಗದ ಕಂಠಳಾಗಿ ಕಣ್ನೀರಂ ಸುರಿಸುತ್ತಾ, ಎಲೌ ತಾಯಿಯೇ ನನಗೆ ಸಂಭವಿಸಿದ ದುರ್ದೆಶೆಯೇ ನೆಂದು ಹೇಳಲಿ, ಎಂದು ಬಿಕ್ಕಿಬಿಕ್ಕಿ ಅಳುತ್ತಾ ಹಾಗೆಯೇ ಸಮಾಧಾನಮಂ ತಂದುಕೊಂಡು, ನನ್ನ ಹೆಸರು ಸುದರ್ಶನೆಯು ಕೌಶಾಂಬೀ ಪಟ್ಟಣದ ಧೊರೆಯಾದ ಕರಾಳರಾಯನ ಮಗಳಾಗಿಹೆನು. ತೌರುಮನೆಯೊಳಿರುತ್ತಾ ನುಹತ್ತೊಸ್ಸಿಖ್ಯಾನು ಭವಂಗಳನ್ನನುಭವಿಸುತ್ತಾ, ಇರುವ ಕಾಲದೊಳು ಕರವೀರಪುರದ ಭೂಪಾಲ ದೇವಸೇನರಾಯನದ್ವಿತೀಯ ಕುಮಾರಕನಾದ ಉದಯ ಭಾನುರಾಯನು ದೇಶಾಂತರಗತನಾಗಿರುವ ತನ್ನ ಅಣ್ಣನಂ ಅತ್ತಿಗೆಯಂ ಸಹಾ ಹುಡುಕಲೋಸುಗಹೊರಟು ಈ ಕೇಲ್ಮುದರೆಯನ್ನೇರಿ ಗಗನ ಮಾರ್ಗದೊಳು ಬರುತ್ತಲಿರಲು, ಪ್ರಾಸಾದಾಗ್ರದೊಳು ವಿನೋದಮಾಗಿ ವಿಹರಿಸುತಿರ್ದನ್ನ ಕಣ್ಗೆ ಮುಂಗಳಮಾಗಿ ಕಾಣಬರಲಾತನ ರೂಪಾತಿಶಯಂ ಕಂಡು ಮೋಹಿತಳಾಗಿ ಆತನೊಳಿರುವ ಶೌರ್ಯೋದಾರ್ಯ ಸ್ಥೈರ್ಯ ವಿನಯನಯಾವಿ ಸದ್ಗುಣಗಳಿಗೆ ಮೆಚ್ಚಿ ಗಾಂಧರ್ವ ವಿವಾಹಮಾಗಿ ಆತನಂ ಕೈವಿಡಿದೆನು. ಆತನನ್ನಗಲಲರಲು ಮನಸ್ಸಿಲ್ಲದೆ ಆತನನ್ನೊಡಗೊಂಡು ಜೊತೆಯೊಳು ಬರುತ್ತಾ ಮಾರ್ಗಾಯಾಸವಿಂದ ಬಾಯಾರಿ ನೀರು ತರುವೆನೆಂದು ಹೋದವನು ಈವರಿವಿಗೂ ದೊರಿಯದೆ, ಮನೋವೇದೆಯುಂಗೊಳಿಸಿಪ್ಪರ್ಕಂ. ಅದಂಸಹಿಸಲಾರೆನೆಂಬುದನ್ನೂ, ನನ್ನ ತಾಯಿಯೊಲು ಈಗನೀಂದೊರತುದು ಮನಸ್ಸಿಗೆ ತುಂಬಾಧೈರ್ಯವಾದುದೆಂತಲೂಪೇಳೆ, ಕೇಳುತಲಾಶೀಲವತಿಯು, ಹಾ ಎಂದಾಕೆಯಂತೆಗದು ಬಿಗಿದಪ್ಪಿ ಅಮ್ಮಾ ನೀನೆನಗೆ ವಾರಗಿತ್ತಿಯು ಉದಯಭಾನುರಾಯನು ಎನ್ನ ಮೈದುನನು ನಾನೇ ಆತನ ಅಣ್ಣನಾದ ಸುಭಾನುರಾಯನ ಹೆಂಡತಿಯಾದ ಶೀಲವತಿಯೆಂಬುವಳು ನಮ್ಮಿಬ್ಬರಗತಿಯೂ ಈಗ ಒಂದೇ ಆಯಿತೆಂದು ಪರಸ್ಪರವಾಗಿ ಆಲಿಂಗಿಸಿಕೊಳ್ಳುತ್ತಾ ಪ್ರಲಾಪಿಸಿದವರಾಗಿ ಹಾಗೆಯೇ ಸಮಾಧಾನಮಂ ತಾಳಿ ನಾವಿಬ್ಬರೂ ಒಂದಾಗಿ ಸೇರಿದ್ದು ದೈವಯೋಗವೆಂದು ಪರಸ್ಪರ ಸಾಂತ್ವ ಹರುಷಿತರಾಗಿ ಕುಳಿತುಕೊಂಡು ಇರುವಾಗ ಇವರು ಕುಳಿತುಕ್ಕೊಂಡಿದ್ದ ವಟವೃಕ್ಷದೊಳು ಹಾಲು ಹಕ್ಕಿಗಳಿರಡು ಮಾತನಾಡಿಕೊಳ್ಳುತ್ತಿರುವದನ್ನು ಪಕ್ಷಿಭಾಷಾ ಭಿಜ್ಞಳಾದ ಶೀಲವತಿಯದಂಕೇಳಿ, ಅಮಂದಾನಂದ ತುಂದಿಲ ಸ್ವಾಂತಳಾಗಿ ವಾರಗಿತ್ತಿಯಾದ ಸುಪ್ರಶನೆಯಂ ಕುರಿತು ಎಲೌ ತಂಗಿಯೇ ನಾವೀರ್ವರೂ ನಮ್ಮ ಪ್ರಾಣಕಾಂತರಂಸೇರಿ ಮುನ್ನಿನೊಲು ಸಕಲಸುಖಗಳಂ ಹೊಂದುವೆವು. ಎಂದು ಈ ಗಿಡದೊಳಗಣ ಹಾಲು ಹಕ್ಕಿಗಳು ಮಾತಾಡಿಕೊಳ್ಳುತ್ತಲಿವೆ, ನಮ್ಮ ಪತಿವ್ರತಾಧರ್ಮಗಳೇ ನಮ್ಮಂ ಪರಿಪಾಲಿಸುವದು ಇನ್ನು ನಿನ್ನ ಮನಃಖೇದಮಂ ಬಿಟ್ಟು ಸ್ವಸ್ಥಚಿತ್ತಳಾಗು ಯುಕ್ತಾ

ಯುಕ್ತವೆನ್ನದೆ ಬುದ್ಧಿಶೂನ್ಯನಾದ ಪರಮ ದುಷ್ಟವಾರ್ಗ ಪ್ರವರ್ತನಾಗಿರುವ ತುರುಕನು ಬರುವ ಸಮಯವಾದುದು, ನಾವಿಲ್ಲಿದ್ದರೆ ಅವನಿಂದ ಅಪಾಯವೇ ಸಂಭವಿಸುವದಾದ್ದರಿಂದ ನಾನು ಈ ತೇಜಿಯನ್ನೇರಿ ಓಡಿಸಿಕೊಂಡು ಬರುವೆನು ನೀನೀಕೇಲುಕುದುರೆಯುಂ ಹತ್ತಿನಾನು ಹೋಗುವದಾರಿಯಲ್ಲಿಯೇ ಬರುತ್ತಾನಾನಿಂ ತೆಡೆನಿಲ್ಲುತ್ತಾ ನಾನಿಳಿದಕಡೆ ನೀನಿಳಿಯುವಳಾಗೆಂದಾ ಸುದರ್ಶನೆಗೆ ತಿಳುಹಿ ಖಾನಾ ಶಿಫಾಯಿಯ ಉಡುಪಂಧರಿಸಿ ಅವನೆ ಕೈಖಾಣಮುಂ ಪಿಡಿದು ಅವನ ವಾರುವನ್ನೇರಿ ವಾಯುವೇಗವಾಗಿ ಪೋಡಿಸುತ್ತಾ ಜೇರೆ ಮಾರ್ಗವುಂ ಸಾತೆ ಈ ಶೀಲವತಿಯ ದಾರಿಯನ್ನನುಸರಿಸಿ, ಕೇಲ್ಗುದುರೆಯನ್ನೇರಿದಾ ಸುದರ್ಶನೆಯು ಅಂತರಿಕ್ಷವಾರ್ಗ ದೊಳು ಹೊರಟುಬರುತ್ತಾ, ಕ್ಷಣಮಾತ್ರದೊಳು ಎರಡು ಯೋಜನ ದೂರವುಂ ಹೋಗಿ, ಅಲ್ಲಿಯ ಒಂದುಹಳ್ಳಿಯೊಳು ಹೋಗಲು ಅಂತರಿಕ್ಷವಾರ್ಗವಾಗಿ, ಬರುತ್ತಿದ್ದಾ ಸುದರ್ಶನೆಯು ಕೇಲ್ಕುದುರೆಯುಂ ಭೂಮಿಗಿಳಿಸಿ, ಆ ಗ್ರಾಮದೆಡೆಯ, ಪೇರಾಲ ಮರದೊಳಿಸಂ ಔಚಿಟ್ಟು, ಶೀಲವತಿಯ ಬಳಿಯನ್ನೈದಿ ನಿಲ್ಲಲು, ಈರ್ವರೂ ಶೇರಿ, ಗ್ರಾಮವಂಪ್ರವೇಶಿಸಿ, ವಕ್ಕಲಿಗರ ಮನೆಯೊಳು ಬಿಡಾರವುಂಮಾಡಿ ಈ ಕುದುರೆಯ ನೊಂದೆಡೆ ಬಿಗಿದು ಉಪಚಾರಾರ್ಥವಾಗಿ, ಕೆಲವು ಸೇವಕರಂ ನೇಮಿಸಿಕೊಂಡು, ಕೇಲ್ಗುದುರೆಯುದರದಲ್ಲಿನೆ ಸ್ವಲ್ಪದ್ರವ್ಯವುಂಕೊಂಪು, ಬೇಕಾದ ಪದಾರ್ಥಂಗಳಂ ತರಿಸಿ, ಭೋಜನ ಪದಾರ್ಥಂಗಳಂಮಾಡಿ, ಸವಿದು, ಮಾರ್ಗಶ್ರಮವುಮಂ ಪರಿಹರಿಸಿಕೊಳ್ಳಲು, ಅವರೀರ್ವರೂ, ದಂಪತಿಗಳೆಂದು ತೋರ್ಪಡಿಸುತ್ತಾ, ಮಲಗಿ ಸುಖವಾಗಿ, ನಿದ್ರಿಸಿದರು.

ಇತ್ತಲಾ ದುಷ್ಟಾತ್ಮಕನಾದ ನೀಚ ತುರುಕನು ಬಹುಕಾಲ ಮುಲೆದು ಆಪದಾರ್ಥಂಗಳು ದೊರಿಯದೇ ಹೋಗಲು, ನಾಚಿ, ಹಿಂತಿರುಗಿ ಬಂದಾ ಮರದಡಿಯೊಳು ತನ್ನ ಕುದುರೆಯೂ, ಶೀಲವತಿಯೂ, ಕಾಣದೇಹೋಗಲು, ಘಾಬರಿಯುಂಗೊಂಡು ಬೆಪ್ಪು ಹಿಡಿದವನೊಲು, ನಾಲ್ಕುದಿಕ್ಕುಗಳೊಳೂನೋಡಿ, ಎಲ್ಲಿಯೂ ಕಾಣದಿರಲು ಮಹಾ ಕೋಪಾಕ್ರಾಂತನಾಗಿ, ಕಟಕಟನೇ ಹಲ್ಲುಗಳಂ ಕಡಿಯುತ್ತಾ, ನೈಮೇಲೆ ಅಂಗೈಯಗಲವಾದರೂ, ಬಟ್ಟೆಯಿಲ್ಲದೆ ನಿಗಂಬರನಾಗಿ ಕಂಡ ಕಡೆಯೊಳು ಓಡುತ್ತಾ, ಶೀಲವತಿಯುಂ ಹುಡಿಕಿ ನೋಪಜೇಕೆಂದು ಭ್ರಾಂತಿಯುಂ ಹೊಂದಿ ಹೊರಡು ಹೋದನು.

ಇತ್ತಲಾ ಶೀಲವತಿಯು ಪುರುಷವೇಷಧಾರಿಣಿಯಾಗಿ, ಸುದರ್ಶನೆಯೊಂದಿಗೆ ವಾಸಮಾಡುತ್ತಾ ಕೇಳಿದವರಿಗೆ ತಾವೀರ್ವರೂ ದಂಪತಿಗಳೆಂದು ಹೇಳಿಕೊಳ್ಳುತ್ತಾ ಒಂದು ವಾರದವರಿಗೂ ಆ ಗ್ರಾಮದಲ್ಲಿಯೇ ವಾಸಮಾಡುತಿರುವಲ್ಲಿ, ಆ ಮನೆಯ ಯಜಮಾನಿಜಾಪ ಓರ್ವ ಮುತ್ತಜ್ಜಿಯು ಈಕೆಯ ಬಳಿಯನ್ನೈದಿ, ಅಪ್ಪಾಜೀ ನೀನುಯಾರು ? ವಿಂಕಾರಣವಿಬಳಿಗೈದಿರುವಿ ? ಎಂದು ಕೇಳಲಾ ಶೀಲವತಿಯು ಎ

ಲೈ ವೃದ್ಧನಾರಿಯೇ ! ನಾನು ಮನೋರಂಜನೀ ಎಂಬ ಪೊಳಲಿನಧಿಪನ ಕುಮಾರನು ಸುಶೀಲರಾಯನೆಂದು ನನ್ನ ಹೆಸರು ಈಕೆಯು ನನ್ನ ಧರ್ಮಕಾಂತೆಯು ದೇಶಸಂಚಾರಾರ್ಥವಾಗಿ ಹೀಗೆ ಹೊರಟುಬಂದಿರುವೆನು. ಎಂದೊರೆಯಲಾ ಮುದುಕಿಯು ಅಯ್ಯಾ ರಾಜಕುಮಾರನೆ ನಿನಗೊಂದು ಕಜ್ಜವುಂಟೇಳುವೆನು ಇದರಿಂದ ಲೋಕೋಪಕಾರವೂ ನಿನಗೆ ಧರ್ಮವೂ ಪ್ರಾಪ್ತಿಯಾಗುವುದು ಸಾಧ್ಯವಾದರೆ ಯತ್ನಿಸಿ ನೋಡು ಅದೇನನ್ನುವಿಯೋ ? ಈ ಊರಿಗೆ ಎರಡು ಹರಿದಾರಿಯಲ್ಲಿ ಮಂಗಳಕಾಶಿಯೊಂದೊಂದು ಪಟ್ಟಣವಿಹುದು. ಆಪಟ್ಟಣದರಸನು ಅವನಹೆಂಡತಿ ಬಹು ವೃದ್ಧರು ಮಕ್ಕಳಿಲ್ಲವ್ರು. ಆ ಪಟ್ಟಣವುಂ ಶತ್ರುರಾಯರು ಸೈನ್ಯಸಮೇತರಾಗಿ ಮುತ್ತಿಗೆಯುಂ ಹಾಕಿಕೊಂಡಿರುವರು. ಜನಸಹಾಯವೂ ದ್ರವ್ಯೋತ್ಪತ್ತಿಯೂ ಸಾಲದೆ ಹಂಬಲಿಸುತ್ತಿರುವನು ಇದೇ ಕಾರ್ಯವೆಂದೊರೆಯಲು ಒಳ್ಳೀದು ಎಂದು ಪ್ರತಿಮಾತಂಹೇಳಿ ಕಳ್ಳದಿಡ್ಡಿಯೊಳು ಹೋಗುವುದಕ್ಕೆ ನಿಮಗೆ ಬರುವುದೇ ಎಂದು ಮುದುಕಿ ಪ್ರಶ್ನೆಮಾಡೆ ನಾನಾಕಾಶಮಾರ್ಗವಾಗಿಯೇ ಹಾರಿಬರುವಂಥಾ ದೇವರಸಹಾಯಮುಳ್ಳವನಾಗಿದ್ದೇನೆ ಕೇಳಿ ತಿಳಿದುಕೊಂಡುಬಾ ಅದಕ್ಕಾರಾಯುಂ ಸಂಮತಿಸಿದರೆ ಈಗಲೇಬಂದು ಶತ್ರುಗಳಂಜೈಸಿ ಆ ರಾಯನಂ ಸುಖಗೊಳಿಸೆನೆನಲು ಕೇಳಿದಾವೃದ್ಧಾಂಗನೆಯು ಮಹಾಸಂತೋಷಭರಿತಳಾಗಿ ತನ್ನ ಪರಿವಾರವುಂ ಒಡಗೊಂಡು ಕೂಡ್ಲೆ ಅಲ್ಲಿಂದ ಹೊರಟು ಆ ಪಟ್ಟಣದ ಬಳಿಯುಂಸಾರಿ ಕಳ್ಳದಿಡ್ಡಿಯೊಳಂ ಹಾದು ಹೋಗಿ ಆ ರಾಯನಂ ಕಂಡು ಈ ಸುದ್ದಿಯನ್ನೆಲ್ಲವುಂ ವಿಸ್ತಾರವಾಗಿ ಪೇಳಲು ಹೌದಮ್ಮಾ ನನಗೂ ಇದೇ ರೀತಿಯೊಳು ಸ್ವಪ್ನವಾದುದು. ಆತನು ಬಂದು ಅಷ್ಟುಮಾತ್ರ ಸಹಾಯಮಾಡಿದರೆ ನಾನು ಧನ್ಯನಾಗುವೆನು. ಆತನೇ ಈದೇಶಕ್ಕೆ ಅಧಿಪತಿಯಾಗಿ ನಮ್ಮನ್ನು ಕಾಪಾಡಲಿ ಎಂದು ಪೇಳಿಕಳುಹಿಸಲು ಆಕೆಯು ಬಂದದಂ ತಿಳುಹಿಸಿದರಾತ್ರೆಯೇ ಕೇಲ್ಗುದುರೆಯುಂಹತ್ತಿ ಅಂತರಿಕ್ಷಮಾರ್ಗವಾಗಿ ಹೊರಟು ಆ ಪುರದ ಮಧ್ಯದೊಳಿರುವ ವಿಸ್ತಾರಮಾದ ದೇವಾಲಯದೊಳಿಳಿದು ಕುಳಿತು ಕೊಂಡಿರೆ ಈ ಸುದ್ದಿಯಂ ಕೇಳಿದ ಮುಂಗಳಕಾಶೀಪುರದರಸನು ಮಂತ್ರಿಪ್ರಧಾನರೊಡಗೊಂಡು ಸಮಸ್ತ ಮಂಗಳದ್ರವ್ಯಗಳಂತೆಗಿಸಿಕೊಂಡುಬಂದು ದೇವಾಲಯದೊಳು ಕುಳಿತಿರುವ ಶೀಲವತಿಯಾದ ಸುಸೀಲರಾಯನಂಕಂಡು ಕಾಣಿಕೆಯನ್ನಿತ್ತು ತನ್ನ ಅವಸ್ಥೆಯನ್ನೆಲ್ಲವುಂ ಹೇಳಿಕೊಳ್ಳಲು ಇದನ್ನೆಲ್ಲವುಂ ಕೇಳುತ್ತಾ ಶೀಲವತಿಯು ಎಲೈ ವೃದ್ಧರಾಜನೇ ಲಾಲಿಸು ನಾವುನಿಮ್ಮೊಡನೆ ಯುದ್ಧಮಾಡುವರಲ್ಲ, ಕಾಣಿಕೆ ಕಪ್ಪಂಗಳಂ ಕೊಡುತ್ತಾ ಬರುವೆವು. ಇದಕ್ಕಾಗಿ ಕೌಲುಮಾಡಿಕೊಳ್ಳಲು ಬರುವೆನೆಂದು ಶತ್ರುರಾಯರಿಗೆ ಹೇಳಿಕಳುಹಿಸಿದೊಡೆ, ಅವರದಂ ನಿರೀಕ್ಷಿಸುತ್ತಿರುವರು. ಅದೇ ವೇರೆಗೆ ಸಕಲಸೈನ್ಯಾಹದೊಡನೆ ನೀವು ಪೋಗಿ, ಅವರೊಂದಿಗೆ ಮಾತಾಡುತ್ತಾ ಕುಳಿತಿರುವಲ್ಲಿ ನಾನು ಆಕಾಶಮಾರ್ಗವಾಗಿ ಬಂದು ಥೊರೆಯೇ ವೊದಲಾದವರಂ ತರಿದು ಬಿಸುಡುವ ತಕ್ಷಣದಲ್ಲಿಯೇ

ಹಿಂತಿರುಗಿ ಬರುವೆನು, ವಿಕ್ರಾಂತನರೆಲ್ಲರೂ ಭಯಗ್ರಸ್ತರಾಗಿ, ತಮ್ಮಪ್ಪನಕ್ಕೆ ತಾವೇ ಪಲಾಯನಸೌಕ್ತಮಂ ಪಠಿಸುವರು. ಇದಕಾಗಿ ಒಂದು ಹರಿತವಾದ ಖಡ್ಗಮಂ ಕೊಡಬೇಕೆಂದು ಕೇಳಲು ಆರಾಯಂ ತನ್ನ ಸಟ್ಟದ ಕತ್ತಿಯನ್ನೇ ಶೀಲವತಿಯ ಕೈಗೊಪ್ಪಿಸಿ ನಿನ್ನ ಮಾತಿನಂತಾಗಲೆಂದೊಪ್ಪಿ ಹರುಷಸಾಂತನಾಗಿ ಮರುದಿನದುಷಯದೊಳು ಸಾಮಜ್ಯಮನೇರಿಸಿ ರಾಜೀಗೆಬರುತ್ತೇನೆಂದುಬೇಳಿಕಳುಹಿಸಕಲ ಮಂಗಳದ್ರವ್ಯಗಳಂ ತಗಸಿಕೊಂಮ ಹೊರಟು ಶತ್ರುರಾಯರ ಮೋಹರಮುಂಪೊಕ್ಕು ಇವರಿಗಾಗಿ ಎದುರು ನೋಡುತ್ತಿದ್ದಾರಾಯಂಗೆ ತಾಣದಿಲಿಯುಂ ಕೊಟ್ಟು ಕುಳಿತುಮಾತನಾಡುತ್ತಿರೆ ಆ ಕಾಲಕ್ಕೆ ಸರಿಯಾಗಿ ಈ ಶೀಲವತಿಯು ವಿಷ್ಣುಖಡ್ಗಪಾಣಿಯಾಗಿ ಪ್ರರಿಪವೇಡೊಳ್ಕೇಳ್ದುದುರೆಯನ್ನೇರಿ ಅಂತರಿಕ್ಷವಾಗಕವಾಗಿ ಹೊರಟುಬಂದು ಮಧ್ಯಸೈನ್ಯದೊಳು ಮಿಂಚಿನಸೆ ಕುದುರೆಯನ್ನಳುಹಿ ಪಾದಚಾರಿಯಾಗಿ, ಕೈಯ್ಯೊಳಗಣ ಖಡ್ಗವ್ಯಾಯುಧಮಂದ ಶತ್ರುರಾಜನಸೈನ್ಯಮಂತ್ರಿಸೇನಾಪತಿಗಳೇ ಮೊದಲಾದವರಂ ಅಪಹರಿಸಿಯುಂ ತರಿದುಬಿಸುಟು ಅಕ್ಷಣವೇ ಕೇಳ್ದುದುರೆಯನ್ನೇರಿ ಆಕಾಶಮಾರ್ಗದಿಂ ಬಂದು ತಾನಿರಿದ್ದ ದೇವಾಲಯದೊಳು ಕುಳಿತುಕೊಂಡಳು. ಇಂಗಡದ ಬಗೆಗುಂಕಂಡ ಶತ್ರುಸೈನ್ಯವು ವಿಕ್ರಾಂತ ಭಟರೆಲ್ಲರೂ ವಿಂಗಳಕಾಶೀರಾಜನು ಮುಂತಾ ಭೂತಂಗಳಂ ಸಾಧೀನಗೊಂಡಿರುವನೆಂ. ಒಂದುನಿಮಿಷವಂತ್ರವಲ್ಲಿಯೇ ಇಂಥಾ ಪ್ರಸಾಧವನ್ನು ಪಡಿಸಿಸಿದನು. ತಾನೇನೂ ಅರಿಯದಂತಿರುವನಂತೆಗಾಂಭೀರ್ಯಮಂ ತಂಟುಮಾಡಾವನೋ ಎಂದು ಭಯಗ್ರಸ್ತರಾಗಿರುವಲ್ಲಿ ಇತ್ತಲು ವೆಂಗಳೇ ಶತ್ರುರಾಯನುಂದ ಅಜ್ಞಾಪಿಸಲ್ಪಟ್ಟ ಸಕಲ ಯುದ್ಧಸಾಧನಗಳಂದೊಡೆ ಗೂಡಿ ಕೈಗೈನ್ಯದೊಡ್ಡಿ ತಮ್ಮ ರಾಜನಿಗುಂಟಾಗುವ ಪರಿಣಾಮವಂ ಸುದ್ದಿಯು ಬರುವಿಕೆಯಂ ನಿರೀಕ್ಷಿಸುತ್ತಿರ್ದು ಜಾಗರಮುಖನ ಜಯವಾರ್ತೆಯಂಕೇಳಿದವರಾಗಿ ಅತಿರಭಸಂಬಂದು ಪೊಳಲನ ಪೇಜಾಗಿಲಂ ತೆರೆದು ಬರುತ್ತಿರುವ ಮಂಗಳಕಾಶೀರಾಯನ ಸೈನ್ಯವಂ ಕಂಡು ಪುತ್ತಪ್ಪು ಧರಣಿಧರರಾಗಿ ಪ್ರಾಣಗಳೊಳಾಸೆಯಂ ಕೊರೆದು ತಮ್ಮಕವಚಗಳಂ ಕತ್ತಿಗಳನ್ನೆಲ್ಲಿಯೇಬಿಟ್ಟು ಧರಿಸಿದ್ದ ವಸ್ತ್ರಾಭರಣಗಳಿಂದಲೆ ಕಂಡಕಡೆಯೊಳು ಓಡಿಯೋಗಲಾ ಬಂದರು. ಅತ್ತಲಾ ಮಂಗಳಕಾಶೀವಟ್ಟಣದರಸನ ಸೈನ್ಯವ ಮುಂಕಾಂಡಿಂಬರೆ ಆರಾಯನದಂಕಂಡು ಮಹದಾನಂದತುಂದಿಲನಾಗಿ ತನ್ನ ಸೈನ್ಯದವರಿಗೆ ಬತ್ತ ಸೇನಾನಿವೇಶಮಂಮಹೊಕ್ಕು ಅಲ್ಲಿದ್ದ ವಸ್ತೂತ್ಕರಗಳನ್ನೆಲ್ಲಮಂ ಕೊಳ್ಳಿಗೊಂಡು ಸಂಭ್ರಮದೊಡನೆ ಹಿಂತಿರುಗಿಬರುತ್ತಾ ಪುರಮಂಸಾರಿ ರಾಜಾಲಯವಪಡೆಗೆ ಬರುವಾಗ್ಯೆ ಆ ಬಳಿಯೊಳು ನಿಲ್ಲಿದ್ದ ಶೀಲವತಿಯುಂಕಂಡು ವಿನಯಭಯಭಕ್ತಿಗಳಿಂದಕೆಗೆ ಕೈಮುಗಿದು ನಿಂತು ಸ್ವಾಮಿ ನಿನ್ನಂಥ ನಾನು ಧನ್ಯನಾದೆನು ನಾನು ಕೃಷ್ಣನು ನಪ್ರಲ್ಲವನು ನಮ್ಮನ್ನು ಕಾಪಾಡುತ್ತಾ ನೀ ರಾಜ್ಯಭಾರಮಂ ವಹಿಸಿ ಪ್ರಜಾರಂಜಕನಾಗಿ ಸುಖದಿಂದಿರುವದೆಂದು ತನ್ನ ಕೈಯ್ಯೊಳಿದ್ದ ರಾಜಮುದ್ರೆಯುಂ ಆಕೆಯ ಕೈಯ್ಯೊಳಿತ್ತು ಸಿಂ

ಹ್ಮಾಸನವನ್ನೇರಿಸಿ ತಾನೊಂದು ಕಡೆಯೊಳು ತನ್ನ ಮಂತ್ರಿಪ್ರದಾನರೊಂದುಕಡೆಯೊಳು ನಿಂತು ಕಾಣಿಕೆಗಳಂ ಸಮರ್ಪಿಸುತ್ತಾ, ಪಟ್ಟಣದೊಳು ಮುಖ್ಯರಾದ ಪ್ರಜೆಗಳಂ ಕರೆಯಿಸಿ ಅವರಿಂದಲೂ ನಜರುನಾಡಿಸುತ್ತಾ ಅದಿನಮಂ ಸುಖಮಾಗಿ ಕಳೆದಂ.

ಈ ಶೀಲವತಿಯು ಬೇರೊಂದು ಕೋಶಗೃಹದೊಳು ತನ್ನ ಕೇಲ್ಮಗುರೆಯನ್ನಿರಿಸಿ ಭದ್ರಪಡಿಸಿ ತನ್ನ ಮರ್ಮಮಂ ಅರು ಅರಿಯದಂತೆ ನಟಿಸುತ್ತಾ ಒಂದು ಅಂದಳಮುಂ ಕಳುಹಿ ಆ ಹಳ್ಳಿಯೊಳಿರ್ದ ಸುದರ್ಶನೆಯಂ ಕರೆಯಿಸಿಕೊಂಡು ಸತೀಪತಿಗಳಂತೆ ಕೋರ್ಪಡಿಸುತ್ತಾ, ಸೇವಾಜನಗಳಿಂ ಸಕಲೋಪಚಾರಗಳಂಗೊಳ್ಳುತ್ತಾ ರಾತ್ರಿಯೊಳು ಸಖೀಭಾವಮುಂಗೊಂಡು ಮಲಗುತ್ತಾ, ಪ್ರಜೆಗಳಂ ಬಲಗೊಳಿಸುತ್ತಾ, ರಾಜ್ಯ ಕೋಶ ಸೈನ್ಯ, ದುರ್ಗ, ಆಯುಧಗಳಂ ಬಲಗೊಳಿಸುತ್ತಾ ಪ್ರಜಾರಂಜನತತ್ಪರಳಾಗಿ ರಾಜ್ಯ ಪರಿಪಾಲನೆಯಂ ಮಾಡುತ್ತಾ, ಕೆಲಕಾಲಮಿರ್ದು ಒಂದಾನೊಂದುಕಾಲದೊಳು ಸುದರ್ಶನೆಯೊಂದಿಗೆ ರಹಸ್ಯಮಾಗಿ ಕುಳಿತು ತನ್ನ ಸ್ಥಿತಿಗಳಂಕುರಿತು ಚಿಂತಿಸುತ್ತಾ ತಮ್ಮಪತಿಗಳನ್ನು ನೋಡಬೇಕೆಂದು ಯೋಚಿಸಿ ಮರುದಿನದೊಳು ಚಿತ್ರಲೇಖಿಕರುಯಾರಾದರೂ ಇದ್ದರೆ ಬರಬಹುದೆಂದು ಪ್ರಸಿದ್ಧಮಾಗಿ ಡಂಗೋರೆಯಂ ಸಾರಿಸಿ ಅರಾತ್ರಿಯೊಳಿದಂಕುರಿತು ಬೇರೆ ಅಲೋಚನೆಯಂಮಾಡಿ ಮಾರನೇದಿನ ಭಾವಚಿತ್ರಕರಾದವರು ಹನ್ನೆರಡುವರ್ಷ ಪ್ರಾಯದವರಾಗಿರಬೇಕೆಂದು ಪುನಹಾ ಡಂಗೂರೆಯಂಹೊಡಿಸಲು ಪರಸ್ಥಳದಿಂದ ಬಂದಿರ್ದ ಭಾವಚಿತ್ರ ಕುರಲಜ್ಞನಾದೋರ್ವ ಬಾಲಕನಪಡಂಕೇಳಿ ರಾಜಾಲಯಕ್ಕೆಬರೆ ಅವನಂಕಂಡ ಶೀಲವತಿಯು ಸಂತೋಷಗೊಳ್ಳುತ್ತಾ ಪಾಸಾದಾಗ್ರಕ್ಕೆ ಕರೆಯಿಸಿ ಅವನಂ ಹೊರಗೆ ಹೋಗದಂತೆ ಗೊತ್ತುಮಾಡಿ ಭೋಜನಾದಿಗಳಲ್ಲಿಯೇ ವಿಪರ್ಡಿಸಿಕೊಟ್ಟು ನಂತರ ಸುದರ್ಶನೆಯಂ ನಿಲ್ಲಿಸಿ ಭಾವಚಿತ್ರಮಂತೆಗದು ಸರಿಯಾದ ನಾಲ್ಕು ಪ್ರತಿಗಳಂ ಬರೆದುಕೊಡೆಂದಾಜ್ಞಾಪಿಸೆ ಅದರಂತೆ ಆ ಚಿತ್ರಗಾರನು ನಾಲ್ಕು ಪತಗಳಂ ಬರದುಕೊಡಲು ಕಂಡು ಪರಮಾಹ್ಲಾದಯುತಳಾಗಿ ಅವುಗಳಂ ತೆಗೆದಿಟ್ಟು, ತಾನು ತನ್ನ ಸ್ತ್ರೀವೇಷವಮಂ ಧರಿಸಿ ಅಲಂಕೃತಳಾಗಿ, ಈ ಬಾಲಕನ ಮುಂದೆನಿಂತು ಎಲ್ಲೆ ಬಾಲಕನೆ? ನೀನು ಬರೆದ ಚಿತ್ರಪಟಗಳು ಸರಿಯಾಗಿ ಇಲ್ಲವು ಪುನಹ ಚನ್ನಾಗಿ ನೋಡಿ ತಪ್ಪಿಲ್ಲದೆ ಬರದುಕೊಡೆಂದು, ಆಜ್ಞಾಪಿಸೆ, ಬಾಲಕನಾದ್ದರಿಂದ ಈ ತಂತ್ರಮನರಿಯದಾ ಚಿತ್ರಲೇಖನು ಮೊದಲು ತಾಬರದವಳೇ ಇವಳೆಂದು ಅರಿತು ಈಕೆಯ ರೂಪಮಂ ಕ್ರಮವಾಗಿ ಗುರುತ್ವಮಾಡಿಕೊಳ್ಳಲು, ಶೀಲವತಿಯು ವಳಹೊಕ್ಕು ಎಥಾಪ್ರಕಾರಮಾಗಿ ಪುರುಷ ವೇಷವನ್ನೇಧರಿಸಿ ಬಂದು ಎಲ್ಲೆ ಭಾವಚಿತ್ರ ಲೇಖನೇ? ನೊದಲಿನಂತೆ ಮಾಡಬೇಡ ಈಗಲಾದರೂ ಚನ್ನಾಗಿ ಬರದು ನಾಲ್ಕು ಪ್ರತಿಗಳಂ ಕೊಡಬೇಕೆಂದು ಆಜ್ಞಾಪಿಸಲು ಅದರಂತೆಯೇ ಬಹಳ ಜಾಗರೂಕತೆಯಿಂದ ಬರಿಯುತ್ತಿರ್ದನು.

ತದನಂತರದೊಳಾ ಶೀಲವತಿಯು ಆಸ್ಥಾನಮಂ ಪ್ರವೇಶಿಸಿ ಒಡ್ಡೋಲಗ

ಮಾಗಿ ಕುಳ್ಳಿರುವಾಗ ಮಂತ್ರಿಯಂ ಕರೆದು ಮಂತಿ ವರೇಣ್ಯನೇ ? ನಾವು ಜಯ ಲಕ್ಷ್ಮಿಯಂ ಹೊಂದಿದ್ದು ವೊದಲು, ಅನ್ನದಾನಮಂ ಮಾಡಲೇ ಇಲ್ಲವು, ಆದ್ದರಿಂದ ಅನ್ನಸತ್ರಮಂ ಹಾಕಿಸಲು ಸಂಕಲ್ಪ ಮುಂಟಾಗಿರುವದು. ಈ ಪಟ್ಟಣದ ನಾಲ್ಕು ಕಡೆಗಳೊಳಗೂ ನಾಲ್ಕು ಛತ್ರಗಳಂ ಕಟ್ಟಿಸಬೇಕು. ಈ ಕೆಲಸಮಂ ಇಂದು ವೊದಲು ಎಂದು ದಿನಗಳೊಳಗಾಗಿ ಪೂರ್ತಿಸಬೇಕೆಂದು ಆಜ್ಞಾಪಿಸಲು ಆ ಮಂತ್ರಿಯು, ಆಕ್ಷಣವೇ ಕಾರೀಗಾರರಂ ಕರಿಸಿ ರಾಜಾಜ್ಞೆಯಂ ಅವರಿಗರುಹಿ, ಬೇಕಾದ ಸಾಮಾನುಗಳಿಗಾಗಿ ದ್ರವ್ಯಕ್ಕೆ ಕೋಶಾಧ್ಯಕ್ಷನಿಗೆ ಆಜ್ಞೆಯಂ ಕೊಟ್ಟು ಸಾಕಾದ ಜನಗಳಂ ಶೇರಿಸಿಕೊಂಡು, ನಿತ್ಯಂ ಪ್ರತಿಯೂ ತಾನು ವಿಚಾರಣೆಯಂ ತೆಗದುಕೊಳ್ಳುತ್ತಾ ಬರಲು ಒಂದುವಾರದವಳಗಾಗಿ, ಛತ್ರಗಳ ಕಟ್ಟಡವು ಪೂರ್ತಿಸಲು ಈಸುದ್ದಿಯಂ ಶೀಲವತಿಗೆ ಅರಿಕೆಮಾಡೆ ಆ ಕಾಲಕ್ಕೆ ಪೂರ್ತಿಸಿದ ಚಿತ್ರಪಠಗಳ ನಾಲ್ಕುಂ ಕಂಡು ಹರುಷಸ್ವಾಂತಳಾಗಿ, ಆಚಿತ್ರಲೇಖನಿಗೆ ಬಿರುದಂ ಕೊಟ್ಟು ಮಾನಸನ್ಮಾನಗಳಂ ಮಾಡಿ ಕಳುಹಿಸುತ್ತಿದ್ದ ಶೀಲವತಿಯು ಆಲ್ಲೆಸುತ್ತಾ ಕೂಡ್ಲೇ ರಾಜಪುರೋಹಿತರಂ ಕರೆಯಿಸಿ ಸತ್ರಪ್ರತಿಷ್ಠೆಗೆ ಸುಮುಹೂರ್ತಮಂ ನಡಿಸಿ ಆ ಲಗ್ನದೊಳು ಸತ್ರ ಪ್ರತಿಷ್ಠೆಯಂ ಮಾಡುವಂತೆಯೂ, ಬ್ರಾಹ್ಮಣ ಸಂತರ್ಪಣೆ, ಭೂದಿಪಕ್ಷಿಗೆ ವೊದಲಾದ ವಿತರಣೆಯಂ ಮಾಡಿಸುವುದೆಂದು ಸಮಸ್ತ ಕಾರ್ಯಾಧ್ಯಕ್ಷರಿಗೂ ನೇಮಿಸಿದಳು. ಆ ತರುವಾಯ ಪ್ರತಿ ಒಂದು ಛತ್ರದ ಬಾಗಿಲನೊಳಗೂ ಈ ಭಾವಚಿತ್ರಗಳೊಳಿರಿಸಿರಿಸಂತೆ ನಿಲ್ಲಿಸಿ, ಆಬಳಿ ಒಬ್ಬಲೇಖಕ ಅಧಿಕಾರಿಯನ್ನಿಟ್ಟು ಮಾರ್ಗಸ್ಥರಾಗಿ ಬರುವ ಚಾತುರ್ವರ್ಣಾಶ್ರಮದವರಿಗೂ ಅವರವರ ಇಷ್ಟಾನುಸಾರವಾಗಿ ಮೃಷ್ಟಾನ್ನ ಭೋಜನವಂ ಮಾಡಿಸುವಂತೆ ವಿಚಾರಿಸಿ ಬಂದವರಿಗೆಲ್ಲಾ ಭೋಜನಗಳಾದ ನಂತರ ಈ ಭಾವಚಿತ್ರಗಳು ಕಟ್ಟಿರುವ ಕೈಸಾಲೆಯೊಳು ಕುಳ್ಳಿಳಿರಿಸಿ ಗಂಧಪುಷ್ಪ ತಾಂಬೂಲಾದಿಗಳಂ ಕೊಡಬೇಕು ಆ ಬಳಿ ಬಂದ್ದವರಾಕಾಲದೊಳು ಆ ಭಾವಚಿತ್ರಗಳಂ ಕಂಡು, ವಿನೋದವು ಮಾತನಾಡಿಕೊಳ್ಳುವರೋ ಅದೆಲ್ಲವಂ ಬರಯುಕೊಂಡು ಆಕ್ಷಣವೇ ನನಗೆ ತಿಳಿಸಬೇಕು ಎಂದಾಜ್ಞಾಪಿಸಲು ತಕ್ಕ ಅಧಿಕಾರಗಳನ್ನಿಟ್ಟು ಶೀಲವತಿಯ ಆಜ್ಞಾನುಸಾರವಾಗಿ ಎಲ್ಲವುಂ ಕ್ರಮಪಡಿಸಿ ಭಾವಚಿತ್ರಗಳ ಬಳಿ ತಕ್ಕ ಪಹರೆಯನ್ನು ಇಟ್ಟು ಛತ್ರಗಳಂ ಜಾಗರೂಕತೆಯಿಂದ ಬಹಳ ಕ್ರಮವಾಗಿ ನಡಿಸುತ್ತಾ ಬಂದರು.

ಛತ್ರಾಧಿಕಾರಿಗಳು ಮಾರ್ಗಸ್ಥರಾಗಿ ಬಂದ ಸಮಸ್ತ ಪ್ರಜೆಗಳಿಗೂ, ಅವರ ವರ ವರ್ಣಾಶ್ರಮಾಚಾರಂಗಳ ಪ್ರಕಾರ ಅಲ್ಲಲ್ಲಿ ಸ್ಥಳಗಳಂ ಪರುಠವಿಸಿ ಅವರ ವರ ಇಷ್ಟಾನುಸಾರಮಾಗಿ, ಭೋಜ್ಯ, ಭಕ್ಷ್ಯ, ಘೃತ ಸೂಪಶಾಕ ಸಾಕಾದಿ ಮೃಷ್ಟಾನ್ನಗಳಂ ಮಾಡಿಸಿ ಭೋಜನಂಗೈಸಿ ಭಾವಚಿತ್ರಂಗಳು ಕಟ್ಟಿರುವ ಪ್ರದೇಶಂಗಳೊಳು ಕುಳ್ಳಿರಿಸಿ ಗಂಧ ಪುಷ್ಪತಾಂಬೂಲಂಗಳಂಕೊಟ್ಟು ಮನ್ನಿಸುತ್ತಾ ಈಪರಿಯೊಳು ಛತ್ರಂಗಳಂ ಕ್ರಮವಾಗಿ ನಡಿಸುತ್ತಾ ಬರುತ್ತಿದ್ದರು.

ಹೀಗಿರುತ್ತಿರೆ ಶೀಲವತಿಯ ವಾರಗಿತ್ತಿಯಾದ ಸುದರ್ಶನೆಯು ನವಮಾಸ ತುಂಬಿ ಪೂರ್ಣಗರ್ಭಿಣಿಯಾಗಿ ಶುಭಲಗ್ನ, ಶುಭಮುಹೂರ್ತದೊಳು ರಾಕಾಚಂದಿರನಂತೆ ರಾರಾಜಿಸುತ್ತಿರುವ ಗಂಡುಮಗುವಂ ಹೆತ್ತಳು, ಈ ಸುದ್ದಿಯುಂ ಕೇಳುತಲಾ ಶೀಲವತಿಯು, ರಾಜಪುರೋಹಿತರಂ ಕರಸಿ ಜಾತಕನುಂ ಬರಿಸಿ, ಪುತ್ರೋತ್ಸವಮಂಗೈದು ಬ್ರಾಹ್ಮಣರಂ ದಕ್ಷಿಣಾ ಭೋಜನಾದಿಗಳಿಂ ತಪ್ತಿಗೊಳಿಸಿ ಸಂತೋಷ ಸ್ವಾಂತಳಾಗುತ್ತಿರ್ದಳು.

ಈ ತೆರದೊಳು ಕಾಲಮಂ ಸುಖಿಯಾಗಿ ಕಳೆಯುತ್ತಿರಲು ಒಂದಾನೊಂದು ದಿನ ಅನ್ನ ಛತ್ರಕ್ಕಾಗಿ ಬಂದವರಿಗೆ ಶೀಲವತೀ ಗಂಡನ ಸುಂಪ್ರ ಕುಮಾರನಾದ ದುರ್ಜಯನು ದೇಶಾಂತರ ಗತನಾಗಿ ಅಲೆಯುತ್ತಾ ಬಂದು ತನ್ನ ಇಚ್ಛಾನುಸಾರವಾಗಿ ಸುಖಿಭೋಜನವಂ ಮಾಡಿ ಭಾವಚಿತ್ರಗಳು ಕಟ್ಟಿರುವ, ಪಡಸಾಲೆಯೊಳು, ಗಂಧ ಪುಷ್ಪಾದಿಗಳಂ ಕೊಂಡು ತಾಂಬೂಲಮಂ ಸವಿಯುತ್ತಾ ಹಾಗೆಯೇ ಈ ಭಾವಚಿತ್ರಗಳೊಂದಂ ನೋಡುತ್ತಾ ಈ ರೂಪದ ತರುಣಿಯು ನನ್ನ ಮಾತಕ್ಕೆಳಿ ಸುಖಿಸದೆ, ತನ್ನ ಶಿಶುವಂಕೊಳಿಸಿ ಕಾಡುಪಾಲಾದಳಲ್ಲದೇ ನನ್ನನ್ನೂ ದೇಶಾಂತರಗತನನ್ನಾಗಿ ಮಾಡಿದಳೆಂಯು ಬಿಸುಸುಯ್ಯುತಾ ತನ್ನೆಡೆಯೊಳಿರ್ದ ಮನುಜಂ ಹೇಳಿದಮಾತುಗಳಂ ಬರದುಕೊಂಡು, ಆ ಪುರುಷನಂ ಕಾಣಲುಗಾರರ ಕೈವಶಮಂ ಮಾಡಿ ಕೂಡ್ಸೇ ಶೀಲವತಿಗೆ ತಿಳುಹಲು, ಕೇಳುತ್ತಲಾ ಶೀಲವತಿಯು ಹಾಗೆ ಮಾಡಿದನನಿಗೆ ಎರಡು ಕಾಲುಗಳಿಗೂ ಬೇಡಿಗಳಂಹಾಕಿ, ಒಂದೊಕ್ಕು ಆನ್ನ ಹಾಕುತಾ ಶೆರೆಮನೆಯೊಳಿಸು ಭದ್ರವಾಗಿಟ್ಟುರುವಂತೆ ಕಾರ್ಯಾಧ್ಯಕ್ಷನಿಗೆ ಆಜ್ಞಾಪಿಸಿ ಅವನಿದರಂತೆ ಗೈಸಿದಂ.

ಮತ್ತೊಂದು ದಿನದೊಳು ಅನ್ನ ಛತ್ರದೊಳು ಭೋಜನಮಾಡಿದವರೊಳು ಪರಿಚಯಳಂ ಒಗೆಗೊಂಡು ಬಂದಿದ್ದ ಹೆಂಗಸು ಈ ಭಾವಚಿತ್ರಗಳೊಳೊಂದಂ ನೋಡಿ ಕಣ್ಣೀರು ಸುರಿಸುತಾ, ಅಮ್ಮಾ! ನಿನ್ನೊಡನೇ ಬರುತ್ತಿರೆ ದಾರಿಯೊಳು ಕಳ್ಳರು ಬಂದು ನನ್ನ ಗಂಡನ ತಲೆಯಂ ಕತ್ತರಿಸಿ ಹೋಗಲು, ನಿನ್ನನ್ನು ನಂಬಿ ಬರುತ್ತಿರ್ದ ನಮ್ಮಂ ತೊರೆದು ಹೋದವಳ ರೂಪವನ್ನು ಈ ಭಾವಚಿತ್ರದೊಳು ಇಂದು ನೋಡಿದೆನು, ಕಾಶೀಯಾತ್ರೆ ಇಲ್ಲದೇ ಅನ್ನ ನೀರಿಲ್ಲದೆ ಹೀಗೆ ಅಲೆಯುವ ಹಾಗಾಯ್ತು ನಮ್ಮಗತಿಯೆಂದು ಗದ್ಗದ ಕಂಠಳಾಗಿ ಅಳುತ್ತಿರುವಳ ಮಾತುಗಳಂ ಬರದುಕೊಂಡು ಅವಳಂ ಮುಕ್ಕಳಿಂಪಿಗೆ ಕೂಡಿಸಿ ಕಾವಲುಗಾರರ ವಶಕ್ಕೆ ಕೊಟ್ಟು ಈ ಸುದ್ದಿಯುಂ ಶೀಲವತಿಗೆ ವಿಸ್ತಾರವಾಗಿ ಒಪ್ಪಿ ಹೇಳಲು, ಆ ಜನರಿಗೆ ವಸ್ತ್ರಂಗಳಂ ಕೊಟ್ಟು ಸುಖಭೋಜನಾದಿಗಳಂ ಮಾಡಿಸುತ್ತಾ ಭದ್ರವಾಗಿ ಕಾವಾಡುತ್ತಿದ್ದು ನಾನು ಹೇಳಿದಾಗವರಂ ಕರತರುವಂತಾಜ್ಞಾಪಿಸಿ ಕಳುಹಲು ಛತ್ರಾಧಿಕಾರಿಯು ಅದೇರೀತಿಯಾಗಿ ಅವರಂ ಪರಿಪೋಷಿಸುತ್ತಿರ್ದಂ.

ಈತೆರದೊಳು ಕೆಲಕಾಲಂ ಕಳೆದ ಮೇಲೊಮ್ಮೆ ಕೂಪ್ರನು ಈ ಸತ್ರದೊಳು

ಭೋಜನವಂ ಮಾಡಿ ತಾಂಬೂಲಕ್ಕಾಗಿ ಕಾದು ಹೊರಗೆ ತಿರುಗುತ್ತಾ ಗೋಡೆಯೊಳು ಕಟ್ಟಿಪ್ಪ ಭಾವಚಿತ್ರಗಳಂನೋಡಿ ಅವುಗಳೊಳೊಂದಂ ಕುರಿತು, ಎಲೇ ಮೋಸಗಾತಿಯೇ ! ನಾನು ಹೊರಗಾಗಿಹೆನು ಊರುಮುಂದೆ ಗುಡಿಸಲು ಹಾಕಿಸಿಕೊಂಡು ಪದಾರ್ಥಗಳು ತರುವದಕ್ಕಾಗಿ ನನ್ನಂ ಕಳುಹಿ, ಆ ಗಾತ್ರಿಯೇ ಅಲ್ಲಿ ಪಲಾಯನಂಗ್ಯೈದೆಯಾ ನಿನಗಾಗಿ ನಾನು ದ್ವೇಷದ್ವೇಶಂಗಳಂ ಅಲಿಗುಟ್ಟುವಂತೆ ಮಾಡಿದೆಯಾ ಎಂದು ಸೇಚಾಡುತ್ತಿರುವವನಂ ಪಿಡಿದು ಬೇಡಿಗಳಂ ಹಾಕಿ, ಬಂದೀಖಾನೆಯೊಳು ಹಾಕಿ, ಅವನು ಹೇಳಿದ ಮಾತುಗಳಂ ಬರಮುಕ್ಕೊಂಡು ಶೀಲವತಿಗೆ ಅರಿಕೆಯುಂ ಮಾಡಿ, ಅವನಂ ಕಾರಾಗಾರದೊಳು ಒಂದು ಕಾಲಿಗೆ ಬೇಡಿಹಾಕಿ, ಆಲ್ಪಾ ಹಾರಂಕೊಟ್ಟುತ್ತಾ ನಾನು ಕರತರುವಂತೆ ಆಜ್ಞಾಪಿಸುವನರಿವಿಗೂ ಭದ್ರವಾಗಿ ನೋಡಿಕೊಳ್ಳುತ್ತಿರುವಂತಾಜ್ಞಾಪಿಸಿ ಕಳುಹಲು ಕಾರ್ಯಾರ್ಥಕ್ಷನು ಆದರಂತೆ ನಡಸುತ್ತಾ ಬಂದಂ.

ಇದೇ ರೀತಿಯಾಗಿ ಕೆಲವು ದಿನಗಳನಂತರ ಇಬ್ಬರು ವರ್ತಕರು ಬಂದು, ಈ ಭೃತ್ಯದೊಳು ಭೋಜನವಂ ಮಾಡಿ, ತಾಂಬೂಲವುಂ ಸವಿಯುತ್ತಾ ಬಂದು ಕುಳಿತಿರೆ, ಅಕಸ್ಮಾತ್ ಈ ಭಾವಚಿತ್ರಗಳು ಕಂಗಳಿಗೆ ವಿಷಯಂಗಳಾಗೆ, ಅವುಗಳಲ್ಲೊಂದಂ ನೋಡಿ, ಆಹಾ ! ಈ ಮೋಸಗಾತಿಯೇ ! ನಮ್ಮನ್ನೆ ಹೊಂದುವಂತೆ ಮೋಸದ ಮಾತುಗಳಾಡಿ, ನಂಬುಗೆ ಗೊಳಿಸಿ, ಭಂಡಿಯುಂ ತರುವಂತೆ ಕಳುಹಿ, ನಮ್ಮ ಸಾಮಾನುಗಳಂ ಪೊತ್ತುಕೊಂಡು ಹೋದವಳು ಆ ದಿನಮೊದಲು ಈ ದಿವಿಗೆ ಹುಡುಕಿದರೂ ಪೊಂಟಿಗುದೆ ಇರುವಳು. ಇವಳ ಭಾವಚಿತ್ರವು ಇಲ್ಲಿಹ್ಯಾಗೆ ಬಂದುದು ಎಂದುಸುನಿ, ಅವನ ಜೊತೆಗಾರನು, ಹಾಗೆಲ್ಲಾ ಇಲ್ಲಿ ಮಾತಾಡಬಾರದು. ಭಾವಿಸಿನೋಡಿದರೆ ಅವಳ ಮುಖದಂತೆಯೇ ಈ ಭಾವಚಿತ್ರಸ್ಥವಾಗಿರುವವಳ ಮುಖವು ತೋರುವದು, ಎಂದು ಪರಸ್ಪರವಾಗಿ ಮಾತಾಡಿಕೊಳ್ಳುವದಂ ಕಂಡು ಲೇಖಕನು ಅವನ್ನೆಲ್ಲವುಂ ಬರಮುಕ್ಕೊಂಡು ಇವರಂ ನಿಬಂಧದೊಳಿರಿಸಿ, ಶೀಲವತಿಗೆ ಒದಿಹೇಳಲು, ಈರ್ವರಿಗೂ ಅರ್ಧಗ್ರಾಸವುಂ ಕೊಟ್ಟುತ್ತಾ, ನಿಬಂಧವಾಗಿ ಕಾರಾಗಾರಗೊಳಿಟ್ಟಮ್ಮ ನಾಂ ಪೇಳಿದಾಗ ಕರತರುವಂತಾಜ್ಞಾಪಿಸಲು, ರಾಜಾಜ್ಞಾನುಸಾರವಾಗಿ ಅವರಂ ಕಾರಾಗಾರದೊಳು ಹಾಕಿಸಿದ್ದರು.

ಮತ್ತೊಂದು ದಿನದೊಳು ಬುದ್ಧಿಹೀನನಾದೋರ್ವ ಮೈಲ್ಜನು ಬಂದನ್ನವಂತಿಂದು, ಈ ಚಿತ್ರವುಂ ನೋಡಿ, ಎಲೆ ವಂಚಕನಾರಿಯೇ ! ನನ್ನ ಕುದುರೆಯನ್ನು, ಉಡುಸನ್ನೂ, ಆಯುಧಾದಿ ಸಾಮಾನುಗಳನ್ನೂ ಅಪಹರಿಸಿಕೊಂಡು, ನನ್ನನ್ನು ಕೌಪೀನಾವಸಿಷ್ಟನಂ ಮಾಡಿ, ಮೋಸಗೊಳಿಸಿ ಬಂದೆಯಾ ಹಾ ! ಎಂದು ಹಲ್ಲುಗಳಂ ಕಡಿಯುತ್ತಾ, ದೂಷಿಸುತ್ತಾ ನಿಂತಿದ್ದನು. ಅದನ್ನೆಲ್ಲವುಂ ಪಹರೇಯವರು ಕಂಡು, ಹಿಂಗಟ್ಟುವ ಮುಂಗಟ್ಟುಗಳಂ ಕಟ್ಟಿ ಗುದ್ದುತ್ತಾ ಎಳದೊಯ್ದು ಬಂದೀಖಾನೆಯೊಳು ಶೇರಿಸಿ ಮುತ್ಸದ್ದಿಯು ಬಂದು, ಅವನ ವಾಙ್ಮೂಲವುಂ ಬರಮುಕ್ಕೊಂ

ಡು ಯಥಾಪ್ರಕಾರವಾಗಿ ಅರಮನೆಯೊಳು ವರ್ದಿಯಂಮಾಡೆ, ಹಿಂದೆ ಬಂದಿರುವ ಇಬ್ಬರು ವರ್ತಕರ ಗತಿಯೇ ಇವನೂ ಹೊಂದಿರಬೇಕೆಂದು ಅಜ್ಞಾಪಿಸಲ್ಪಟ್ಟು ಅದರಂತೆ ನಡಿಸಲ್ಪಡುತಿರ್ದನು.

ಇತ್ತಲಾ ಶೀಲವತಿಯ ಗಂಡನಾದ ಸುಭಾನುರಾಯನು ತನ್ನ ಪತ್ನಿಯುಂ ಕಾಣದೇ ಹುಡುಕುತ್ತಾ ಅರಣ್ಯಮುಂ ಪೊಕ್ಕು, ಕಾಡುಗಳಲ್ಲಿಯೂ ಬಿಡ್ಡಗುಟ್ಟುಂಗಳಲ್ಲಿಯೂ, ಗುಹೆಗಳಲ್ಲಿ ನದೀಕಾಸಾರ ಸರೋವರ ತೀರಂಗಳಲ್ಲಿಯೂ, ನಗರ ಗ್ರಾಮ ಹಳ್ಳಿಗಳಲ್ಲಿಯೂ ಹುಡುಕಿ ಹುಡುಕಿ ಆಯಾಸಗೊಂಡು, ಶಿಕ್ಕದೆ ತವಕದಿಂ, ಬಹು ವ್ಯಸನಾಕ್ರಾಂತನಾಗಿ ಕಾಲಕಾಲಕ್ಕೆ ಆಹಾರ ಪಾನ ನಿದ್ರಾದಿಗಳಿಲ್ಲದೆ ಕಂಗೆಟ್ಟು, ದ್ರವ್ಯಸಹಾಯಮಿಲ್ಲದೆ ತಿರುಕನಂತೆ ಭಿಕ್ಷಾನ್ನದಿಂ, ಹೊಟ್ಟೆಯಂ ಹೊರದುಕೊಳ್ಳುತ್ತಾ, ಹೀನನಾಗಿ ಅನೇಕದೇಶಗಳಂತಿರುಗಿ, ಅಪರಿಮಿತಾಯಾಸಮುಂತಾಳ್ದು ಕಡೆಗೆ ಹುಚ್ಚನಾಗಿ ಅಲೆಯುತ್ತಾ ಬಂದು, ಒಂದಾನೊಂದು ನದೀತೀರದಲ್ಲಿ ಬೀಸುವ ತಂಗಾಳಿಗೆ ಮೈಯೊಡ್ಡಿ ತರುಚ್ಛಾಯಾಶ್ರಿತನಾಗಿ ಕುಳಿತಿರುವಲ್ಲಿ ಪತಿವ್ರತಮ್ಮನಾದ ಉದಯಭಾನುರಾಯನು ತನ್ನ ಅಣ್ಣನಂತೆಯೇ ತನ್ನ ಕಾಂತಾನ್ವೇಷಣ ಜನಿತ ಶ್ರಮನಾಗಿ ಬಂದು ಅದೇ ನದೀತೀರದೊಳು ಮತ್ತೊಂದು ಪ್ರದೇಶದೊಳು, ಆಯಾಸ ಪರಿಹಾರಾರ್ಥವಾಗಿ, ದೂರದೊಳು ಕುಳಿತು ವಿಶ್ರಾಂತಿಗೊಳ್ಳುತ್ತಿರುವ ಈ ಸುಭಾನುರಾಯನಂ ನೋಡಿ, ತನ್ನ ಅಂಣನಂತೆ, ಕಾಂಬನೆಂದು ಧಿಗ್ಗನೆ ಎದ್ದು ಬಂದು, ಸವಿಾಪಗತನಾಗಲು ತನ್ನ ಅಣ್ಣನೇ ಎಂದು ತಿಳಿದು ಬಿಗಿದಪ್ಪಿ, ದರಿದ್ರನು ನಿಧಿಯುಂ ಕಂಡೋಲು, ಪರಸ್ಪರನೋರ್ವರೋರ್ವರು ಬಿಗಿದು ಆಲಿಂಗಿಸಿಕೊಂಡು, ನವಿಾರ್ವರ ಗತಿಯೂ, ಒಂದೇ ವಿಧವಾಯಿತೆಂದು, ಶೋಕಿಸುತ್ತಾ ಮೈಮರೆದೂ ಅಂತೆಯೇ ಚೇತರಿಸಿಕೊಂಡು, ದೈವಯೋಗದಿಂದ ನಾವಿಬ್ಬರೂ ಜೀವಿಸಿರುವೆವಲ್ಲಾ ? ಕಾಡುಪಾಲಾದವರು ಒಂದಾಗಿ ಶೇರಿದೆವಲ್ಲಾ, ಇದೇ ಸುಕೃತಾತಿಶಯವೆಂದು ಸಂತೋಷಪಡುತ್ತಾ, ನಮ್ಮಗಳ ಕಷ್ಟನಿವೇದನಾ ಕಾಲವು ಪ್ರಾಪ್ತಿಯಾಯಿತೆಂದು ತಿಳಿಯ ಬರುತ್ತತೆಂದು, ಹರುಷಾಲಾಪಗಳನ್ನು ಮಾಡುತ್ತಾ ಕುಳಿತುಕೊಂಡರು. ನಂತರ ಹ್ಯಾಗಾದರೂ ನಾವು ಸುಖನುಂ ಹೊಂದಬಹುದೆಂದು ಧೈರ್ಯವುಂ ಹೇಳಿಕೊಳ್ಳುತ್ತಾ, ಈ ಮಾರ್ಗವಾಗಿ ಹೋಗೋಣವೆಂದು ಮಾತನಾಡಿಕ್ಕೊಂಡು ಮುಂಗಳ ಕಾಶೀಮಾರ್ಗವಾಗಿ ಹೊರಟು ಆ ಪಟ್ಟಣಮುಂ ಶೇರಿ ಊರುಬಾಗಲು ಬಳಿಯುಣ ಅನ್ನಛತ್ರಕ್ಕೆ ಬಂದು ಅಲ್ಲಿ ಮೃಷ್ಟಾನ್ನ ಭೋಜನಮುಂ ಮಾಡಿ, ಸತ್ರಾಧಿಕಾರಿಯಿಂದ ಕೊಡಲ್ಪಟ್ಟ ಗಂಧ ಪುಷ್ಪಂಗಳಂ ಕೊಂಡು, ತಾಂಬೂಲ ವಿಾಯ್ಯಲದಂಸವಿಯುತ್ತಾ, ಅಲ್ಲಿ ಕಟ್ಟಿರ್ದ ಭಾವಚಿತ್ರಂಗಳ ಬಳಿಗ್ಯೈದಿ ಈರ್ವರುಂ ಆ ಭಾವಚಿತ್ರ ಪಟಗಳಂ ನೋಡುತ್ತಲೇ ಹಾ ಕಾಂತಚೂಡಾರತ್ನವೇ ! ಎಲ್ಲಸ್ಯೆಯೆಂದು ಘಟ್ಟಿಯಾಗಿ ಶೋಕಧ್ವನಿಯಂಗ್ಯೈದು ಮೂರ್ಛಿತರಾಗಿ ನೆಲದೊಳು ಬಿದ್ದು, ಕೂಡ್ಲೇ

ಜೀತರಿಸಿಕೊಂಡು ನಿಂತು, ಆ ಚಿತ್ರದ ಕಾಂತೆಯರಂ ನೋಡುತ್ತಾ ನಿರರ್ಗಳವಾಗಿ ಬರುತ್ತಿರುವ ಶೋಕಜಲ ಪ್ರವಾಹಪೂರಿತನೇತ್ರರಾಗಿ, ಅಯ್ಯೋ ಸುಂದರೀಮಣಿಯರೇ? ನಮ್ಮ ಕೈ ಹಿಡಿದದ್ದಕ್ಕೆ ನೀವೇನು ಗತಿಯಾದಿರಿ, ಇಳಿಯೊಳು ಬಡುಕಿರುವಿರಾ! ಇಲ್ಲದೇ ಮರಣಾಕ್ರಾಂತರಾದಿರೋ, ನಿಮ್ಮನ್ನು ಹುಡುಕುತ್ತಾ ನಾವು ಕಾಡುಪಾಲಾದೆವು, ಅಯ್ಯೋ ಎಂದು ಅತರ್ಕಧ್ವನಿಯಿಂದ ಸ್ಪಷ್ಟವಾಗಿ ಅಳುತ್ತಾ, ಆ ಚಿತ್ರಗಳಂ ಕೈಯಿಂ ಸ್ಪರ್ಶಿಸುತ್ತಾ ಮುದ್ದಿಡುತ್ತಾ, ಯವೆಹಾಕದೆ ನೋಡುತ್ತಾ, ತಮ್ಮ ಪೂರ್ವಸ್ಥಿತಿಗಳಂ ಸ್ಮರಿಸಿಕೊಂಡು ಹಂಬಲಿಸುತ್ತಾ, ನಮ್ಮಂಥಾ ಪಾಪಿಗಳಿಗೆ ಇಂಥಾ ಸರ್ವೋತ್ತಮ ಗುಣಾತಿಶಯಗಳ ಗಣಿಗಳಾದ ಕಾಂತೆಯರು ಲಭಿಸುವರೇ, ನಾವೀಲೋಕದೊಳು ಸರಮ ಪಾಪಿಷ್ಠರೆಂದು ದೂಷಿಸುತ್ತಿರುವವರಂ ಕಂಡಾ ಲೇಖಕ ನಿದನ್ನೆಲ್ಲಮಂ ಬರದುಕೊಂಡು ಆಕ್ಷಣವೇ ಅರಮನೆಯೊಳು ವದಿಕ್ಯಯಂಮಾಡಿ, ಕೇಳುತ್ತಲಾ ಶೀಲವತಿಯು ಚಂಪ್ರನಂಕಂಪ ಚಕೋರಿಯಂತೆಯೂ ಮೇಘಧ್ವನಿಯಂ ಕೇಳಿದ ಮಯೂರಿಯಂತೆಯೂ ಆನಂದಾಣ್ಣವ ಮಗ್ನಳಾಗಿ, ಹಾ: ದೈವವೇ! ಬಹುಕಾಲವಾಗಿ ತಗಲಿದ್ದ ಪ್ರಾಣಕಾಂತನ ದರ್ಶನವು ಇಂದು ಲಭಿಸುವದೇ ಎಂದು ಉಕ್ಕುತ್ತಾ, ತನ್ನ ಮಂತ್ರಿಗಳಲ್ಲೊಬ್ಬ ವರ್ತನಂ ಕರೆದು, ಎಲ್ಲೆ ಸಚಿವಾಗ್ರಗಣ್ಯನೇ; ದಿವ್ಯರತ್ನಾಭರಣಂಗಳನ್ನೂ, ಸರ್ವೋತ್ತಮಂಗಳಾದ ದಿವ್ಯ ವೀತಾಂಬರಾದಿ ಉಡುಪುಗಳನ್ನೂ, ಅಂದಳವನ್ನೂ, ತೆಗಿಸಿಕೊಂಡು ಹೋಗಿ, ಅನ್ನಛತ್ರದ ಬಳಿಯೊಳಿರುವ ಈರ್ವರಿಗೂ ಈ ಆಭರಣಾದಿಗಳಂ ಕೊಟ್ಟು, ಈ ಅಂದಳದೊಳ್ಕೇರಿಸಿ ಕರದುಕೊಂಡು ಅತಿ ಭರದೊಳು ಬರಬೇಕೆಂದಾಜ್ಞಾಪಿಸಿ, ತಾನೂ ಎಂದಿನಂತೆ ಪುರುಷವೇಷದುಡುಪುಗಳಂ ಧರಿಸಿಕೊಂಡು ಮುಖ್ಯ ಪರಿವಾರ ಸಂಯುತಳಾಗಿ ಆಸ್ಥಾನದ ಬಾಗಿಲೊಳು ನಿಂತುಕೊಂಡಿರೆ ಮಂತ್ರಿಯು ಆಜ್ಞಾನುಸಾರವಾಗಿ ಪೋಗಿ, ಅವರೀರ್ವರಿಗೂ ಈ ಆಭರಣಾಧಿಗಳಂ ಕೊಟ್ಟು, ಅಲಂಕರಿಸಿಕೊಂಡ ಬಳಿಕ ಅವರೀರ್ವರನ್ನೂ ಅಂದಳದೊಳ್ಕೇರಿಸಿಕೊಂಡು ಆಸ್ಥಾನಮಂಟಪಕ್ಕೆ ಕರತರಲು, ಶೀಲವತಿಯು ಎದುರಾಗಿ ಬಂದು ಅವರೀರ್ವರಂನೋಡಿ, ಸುಭಾನು ಉದಯಭಾನುರಾಜರೇ? ಎಂದು ಅಮಂದಾನಂದ ತುಂದಿಲ ಸ್ವಾಂತಳಾಗಿ, ಹರ್ಷಲಾಸ್ಯವನಿತ್ತು ಮರ್ಯಾದೆಯೊಡನೆ ಆಸ್ಥಾನಮಂ ಪ್ರವೇಶಮಾಡಿ ನಿವ್ಯಸನೆಂಗಳೊಳು ಕುಳ್ಳಿರಿಸಿ, ತಾನೇನು ಮರಿಯದಂತೆ, ತನ್ನಪತಿಯಾದ ಸುಭಾನುಭಾಳುನಂ ಕುರಿತು, ಎಲ್ಲೆ ಮಹಾನುಭಾವನೇ ನೀವೀರ್ವರೂ ಯಾವದೇಶಾಧಿಪರ ಕುಮಾರರು? ಏನು ಕಾರಣ ವಿಪಾಗಳಾಗಿ ಬಂದಿರುವಿರಿ, ಎಲ್ಲಿಂದ ವಿಜಯಮಾಡಿದಿರಿ? ಎಂದು ಪ್ರಶ್ನೆಯಂ ಮಾಡಲು, ಅವರು ಈಕೆಯ ನಿಶ್ಚಯಮಂ ತಿಳಿಯದೆ ಈ ಮಂಗಳಕಾಶೀ ರಾಜನೆಂದರಿತು, ತಮ್ಮ ನಿಶ್ಚಯಸ್ಥಿತಿಯಂ ಮರೆಮಾಚಿ, ನಾವು ರಾಜಕುಮಾರರಲ್ಲವು, ದೇಶ ಸಂಚಾರಾಪೇಕ್ಷಿಗಳಾಗಿ ಬಂದ ಬ್ರಾಹ್ಮಣರು, ತಿನ್ನುವದಕ್ಕೆಲ್ಲದೇ ಬಹಳ ಬಡವರಾಗಿದ್ದೇವೆ. ದೇಶಂ

ಗಳು ಸಂಚರಿಸುತ್ತಾ ಅಲ್ಲಲ್ಲಿ ತಿರಿದು ತಿನ್ನುತ್ತಾ ಕಾಲಹರಣೆಯಂ ಮಾಡುತ್ತಿಹೆವು, ಎಂದು ನುಡಿಯುತ್ತಲಿರುವರಂ ಕಂಡು, ಹಾಗಾದರೆ ಛತ್ರದ ಮುಂಗಡೆಯೊಳು ಕಟ್ಟಿರುವ ಭಾವಚಿತ್ರಂಗಳಂನೋಡಿ ಶೋಕವಂ ಮಾಡಲೇಂ ಕಾರಣಮೆನ್ನಲು, ನಮ್ಮ ಪತ್ನಿಯರೂ ಆವೇರೂಪವುಳ್ಳವರಾಗಿದ್ದು, ನಮ್ಮ ದುರಾದೃಷ್ಟವಿಂದ ಮಾಗಳ್ದುತರಾಗಿ ಹೋಗಿರುವರು. ಅವರನ್ನು ಹುಡುಕುತ್ತಾ, ಅನ್ನಾಹಾರಂಗಳಿಲ್ಲದೆ ನಿದ್ರಾನಿ ಭೋಗವಿಗಳಂ ತೊರದು, ಅಹೋರಾತ್ರಿಯೂ ಅವರ ವಿಷಯವಾಗಿ ಹಂಬಲಿಸುತ್ತಾ ದೇಶದೇಶಂಗಳಂ ಸುತ್ತುತ್ತಿರುವೆವು. ನಮಗೆ ಪ್ರಾಪ್ತಿಸಿರುವ ಅನೇಕ ವಿಧಂಗಳಾದ ಶ್ರಮೆಗಳಂ ಹೇಳಲಾರೆವು. ಇವುಗಳಂ ತಾಳಿಕೊಂಂಡು ಇರುವದಕ್ಕಿಂತಲೂ, ಆತ್ಮಹತ್ಯವೇ ಸುಖವೆಂದು ಕಾಣುವದು. ಅದದೇ ಅದು ಮಹಾ ಪಾಪವೆಂದು ಹೀಗಿರುವೆವು. ನಾಚಿಕೆಯಿಲ್ಲದ ನಮ್ಮ ಬಾಳನ್ನು ಹೇಳಿಕೊಳ್ಳಲಾರೆವು, ಇವುಗಳೆಲ್ಲಾ ನಮ್ಮ ಪಾಪ ಸಂಚಿತಂಗಳು ನಮ್ಮ ಜನ್ಮವೇ ಪರಮ ಪಾಪಸ್ವರೂಪವಾದದ್ದು. ಇಂಥಾ ಪಾಪಿಗಳ ಕಥೆಯನ್ನು ತಮ್ಮಂಥಾ ಧರ್ಮಾತ್ಮರು ಕೇಳಲಾಗದು. ನಮ್ಮ ಕಾಂತೆಯರು ಪತಿವ್ರತಾ ಶಿರೋಮಣಿಗಳಾವ್ದರಿಂದ, ನಮ್ಮ ಪಾಪಾರಣ್ಯವು ಅವರ ಪತಿವ್ರತಾ ಧರ್ಮಾಗ್ನಿ ಪಾಲನದಿಂದ ಬೆಂದು ಬೂದಿಯಾಗಿ ಅವರ ಮುಖ ಸಂದ ಶೋಭನವು ದೊರೆಯ ಬೇಕಾಗಿರುವದೇ ವಿನಹ ಮತ್ತಾವುದಂ ಕಾಣೆವು, ಎಂದು ಕಣ್ಣೀರು ಸುರಿಸುತ್ತಾ ಆದರೆ ಆ ಪತಿವ್ರತಾ ಶಿರೋಮಣಿಗಳ ಚರಿತ್ರೆಯಂ ಹೇಳುವೆನೆಂದು ಸುಭಾನುರಾಯನು ಉಪಕ್ರಮಿಸುವದರೊಳಗಾಗಿ ತಾನೇ ಆ ಚರಿತ್ರೆಗೆ ಕಾರಣಭೂತಳಾದ್ದರಿಂದಲದಂ ಕೇಳಲೆಳಸಿದೆ, ಆ ಸುಭಾನುರಾಯನಂ ಕುರಿತು ಸ್ವಾಮಿಯಾ ಕೇಳಿ.

ಸಹೃದಯನಿರ್ಮಲಚಿತ್ತೇ ಗುಣವತಿ ಧೃತ್ಯೇಸುವೃತ್ತಿನೆಕಳತ್ರೇ ।
ಸ್ವಾಮಿನಿದಯಾದ್ರ್ರಹೃದಯೇ ನಿವೇದ್ಯ ಕಷ್ಟಂ ಸುಖೀಭೂಯಾತ್ ॥

ಕಪಟವಿಲ್ಲದ ಸ್ನೇಹಿತನೊಳಗೂ, ಸದ್ಗುಣ ವಂತನಾದ ಸ್ವಾಮಿಕಾರ್ಯಪರತಂತ್ರನಾಗಿರುವ ಭೃತ್ಯನಲ್ಲಿಯೂ, ಪತಿಸೇವಾ ಸನ್ಯಾಸಕ್ಕೆ ಸ್ವಾಂತಳಾಗಿಯೂ, ಪತಿಯೇ ದೈವವೆಂದು ನಂಬಿ, ಪತಿಯಾಜ್ಞಾನುಸಾರಿಯಾದ ಪತಿಹಿತ ಚಿಂತಕಳಾದ ಹೆಂಡತಿಯೊಳೂ, ಕರುಣಾ ಶಾಲಿಯಾದ ಧೊರೆಯಲ್ಲಿಯೂ, ತನ್ನ ಕಷ್ಟಂಗಳಂ ಹೇಳಿಕೊಂಡಾದ, ಸುಖಿಪ್ರಾಪ್ತಿಯಾಗುವದೆಂಬ ನ್ಯಾಯಾನುಸಾರವಾಗಿ ನಿಮ್ಮಾಗಳ ವೃತ್ತಾಂತವನ್ನೆಲ್ಲಮಂ, ಮಾಜದೆ ನನ್ನೊಳು ಸರಿಯಾಗಿ ಹೇಳಿದ್ದೇ ಆದರೆ, ನಿಮ್ಮ ನಿಮ್ಮ ಪತ್ನಿಗಳಂ ಎಲ್ಲಿದ್ದರೂ ಹುಡಿಕಿಸಿ ಒಂದು ವಾರದೊಳಗಾಗಿ ಅವರ ಮುಖಗಳಂ ನೋಡುವಂತೆ ಮಾಡಿಸುವೆನು. ನಾನು ನಿಮಗೆ ಪರಮ ಮಿತ್ರನಾಗಿಧೈನೆಂದೇ ಚಿಂತಿಸಲಾಗದು, ಆದುದರಿಂದ ನಿಮ್ಮ ಳಿ ವೃತ್ತಾಂತಮಂ ವಿಶದವಾಗಿ ಹೇಳಿಕ್ಕೊಳ್ಳಿರಿ, ಎಂದು ಹೇಳುತ್ತಿರುವ ಶೀಲವತಿಯ ಮಾತುಗಳಂಕೇಳಿ, ತನ್ನ ಕಾಂತೆಯೆಂದು ಅರಿಯದೆ, ಮುಂಗಳಕಾಶೀ ರಾಜನೆಂದೇ ನಿಶ್ಚಯವಂತಾಳಿ, ಅಹಾ! ಈ ರಾಜನು,

ಎಂಥಾ ಗುಣಾಗ್ರಗಣ್ಯನು ಈತನು ಮಹಾ ಸತ್ಯಸಂಧನು, ಧರ್ಮಮಾತ್ರಪರನು ದಯಾಳುವೂ, ಸತ್ಯಸಂಧನು, ಸುಖಿಯುಃಖಿಂಗಳ ಸ್ಥಿತಿಯನ್ನರಿತವನು, ಪ್ರಜಾಪಾಲನೈಕಪರನು, ಸದಾಚಾರ ಸಂಪನ್ನನು, ಸತ್ಯಪ್ರತಿಜ್ಞೆಯುಳ್ಳವನು, ಸತ್ಯವ್ರತನು, ಮಹಾರಾಜಾಗ್ರೇಸರನೂ, ಸಕಲ ನೀತಿಜ್ಞನೂ ಆಗಿದ್ದಾನೆ, ಈತನೊಳು ನಮ್ಮ ಕಷ್ಟಂಗಳಂ ಹೇಳಿಕೊಂಡರೆ, ಪರಿಹಾರವಾಗದೇ ಇರಲಾರದು, ಅಕಸ್ಮಿಕವಾಗಿ ನಮ್ಮಂ ಕರೆಯಿಸಿ, ನಮ್ಮ ಕಷ್ಟಂಗಳಂ ಇಷ್ಟು ಕರುಣಾಳುವಾಗಿ ವಿಚಾರಿಸಬೇಕಾದರೆ, ದೈವಾನುಗ್ರಹವು ನಮ್ಮೊಳು ಉಂಟಾದುದೆಂದು ನಿಶ್ಚೈಸಬೇಕು ನಮ್ಮ ಕಷ್ಟಂಗಳೆಲ್ಲಾ ಸೂರ್ಯೋದಯದೊಳು ತಿಮಿರಸ್ಥಿತಿಯಂತಾಗುವವು. ಎಂದು ಸಂತೋಷಚಿತ್ತನಾಗುತ್ತಾ ತನ್ನ ಸಹೋದರನೊಳು ಹೇಳಿಕೊಳ್ಳುತ್ತಾ, ಆಗ್ಯೂ ತನ್ನ ಧರ್ಮಪತ್ನಿಯೆಂದು ತಿಳಿಯಲಾರದೆ, ಅಯ್ಯಾ, ರಾಜಾಧಿರಾಜ ರಾಜವಾತಾರ್ಹಂಡ ಕಲಭಕಂಠೀರವನೇ ! ಲಾಲಿಸು, ಇಂದು ನಿನ್ನಯ ಸಂದರ್ಶನದಿಂದ ನಾವು ಧನ್ಯರಾದೆವು, ನಮ್ಮ ಪಾಪಂಗಳೆಲ್ಲಾ ಧೂಳೀ ಪಟಲಂತಾದವು, ಶೋಕಾಗ್ನಿ ತಪ್ತರಾದ ನಾವು, ಆನಂದಾಮೃತಸಾಗರಮಗ್ನರಾದೆವು, ದಿನಮಣಿ ವಂಶಲಲಾಮನಾದ ರಘುರಾಮನೂರ್ತಿಗೆ, ವಾನರಸಾರ್ವಭೌಮನಾದ ಸುಗ್ರೀವನು, ಕಾರ್ಯಸಾಧಕನಾದಂತೆ, ಸಮಸ್ತ ಜಗಾಚರಾತ್ಮಕನಾದ ಸೃಷ್ಟಿಸ್ಥಿತಿಲಯ ಕಾರಣಕರ್ತನಾಗಿರುವ, ಅದ್ವೈತಪರಸ್ತುವಾದ ಪರಮೇಶನು, ನಮ್ಮ ಕಷ್ಟಂಗಳಂ ಪರಿಹರಿಸುವದಕ್ಕಾಗಿ, ನಿಮ್ಮಂ ತೋರಿಸಿನೊ, ಆಗದ ನಮ್ಮ ಶ್ರಮಂಗಳಂ ನಿವೃತ್ತಿಮಾಡುವದಕ್ಕಾಗಿ ತಾನೇ ಈ ನಿಮ್ಮರೂಪಾಗಿ, ಅವತರಿಸಿದಾನೋ ಕಾಣೆವು, ಕರುಣಾಲವಾಲರಾಗಿ ನಮ್ಮಂ ರಕ್ಷಿಸುವಿರಾದರೆ, ನಮ್ಮ ವೃತ್ತಾಂತಮನೆಲ್ಲಮಂ ಹೇಳುವೆವು, ಎನಲಾ ಶೀಲವತಿಯು ರಾಮಕಾರ್ಯಮಂ ಆ ಸುಗ್ರೀವನು ನೆರವೇರಿಸಿದಂತೆ ನಿಮ್ಮ ಕಷ್ಟಂಗಳಂ ಕಡೆಸಾರಿಸುವೆನೆ, ಕೈಮುಟ್ಟಿ ಭಾಷೆಯಂಮಾಡೆ, ಉದಯಭಾನುರಾಯನು, ವ್ಯಥೆಯಂತೊರೆದು, ತಾವಿಬ್ಬರೂ ಹುಟ್ಟಿದ್ದೂ, ಬೆಳೆದದ್ದೂ, ತಮ್ಮದೇಶ ಪಟ್ಟಣ ತಂದೆ ತಾಯಿಗಳ ಹೆಸರೂ, ಅತ್ತೆ ಮಾವಂದಿರ ಹೆಸರೂ, ತಮಗೆ ಮದುವೆಯಾದ ಸಮಾಚಾರವನ್ನೂ ಹೇಂಡತಿ ಕಾಡುಪಾಲಾದಕ್ಕೆ ಕಾರಣವಂ, ತಾಂಹುಡುಕಲು ಬಂದ ಕಾರಣಂ, ತನ್ನ ತಮ್ಮ ಊರುಬಿಟ್ಟು ಹೊರಡಲು ಕಾರಣವಂ ಪತ್ನೀ ಪಾಣಿಗ್ರಹಣಕ್ಕೆ, ಮತ್ತು, ವಿಯೋಗಕಾರಣ, ತಾವಿರ್ವರೂಸೇರಿ ಹುಡುಕುತಾತ್ತಾ ಬಂದದ್ದೇ ವೊದಲಾದವುಗಳನೆಲ್ಲಮಂ ವಿಸ್ತಾರವಾಗಿ ಸೇಳುತ್ತಾ, ಹಾಗೆಯೇ ಕಂಣೀರು ಸುರಿಸುತ್ತಾ, ಸ್ತಬ್ಧತೆಯಂ ತಾಳಲು, ಎಲ್ಲೆ ಸತ್ಯಾತ್ಮರೇ ! ನೀವು ವ್ಯಸನಪಡಬೇಡಿರಿ, ನಿಮ್ಮ ಪತ್ನಿಯು ಸಮಾಧಾನೋಕ್ತಿಗಳಂ ಹೇಳುತ್ತಾ, ತಾನುಪಶ್ಚಾತ್ತಾಪಕೊಂಡವನಂತೆ ನಟಿಸುತ್ತಾ, ಸುಡಿದವಳಾಗಿ ನಿಮ್ಮಾತ್ಮಿಯಾದರೂ ರಾಜಕುಮಾರ್ತೆಯರು, ರೂಪಯೌವನ ಸಂಪನ್ನೆಯರು, ಜನಸಹಾಯಮಿಲ್ಲದೆ ಜೀವನೋಪಾಯಮಂಮಾ

ಡುತ್ತಿರುವರು, ಅನಾಥರಾಗಿ, ವಿಕಾಂಗಿಗಳಾಗಿಯೂ ಬಹುಕಾಲಂ ದೇಶಾಂತರ ವಾಸವಾಡಿದವರು, ಇಂಥಾವರು ಒಂದುವೇಳೆ ದೈವಯೋಗದಿಂದ ಲಭಿಸಿದರೆ, ಪರಿ ಗ್ರಹಿಸುವಿರಾ ? ಎಂದು ಪ್ರಶ್ನೆಮಾಡಲಾ ಸುಭಾನುರಾಯನು ಪುರುಷವೇಷ ಧಾರಿ ಣಿಯಾದ ಶೀಲವತಿಯಂ ಕುರಿತು, ಎಲೈ ರಾಜನೇ ! ನಮ್ಮ ಪತ್ನಿಯರು ಸಾಧಾರಣ ಮಾದ ಪೆಣ್ಗಳಂತಲ್ಲವು, ಪತಿವ್ರತಾ ಶಿರೋರತ್ನಂಗಳು, ತಮ್ಮ ಪತಿಗಳ ಮುಖಂ ಗಳನ್ನಲ್ಲದೇ ಅನ್ಯಪುರುಷರ ಮುಖಾವಲೋಕನಮಂ ಮಾಡಲಿಚ್ಛೈಸರು, ಅಕಸ್ಮಾ ತ್‌ಬರುವ ಮಾಗಕ್ಕದೊಳಾದರೂ, ಎದುರಾದ ಪುರುಷರಮುಖಂಗಳಂ ಅವಲೋಕಿ ಸರು, ಪತಿಯೆಡೆಯೊಳಿಲ್ಲದಿರಲು, ಮಂಡನಾದಿಗಳೊಳಗೆ ಮನವನ್ನೇಹೊಗಿಸರು, ಪತಿಯು ದೇಶಾಂತರಗತನಾಗೆ ಸೂಕ್ಷ್ಮಾಹಾರಪಾನಂಗಳುಳ್ಳವರಾಗಿ, ಸುಖಾಪೇಕ್ಷ ಯಿಲ್ಲದೆ, ಪತಿಧ್ಯಾನ ಸಮಾಸಕ್ತ ಮನಸ್ಸುಳ್ಳವರಾಗಿರುವರು. ಮಾನ ಹೋಗುವ ಕಾಲ ವೊದಗಲು, ಉಪಾಯಾಂತರಂಗಳಿಂದ ತಪ್ಪಿಸಿಕೊಳ್ಳುವರು. ಅದಕ್ಕೆ ಅಸಾ ಧ್ಯವಾದರೆ, ಪ್ರಾಣವನ್ನಾದರೂ ತೊರೆಯುವರೇ ಹೊರ್ತು ಅವಮಾನವಂ ಹೊಂದ ಲಾರರು, ಸ್ತ್ರೀಯರು ಪರತಂತ್ರರಾದ್ದರಿಂದ, ಒಂದುವೇಳೆ ದುರ್ಜನರಾದ ಕಾಮುಕ ರ ಬಲಾತ್ಕಾರದಿಂದ ಅವರ ಸ್ವಾಧೀನರಾಗಿದ್ದರೆ, ಅದು ಅವರ ದೋಷವುಲ್ಲವು. ಮನಸಾವಾಚಾ ಕರ್ಮಣಾ ಸಹ ನಮ್ಮ ಪತ್ನಿಯರು ಪರಪುರುಷೇಚ್ಛೆಯುಳ್ಳವರಲ್ಲ, ಪತಿವ್ರತಾಂಗನೆಯರಾದ್ದರಿಂದ, ಜಿಂಕೆಯನ್ನು ಮುಟ್ಟುವದಕ್ಕೆ ಶ್ವೇಮುಖಗಳಿಗೆ ಹೇಗೆ ಅಸಾಧ್ಯವೋ ದುಷ್ಟರಾದ ಕಾಮುಕರಿಗೂ, ಇವರು ಹಾಗೆಯೇ ಸಾಧ್ಯರಾದ ವರಲ್ಲ. ಒಂದುವೇಳೆ ದೋಷಿಗಳೇ ಆಗಿದ್ದರೆ, ಇತರ ದೃಷ್ಟಾಂತಂಗಳಿಂದ ನಂಬು ವದಕ್ಕೆ ಸಾಕಾದ ಕಾರಣಂಗಳು ತೋರಿಬಂದರೆ, ನಮ್ಮ ಕೈಹಿಡಿದುದಕ್ಕೆ ಇದೇ ನಮಾ ಗಾದಗತಿಯು, ಎಂದವರೊಂದಿಗೆ ಎರಡುಮಾತುಗಳನ್ನಾಡಿ, ನಿಶ್ಚಯಾರ್ಥಂ ತಿಳಿದ ಬಳಿಕ ನಿಶ್ಚಿಂತರಾಗುವೆವು, ಎಂದಶ್ವ ದುಃಖಾಕ್ರಾಂತರಾಗಿ, ಪ್ರತ್ಯುತ್ತರಮಂ ಕೊ ಡಲು. ಪತಿಯು ಇಂಗಿತಮಂ ಪರೀಕ್ಷಿಸುವ ಶೀಲವತಿಯು ಅಗ್ನಿಜ್ವಾಲೆಗೆ ನವನೀತವು ಕರಗುವಂತೆ, ಕರಗಿದ ಮನಸ್ಸುಳ್ಳವಳಾಗಿ ಹಾ, ವಿಧಿಯೇ ! ನಿಮಗೂ ಇಂಥಾ ಕಷ್ಟಂಗಳೊದಗಬಹುದೆ ? ಶಿವಶಿವಾ ಪುರಾಕೃತಂಗಳು ಯಾರನ್ನಾದರೂ ಬಿಡವಲ್ಲಾ ? ಮುನ್ನ ವಿಕಚಕ್ರಾಧಿ ಪತಿಯಾದ ರಾಮನಿಗೂ, ನಳರಾಯನಿಗೂ, ತಪ್ಪಲಿಲ್ಲ, ಸಾಕ್ಷಾತ್ಕಮಲಾಕ್ಷನ ಸಂಪೂರ್ಣ ಕಟಾಕ್ಷವಿದ್ದರೂ, ಪಾಂಡವರು ಕಾಡುಪಾಲಾಗದೇ ಇರಲಿಲ್ಲ, ಇದಕ್ಕಾಗಿ ನೀವೇಕೆ ಹಂಬಲಿಪುದು, ಈ ಯೋಚನೆ ಯಂಬಿಡಿ, ನಿಮ್ಮವತ್ನಿಯರು, ಕಂದಮೂಲಾಹಾರಂಗಳಂ ಭುಂಜಿಸುತ್ತಾ, ಅರಣ್ಯ ದೊಳು, ಯೋಗಿಗಳಂತೆ, ತಪವನ್ನು ಆಚರಿಸುತ್ತಾ ಇದ್ದಾರೆ ಈದಿನ ಸೂರ್ಯಾಸ್ತ ಮಾನದೊಳಗಾಗಿ, ನಿಮ್ಮ ಸ್ತ್ರೀಯಂ ನಿಮ್ಮಬಳಿಗೆ ಕರೆದುಕೊಂಡು ಬಂದು ಬಿಡಿಸು ವೆನು ಎಂದು ನಂಬುಗೆಯಂ ಹೇಳಿ, ಮಂತ್ರಿಯಂಕರೆದು, ಅನ್ನಸತ್ರದೊಳು

ಕಾರಾಗಾರದೊಳು ಸೇರಿಸಿ ಇಟ್ಟಿರುವವರನ್ನೆಲ್ಲರಂ ವಿಚಾರಣೆ ಬಗ್ಗೆ ಕರೆಯಿಸೆಂದಾ ಜ್ಞಾಪಿಸೆ, ರಾಜಾಜ್ಞೆಯು ಸಾರವಾಗಿ, ಅವರನೆಲ್ಲರಂ ಬರಿಸಿ ರಾಜಾಸ್ಥಾನದೊಳು ಒಡ್ಡೋಲಗವಾಗಿ ಕುಳಿತಿರುವ ರಾಜನೆಡೆಯೊಳು ಸಾಲಾಗಿ ನಿಲ್ಲಿಸಿದರು.

ರಾಜಾಸ್ಥಾನದೊಳು ಕುಳಿತಿರ್ಪ, ಸುಭಾನುರಾಯನೂ, ಉದಯಭಾನುರಾಯನೂ, ಸಹಾ ಪಹರಿಗುವರಿಂದ ಬಂಧಿಸಿ ತರಲ್ಪಟ್ಟು, ತಮ್ಮೆಡೆಯೊಳು ನಿಲ್ಲಿಸಿರುವ ತಮ್ಮ ಮಂತ್ರಿ ಪುತ್ರನಾದ ದುರ್ಜಯನಂ ಕಂಡು ಹಾ, ಅವನೂ ಇಲ್ಲಿಗೆ ಬಂದಿರುವನೇ ? ಎಂದೊರ್ವರೊರ್ವರು ಮಾತಾಡಿಕೊಳ್ಳುತ್ತಿರೆ ಶೀಲವತಿಯು ಸಶ್ರಮ ಮುಂಗಡೆಯೊಳು ಕಟ್ಟಿರ್ದ ಭಾವಚಿತ್ರಂಗಳಂ ತರಿಸಿಕೊಂಡು ಆವುಗಳಂ ತನ್ನೆಭಾವ ಚಿತ್ರಮುಂ ಕೈಯೊಳು ಪಿಡಿದು ಈ ದುರ್ಜಯನಂ ಕರೆದು ಎಲಾ ದುರಾತ್ಮಕನೆ! ನರಾಧಮನೇ ! ನೀನೇಪಟಮುಂ ನೋಡಿದವನು ಅಂಥಾ ಮಾತುಗಳನ್ನಾಡುವದಕ್ಕೆ ಕಾರಣಮೇನೆಂದು ಗರ್ಜಿಸುತ್ತಾ ಕೇಳಲು ಆ ದುರ್ಜಯನೆ ಎದುರಾಗಿ ಕುಳಿತಿರ್ಪ ತಮ್ಮ ರಾಜಪುತ್ರರಂ ನೋಡಿ ಅತನ ವಿಷಯವಾಗಿ ತಾನು ಮಾಡಿದ ದುಷ್ಕೃತ್ಯಮುಂ ಸ್ಮೃತಿಯೊಳು ತಂದುಕೊಂಡು ಭಯಾತುರನಾಗಿ ಗಡಗಡನೇ ನಡುಗುತ್ತಾ, ಈ ಭಾವಚಿತ್ರದೊಳು ಬರವಿರುವವಳು ನಮ್ಮ ರಾಜಾತ್ಮಜನ ಧರ್ಮಪತ್ನಿಯು, ಈಕೆಯನ್ನು ತೌರುಮನೆಯಿಂದ ಕರೆತರುವದಕ್ಕಾಗಿ ನನ್ನ ಕಳುಹಿಸಿದರು. ನನಗೆ ಈಕೆಯುಮೇಲೆ ಯಿಪ್ಪ ಮೋಹದ ಕತನದಿಂಕರತರುತ್ತಾದಾರಿಯೊಳು ಯಾರೂಇಲ್ಲದಿದ್ದ ದ್ದರಿಂದಲೂ ನನ್ನೊಡಗೂಡಿ, ರತಿಸುಖವಿನಿತ್ತು, ಕಾಮಪಾವಿಯುಂ ಶಾಂತಗೊಳಿಸೆಂದು, ನಾನಾವಿಧ ಮಾಗಿ ಪ್ರಯತ್ನಪಡಿಸಿ ನೋಡಿದರೂ ಸಾಧ್ವಿನಿಯಾಗದೆ, ಕೆಡೆಗೆ ನನ್ನನ್ನೂ ಕಾಡು ಪಾಲುಮಾಡಿ ತಾನೂ ದೇಶಾಂತರಗತಳಾದಳು. ಈ ಊರು ಮುಂದಣ ಪತ್ರಗಳಲ್ಲಿನ ಭಾವಚಿತ್ರಮುಂ ನೋಡಿದಪಕಾರಣ, ಆ ವಿಷಯವು ಸ್ಮೃತಿಪಥವನ್ನೈದಲು, ಈ ರೀತಿಯಾಗಿ ಮಾತನಾಡಿಕೊಂಡೆನೆಂದುಸುರಲು, ರಾಜನಾಗಿರುವ ಶೀಲವತಿಯು ಈ ರಾಜಾತ್ಮಜರ ಮುಖಂಗಳ ನೋಡಿ ಇವನೇ ನಮ್ಮ ಮಂತ್ರಿಕುಮಾರನು, ಎನೆ, ಹೌದು, ಈ ನರಾಧಮನು ಪರಮನೀಚನು, ಸ್ವಾಮಿದ್ರೋಹಿಯು, ಎನಲು, ಈ ಶೀಲವತಿಯು ಎಲೋ ಪರಮಪಾವಿಯೇ ! ನರಾಧಮನೇ ! ದುಷ್ಟನೇ ! ನಿನಗೆ ಅದೇ ಸ್ಥಳದೊಳು ಶಿಕ್ಷೆಯೊರೆಯುವದೆಂದು ಶೀರ್ಘ್ರಾನವಂ ವಿಧಿಸಿ ಯಥಾಪ್ರಕಾರ ವಾಗಿ ನಿರ್ಬಂಧದೊಳು ಬಹುಭದ್ರವಿಂಟಿಟ್ಟಿರುವಂತೆ ಆಜ್ಞಾಪಿಸಿದಳು.

ಬ್ರಾಹ್ಮಣಾಂಗನನ್ನು, ಈಕೆಯ ಮಕ್ಕಳನ್ನೂ ಕರೆದು, ಈ ಭಾವಚಿತ್ರಮುಂ ಅವರಿಗೆ ತೋರಿಸಿ, ಇದಂ ಕುರಿತು ನೀವು ಮಾತನಾಡಿಕೊಂಡ ಮಾತುಗಳಂ ಸರಿಯಾಗಿ ಹೇಳಿದೆ ವಾಜಿಪರೆ ಶಿಕ್ಷೆಗೆ ಪಾತ್ರರಾಗುವಿರೆಂದು ಆಜ್ಞಾಪಿಸಲು, ಆ ವೃದ್ಧ ಬ್ರಾಹ್ಮಣಪಾಸಿಯು, ಎಲೈ ಮಹಾರಾಜನೇ ! ಕೇಳು ನಾನೂ ನನ್ನ ಗಂಡನೂ ಈ ಮಕ್ಕಳೊ ಸೇರಿ ಕಾಶೀಯಾತ್ರೆಯಂ ಮಾಡಲು ಹೋಗುತ್ತಿದ್ದೆವ್ರ. ಸುಂದರಿಯಾ

ಗಿಯೂ, ತರುಣಿಯಾಗಿಯೂ ಇರುವ ಒಬ್ಬ ಮುತ್ತೈದೆಯು ದಾರಿಯಲ್ಲಿ ಕುಳಿತಿದ್ದ ವಳು ನಮಗೆ ಜೊತೆಸಾರಿದಳು ಅವಳನ್ನೊಡಗೊಂಡು ನಾವು ಪೋಗುತ್ತಿರಲು ದಾರಿ ಯೊಳೊರ್ವ ಚೋರನು ತನ್ನಯ ಸಹವಾಸಿಗಳಂ ಸೇರಿಸಿಕೊಂಡು ಬಂದು ನಮ್ಮಂ ಹೊಡೆದು, ನಮ್ಮ ಬಳಿಯೊಳಿದ್ದ ಒಡವೆ ವಸ್ತುಗಳಂ ಜಾಚಿಕೊಂಡು ಹೋಗುತ್ತಾ ಆ ಸುಂದರೀಮಣಿಯನ್ನು ಜೊತೆಯೊಳು ಕರದೊಯ್ದನು. ಪತಿಯು ಅಲ್ಲಿ ಮೃತ ನಾದನು, ಆಕೆಯು ಜೊತೆಯೂ ತಪ್ಪಿ ಹೋದುದು. ಬಳಿಯೊಳಿದ್ದ ಒಡವೆ ವಸ್ತುಗಳೆ ಲ್ಲವೂ ಸೂರೆಹೋದವು. ಉದ್ದೇಶಮಾಡಿಯಿದ್ದ ಯಾತ್ರೆಮಾಡಲು ಸಹಾಯವಿಲ್ಲ ದೆ ಹೀಗೆ ಅಲೆಯುತ್ತಾ, ಅಲ್ಲಲ್ಲಿ ತಿರಿದು, ಹೊಟ್ಟೆಯಂ ಹೊರೆದುಕೊಳ್ಳುತ್ತಾ ಈ ಊರಿಗೆ ಬಂದೆವು, ಈ ಭಾವಚಿತ್ರಮಂ ನೋಡಲು, ನಮ್ಮಜೊತೆ ತಪ್ಪಿಹೋದ ಆ ಕಾಂತಾಮಣಿಯನೆನಪು ಬಂದಕಾರಣ, ಆಕೆಯಂ ನೆನೆದು ಹಂಬಲಿದೆವು. ಎನಲಾ ಶೀಲವತಿಯು ನಿಮ್ಮ ಯಜಮಾನರ ಅದೃಷ್ಟವನ್ನೇ ಇತ್ತು, ಅದಕ್ಕೆ ನಾವು ಮಾಡು ವುದೇನೂ ಇಲ್ಲ ? ನಿಮ್ಮಂ ಹೊಡೆದು ಕಳ್ಳರು ದೋಚಿಕೊಂಡು ಹೋದ ಸಾಮಾ ನುಗಳಿಗೆ ಹತ್ತುಮಹಡಿ ಸಾಮಾನುಗಳನ್ನೂ ನಿಮ್ಮ ತೀರ್ಥ ಯಾತ್ರೆಗಳಿಗೆ ಬೇಕಾದ ದ್ರವ್ಯಸಹಾಯ, ಜನಸಹಾಯಮಂ ಸಹ ಕೊಡಿಸುವೆನು. ನಿಮ್ಮ ಇಚ್ಛಾನುಸಾರ ತೀರ್ಥಯಾತ್ರೆಗಳಂ ಮಾಡಿಕೊಂಡು ಬರಬಹುದೆಂದು ಹೇಳಿ ಸಾವಿರಾರು ವರಹಂಗಳಂ ಇತ್ತು, ಭಂಡೀಭೃತ್ಯರು ಮೊದಲಾದ ಸಹಾಯಗಳಂ ಕೊಡಿಸಿ, ಯಾತ್ರಾದಿಗಳಂ ಮಾ ಡಿಕೊಂಡು ಬರಬಹುದೆಂದು ಹೇಳಿ ಕಳುಹಿಸಿದಳು.

ಆ ಬಳಿಕ ಕಳ್ಳನಂ ಕರೆಯಿಸಿ ಎಲಾ ಪಾಪಿಯೇ ! ಪರದ್ರವ್ಯಾಪಹಾರಿಯೇ ಮೂರ್ಖನೇ ನೀನೀ ಭಾವಚಿತ್ರಮಂ ನೋಡಿ, ಮಾತನಾಡಿದ್ದರಿಂದ ಸರಿಯಾಗಿ ಹೇಳದೆ ಹೋದರೆ, ನಿನ್ನಗತಿ ಯೇನಾಗುವುದೆಂದರಿತಿರುವಿ ? ಎಂದು ಕಟಕಟನೆ ಹಲ್ಲುಗ ಳಂ ಕಡಿಯುತ್ತಾ, ಕ್ರೂರವಾದ ನೋಟದಿಂ ನಿರೂಕಿಸುತ, ಕಠಿನೋಕ್ತಿಗಳಿಂ ಗದ್ದ ರಿಸಿ ಭಯಪಡುತ್ತಾ ಕೇಳಲಾ ಚೋರಾಗ್ರೇಸರಂ, ಸ್ವಾಮಿ ಾ ರಾಜೇಂದ್ರರೇ ಅಡಿದಾ ವರೆಯೊಳು ನಾಂ ಪುಸಿಯಂ ನುಡಿಯುವವನೆಲ್ಲ, ನಡೆದ ಸಂಗತಿಯಂ ನಿಜವಾಗಿಯೇ ಬಿನ್ನೈಸುವೆನು, ನನ್ನ ಅಪರಾಧಮಂ ಕ್ಷಮಿಸಬೇಕೆಂದು ಕೈಗಳಂ ಜೋಡಿಸಿಕೊಂ ಡು, ಮಾರ್ಗದೊಳು ತೀರ್ಥಯಾತ್ರೆಗೆನುತ್ತ ಹೋಗುತ್ತಿದ್ದವರನ್ನು ನಾನು ದೋಚಿ ಕೊಳ್ಳುವದಕ್ಕಾಗಿ ಬೆದರಿಸಿದೆನು. ಆ ಮುನಿಹಾರುವಂ ನಮ್ಮುಗಳಮೇಲೆ ಸಾಹಸ ಮಂ ಮಾಡುವದಕ್ಕೆಳಸಿ, ತನ್ನ ಕೈಶಕ್ತಿಯಂ ತೋರಿಸುತ್ತಾ ಬರಲು, ನಾನಾತನ ಪರಾಕ್ರಮವಂ ಸಹಿಸದೆ, ಅತನ ತಲೆಯುಂ ಪೊಯ್ದು, ಭೂತ ಜಾಲಂಗಳಿಗೆ ಬಲಿ ಯಾಗಿ ಮಾಡಿದೆನು. ಅವರಒಡವೆಗಳನ್ನೆಲ್ಲಮಂ ದೋಚಿಕೊಂಡು ಸಂತೋಷ ಸ್ವಾಂ ತನಾಗುತ್ತಾ, ಅಲ್ಲಿಪ್ಪ ಈ ಭಾವಚಿತ್ರದಲ್ಲಿ ಕಾಂಬ ಸುಂದರೀಮಣಿಯಂ ನೋಡಿ, ಕಾಮಬಾಧಾಪೀಡಿತ ಸ್ವಾಂತನಾಗಿ ಆಕೆಯು ಸಮೀಪಕ್ಕೆ ಸಾರಲು, ನೂನೆಡನ್ನೆ

ಬರುವಂತೆ ನನಗೆ ನಂಬಿಕೆಯನ್ನಿತ್ತು, ಹಿತವಾದ ಮಾತುಗಳಂ ನುಡಿಯುತ್ತಾ ಬರಲು, ಭ್ರಾಂತನಾಗಿ ಒಡಗೊಂಡಾಕೆಯೊಡನೆ ನನ್ನ ಊರನ್ನು ಸಾರಿದೆನು, ಈಗ ನಾನು ಹೊರಗಾಗಿದ್ದೇನೆ, ನಿನ್ನ ಮನೆಯೊಳು ಬರಲಾದು, ತನಗೊಂದು ಗುಡುಸಲಂ ಊರಹೊರಗೆ ಕಲ್ಪಿಸಿ ಕೊಡಬೇಕೆಂದು ಹೇಳಿ, ಅದೇವೇರಿಗೆ ನಾನು ಮಾಡಿಕೊಟ್ಟ ಹುಲ್ಲುಗುಡುಸಲಲ್ಲಿದುಕೊಂಡು, ತನಗೆ ಬೇಕಾದ ರಾಜಯೋಗ್ಯ ಭೋಜನ ಸಾಮಗ್ರಿಗಳಂ ತಂದು ಕೊಡಬೇಕೆಂದು ನನ್ನಂ ಪ್ರೇರಿಸಿ ಕಳುಹಿ ರಾತ್ರಿಯೇ ಕಾಡುದಾರಿಯಾಗಿ ಹೊರಟುಹೋಗಿ, ನನ್ನಂ ವೇಷಗೊಳಿಸಿದಳು. ಲೋಕವಂಚಕನಾದ ನನಗೆ ಈ ಹೆಣ್ಣಿನ ಮೂಲಕ ವೇಷ ಮೊದಗಿತೇ ಎಂದು ವ್ಯಸನಯನಾಂತು, ಅನ್ನಾಹಾರಂಗಳಂ ಬಿಟ್ಟು, ತಿರುಗುತ್ತಿದ್ದ ನಾನು ಈ ಊರಮುಂಪಣ ಛತ್ರದ ಮುಂದೆ ಕಟ್ಟಿದ್ದ ಭಾವಚಿತ್ರಮಂನೋಡಿ, ಅದನ್ನೆಲ್ಲಮುಂ ಸ್ಮರಿಸಿ, ಪೇಚಾಡಿಕೊಂಡದು ನಿಜಮೆಂದರುಹಲು, ಸುಶೀಲರಾಜನಾಗಿರುವ ಸೀಲವತಿಯು, ಎಲೋ ನರಾಧಮ ನೇ ದಾರಿಯಂಕಟ್ಟಿ, ಬ್ರಾಹ್ಮಣನಂ ಕೊಂದು, ನಾಸ ಭೀತಿಯಿಲ್ಲದೆ, ಪರದ್ರವ್ಯಮುಂ ಅಪಹರಿಸಬಹುದೇ ಗೆದ ಲು ಲೋಕದಲ್ಲಿ ಎಲ್ಲಾ ವಸ್ತುಗಳಂ ನಾಶಗೊಳಿಸುವನೆಂದು ಹಮ್ಮಿನಿಂದ ಕೆಂಡಮಂ ತಾಗಿದರೆ ಜೀವಿಸುವ್ರವೆ? ಪರಸ್ತ್ರೀ ದ್ರೋಹಿದ ನಿನಗೆ ಸುಖವಾಹುದೆ, ಪರಮನೀಚನೇ ನಿನಗೆ ಆ ಕೃತ್ಯವಪಡೆವ ಬಳಿಯಲ್ಲಿಯೇ ಶಿಕ್ಷೆಯಾಗುವದೆಂದಾಜ್ಞಾಪಿಸಿ, ಯಥಾಪ್ರಕಾರವಾಗಿ ಕಾರಾಗೃಹದೊಳು ಹಾಕಲ್ಪಟ್ಟನು.

ಅನಂತರ ಆ ವರ್ತಕರಿರ್ವರಂ ಕರೆದು, ನೀವೀ ಪಟಮಂ ನೋಡಿ ಮಾತಾಡಿಕೊಂಡಿದ್ದೀತಕೆ? ವಿನೆಂದು ಮಾತಾಡಿಕೊಂಡಿರಿ? ಎಂದು ಮುಗುಳ್ನಗೆಯುಂಸೂಸುತ, ಕಪಟಮಂ ತೋರದೆ, ಮಾತಾಡಿಸಲಾ ವರ್ತಕರಿರ್ವರೂ, ಎಲ್ಲೆ ಮಹಾರಾಜನೆ! ಲಾಲಿಸು, ನಾವಿರ್ವರೂ ವ್ಯಾಪಾರಾರ್ಥವಾಗಿ ಸರಕು ಭರ್ತಿಮಾಡಿ, ಎತ್ತುಗಳ ಮೇಲೆ ಹೇರಿಕೊಂಡು ಹೊರಟು, ದಾರಿಯೊಳು ಬರುತ್ತಾ ಇದ್ದವು. ಏಕಾಂಗಿಯಾದೊರ್ವಳು ಪೆಣ್ಮಣಿಯು ಆ ದಾರಿಯೊಳು ಕುಳ್ಳಿದಳು. ಆಕೆಯ ರೂಪಲಾವಣ್ಯ, ಸೌಂದರ್ಯವಿಭವಗಳಂನೋಡಿ ಮೋಹಿತರಾಗಿ, ಸವಿವಾಸಕೈದಿ ಯೋಗಕ್ಷೇಮಂ ವಿಚಾರಿಸಿ, ನಿಮಗದರಗೊಡವೆ ಯೇತಕೆ, ನಮ್ಮ ಜೊತೆಯೊಳೀ ಬರುವೆನು ಎಂದೊಡಂಬಡಿಸಿ, ನವ್ಮೊಂದಿಗೆ ಬಹುದೂರ ನಡೆದು ಬಂದು ಮುಂದೆ ನಡೆಯಲಾರೆನು ಸವಿವಾಸದೊಳಗಿನ ಗ್ರಾಮಮುಂ ಸಾರಿ, ಒಂದು ಶಕಟಮುಂ ತರಲೇಳಿ, ತನ್ನ ವೈವೇಲಿನ ಆಭರಣವಂ ನಮ್ಮ ಕೈಯ್ಯೊಳ್ಕೊಟ್ಟು, ಒಬ್ಬರಂ ಬಿಟ್ಟು ಒಬ್ಬರು ಹೋದರೆ, ಆಒಬ್ಬನೇ ಆಕೆಯಂ ಸುಖಿಸಿ, ಅಪಹರಿಸುವನೆಂದು, ದುಷ್ಟಾಶಯದಿಂದ ಈರ್ವರೂ ಸೇರಿ, ನಮ್ಮೊಡೆಯೊಳಿದ್ದ ಆಭರಣಾದಿಗಳ ನಾಕೆಯೊಡೆಯೊಳಿತ್ತು, ಹೊರಟು ಹೋದವರು, ಅಸಂಧಭ್ರವಶಾತ್ ಬೇಗಬಾರದೆ ಸಾವಕಾಶವಾಗಿ ಬಂದು ನೋಡಲು, ಆ ಬಳಿಯೊಳು ಆಕೆಯಂ ಕಾಣದೆ, ಸರಕು ಮೊದಲಾದವುಗಳಂ ಕಳೆದುಕೊಂಡು, ಚಿಂತಾಕ್ರಾಂ

ತರಾಗಿ ಹುಡುಕುತ್ತಾ ಬರಲು, ಈಪರದ ಭಕ್ತದ ಮುಂಗಡೆಯೊಳು ಕಟ್ಟಿದಾರ್ಕೆಯ ಭಾವಚಿತ್ರಮುಂನೋಡಿ, ಈ ಮಾತುಗಳನ್ನೆಲ್ಲಮುಂ ಪರಸ್ಪರ ಮಾತಾಡಿಕೊಂಡೆವು. ಎನಲಾ ಸುಶೀಲರಾಯನಾಗಿರುವ ಶೀಲವತಿಯು, ಮಹಾ ಕೋಪಮುಂ ನಟಿಸುತ್ತಾ, ಎಲ್ಲೆ ದುರ್ಮಾರ್ಗಿಗಳಾದ ವರ್ತಕರೇ ದೇಹಮುಂ ದಂಡಿಸಿ, ವ್ಯಾಪಾರಮುಂಮಾಡಿ ನ್ಯಾಯಮಾರ್ಗದೊಳು, ಸಂಪಾದಿಸಿದ ಲಾಭದೊಳು ನಾಲ್ಕರೊಳೊಂದಂಶವನ್ನು ಧರ್ಮ ಮಾಡುತ್ತಾ ವರ್ಣೋಕ್ತ ಆಚಾರಮುಳ್ಳವರಾಗಿ ಬಾಳಿದೆ, ನರಸ್ತ್ರೀ ಕಾಮುಕರಾಗಿ, ಯುಕ್ತ ಧರ್ಮಂಗಳಂ ತೊರೆದು ಇಂಥಾ ನೀಚಕಾರ್ಯದೊಳೊದಗಿದ ನಿಮ್ಮುಂ ಮರಣದಂಡನೆಗೆ ಗುರಿಮಾಡಬೇಕಾಗಿತ್ತು, ಕ್ಷಮಿಸಿವವರಾಗಿ ನೂರುನೂರು ವರಹಗಳಂತೆ, ಓರೊರ್ವರಿಗೆ ಅಪರಾಧಮುಂ ಕೊಡುವಂತೆ ವಿಧಿಸಿದ್ದೇವೆ, ಕೊಡದೆ ತಪ್ಪಿದರೆ ಅರುತಿಂಗಳು ಕಾರಾಗೃಹದೊಳು ವಾಸಮಾಡಬೇಕೆಂದೂ, ಈ ಕ್ಷಣದೇ ಊರುಬಿಟ್ಟು ಹೋಗಬೇಕೆಂತಲೂ, ಆಜ್ಞಾಪಿಸಿ, ಅವರಂ ಕಳುಹಿಸಿಕೊಟ್ಟೆನು.

ರಾತ್ರಿನಾಗಿದ್ದ ಆ ತರುಣ್ಯರನಂ ಕರೆಯಿಸಿ, ಎಲೋ ದುಷ್ಟನೇ ನೀನೀಭೂವ ಚಿತ್ರಮುಂನೋಡಿ, ನಿನೆಂದು ಮಾತಾಡಿಕೊಂಡೆಯಲಾ ? ಎಂದು ಕೇಳಲು, ಸಾ ವಿಾ ಸ್ಪಭುಗಳೇ ! ನಾನು ನನ್ನ ಕಾರ್ಯಾರ್ಥಿಯಾಗಿ, ವಾರುವವಂ ಹತ್ತಿ ವಾಗಿರ್ದೊಳು ಬರುತ್ತಲಿರ್ದೆನು. ಅಕಸ್ಮಾತ್ ಈ ಕಾಂತಾ ರತ್ನವು ವಾಗರ್ದೊಳು ಕುಳಿತಿರ್ಕಳು, ನೋಡಿದ ಮಾತ್ರದಿಂದಾಂಸಂಜಶರಾಹತ ನಾ ೦ತನಾಗಿ ಮನವಂ ತಾಳಲಾರದೆ, ಎಲ್ಲೆ ತರುಣೀಮಣಿಯೇ ! ನಿನ್ನ ಕನಕ ಕಲಶೋಪಮಾನ ಪಯೋಧರಾಲಂಗನ ಬಿಂಬಾಧರ ಮಕರಂದ ರಸಾಸ್ವಾದನವು ನಿತ್ತು, ನನ್ನೀ ಬಾಧೆಯುಂ ಪರಿಹರಿಸಿ ಲೋಕೈಕ ವೀರನಾಗಿರ್ಪನೆಂಬಾ ಮದ ಮದನನ ಪದಾರ್ಪಹಾರಮುಂ ವಾಹಿಂದು ಸುಲಲಿತೋ ಕ್ತಿಗಳಿಂ ಬೇಡಿಕೊಳ್ಳಲು, ನಿನ್ನಿಷ್ಟಾನುಸಾರನಾಗಿ ಪಡೆದು ಆ ದುರಾತ್ಮನಂ ಜೈಸುವೆನೆಂದು ವಾಗ್ದಾನಮುಂ ಕೊಟ್ಟವಳಾಗಿ ನನ್ನಜೊತೆಯಲ್ಲೇ ಬರುವನೆಂದು, ನಮ್ಮ ತಿಗೊಂಡು ನನ್ನ ತೇಜಿಯನ್ನೇರಿ ಬಹುದೂರಂ ಬಂದಳು. ಹೀಗೆ ಬರುತ್ತಾ ತನಗೆ ಶಿರೋ ರೋಗವು ಜನಿಸಿ, ಬಹುತರವಾಗಿ ಬಾಧೆಗೊಳಿಸುತ್ತಲಿಹುದು, ಇದೇ ನನ್ನ ಪ್ರಾಣಾಪಹಾರಕನಾಗುವೆಂದು, ವಿಕಾರವಾಗಿ, ಅತರ್ಥ ಸಿಯಂ ಮಾಡುತ್ತಾ ಭೂ ಮಿಯೊಳು ಮಲಗಿ ಹೊರಳಾಡುತ್ತಾ ಬರೆ, ನೋಡುತಲಾಂ ಕನಿಕರ ವಾಂತವನಾಗಿ, ಈ ರೋಗದ ಪರಿಹಾರ ಚಿಕಿತ್ಸೆಯನ್ನಾ ನರಿಯೆನು, ನೀಂ ಏನಂ ಜ್ಞೇಳುವಿಯೋ ಅದರಂತೆ ನಾಂ ಶಿರಸಾವಹಿಸಿ ವಾಡುವೆನು ನಿನಗೆ ಸುಖವಾಗುವುದೇ ನನಗೆ ಮುಖ್ಯ ವೆಂಬುಸುರೆ ನೀನು ದಿಗಂಬರನಾಗಿ ಅಪವಿಯಂಸಾರಿ, ನರಿಯ ಹಿಕ್ಕೆಯುಂ ತಂದು ಬಿಡಾಲ ಮೂತ್ರದೊಳರೆದು ಲೇಪನಂ ಗೈದೊಡೆ ನನಗೀ ವ್ಯಾಧಿಯು ಶಮನವಾಗುವದು ಇಲ್ಲದೆ ತಾಳಿದೊಡೆ ನಾನು ಯಮುನಾಲಯವಂ ಸಾರುವದೇ ನಿಜವೆಂದು ಸುಡಿಯಲು ಆಕೆಯ ಕೃಶ್ರಿನಾಭಿಪ್ರಾಯವು ನರಿಯದೆ ನಿಜವೆಂದರಿತು ಕೌಪೀನವಾ

ತ್ಕಾವಶಿಷ್ಟನಾಗಿ ನಾನುಪ್ಪೋಗಿ ಎಲ್ಲೆಲ್ಲಿ ಹುಡುಕಿದರೂ ಆ ಪದಾರ್ಥಂಗಳು ದೊರೆಯದೆ ಅಲೆ ದಲೆದು ಆಯಾಸದಿಂದ ಬೇಸತ್ತು ಬಂದಾಗ ಹಿಂತಿರುಗಿ ಬರುವಲ್ಲಿ ನನ್ನ ಉಡುಪು ತೊಡುಪು ಸಾಮಾನುಗಳಂ ಅಪಹರಿಸಿಕೊಂಡು ಬಾಡಬನನ್ನೇರಿ ಯಾವ ಮಾರ್ಗವಾಗಿಯೋ ತೆರಳಿದ್ದಳು. ನಾನಾ ಬಟ್ಟೆಯನ್ನೆರಿಯದೆ ಪರಮದುಃಖಾಕ್ರಾಂತನಾಗಿ ದೇಶದೇಶಂಗಳ ಹುಡುಕುತ್ತಾ ಈ ಪೊಳಲಂಬಾರಿ ಭತ್ರದ ಬಳಿ ಕಟ್ಟಿಯಿದ್ದ ಸುಂದರೀಮಣಿಯ ಭಾವಚಿತ್ರವಂ ಕಂಡು ಈವಾತುಗಳನ್ನೆಲ್ಲಮಂ ನುಡಿಯುತ್ತಾ, ನೋಸವಾಡಿ ಬಂದೆಯಾ ಎಂದು ಕೋಪಾಕ್ರಾಂತನಾದೆನು. ಎನಲಾ, ಸುರೂಪಿಣಿಯಾಗಿದ್ದ ಶೀಲವತಿಯು, ಎಲ್ಲಿ ರಾಮ್ರತನೇ ! ನೀನು ರಾಜಸೇನೋದ್ಯೋಗಿಯಾಗಿ ದಾರಿಯೊಳು ಬರುತಿರೆ ಪರಾಂಗನೆಯೊಳು ಮೋಹಗೊಂಬವನಾಗಿ, ಸುಮಾರ್ಗರಂತೆ, ನೀಚಕಾರ್ಯದೊಳು ಯುಕ್ತಿಸಬಹುದೆ, ಅಂಥಾ ದುರ್ಮಾರ್ಗವನ್ನು ಸನ್ಮಾರ್ಗ ಮೊಳುನಡೆಯಿಸುವದುನಿನ್ನ ಕಾರ್ಯಧರ್ಮವು, ಹಾಗೆಮಾಡದೆ ಪರಾಂಗನೆಯಂ ದುರ್ಜೋಧೆಯಿಂ ಕೆಡುವಂತೆ ಮಾಡಿಕಳಿಸಿದ ನನಗೆ, ಈಗಲೇ ತಕ್ಕದಂಡವಂ ವಿಧಿಸಬೇಕು. ಅದಂ ಮನ್ನಿಸಿರುವೆನೆಂದು, ಅವಂಗೆ ಉಡುಪುಗಳಂ ಕೊಡುವಂತೆಯೂ, ನೂರುವರ ಹಗಳ ವೇತನವಂ ಕೊಟ್ಟು, ಈ ರಾಜ್ಯದೊಳಿರಿಂದು ಸೈನ್ಯ ಸಾಮಾನ್ಯಾಧಿಕಾರ ದೊಳಿರಿಸುವಂತೆ ಮಂತ್ರಿಯೊಳು ಪೇಳಿ ಎಲ್ಲಿ ರಾಮ್ರತನೇ ; ನೀನಿಂದಿನಿಂದ ಅಂಥಾ ದುರ್ಮಾರ್ಗದೊಳು ಎಂದಿಗಾದರೂ ಹೋಗುವ ಯೋಜನೆಯಂ ಮಾಡದೆ, ಯಾರಾದರೂ, ಒಂದು ವೇಳೆ ಅಂಥಾ ದುರ್ಮಾರ್ಗದೊಳು ಹೋಗುವರಾಗಿದ್ದರೆ ಅವರಂ ದಂಡಿಸುತ್ತ ಬಹಳ ಜಾಗರೂಕನಾಗಿ, ನಿನ್ನ ಕೆಲಸದೊಳಿರುವ್ರದೆಂದಾಜ್ಞಾಪಿಸಿ ಕಳುಹಿಸಿದಳು

ಶಾನು ಇಲಿಯಿಂದ ವನೆಯು ಯಜಮಾನಿಯಾದ ಮುದುಕಿಯಂ ಕರೆಯಿಸಿ ಅಮ್ಮಾ ! ಈಗ್ಯೆ ಒಂದು ವರುಷದ ಕೆಳಗೆ, ನಿನ್ನ ಮನೆಯೊಳಗೆ ಬಂದಿಳಿದಿದ್ದ ವರಾರು ಹೇಗಿದ್ದರು ವಿನುವಾಡಿದರು ಎಲ್ಲಮಂ ವಿಸ್ತಾರವಾಗಿ ಪೇಳೆನಲು, ಆ ಮುದುಕಿಯೂ, ಅಯ್ಯಾ? ಸುಶೀಲರಾಯನೇ ! ನೀನೂ ನಿನ್ನ ಹೆಂಡತಿ ಯೊಂದಿಗೆ ಬಂದು ನನ್ನ ಮನೆಯೊಳು ಇಳಿದಿರೆ, ಆಗಲೇ ಪೊಳಲಿನ ವೃದ್ಧರಾಜನಿಗೆ ಶತ್ರು ರಾಯರ ಬಾಧೆಯು, ತುಂಬಾ ವ್ಯಾಪ್ತಿಯಾಗಿತ್ತು , ಆ ಕಾಲದೊಳು, ನೀನು ಶೌರ್ಯೋದಾರ್ಯ ಸ್ಥೈರ್ಯ ಶಕ್ತನೆಂದೂ, ನಾನಾ ವೃದ್ಧ ರಾಯನ, ಪೋಷಣೆಯಲಿರುತ್ತಾ ಉಪ್ಪತಿಂದವಳಾದ್ದರಿಂದಲೂ, ನಿನ್ನಿಂದ ಸಹಾಯಮುಂ ಮಾಡಿಸುವೆನೆಂದರಿತು ನಿನಗೆ ಹೇಳಿದೆನು ಆಗ ನೀಂ ಕೇಳು ಕುದುರೆಯನ್ನೇರಿ ಅಂತರಿಕ್ಷಮಾರ್ಗವಾಗಿಯೇ ಬಂದು ಪೊಳಲಂ ಮುತ್ತಿಕೊಂಡಿರ್ದ ಶತ್ರುರಾಯರಂ ಜಯಿಸಿ ಈ ರಾಜಂ ವೃದ್ಧನಾದ್ದರಿಂದ ಈ ರಾಜ್ಯಭಾರಮಂ ವಹಿಸಿ, ಪ್ರಜೆಗಳಂ ಪೃಥಿವಿಯಂ ಸಹ ಬಹು ಸೌಖ್ಯಮಾಗಿ ಪರಿಪಾಲಿಸುತ್ತಿರುವಿ? ಎಂದು ಹೇಳಿದಾ ವೃದ್ಧಸತಿಗೆ ವಸ್ತ್ರ ಭೂಷಣಾದಿಗಳಿಂ ಬಹುಮಾನಿಸಿ ಕಳುಹಿಸಿದಳು.

ಬಳಿಕ ಆ ಸುಭಾನುರಾಯನು, ಉದಯಭಾನುರಾಯನು, ಇವರಿರ್ವರಂ, ತನ್ನಂ ತಃಪುರದೊಳಕ್ಕೆ ಕರದುಕೊಂಡು ಪೋಗಿ, ಅವರಂ ದಿವ್ಯಾಸನಂಗಳೊಳು ಕುಳ್ಳಿರಿಸಿ, ನಾನು ತನ್ನ ಪತಿಯ ಬಳಿಯೊಳು ಕುಳಿತುಕೊಂಡು ಎಲ್ಲೈ ರಾಜಾಗ್ರಗಣ್ಯರೇ! ಸಭೆಯೊಳು ಚೋರರೇ ಮೊದಲಾದವರು ಹೇಳಿದ ಮಾತುಗಳನೆಲ್ಲಮಂ ಕೇಳಿದಿರಷ್ಟೆ? (ಅವರು ಹೋಲಿಸಿ ಹೇಳಿದ ಚರಿತ್ರಮಂ ಕೇಳಿದಿರಾ) ನಿಮ್ಮ ಸತಿಯೊಳ್ನೀನಾದರೂ ದೋಷಮಿರುವದೇ ಪೇಳಿನಲು, ಸುಭಾನುರಾಯಂ ಕಂಗಳಲ್ಲಿ ಶೋಕಜಲ ಪ್ರವಾಹಮಂ ಸುರಿಸುತ್ತಾ, ಅಂಘ್ರಿ ಬುದ್ಧಿ ಚನುತ್ತಾರ ಧೈರ್ಯಶಕ್ತಿ ಸಾಹಸಗಳುಳ್ಳವಳಾದ್ದರಿಂದಲೂ, ಪತಿಯೇ ದೈವನೆಂಬು ನಂಬಿ ಸದಾ ಪತಿಧ್ಯಾನ ಪರಳಾದ್ದರಿಂದಲೂ, ಪತಿಸಾನ್ನಿಧ್ಯಾ ಭಾವದಿಂಪ ಸಕಲಭೋಗೇಚ್ಛೆಯುಂತೊರದು, ಸನ್ಯಾಸಿಯಂತೆ ಆಚರಿಸುತ್ತಾ, ಪತಿಯು ಬರುವಿಕೆಯುಂ ಹಾರೈಸುತ್ತಿರುವಳಾದ್ದರಿಂದಲೂ ಈ ಪರಿಯೊಳು ಅವನನ್ನೇ ಹಂಬಲಿಸುತ್ತಾ, ಸಕಲ ಭೋಗಂಗಳಂ ತೊರದು ಅಲೆಯುತ್ತಾ ಇರುವದೆನಲು, ಪುರುಷ ದ್ವೇಷಧುರಿಣಿಯಾಗಿದ್ದ ಶೀಲವತಿಯು, ಪತಿಯಪ್ರೇಮ ಪೂರಿತನಾದ ಮಾತುಗಳಂ ಕೇಳುತ್ತಾ ಶೋಕಾನಂದಭರಿತಳಾಗಿ,ಮುಕ್ತಾಸರಂಗಳ ವೋಲ್ ಕಂಬನಿಯುಜ್ಜಾಲಮಂ ಸುರಿಸುತ್ತಾ ಎಲ್ಲೈ ಸತ್ಯಶೀಲರಾದ ಧರ್ಮಾತ್ಮರುಗಳಿರಾ ಇನ್ನು ಮುಂದೆ ನಡೆದ ವರಿಯನ್ನೊರೆವೆನು, ಲಾಲಿಪುದು, ಎಂದು ಉದಯಭಾನುರಾಯನಂ ಕೈವಿಡಿದು ಜೀರೆ ಯಂತಃಪುರಕ್ಕೆ ಕರದೊಯ್ದು, ಎಲ್ಲೈ ಧರ್ಮಪರಾಯಣನೇ, ಭ್ರಾತೃವಾತ್ಸಲ್ಯ ಸರೋತ್ತಮಾಗ್ರೇಸರನೇ ಕೇಳು ನಿಮ್ಮ ಅತ್ತಿಗೆಯಾದ ಶೀಲವತಿಯು ಮೊದಲು, ರಾವುತನಾಗಿದ್ದ ತುರುಷ್ಕನು ಹೇಳಿದಂತಾತನಂ ವೋಸಗೊಳಿಸಿ, ವೃಕ್ಷಚ್ಛಾಯಾತ್ರಿತಳಾಗೆ ಕುಳಿತಿರುವಲ್ಲಿ, ಕೇಲ್ಗುದುರೆಯನ್ನೇರಿ, ಗರ್ಭವತಿಯಾದ ಕಾಂತಾವನಿಯೊರ್ವಳು ಆಕಾಶಮಾರ್ಗದೊಳು ಬರುತ್ತಾ ನನ್ನಂ ನೋಡಿ ಅಮ್ಮಾ ನನಗೆ ಕುಡಿಯೆ ನೀರಂಕೊಟ್ಟು ಪ್ರಾಣದಾನವಂ ಮಾಡೆಂದು ದೈನ್ಯವಾಗಿ ಬೇಡಿಕೊಳ್ಳಲಾಕೆಗೆ ಜೀಗನೆ ಪೋಗಿ ನೀರಂ ತಂದುಕೊಟ್ಟು ಉಪಚರಿಸಿ ಆಕೆಯ ಯೋಗಕ್ಷೇಮವಂ ವಿಚಾರಿಸೆನುತ ಬಾಧ್ಯಳಾದವಳೆಂದು ತಿಳಿಯು ಬಂದಕಾರಣ ಅಕ್ಷಣವುಲ್ಲಿರದೆ ಆಕೆಯೊಡಗೊಂಡು ಆ ಮುದುಕೆಯ ಹಳ್ಳಿಯಂಸಾರಿ ನಾವಿರ್ವರೂ ದಂಪತಿಗಳೆಂದು ಹೇಳಿಕೊಳ್ಳುತ್ತಾ ವಾಸಮಾಡಿಕೊಂಡಿರಲೀ ರಾಜಧಾನಿಯ ಭೂಪಾಲನ, ಕಷ್ಟದ ಸ್ಥಿತಿಯಂ ಕೇಳಿದಯಾದ್ರ್ರಹೃದಯಳಾಗಿ, ಬಂದು ಶತ್ರುರಾಜರಂ ನಿಗ್ರಹಿಸಿ, ಈ ರಾಜಂ ವೃದ್ಧನಾಗಿರುವದರಿಂದಲೀತನ ಪ್ರಾರ್ಥನೆಯಿಂದೀ ರಾಜ್ಯಭಾರವಂತಾಳಿ ಹಳ್ಳಿಯೊಳಿದ್ದ ಸುದರ್ಶನೆಯಂ ಕರಿಸಿ ಅಂತಃಪುರದೊಳಿರಿಸಿ ನಾಂ ನನ್ನ ಸ್ತ್ರೀಭಾವಮನಾರಿಗೂ ಹೊರಪಡಿಸದೆ ಕಾಲಮಂ ಕಳೆಯುತ ನಿಮ್ಮ ಅನ್ವೇಷಣಾಲೋಲ ಚಿತ್ತಳಾಗಿದ್ದನು. ಗರ್ಭವತಿಯಾಗಿದ್ದ ಸುದರ್ಶನೆಯು ಪೂರ್ಣಗರ್ಭಿಣಿಯಾಗಿ ನವಮಾಸ ತುಂಬುತ್ತ, ಸಲ್ಲಗ್ನ ಶುಭ ಮುಹೂರ್ತದೊಳು, ರಾಕಾ

ಚಂದಿರನಂ ಪೋಲ್ವ ಗಂಡುಮಗುವಂ ಹೆತ್ತಳು. ಆಕೆಯು ಕೋಟಿ ಸೂರ್ಯ ಪ್ರಕಾಶವಾನನಲದ ನವನುನ್ಮಥನಂತಿ ಸುಂದರಕುವಾನ ಬಾಲ ಲೀಲಾ ವಿನೋದ ಗಳಿಂದ, ಕಾಲಮುಂ ಕಳೆಯುತ್ತಾ ಆ ಶಿಶುವಿನ ಪೋಷಣಾ ಪರತಂತ್ರಳಾಗಿರುತ್ತಾ ಸರ್ವದಾ ಪತಿಯನ್ನೇ ನೆನೆದು, ಹಂಬಲಿಸುತ್ತಲಿರುವಳೆಂದು ಹೇಳಲು ಎಲೌ ತಾಯಿಯೇ ನೀನಾದರೋ ನನ್ನ ಅತ್ತಿಗೆಯೆಂದು ಹೇಳುವಿ ? ನೀನಾದರೆ ಮಹಾರಾಜ ಕುಮಾರನಂತೆ ಕಾಣುತ್ತಿಯ್ಯೇ ? ಆದರೂ ನಿನ್ನ ಮಾತುಗಳೇ ನನಗೆ ಅಮೃತ ಧಾರೆಗಳಂತಿರುವವು. ಆ ಸತಿಭ್ಯಾನ ಪರಾಯಣಳಾಗಿಯೂ ಪರಮ ಪತಿವ್ರತಾ ಶಿರೋಮಣಿಯಾಗಿಯೂ ಇರುವ ಈ ನನ್ನ ಪ್ರಾಣಕಾಂತಾ ಮುಖ ಚಂದ್ರನಂ ನೋಡಿ ಧನ್ಯನಾಗುವೆನು, ದಯವಾಡಿ ನನ್ನೊಳು ಕರುಣೆಯಂ ತಾಳಿಂದು, ವಿಲಯನಾಗಿ ಬೇಡಿಕೊಳ್ಳುತ್ತಿರಲು, ಎಂದಿನಂತಾ ಸುದತಿಯು ಪುತ್ರರತ್ನದ ಬಾಲಕೇಳಿ ವಿನೋದಗಳಿಂ ನೋಡಿ ಹರುಷಿಸುತ್ತಿದಳಿವಳು ಪತಿಯುಂ ನೆನೆದು ಹಾ ಕಾಂತ, ಉದಯಭಾನುರಾಯನೇ ನನ್ನನ್ನು ಅತಿ ಮೋಹದಿಂದ ಸಾಕಿ ಸಲಹಿದ ತಂದೆ ತಾಯಿಗಳಂ ಬಿಟ್ಟು ನೀನೇ ಹರುಷ ಸಂದಾಯಕೆನೆಂದು ನಂಬಿ ನಿನ್ನೊಡನೆ ಬಂದುದಕೆ, ನನ್ನಂ ಅಗಲಿ ಹೊಡುಕುತಾ ಎಲ್ಲಿರ್ಪೆಯೋ ? ಎಂತು ಕಷ್ಟಂಗಳ ತಾಳುವಿಯೋ ! ನಿನ್ನಂ ಕಾಣುವೆಂತು ಎಂದು ನಿನ್ನೆ ಮುಖ ಕಮಲಮುಂ ನೆನೆದಿಪ ನನ್ನ ಕಂಗಳು ತ್ಯಪ್ತಿಯನ್ನೈದುವವು, ಹಾ ನವಮೋಹನಾಂಗನೇ ! ಎಂದು ಗಟ್ಟಿಯಾಗಿ ಆರ್ತ ಧ್ವನಿಯಂ ಗೈದು ಹಾಗೆಯೇ ಮೂರ್ಚಿತಳಾದಳು, ಆ ಧ್ವನಿಯಂ ಕೇಳುತ ಉದಯಭಾನುರಾಯನು ಅತಿ ರಭಸದೊಳಾಕೆಯ ಸನಿಹಾವನ್ನೈದಿ, ಹಾ ! ಪ್ರಾಣಕಾಂತೆಯೇ ! ಎಂದು ಆಕೆಯುಂ ಬಿಗಿದಪ್ಪಿ ಅತ್ಯಂತ ಮೋಹಾ ವ್ಯಾತನಾಗಿ ಕದಪುಗಳಂ ಮುದ್ದಾಗೈಯುತ ಫಾಲಮುಂ ಚುಂಬಿಸುತ ತಲೆಯುಂ ಸವರುತ್ತ ಶೈತ್ಯೋಪಚಾರಂಗಳಿಂ ಪ್ರಜ್ಞಾವಂತಳಿಂ ಮಾಡಿ, ಆಕೆಯೊಡನೆ ಸಲ್ಲಾಪಮುಂ ಮಾಡುತ ಪರಮಾನಂದಭರಿತರಾಗಿ, ಅನ್ಯೋನ್ಯ ಯೋಗಕ್ಷೇಮಗಳಿಂ ವಿಚಾರಿಸುತ್ತಾ ಸುಖಿನಿಂದಿದ್ದರು.

ಅನಂತರದೊಳಾ ಶೀಲವತಿಯು, ತನ್ನ ಪ್ರಾಣಕಾಂತನಾದ, ಸುಭಾನುರಾಯನೆಡೆಗೆ ಓಡಿಬಂದು, ಹಸ್ತಲಾಘವವಂ ಕೊಡುತ್ತ, ನಿಜಾಂತಃಪುರಕ್ಕೆ ಕರೆದು ಕೊಂಡು ಹೋಗಿ, ನಿನ್ಮತರನಾದ ತನ್ನ ಹಂಸತೂಲಿಕಾ ತಲ್ಪ ಸಂಯುತ ಮಣಿ ಮಂಚದೊಳಾತನಂ ಕುಳ್ಳಿರಿಸಿ, ಅತಿ ಭಯದಿಂ ಹೊರಸಾರಿ ತನ್ನ ಪುರುಷ ವೇಷ ಮುಂ ತೊರೆದು, ದಿವ್ಯ ಭೂಷಣಂಗಳಿಂದಲಂಕೃತೆಯಾಗಿ ನೀರಾಜ್ಞಂ ಸೀತೆಯನ್ನುದ್ಧರತ್ನಮುಯ ದಿವ್ಯ ಕುಪ್ಪಸಮುಂ ತೊಡಿಸಿ, ಶೀಘ್ರದೊಳು ಬಂದು ಹಾ ಪ್ರಾಣಕಾಂತನೇ ; ಎಂದಾ ಸುಭಾನುರಾಯನಂ ಬಿಗಿದಪ್ಪಿ, ನಿನ್ನನ್ನಗಲಿದ ಮೂವ ಲು ನನ್ನ ಕಾಲವೆಲ್ಲವೂ ಅನೇಕ ಕೋಟಿ ಯುಗಗಳಂತಾದವು, ಇಂದು ನಾಂ ಧನ್ಯ

ಳಾದೆನು ನನ್ನ ಕೈ ಪಿಡಿದುದಕೆ ನೀನೆನಿತು ಕಷ್ಟಂಗಳಂ ಹೊಂದಿದೆ, ನಿನ್ನ ದೇಹವ ಎಷ್ಟು ಬಳಲಿತೋ ? ಹಾ ! ಹಾ ! ಎಂದು ಬಿಕ್ಕಿ ಬಿಕ್ಕಿ ಅಳುತ್ತಾ ಕಣ್ಣೀರು ಧಾರೆಯಿಂದ ಪ್ರಿಯನ ಅಂಗಮಂ ತೊಯಿಸುತ್ತಾ ಅತ್ಯಂತ ಸ್ನೇಹಮಂ ತೋರಿ ಸುತ್ತಿರುವ ಪ್ರಾಣಕಾಂತೆಯಾದಾ ಶೀಲವತಿಯುಂ ಬಿಗಿದಪ್ಪಿ, ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು, ತಲೆಯಂ ಸವರುತ ಕದಪುಗಳಂ ಮುತ್ತಿಡುತ ಸನಾ ಧಾನ ಲಾಲನೋಕ್ತಿಗಳಂ ಮನ್ನಿಸುತ್ತಾ, ಹೇ ! ಪ್ರಾಣಪದಕವೇ ! ನನಗಾಗಿ ಅನ್ನಾಹಾರಂಗಳಂ, ಸಕಲ ಭೋಗಂಗಳಂ ತೊರೆದು, ಶಿರೀಷದಂತತಿ ಮೃದುಲ ಮಾದ ನಿನ್ನೀಗಾತ್ರಮಂ ಮಹಕ್ಕಷ್ಟಂಗಳಿಗೀಡು ಮಾಡಿದೆನಲಾ ? ನನ್ನ ಕೈಯ್ಯಂ ಪಿಡಿದುದಕ್ಕೆ ನಿನಗಿಂಥಾ ಶ್ರಮೆಯಂ ಸಂಘಟಿಸಿದ ನಾನು ಮಹಾ ಪಾಪಿಯು. ಕೈಪಿಡಿದ ಪತಿಯೇ ಗತಿಯೆಂದಿಹ ಮಹಾ ಪತಿವ್ರತಾ ಶಿರೋಮಣಿ ಯಾದ ಪತ್ನಿಯಂ ಇಂಥಾ ಕಷ್ಟಂಗಳಿಗೆ ಗುರಿಮಾಡಿದ ಪಾಪಿಷ್ಠನು, ಈ ಲೋಕದೊಳಿರುವನೇ ಎಂದು ಹಂಬಲಿಸುತ್ತಾ, ಬಾರಿ ಬಾರಿಗೂ ಕಾಂತೆಯ ಮೈದಡವುತ್ತಾ ಇರುವ ತನ್ನ ಮನೋವಲ್ಲಭನ ಪ್ರೇಮಾತಿಶಯವನೆ ನೋಡಿ, ಆನಂದಾಂಬುಧಿ ಮಗ್ನಳಾಗಿ ಎದ್ದು, ಪತಿಯ ಪಾದಗಳಮೇಲೆ ತನ್ನ ಮಸ್ತಕವನ್ನಿಟ್ಟು ಎಲೈ ಪ್ರಾಣೇಶನೇ ! ನಿನ್ನ ವಾಪಸೇವಕಳಾದ ನನ್ನಿಂದ ಹೊಂದಿದ ಕಷ್ಟಂ ಗಳನ್ನೆಲ್ಲವಂ ಕ್ಷಮಿಸಿ ಬೇಡುವೆನೆಂದೊರೆಯುತ್ತ, ಪತ್ಯಂಗ ಸಂಸ್ಪರ್ಶ ಜನಿ ತಾನಂದದಿಂಸೋರುವ ಆನಂದ ಬಾಷ್ಪಧಾರೆಯಂ ತನ್ನ ದುಕೂಲಾಂತದಿಂದೂ ರಸಿ, ಸಂತೈಸಿ, ಆ ಶೀಲವತಿಯುಂ ಕುರಿತು,

ನಿಧಿನಿವಹಮಿನಿಸೊಸ್ಪೃಷ್ಟಂಧಕೋದೃಷ್ಟಲಾಭಂ ಫಲಮಿನ ತಸಸೋಸ್ಮಿನ್ನನ್ಯ
ನಿಸ್ಪಸ್ಯವಂಧ್ಯಾ । ಶಿಶುಮಿವನಿಜಮಂಕೇದಾಪ್ಸ್ಯಮಾನಂದಮಪ್ಸೋಣ್ಣೀಸ್ತವ
ಮುಖ ಶಶಿಬಿಂಬಂ ಮಾನಿನಿ ಪ್ರಾಪ್ತಪುಣ್ಯಂ ॥

ಎಲೈ ಪ್ರಾಣಕಾಂತೆಯೇ ! ಹುಟ್ಟು ದರಿದ್ರನು ನಿಕ್ಷೇಪವನ್ನು ಕಂಡು ತಾನು ಹ್ಯಾಗೆ ಸಂತೋಷಿಸುವನೊ ? ಹುಟ್ಟುಕುರುಡನಿಗೆ ಕಣ್ಣು ಬಂದರೆ ಲೋಕದ ಪರಿಯನ್ನೆಲ್ಲವಂ ನೋಡುತಾ, ಎಂತು ಸಂತೋಷ ಭರಿತನಾಗು ವನೋ ? ಮನುಷ್ಯನಾದವನು ಕ್ರೂರತರವಾದ ತಪವಂ ಮಾಡಿ ಆ ತಪಃಫಲ ವನ್ನು ಅದೇ ಜನ್ಮದೊಳು ಹೊಂದಿದರೆ, ಎಷ್ಟು ಹರುಷಮಂ ತಾಳುವನೋ ? ಬಹುಕಾಲಂ ಮಕ್ಕಳಿಲ್ಲದೆ ಕಡೆಯೊಳು ಗರ್ಭವಂ ತಾಳಿ, ಪುತ್ರನಂ ಪಡೆದಾ ಕಾಂತಾಮಣಿಯು ತನ್ನ ಬಾಲನಂ ತೊಡೆಯಮೇಲೆ ಮಲಗಿಸಿಕೊಂಡು ಬಾಲ ಲೀಲೆಗಳಂ ಕಂಡು, ತಾನೆಂತು ಆನಂದವಂ ಹೊಂದುತ್ತಿಹಳೋ ? ಕೈಪಿಡಿದು ಅಗಲಿ ಹೋಗಿದ್ದು, ಇಂದು ದೊರೆತ ನಿನ್ನ ಮುಖಚಂದ್ರನಂ ನೋಡಿದ ನನ್ನ ಅಂತರಂಗವು ಇವರುಗಳಿಗಿಂತಲೂ, ನೂಮ್ಮಡಿ ಹೆಚ್ಚಾಗಿ ಉಲ್ಲಾಸಗೊಂಡಿ

ಪುದು. ಇದಂ ಬಣ್ಣಿಸಲು, ಸಹಸ್ರ ಫಣಾಮಣಿಮುಖನಾಗಿರುವ ಆದಿಶೇಷನಿಗೂ ಅಸಾಧ್ಯಮಾಗಿರುವದು. ಇತರರಿಂದ ಹ್ಯಾಗೆತಾನೆ ಸಾಧ್ಯವು, ಎಂದು ಆನಂದ ಪರವಶನಾಗಿ ನುಡಿಯುತ್ತಿರುವ ಪತಿವಾಕ್ಯಂಗಳನ್ನಾಲೈಸಿ, ಸಂತೋಷಾತಿಶಯ ದಿಂಪ ಮೈಯುಬ್ಬಿ ತೊಟ್ಟಿರ್ದ ರತ್ನದ ಕುಪ್ಪಸವು ಪಟ್ಟನೆ ಬಿರಿಮುಪ್ಪೋಗೆ, ಮುಖಚಂದ್ರನೊಳು ಮಂದಹಾಸ ಚಂದ್ರಿಕೆಯುಂ ಸೂಚಿಸುತ್ತ, ಎಲ್ಲೆ ಮನೋವಲ್ಲಭನೇ ! ನನ್ನ ಹೃದಯದೊಳೊಂದು ಸಂದೇಹ ಮಿಪ್ಪುದು, ಅದಂ ಕಾಳಿಕಾ ದೇವಾಲಯದೊಳು ನಿವಾರಿಸಿಕೊಳ್ಳಬೇಕೆಂದೆನಲು, ಸುಭಾನುರಂಜನಂ ಹೇ ಮುಂಗಳಾಂಗಿಯೇ ! ಇಲ್ಲದಿರುವದೊಂದಂ ದೋಷಮೆಂದು ಜಾವಿಸಿಕೊಳ್ಳುತ್ತಾ ಕಳವಳಂ ತಾಳಬೇಡ, ನನ್ನ ಮನಸಾವಾಚಾ ಕರ್ಮಣಾ ಮಹಾ ಪತಿವ್ರತಾ ಶಿರೋಮಣಿಯಾದ ದಮಯಂತೀ ದೇವಿಯೇ ನೀನೆಂದು ತಿಳಿದಿರುವೆನು, ಆಕೆಯಂತೆಯೇ ನೀನೂ ಕಷ್ಟಂಗಳಂ ತಾಳಿದೆ, ಇಂಥಾ ಕ್ರೂರಾವಸ್ಥೆಯಲ್ಲಿಯೂ ಕೈ ಬಿಡದವನಿಂದ ತನಗೀಯಬಸ್ಸೆ ಸಂಭವಿಸಿತೆಂದು ನನ್ನಂ ಜರಿಯಬೇಡ, ನನ್ನೊಳಸೂಯಾಭರಳಾಗದೆ, ಪಾಪಿಯೂ, ಕ್ರೂರನೂ, ನೀಚನೂ ಆಗಿರುವ ನನ್ನೊಳಂತು ಪ್ರೀತಿಯನ್ನಾಂತಿರುವ ನಿನ್ನನ್ನು ನೋಡುವುದಕ್ಕೆ ನನ್ನ ಕಂಗಳು ಸೂರ್ಯನೇಳಿಗೆಯೊಳಗಿನ ಸ್ಪೆಟಿಲಿಗಳಂತೆ ಲಜ್ಜಾಸಂಕುಚಿತಂಗಳಾಗುವವು. ನನ್ನ ಮುಖವಂ ನಿನಗೆ ತೋರುವದು ಹ್ಯಾಗೆ ?

ರಕ್ಷಿತಾವಾರಪ್ರೇತಾಶ್ಚ ಪತಿತ್ಯಕ್ತಾ ಅಪಿಸ್ತ್ರಿಯಂ । ಸ್ವಶೀಲರಕ್ಷಣಪರಾನ
ಕುರ್ವಂತಿ ಕುಲಸಂತ್ರಿಯಃ ॥

ಸತ್ಕುಲಸ್ತ್ರಿಸೂತರಾದ ಪತಿವ್ರತಾ ಸ್ತ್ರೀಯರು, ತನ್ನ ಪತಿಯಿಂದ ಕಾಪಾಡಲ್ಪಟ್ಟವರಾಪರು ಕಾಪಾಡಿಲ್ಲದೇ ಇರುವವರಾದರೂ ಪತಿಯಿಂದ ಬಿಡಲ್ಪಟ್ಟವರಾದಾಗ್ಯೂ, ತನ್ನ ಪತಿಯೇ ಗತಿಯೆಂದು ನಂಬಿ, ವಿಶ್ವಾಸಿಸುತ್ತಿರುವರೆಂದು ನ್ಯಾಯಶಾಸ್ತ್ರವು ಹೇಳುತ್ತದೆ. ಮತ್ತೂ, ಪ್ರೇರನೀರಂಗಳಂ ಬೆರಸಿದ್ದ ಪಾತ್ರೆಯೊಳು ನೀರನ್ನು ಬಿಟ್ಟು ಪಾಲನ್ನೇ ಹಂಸಪಕ್ಷಿಯು ಹ್ಯಾಗೆ ಗ್ರಹಿಸುವದೋ ಹಾಗೆಯೇ ಪತಿವ್ರತಾ ಶಿರೋರತ್ನೆಯರು ತಮ್ಮ ಪತಿಗಳೋಳಿಹ ದುರ್ಗುಣಗಳನ್ನೆಲ್ಲವಂ ಬಿಟ್ಟು, ಸುಗುಣಗಳನ್ನೇ ಹೊಗಳುತ್ತಾ, ಆತನಂ ಪ್ರೀತಿಸುವರು. ಹೀಗೆಯೇ ಒಪ್ಪುತ್ತಿರುವ ನೀನು ನನ್ನ ಎಲ್ಲಾ ಅಪರಾಧಂಗಳಂ ಕ್ಷಮಿಸಬೇಕೆಂದು ಬೇಡುವೆನು, ಎಂದು ಕ್ಷಮಾಪಣೆಯಂಬೇಡುವ ತನ್ನ ಪ್ರಾಣನಾಥನಂ ಕುರಿತು, ಎಲ್ಲೆ ದೇವ, ಬಹುಕಾಲಮಗಲಿರ್ದ ವಿಕಾಂಗಿಯಾಗಿ ತಿರುಗುತ್ತಿರ್ದ ಸತಿಯನ್ನು ಪುನಃಸ್ವೀಕರಿಸಿದನೆಂಬ ಲೋಕಾಪವಾದವನ್ನು, ನಂಹೊಂದಬಾರದೆಂಬುವದೇ ನನ್ನ ಕೋರಿಕೆಯು, ಅದು ಹಾಗಿರಲಿ, ನಮ್ಮ ಶಿಶುವಂ ಆ ಕಾಳಿಕಾ ದೇವಾಲಯದೊಳು ಇಟ್ಟು ಬಂದಿರುವೆನು. ಅದರ ಮುಖವನ್ನಾದರೂ ತಾವು ನೋಡಬೇಡವೇ? ಎನಲು

ಸುಭಾನುರಾಯನು ಕನಿಕರದೊಳು ನಾನೂ ಅದೇ ಭ್ರಾಂತಿಯುಳ್ಳವನಾಗಿದ್ದೇನೆಂದು ಆಕೆಯ ಮನವಂ ಒಪ್ಪಂಬಡಿಸಿ, ಆ ದಿನದ ರಾತ್ರಿಯೊಳು ಪರಸ್ಪರಾನುರಾಗಯುತರಾಗಿ, ಕ್ರೀಡಾಲೋಲರಾಗಿದ್ದು, ಮರುದಿನ ದುದಯದೊಳೆದ್ದು, ಕಾಲೋಚಿತ ಕರ್ಮಂಗಳಂ ನೆರನೇರಿಸಿಕೊಂಡು, ಮಂಗಳ ಕಾಶೀಪಟ್ಟಣದ ವೃದ್ಧರಾಯನನ್ನೂ, ಆತನ ಧರ್ಮಾರ್ಯಂಗನೆಯನ್ನೂ ಕರೆಯಿಸಿ, ಉಚಿತಾಸನಾಸೀನರಂ ಮಾಡಿಸಿದ ಶೀಲವತಿಯು, ಆ ವೃದ್ಧರಿಗೆ ಸಾಷ್ಟಾಂಗಮಂ ಗೈದು, ಮುಕುಳಿತ ಕರಕಮಲಳಾಗಿ ಎದುರೊಳು ನಿಂದು, ಸ್ವಾಮಿ ಮಹಾರಾಜರೇ ನಾನು ಪುರುಷದ್ವೇಷ ಬಾರಿಣಿಯಾಗಿ, ಶಿಶುವು ಮಾತೃಗರ್ಭದೊಳು ಸುಖವಾಗಿರ್ಪಂತೆ, ತವ್ಮ ಗರ್ಭವಾಸದೊಳು ಈ ವರಿಗೂ ಸೌಖ್ಯಮಂ ತಾಳುತಿರ್ಪೆನು. ಈಗ ನನ್ನ ಪತಿಯೂ, ಮೈದುನನೂ ಬಂದಿದ್ದಾರೆ, ಎಂದು ತನ್ನ ಹಿಂದಿನ ಸರ್ವಾಚಾರಂಗಳನ್ನೆಲ್ಲಮಂ ಅರುಹಿ, ನಿಮ್ಮ ಕುವರಿಯಾದೆನ್ನಂ ಪರಿಗ್ರಹಗೆ ಕಳುಹಬೇಕೆಂದು ವಿಜ್ಞಾಪಿಸೆ, ಆ ವೃದ್ಧರಾಯಂ ಕೇಳುತ ಲೀಕೆಯ ಶಕ್ತಿ ಸಾಹಸಾತಿಶಯಂಗಳಿಗೆ ಮೆಚ್ಚುತ್ತಾ, ಇಂಥಾವಳು ತನ್ನನ್ನು ಆಗಲಿ ಪೋಗುವಕಾಲ ವೇದಗೆ, ಎಂಬ ವ್ಯಸನಾಕ್ರಾಂತನಾಗಿ, ಹಾಗೆಯೆ ಮೈಮರೆತು, ಶ್ರೀತ್ಕೋಪಚಾರಂಗಳಂ ಪ್ರಜ್ಞಾಮಾತ್ರನಾಗಿ, ಅಮ್ಮಾ ಸುಕುಮಾರಾಂಗಿಯೇ ನನ್ನೀ ಸಂಸ್ಥಾನವು ಶತ್ರುಗಳ ಕೈಸಾದುವದೆಂತಲೂ, ನಾವೆಲ್ಲರೂ ಮೃತ್ಯುವಿನ ಬಾಯಿಗೆ ತುತ್ತಾಗುವ್ರೆವೆಂದೂ, ಬಹು ಭಯಾಕ್ರಾಂತರಾಗಿದ್ದೆವು. ಅಂಥಾ ದುರವಸ್ಥೆಯಲ್ಲರುವ ನಮ್ಮನ್ನೆಲ್ಲರಂ ಪರಿಪಾಲಿಸಿ, ಸಂಸ್ಥಾನಮಂ ಬೀರ್ಣೋದ್ಧಾರಮಾಡಿದೆ, ಈ ಮುಪ್ಪಿನೊಳು ನಮ್ಮನ್ನು ಕಾಪಾಡುವಿಯೆಂದು ನಂಬಿದ್ದವರಂ ಕೈಸೆರೆಯೊಳು ಬಿಡುವಂತಾದುದು. ಒಂದ ಬ್ದದಾರಭ್ಯ ನೀಂ ಕೊಟ್ಟಿದ್ದ ಭಾಷೆಯಂತೆ ಬಹು ಸೌಖ್ಯವಾಗಿ ಕಾಪಾಡುತ್ತಲಿದ್ದ ಮುಂದೆಮಗಾದು ದಿಕ್ಕು, ನಮ್ಮ ರಾಜ್ಯವೇನಾಗುವದೋ ನಾವರಿಯವು ಇದನ್ನೆಲ್ಲಮಂ ನೀಂತೊಂದುಪೋದೊಡೆ, ನಡುನೀರೊಳು ಕಣುಬಿಟ್ಟಂತೆಮ್ಮ ಗತಿಯಾಗುವದು, ನೀನೇ ಗತಿಯೆಂದು ನಂಬಿದವರಂ ಕಾದುಪಾಲುಮಾಡಿ ಹೋಗಲುಬಹುದೆ, ಎಂದಾರ್ತಸ್ವರರಾಗಿ ವೃದ್ಧರಾಜ್ಞೀ ರಾಜರಿರ್ವರೂ ಹಂಬಲಿಸುವದಂ ಕಂಡಾಶೀಲವತಿಯು ಕನಿಕರಮಾಂತು. ಎಲೈ ವೃದ್ಧರಾಗಳಿರಾ ! ನೀವು ಹೀಗೆ ಹಂಬಲಿಸದಿರದು, ನೀವೆ ನನಗೆ ಮಾತಾಪಿತೃಗಳೆಂದು ನಂಬಿರುವೆನು. ನನಗೆ ಸಂಭವಿಸಿದ ದುರವಸ್ಥೆಯಲ್ಲಿ ಹೆತ್ತವರಿಗಿಂತಲೂ ಅತ್ಯಧಿಕವಾಗಿ ನಿವಿನ್ನಿಂದ ಪೋಷಿತಳಾಗಿದ್ದೇನೆ. ನಮ್ಮ ಮಾತಾ ಪಿತೃಗಳು. ಅತ್ತೆಮಾವಂದಿರೂ ಇನ್ನೂ ದೇಕ್ಷಾಂಧವರಾದವರೆಲ್ಲರೂ ಕಳವಳಗೊಳ್ಳುತ್ತಿರುವರು, ನಾವು ಜೀವಿಸಿರುವ ಭಾಗದಲ್ಲಿಯೇ ಸಂಶಯಗ್ರಸ್ತರಾಗಿ ಪ್ರಾಣವುತ್ತಿರುವವರನ್ನೋಡಿ ಸಂತೈಸಿ, ಕೆಲವು ದಿನಗಳಲ್ಲಿ ಮರಳಿ ಒಂದು ನಿಮ್ಮೆಡೆಯೊಳಿರುವೆವು, ಇದರೊಳು ಸಂದೇಹವಿಲ್ಲವು, ಹಾಗೂ

ನೀವು ನಮ್ಮತಿಸಿದಿರ್ದೊಡೆ ನಮ್ಮೊಂದಿಗೆ ಬಂದು ನಮ್ಮ ಬಂಧುಜಾಲಮನೆಲ್ಲಮುಂ ಸಂತೈಸಿ, ಸಂತೋಷಮಾಗಿರ್ದು ನಮ್ಮನೊಪಗೊಂಡು ಮರಳಿ ಒರಬಹುದೆಂ ದೊಯಲು. ಮುಂಗಳ ಕಾಶೀರಾಯನೂ, ಆತನ ಮಹಿಸಿಯುಂ, ಪರಮಾನಂದ ಭರಿತರಾಗಿ, ಆ ಮಾತಿಗೆ ಸಮ್ಮತಿಗೊಳ್ಳಲು, ಆ ರಾಜ್ಯದ ಮಂತ್ರಿಯುಂ ಕರೆ ಯಿಸಿ, ನಾವು ಮರಳಿ ಬರುವನ್ನರಿಗೂ ಈ ರಾಜ್ಯಮಂ ಕ್ರಮುರಿತು ಪೊರೆಯು ತ್ತಿರಬೇಕೆಂದು ಪೇಳಿ, ಮುನ್ನಿಕೆಯನಾತನ ಕೈಯ್ಯೊಳಿತ್ತು ರಾಜ ಪುರೋಹಿ ತರಂ ಕರೆಯಿಸಿ ತಮ್ಮ ಪ್ರಯಾಣಕ್ಕೆ ಯೋಗ್ಯವಪ್ಪಾದ ಮುಹೂರ್ತಮಂ ಗೊತ್ತು ಮಾಡಿಸಿ, ಅವರಂ ಬಹುಮಾನಗಳಿಂ ಮನ್ನಿಸಿ ಕಳುಹಿದಳು.

ಇತ್ತಲು ತಮ್ಮ ಪ್ರಯಾಣಕ್ಕೆ ಬೇಕಾದ ಸಕಲ ಸಾಮಗ್ರಿಗಳಂ ಸಿದ್ಧಗೊಳಿಸಿ ಹಸ್ತ್ಯಶ್ವರಥಪದಾತಿಗಳಂ ಸ್ವಾಮಿ ಭಕ್ತಿಪರಾಯಣರಾದ ಸೇವಾಜನರಂ ಸೇರಿಸಿ ಕೊಂಡು, ತಾನೂ ತನ್ನ ಪತಿಯುಂ, ಮೈದುನನೂ ವಾರಗಿತ್ತಿಯುಂ, ವೃದ್ಧರಾ ಜ್ಞೀ ರಾಜರೂ ಸೇರಿ, ಜ್ಯೋತಿಷ್ಕರಿಂದ ನಿರ್ಣಯಿಸಲ್ಪಟ್ಟ ದಿವ್ಯ ಸುಮುಹೂರ್ತ ದೊಳು ಪ್ರಯಾಣಮುಂ ಬೆಳೆಯಿಸಿ, ಸೆಂಗಡಲೇ ಕರವೀರಪುರದ ಮಂತ್ರಿಕುಮಾರನಾದ ದುರ್ಜಯನನ್ನೂ, ಬ್ರಾಹ್ಮಣನಂ ಕೊಂದಿರ್ದ ಜೋರದಸನ್ನೂ ಕರೆತರುವಂತಾಜ್ಞಾ ಪಿಸಿ ಹೊರಟು ಬರುತ್ತಾ, ದಾರಿಯೊಳು ವೃದ್ಧರಾಪ ಮುಂಗಳ ಕಾಶೀರಾ ಜ್ಞೀರಾಜರನ್ನು ಸಕಲೋಪಚಾರಂಗಳಿಂದ ಮನ್ನಿಸುತ್ತಾ ಬರುವದಾರಿ ಯೊಳು ಕಳ್ಳನಿಂದ ಹತನಾದ ಬ್ರಾಹ್ಮಣನ ಮರಣಸ್ಥಾನಕ್ಕೆ ಬಂದು, ಆ ಕಳ್ಳನಂ ಅಲ್ಲಿಗೆ ಬರಿಸಿ, ಎಲೋ ಪರಮಪಾಪಿಯಾದವನೇ ! ಈ ಬಿಪ್ಪೆಯೊಳಳ್ಳುವೇ ನೀಂ ಬ್ರಾಹ್ಮಣನಂ ಕೊಂದಪ್ಪ, ಎಂದವನಿಗೆ ಎಚ್ಚರಿಸಿ, ಆಬಳಿಯೊರ್ವ ವೃದ್ಧೆಯ ಶಾಖೆಯೊಳು ಅವನಂ ನೇಣುಹಾಕಿಸಿ, ಹರುಷಸ್ವಾಂತಳಾಗಿ, ಅಲ್ಲಿಂ ಹೊರಟು ಬರುತ್ತಾ ಕಾಳಿಕಾಲಯವ್ವ ನೆಲೆಗೊಂಡಿರುವ ಪರ್ವತ ಪಾರ್ಶ್ವಕ್ಕೆ ಬಂದು ಪರ್ವತಾರೋಹ ಣಂ ಗೈದು, ಅಲ್ಲಿ ಎಂಜೆ ಕೊಪ್ಪರಿಗೆಯೊಳು ಹಾಕಿದ್ದ ತನ್ನ ಶಿಶುವಿನ ಕಳೇ ಬರವನ್ನೂ, ಇಬ್ಬರು ದಾಸಿಯರ ಕಳೇಬರಗಳನ್ನೂ ಹೊರಗೆ ತೆಗೆಯಿಸಿ ನೋಡಲಾಗಿ, ಸ್ವಲ್ಪವಾದರೂ ಕಂಗೆಡದೆ, ಇದ್ದದ್ದುಂ ಕಂಡು ಎಲ್ಲರೂ ಆತ್ಯಾಶ್ಚರ್ಯಪರವಶರಾಗೆ ! ಆ ಸಮಯದೊಳಾ ಮಹಾ ಕಾಳಿಕಾದೇವಿಗೆ ಅತ್ಯಂತ ಭಕ್ತಿಯೊಳು ಪೂಜಾದಿ ಗಳಂ ಮಾಡಿಸಿ, ತಾನು ಸಾಷ್ಟಾಂಗವಾಗೆರಗಿ ಮುಕುಳಿತ ಕರಕಂಜಳಾಗಿ, ಎಲೌ ದೇವಿಯೇ ! ನಾನು ಪತಿವ್ರತೆಯಾಗಿರುವವೇ ನಿಜವಾದರೆ, ಈ ಕಳೇಬರಗಳಂ ಜೀವಿಸಿಕೋ ಅಲ್ಲದಿರ್ದೊಡೀ ನನ್ನ ಪ್ರಾಣಗಳನ್ನು ನಿನಗೆ ಬಲಿಯಾಗಿ ಸಮರ್ಪಿಸುವೆನೆಂದು ವಿಕಚಿತ್ತ ಮನೋಭಾವಳಾಗಿ ಬೇಡುತ್ತಿರುವ ಈ ಮಹಾ ಪತಿವ್ರತಾ ಶಿರೋಮಣಿಯೊಳು ಕೃಪಾಪೂರಳಾಗಿ ಪೂಜಾರಿಗೆ ಮೈದುಂಬಿ ಬಂದು, ಶೀಲವ ತಿಯೇ ! ಈ ದೇಹಂಗಳಂ ನನ್ನ ಪಾದಂಗಳೊಳು ಕೆಪವಿ ಎಲ್ಲರೂ ಹೊರಗೆ

ಹೋಗಿ ಕಪಗಳಂ ಮುಚ್ಚಿಕೊಳ್ಳಿರಿ, ಇವರಂ ಬದುಕಿಸಿಕೊಡುವೆನೆಂದು ಹೇಳಲು, ಅದರಂತೆಯೇ ಮಾಡಿ, ನಿದ್ದೆ ತೊರೆದವರಂತೆ ಆ ಇರ್ವರು ದಾದಿಯರೂ ಎದ್ದು ಬಾಗಿಲ್ಗಳಂ ತೆರೆದುಕೊಂಡು ಹೊರಗೆ ಬಂದರು. ಆ ಬಾಲಕನ ಶಬ್ದಮಂ ಕೇಳಿದ ಮಾತ್ರದಿಂದಾ ಶೀಲವತಿಗೆ ಸೋದರ ವಾತ್ಸಲ್ಯದಿಂದ ಸ್ತನ್ಯಂ ಜನಿತವಾಗಿ ಪಯೋಧರಂಗಳಿಂದ ಉಕ್ಕಿಬರುತ್ತಾ ಇರೆ ಹರುಷಾಂಬುಧಿಯೊಳು ತೇಲಾಡುವಂತಾಗಿ ಭರದೊಳು ದೇವಾಲಯದೊಳು ಪೊಕ್ಕು, ತನ್ನ ನಂದನನೆನ್ನು ಎತ್ತಿಕೊಂಡು ಬಿಗಿದಪ್ಪಿ, ಬಾರಿಬಾರಿಗೂ ಮುತ್ತಿಡುತ್ತಾ, ಮುಖವನ್ನು ನೋಡಿ ನೋಡಿ ಕದಪುಗಳಂ ಚುಂಬಿಸುತ್ತಾ, ಪದೇಪದೇ ಶಿರನಾಘ್ರಾಣಿಸುತ್ತಾ ಎತ್ತಿಕೊಂಡು ಬರುವ ದಾರಿಯೊಳು ನಿಂತಿದ್ದ ತನ್ನ ತೌರುಮನೆಯವರಾದ ದಾದಿಯರಿರ್ವರಂ ಕಾಣುತ್ತ ಅಮಂದಾನಂದ ತುಂದಿಲಳಾಗಿ ಅವರಂ ಬಿಗಿದಪ್ಪಿ, ಸಬಿ ಸಲ್ಲಾಪಮಂ ಗೈಯುತ್ತ ಪದೇಪದೇ ತನ್ನ ಮೊಗುವಂ ನೋಡಿ, ಹಿಗ್ಗುತ್ತಾ ತನ್ನ ಪತಿಯಾದ ಸುಭಾನುರಾಯನೆಡೆಗೆ ಬಂದು, ಎಲ್ಲೆ ಪ್ರಾಣಕಾಂತನೇ ! ಈಗ ನನ್ನ ಮನವು ನಿಷ್ಕಲ್ಮಷವಂ ತಾಳ್ದುದು, ಈ ನಿನ್ನ ಮುದ್ದು ಕುಮಾರನನ್ನು ನೋಡಿಮಿಯಾ ಎಂದು ತೋರಿಸಲು, ಅತಿಭರದೊಳಾ ಶಿಶುವನ್ನೆತ್ತಿಕೊಂಡು ದರಿದ್ರನು ನಿಧ್ಯೇವಂ ಕಂಡಂತೆ ಸಂತೋಷಿಸುತ್ತಾ, ದುಃಖಿವುಂ ಚುಂಬಿಸುತ್ತಾ ಮುಖನಾಘ್ರಾಣಿಸುತ್ತಾ, ಬಾರಿಬಾರಿಗೂ ಆ ಕಂದನ ಸೊಬಗಂ ನೋಡಿ ಹಿಗ್ಗುತ್ತಾ ಆನಂದಪರವಶನಾಗಿರೆ, ಶೀಲವತಿಯು ಪತಿಯಂ ಕುರಿತು, ಹೇ ಪ್ರಾಣೇಶನೇ ! ನನಗಿನ್ನೊಂದು ಸಂಶಯವಿಪ್ಪುದು, ವಿನಸ್ಸು ವಿಯೋ? ನಿಮ್ಮ ಮಂತ್ರಿಯಾದ ಆಕಳಂಕನು ತನ್ನ ಪುತ್ರನಾದ ದುರ್ಜಯನಂ ಕೂಡಿಕೊಂಡು ತವುಗೆ ಕನ್ಯಾನ್ವೇಷಣಕ್ಕಾಗಿ ಬಂದಿದ್ದ ಕಾಲದೊಳು ತಾವ್ರ ಕಣ್ಣಿಲ್ಲದವರೆಂ ತಲೆನ್ನೊಡನೆ ಹೇಳಿದುವಂತೆ ಈ ದುರ್ಜಯನು ಹೇಳಿ ಕಳುಹಿದಂ. ಅದರಿಂದಲೇ ಸ್ವಯಂವರಮಂ ಕಲ್ಪಿಸಿದ್ದು, ಮುಂದಿನ ಸಂಗತಿಗಳಂ ಅವನ ಮುಖೇನ ತಾವೇ ಕೇಳಿರುವಿರಷ್ಟೆ ? ಈತನು ಜನಿಸಿದ್ದು ನೊಪಲು ನಿಮ್ಮ ಆಸ್ಪದಲ್ಲಿಂದೀ ಬೆಳೆದು ಪ್ರಾಬಲ್ಯಕ್ಕೆ ಬಂದು ನಿಮ್ಮ ಕಾರ್ಯಕ್ಕೆ ಭಂಗವನ್ಮಾಲೋಚಿಸುತ್ತಾ ಕೇಡುಗಳಂ ಮಾಡಿ, ಕಡೆಗೆ ಅವನ ನೀಚತ್ವವನ್ನೇ ತೋರಿಸಿದನು.

ಆಕಾರೈರಿಂಗಿತೈರ್ಗತ್ಯಾ ಚೇಷ್ಟಿತೈರ್ಭಾಷಿತೈರಪಿ । ನೇತ್ರವಕ್ತ್ರವಿಕಾರಾಭ್ಯಾಂ ಗೃಹ್ಯತೇಯಾದಾಂತರಂವುನಃ ॥

ಒಬ್ಬ ದುಷ್ಟಪುರುಷನ ನೀಚಾಶಯವುಂ ಕಾಣದೇಕಾದರೆ ಅವನ ಆಕಾರದಿಂದಲೂ, ಮಾತುಗಳ ಅಭಿಪ್ರಾಯದಿಂದಲೂ, ನಡತೆಯಿಂದಲೂ, ಅಂಗಚೇಷ್ಟೆಗಳಿಂದಲೂ, ಮಾತನಾಡುವ ಬಗೆಯಿಂದಲೂ, ಕಂಣು ಮುಖಗಳ ವಿಕಾರದಿಂದಲೂ ಕಂಡು ಹಿಡಿಯಬೇಕೆಂಬ ನ್ಯಾಯಾನುಗುಣವಾಗಿ ಮಾತಿನಿಂದ ಈ ಪಾಪಿ

ಯಾದ ದುರ್ಜಯನನ್ನು ಸಕಲ ಭಾಗಗಳಲ್ಲಿಯೂ, ಪರೀಕ್ಷಿಸಿ ನೋಡಿದ್ದಾಯ್ತು. ಇವನು ಸಾಮಿದ್ರೋಹಿಗಳಲ್ಲಿ ಮೊದಲನೆಯವನಾಗಿದ್ದಾನೆ. ಇವನಂ ಮಹಾ ಕಾಳಿಗೆ ನರಬಲಿಯಾಗಿ ಸಮರ್ಪಿಸುವದೇ ಸರ್ವೋತ್ತಮ ಕಾರ್ಯಮೆಂದೊರೆದು, ಅದಕ್ಕೆ ಪತಿಯು ನೊಪಡಂಬಡಿಸಿ ಪರಮಪಾಪಿಯಾದಾ ದುರ್ಜಯನಂ ಕಾಳಿ ಕಾಂಬಾ ಮುಂಭಾಗದೊಳು ನಿಲಿಸಿ, ಬಲಿಯಾಗಿ ಶಿರವಂ ಛೇದಿಸಲು, ನೋಡುತ್ತಿದ್ದ ಸಮಸ್ತಜನರೂ ರಾಜಸಾಸುರ ಸಂಹಾರವುಂ ಕಂಡು ಹರುಷತರಾದ ಸುರ ಸಂದೋಹದಂತೆ ಆನಂದಮಂ ತಾಳ್ದಿರು.

ಅನಂತರದೊಳಾ ಶೀಲವತಿಯು ತನ್ನ ತಂದೆಯಾದ ಭಾಂತ್ರಿಪುರದ ಸುಹೋತ್ರರಾಯನಿಗೀ ಕ್ಷೇಮವನಾಕೆಯಂ ಹೇಳಿ ಕಳುಹಲಾರಾಯುಂ ಪರಮಾನಂದಾಂಬುಧಿ ಮಗ್ನನಾಗಿ ತನ್ನ ರಾಜಮಹಿಮೆಯೊಡಗೊಂಡು, ಚತುರಂಗ ಬಲ ಸಮೇತನಾಗಿ ಸಕಲ ಮಂತ್ರಿಕನಕ ಮಂಗಳಾಧಿವಾಸಾದಿವಸೊತ್ಸವೋಪಕರಣಂಗಳಂಕೊಂಡು ಸುಖಿವುಂ ಕೈಗೊಂಡ ನಂದನೆಯುಂ ಕಾಣಬೇಕೆಂಬ ಲವಲವಿಕೆಯಿಂದ ಹೊರಟನಾಗಿ ಕಾಳಕಾಲಯ ಭೂಧರವುಂ ಹತ್ತಿ ಅಲ್ಲಿ ಸಕಲ ಭೋಗಗಳಿಂದೊಪ್ಪುತ್ತಿರುವ ತನ್ನ ಮಗಳನ್ನೂ ಅಳಯನನ್ನೂ, ದೌಹಿತ್ರನನ್ನೂ ನೋಡಿ ಸಂತೋಷಾಮೃತ ಸಾಗರದೊಳು ತೇಲಾಡುತ್ತಾ, ಅವರಿಂದ ನಮಸ್ಕೃತರಾದಾ ವೃದ್ಧ ರಾಜ್ಞೀರಾಜರು, ಅವರಂ ಹರಸಿ ನೆಗಳಿ, ಅಲಿಂಗಿಸಿಕೊಂಡು ಕುಶಲ ಪ್ರಶ್ನೆಗಳಂ ಮಾಡುತ್ತಾ ತನ್ನ ದೌಹಿತ್ರನಂ ಕಡು ಬಿಗಿದಪ್ಪಿ ಮುದ್ದಿಡುತ್ತಾ, ಶಿರಮಾಘ್ರಾಣಿಸುತ ಹರುಷ ಸ್ವಾಂತರಾಗಿರೆ, ಶೀಲವತಿಯು ಮಹಾಕಾಳಿಗೆ ಅಭಿಷೇಕ ಪೂಜಾದಿಗಳಿಂದ ಮಹದುತ್ಸವಂಗಳಂ ಮಾಡಿಸುತ್ತಾ, ನಾಲ್ಕೈದು ದಿನಗಳಲ್ಲಿಯೇ ಸಂತೋಷದೊಡವಡಿದ್ದ ಸಮಸ್ತ ಪರಿವಾರಾವೃತರಾಗಿ ಅಲ್ಲಿಂ ಹೊರಟು ಕರವೀರಪುರದ ಪ್ರಾಂತಕ್ಕೆ ಬರುವದರೊಳಗಾಗಿಯೇ ಈ ಸುದ್ದಿಯನ್ನು ದೇವಸೇನರಾಯಂಗೆ ಹೇಳಿ ಕಳುಹಿಸಲು, ಆ ರಾಯನು ಪುರವಂ ಸಿಂಗರಿಸಿ, ದೇವಾಲಯಂಗಳೊಳು ಉತ್ಸವಾದಿಗಳಂ ಜರಿಯಿಸಿ, ಚತುರಂಗ ಬಲ ಸಮೇತನಾಗಿಯೂ, ಪುರಜನ ಪೌರಜನ ವಾರ ನಾರೀಬೃಂದ ಸಮಸ್ತ ಬಿರುದುಗಳೊಡಗೊಂಡವನಾಗಿ ಮಂತ್ರಿ, ಪ್ರಧಾನ ಸಾಮಂತರಾಯರಂ ಸೇರಿ ಹೊರಟು, ಪೊಳಲಿನ ಹೊರಭಾಗವನ್ನೆಲ್ಲವಿ ಎದುರು ನೋಡುತ್ತಿರಲು, ಅಲ್ಲಿಗೆ ಬಂದ ಪುತ್ರನನ್ನು ಸೊಸೆಯುಂ ಪೌತ್ರನುಂ ಬೀಗರಂ ನೋಡಿ, ಅಮಂದಾನಂದ ತುಂದಿಲನಾಗಿ ಚಂದ್ರನಂ ಕಂಡ ಸಮುದ್ರರಾಜನೊಲು ಉಬ್ಬಿದ್ದ ಪುತ್ರರಂ ಆಲಿಂಗಿಸಿಕೊಂಮು, ಸ್ನುಷೆಯರಿಂ ನಮಸ್ಕೃತನಾಗಿ ಪೌತ್ರರಂ ಎತ್ತಿಕೊಂಡು ಚುಂಬಿಸುತ್ತಾ ಶಿರವನಾಘ್ರಾಣಿಸುತ್ತಾ ಮೈದಡವಿ ಸಂತೋಷಿಸುತ್ತಾ ಬೀಗರಂ ಕಂಡು, ಪರಸ್ಪರ ಮರ್ಯಾದೆಯನ್ನಿತ್ತು ಎಲ್ಲರಂ ಮನ್ನಿಸಿ ಸಮಸ್ತರೂ ಸೇರಿ, ಮಹದುತ್ಸಾಹದೊಂದಿಗೆ ಹೊರಟು ಪಟ್ಟಣದೊಳು ಪ್ರವೇಶಿಸಿ,

ಒಡ್ಡೋಲಗವಾಗಿ ರಾಜವಾರ್ಗದೊಳು ಬರುತ್ತಾ, ರಾಜಾಲಯನುಂ ಹೊಕ್ಕು, ಷಡ್ರಸಾನ್ನಮುಂ ಸವಿಸ್ತ ಬಂಧು ಸಂವೃತನಾಗಿ ಭುಂಜಿಸಿ ಸುಖಸಲ್ಲಾಪಾದಿಗಳಂ ಮಾಡುತ್ತಿದ್ದು, ಅನಂತರ ಅವರವರ ಅಂತಃಪುರಂಗಳಂ ಸಾರಿ, ಅವರವರ ಕಾಂತೆಯರಂ ಸೇರಿ, ಸುಖನಾಗಿ ಭೋಗಂಗಳನ್ನನುಭವಿಸುತ್ತಾ ನಿದ್ರಾಂಗನಾವಶರಾದರು,

ಮರುದಿನೆದುದಯದೊಳಿಲ್ಲರೂ ತಮ್ಮ ತಮ್ಮ ಕಾಲೋಚಿತ ಕೃತ್ಯಂಗಳಂ ನೆರವೇರಿಸಿಕೊಂಡು, ಎಲ್ಲರೂ ಸೇರಿ ಸಭೆಯಾಗಿ ಕುಳಿತು ತಮ್ಮ ತಮ್ಮ ಪೂರ್ವೋತ್ತರ ಸಮಾಚಾರಂಗಳನ್ನು ಹೇಳುತ್ತಾ ಕೇಳುತ್ತಾ ಅಚ್ಚರಿಗೊಳ್ಳುತ್ತಿರುವ ಕಾಲದೊಳು ಶೀಲವತಿಯು ತನ್ನ ಮೈದುನನಾದ ಉದಯಭಾನುರಾಯನಂ ಕುರಿತು ಎಲೈ ಭ್ರಾತೃವತ್ಸಲನೇ ! ನಾವೆಲ್ಲರೂ ದೈವಯೋಗದಿಂದೀಗ ಒಂದಾಗಿ ಸೇರಿದೆವು, ನಿಮ್ಮತ್ತೆ ಮಾವಂದಿರಿಗೀ ಸುದ್ದಿಯಂ ತಿಳುಹಿ ಕರೆಕಳುಹಿಸಿರಿ, ಬಂದು ತಮ್ಮ ಮಗಳನ್ನೂ, ಅಳಿಯನನ್ನೂ, ದೌಹಿತ್ರನನ್ನೂ ನೋಡಿ ಸಂತೋಷಿಸಿ ಹರಕೆಯುನ್ನಿತ್ತು ಸ್ತೋಗಲಿ, ಎನಲಾ ಉದಯಭಾನುರಾಯನು ಎಲೌ ತಾಯೇ ! ಮೊದಲೇ ಅವರು ನನ್ನ ಪ್ರಾಣಾಪಹಾರಕ್ಕುದ್ಯುಕ್ತರಾಗಿದ್ದರು. ಅಂಥಾವರ ಮುಖವನ್ನಾದರೂ ನೋಡಬಹುದೆ, ಎಂದು ಪ್ರತ್ಯುತ್ತರಮುಂ ಕೊಪಲು, ಏನ್ಯೆ ನೀವ್ರ ಅರಿಯದವರಂತೆ ನುಡಿಯುವಿರಿ, ನೀವು ಮೋಸಕರವಾಗಿ ಅಂತಃಪುರವಂ ಸಾರಿ, ಮಾತಬಾರದ ಕಾರ್ಯವಮಂ ಮಾಡಿದಿರಿ, ನೀವು ಇಂಥಾವರೆಂದವರರಿಯರು, ದುಷ್ಕಾರ್ಯಮುಂ ಮಾಡಿದವರಂ ಕಂಡು ಹಿಡಿದು ಶಿಕ್ಷಿಸಜೇಕಾದ್ದು ರಾಜಧರ್ಮವೇ ಸರಿ, ಅನಂತರ ನಿನ್ನ ಮಹಿಮಾತಿಶಯಮುಂ ಕಂಡು ಯಾರೋ ಮಹನೀಯರಾಗಿರುವರೆಂದು, ಅದಂ ತಿಳಿಯಲೋಸುಗ ವಿಧೇಯರಾಗಿ ನಿಮ್ಮಂ ಬೇಡಿದರು, ಅಂಥವರಂ ತಿರಸ್ಕರಿಸಬಹುದೇ ? ಹಾಗೆ ಯೋಚಿಸಬಾರದು, ಎಂದು ತಿಳುಹಿ, ತನ್ನ ಅತ್ತೆ ಮಾವಂದಿರಿಗೂ, ತನ್ನ ಪತಿಗೂ ಹೇಳಿ, ಅವರಿಗೆ ಪತ್ರಮುಂಬರೆಯಿಸಿ ಪೂತರಂ ಕಳುಹಿಸಲು, ಈ ವಾರ್ತೆಯನ್ನು ಕೇಳುತ್ತಾ ಕರಾಳರಾಯುಂ ಪರಮಾನಂದ ಭರಿತನಾಗಿ, ಸಮಸ್ತ ಶಸ್ತ್ರಾಸ್ತ್ರ ಜಾಲಗಂಳಂಕೊಂಡು, ಸಕಲ ಪರಿವಾರಾವೃತರಾಗಿ ಪತ್ನಿಯೊಪನೆ ಹೊರಟು ತನ್ನ ಮಗಳ ಮುಖಕಮಲವಂ ಎಂದಿಗೆ ನೋಡುವೆನೋ ಎಂದು ತನ್ನ ಕರುವನ್ನಗಲಿದ್ ಎಳ ಗಂದಿಯಾಪ ಗೋವಿನಂತೆ ಕಳವಳಸುತ್ತಾ ಬಂದು ಕರವೀರಪುರಮುಂ ಸಾರಿ, ದೇವಸೇನರಾಯನಂಕಂಡು, ಆತನಿಂದ ಸತ್ಕೃತನಾಗಿ ಅಲ್ಲಿಂಬಂದು, ತನ್ನ ಮೋಹದ ಕುವರಿಯ ಅಂತಃಪುರವಂ ಸಾರಲು, ತನ್ನ ತಂದೆತಾಯಿಗಳು ಬಂದರೆಂದು ದಿಗ್ಗನೆದ್ದು ಬಂದು, ತನ್ನ ಮುದ್ದುಕುವರನಂ ತಂದೆಯ ಕೈಗೆಕೊಟ್ಟು ಆತನ ಕಾಲುಗಳಮೇಲೆತನ್ನ ಮಸ್ತಕಮುಂ ಚಾಚಿ, ಅನಂತರ ತಾಯಿಗೆರಗಿ ನಿಂತುಕೊಂಡ ಮಗಳಮುಖಕಮಲಮುಂ ನೋಡಿ, ರಾಕಾಚಂದ್ರನೇ

ಳಗೆಯುಂ ಕಂಡ ಸಮುದ್ರರಾಜನೊಲುಬ್ಬಿದ್ದು, ದಂಪತಿಗಳಿಬ್ಬರೂ ಅಕೆಯನ್ನೆತ್ತಿ ತಲೆಯುಂ ಸವರುತ್ತಾ, ದೌಹಿತ್ರನ ಮುಖಮುಂ ನೋಡಿನೋಡಿ ಅನಂದಿಸುತ್ತಾ, ಎಲೌ ನಂದನೆಯೇ ನಾವಿಂದು ಧನ್ಯರಾದೆವ್ಯ, ನೀನೇನಾದೆಯೋ ? ಎಲ್ಲಿರುವಿಯೋ ಮುಖವನ್ನಾದರೂ ನೋಡುವದಿಕ್ಕಿಲ್ಲವಲ್ಲಾ, ಎಂದು ಹಗಲೂ ರಾತ್ರಿಯೂ ಪೇಚಾಡುತ್ತಿದ್ದೆವ್ವು. ಪುತ್ರವತಿಯಾದ ನಿನ್ನಂ ನೋಡಿದ್ದರಿಂದ ನಮ್ಮ ಕಷ್ಟಂಗಳೆಲ್ಲವೂ ನಿವೃತ್ತಿಯಾದವು ಎಂದೊರೆಯುತ್ತಾ ಮಗಳಂ ನೋಡಿನೋಡಿ ಸಂತೋಷಿಸುತ್ತಾ ಮುತ್ತಿಟ್ಟು ಮೈದಡವಿ ದೌಹಿತ್ರನಂ ಮಗಳ ಕೈಲಿಂದೀತ್ತು ಅಳಿಯನನ್ನೂ ನೋಡಿ ಆತನಿಂದ ನಮಸ್ಕರಿಸಲ್ಪಟ್ಟವರಾಗಿ ದೇವಸೇನರಾಯನಂ ನೋಡಿ, ಅಂಯ್ಯಾ ! ನಮ್ಮ ಅಳಿಯನೂ, ಮಗಳೂ ಸೇರಿ ಹಸೆಯೊಳು ಕುಳಿತದ್ದನು, ನಾವು ಕಣ್ಣಿಂದಲೇ ನೋಡಿದವರಲ್ಲ, ನೋಡಬೇಕೆಂಬ ಬಯಕೆಯು ಪರಿಪೂರ್ಣವಾಗಿರುವದು, ಎನಲಾ ದೇವಸೇನರಾಯನು ಮಾರನೆ ದಿನದೊಳು ಎಲ್ಲರಿಗೂ ಅಭ್ಯಂಗಮುಂ ಮಾಡಿಸಿ, ಭಕ್ಷ್ಯಭೋಜ್ಯಾದಿಗಳಿಂದೆಲ್ಲರಂ ತೃಪ್ತಿಗೊಳಿಸಿ, ಆ ರಾತ್ರಿಯೊಳು ಗಾಯಕರನ್ನೂ, ನರ್ತಕಿಯರಾದ ವೇಶ್ಯಾಂಗನೆಯರನ್ನೂ, ವಿಧವಿಧ ವಾದ್ಯಕಾರರನ್ನೂ ಕರೆಯಿಸಿ ಸಮಸ್ತ ಬಂಧುಜನ ಸಮಾವೃತನಾಗಿ ಸಭೆಯಾಗಿ ಕುಳಿತು, ನರ್ತನಾದಿಗಳಿಂ ಮಾಡಿಸುತ ಸುದರ್ಶನೆಯಂ ಉದಯ ಭಾನುರಾಯನಂ ಹಸೆಮಣೆಯೊಳು ಕುಳ್ಳಿರಿಸಿ ಮಂಗಳಂಗಳಂ ಪಾಡಿಸುತ ಸಂತೋಷ ಭರಿತರಾಗಿರೆ, ಕರಾಳರಾಯಂ ದಿವ್ಯ ರತ್ನಖಚಿತ ಭೂಷಣಂಗಳಂ ದಿವ್ಯದುಕೂಲ ಚೀನಾಂಬರಾದಿಗಳಂ ದಾಸೀಶತಂಗಳಂ ಹಸ್ತ್ಯಶ್ವ ರಥಸಮೂತಿಗಳೀ ಮೊದಲಾದ ಸಕಲ ಪ್ರಶಸ್ತ ವಸ್ತು ಜಾಲಂಗಳಂ ಮಗಳಿಗೂ ಅಳಿಯನಿಗೂ ಕೊಟ್ಟು ಕಣ್ಣಾರೆ ನೋಡಿದನಿಯುತ್ತಿರುವಾಗ ದೇವಸೇನರಾಯಂ ನೆರೆದಿದ್ದ ಸಮಸ್ತರಿಗೂ ಗಂಧ, ಪುಷ್ಪ, ತಾಂಬೂಲ ವಸನ ಭೂಷಣಾದಿಗಳಂ ತಾರತಮ್ಯಂಗಳನ್ನರಿತು ಬಹುಮಾನಮಂಮಾಡಿ, ಮಹದುತ್ಸವಮಂ ಗೈಸಿ ಬೀಗರುಗಳಂ ಸಂತೋಷಗೊಳಿಸಿದಂ.


ಹೀಗೆ ಸಂತೋಷ ಸ್ವಾಂತರಾಗುತ ಕೆಲಕಾಲಮಿದ್ದಾ ಕರಾಳರಾಯನು ತನ್ನ ಪಟ್ಟಣಮಂ ಕುರಿತು ಪ್ರಯಾಣೋನ್ಮುಖನಾಗೆ, ದೇವಸೇನರಾಯಂ ತನ್ನ ಬೀಗರವರನ್ನು ಔತಣ ಮುಂತಾದವುಗಳಿಂ ಸತ್ಕರಿಸಿ, ಭೂಷಣ ವಸನಾದಿಗಳಿಂ ಬಹುಮಾನಿಸಿ, ತಕ್ಕ ಪರಿವಾರಮಂ ಸಂಗಡಲೆ ಮರ್ಯಾದಾ ಪೂರ್ವಕಮಾಗಿ ಕಳುಹಿಸಲು, ಆ ರಾಯಂ ತನ್ನ ಪುರಾಭಿಮುಖನಾಗಿ ತೆರಳಿದಂ.

ಇತ್ತಲಾ ಶೀಲವತಿಯು ತನ್ನ ಅತ್ತೆಮಾವಂದಿರೊಳು ತನ್ನ ಪೂರ್ವೋತ್ತರ ಸಂದರ್ಭಂಗಳನ್ನೆಲ್ಲಮಂ ಪೇಳಿ, ಮಂಗಳ ಕಾಶೀರಾಜನಿಗೆ ಬಂದಿದ್ದ ವಿಪತ್ತುಗಳಂ ಪರಿಹರಿಸಿದಾಗ ಆತನೊಳು ತಾಂ ಮಾಡಿದ ಭಾತೆಯನ್ನೂ, ಆತನ ವಿದ್ಯಮಾನವನ್ನೂ ತಿಳುಹಿ, ಆತನನ್ನೂ ಆ ರಾಜ್ಯವನ್ನೂ ಕಾಪಾಡುವದಕ್ಕಾಗಿ ತಾನು ತನ್ನ

ಕಾಂತನೊಡನೆ ಹೇಳಿಗಜೇಕೆಂದು ವಿಜ್ಞಾಪಿಸಲು, ಆ ಶಬ್ದಜಾಲವು ಕರ್ಣಗಳೊಳು ಶೂಲಂಗಳಿಂ ತಿವಿದಂತಾಗೆ ಹಾಗೆ ಮೂರ್ಛಿತನಾಗಿ ಭೂಗತನಾಗಲು, ಶೈತ್ಯೋಪ ಚಾರಂಗಳಿಂದ ಚೇತರಿಸಿ, ಸುಖಿಯಾಗಿ ಕುಳಿತವೇಲೆ ಮುಂಗಳಕಾಶೀರಾಜನಂ ಮುಂಗಡೆ ತಂದು ಕುಳ್ಳಿರಿಸಿ. ಈತನೇ ವಿಪದ್ಕಾಲದಲ್ಲಿ ನನ್ನನ್ನು ಕಾಪಾಡಿದ ಮಹಾನುಭಾವನು. ನನಗೆ ತಂದೆಗಿಂತಲೂ ಅತ್ಯಧಿಕನು ತಮ್ಮೆಡೆಯೊಳು ತಮ್ಮ ಎರಡನೆ ಪುತ್ರರಾದ ಉದಯಭಾನುರಾಯರಿರುವರು, ನಾವೂ ಪದೇಪದೇ ಬರುತ್ತಾ, ತಮ್ಮ ಚರಣ ಸಂದರ್ಶನ ಸೇವಾದಿಗಳಂ ಮಾಡಿಕೊಂಡು ಹೋಗುತ್ತಿರುವೆವೆಂದು ನುಡಿಯುತ್ತಿರುವನಿತರೊಳಾ ಮುಂಗಳ ಕಾಶೀರಾಜನಾದ ಪುಂಡರೀಕ ಭೂಪಾಲನು, ಮುಕುಳಿತಹಸ್ತನಾಗಿ, ಸ್ವಾಮಿ ದೇವಸೇನರಾಯರೇ ! ನಾನು ವೃದ್ಧನಾಗಿಯೂ, ಪುತ್ರರಹಿತನಾಗಿಯೂ ಭಾರ್ಯೆಯುಳ್ಳವನಾಗಿಯೂ ಇರುವೆನು, ಶತ್ರುರಾಜರುಬಂದು ನನ್ನ ಕೋಟೆಯಂ ಮುತ್ತಿಗೆಹಾಕಿ ಸಂಕಟ ಪಡಿಸುತ್ತಿರುವಾಗ ಚಿತ್ರಶಾ ಶಿರೋಮಣಿಯಾಗಿಯೂ, ಪತಿವ್ರತಾಶಾಲಿನಿಯಾಗಿಯೂ ಇರುವ ಶೀಲವತಿಯು ನನ್ನಿಂದ ಪ್ರಾರ್ಥಿತಳಾಗಿ ಶತ್ರುನಾಶಮಂ ಮಾಡಿದಳು. ನನ್ನ ರಾಷ್ಟ್ರವು ಬಲಭರಿತವಾಗಿ ಸಂಪತ್ಸಮೃದ್ಧವಾಗಿಸ್ಫುರಿಸುತ್ತಿದೆ, ಕೋಶಾಗಾರಂಗಳೆಲ್ಲವೂ ಧನಕನಕ ಮುತ್ತು ಪರಿಪೂರ್ಣಗಳಾಗಿರುವವು, ದಯವಾಡಿ ನನ್ನ ಕೋರಿಕೆಯನ್ನು ಪಾಡೇರಿಸೆಬೇಕೆಂದು ವಿಜ್ಞಾಪಿಸಲು, ಮಗನಿಗೂ ಸೊಸೆಗೂ ಮುಂಗಳಕಾಶೀರಾಜ್ಞೀರಾಜರಿಗೂ ಅಭ್ಯಂಜನಂಗಳ ಮಾಡಿಸಿ, ದಿವ್ಯ ಭಕ್ಷ್ಯ ಭೋಜ್ಯಂಗಳಿಂ ಮಾಡಿಸಿ ಭೋಜನಂಗೊಸಿ, ದಿವ್ಯಾಭರಣ ವಸ್ತ್ರಾದಿಗಳಿಂ ಬಹು ಮಾನಿಸಿ ಮಾರ್ಗಕ್ಕೆ ಬೇಕಾದ ನೋವಸ್ತುಗಳಿಂ ಅಣಿಗೊಳಿಸಿ, ಬೀಳ್ಕೊಡಲು, ಶೀಲವತಿಯೂ, ಸುಭಾನುರಾಯನನ್ನೂ, ದೇವಸೇನರಾಯನಿಗೂ ಅತನ ಪಂಪತಿಗೂ ನಮಸ್ಕರಿಸಿ ಅನುಜ್ಞಾತರಾಗಿ ಉದಯಭಾನು ಸುದರ್ಶನೆಯರಿಂದ ನಮಸ್ಕೃತರಾಗಿ ಆಶೀರ್ವದಿಸಿ ಪ್ರಚಂಡರೀಕರಾಯನೊಡನೆ ಹೊರಟು ಮುಂಗಳಕಾಶಿಯಂ ಸಾರಿ, ತನ್ನ ಪತಿಯಾದ ಸುಭಾನುರಾಯನಿಂದ ಆ ರಾಜ್ಯಮಂ ಮಹಾರಾಜಪದ್ಧತಿಗಿಂತಲೂ ಇಮ್ಮಡಿಯಾಗಿ ಪೋಷಣೆಗೈಸುತಿರ್ದಳು. ಸ್ವಾಮಿ ಮಹಾರಾಜನೇ ! ಮಾರಾರ್ಜುಂಡಮಂಡಲಮಾದರೋ ಪೂರ್ವಾಚಲಮಂ ಸಾರುವ ಸಮಯ ಮಾಯಿತು, ಈ ಕಥೆಯು ಸಂಪೂರ್ತಿಸಿತು. ತಮ್ಮ ಮನೋರಥಸಿದ್ಧಿಯು ಕೈಸಾರಿತು. ಅನುಜ್ಞೆಯನ್ನಿತ್ತರೆ ವಿಶ್ರಾಂತಿ ಸುಖಮಂ ಹೊಂದುವೆನು ಎನೆ, ನಿನ್ನಿಷ್ಟಾನುಸಾರಮಾಗಲೆಂದು ಅಜ್ಞೆಯಂ ಕೊಂದಿದಾ ಬೇತಾಳನ್ಯ ವಿರಾಮಮಂ ತಾಳ್ದುದೆಂಬಲ್ಲಿಗೆ ಕರ್ನಾಟಕ ಭಾಷಾ ವಚನರಚಿತ ಸೌಂದರ್ಯಾದ್ಭುತ ರುಗ್ಮಿಣೀಚಿತ್ರಬೃಹತ್ಕಥಾಮಂಜರಿಯೊಳು ಎರಡನೆ ಭಾಗದ ನಾಲ್ಕನೇಯಾಮದ ಕಥೆಯವರಿಗೆ ಪದ್ಯಾನುವಾದ ಪದ್ಯಾಜಯವು ಎಂಬ ಭಾಗವು ಸಂಪೂರ್ಣವಾದುದು.


ತದನಂತರವಾ ಪದ್ಮಾವತಿಯು ತನ್ನ ಮಣಿಮಂಚದಿಂದೆದ್ದು ಧರಣೀಸಾಗ್ರಶ್ರೀಮನಾಪ ವಿಕ್ರಮಾರ್ಕರಾಯನ ಬಳಿಗ್ಹೋಗಿ, ಎಲ್ಲಿ ಮಹಾರಾಜಾಗ್ರೇಸರನೇ ಚಿತ್ತೈಸಿದೆ ! ನಾನು ನಿನ್ನ ಶಕ್ತಿ ಸಾಹಸಾದಿಗಳಂ ಪರೀಕ್ಷಿಪ್ಪಮಾಗಿಯೇ ಕೇಳಿ ಬಿಟ್ಟೆನು. ಈಗ ಕಣ್ಣಾರ ನೋಡಿ, ಕಿವಿಯಾರ ಕೇಳಿ ಸರಮಾನಂದ ಭರಿತಳಾದೆನು. ನಿನ್ನಿಂದ ಪರಾಜಿತಳಾಗಿ ನಿನ್ನ ಸ್ವಾಧೀನಳಾದೆನು, ನಿನ್ನಂ ಕೈಪಿಡಿದು ಪರಿಪಾಲಿಸುವೇಕೆಂದು, ವಿಜ್ಞಾಪಿಸುತ್ತ ಕರಕಮಲಗಳಿಂ ಬೀಳಿಸಿಕೊಂಡು, ಆಜ್ಞೆಯಾದರೆ, ಈ ರಾಜಮುದ್ರಿಕೆಯನ್ನು ನಿನ್ನ ತಂಗಿಯಾಪ ಲೀಲಾವತಿಗೆ ಕೊಟ್ಟು, ರಾಜ್ಯಭಾರ ಮಾಕೆಯೊಳು ಹೊರಿಸಿ ಬರುವೆನೆನೆ ಹಾಗೆಸ್ಮೀ ಮಾಪೆಂದು ವಿಕ್ರಮಾದಿತ್ಯನಿಂದನು ಜ್ಞಾತಳಾಗಿ ಹೊರಟು ಪದ್ಮಾವತಿಯು ತನ್ನ ತಂಗಿಯಾದ ಲೀಲಾವತಿಯ, ಮಂದಿರ ಮಂ ಸಾರಿ ಆಕೆಯಂ ಕಂಡು ರಾತ್ರಿಯೊಳು ನಡೆದ ವೃತ್ತಾಂತವನ್ನೂ, ವಿಕ್ರಮಾದಿತ್ಯ ಭೂಮೀಂದ್ರನ ಶಕ್ತಿ ಸಾಮರ್ಥ್ಯಗಳನ್ನೂ, ತಾನಾತನ ನೈವಶಳಾದೆನೆಂದೆಲ್ಲಾ, ಪೇಳಿ ತನ್ನ ಕೈಲೆಯಿಂದಿದ್ದ ರಾಜಮುದ್ರಿಕೆಯನಾಕೆಯ ಕೈಗಿಟ್ಟು, ತಾನು ಹೋಗಿಬರುವದಕ್ಕೆ ಅನುಮತಿಯಂ ಕೇಳಿ, ಕೇಳಿದಾ ಲೀಲಾವತಿಯು, ಎಲೌ ಅಕ್ಕನೇ ! ನಿನ್ನ ವಿಶೇಷಾದಿ ಶಕ್ತಿಗಳೇನಾನೆನ್ನ, ಬುದ್ಧಿರಹಿತಳಾಗಿ ಆತನೊಳು ಮಾತಾಡಿ ನೋಡಿತು ಹೋದೆಯಾ ? ಒಂದುವೇಳೆ ನಿನಗೆ ಆತನೊಳು ಮನಸ್ಸಿರಬಹುದೋ ವಿನೋ ಆದರೂ ಚಿಂತೆಯಿಲ್ಲ. ಎಂದು ಯೋಚಿಸುತ್ತಾ, ತನ್ನ ದೂತಕೆಯರೊಳಿರುವಳಿಂ ಕುರಿತು, ಎಲೌ ನಾಗವೇಣಿಯೇ ! ನೀನಾ ವಿಕ್ರಮಾದಿತ್ಯ ಭೂಪಾಲನಲ್ಲಿಗೆ ಹೋಗಿ, ಆತನಂ ಕಂಡು, ಒಪ್ಪುವ್ಯಾಂತಳಾದ ಪದ್ಮಾವತಿಯಂ ಬೈಸಿದೆನೆಂಬ ಗರ್ವಮಂ ಬಿಡು, ಇವಳ ತಂಗಿಯಾಪ ಲೀಲಾವತಿಯೆಂಬಿ ನಾನೊ ವಳಳೆನು ಅವಳಂತೆಯೇ ನನ್ನನ್ನು ಮೂರುಸಾರಿ ಮಾತಾಡಿಸಿಸೋಲಿಸಿದ್ದೀಯಿದರೆ, ನೀಂ ವಿಕ್ರಮಾದಿತ್ಯನು, ತಪ್ಪಿದಲ್ಲಿ ನಿನ್ನೀ ಹೆಸರಿನ ದೊಂದಲನೆ ಅಸ್ಪೇರಕ್ಕೆ ಬದಲಾಗಿ ಆಕಾರವಂ ಸೇರಿಸಬೇಕಾಗುವುದು. ಈ ಮಾತಂ ಕೇಳಿಬರುವಂತೆ ಹೇಳಿ ಕಳುಹಲಾ ದೂತಿಯನು, ಅಂತೆಯೇ ರಾಜನ ಬಳಿಗ್ಹೋಗಿ, ತನ್ನ ಒಡತಿಯಾಜ್ಞಾಪಿಸಿದಂತೆಯೆ ವಿಜ್ಞಾಪಿಸಲು, ಆ ಭೂವಿಪೇಂದ್ರಂ ನಸುನಗುತ್ತ, ಎಲೆ ಪರಿಚಾರಿಣಿಯೇ ! ಈಬನ ರಾತ್ರಿಯೊಳಾಕೆಯಂ ಪದ್ಮಾವತಿಯಂತೆಯೇ ಗೆಲ್ದಬ್ಬಿಸುವೆನು. ತಪ್ಪಿದೊಡೆ, ಆಕೆಯನ್ನೀಕೆಯೊಂದಿಗೆ ಬಿಟ್ಟು ಹೋಗುವೆನು, ಈ ಮಾತಂ ಲೀಲಾವತಿಗರುಹು ಎಂದಾ ದೂತಿಗೆ ಆಜ್ಞೆಯನ್ನಿತ್ತು ಕಳುಹಿ ಪದ್ಮಾವತಿಯುಂ ದುಸಚರಿತ ತನಾಗಿ, ಸ್ನಾನ ಭೋಜನಂಗಳಂ ಮಾಡಿ, ಆಕೆಯೊಂದಿಗೂಡಿ, ಗಂಧ ಪುಷ್ಪ ತಾಂಬೂಲಾದಿಗಳಿಂ ಸಜ್ಜುಸುತ್ತಾ, ಹಂಸತೂಲಕಾತಲ್ಪಯುತ ಮಣಿಮಂಚಾರೂಢನಾಗಿ, ನಿದ್ರಾಂಗನಾ ವಶವರ್ತಿಯಾಗಿದ್ದನು. ಇಲ್ಲಿಗೆ ಕನಕಾಭಿಕ ಸೌಂದರ್ಯಾ

ದ್ಭುತ ರುರೀಚಿತ್ರ ಬೃಹತ್ಕಥಾಮಂಜರೀ ವಜನೆ ರಚನೆಯೊಳು ಪದ್ಮಾವತೀ ಪರಾಜಯಾಖ್ಯ ವ್ರಥಮಕಥಾ ಸಂಪೂರ್ಣವಾದುದು.



ಶ್ರೀರಸ್ತು.

ಲೀಲಾವತಿಯುಪಿಪಾನ ಭಂಗವೆಂಬ ಎರಡನೆ ಭಾಗವು.



ವೀರಸೇನನೆಂಬ ತಿರೆಯಾಣ್ಮ ನೊರ್ವಂ ತನ್ನ ಪ್ರಧಾನ ಮಂತ್ರಿಯಾದ ಚಿತ್ರವರ್ಮನೆಂಬಾತನಂ ಕುರಿತು, ಎಲ್ಲೆ ಮಂತ್ರಿ ಶೇಖರನೇ, ಭೂಲೋಕದೊಳು ಮಹಿಮ್ಯಶೋವಂತನಾದ ವಿಕ್ರಮಾದಿತ್ಯ ಭೂವಿಾಂದ್ರನ ಶೌರ್ಯೌದಾರ್ಯಾದಿಗಳು, ಮಹದತಿಶಯಂಗಳಾದವುಗಳೆಂದು ಕೇಳಬಲ್ಲೆನಲ್ಲದೆ, ಅತಂ ಪದ್ಮಾವತೀ ಎಂಬಾ ಕೆಯಂ ಪರಾಜಯಂ ಗೊಳಿಸಿದನೆಂದು ಮಾತ್ರ ಕೇಳಬಲ್ಲೆನು. ಲೀಲಾವತಿಯುಂ ಗೆಲುವದಕ್ಕೆ ಮಾಡಿದ ಉಪಾಯಗಳಂ ಕೇಳುವಡಕ್ಕೆ ಅತ್ಯಾಸಕ್ತನಾಗಿರುವೆನಾಗಿ, ಅದಂ ಸವಿಸ್ತಾರವಾಗಿನಗೆ ಪೇಳುವನಾಗೆನಲು, ಆ ಮಂತ್ರಿ ಶಿರೋಮಣಿಯು ಪೇಳತೊಡಗಿದನು.

ಎಲ್ಲೆ ಭೂಭುಜಲಲಾಮನೇ ಲಾಲಿಸು— ಪದ್ಮಾವತಿಯನ್ನು ಜೈಸಿದವನಾಗಿ ಆಕೆಯಿಂದ ರಚಿಸಲ್ಪಟ್ಟ ವಿವಿಧೋಪಹಾರಂಗಳಂ ಮನ್ನಿಸಲ್ಪಟ್ಟು, ಆಕೆಯೊಡನೆ ಕುಳಿತು ಸರಸಸಲ್ಲಾಪಗಳಂ ಮಾಡುತ್ತಾ, ಕಾಲಮಂ ಕಳೆದು, ಹಾಗೆಯೇ ಆಕೆಯೊಡಗೂಡಿ, ನಿದ್ರಾಂಗನಾವಶನಾಗಿ ಸುಖಮಂ ತಾಳ್ದಿ, ಎಚ್ಚತ್ತು ತಾಮರಸ ಬಾಂಧವಂ ಅಸ್ತಾಚಲಮಂ ಸಾರಿ ಚಿರಮಾಶಾಂಗನಾ ಸುಖಿಲೋಲಸ್ವಾಂತನಾಗಿ, ವಿಕ್ರಮಾದಿತ್ಯರಾಯಂ ಸಂಧ್ಯೋಚಿತ ಕೃತ್ಯಂಗಳಂ ನೆರವೇರಿಸಿ, ಷಡ್ರಸಾನ್ನವ ನ್ನಾರೋಗಣೆಗೈದು, ಪದ್ಮಾವತಿಯಿಂದ ಸಮರ್ಪಿಸಲ್ಪಟ್ಟ ತಾಂಬೂಲಮಂ ಸವಿಯುತ್ತಾ ಆಕೆಯನೊಡಗೊಂಡು, ಲೀಲಾವತಿಯ ಅಂತಃಪುರಮಂ ಪ್ರವೇಶಿಸಿ, ಆಕೆಯಿಂದ ಅಲಂಕರಿಸಲ್ಪಟ್ಟು, ಈತನಿಗಾಗಿ ಸಿದ್ಧಪಡಿಸಿರುವ ಮಣಿಮಂಜವನ್ನು ಪದ್ಮಾವತಿಯೊಡನೆ ಹತ್ತಿ ಹಂಸತೂಲಿಕಾ ತಲ್ಪದೊಳು ಕುಳಿತುಕೊಳ್ಳಲು ಆ ವಿಕ್ರಮಾರ್ಕರಾಯನ ಮಂಚಕ್ಕೆ ಸವಿಾಪವಾಗಿಯೇ ಮುಂಭಾಗದಲ್ಲಿ ಮಂಚಮಂ ಹಾಕಿಸಿಕೊಂಡು ಆ ಎರಡು ಮಂಚಗಳಿಗೂ ಮಧ್ಯದೊಳು ಕಾಂಡ ಪಟಮಂ ಬಿಡಿಸಿದ ಲೀಲಾವತಿಯು ಪರ್ಯಂಕವಂ ಹತ್ತಿ ಮಾತಾಡದೆ, ಮೌನವಂ ತಾಳಿ ಕುಳಿತುಕೊಂಡಳು.

ಇತ್ತಲಾ ವಿಕ್ರಮಾದಿತ್ಯ ಭೂವರಂ, ಭೇತಾಳನಂ ಸ್ಮರಿಸಲು, ಭೂತಾಧಿಪತಿಯಾದ ಭೇತಾಳನು ಬಂದು, ಪದ್ಮಾವತಿಗೆ ಕಾಣಪಂತೆ ರಾಯನ ಮುಂಗಡೆಯೊಳು ನಿಂತು, ಸ್ವಾಮಿ ! ಮುಂದಣ ಕಾರ್ಯವೇನೆಂದು ಕೈಗಳಂ ಜೋಡಿಸಿ ಪ್ರಾರ್ಥಿಸುತ್ತಿರೆ, ವಿಕ್ರಮಾದಿತ್ಯಂ ಎಲ್ಲೈ ಭೇತಾಳನೇ ! ನಿನ್ನೆಯಂತೆಯೇ ಈ ರಾತ್ರಿಯೊಳಗೂ, ಅತಿ ವಿಚಿತ್ರತರಮಾದ ಕಥೆಯಂ ಹೇಳಿ, ಈ ಲೀಲಾವತಿಯನ್ನು ಮಾತಾಡುವಂತೆ ಮಾಡಬೇಕೆಂದಾಜ್ಞಾಪಿಸಲು ಪ್ರಭುವಿನಾಜ್ಞೆಯಾದಂತೆ, ಎಂದು ಬಂದು ಲೀಲಾವತಿಯು ಗೌರೀಪೂಜಾ ಸಾಮಗ್ರಿಯೊಳಗಿನ ಪುತ್ಥಳಿಕೆಯೊಳು ಸೇರಿರಲು, ವಿಕ್ರಮರಾಯಂ ಪದ್ಮಾವತಿಯೊಡನೆ, ಲೀಲಾವತಿಯ ಗೌರೀಪೂಜಾ ಸಾಮಗ್ರಿಯೊಳಿರುವ ಚಾಮರಗ್ರಾಹಿಣಿಯಾದ, ಪುತ್ಥಳಿಯಿಂದ ಮಾತನಾಡಿಸುವೆನೆಂದೊರೆದು, ಆ ಚಾಮರಾಗ್ರಹಿಯಾದ ಪುತ್ಥಳಿಕೆಯಂ ಕುರಿತು, ಚಾಮರದ ಪುತ್ಥಳಿಕೆಯೇ ? ನಿಜ್ಜ ಚಾರಮು ಲೀಲಾವತಿಯಾದರೋ ಮಾತಾಡದೆ ಇರುವಳು ಹೊತ್ತು ಹೋಗದೆ ಬೇಸರವಾಗಿದೆ ನೀನಾದರೂ ವಿಚಿತ್ರತರವಾದೊಂದು ಕಥೆಯಂ ಹೇಳೆಂದು ಆಜ್ಞಾಪಿಸಲಾ ಜೊಂಬೆಯು ಕಥೆಯಂ ಹೇಳಲು ಉಪಕ್ರಮಿಸಿತದೆಂತೆನೆ.

ಚಾಮರದ ಪುತ್ಥಳಿಕೆಯು ಹೊದಲನೆ ಯಾತ್ರಾದೊಳೊರೆಯುವ ಕಥೆ.

ವಿಕ್ರಮಾರ್ಕರಾಯನ ಮಾತಂ ಕೇಳುತ್ತಾ ಜೊಂಬೆಯು. ಅಲ್ಲಿಂದ ಭರದೊಳ್ಳಿತೆಂದು, ವಿಕ್ರಮಾದಿತ್ಯನ ಮುಂಜದ ಬಳಿಯೊಳು ನಿಂತು, ಕೈಯೊಳಿರ್ಪ ಚಾಮರದಿಂದಾ ಭೂನಿಸಾರ್ಪನಂ ಬೀಸುತ್ತ ಎಲ್ಲೈ ? ವಿಕ್ರಮಾರ್ಕಸಾರ್ವಭೌಮನೇ ಲಾಲಿಸು ಧರಾಮಂಡಲದೊಳು ಸೋಮವತಿಯೆಂಬ ಪಟ್ಟಣವಿರ್ಪುದು. ಆ ಪಟ್ಟಣಕ್ಕಧಿಪತಿಯಾದ ಸೋಮಶೇಖರನೆಂಬ ಭೂಪಾಲನು ತನ್ನ ಪ್ರಜೆಗಳು ಅವರವರ ವರ್ಣಾಶ್ರಮಾಚಾರ ಧರ್ಮಂಗಳಂ ತೊರೆಯದೆ, ಪರಮಧರ್ಮ ಪರಾಯಣರಾಗಿ ಬಾಳ್ವಂತೆ ಕ್ರಮವಂ ಕಲ್ಪಿಸಿ, ಧರ್ಮಮಾರ್ಗದೊಳು ತಾನವರಂ ಪರಿಪಾಲಿಸುತ್ತಾ ರಾಜ್ಯಭಾರಮಂ ತಾಳ್ದಿರ್ದನು. ಪತಿ ಸೇವಾನಿರತಳಾಗಿಯೂ, ಪತಿಯೇ ದೈವಮೆಂದರಿತು, ನಡೆಯುವಳಾಗಿ ಸಕಲ ಸದ್ಗುಣ ಸಂಪನ್ನೆಯಾಗಿಯೂ, ಇರುವ ಪುಣ್ಯಶೀಲೆಯೆಂಜಾಕೆಯು, ಆತನಿಗೆ ಭಾರ್ಯೆಯಾಗಿದ್ದಳು ಈಕೆಯೊಲು ತ್ರಿಲೋಕದಲ್ಲಿಯೂ ಸುಂದರಿಯರಾದ ಸ್ತ್ರೀಯರು ಕಾಣಲರಿಯರು. ಈಕೆಯ ಮುಖವಾದರೋ ರಾಕಾಸುಧಾಂಶು ಬಿಂಬವಂ ಪಳಿಯುವಂತಿರ್ಪುದು, ಕಂಗಳು ನೀಲೋತ್ಪಲಂಗಳಂ ತಿರಸ್ಕರಿಸುತಿರ್ದವು, ಪುಬ್ಬುಗಳು ಕಾಮನಧನುವಂ ಅಣಕಿಸುವವು, ಫಾಲಪ್ರದೇಶವಾದರೊ ಅಷ್ಟಮೀಚಂದ್ರನಂ ಹೀಯ್ಯಾಳಿಸುವಂತೆ ಕಾಣುತ್ತಿರ್ದುದು. ಈಕೆಯ ನಾಸಿಕಮುಂ ಕಂಡು, ಚಂಪಕಕೋರಕಂ ನಾಚಿಕೆಯಂ ತಾಳ್ದುದು. ಪೂರ್ಣೇಂದು ಬಿಂಬ

ಮನಗ್ಯೇದು ಉಭಯ ಭಾಗಳೊಳಿಟ್ಟಂತೆ ಕದಪುಗಳು ರಾರಾಜಿಸುತಿರ್ದವು. ಕೆಂಪ
ಳೋ, ಲಲಿತ ಪ್ರವಾಳವೋ, ಅಲ್ಲದೆ ಪದ್ಮರಾಗಮಣಿ ಸರ್ವಸ್ವಸಾರನಿಧಿಯೋ
ಎಂದು ತುಟಿಗಳು ಥಳಥಳಿಸುತ್ತಲಿರ್ದುದು. ಕುಂದಮುಕುಳಂಗಳಂ, ಪಕ್ಷದಾ
ಡಿಮಿಾ ಬೀಜಂಗಳಂ ನಗುತ ವರಸೆಗೊಂಡ ದಂತಪಂಕ್ತಿಯಿಂದ ಶೋಭಿಸುತಿದ್ದಳು.
ಭ್ರಮರ ಪಂಕ್ತಿಯಂ ಧಿಕ್ಕರಿಸುತ್ತಿರುವ ಮುಂಗೂದಲಿಂದೊಪ್ಪಿ, ನಿಲ್ದೇಂದ್ರಗಿರಿಯ
ಕಾಂತಿಯಂ ಬೈಸುವ ಕಬರೀ ಭರಮುಳ್ಳವಳಾಗಿಯೂ ಸರ್ವಾಕಾರಮಂ ಅಣಕಿಸುವ
ದೀರ್ಘತಮಾದ ವೇಣಿಯುಳ್ಳವಳಾಗಿಯೂ ಇರುವಳು. ಶಂಖಿವಂ ಜಯಿಸಿದ ಕಂಠ
ದಿಂದಲೂ, ಮೃದುಲಮಾಗಿಯೂ, ವೀಳ್ಯಂಗಳಾಗಿಯೂ, ಕನಕಲತಾ ಸೌಂದ
ರ್ಯಾನಹಾರಕಂಗಳಾಗಿಯೂ ಇರುವ ನಳಿದೋಳ್ಗಳಿಂದಲೂ, ಕಾಮುಕಜನ ಚಿತ್ತಾ
ಕರ್ಷಣ ಸ್ಥಾಪಿತ ಪರದೇವತಾತ್ಮಕ ಕೇಮ ಕಲಶಂಗಳೋ ಅಲ್ಲದೆ ಸೌಂದರ್ಯ
ಲಕ್ಷ್ಮೀ ಲೀಲಾಪೀಲನ ರತ್ನ ಕಂತುಕಂಗಳೋ, ಮನ್ಮಥ ಸಾರ ಭೌಮ ದುರ್ಗ
ಸ್ಥಾನಂಗಳೋ ಎಂದು ಭ್ರಾಂತಿತೋರ್ಪಂತೆ ರಾರಾಜಿಪ ವರ್ತುಲ ಪೀನಪಯೋಧ
ರಂಗಳಿಂದಲೂ, ತ್ರಿವಳಿಗಳಿಂದೊಪ್ಪುತ ಶುಕೋದರಮುಂ, ಧಿಕ್ಕರಿಸುವ ವಟಪ
ತ್ರಮಂ ನಗುವ ತೆಳುವಾದ, ಉದರದಿಂದಲೂ, ಸುರಚಂಪಕಾಪುಷ್ಪ ಸೌಂದರ್ಯ
ಮಂ ಗಹಗಹಿಸುವ ಸುಂದರತರವಾದ ನಾಭೀ ಪ್ರದೇಶದಿಂದಲೂ, ಮನ್ಮಥಾಕಾ
ರಮುಂ ತಾಳು ದೋ ಎಂಬಂತೆ ಅತಿ ಸೂಕ್ಷ್ಮವಾದ ಮಧ್ಯಭಾಗದಿಂದಲೂ ರಥ
ಚಕ್ರಂಗಳಂತೆ ವರ್ತುಲವಾಗಿ ಶೋಭಿಸುವ ಕಟಿ ಪಶ್ಚಿದ್ಭಾಗಂಗಳಿಂದಲೂ,
ಅರುಣಾಂಬುಜಂಗಳ ಲೀಲೆಯುಂ ಜಯಿಸಿ, ಮೃದುಲವಾಗಿಯೂ, ಸುಂದರವಾ
ಗಿಯೂ ಇರುವ ಚರಣಂಗಳಿಂದ ಸಂಶೋಭಿಸುತ್ತಾ, ಸಕಲ ಕಲಾ ಕೋವಿದಗ
ಳಾಗಿ ಸಮಸ್ತ ಸದ್ಗುಣ ಪರಿಪೂರ್ಣಳಾಗಿಯೂ ಒಪ್ಪುತ್ತಿದ್ದಳು. ಈಕೆಯನ್ನು
ನೋಡಿದವರೆಲ್ಲರೂ ಸೃಷ್ಟಿಕರ್ತನಾದವನು ಲೋಕಜಾತದಲ್ಲಿ ಸರ್ವೋತ್ತಮವಾದ
ವಸ್ತುವಂ ಕಲ್ಪಿಸಲೆಳಸಿ, ಸಮಸ್ತ ಶಸ್ತ ಸೌಂದರ್ಯ ವಸ್ತುಗಳಂ ಒಂದಾಗಿ ಸೇರಿಸಿ,
ಅದರ ಸಾರವನ್ನೆಲ್ಲಮಂ ಹಿಂಡಿ, ತನ್ನ ಸರ್ವ ಕೌಶಲ್ಯಮುಂ ವ್ಯಯವಾಡಿ, ಚಾಂಚ
ಲ್ಯಮಿನಿತಾದರೂ ಇಲ್ಲದೆ ಈಕೆಯಂ ನಿರ್ಮಿಸಿದನೋ ಏನೋ ಅಲ್ಲದೊಡೀ ಸರ್ವೋ
ತ್ತಮವಸ್ತು ವೆಲ್ಲಿಯದೆಂದು ನುಡಿಯಲುತ್ತಿರುವರು. ಇಂತಾ ಸುಂದರೀಮಣಿ
ಯೊಳು ಸಕಲ ಭೋಗಂಗಳಂ ಹೊಂದುತ್ತಾ, ಬಹುಕಾಲಂ ರಾಜ್ಯಪರಿಪಾಲನೆಯಂ
ನಡಾಯಿಸುತ್ತಿರ್ದಂ. ತನಗೆ ಐವತ್ತು ವರುಷಗಳು ಕಾಂತೆಗೆ ನಲವತ್ತು ವರುಷಗಳು
ತುಂಬಿದರೂ ಸಂತಾನವೇ ತಲೆದೋರಲಿಲ್ಲವು. ಇದರಿಂದಧಿಕ ಚಿಂತಾ ಪರವಶ
ನಾಗಿ ನಿದ್ರಾ ಹಾರಂಗಳಂ ಬಿಟ್ಟು, ರಾಜ್ಯ ಕೋಶಾದಿಗಳಲ್ಲಿ ಇಷ್ಟವಿಲ್ಲದೆ ಹಗಲೂ
ರಾತ್ರಿ ಹಂಬಲಿಸುತ್ತಾ, ತನ್ನ ಮನೆದೇವರಾದ ತನ್ನ ನಿಷ್ಟುಣ ಪ್ರಾಂತದೊಳಿ
ರುವ ಸೋಮಗಿರಿಯೊಳು ನೆಲಗೊಂಡಿರುವ ಸೋಮಶೇಖರನೆಂಬ ಪರಮೇಶ್ವರ

ನನ್ನು ಪ್ರತಿ ಸೋಮವಾರದಲ್ಲಿಯೂ ಕ್ರಮವಾಗಿ ಆರಾಧಿಸುತ್ತಾ ಇದ್ದನು. ಹಾಗಿದ್ದರೂ ಸಂತಾನವಾಗದಿರಲು, ಒಂದು ರಾತ್ರಿಯೊಳು ಕುಕ್ಷಿಯು ಪುತ್ರರಿಲ್ಲದ ಜನ್ಮವು ನಿರರ್ಥಕವು. ಪರಲೋಕದಲ್ಲಿ ಸುಖಕ್ಕೆ ಕೊರತೆಯು. ಆದ್ದರಿಂದ ಈದೇಹ ಧಾರಣೆಯಿಂದ ಪ್ರಯೋಜನವೇನು ? ಹೀಗಿರುವದಕ್ಕಿಂತಲೂ ದೇಹತ್ಯಾಗವೇ ಯುಕ್ತವಾದುದು, ಎಂದು ಯೋಚಿಸಿ, ಮರುದಿವಸ ಮುದಯಾಪೊಳೆದ್ದು ಸೋಮವಾರವಾದ್ದರಿಂದ, ಇಷ್ಟದೇವಾಲಯಕ್ಕೆ ಹೋಗಿ ವಿಧಿಯುರಿತ, ಪೂಜೆಯುಂ ಮಾಡಿಸಿ, ಪ್ರಸಾದಾವಿಗಳಿಂ ಕೈಕೊಂಮು ಅಂದಿನೊಳು ಕ್ಷುಪ್ತಿವಾಸಂಗಳಿಂ ತೊರೆದು ದೇವರೆದುರಿಗೆ ನಿಂತು, ಮುಂಳಿತಹಸ್ತನಾಗಿ ಸ್ವಾಮಿ ಲೋಕೈಕದೇವನೇ ! ನಾನು ಪುತ್ರಹೀನನಾಗಿ ಹೀನತ್ವಮುಂ ತಾಳಿರುವೆನು. ನನ್ನ ಜನ್ಮವು ಹೀಗಿರುವ ದಕ್ಕಿಂತಲೂ ನಾಶರಂ ಹೊಂದುವುದೇ ಉತ್ತಮವಾದುದು, ಇಂ ನನ್ನೊಳು ಕರುಣಿಸಿ, ಪುತ್ರನಂ ಕೊಟ್ಟರೆ ಕೊಮ, ಇಲ್ಲವಾದರೆ ಈ ದೇಹಮುಂ ನಿನ್ನ ಪಾದಾಂಬುಜಕ್ಕೆ ಸಮರ್ಪಿಸಿಕೋ ಎಂದು ದೃಢಚಿತ್ತನಾಗಿ ಆ ಜಗದೀಶನನ್ನೇ ಧ್ಯಾನಿಸುತ, ಅಲ್ಲಿಯೇ ಮಲಗಿದಲು ಕರುಣಾಳುವಾದಾ ಚಂದ್ರಚೂಡನು ಕ್ಷಣಿಗುಂ ತಾಳಿ, ಪಾರ್ವತೀಸನೇತನಾಗಿ ಆ ರಾತ್ರಿಯೊಳು ಒಂದು ಪ್ರತ್ಯಕ್ಷನಾಗಿ ಭಕ್ತಶಿರೋಮಣಿಯಾದ ಸೋಮಶೇಖರರಾಯನೇ ಕೇಳು ! ನೀನು ಅಮಿತವಾದ ಪಟಿಮುಂ ಮಾಡಿರುವೆ, ನಿನಗೆ ಗಂಡು ಮಕ್ಕಳಾಗಿ ವಂಶಾಭಿವೃದ್ಧಿಯಾಗುವ ಲಕ್ಷಣವೇ ಕಾಣುವಿಲ್ಲವು. ಹೆಣ್ಣು ಮಗಳಾಗುವಂತೆ ನಾನನುಗ್ರಹಿಸುವೆನು, ಬದು ಸಾಧಾರಣವೆಂದರಿಯುವೀಷ. (ಪುತ್ರಾಚ್ಚ ತಗುಣಂಪುತ್ರೀ) ಎಂಬುನ ಧರ್ಮಶಾಸ್ತ್ರನಿಯಮವು. ಈ ನಿನ್ನ ವಂಶದಲ್ಲಿ ಹಿಂದೆ ಯಾರಾವರು ಸ್ತ್ರೀರತ್ನವಿಲ್ಲದೆಯುಂ ಪಡೆದು, ಕನ್ಯಾದಾನವಂ ಮಾಪಲಿಲ್ಲವು. ಈಗ ನಿನಗುಂಟಾಗುವ ಕನ್ಯಾರತ್ನವಾದರೋ ಲೋಕೈಕ ಸುಂದರಿಯಾಗಿ ಜನಿಸುವಳು. ಆ ಸ್ತ್ರೀರತ್ನಮುಂ ಯಥಾವಿಧಿಯಾಗಿ ಸಾಲಂಕೃತ ಕನ್ಯಾದಾನಮುಂ ಮಾಡಿದರೆ, ನಿನ್ನ ಸಮಸ್ತ ವಿತ್ತಗಳೂ ಉತ್ತಮ ಲೋಕವನ್ನು ಹೊಂದುವರು. ಆದ್ದರಿಂದ ನೀನೀ ದೇವಾಲಯದ ಹಿಂಭಾಗದೊಳಿರುವ ಸಾಲವೃಕ್ಷದೆಡೆಗ್ಯೆದಿ, ಅದರಲ್ಲಿ ಭರಿತವಾಗಿರುವ ಫಲಂಗಳೊಳೊಂದಂ ಪರಿಗ್ರಹಿಸಿ ನಿನ್ನ ಪತ್ನಿಗಿತ್ತು ಭಕ್ಷಿಸುವಂತೆ ಮಾಡು, ಆಕೆಯು ಗರ್ಭಧಾರಿಣಿಯಾಗಿ ಅಸದೃಶ ಸೌಂದರ್ಯ ಸಂಪನ್ನೆಯಾದ ಕುವರಿಯುಂ ಪಡೆಯುವಳು. ಆ ಕುಮಾರಿಕಾ ಮಣಿಯುಂ ಬೆಳಸಿ, ಆಕೆಯೊಳು ನಿನ್ನ ವಂಶಾಭಿವೃದ್ಧಿಯಂ ದೌಹಿತ್ರ ಸಂತತಿಯಿಂದ ಹೊಂದುವೆ ಎಂದು ಸಂತೈಸಿ, ಯಾ ಚಂದ್ರಚೂಡಂ ತಿರೋಹಿತನಾಗೆ, ಸೋಮಶೇಖರಗಾಯುಂ ಪರಮ ಸಂಭ್ರಮ ಸಂವೃತನಾಗಿ ಆ ನಿಶಿಯಲ್ಲಿ ಹೊರಟು ದೇವಾಲಯದ ಹಿಂಮಗಡೆಯಲ್ಲಿರುವ ಹಸಿವಾವಿನ ಗಿಡವ ಬುಡಪಡಿಗ್ಯೆದಿ, ತಲೆಯೆತ್ತಿ ನೋಡಲಾ ವೃಕ್ಷವು ಫಲ ಸಮೃದ್ಧಿಯಿಂದ ತುಂಬಿ ತೂಗುತ್ತಿರುವದನ್ನು

ಕಂಡು ತನಗುಂಟಾಗಿದ್ದಾನಂದವಿಂ ದ್ವಿಗುಣಿತನಾಗಿ ಈ ಗಿಡದಲ್ಲಿನ ಎಷ್ಟು ಫಲಂಗಳಂ ತೆಗೆದುಕೊಂಡು ಹೋಗಿ ಕೊಟ್ಟರೆ ಅಷ್ಟುಮಂದಿ ಮಕ್ಕಳಾಗುವದೆಂದು ತಾಂ ಮಕ್ಕಳಿಲ್ಲದವನಾದಕಾರಣ ಭ್ರಾಂತನಾಗಿ ಆ ಮರವನ್ನೇರಿ ಕೆಲವು ಫಲಂಗಳಂ ಕುಯಿದು, ಮಟ್ಟಿಕಟ್ಟಿಕೊಂಡು ಕೆಳಗಿಳಿದು ನೋಡುವಾಗ ಒಂದೇ ಹಣ್ಣು ಕಾಣಿಸಿತು. ಪುನಃ ಮರವಂ ಹತ್ತಿ ಮೊದಲಾವರ್ತಿಗಿಂತಲೂ, ಇಮ್ಮಡಿಯಾಗಿ ಕುಯಿದುಕೊಂಡು ಕೆಳಗೆ ಬಂದು ನೋಡುವಲ್ಲಿ ಯಥಾಪ್ರಕಾರಮೊಂದೇ ಹಣ್ಣು ಕಾಣಿಸಲು, ದ್ವೈವಾಜ್ಞೆಯನ್ನರಿಯದೆ ಅನೇಕಾವರ್ತಿ ಹೀಗೆಯೇ ಮಾಡಿ ಕಡೆಗೆ ಅವಶಿಷ್ಟವಾಗುವ ಒಂಬೊಂದು ಹಣ್ಣನ್ನೇ ಕಾಣುತ್ತಾ ತನಗೆ ಒಂದೇ ಲಭ್ಯವಿರುವದೆಂದು ತಿಳಿದು, ಈ ಗಿಡದಲ್ಲಿನ ಯಾವದಾದರೂ ಒಂದು ಹಣ್ಣನ್ನು ಕೊಯಿದುಕೊಳ್ಳಲು ನಿಶ್ಚೈಸಿ, ಯಾವದಂ ಕೊಯಿದುಕೊಳ್ಳಲಿ, ಎಂದು ಯೋಚಿಸುತ್ತಿರುವಾಗ ಗಿಡವಿಂ ಈಶ್ವರಾಜ್ಞೆಯಿಂದ ಒಂದು ಹಣ್ಣು ಥೊಪ್ಪನೆ ನೆಲದೊಳು ಬೀಳೆ ಅದಂ ತೆಗದುಕೊಂಡು ದೇವಾಲಯದ ಬಳಿ ಬಂದು ದೇವರ ಮುಂಗಡೆಯೊಳಿರಿಸಿ, ಸ್ವಾಮಿನಾ ! ನಿನ್ನ ಪ್ರಸಾದವೆಂದು ಹೇಳಿ ಅದಂ ಕೈಗೊಂಡು ಅಲ್ಲಿಂದ ಹೊರಟು ಮನೆಗೆ ಬಂದು, ಆ ಮರುದಿನದುದಯದೊಳು ತನ್ನ ಸತಿಯಳಿಗೆ ಮುಂಗಳ ಮಜ್ಜನಮಂ ಮಾಡಿಸ್ಕಿ ಆ ಫಲವಂ ಸವಿಯಲೀಯಲು, ಅದರ ಪ್ರಭಾವದಿಂ ಆ ಸುಂದರೀರತ್ನವು ಗರ್ಭವಂ ತಾಳ್ದಳು.

ಆ ಗರ್ಭವು ಶುಕ್ಲಪಕ್ಷೇಂದುವಿನಂತೆ ದಿನೇ ದಿನೇ ಅಭಿವೃದ್ಧಿಯನೈದುತ, ನವಮಾಸಂಗಳು ತುಂಬಿ ಸಲ್ಲಗ್ನ ಸುಮುಹೂರ್ತದೊಳು, ಆ ಪೂರ್ಣಗರ್ಭಿಣಿಯಾದ ಪುಣ್ಯಶೀಲೆಯು ತನಗಿಂತಲೂ ಸೌಂದರ್ಯವಾಪ. ಶರತ್ಪಾಲ ಚಂದ್ರನಂತೆ ಸಂಶೋಭಿಸುವ ಪುತ್ರಿಕಾರತ್ನಮಂ ಪಡೆದಳು. ಅದಂ ಕೇಳುತ್ತಲಾ ಸೋಮಶೇಖರಾವನೀಶಂ ಅಮಂದಾನಂದ ತುಂದಿಲಸ್ವಾಂತನಾಗುತ ಆ ಶಿಶುವಂ ನೋಡಿ ಪೂರ್ಣ ಚಂದ್ರನೇಳಿಗೆಯಂ ಕಂಡ ರತ್ನಾಕರನಂತೆ ಉಬ್ಬುತ್ತಾ, ಕುಲಪುರೋಹಿತರಂ ಕರೆಯಿಸಿ, ಪುತ್ರಿಕಾ ಮಹೋತ್ಸವಾರ್ಥವಾಗಿ ಸಕಲ ದಾನಗಳಂ ಮಾಡಿ, ಎಲ್ಲಾ ಜನಗಳಂ ಸಂತೋಷಗೊಳಿಸುತ್ತಾ, ಹನ್ನೊಂದನೆಯ ದಿನದೊಳು ನಾಮಕರಣೋತ್ಸವಂ ಮಾಪೆನೆಂದುಕೊಂಡು ನಿಖಿಲ ಬಂಧುಜಾಲಮುಂ ಕರೆಕಳುಹಿಸಿ, ಇಷ್ಟ ಮಿತ್ರ ಸಾಮಂತಾವಿಗಳಂ ಬರಮಾಡಿಕೊಂಡು ಒಡ್ಡೋಲಗವಾಗಿ ನಾಮಕರಣ ಪ್ರಸ್ತುತಮುಂ ಬೆಳೆಯುಸುತ್ತಿರುವಾಗ ನೆರವಿದ್ದ ಅಖಿಲ ಬಂಧು ಸಮಾಜವೂ, ಆ ಸರ್ವೋತ್ತಮವಾಗಿ ಹೊಳೆಯುತ್ತಿರುವ ಕನ್ಯಾರತ್ನಮುಂ ನೋಡಿ, ಮಹದಾನಂದವಂ ತಾಳಿ, ಎಲೈ ಸೋಮಶೇಖರರಾಯನೇ ! ನಿಮ್ಮ ಸತ್ಪುರುಷೋದ್ವೇಶದಿಂದ ಯಾರೂ ಈ ಕನ್ಯಾರತ್ನಮುಂ ಪಡೆದವರೇ ಇಲ್ಲ, ನೀನು ಧರ್ಮನಿರತನಾಗಿಯೂ ಚಂದ್ರಚೂಡನ ಮಹಾಭಕ್ತನಾಗಿಯೂ ಇರುವದರಿಂದ ಆ ಮಹಾದೇವನೇ

ನಿನ್ನೊಳು ಕೃಪಾಪರಿಪೂರ್ಣರಾಗಿ ಈ ಕನ್ಯಾರತ್ನಮಂ ಅನುಗ್ರಹಿಸಿದನು. ಈ ಕನ್ಯೆಯನ್ನು ಶಾಸ್ತ್ರೋಕ್ತಮಾಗಿ ಸಾಲಂಕೃತ ಕನ್ಯಾದಾನಮಂ ಮಾಡಿ ಧನ್ಯನಾಗು, ಎಂದುನ್ನೂ ಇದರಿಂದ ನಿನ್ನ ಬಾಂಧವರಾದ ನಮಗೂ ಕಿಂಚಿತ್ಫಲ ಮುಂಟು, ಎಂದು ಹೊಗಳುತ್ತಾ, ಈ ಬಾಲಕಾಮಣಿಯು ಸೋಮೇಶ್ವರ ಸ್ವಾಮ್ಯಂಶಭೂತಳಾಗಿರುವದರಿಂದ ಈ ಮಗುವಿಗೆ ನಂದಿನೀ ಎಂದು ನಾಮವಂ ಇಡಬೇಕೆಂದು ಹೇಳಲು. ರಾಯನದೇ ಪ್ರಕಾರವಾಗಿ ನಾಮಕರಣ ಮಹೋತ್ಸವ ಕಾಲದೊಳು ತನ್ನ ಮಗುವಿಗೆ ನಂದಿನೀ ಎಂಬ ಪೆಸರನ್ನಿಟ್ಟು, ಸಕಲ ಬಂಧು ಸಂಜಯಕ್ಕೂ ತಾರತಮ್ಯಾನುಸಾರವಾಗಿ, ದಿವ್ಯಾಭರಣಾಂಬರಗಳಿಂ ಸನ್ಮಾನಮಂ ಗೈದು, ಭೂಸುರಾಳಿಗೆ ಧನಕನಕ ಭೂಷಣ ದಿವ್ಯಾನ್ನಂಗಳಿಂದ ತೃಪ್ತಿಗೊಳಿಸಿ, ದೇವಾಲಯುಂಗಳೊಳು, ಪೂಜೋತ್ಸವಾದಿಗಳಂ ನಡಿಸಿ, ಆ ಶಿಶುವನ್ನು ಅತ್ಯಂತ ಸಂಭ್ರಮದೊಂದಿಗೆ ಪೋಷಿಸುತ್ತಾ, ಬಾಲಕ್ರೀಡೆ ವಿಲಾಸದಿಂದ ಮಹದಾನಂದಂ ಹೊಂದುತ್ತಾ ಕಾಲಮುಂ ಕಳೆಯುತ್ತಿರ್ದಂ. ಶುಕ್ಲಪಕ್ಷದ ಮೃತಾಂಬುವಿನಂತೆ ದಿನೇದಿನೇ ಅಭಿವೃದ್ಧಿಯನ್ನೈದುತ್ತಿರುವಾ ತನ್ನ ಪುತ್ರಿಕಾಮಣಿಯಂ ಕಂಡು, ತೊಡೆಯಮೇಲಿಟ್ಟುಕೊಂಡು ನೋಡಿ ಸಂತೋಷಿಸುತ್ತಾ, ಆ ಮಗುವು ನುಡಿಯುವ ತೊದಲು ನುಡಿಗಳಂ ಕೇಳಿ ಆನಂದಿಸುತ್ತಾ, ಬಾಲಕ್ರೀಡೆಗಳಂ ನೋಡಿ, ನೋಡಿ. ಅಮಂದಾನಂದ ತುಂದಿಲನಾಂತನಾಗುತ್ತ ಇರಲು ಆ ಕನ್ಯೆಯು ದಿನೇದಿನೇ ಅಭಿವೃದ್ಧಿಯನ್ನೈದಿ, ಸಕಲ ವಿದ್ಯಾಪ್ರವೀಣಳಾಗಿ ಬಾಲ್ಯವಂ ಕಳೆದು ಪ್ರಾಪ್ತ ವಯಸ್ಕಳಾಗುತ್ತಾ ಬಂದುದಂ ಕಂಡು ಸೋಮಶೇಖರ ಭೂಪಾಲನು ತನ್ನ ಪ್ರಾಣ ಕಾಂತೆಯಂ ಕರೆದು, ಆಂತಃಪುರದೊಳು ಕುಳಿತು ಹೇ ನೋಹಾಂಗಿಯೇ ! ನಮ್ಮ ಮೋಹಪುತ್ರಿಯಾದ ನಂದಿನಿಯು ಬಾಲ್ಯವಂ ತೊರೆದು ಯವ್ವನಾವಿರ್ಭೂತಳಾಗುತ್ತಾ ಬಂದಳು. ಮದುವೆಗುಂ ಮಾಡಬೇಕು, ಈಕೆಗೆ ಅನುಕೂಲನಾದ ಗಂಡನಂ ಪರಮೇಷ್ಠಿಯು ಎಲ್ಲಿ ಸೃಷ್ಟಿಮಾಡಿದ್ದಾನೋ ಕಾಣೆನು. ಇದೊಂದು ಚಿಂತೆಯು ಪ್ರಾಪ್ತಿಯಾಯಿತು, ಇದಕ್ಕೇನುಪಾಯಾಂತರವಂ ಹೇಳುವೆ ಎಂದಾ ಮಹಿಪಿಯಂ ಪ್ರಶ್ನೆಮಾಡಲಾ ಸುಂದರೀಮಣಿಯು, ಎಲ್ಲೆ ಪ್ರಾಣಕಾಂತನೇ ! ಈ ಸುಕುಮಾರಿಯಂ ನಾವು ಪಡೆದದ್ದು ಅತಿಶಯವುಮಲ್ಲಂ. ಇವಳಿಗೆ ಅನುರೂಪನಾದ ಗಂಡನು ಸಿಕ್ಕಿ, ಅವನೊಂದಿಗೆ ಸೇರಿದಂದಿಗೆ ನಾವುಕೃತಕೃತ್ಯರಾದೆವು, ಎಂದು ರಾಯನೊಡನೆ ವಿಜ್ಞಾಪನೆಯಂ ಮಾಡೆ, ಅದನ್ನನುಮೋದಿಸುತ್ತಾ, ತಕ್ಕ ವರನಂ ಹುಡುಕುವದರಲ್ಲಿ ಯೋಚಿಸುತ್ತಾ ಪ್ರಜಾರಂಜನೈಕಪರನಾಗಿ ರಾಜ್ಯಮಂ ಸುಖದಿಂದಾಳುತ್ತಿರ್ದಂ.

ಹಿಮಾಲಯ ಪ್ರಾಂತದೊಳು ಸಂಶೋಭಿಸುತ್ತಿರುವ ಕಾಶ್ಮೀರದೇಶದೇಶಾಂಗನಾ ಮುಖಾಂಬುಜದಂತೆ ಶೋಭಾಯಮಾನವಾಗಿರುವ ಪಾಟಲೀ ಎಂಬುವದೊಂದು ಪುಟಭೇದನವಿಪ್ಪುದು. ಆ ದೇಶಾಧೀಶ್ವರನಾದ ಜಯಸೇನನೆಂಬ ಧರ

ತು, ಶೂರಸೇನನೆಂಬ ಮಂತ್ರಿಶೇಖರನುಳ್ಳವನಾಗಿ ಸಕಲ ರಾಜಧರ್ಮಂಗಳಿಗನು
ಮಾಗಿ ರಾಜ್ಯಭಾರಮಂ ಮಾಡುತ್ತಾ ಸುಖಿವಾಗಿರ್ಪನು, ಆತನು ಪುತ್ರರಹಿ
ಗಿ ಪುತ್ರಾಪೇಕ್ಷೆಯಿಂದ ಪ್ರತಿ ಭಾನುವಾರದಲ್ಲಿಯೂ, ತನ್ನ ಪೊಳಲಿಗೆ ಸ್ವಲ್ಪ
ದಲ್ಲಿರುವ ಗಂಧರ್ವಗಿರಿಯೆಂಬಚಲೇಂದ್ರದೊಳು ತಪೋವನವಂ ಮಾಡಿಕೊಂಡು
ವಂ ಗೈಯ್ಯುತ್ತಿರುವ ಪೀತಿಹೋತ್ರನೆಂಬ ಋಷೀಶ್ವರನೆಡೆಗೈದಿ, ಗಂಧ ಪುಷ್ಪ
ದೀಪ ಫಲಾದಿ ಸಕಲೋಪಚಾರ ಸಾಮಗ್ರಿಗಳಿಂದರ್ಚಿಸಿ ಸೇವೆಯಂ ಮಾಡಿ
ತ್ತಿರ್ದನು, ಆ ಮಹಾಮುನೀಂದ್ರನ ತಪೋಮಹಿಮೆಯಿಂದ ಆ ನರೇಂದ್ರಾಗ್ರ
ಹಿಲ್ಲಿಯೂ ಋತು ಧರ್ಮಂಗಳಿಲ್ಲದೆ ಸಮಸ್ತ ಲತೆಗಳೂ ಪುಷ್ಪಿಸಿ, ಚಿಗಿತು ಮಕ
ರಂದ ಪರಾಗ ಬಂಧುರಂಗಳಾಗಿ ಹೊಳೆಯುತ್ತಿದ್ದವು. ಸಮಸ್ತ ವೃಕ್ಷಜಾತಿಗಳಿ
ಂ ತಳಿತು ದರಳಿದು ಕುಸುಮ ಫಲಭಾರಂಗಳಿಂದ ನಮ್ರಿತ ಶಾಖೆಗಳುಳ್ಳದ್ದಾಗಿ
ನಂದಮುಂ ಸೂಸುತಂ ಪರಾಗಮುಂ ದಿಕ್ಕುಗಳಲ್ಲಿ ಚಲ್ಲುತ್ತಾ ಕಂಗೊಳಿಸುತ್ತಿ
ದ್ದವು. ಮೃಗಪಕ್ಷಿ ಸಂಕುಲಂಗಳು ತಮ್ಮ ತಮ್ಮ ವೈರಭಾವಮಂ ತೊರೆದು,
ಸ್ವೀಯಾನ್ಯಾನುರಾಗದಿಂ ಕೂಡಿ ಸುಖಿಸುತ್ತಿರುವವು. ಕಾಸಾರ, ಸರೋವರ,
ಕಾದಿಗಳಿಂದಲೂ, ಹಂಸ, ಕಾರಂಡವ, ಮಧುಕರ, ಶುಕಪಿಕ ತಾರಿಕಾ ಕಲಕಲ
ದಂಗಳಿಂದಲೂ, ಕಮಲ, ಕುಮುದ ಕಲ್ಹಾರ, ರಕ್ತೋಂಬು, ಸಂಜಾತ, ರಂಜಿ
ಳಾಗಿಯೂ ಸುಲಲಿತಾಚ್ಛ ಸಾಮ್ಯದ ಶೈತ್ಯಾನೋದ ಸಂಶೋಭಿತ, ನೀರಸಂಪೂ
ರಿಳಾಗಿಯೂ ಪೆರೆಯುತ್ತಿರುವವು. ಎಲ್ಲಿ ನೋಡಿದರೂ ಲತಾಗೃಹಂಗಳೂ
ಕಶೈಲಂಗಳೂ ರನ್ನದಾಸರಗಳೂ ಮನೋಹರಂಗಳಾದ ಉದ್ಯಾನಂಗಳೂ
ರಾಜಿಸುತ್ತಲಿದ್ದವು. ಈ ಪರ್ವತದ ಸೊಬಗಂ ಕಂಡು ಗಂಧರ್ವರು ಮುಂತಾದ
ತೆಗಳು ಕ್ರೀಡಾರ್ಥಮಾಗಿ ಈ ಧರಣೀಧರಾಗ್ರಕ್ಕೆ ಬಂದು ತಮ್ಮ ಮನೋರಥಂ
ಪೂರೈಸಿಕೊಂಡು ತ್ವರಿತವಾಗಿ ಹೋಗುತ್ತಿರ್ಪರು. ಹೀಗಿರುತ್ತಾ ಒಂದಾ
ದು ದಿನದೊಳು, ರತ್ನಚಿತ್ರನೆಂಬ ಗಂಧರ್ವನು ತನ್ನ ಕಾಂತೆಯಾದ ಸೋಮ
, ಎಂಬ ಗಂಧರ್ವ ಕನ್ಯೆಯೊಡನೆ ಈ ಪರ್ವತಾಗ್ರಕ್ಕೈದಿ, ಅಲ್ಲಿನ ಸರೋವ
ರೊಳು ಜಲಕೇಳಿಯಂ ಸಲುವಿ ಸಿಂಗರ ವನಂಗಳೊಳು ಪುಷ್ಪಾಸಚಯಾಬಿ ಕೇಳೀ
ಸದಮಂ ಗೈಯುತ ಕುಂಜಗಳೊಳು ಕುಳಿತು ರನ್ನದಾಸುಗಳೊಳು ನಲಿದಾ
ತನ್ನ ಕಾಂತೆಯಂ ಕೂಡಿ ಪುಷ್ಪಲತಾಲಯಂಗಳೊಳು ಮನ್ಮಥ ಕೇಳಿಯಂ
ಪ್ರತ ಅತ್ಯಾನಂದದೊಡನೆ ಆ ವನಮುಂ ಸಂಚಾರಮುಂ ಮಾಡಿ ; ಈ ಪರಮ
ತಪೋಧನನ ನುತತರ ದಾವಾಸಸ್ಥಾನದೆಡೆಗೈತಂದು ಅಲ್ಲಿನ ಪರಿಪರಿಯ ಸೊಬಗಿನ
ತಳ್ಳಗಳೊಳು ಪೂಗೊಯ್ದು ಸುಖಿಸುತ್ತ ರನ್ನದಾಸುಗಳೊಳು ಕುಳಿತು ಪಾಡು
ತಾಡುತ್ತಿರುವಾಗ ಪರಮ ತಪೋಧನನಾದ ಆ ಋಷಿಯು ಮಧ್ಯಾಹ್ನಿಕ ಕಾ
ಚಿತ ಕರ್ಮಾನುಷ್ಠಾನಾರ್ಥಮಾಗಿ ಸರಸ್ತೀರಕ್ಕೈದಿದಂ. ಅದಂ ಕಾಣದಾ ಗಂಧ

ರ್ವದಂಪತಿಗಳು, ಪರಸ್ಪರಾನುರಾಗಸಲ್ಲಾಪ, ಸಂಪ್ರಷ್ಟರಾದ ಕಾರಣ ಮನ್ಮಥ ದರ್ಪಮುಂ ಕಳೆಯಲಿಳಿಸಿ, ಇರ್ವರೂ ಕಲೆತು ಸುರತಯುದ್ಧಮುಂ ಮಾಡಿ, ಇಷ್ಟಾರ್ಥಕ್ಕೆ ಪೂರಣದಿಂ ತೃಪ್ತರಾಗುವ ಕಾಲಕ್ಕೆ ಸರಿಯಾಗಿ ಯಾ ತಾಪಸೇಂದ್ರನು ನಿರ್ಪ್ರತೀತ ಮಾಧ್ಯಾಹ್ನಿಕನಾಗಿ ತನ್ನ ಟಜಮುಂ ಕುರಿತು ಬರುತ್ತಾ ಅಕಸ್ಮಾತ್ ಈಪರಿಯುಂ ಪೆರೆಯುವ ಗಂಧರ್ವ ದಂಪತಿಗಳಂ ನೋಡಿದ ಮಾತ್ರಗಿಂದಲೇ ಅತ್ಯಂತ ಕೋಪಾಕ್ರಾಂತನಾಗಿ ಕಂಣುಗಳೊಳು ಕಿಡಿಗಳಿಂ ಸುರಿಸುತ ಬಪ್ಪಳ್ಳುಕುಟೀತಟನಾಗಿ ಕಟಕಟನೆ ಹಲ್ಲುಗಳಂ ಕಡಿಯುತ್ತಾ ಈಗಂಧರ್ವ ದಂಪತಿಗಳಂ ಕುರಿತು, ಎಲ್ಲೆ ಕಾಮಾಂಧರಾದ ಮಹಾತ್ಮರೇ ! ಇದು ತಪೋವನವೆಂಬೂ ಇಂಥಾ ಕಾರ್ಯಕ್ಕೆ ಅನುಚಿತಮಾದುದೆಂತಲೂ, ಅನಿತಾದರು ಮರಿಯುವೆ ಈ ದುಷ್ಕಾರ್ಯಕ್ಕೊಳು ಪ್ರವರ್ತಿಸಿರುವಿರಿ ಯಾವಕಾರಣ ನಿಮ್ಮಿಬ್ಬರೊಳು ಮುರುಷನಾದ ರತ್ನಚಿತ್ರನೇ ನೀನು ನಪುಂಸಕನಾಗು, ಕಾಮಾಂಧಳಾಗಿ ಯುತ್ತಾಯುಕ್ತ ಮರಿಯುವೆ ಸೋಮಮಣಿಯೇ ನೀನು ಮನುಜರಿಗೆ ಪತಿಯಾಗಿ ಹೋಗೆಂದು ಆ ಇರ್ವರಿಗೂ ಶಾಪಂಗಳಂ ಕೊಡಲು, ಆ ಮುನೀಂದ್ರನ ಕೂರವಾಕ್ಯಂಗಳಂ ಕೇಳಿ ಪರಮ ದುಃಖಾಕ್ರಾಂತರಾಗಿ ಬಂದು, ತಾಪಸೇಂದ್ರನ ಚರಣಾಂಬುಜಗಳೊಳು ಬಿದ್ದು, ಸ್ವಾಮಿನಾ ತಪೋಧನರೇ ! ಅಜ್ಞಾನ ವಶಾತ್ ನಾವು ಮಾಡಿರ್ಪ ಯಪರಾಧವನಂ ಕ್ಷಮಿಸಿ, ಶಾಪನಿವರ್ತನೆಯಿಂದ ಧನ್ಯರಂಮಾಡಬೇಕೆಂದು ಅತಿ ದೈನ್ಯದಿಂ ಬೇಡಿಕೊಳ್ಳುತ್ತಿರಲಾ ಮುನೀಂದ್ರನು ಪುನಃ ಪರಿಶುದ್ಧಾರ್ಥಮಾಗಿ ಸ್ನಾನಮುಂ ಗೈದು ಬಂಬರ್ಪಾಗಿ ಸ್ವಭಾವಶಾಂತನಾದ್ದರಿಂದ ಅವರೊಳು ಕರುಣಿಸಿ, ಎಲ್ಲೆ ಗಂಧರ್ವದಂಪತಿಗಳಿರಾ ! ಈ ಶಾಪಮಾದರೆ ನಿರರ್ಥಕ ಮಾಗಲಾರದು. ಆದರೂ ಚಿಂತೆಯಿಲ್ಲ, ಎಲ್ಲೆ ರತ್ನಚಿತ್ರನೇ ! ನೀನು ನಿನ್ನ ಪತ್ನಿಯುಂ ಸಾರುವವರಿಗೂ ನಪುಂಸಕನಾಗಿರು, ಸೋಮಮಣಿಯೇ ನೀನು ಮನುಜಳಾಗಿ ಒಂದು ಗಂಡುಮಗುವುಂ ಪುರುವವರಿವಿಗೂ ಈ ಶಾಪವಂ ತಾಳರು, ಅನಂತರ ನಿನ್ನ ಪತಿಯೊಡನೆ ನಿನ್ನ ಲೋಕಮೊಳು ಮುನ್ನಿನಂತಿರುವಿ, ಎಂದು ಶಾಪವಿಮೋಚನೆಯುಂ ಹೇಳಿ ಕಳುಹಲಾ ಸೋಮಮಣಿಯು ಮನುಜಸ್ತ್ರೀ ರೂಪಂ ತಾಳಿ ತಾಮುಸಾರ್ವಭೌಮ ವಿಜಯ ಲಕ್ಷ್ಮಿಯೋ ಅಲ್ಲದೆ ಸೌಂದರ್ಯ ಸಾರಮೇನಾದರೂ ಮೂರ್ತೀಭವಿಸಿಹುದೋ ಎಂಬಂತೆ ರಾರಾಜಿಸುತ್ತಾ, ಆ ಆಶ್ರಮದ ಒಳಮೊಳು ಅವತರಿಸುತ್ತಿದ್ದಳು.

ಹೀಗಿರುತ್ತಲಾ ಪಾಟಲೀ ಪುರಾಧೀಶ್ವರನಾದ ಜಯಸೇನ ಮಹಾರಾಯುಂ ತನ್ನ ಪದ್ಧತಿಯನ್ನನುಸರಿಸಿ ಭಾನುವಾರದೊಳು ಸಕಲ ಪೂಜಾ ಸಾಮಗ್ರಿಗಳಂ ಕೊಂಡು ಬಂದು, ಈ ತಾಪಸಾಗ್ರಣಿಯುಂ ಭಕ್ತಿಸಂಪನ್ನನಾಗಿ ಪೂಜಿಸುತ್ತಿರುವ ಸಮಯದೊಳು, ನಗರಸುಂದರೀ ರೂಪಧಾರಿಣಿಯಾದ ಗಂಧರ್ವ ಸುಂದರೀಮಣಿಯು

ಆ ರಾಜನ ರೂಪಲಾವಣ್ಯಾತಿಶಯಮುಂ ಕಂಡು ಮೋಹಿತ
ಳಾಗಿ ಋಷೀಂದ್ರನ ಬಳಿಗೈದಿ, ಮುಕುಳಿತ ಕರಕಮಲಳಾಗಿ
ಸ್ವಾಮಿನಾ ! ನನ್ನ ಮನೋರಥ ಸಿದ್ಧಿಗಾಗಿ ಸನ್ನಿಧಿಯಂ ಸಂಪ್ರಾರ್ಥಿ
ಸುವೆನೆಂದು ಬೇಡಿಕೊಳ್ಳುತ್ತಿರುವ ಅಂಗನಾಮಣಿಯುಂ ನೋಡಿ ತನ್ನ ಸೇವಾಸಕ್ತಿ
ಯೊಳಿರುವ ರಾಯನಂ ಕುರಿತು ಎಲ್ಲೈ ನೃಪಾಗ್ರಣಿಯೇ! ಈ ಸುಂದರೀಮಣಿಯನ್ನು
ಪತ್ನಿಯನ್ನಾಗಿ ಪರಿಗ್ರಹಿಸು, ಈಕೆಯು ಗಂಧರ್ವಕನ್ನೆಯು, ಕಾರಣಾಂತರದಿಂದ
ಮನುಷ್ಯಳಾಗಿರುವಳು. ಈಕೆಯು ಒಂದು ವರುಷಕಾಲಂ ನಿನ್ನೆಡೆಯೊಳು
ಸಂಸಾರಿಯಾಗಿ ಬಾಳುವಳು, ಆ ಸಮಯದೊಳಗಾಗಿಯೇ ವಂಶೋದ್ಧಾರಕನಾದ
ಸುಕುಮಾರನಂ ಪೆತ್ತು ನಿನ್ನ ಮಹಿಷಿಯ ಕೈಯೊಳು ಕೊಟ್ಟು ತನ್ನ ಪೂರ್ವದೇ
ಹವುಂ ತಾಳುವಳು. ನಿನ್ನ ಮಹಿಷಿಗಾದರೋ ಸಂತಾನ ಯೋಗಮೇ ಇಲ್ಲವು.
ಎಂದಾಜ್ಞೆಯುಂ ಕೊಡಲಾ ರಾಯುಂ ಮಹದನುಗ್ರಹಮೆಂದು ಆ ಮುನೀಂದ್ರನಾಜ್ಞೆ
ಯನ್ನು ಶಿರಸಾವಹಿಸಿ, ಮಹದಾಹ್ಲಾದಯುಕ್ತನಾಗಿ ಆ ತಾಪಸಾಗ್ರಗಣ್ಯನಂ
ವಂದಿಸಿ, ಆ ಸುಂದರೀಮಣಿಯನ್ನೊಡಗೊಂಡು ತನ್ನ ರಾಜಧಾನಿಯುಂ ಸಾರಿ,
ಅಂತಃಪುರಮುಂ ಪ್ರವೇಶಿಸಿ, ತನ್ನ ಪತ್ನಿಗಾಕೆಯುಂ ತೋರಿಸಿ, ಮುನೀಂದ್ರನಾ
ಜ್ಞಾವಿಸಿದುದನ್ನೆಲ್ಲಮುಂ ವಿಶದವಾಗಿ ಪೇಳಲಾ ರಾಜಾಂಗನೆಯೂ ಸಂತೋಷಿತಸ್ವಾಂ
ತಳಾಗಿ, ಸಪತ್ನೀ ಮಾತ್ಸರ್ಯಮಾಡದೇ ಸಹೋದರೀಭಾವಂ ತಾಳಿ, ಅಕೆಯೊಳು
ಸರಸಸಲ್ಲಾಪಂಗಳಂ ಮಾಡುತ್ತಾ ಪರಸ್ಪರಾನುರಾಗಯುಕ್ತರಾಗಿ ಬಾಳುತ್ತಿದ್ದರು.
ಹೀಗಿರುತ್ತಿರುವಾಗಲಾ ಕಾಂತಾಮಣಿಯು ಗರ್ಭಮುಂ ತಾಳಿದಳು. ಈ ವಾರ್ತೆ
ಯುಂ ಹೊರಪಡಿಸದೆ ಆ ರಾಜಮುಖಿಯುಂ ತಾನು ಗರ್ಭವುಂ ತಾಳಿಹೆನೆಂದು ವಾರ್ತೆ
ಯುಂ ಪುಟ್ಟಿಸಿ, ಅದಕ್ಕನುಸಾರವಾಗಿ ವೇಷಧಾರಿಣಿಯಾಗಿ ನಟಿಸುತ್ತಿರಲಾ ಪೆಣ್ಣ
ಣಿಯಗರ್ಭವು ವಳಕ್ಷಪಕ್ಷೇಂದುವಿನಂತೆ ದಿನೇದಿನೇ ಅಭಿವೃದ್ಧಿಯಂ ಹೊಂದು
ತ್ತಾ ಬಂದು ನವಮಾಸ ಪೂರ್ತಿಯೊಳು ಸರ್ವೋತ್ತಮ ಸುಂದರನಾದ ಪುತ್ರನನ್ನು
ಪಡೆದಳು. ಆ ಕೂಡ್ಲೆ ಆ ಪುತ್ರರತ್ನಮುಂ ತಂದು ಆ ರಾಜಾಂಗನೆಯ ಕೈಯೊಳಿತ್ತು,
ಈ ಪುತ್ರನನ್ನು ನಿನ್ನ ತನುಜಾತನೆಂದು ಕಾಪಾಡುವದು. ಅವನಿಂದ ನಿನ್ನ ವಂಶೋ
ದ್ಧಾರಮಪ್ಪುದು. ಎಂದೊರೆದು ಆ ಶಿಶುವಿಗೆ ಪರಕೆಯನ್ನಿತ್ತು, ತನ್ನ ಕಾಂತನಾ
ಗಿದ್ದ ಜಯಸೇನರಾಯನ ಬಳಿಯನ್ನೈದಿ ಆತನ ಕರವಂ ಪಿಡಿದು ಸ್ವಾಮಿನಾ ಮಹಾ
ರಾಜರೇ ! ತಮ್ಮ ಕೈಸಾರಿದ ಮೊದಲು ಈವರಿಗೂ ಇನಿತಾದರೂ ಶ್ರಮವುಂಟು
ಹೊಂದಿದವಳಲ್ಲಾ ನಾನು ತಮ್ಮ ಋಣಪರಿಹಾರಾರ್ಥವಾಗಿ, ವಂಶೋದ್ಧಾರ
ಕನಂ ಪೆತ್ತು ತಮ್ಮ ಸಹಧರ್ಮಿಣಿಯ ಕೈಯೊಳಿತ್ತು ಇರುವೆ. ನನ್ನ ಶಾಪವು ಇಂ
ದಿಗೆ ಪರಿಹಾರವಾದುದು. ಆದ್ದರಿಂದ ನನ್ನೆ ಮುಂದಿನ ದೇಹವುಂ ತಾಳಿ, ನನ್ನ
ಪತಿಯು ಸನ್ನಿಧಿಗೈದಿ ಸುರಲೋಕದೊಳು ಸುಖಿಯಾಗಿರುವೆನೆಂದು ಹೇಳುತ್ತಾ,

ಅಲ್ಲಿಂ ಹೊರಟು ತನ್ನ ದೇಹಮುಂ ತೊರೆದು, ಗಂಧರ್ವಾಂಗನೆಯಾಗಿ ತನ್ನ ಪುರ ಷನಂ ಹೊಂದಿ ಸುಖಯಾದಳು.

ಇತ್ತಲಾ ರಾಜಯಸಿಪತ್ನಿಯಾದ, ಭವಾನೀದೇವಿಯು ತನ್ನ ಮಡಿಲಲ್ಲಿರುವ ಚಂದ್ರಮಂಡಲದಂತೆ ಸಂಶೋಭಿಸುತ್ತಿರುವ ಶಿಶುವಂ ಕೈಗೊಂಡು ಅಪ್ಪಿಕೊಂಡಮಾ ತ್ರದಿಂದಲೇ, ಆಕೆಯ ಪಯೋಧರಂಗಳೊಳು ಸ್ತನ್ಯಮುದ್ಭವಿಸಿ, ಉಕ್ಕಿ ತೊಟ್ಟಿ ಡುತ್ತ ಬರಲಾ ಸ್ತನ್ಯಮಂ ಶಿಶುವಿಗಿತ್ತು, ನಿಷ್ಪ್ರೇಸಮಂ ಕಂಡುಕೊಂಡ ದರಿದ್ರನಂತೆ ಪರಮಾನಂದಭರಿತಳಾಗಿ, ಗರ್ಭಿಣಿಯಾಗಿದ್ದ ರಾಜಪುತ್ರಿಯು ಗಂಡುಮಗುವಂ ಪಡೆದಳೆಂದು ಪ್ರಸಿದ್ಧಿಯಂ ಹುಟ್ಟಿಸಿದಳು.

ದೇವಸೇನರಾಯನು ಅದಕ್ಕನುಸಾರವಾಗಿ, ಪುತ್ರೋತ್ಪತ್ತಿಯಾದುದೆಂದು ಸಂತೋಷಯುಕ್ತನಾಗಿ ಪುರೋಹಿತರಂ ಕರೆಯಿಸಿ ಜಾತಕಮಂ ಬರೆಯಿಸಿ ಪುತ್ರೋ ತ್ಸವಮಂ ಗೈದು ಸಕಲ ದಾನ ಧರ್ಮಂಗಳಂ ಮಾಡಿ ಭೂಸುರರಂ ತೃಪ್ತಿಗೊಳಿಸಿ ಪ್ರಜೆಗಳಂ ಬಹುಮಾನಿಸಿ ಸಮಸ್ತ ಬಂಧುಜನರನ್ನೂ ಇಷ್ಟ ಮಿತ್ರರನ್ನೂ ಕರೆ ಯಿಸಿ ನಾಮಕರಣೋತ್ಸವಮಂ ಮಾಡಿ ಪುತ್ರನಿಗೆ ನಾಗರಾಜನೆಂದು ನಾಮವ ನ್ನಿಟ್ಟು ಸಕಲ ಸನ್ಮಾನಗಳಂ ಮಾಡಿ ಸಮಸ್ತ ಬಂಧುಗಳಂ ಕಳುಹಿ ನೆರದಿರ್ದ ನಿಖಿ ಲ ಯಾಚಕ ವರ್ಗಮಂ ಧನವಸನ ಭೋಜನಾದಿಗಳಿಂ ಧಣಿಸಿ, ಆ ಶಿಶುವಿನ ಬಾಲ ಕ್ರೀಡೆಗಳಂ ನೋಡಿ ಸಂತೋಷಿಸುತ್ತಾ, ಪ್ರಜಾರಂಜಕನಾಗಿ ಧರ್ಮೈಕಪರನಾಗಿ ಬಾಳುತ್ತಿರ್ದಂ. ದಿನೇದಿನೇ ಶುಕ್ಲಪಕ್ಷದ ಅಮ್ಮುತ್ತರಾಂಶುವಿನಂತೆ ಬೆಳೆಯುತ್ತಿರುವ ಶಿಶುವಿಗೆ ಕಾಲಕಾಲಕ್ಕೆ ಯುಕ್ತವಾದ, ಚೌಲಾನ್ನಪ್ರಾಶನಾದಿ ಕರ್ಮಂಗಳಂ ಮಾಡು ತ್ತಾ ಉಪನಯನಮಂ ಮಾಡಿ ವೇದಶಾಸ್ತ್ರಗಳಂ ಧನುರ್ವಿದ್ಯಾದಿಗಳನ್ನು ಗಾನವಾದ್ಯ ವಿದ್ಯಾ ಕೌಶಲ್ಯಮಂ ಶಿಲ್ಪಕಾರ್ಯ ಪ್ರವೀಣ್ಯತೆಯೇ ಮೊದಲಾ ದವುಗಳಲ್ಲಿ, ಬಹು ಬುದ್ಧಿಶಾಲಿಯನ್ನಾಗಿ ಮಾಡಿಸಿ ಪರಿಕಿಸಿ ನೋಡುತ್ತಾ ಸಂತೋ ಷಮಂ ತಾಳುತ್ತಿರಲು, ಹದಿನಾರು ವರುಷಗಳು ತುಂಬುವದರೊಳಗಾಗಿ ಆ ನಾಗ ರಾಜನು ಸಕಲಕಲಾ ಪ್ರವೀಣನಾಗಲು, ಜಯಸೇನರಾಯನು ಪತ್ನಿಯೊಡಗೂಡಿ ಕುಳಿತು ಪುತ್ರನಂ ನೋಡಿ ಈ ಸುಕುಮಾರನಾದರೋ ವ್ಯಾಪ್ತ ವಯಸ್ಕನಾದನು. ರೂಪ ಲಾವಣ್ಯಾದಿಗಳಿಂದ ಮದನನಂ ಜಯಿಂತನಂ ತಿರಸ್ಕರಿಸುತ್ತಿರುವನು. ಈ ಮುದ್ದು ಕುಮಾರಕನಿಗನುರೂಪವಾದ ಕನ್ಯಾರತ್ನಮಂ ಪರಮೇಷ್ಠಿಯು ಅವೆಡೆ ಸೃಜಿಸಿರುವನೋ ಕಾಣದು ಎಂದು ಯೋಚಿಸಿ, ಪ್ರಧಾನಮಂತ್ರಿಯಂ ಕರೆದು, ಭಾವಚಿತ್ರಲೇಖನ ಕುಶಲನಾದ ಲೇಖಕನಂ ಕರೆಯಿಸೆಂದಾಜ್ಞಾಪಿಸಲು, ತಕ್ಷ ಚಿತ್ರ ಗಾರನಂ ಕರಸಿ, ರಾಜಾಜ್ಞಾನುಸಾರವಾಗಿ ಯುವರಾಜನಾದ ನಾಗರಾಜನ ಭಾವ ಚಿತ್ರಂಗಳಂ ಬರೆಯಿಸಲು, ಅವುಗಳಂ ಮಂತ್ರಿಯಕ್ಕೈಯೊಳಿತ್ತು, ಅಯ್ಯಾ ಮಂತ್ರಿಶೇ ಖರನೇ ! ನನ್ನ ಸುಕುಮಾರನ ರೂಪ ಸೌಜನ್ಯಕ್ಕನುಕೂಲೆಯಾದ ಕನ್ಯಾರತ್ನಮಂ

ಪ್ಪನ್ನಾರು ದೇಶಂಗಳಂ ಹುಡುಕಿ ತರಬೇಕೇ ಹೊರತು ಸಾಮಾನ್ಯಳಂ ತರಬಾರದೆಂದೊರೆದು, ಸಹಾಯಾರ್ಥವಾಗಿ ಬೇಕಾದ ಸಕಲ ಸಂಭಾರಾದಿಗಳಂ ಜೊತೆಗೊಳಿಸಿ ಕೊಟ್ಟು ಕಳುಹಿಸಿದಂ.

ಅತ್ತಲಾ ಸೋಮವತೀ ಪಟ್ಟಣದ ಸೋಮಶೇಖರರಾಯನು ತನ್ನ ಸುಕುಮಾರಿಯು ಪ್ರಾಪ್ತ ವಯಸ್ಕಳಾಗಿಹುದಂ ಕಂಡು, ಇವಳಿಗೆ ಅನುರೂಪನಾದ ವರನೆಲ್ಲಿರುವನೋ, ವಿನುವಮಾಡಲೆಂದು ಯೋಚಿಸುತ್ತಾ ಚಿತ್ರಗಾರರಂ ಕರೆಯಿಸಿ ತನ್ನ ಮಗಳ ಚಿತ್ರಮಂ ಬರೆಯಲು ಆಜ್ಞಾಪಿಸಲವರು ಆ ಸರ್ವೋತ್ತಮ ಸುಂದರಿಯ ರೂಪದಂತೆ ಚಿತ್ರಮಂ ಬರೆಯಲಾರದೆ, ಬಹುಕಾಲಂ ಶ್ರಮಪಟ್ಟು ತನ್ನಿಂದಾಗದೆ ಹೋಗಲು, ಅದಂ ಕಂಡಾರಾಯಂ ಪ್ರತ್ಯೇಕ ಒಹು ಸಮರ್ಥರಾದವರಂ ಕರೆಯಿಸಿ ಅವರಿಂದ ಸ್ವಲ್ಪ ಹೆಚ್ಚು ಕಡಿಮೆ ಬರೆದ ಭಾವಚಿತ್ರಂಗಳಂ ಕೊಂಡು ಮಂತ್ರಿಯ ಕೈಯೊಳಿತ್ತು ಯುಕ್ತ ಪರಿವಾರ ಸಾಮಗ್ರಿಗಳಂ ಅಣಿಗೊಳಿಸಿದ್ದು, ಎಲೈ ಮಂತ್ರಿ ಶೇಖರನೇ ! ಭೂಮಂಡಲದೊಳಗೆಲ್ಲಾ ಹುಡುಕಿ, ನನ್ನ ಸುಕುಮಾರಿಯಾದ ನಂದಿನಿಗೆ ಅನುರೂಪನಾದ ಪತಿಯನ್ನು ತರಬೇಕೆಂದು ಹೇಳಕಳುಹಿಸಲಾ ಮಂತ್ರಿಯುದೇಶ ದೇಶಂಗಳಂ ಸಾರಿ ಅಲ್ಲಿ ರಾಜಾಶ್ರಿತರನ್ನೆಲ್ಲರಂ ನೋಡಿ ನೋಡಿ, ಮನವೊಪ್ಪದೆ ಹೊರಟು ಮುಂದರಿಯುತ್ತಾ ಎಲ್ಲೆಲ್ಲಿಯೂ ತಕ್ಕವರು ದೊರೆಯದೇ ಹೋದುದರಿಂದ ಬರುತ್ತಾ ದಾರಿಯೊಳು ಚಂದ್ರಭಾಗಾನದಿಯಂ ಕಂಡು ಅಬಳ ರಮ್ಯವಾದ ತೀರದೆಡೆಯೊಳು ತಂಗಿ, ಪಟಗೃಹಮಂ ಕಲ್ಪಿಸಿಕೊಂಡು ಸ್ನಾನ ಸಂಧ್ಯಾದಿಗಳಂ ಮಾಡಿಕೊಂಡು ವಿಶ್ರಾಂತಿಯುಂ ತಾಳುತಿರ್ದಂ. ವಿಜಯಸೇನಮಹಾರಾಯನ ಮಂತ್ರಿಯೂ ಭಾವ ಚಿತ್ರಂಗಳಂ ಕೊಂಡು ಅನೇಕ ವಿಷಯುಂಗಳಂ ತಿರುಗಿ ಅನುರೂಪನಾದ ವರನು ದೊರೆಯದೆ ಕಳವಳಿಸುತ್ತಾ ಬಂದು ಇವೇ ಚಂದ್ರಭಾಗಾನದಿಯ ಮತ್ತೊಂದು ಪಡಪ ತೀರದೊಳಿದು ಭೋಜನಾದಿಗಳಂ ಮಾಡಿಕೊಂಡು ವಿಶ್ರಾಂತನಾಗಿರುತ್ತಾ ಇರುವಲ್ಲಿ ಈ ಉಭಯಮಂತ್ರಿಗಳ ಕಡೆಯ ಜನಗಳಿಂದಿರ್ವರೂ ಒಂದೆಡೆ ಕಲೆತು ಪರಸ್ಪರ ಯೋಗಕ್ಷೇಮ ಸರಸಾಲಾಪಗಳಂ ಮಾಡುತ್ತಿರಲಿರ್ವರೂ, ಒಂದೇ ಕಾರ್ಯಕ್ಕಾಗಿ ಬಂದಿರುವದರಿಂದ ತಮ್ಮ ತಮ್ಮೊಡೆಯೊಳ್ದ ಭಾವ ಚಿತ್ರಂಗಳಂ ತೆಗೆದು ಒಂದೆಡೆಯೊಳಿರಿಸಿ ನೋಡುವಲ್ಲಿ ರತಿ ಮನ್ಮಥರಂತೆಯೂ ಶಚೀ ದೇವೇಂದ್ರರಂತೆಯೂ, ಲಕ್ಷ್ಮೀ ಕಮಲಾಕ್ಷರಂತೆಯೂ, ವಾರ್ವತೀ ಚಂದ್ರಶೇಖರರಂತೆಯೂ, ರಾರಾಜಿಸುತ್ತಿರುವದಂ ಕಂಡು ಪರಮಾನಂದಾಶ್ಚರ್ಯ ಸಾಗರ ಮಗ್ನರಾಗಿ, ಅಹಾ ! ಲೋಕದಲ್ಲಿ ತಕ್ಕಾದವರಿಗೆ ಅಪ್ಪಂತಾವರಂ ಲೋಕೇಶನು, ಸೃಷ್ಟಿಸಿಯೇ ಇರುವನು. ಕಾಲಕ್ಕೆ ತಕ್ಕಂತೆ ಜೊತೆಗೂಡಿಸುವವನಲ್ಲದೆ ಬೇರೊಂದಿಲ್ಲ. ಇದಕ್ಕಾಗಿ ನಾವು ಬೇಚಾಡಿದ್ದೆಲ್ಲಾ ಪ್ರಯೋಜನಕಾರಿಯಾಗಲಿಲ್ಲವೆಂದು ತಿಳಿದು ನಂಕೋಷಿಸುತ್ತಾ ಜ್ಯೋತಿಷ್ಕರಂ ಕರೆಯಿಸಿ ಇರ್ವರ ಜಾತಕಂಗಳಂ ನೋ

ಡಿಸಿ ದಾಂಪತ್ಯಾನುಕೂಲಂ ಕಾಣಬರಲು ಭಾವಚಿತ್ರಂಗಳಂ ಬದಲಾಯಿಸಿಕೊಂಡು ಲಗ್ನಪತ್ರಿಕಾ ನಿರೀಕ್ಷಣೆಯೊಳು ಇರಬೇಕೆಂದೊರೆದು, ಮಂತ್ರಿಗಳಿರ್ವರೂ ತಮ್ಮ ರಾಜಧಾನಿಗಳಂ ಸಾರಿ, ತಮ್ಮ ಧಿಪತಿಗಳಂ ಕಂಡು ಕಾರ್ಯಸಿದ್ಧಿಯಂ ಪೇಳಲು ; ನೋಡಿ ಸಂತೋಷಸಾಂತರಾದಾ ರಾಜಮಣಿಗಳು ವಿವಾಹಕಾರ್ಯಕ್ಕನುಕೂಲಂಗಳಾದ ಪ್ರಯತ್ನಂಗಳಂ ಮಾಡಿಸುತ್ತಿರ್ದರ್.

ಇತ್ತಲಾ ಹೆಣ್ಣಿನ ತಂದೆಯಾದ ಸೋಮಶೇಖರರಾಯನು ಮಂತ್ರಿಯಂ ಬರಿಸಿ, ಲಗ್ನಪತ್ರಮಂ ಬರೆದು ವಿಜಯಸೇನರಾಯನಿಗೆ ಕಳುಹಿಸುವಂತೆಯೂ ಸರ್ವೋತ್ಸವಾಗಿ ಬಹು ಸುಂದರವಾಗಿ ವಿವಾಹ ಮಂಟಪಮಂ ಅಣಿಗೊಳಿಸಬೇಕೆಂದೂ ದೇವಾಲಯಂಗಳಂ ಸಿಂಗರಿಸಿ, ಬುತ್ಸವಾದಿಗಳಂ ನಡಿಸುತ್ತಿರುವ ದಂತಲೂ ಪ್ರೊಳಲನ್ನಲಂಕರಿಸಿ ಸಮಸ್ತ ಶಸ್ತ್ರವಸ್ತ್ರ ಜಾಲಂಗಳಂ ಸಿದ್ಧಪಡಿಸಬೇಕೆಂದೂ ಅಜ್ಞಾಪಿಸಲು ಸಾವಿಸಾ ಕಾರ್ಯಧುರನಾದ ಮಂತ್ರಿಯು ಲಗ್ನಪತ್ರಿಕೆಯಂ ತಕ್ಕ ಜನರೊಂದಿಗೆ ಕಳುಹಿಸಿಕೊಟ್ಟು ನಿಕ್ಕಾದ ರಾಜಾಜ್ಞೆಯನ್ನೆಲ್ಲವುಂ ಅತ್ಯಾದರದೊಳು ಮಾಡಿಸಿ ಜಯಸೇನರಾಯನ ಬರುವಿಕೆಯನ್ನೆರೀಕ್ಷಿಸುತಿರ್ದರ್.

ಲಗ್ನಪತ್ರಿಕೆಯಂ ಕೊಂಡೊಯಿದಾ ರಾಜಸೇವಕಂ ಜಯಸೇನಮಹಾರಾಜನ ಬಳಿಯಂ ಸಾರುವ ಕಾಲಕ್ಕೆ, ಮಂತ್ರಿ ಸೇನಾಪತಿ ದಂಡನಾಯಕ ಸಾಮಂತ ಪ್ರಮುಖರೊಡನೆ ಕೂಡಿ, ಸಕಲ ಪರಿವಾರ ಪರಿವೃತನಾಗಿ ಒಡ್ಡೋಲಗವಾಗಿ ಕುಳಿತು ನಂದನನ ವಿವಾಹ ವಿಷಯಕವಾಗಿ ವಾತನಾಡುತ್ತ ವಿನೋದವಾಗಿ ಕುಳಿತಿರುವ ಆ ಜಯಸೇನರಾಯನ ದ್ವಾರಪಾಲಂ ಬಂದು ಸ್ವಾಮಿ, ಮಹಾರಾಜಾಧಿರಾಜನೇ ! ಸೋಮಶೇಖರ ಮಹಾರಾಜರ ಪ್ರೇರಿತನಾದ ದೂತಂ ಬಂದು ದ್ವಾರಸ್ಥನಾಗಿ ನಿಂದಿರುತನಿವಂ ಬಯಸುತ್ತಿರುವನೆಂದು ವಿಜ್ಞಾಪಿಸೆ, ರಾಯಂ ಸುಮ್ಮಾನಮಂ ತಾಳ್ದು ಆ ರಾಜಸೇವಕನಂ ಭರದೊಳು ಒಳಹೊಗಿಸಿಕೊಂಡು ಮರ್ಯ್ಯದೆಯೊಳಾ ದೂತನಂ ಮನ್ನಿಸಿ ಆತನಿಂದೀಯ್ಯಲ್ಪಟ್ಟ ಲಗ್ನಪತ್ರಿಕೆಯಂ ನೋಡಿ ಸಂತೋಷಿಸುತ್ತಾ ಮಂತ್ರಿಯಕ್ಕೈಯ್ಯೊಳಿತ್ತು ವಾಚಿಸೆನಲು ಆದರೊಳು ಬರೆದಿರುವ ಒಕ್ಕಣೆಯುಂ ಕೇಳಿ ಶುಭಪ್ರದಮಾದಾವಾರ್ತಾಶ್ರವಣ ಸಂಜಾತ ಸಂತೋಷಭರಿತನಾಗಿ, ಆ ಲಗ್ನಪತ್ರಿಕೆಗೆ ಉತ್ತರವಂ ಬರೆಯಿಸಿ, ಆ ಸೇವಕನ ಕೈಗಿತ್ತು, ಅವನಂ ಉಡಿಗೆ ತೊಡಿಗೆಗಳಂ ಬಹುಮಾನಮುಂ ಮಾಡಿ ಕಳುಹಿಸಿಕೊಟ್ಟು, ತನ್ನ ಮಿತ್ರಬಂಧುವರ್ಗನಾದಿಯಾದವರಿಗೆಲ್ಲರ್ಗೆ ಈ ಯುದಂತಮುಂ ತಿಳುಸಿ ಅವರೆಲ್ಲರಂ ಬರಮಾಡಿಕೊಂಡು, ಸಕಲ ಸಂಭಾರಂಗಳನ್ನೇರಿಸಿ, ಅಮೂಲ್ಯ ದುಕೂಲಾದಿ ವಿವ್ವವಸ್ತ್ರಾದಿಗಳಂ, ಸುರತ್ನ ಚಿತ್ರಿತ ಹೇಮಮಯ ಸರ್ವೋತ್ತಮಾಭರಣ ಜಾಲಂಗಳನ್ನು ಕೋಶಾಗಾರದಿಂ ತೆಗಿಸಿ, ಹೇರುಗಳಂ ಕಲ್ಪಿಸಿಕೊಂಡು ಮಂತ್ರಿ ಸೇನಾಪತಿ ದಂಡನಾಯಕರೇ ಮೊದಲಾದ, ರಾಜಕಾರ್ಯ ಧುರಂಧರರನ್ನು ಪುರಜನ ಪೌರಜನ ಪ್ರಮುಖರನ್ನು ಹಸ್ತ್ಯಶ್ವ ರಥ


ಪದಾತಿಗಳನ್ನು ಸಮಸ್ತ ವಾದ್ಯ ಕುಶಲಕಾರ್ಯ ಕೋವಿದರನ್ನು, ವಾರಸುಂದರಿಯು ರನ್ನು ಅವರವರ ಮಿತಪರಿವಾರದೊಂದಿಗೆ ಕೂಡಿಸಿಕೊಂಡು, ತಾನು ಪುತ್ರಕಳತ್ರ ಸಮೇತನಾಗಿ ದಿವ್ಯ ರಥಾರೂಢನಾಗಿ, ಪುರವನ್ನೆಗಲಿ ಸೋಮಶೇಖರರಾಯನ ಪುರಾ ಭಿಮುಖನಾಗಿ ಬರುತ್ತಾ ಮಾರ್ಗದೊಳು ನಾಲ್ಕಾರು ದಿನಗಳಿಂ ತೊರದು ಕಾಂಭೋ ಜದೇಶಾಂಗನಾ ಮುಖಾರವಿಂದದಂತೆ ಪರಮ ಸುಂದರವಾದ, ಸೋಮವತೀಪ ರ್ಣದ ಪುರೋದ್ಯಾನದ ಬಳಿಗೈದಿ ಇದಂ ಪ್ರವೇಶಿಸಲು ಇದಂ ತಿಳಿದ ಚಾರರಾಕ್ಷಣ ದೊಳ್ಪಿತಂದು ಬೀಗರ ಬರುವಿಕೆಯುಂ ಬಂಗುಸುತಿರ್ದ ರಾಜಾಗ್ರಣಿಯೊಳುಸುರಲಾ ತಿರೆ ಯುಟೆಯುಂ ಉಲ್ಲಾಸಮುಂ ತಾಳ್ದು ಶಸ್ತ್ರ ಸಮಸ್ತ ಸೇನಾ ಸಮಾವೃತನಾಗಿಯೂ ಮಂತ್ರಿ ಪುರೋಹಿತ ಪುರಜನ ಪೌರಜನ ಸಾಮಂತ ಪರಿವೃತನಾಗಿಯೂ ವಂದಿ ಮಾಗಧ ವಾರಸುಂದರೀ ಸಂದೋಹ ವಿವಿಧವಾದ್ಯ ಕಲಶಜನ ಪರಿವೇಷ್ಟಿತ, ಪುರಂಧ್ರೀ ಬೃಂದ ಕರಗತ ಮಂಗಳವಸ್ತು ಪ್ರಕರಪೂರಿತಪಾತ್ರಜಾಲ ಸಂಪೂರ್ಣವಾಗಿಯೂ ಸಮಸ್ತ ಬಿರುದುಗಳಂ ಧರಿಸಿ ಪೊಳಲಂ ಹೊರಟು ಪರವೋಲ್ಲಾಸ ತುಂದಿಲ ಸ್ವಾಂತನಾಗಿ ಬರುತ್ತಾ ತನ್ನ ಉದ್ಯಾನವನದೊಳಿರುವ ಬೀಗನಾದ ಜಯಸೇನ ಮಹಾರಾಯನಂ ಕಂಡು ತಕ್ಕ ಮರ್ಯಾದೆಗಳಂ ಮಾಡಿ ತಾನೂ, ಆತನಿಂ ಪ್ರತಿ ಯಾಗಿ ಮರ್ಯಾದೆಗಳು ಹೊಂದಿದವನಾಗಿ ಅಲ್ಲಿಂದವರೆಲ್ಲರಂ ದಿವ್ಯರಥಾರೋಹಣ ಮಂಗೈಸಿ, ಅಳಿಯನು ರತ್ನ ಪಲ್ಲಕ್ಕಿಯೊಳ್ಕೇರಿಸಿಕೊಂಡು ಸಮಸ್ತ ಬಿರುದುಗಳಂ ಹಿಡಿಸಿ ಸಕಲ ಶ್ರುತಿಕರ ದಿವ್ಯವಾದ ಗಾನ ನಾಟ್ಯಾದಿಗಳಂ ಮಾಡಿಸುತ್ತಾ ಅತ್ಯಂತೋ ತ್ಸವದೊಳು ಪುರಪ್ರವೇಶಮಂ ಮಾಡಿಸೆ ಸಕಲ ಪುರಂಧ್ರಿಯರಾರತಿಗಳಂ ಬೆಳಿಯಿ ಸುತ್ತಾ ಪುಷ್ಪಲಾಜಾಕ್ಷತೆಗಳನ್ನೆರಚುತ್ತಾ ಮಂಗಳಂಗಳಂ ಶುಭವಾಗೆ ಪಾಡುತ್ತಾ ಬರೆ ನೋಡುತ್ತಾ ಕೇಳುತ್ತಾ ಅಳಿಯನನ್ನು ಬಾರಿಬಾರಿಗೂ ನೆರುಕೆಸುತ್ತಾ ಉಕ್ಕು ತ್ತಾ ತನ್ನ ಮಂದಿರದಬಳಿಗೈದಿ, ಬೀಗರಿಗಾಗಿ ಮಾಡಿಸಿದ್ದ ದಿವ್ಯ ಭವನದೊಳಿವರ ನ್ನಿಳುಹಿಸತಕ್ಕ ಪರಿವಾರದವರನ್ನೇಮಿಸಿ ತಾನೂ ತನ್ನ ಮಂದಿರಮಂ ಸಾರಿ ಇಷ್ಟ ಮಿತ್ರ ಬಾಂಧವರೊಂದಿಗೆ ಸುಖಿಸುತಿರ್ದಂ. ಮರುದಿನ ದುದಯದೊಳಾರಾಯಂ ಸಕಲ ಸಂಭಾರ ಸಮಸ್ತ ಪರಿಜನಗಳಾದಿಯಾಗಿ ಹೊರಟು ಮಹದುತ್ಸವದೊಳು ವರನಂ ಎದುರ್ಗೊಂಡು ಕರೆತಂದು ದಿವ್ಯರತ್ನ ಖಚಿತವಾದಾಸನದೊಳು ಕುಳ್ಳಿರಿಸಿ, ಈತನೇ ಪರಮೇಶನೆಂದು ಭಾವಿಸಿ ವಿಧ್ಯುಕ್ತವಾಗಿ ಸಕಲೋಪಚಾರಗಳಂ ಮಾಡಿಸಿ ಗೌರೀಪೂಜಾ ಸಮಾಸಕ್ತಳಾಗಿದ್ದ, ತನ್ನ ಸುಕುಮಾರಿಯಂ ಕರೆತಂದು ಮುತ್ತೊಂದು ಭದ್ರಾಸನದೊಳು ನಿಲ್ಲಿಸಿ ಅಕೆಯಂ ಪಾರ್ವತೀದೇವಿಯಂತೆ ಭಾವಿಸಿ ಶಸ್ತರತ್ನಖಚಿತ ವಾದ ಭೂಷಣಂಗಳಿಂದಲೂ ದಿವ್ಯ ದುಕೂಲ ಗಂಧ ಪುಷ್ಪಾಕ್ಷತೆಗಳಿಂದಲೂ ಅಲಂ ಕರಿಸಿ ಸಹಿರಣ್ಯೋದಕ ದಾನಧಾರಾಪೂರ್ವಕವಾಗಿ ಆ ಕನ್ಯೆಯ ಕೈಯಂ ಆ ವರನ ಕರತಲದೊಳು ಸಲ್ಲಗ್ನದೊಳು ಪರಮೇಶ್ವರಾರ್ಪಣವಾಗಲೆಂದು ದಾನಮಂ ಮಾಡಿ

ತದಂಗಾನುಸಾರವಾಗಿ ಗೋಭೂವ್ಯಾದಿ ದಾನಂಗಳಂ ಮಾಡಿ ಅಗ್ನಿಸಾಕ್ಷಿಕವಾಗಿ ಪಾಣಿಪೀಡನ, ಲಾಜಾ ಹೋಮ ಸಪ್ತಪದ್ಯಾದಿ ಕಾರ್ಯಂಗಳಂ ಮಾಡಿಸಿ, ಅವೀತಿಹೋತ್ರನಲ್ಲಿ ಶಾಸ್ತ್ರೋಕ್ತವಾಗಿ, ಹೋಮಂಗಳಂ ಮಾಡಿಸಿ, ನೆರೆದಿರ್ದ ಭೂದೇವಕ್ಕಳಿಂ ಧನರತ್ನವಸನ ಮೃಷ್ಟಾನ್ನ ಭೋಜನಾದಿಗಳಿಂ ದಣಿಸಿ ಬಂದ ಮಿತ್ರ ಸಾಮಂತರಾದಿಗಳಂ ತಾರತಮ್ಯಂಗಳಿನ್ನರಿತು ರತ್ನ ಭೂಷಣಂಗಳಿಂದಲೂ ವಿವಿಧ ವಸ್ತ್ರಂಗಳಿಂದಲೂ ಬಹುಮಾನಿಸಿ ಯಾಚಕ ಬೃಂದವನ್ನೂ ಪೌರಜನರನ್ನೂ, ತತ್ತದರ್ಹತಾನುಸಾರವಾಗಿ ಬಹುಮಾನಿಸಿ, ಭಕ್ಷ್ಯಭೋಜ್ಯನ್ನಂಗಳಿಂದ ತೃಪ್ತಿಗೊಳಿಸಿ, ಈ ತೆರದೊಳು ಪರಮೋತ್ಸಾಹ ಸಂಭ್ರತನಾಗಿ ಪ್ರಸ್ತಮಂ ಜೇಯಿಸಿ. ವಿವಾಹ ಪಂಚಮ ದಿನದೊಳು ತ್ರಯಸ್ತ್ರಿಂಶತ್ಕೋಟಿ ದೇವತಾ ಪ್ರೀತ್ಯರ್ಥವಾಗಿ ನಾಕಬಲಿ ಉತ್ಸವವುಂ ಮಾಡಿಸಿ, ಯಾ ರಾತ್ರಿಯೊಳು ಪರಮ ಸಂಭ್ರಮದಿಂದ ಪುರದೊಳು ಮೆರವಣಿಗೆಯುಂ ಮಾಡಿಸಿ, ಅನಂತರದೊಳು ಕುಲಪದ್ಧತಿಯಂತೆ ಇಷ್ಟ ದೇವತಾರಾಧನಾರ್ಥವಾಗಿ ರನ್ನದ ಅಂಜಳಿದೊಳಾ ಮಾಡವಕ್ಕಳಿಗರಂ ಕುಳ್ಳಿರಿಸಿಕೊಂಡು ಪೂಜಾರ್ಹಂಗಳಾದ ಸಮಸ್ತ ಪ್ರಶಸ್ತವಸ್ತುಗಳೊಂದಿಗೆ ಗಂಧಶ್ರಷ್ಟ್ಯಕ್ಷತಾದಿಗಳನ್ನಿಗೊಳಿಸಿಕೊಂಡು ಹೊರಟು ಉತ್ಸವದೊಡನೆ ದೇವಾಲಯದ ನಿಕಟಕ್ಕೆ ಬಂದಿ ಪಲ್ಲಕ್ಕಿಯನಿಳಿಸಿ ವಧೂವರರಂ ಸ್ವಾಮಿ ಸನ್ನಿಧಿಗೈದಿಸುವದರೊಳಗಾಗಿಯೇ ಪ್ರತಿದಿನವಾ ವಿಭುಮೌಳಿಯ ಗಂಧರ್ವನಕ್ಕಾಗಿಯೂ ಪ್ರತಿಶುಕ್ರವಾರಂಗಳಿವಾರಗಳಲ್ಲಿ ಪೂಜಾರ್ಥವಾಗಿಯೂ ಬರುತ್ತಲಿರ್ಪ ಗಂಧರ್ವ ಸುಂದರಿಯುವೀಣಾಮಂಡಿಯುಂ ಆ ಶುಕ್ರವಾರದ ದಿನವೂ ಬಂದು ತಮ್ಮ ಕಾರ್ಯವನಾಗಗೊಳಿಸಿ ಹೊರಟು ಬರುತ್ತಾ ಮುಂಗಡೆಯೊಳು ಕಾಣುತ್ತಿರುವೀ ರಾಜಕುಮಾರನಂ ನೋಡಿ ಆಹಾ! ಈ ನವಮೋಹನಾಂಗನಾರೀ ಸುಂದರ ಪುರುಷನಾರು? ಮನ್ಮಥನಂ ಜಯಂತನಂ ಅಶ್ವಿನೀದೇವತೆಗಳಂ ಪಳಿಯುತ್ತಿರುವಂ, ನಮ್ಮಲೋಕದೊಳೆಲ್ಲ ತಡಕಿದರೂ ಇಂತಿರುವಂ ಕಾಣೆನು ಈತಂ ದೇವಯೋನಿ ಸಂಭೂತನಲ್ಲದೊಡೆ ಈ ಸೊಬಗೆತ್ತಣದು ಸರ್ವಥಾ ಮನುಜನಲ್ಲಂ. ಈ ಲಾವಣ್ಯದ ಗಣಿಯಂ ಹೊಂದಿದಲ್ಲದೊಡೆ ಆ ಕ್ರೂರಮಾರನಂ ಜಯಿಸುವದೆಂತು? ಈ ತರುಣೀಜನ್ಮವಂ ಧನ್ಯವಾಗಿಸುವ ಬಗೆಯುಂ ಕಾಣಲಾಗದು ಎಂದು ಯೋಚಿಸಿ ಸಮ್ಮೋಹನಮಂತ್ರ ಪ್ರಯೋಗದಿಂ ಈ ರಾಜಪರಿವಾರಮೆಲ್ಲವಂ ಭ್ರಾಂತಿಗೊಳಿಸಿ ಆ ಸುಂದರಾಕಾರನಾದ ವರನ ಬಳಿಗೈದಿ ಅಭಿಮಂತ್ರಿಸಲಾ ನಾಗರಾಜಂ ಶುಕರೂಪನಾಗಿ ಕೈಮೇಲೆ ಕುಳ್ಳಿರಿಸಿಕೊಂಡು ಗಂಧರ್ವಲೋಕಕ್ಕಾಗಿ ತೆರಳಿಹೋದರು.

ಅನಂತರದೊಳಾ ಸೋಮಶೇಖರಾದಿ ನಿಖಿಲಜನ ಸಮೂಹವು, ಸ್ವಲ್ಪಸಮಯಾನಂತರ ಪ್ರಜ್ಞಾಮಾತ್ರರಾಗಿ ಆ ಬಳಿಯೊಳು ವರನಂ ಮಾತ್ರ ಕಾಣದೆ ಬೆರಗಾಗಿ ಅಲ್ಲಲ್ಲಿ ತಡಕಿ ಸಿಕ್ಕದಿರಲು ಬಹುಗಾಬರಿಯ ತಾಳ್ದವರಾಗಿ ಬೆಂಬಾಣಂಗಳಂ

ವಿಡಿದು ಸುತ್ತು ಮುತ್ತು ಅಲೆದು ಬೆಂಡಾದರೂ ವರನು ಕಂಗಳಿಗೆ ಗೋಚರಿಸದೆ ಹೋಗಲು ಹೆಣ್ಣಿನ ತಂದೆ ತಾಯಿಗಳು ಪರಮ ದುಃಖಾಕ್ರಾಂತರಾಗಿ ಮಗಳಂ ನೋಡಿನೋಡಿ, ಅಯ್ಯೋ ! ಪಾಪಿಗಳಾದ ನಾವು ಎಷ್ಟೋ ತಪವಂಗೈದು ಈ ಸರ್ವಾಂಗ ಸುಂದರಿಯಂ ಪಡೆದೆವಲ್ಲಾ ಇವಳಿಗೆ ಈ ಕಾಲಕ್ಕೇನೆ ಇಂಥಾ ದುರವ ಸ್ಥೆಯು ಪ್ರಾಪ್ತಿಸಬಹುದೆ ? ನಾವೆಸಗಿತು ಪಾಪಿಗಳು ಇಂಥಾ ಉತ್ಸವ ಭಂಗಮುಂ ಕಾಣಬೇಕಾದುದಲ್ಲಾ ಹರಹರಾ ! ನೀನೇಕೆ ನಿರ್ದಯನಾದೆ ನೀನೇಕರುಣಿಸುತ್ತ ಈ ಬಾಲಕನಿಗೆ ಈ ವಸ್ಥೆಯುಂ ತಂದೆ ಇದನ್ನೋಡಿ ನಾವೆಂತು ಜೀವಿಪ್ರದು ಮುಂದೇನು ಗತಿಯೆಂದು ದೊಪ್ಪನೆ ಭೂನಿಯೊಳು ಬಿದ್ದು ಮೂರ್ಛಾಕ್ರಾಂತ ರಾಗಿರಲು, ಅಲ್ಲಿ ನೆರದಿದ್ದವರೆಲ್ಲರು ಈ ಉತ್ಸಾಹಭಂಗವಂ ಈ ವರನು ಮಾ ಯವಾದುದಂ ಕಂಡು ಸಂಕಟಪಡುತ್ತಾ, ಮೂರ್ಛಾಕ್ರಾಂತರಾದವರಿಗೆ ಶೈತ್ಯೋ ಪಚಾರಂಗಳಂ ಮಾಡಿ ಪ್ರಜ್ಞಾಮಾತ್ರದಿಂದ ರಾಜದಂಪತಿಗಳು ಗೋಳಿಡುತ್ತಾ ದೈವವೇ ಈ ಯವಸ್ಥೆಯುಂ ತಂದೆಯಾ ಎಂದು ಹಂಬಲಿಸುತ್ತಾ ಮಗಳಂ ಕರ ದುಕೊಂಡು ಪೊಳಲಸಾರಿ ಅನ್ನೋದಕಂಗಳಂ ಬಯಸದೆ ನಿದ್ರಾಸುಖಂಗಳಂ ತೊ ರೆದು ರಾಜ್ಯಕಾರ್ಯಗಳೊಳಿನಿತಾದರೂ ಮನಂಗೊಡದೆ ಮಗಳಂ ನೋಡಿನೋಡಿ ದುಃಖಿಸುತ್ತಾ ಬಹು ಸಂಕಟಮಾಗಿ ಕಾಲವುಂ ಕಳೆಯುತ್ತಿದ್ದರು. ವರನ ತಂದೆ ತಾಯಿಗಳೂ ಇದೇ ರೀತಿಯಾಗಿ ದುಃಖಿಸುತ್ತಾ ಮರುಳು ಗೊಂಡವರಾಗಿ ವಿನೋಂ ದನರಿಯದೆ ಸಂಕಟಪಡುತಿದ್ದರು. ಎಂದು ಹೇಳಿದಾ, ಪುತ್ಥಳಿಕೆಯು ಸ್ವಾಮಿಾ! ಮಂಡಲಾಧೀಶನೆ, ಪೂರ್ವಯಾಮವಾದರೋ ಕಳೆದು ಎರಡನೆ ಯಾಮವ್ರ ತಲೆ ದೋರುವದು. ಆಜ್ಞೆಯಾದರೆ ವಿಶ್ರಾಂತಿಯಂ ಕೊಂಮುವೆನೆಂದು ಸುಮ್ಮನಾದುದು.

ಎಂಬಿಲ್ಲಿಗೆ ಸೌಂದರ್ಯಾದ್ಭುತ ರುಚಿರೀ ಚಿತ್ರ ಬೃಹತ್ಕಥಾಮಂಜರೀ ಕರ್ನಾ
ಟಕ ವಚನ ರಚನೆಯೊಳು ಲೀಲಾವತೀ ಗರ್ವಭಂಗವೆಂಬ ಎರಡನೆ
ದಿನದ ಮೊದಲನೆ ಯಾಮದ ಕಥಾ ವಿರಾಮಮಾದುದು.



ಅನಂತರದೊಳಿತಾ ವಿಕ್ರಮಾರ್ಕ ಭೂವರಂ ಮತ್ತೊಂದು ಗೊಂಬೆಯುಂಕರೆದು, ಎಲ್ಲೆ ಕನಕಪುತ್ಥಳಿಕೆಯೇ ನೀನೊಂದು ಯಾಮದವರೆಗಂ ಒಂದು ಕಥೆಯಂ ಹೇಳಿಂ ದಾಜ್ಞಾಪಿಸಲಾ, ಪುತ್ಥಳಿಕೆಯು ಸ್ವಾಮಿಾ ! ಮಾಯಾವತಿ ಎಂಬೊಂದು ಪುರಭೀ ದನಮವನೀತಲದೊಳಿರ್ದುದು. ಅಲ್ಲಿ ಒಬ್ಬ ಅರಸನು ಎಂಬುವ ಕಾಲಕ್ಕೆ ಆ ಲೀಲಾ ವತಿಯು ಪೂರ್ವಕಥೆಯಂ ಸಂಪೂರ್ತಿಯಾಗಿ ಕೇಳದೆ ಹೋದದ್ದರಿಂದ ಖಿನ್ನ ಮಾನ ಸಳಾಗಿ, ಅದಂ ಹೇಳಿಂದರೆ ತನ್ನ ಪ್ರತಿಜ್ಞಾಭಂಗವಾದಪುದು, ಕೇಳದಿರ್ದೊಡೆ ಮ ನಂ ಒಡಂಬಡದು ಏನುಮಾಡುವದೆಂದು ಚಿಂತಿಸಿ ಪ್ರತಿಜ್ಞಾ ಭಂಗವಾದರೂ ಚಿಂತೆ ಇಲ್ಲ. ಆ ರಾಜ ಕುವರಿಗೆ ಕಡೆಗೇನಾಗುವದೋ ಎಂಬುದಂ ಕೇಳಬೇಕೆಂದು ಎಲ್ಲೆ

ಪುತ್ಥಳಿಕೆಯೇ ? ಮೊದಲಿನ ಕಥೆಯಂ ಪೂರ್ತಿಮಾಡೆನೆ ಆ ಪುತ್ಥಳಿಯು ನೀನಾರು ? ನನಗಾಜ್ಞಾಪಿಸೆ. ನನ್ನ ಧಣಿಯ ಆಜ್ಞಾನುಸಾರಮಾಗಿ ಹೇಳುವೆ. ನಿನ್ನ ಇಷ್ಟಮಿದೋಡಾತನಂ ಪ್ರಾರ್ಥಿಸು, ಆ ಪ್ರಭುವಾಜ್ಞೆಯಂ ಗ್ಯೆಯ್ಯನಾನೊರವೆಂ ಎನೆ ಹಾಗಾದರಾಗಲಿ ಎಂದು ಆ ಲೀಲಾವತಿಯು, ಎಲ್ಲೆ ವಿಕ್ರಮಾರ್ಕ ಭೂಮೀಂದ್ರನೇ ! ರಾಜಪುತ್ರಿಯಾದ ನಂದಿನಿಯು ಗತಿ ವಿನಾದುದೋ ರಾಯನೆಂತು ಸುಖವಂ ಹೊಂದಿದನೋ ನಾಗರಾಜನೇನಂ ಹೊಂದಿದವನಾದನೋ; ಆ ಪರಿಯನ್ನರಿಯದೆ ನನ್ನ ಹೃದಯವು ಹಂಬಲಿಸುತ್ತಿಹುದು. ಆ ಕಥೆಯನ್ನೇ ಮುಂದು ಹೇಳಿಸಬೇಕೆಂದು ಪ್ರಾರ್ಥಿಸುವ ಲೀಲಾವತಿಯ ಮಾತುಗಳಂ ಬರೆದುಕೊಡು ಎಂದು ಹೇಳಿ ಆಕೆಯಿಂದ ದಸ್ತ್ರೈವಜಂ, ಪಡೆದು ಆ ಪುತ್ಥಳಿಕೆಯೊಳಿರ್ದ ಭೇತಾಳಂ ಗಾಜ್ಞಾಪಿಸಲಾ ಗೊಂ ಬೆಯರೂಪಮಾದ ಭೇತಾಳಂ ಮುಂದೊರೆಯಲಾರಂಭಿಸಿದಂ.

ಏನೆ ಯಾನುದಲ್ಲಿ ಚಾಮರ ಗ್ರಾಹಿಣಿಯಾನ ಪುತ್ಥಳಿಕೆಯು ಹೇಳುವ ಕಥೆ.

ಲಾಲಿಸೈ ವಿಕ್ರಮಾರ್ಕ ಭೂಮೀಂದ್ರನೇ ಆ ನಂದಿನೀ ಎಂಬ ರಮಾಮಣಿಯ ತಂದೆಯಾದ ಸೋಮಶೇಖರರಾಯನು ತಕ್ಕ ಪರಿವಾರಮಂ ಕೊಟ್ಟು ಮುಖ್ಯ ನಾಯಕರಂ ಕಳುಹಿ ದೇಶದೇಶಂಗಳಂ, ವನದುರ್ಗಗಳಂ ಹುಡುಕಿ, ಸರ್ವ ಪ್ರಯತ್ನದಿಂದಲೂ ಅಳಿಯನಂ ಹುಡುಕಿ ತರಜೇಕೆಂದು ಕಳುಹಲವರು ಅಂತೆಯೇ ಹುಡುಕಿ ಯೆಲ್ಲಿಯೂ ಕಾಣದೆ ಹಿಂತಿರುಗಿ ಬರಲದಂ ಕಂಡು ಮಿತಿಮೀರಿದ ಚಿಂತೆಯಂ ತಾಳಿ, ಪ್ರಾಯಸಮರ್ಥಳಾಗಿಯೂ ತನ್ನ ವ್ಯಥೆಯಂ ಹೇಳಿಕೊಳ್ಳಲಾರದ ಮಗಳವಸ್ಥೆಯಂ ಕಂಡು ಉರಿಯುವ ಬೆಂಕಿಯಲ್ಲಿ ತುಪ್ಪವೆರೆದಂತೆ ದುಃಖವು ಇಮ್ಮಡಿಯಾಗೆ ಸಹಿಸಲಾರದೆ ಕೊರಗುತಾ ತ್ತಾ ನರಳುತ್ತಾ ಇದ್ದಂ. ಆ ನಂದಿನಿಯಾದರೋ ಮಿತಿಮೀರಿದ ಮನ್ಮಥಾವಸ್ಥೆಯನ್ನು ತಾಳಲಾರದೇ ತನ್ನ ಸೌಂದರ್ಯಾತಿಶಯವನ್ನೂ ತನ್ನ ಗಾನವಿದ್ಯಾದಿ ಕುಶಲತೆಯನ್ನೂ ನೆನೆದು ನೆನೆದು ಬಿಸುಸುಯ್ಯುತ ತನ್ನ ಪರಿಯಂ ಅನ್ಯರೊಳು ಹೇಳಿಕೊಳಲು ನಾಚಿದವಳಾಗಿ ಎಲ್ಲೆ ಪಾವಿಯಾದ ಮನ್ಮಥನೇ ; ನಿನ್ನ ಸಕಲ ಸಾಮರ್ಥ್ಯವಂ ಅಸಹಾಯಳಾದ ನನ್ನಲ್ಲಿ ತೋರಿಸುವಿಯಾ, ಅನೇಕರಿಂದ ಬಹು ಪ್ರಕಾರವಾಗಿ ಜಯಿಸಲ್ಪಟ್ಟರೂ ನಾಶವಾಡಲ್ಪಟ್ಟರೂ ಅವುಗಳಂ ಲೆಕ್ಕಿಸದೆ ಸ್ತ್ರೀ ಸಹಾಯದಿಂದ ಬದುಕಿದರೂ ನಾಚಿಕೆಯಿಲ್ಲದೆ

ಲೋಕೈಕ ವೀರನೆಂದು ಅಹಂಕಾರಗೊಳ್ಳುತ್ತಾ ಮೆರೆಯುತ್ತೀಯೇ? ನೀನು ವೀರನೇ ಆಗಿದ್ದರೆ ಹೆಂಗೊಲೆಯಂ ಮಾಡೆ ಯತ್ನಿಸಬಹುದೇ? ಆಕಟಕಟಾ! ಈ ದುರುಳನ ಬಾಧೆಯುಂ ತಾಳಲಾರೆನಲ್ಲಾ, ಎಂದು ಹಂಬಲಿಸುತ್ತಾ, ಅಯ್ಯೋ ಸರ್ವಾಂಗಸುಂದರನಾವ ಪತಿಯೆ! ಲೋಕದೊಳಗಿನ ಸುಂದರಾಕಾರದೊಳು ನೀನೇ ಅದ್ವಿತೀಯನೆಂದು ಹಸರು ಗೊಂಡಿರ್ಪೆಯಲ್ಲಾ; ನನ್ನ ದುರ್ವ್ಯಷ್ಟವೇ ನಿನ್ನಂ ಮರೆಮಾಡಿದುದೇ? ನಿನ್ನ ಮುಖವನ್ನಾದರೂ ತೃಪ್ತಿಯಾಗಿ ನೋಡದೆ ಹೋದೆನಲ್ಲಾ ಎಂದು ಸರ್ವದಾ ರೋದಿಸುತ್ತಾ, ಆಹಾರ ಪಾನ ನಿದ್ರಾಲಂಕಾರವೇ ಮೊದಲಾದವುಗಳಂ ಬಿಟ್ಟು, ಪಗಲೂ ಇರುಳೂ ದುಃಖಿಸುತ್ತಾ ಕಾಲಮಂ ಕಳೆಯುತ್ತಿರಲು, ಅತ್ತಲೀ ಕೆಯ ಪತ್ನಿಯನ್ನೆತ್ತಿಕೊಂಡು ಹೋದ ಗಂಧರ್ವ ಸುಂದರಿಯರು ಅಂದವಾದ ತಮ್ಮ ಮಂದಿರಂಗಳಂ ಸಾರಿ, ಆ ಸುಂದರನಾದ ರಾಜಕುಮಾರನಂ ಅಭಿಮಂತ್ರಿಸಿ, ಮುನ್ನಿನವೊಲು ಪುರುಷರೂಪ ಧರನಂ ಮಾಡಿ, ಅವನ ಚಂದಮಂ ಅಂದವಾಗಿ ನೋಡಿ ಇಂದಿನನೊಳು ಹೊಂದಿ ಸುಖಿಸದೇ ಹೋದರೆ ಈ ಜನ್ಮವು ನಿರರ್ಥಕವಾದುದೆಂದು ಇತ್ಯರ್ಥಮಂ ಮಾಡಿಕೊಂಡು, ನಾಗೇರಾಜನಂ ಕುರಿತು, ಎಲ್ಫೆ ನವಮನ್ಮಥನಂತೆ ಕಂಗೊಳಿಸುವ ರಾಜಕುಮಾರನೇ! ನೀನು ಕರವಂ ಪಿಡಿದ ಅಂಗನೆಗಿಂತಲೂ ನಾವು ಸಿಂಗರವಾಗಿಲ್ಲವೆ? ನಮ್ಮ ವಿಶ್ವರಂಕೊಂಡು ನಮ್ಮೊಳು ಸೇರಿ ನಂದನೋದ್ಯಾನಾದಿ ವನವಿಹಾರಂಗಳಂ ಮಾಡುತ್ತಾ ಸುರಭುನಿಯೊಳು ಸರಸವಾಗಿ ಪರಿಪರಿಯೊಳು ವಿಹರಿಸುತ್ತಾ, ಮದಾಂಧನಾದ ಮದನನ ದರ್ಪಮಂ ನಾಚಿಕೆಗೊಳಿಸುತ ರತಿಕೇಳಿಗಳೊಳು ಸತತಂ ಅತ್ಯಾದರದೊಳು ಸಂತೋಷಿಸುತ್ತಿರಲಹುದೆಂದು ನುಡಿಯಲಾ ನಾಗರಾಜನು, ಎಲ್ಫೆ ರಮಣೀಮಣಿಗಳಿರಾ! ನಾನಾದರೋ ಮನುಷ್ಯಮಾತ್ರನು ನೀವು ದೇವಾಂಗನೆಯರು ನನಗೂ ನಿಮಗೂ ಎಲ್ಲಿಯದು ಸಂಬಂಧ, ಕೈಹಿಡಿದ ಧರ್ಮಪತ್ನಿಯಾದ ಪತಿವ್ರತಾಶಿರೋಮಣಿಯುಂ ವ್ಯಥೆಗೆಡುವಂತಾಯ್ತು, ನಿಮ್ಮ ಕೂಡಿರ್ಪಾಡುವದು. ಯುಕ್ತವಾದುದಲ್ಲವಾಗಿ ನಾನೀ ಭೂಗದೊಳು ಮನಕರನು ನದಿಲ್ಲವೆಂದು ಖಂಡಿತವಾಗೊರೆಯುತ್ತಿರುವ ನಾಗರಾಜನನ್ನು ಕುರಿತು ಆ ವಿಳಾ ನುಂಗಿಗಳೊಳೊಂದಾಗಿ, ಎಲ್ಫೆ ಮೋಹನಾಂಗಿನಿಯೇ! ನಿನ್ನಂ ನೋಡಿದಾರೆ ಸಕಲ ಕಲಾ ಕೋವಿದನಂತೆ ಕಂಗೊಳಿಸುವೆ ಅಂತಿರುವನಾದರೂ ಇಂತೇಕೆ ಕಂಥಮಾಡುವೆ? ಭೂಗತ ಳಗಳೊಳು ಜನಿಸಿದ ಮಾನವೇಂದ್ರರಾದವರೆಲ್ಲರೂ ಧರ್ಮಪರರಾಗಿಯೂ, ಸಕಲಾರ್ಥ ತತ್ವವೇತ್ತರಾಗಿಯೂ, ಇರ, ಈ ಲೋಕದೊಳು ನಮ್ಮೊಳು ಸುಖಿಸೋಸುವೇ ಮಹಾ ವಿದ್ವಾಂಸರಾ ಶಮಗಳನಾಂತು, ಮಹಾ ಯಜ್ಞಾಂಗಳಂ ಮಾಡಿದರೂ ಆಗ ಲಭಿಸದೆ ಮರುಜನ್ಮಂಗಳನಾಂತು. ತಮ್ಮ ಲೋಕದೊಳು ಈ ಸಂಭೋಗಂಗಳಂ ಹೊಂದುತಿರುವರು ಜನ್ಮಾಂತರ ಪಲಾತಿಶಯದಿಂದ ನಿಹೇತುಕವಾಗಿ ದೊರೆತ. ಈ ಸೌಖ್ಯಸುಖವಂ ತೊರೆವರೆ. ಇದೂ ಅ

ಲ್ಲದೆ ಈ ತೆರದೊಳು ತರುಣಿಯರು ಮೊರೆಯಿಡೆ, ತರುಣರಾದ ಪುರುಷರು ತೊರೆ
ವುದು ಧರ್ಮವಲ್ಲವು. ಈ ಭಾಗದೊಳೊಂದು ಕಥೆಯಂ ಪೇಳುವೆನು ಲಾಲಿಸು ;
ಶೇಷಶಾಯಿಯಾದಾ ಶಂಖ ಚಕ್ರಗದಾ ಶಾರ್ಙ್ಗ ಪೀತಾಂಬರ ಶ್ರೀವತ್ಸಾಂಕಿತನಾದ
ಲಕ್ಷ್ಮೀಪತಿಯು ಭೂಭಾರೋತ್ತಾರಣಾರ್ಥವಾಗಿ, ವಸುದೇವ ನಂದರೊಳು
ಶ್ರೀ ಕೃಷ್ಣಮೂರ್ತಿಯಾಗಿ ಯವತರಿಸಿದನೆಂಬುದಂ ಅರಿತಿರುವಿಯಷ್ಟೆ, ಆತಂ
ಗೋಪಿಕಾ ಮನೋವಲ್ಲಭನೆಂದೂ ಅರಿತಿಹುನೆ, ಹೀಗಿರುತ್ತಾ ಗೋಪಿಕಾಸುಂ
ದರಿಯರಲ್ಲಿ ಬಹುಮಂದಿ ಆ ವಾನವನೊಳು ಸೇರಿ, ಸುಖಿಸುವದಕ್ಕಾಗಿ ಆತನಂ
ಬಯಿಸಿ, ಹುಸುಕಿದರೂ ದೊರೆಯದೆ ಹೋಗಲು, ಮನ್ಮಥ ಶರಂಗಳಲ್ಲಿ ಗೋ
ಳಿಡುವರಾದರೂ ಮನ್ಮಥ ಶರಾಳಗಳಿಂದ ಬಾಧೆಯಂ ಸಹಿಸಲಾರದೆ ತಹತಹಗೊ
ಳ್ಳುತ್ತಾ, ವಿರಹೋದ್ರೇಕ ಕರರಾದ ಚಂದ್ರಾನಿಲ ಮುದನರಂ ಜರಿಯುತ್ತಾ, ಆ ಮುದ
ನನಂ ಮಾತಾಡಿಸುವದಕ್ಕೆ ಕಾಲವಿಲ್ಲವೆಂದರಿತು, ಆ ಮುದನಶಾತನಂ ಹೃದಯ
ದೊಳೆಣಿಸಿ, ಎಲ್ಲೆ ಪ್ರಾಣಕಾಂತನೇ ! ನಾನೀ ಭಾವಜನ ಕಾವಂ ತಾಳಲಾರೆವು.
ನೀನೇಪರಿಯೊಳಾದರೂ ನಮ್ಮಂ ಕರುಣಿಸಿ, ಈ ದುರುಳನಾಧೀನವಂ ತಪ್ಪಿಸಬೇ
ಕೆಂದು ಪ್ರಾರ್ಥಿಸಲಾ ದೈತ್ಯಾರಿಯು ಲೋಕೋತ್ತರ ಸುಂದರಿಯರಾದ ಸತ್ಯಭಾ
ಮಾದೇವಿಯಂ ಬಿಟ್ಟು ನಾನನ್ಯರಂ ಸೇರುವವಿಲ್ಲವೆಂದು ತಿರಸ್ಕರಿಸಿದನೇ ನೀನೊರೆಯು
ವದು ಪುರುಷಧರ್ಮವೋ ? ಅವರನ್ನೆಂತು ಸೇರಿ ಆನಂದ ಗೊಳಿಸಿದನೋ ನಮ್ಮಂ
ಹಾಗೆಯೇ ನೀನೂ ಸೇರಿ, ದುರುಳನಾದಾ ಮಾರನಂ ತಲೆವಾಗಿಸಂತೆ ಮಾಡಿ ಸುಖಿ
ಸೆಂದು ಒಗೆಬಗೆಯಿಂ ಸಮ್ಮತಗೊಳಿಸಿ, ಆತನೊಳು ಕ್ರಮವಾಗಿ ಓರೋರ್ವರಂತೆ
ರತಿ ಸುಖಾರ್ಣವ ಮಗ್ನರಾಗುತ್ತಾ ಎಂದಿನಂತೆ ಪ್ರತಿ ಶುಕ್ರ ಮಂಗಳವಾರಗಳಲ್ಲಿ
ಈಶ್ವರಾರಾಧನೆಗಾಗಿ ಭೂಲೋಕಕ್ಕೆ ಬರುತ್ತಾ ಇರುವಾಗ ಒಂದಾನೊಂದು ದಿನ
ವಾ ಗಂಧರ್ವ ಸುಂದರಿಯರು, ಈ ನಂದಿನೀ ಯಂತಃಪುರದ ಮೇಲ್ಚಾಗದೊಳು
ಬರುತ್ತಿರುವಾಗಲಾ ನಂದಿನಿಯು ಆರ್ತ ಧ್ವನಿಯು ಕೇಳಿಬಂದುದು. ಆ ವಿಳಿಯುಂ
ದಿಗಳೊಳಿರ್ವ ಜೇಟಿಯುದಂ ಕೇಳಿ ಯೆಲ್ಲರಂ ನಿಲ್ಲಿಸಿಕೊಳ್ಳಲು, ಆ ವಿರಹ ಬಾಧಾ
ರವಮೆಲ್ಲರಾಲ್ಗೆಸಿಬರು. ಅವರೊಳೊರ್ವ ಜೆಡಗಿಂಯು ಅಕಾ ? ಇವಳ ಪತಿಯುಂ
ನಾವು ಸೇರಿ ಸುಖಿಸುತ್ತಿರುವೆವು ಈಕೆ ಪತಿವ್ರತೆಯಾದದ್ದರಿಂದ ಈಪರಿತಾಪಮಾಗಿ
ದುಃಖಿಸುವಳ ಇವೆನು ಬಲ್ಲಚ್ಚರಿಯಾಗಿವೆ ಈ ಕುಳ್ಳಂತರವಿಂ ವಿರಹಾ
ಗಿ ಜಾಲಿಯು ಕಾವು ಈನರಿಗೂ ವ್ಯಾಪಿಸಿ ನಿಲ್ಲಲೀಯದು ಎಂದು ಜೆಜ್ಜರಮಾಂ
ತಳು. ಮತ್ತೊರ್ವ ಸುಂದರಿಯು ಇವಳು ಮಹಾಪತಿವ್ರತೆಯು, ಈ ವಿರಹಜಾತ
ವೇಗಂ ಜನಿಸಿ ಕೆಲಕಾಲಂ ಆದುದು. ಇದು ವ್ಯಾಯಸ್ಯೆಯಲು ಏಂ ಪ್ರಮಾದಂ
ಜನಿಯಿಸುವುದೋ ಎಂದಳು. ಮತೊರ ಮತ ಕಾಶಿನಿಯು ಹಾಗಾದರೆ ಇದು
ನಮ್ಮಂ ಅವರಿಸದೆ ಬಿಡಲಾರದು. ಪ್ರಬಲವಾಹುದಕ್ಕಿಂತಲೂ ಮೊದಲೇ ನಾ

ೇನಾವರೂ ಉಪಾಯವುಂ ಗೈಯ್ಯಬೇಕೆನೆ ಅದರೊಳಿಂವರ್ಕಳಿಕುಂತಳೆಯು ನಾ
ನಾದರೆ ಪ್ರತಿ ಶುಕ್ರವಾರ ಮಂಗಳವಾರಗಳಲ್ಲಿ ದೇವತಾ ಸೇವಾರ್ಥವಾಗಿ ಬರುವೆವ
ಪ್ಪ; ಆಗ್ಯೆ ಪ್ರಾಣಕಾಂತನಾಗಿವೀಕೆಯ ಪತಿಯಂ ಕರೆತಂದು, ಈಕೆಯೊಳು
ವಿಟ್ಟರೆ, ಆ ರಾತ್ರಿಯಾತನಂ ಸೇರಿ ಸುಖಿಸುವಳ್ ನಾವು ತೆರಳಿವಾಗ ಸಂಗಡ
ಕರದೊಯ್ವೇಣ. ಹೀಗೆ ಮಾಡುವದರಿಂದ ಈಕೆಯ ವಿರಹಬಾಧೆಯು ಶಾಂತವ
ೈ ೃದದೆ ನಮಗೇನೂ ಅಪಾಯವುಾಗಲಾರದು, ಎಂದುಸುರಲು ಎಲ್ಲರದಕ್ಕೊ
ತಂಬಟ್ಟು, ಈ ನಂದಿನಿ ಯಂತಃಪುರದೆಡೆ ಗಿಳಿದೈತರುತ್ತಿರುವನಿತರೊಳು ನಿದ್ದೆ
ಯಿಲ್ಲದೆ ತನ್ನ ಪತಿಯಂ ನೆನೆನೆನೆದು ತಾಪಮಂ ತಾಳಲಾರದೆ ತಹತಹಪಡುತ್ತಿ
ರ್ದಾನಂದಿನಿಯೂ ಇದನ್ನೆಲ್ಲಮಂ ಕೇಳಿ ತನ್ನ ಪ್ರಾಣನಾಥ ನಿವರೊಂದಿಗೇನಾದರೂ
ಏಂದಿಹನೋ ಏನೋ ಕಣ್ಣಿನಿಂದಲಾದರೂ ದೂತದಿಂ ನೋಡಿ, ಅಪ್ಪಾಯನೆವಂ
ಹೊಂದುವೆನೆಂದು ಫಳಿಲನೆ ಹೊರಗೆ ಬರಲಾ ಗಂಧರ್ವಾಂಗನೆಯರು ಮಾಕೆಯಂ
ನೋಡಿ, ಆಕೆ ಹೊಂದುತಿರುವ ಅವಸ್ಥೆಯಂ ಕಂಡು ಎಲೌ ಪತಿವ್ರತಾಶಿರೋಮ
ಣಿಯೇ ! ಇದು ಮೊದಲಾಗಿ, ನೀನಿಂತು ವ್ಯಥೆಯನ್ನಾಂತು ಕುಂದುಗೊಳಬೇಡ,
ನಾವು ಏಳುಮಂದಿಯು ಗಂಧರ್ವ ಸುಂದರಿಯರು ನಿನ್ನ ಮನಗೆಳೆಯಂ ನಮ್ಮ ಒಳ
ಗೊಳು ಪದುಳಿಂದಿರುವಂ, ನಾಳೆ ಶುಕ್ರವಾರ ಸಾಯಂಕಾಲಕ್ಕೆ ಸರಿಯಾಗಿ.
ನಾವಿಲ್ಲಿಗೆ ಆತನಂ ಕರೆತರುವೆವು. ಆ ರಾತ್ರಿ ನಿನ್ನೊಳಿರುವಂ ಆತನಂ ಸೇರಿ ಸುಖ
ಸುವಳಾಗು, ಹೀಗೆ ಪ್ರತಿ ಶುಕ್ರವಾರ ಮಂಗಳವಾರಗಳಲ್ಲಿಯೂ, ಮಾಡುವೆವು,
ನೀನೀ ಸಂದರ್ಭಮಂ ಯಾರಿಗೂ, ಎಂದಿಗೂ, ಉಸುರಲಾಗದು, ಏಂದೆನಲಾಸಂ
ನಿನಿಯು, ಆನಂದಾಂಬುಧಿ ಮಗ್ನಳಾಗಿ ತೇಲಾಡುತ್ತಾ, ಎಲ್ಲೆ ತಾಯಿಗಳಿರಾ !
ಎನ್ನ ಪತಿಯ ಮುಖಾರವಿಂದಮಂ ನಾಂ ನೋಡುವೆನೆ ಎಂದು ಬಿಕ್ಕಿ ಬಿಕ್ಕಿ,
ಮಾತಾಡುತ್ತ, ಹಾಗಾದರೆ ನೀವೇ ನನ್ನ ಭಾಗದ ಭವಾನೀದೇವಿಯರು, ಎಂದ
ವರಂ ಕೊಂಡಾಡುತ್ತಿರೆ, ಆ ಸುರತರುಣಿಯರು ಈಕೆಯ ಪೈ ೃದಪವಿ, ಸಮಾಧಾ
ನಂಗೊಳಿಸಿ, ಬೀಳ್ಕೊಟ್ಟು ತಾವು ತಮ್ಮ ಕಾರ್ಯಂ ಮಾಡಲೋಸುಗಂ ಹೊರಟು
ಬಂದು ದೇವರ ಸೇವೆಯಂ ಪೂರೈಸಿಕೊಂಡು, ತಮ್ಮ ಲೋಕವನ್ನೈ ೃದಿ, ಮಾರನೆ
ಯ ಶುಕ್ರವಾರದೊಳಾ ನಂದಿನೀ ಪತಿಯನೊಡಗೊಂದು ಬರಲಾ ಸಮಯಕ್ಕೆ
ಆ ನಂದಿನಿಯು, ಮಂಗಳ ಸ್ನಾನಮಂ ಗೈದು, ಸರ್ವಾಲಂಕಾರ ಭೂಷಿತಗಾ
ತ್ರಳಾಗಿ, ಮಹದುತ್ಸಾಹದೊಂದಿಗೆ, ಶಯ್ಯಾ ಗೃಹಮಂ ಮನೋಜ್ಞಮನಸ್ಸಂತೆ
ಸಿಂಗರಿಸಿ, ಭೋಗಾರ್ಹಂಗಳಾದ, ಗಂಧ ಪುಷ್ಪಾದಿ ನಿಖಿಲವಸ್ತುಜಾಲಂಗಳನ್ನ
ಜಿಗೊಳಿಸಿಕೊಂಡು, ಪತಿಯಾಗಮನಮಂ ನಿರೀಕ್ಷಿಸುತ್ತಾ ಚಂದ್ರಶಿಲಾಗ್ರ ಭಾಗ
ದೊಳು ನಿಂತಿರ್ಪಳ್, ಜೊತೆಯೊಳು ಕರದ್ಯೋಯ್ದಾರಾಜ ಕುಮಾರನಂ ನಂದಿನಿಯ
ಬಳಿಯನ್ನೈ ೃದಿಸಿ, ಅವರೆಲ್ಲರೂ ತೆರಳಲು, ಪತಿಯಂ ಕಾಣುತ್ತಾ ಸುಂದರೀಮ

ಣಿಯು ರಾಕಾಚಂದ್ರನಂ ಕಂಡ ಕುಮುದಿನಿಯೊಲು, ಉಬ್ಬಿದ್ದು, ಪರಮಾನಂದ ಭರಿತಳಾಗಿ, ಬಿಗಿದಾಲಿಂಗಿಸಿ, ತೊಟ್ಟಿದ್ದ ಮಣಿಕೂರ್ಪಾಸಂ ಪಡ್ವನೇ ಬಿರಿದು ಪೋಗೆ, ಬಡ್ದಿದಿಪ್ಪ ಬಲೊತ್ಕಲಿಗಳಿಂದಾ ತನುರವನೊತ್ತುತ, ಕದಪುಗಳಂ ಮುತ್ತಿಡುತ ಅಧರಮುಂ ಸವಿಯುತೆ, ಅಂತೆಯೇ ಅಂತಃಪುರವಂ ಹೊಗಿಸಿ, ಸಕಲೋಪಚಾರಂಗಳಿಂ ಮನ್ನಿಸಿ, ರತ್ನ ಖಚಿತಮಾದ ಮಂಚದ ಹಂಸತೂಲಿಕಾ ತಲ್ಪದೊಳು ಕುಳ್ಳಿರಿಸಿ, ಎಲೈ ಪ್ರಾಣಕಾಂತನೇ ; ನಿನ್ನಂ ತೊರೆದು ಬದುಕಿದಕಾಲಮಂ ಕೋಟಿಕಲ್ಪಂಗಳಂತೆ ಕಳೆದೆನು, ಇಂದೀ ನಿನ್ನ ಮುಖೇಂದು ಸಂದರ್ಶನದಿಂದ, ನನ್ನ ಪಾಪನೆಲ್ಲವೂ ಕುಂದಿತು. ಇಂದೀ ನನ್ನ ಜನ್ಮವು ಧನ್ಯಮಾದುದು, ಎಂದು ಬಾರಿಬಾರಿಗೂ ಪತಿಯಂ ಬಿಗಿದಪ್ಪುತ್ತಾ, ಮುಖಮಂ ಚುಂಬಿಸುತ್ತಾ ಬರುವ, ಸರ್ವಾಂಗ ಸುಂದರಿಯಾದ ತರುಣೀ ಮಣಿಯಂ ತಾನೂ ಬಿಗಿದಪ್ಪಿ, ಪುಳಕಿತನಾಗಿ, ಸುರನಗರಿಯೊಳಂ, ಈ ಪರಿಯ ಸುಂದರೀಮಣಿಯುಂ ಕಾಣಲಿಲ್ಲವಲ್ಲಾ, ಇಂತಿಹ ಸುಂದರಿಯುಂ ವೃಥಾ, ತೊರದಾಂ ಪಾಪಿಯಲ್ಲವೆ ಎಂದು ಯೋಚಿಸುತ್ತಾ, ಆಕೆಯೊಡಗೂಡಿ, ಸಕಲ ಭೋಗಂಗಳಂ ಹೊಂದುತ್ತಾ ರತಿ ಕೇಳೀವಿಲಾಸದೊಳು ಪರಸ್ಪರವಾಗಿ ಮೈಮರದು, ಆ ರಾತ್ರಿಯಂ ಪರಮಾನಂದದೊಳು ಕಳೆದು, ಅರುಣೋದಯಾತ್ಪೂರ್ವಮಾಗಿಯೇ ತನ್ನ ಮೋಹನಾಂಗಿಯಾದಾ ನಂದಿನಿಯಂ ಕುರಿತು ಪ್ರಾಣಕಾಂತೆಯೇ, ನಿನ್ನ ನಗಲಿದ ಮೊದಲೀವರೆಗಂ ನಾಂ ತಾಳಿದ ಬಗೆಯನ್ನೆಲ್ಲಮಂ ನಿನ್ನೊಳುಸುರಲು, ಇದು ಸಮಯಮಲ್ಲಂ ಇನ್ನೊಂದು ದಿನದೊಳೊರೆವೆಂ, ಈಗಲಾ ಗಂಧರ್ವಾಂಗನೆಯರು ಬರುವಕಾಲವಾದುದು, ನಿನ್ನಂಬಿಟ್ಟು ಹೋಗಲಾರೆನೆಂದು ಮನಂ ಕಳವಳಿಪುದು, ಈಗನಾಂ ಅವರಂ ವಂಚಿಸಿದೊಡೆ, ಮರಳಿ ನಿನ್ನಂ ನೋಡದಂತೆ ಮಾಳ್ಪರಾಗಿ ಹೋಗಿ ಬರಲನುಮತಿಯಂ ಈವುದೆಂದೊರೆಯುವ ಕಾಂತನಂ ಬಿಗಿದಪ್ಪಿ, ಪ್ರಾಣಪದಕವೇ ನಿನ್ನಿಚ್ಛಾನುಸಾರವಾಗಿರು. ಮರಳಿ ನಿನ್ನ ಮುಖೇಂದುವಂ ನೋಡುವವರೆಗಂ ಆ ಕಳವಳವಂ ಬಿಡಲಾರನೆಂದೊರೆದು ಪಾದಂಗಳೊಳು ಮಣಿದು ಬೀಳ್ಕೊಡಲಾ ನಾಗರಾಜಂ ಅಲ್ಲಂ ಪೊರಮಟ್ಟು ಹೊರಗ್ಗೆ ತರುವನಿತರೊಳಾ ಗಂಧರ್ವ ಮಂದಯಾನೆಯರೈತಂದು ಈ ಸುಂದರಾಂಗನಂ ಹಿಂದಿಗೊಂಡು, ಅಮಂದಾನಂದದೊಳ್, ತಮ್ಮ ನಿವಾಸಕ್ಕೈದಿದರು.

ಇಂತೆಯೇ ಪ್ರತಿ ಶುಕ್ರವಾರ ಮಂಗಳವಾರಂಗಳಲ್ಲಿ ಗಂಧರ್ವಾಂಗನೆಯರನೊಡಗೊಂಡು ಬಂದು ಅವರವರ ಕಾರ್ಯದೊಳು ಬಿಟ್ಟುತಾಂ ತನ್ನ ಪ್ರಾಣಕಾಂತೆಯಾದ ನಂದಿನಿಯ ಅಂತಃಪುರಮುಂ ಸಾರಿ ಅವಳೊಂದಿಗೆ, ಸೇರಿ ಸಕಲ ಸುಖಂಗಳಂ ಹೊಂದುತ್ತಾ ಸುರತಸುಖದೊಳಾನಂದಿನಿಯಂ ಆನಂದಗೊಳಿಸುತ್ತಾ, ಹೀಗೆಯೇ, ಯಾರು ಮರಿಯದಂತೆ ಬಹುಕಾಲಂ ಕಳೆಯುತ್ತಾ ಬಂದನು. ಅಶಾಶಾ

ಪರಮಂದುಃಖಂ ನಿರಾಶಾ ಪರಮಂಸುಖಂ, ಎಂಬ ನ್ಯಾಯಾನುಸಾರವಾಗಿಯೂ ಸ್ವಾರ್ಜಿತ ದ್ರವ್ಯಂ ಪರಾಧೀನವಾಗೆ ಬಡವಂ, ಅದಕ್ಕಾಗಿ ಚಿಂತಿಸುತಿರುವಾಗಳೆ ವಿಧಿಯೋಗದಿಂದಾ ದ್ರವ್ಯಂ, ಆತನಂ ಸೇರಿದಂತೆ ಆದುದೆಂದು, ಇಷ್ಟನಾತ್ರಕ್ಕಾ ನಂದಿನಿಯು ಅಮಂದಾನಂದ ತುಂದಿಲಸ್ವಾಂತಳಾಗಿ, ತನ್ನ ತಾಯಿಗಂ ಈ ಸಂದರ್ಭ ಮರಿಯದಂತೆ ಪರಮ ರಹಸ್ಯವಾಗಿ ಸುಖಿಸುತ್ತಿರುವ, ಕಾಲದೊಳು, ದೈವಯೋಗದಿಂದ ಗರ್ಭಮಂ ತಾಳ್ದಿಳೆ, ಆ ಗರ್ಭವು ದಿನೇದಿನೇ ವೃದ್ಧಿಯನ್ನೆ ಪಡುತಿರ್ಪ ಒರಲಾ ಕಾಂತೆಯು ಮುಖಂ ಬಿಳುಪೇರಿದುದು. ಜೂಜುಕಂಗಳು ನೈಲ್ಯಮುಂ ತಾಳ್ದವು ಮಧ್ಯಭಾಗವು ಸೂಕ್ಷ್ಮತೆಯುಂ ತೊರೆಯು, ಸ್ಥೂಲತೆಯುಂ ತಾಳುತ್ತಾ ಬಂದುದು. ಅಪಾಂಗದೊಳು ಜೇಸರಂ ಜನಿಸಿತಿದು. ಲಲಾಸ್ಯಮುಂ ಮೈದೋರಿತು. ಅಲಂಕಾರಂಗಳೊಳು ಮನಮೆಲ್ಲ ಜೋಲಾದುದು. ಈ ವಿಧಮಾದೀಕೆಯ ಜೇಷ್ಠೆಗಳಂ ಕಾಣುತಾಕೆಯ ಪರಿಜನಮೆಲ್ಲಂ ಶಂಕೆಗೊಂದು ಪುರುಷಲಾಭಿಣಿಯು, ಸುಳಿವೇ ಈ ಅಂತಃಪುರದೊಳಿಲ್ಲ. ಈಕೆಯ ಚಿಹ್ನೆಗಳಾದರೋ, ಗರ್ಭವತಿಯೆಂದು ತೋರುಗುಂ, ಈ ಸುದ್ದಿಯಂ ನಮ್ಮ ಮಹಾರಾಜನಾಲ್ಕಿಸಿದೊಡೇಂ ಗತಿ, ಅತನಾದರೋ, ಕ್ರೂರ ದಂಡನುಂ ವಿಧಿಸುವ ಸ್ವಭಾವಿಯು, ಇದಂ ತಿಳಿಹುವುದೆಂತು ಸುಮ್ಮನಿರುವದೆಂತೆಂದು, ಬಹುದೂರ ಯೋಚಿಸಿಯುಂ ಮಾಡಿ, ರಾಜಮಹಿಷಿಯ ಸನ್ನಿಧಿಯುಂ ಸಾರಿ ಮುಕುಳಿತ ಕರಕಂಜರಾಗಿ, ಎಲ್ಮೆ ತಾಯಿಯೇ! ನಾವೀಗ ಸನ್ನಿಧಿಯೊಳು ಪಿನ್ನೈಸಲಿಸಿ ಬಂದುದಂ ಹೇಳಲು ಭೀತರಾಗಿರುವೆವು, ಬಿನ್ನೈಸದಿರ್ದೊಡೆ, ಮನಂ ಸ್ಥಿರತೆಯುಂ ತಾಳದು, ಈಭಾಗದೊಳು ನಮ್ಮಪರಾಧಂಗಳೇನಾದರು ವಿದ್ದೊಡೆ ತಕ್ಕ ದಂಡವಂ ಪೊಂದುವಪಕ್ಕೆ ಬದ್ಧರಾಗಿದ್ದೇವೆಂದು, ಭಯಭಕ್ತಿ ಸಂಯುತರಾಗಿ ಹೇಳಿಕೊಳ್ಳುತ್ತಾ, ಅಮ್ಮಂಣಿಯು ವರೇ ನಂಮಾನಂದ ಜನಕಳಾದ ನಂದಿನೀದೇವಿಯು ಆಹಾರ ಪಾನ ನಿದ್ರಾದಿಗಳೊಳು ಜೇಸರಪಡುವಳು, ಅಲಂಕಾರಾದಿಗಳೊಳಿಚ್ಛೆಯುಂ ತೊರೆದಿಹಳ್. ದೇಹವೊಳು ಬಳಲಿಕೆಯುಂ ಹೊಂದಿಹಳು, ಮುಖವರ್ಣಮಾದರೋ ಒಂದು ಬಗೆಯುಂ ತೋಪ್ಪುದು, ಕಾಂಚೀಪ್ರದೇಶವು ವೃದ್ಧಿಯುಂ ಹೊಂದುತ್ತಿಹುದು. ಇದನ್ನು ನಾವು ಚೆನ್ನಾಗಿ ಪರಿಕಿಸಿ ಅಡಿದಾವರೆಯೊಳರಿಕೆ ಮಾಡಿಹೆವು, ಹಗಲೂ ಇರುಳೂ ನಾವಾಕೆಯನ್ನೆಡಬಿಡದೆ ನಮ್ಮ ಕಾರ್ಯಂಗಳೊಳು ಸಿದ್ಧರಾಗಿ ತಾದುಕೊಂಡೇ ಇರುವೆವು, ಪುರುಷರ ಸುಳಿವೇ ಆ ಅಂತಃಪುರದೊಳು ಎಂದಿಗೂ ಕಾಣಲಿಲ್ಲ, ಆದಕಾರಣ ಮೆಂತು ಪ್ರಮಾದ ಮುದಯಿಸಿದುದೋ ತೋರದೆಂದು ಬಿನ್ನೈಸುವ ಪರಿಚಾರಿಣಿಯ ವಾಕ್ಯಂಗಳಂ ಕೇಳುತ ಹಾ ದೈವಮೇ ! ಇದೇಂ ಪ್ರಮಾದಮಾದುದೆಂದು ಧೊಪ್ಪನೆ ಬಿದ್ದು ಮೂರ್ಚಿತಳಾಗಿ ಅಂತೆಯೇ ಯಿಚ್ಛಿತ್ತು ಹಾಗೆಯೇ ಯೋಚಿಸುತ್ತಾ ಅವರ ಮಾತುಗಳ ಮಾತ್ರದಿಂದಲೇ ನಿಜಮೆಂದು ನಂಬಲುಹೇಗೆ? ನಾನೇ ಕಣಾರ

ನೋಡಿ ಮುಂದು ಯೋಚಿಸುವೆನೆಂದು ಸಮಾಧಾನಮುಂ ಕೊಂಡು ಆ ಚೇಟಿಯುಂ ಕಳುಹಿ, ಯೆಂದಿನಂತೆ ಮಗಳಂ ಕಾಣಲೋಸುಗ ಮಾನೆಂದಿನೀದೇವಿಯು ಅಂತಃಪುರಕ್ಕೈದಿ ಮಗಳಂ ನೋಡಿ ಅವ್ವಾ ಮುದ್ದು ಕುವರಿಯೇ ನೀನೇಕೆಂತು ಬೀಸರವಂ ಹೊಂದಿದವಳಂತೆ ಕಾಂಬೆ ಯೆಂದು ತನ್ನಭಿಪ್ರಾಯಮನಾ ಸುಂದರಿಗರುಹದೆ ಮ್ಯೈದಡನಿ, ಇಂದು ನಾನು ನಿನಗೆ ಮಜ್ಜನಾದಿಗಳಂ ಮಾಡಿಸುವೆ ಚಿಂತೆಯುಂ ಬಿಡೆಂದು ಮೈದಡವುತ್ತಾ ಯೆಣ್ಣೆಯಂ ತಲೆಗೊತ್ತಿ ಮೈಗೆ ಯೆಣ್ಣೆಯಂ ಹಚ್ಚುವಾಗಲೂ ನೀರೆರೆವಾಗಲೂ ಮಂಗಳ ದ್ರವ್ಯಾದಿಗಳಿಂದಂಲಂಕರಿಸುವಾಗಲೂ, ಪರಿಕಿಸಿನೋಡೆ ಕಮಲನುಮುಕುಳದಂತೆ ಘನವಾಗಿಯೂ, ಸುಂದರಮಾಗಿಯೂ ಇರುವ ಕುಚಂಗಳ ಜೂಜುಕಂಗಳ, ನೈಲ್ಯವುಂ ನಾಭೀದೇಶವು ನಿಮ್ಮುತ್ಪಮಂತಾಳಿರುವಿಕೆಯೂ ಕಾಂಚೀದೇಶವು, ತುಂಬಿಲವಾಗಿರುವಿಕೆಯೂ, ಮುಖವು ಬೆಳ್ಪಾಂತಿರುವಿಕೆಯೂ ಕಂಣಿಗೆ ಗೋಚರವಾಗೆ, ಗರ್ಭವತಿಯು ನಿಜಮೆಂದರಿತು ಅದಂ ಆಕೆಗೆ ನುಡಿಯುದೆ ಅಭ್ಯಂಗಮಂ ಮಾಡಿಸಿ, ಮಗಳೊಂದಿಗೆ ಕುಳಿತು, ತಾನೂ ಭೋಜನಾದಿಗಳಂ ಮಾಡಿ, ಅವಳಂ ಕ್ರಮಮಾಗಿ ಅಲಂಕರಿಸಿ ಭಾವವಂ ನೋಡಿ, ಮೂರು ನಾಲ್ಕು ತಿಂಗಳು ಆಗಿರಬಹುದೆಂದು ತಿಳಿದು ಅಲ್ಲಿಂ ತನ್ನ ಅಂತಃಪುರಮುಂ ಸಾರಿ, ನಿದ್ರಾಹಾರಂಗಳಂ ಬಯಸದೆ ಚಿಂತಿಸುತ್ತಾ, ವಿಧಿಯೇ ಮೊದಲೇ ಅಳಿಯನ ಪರಿಯಂ ಕಾಣದೆ ದುಃಖಿಸುತ್ತಿದ್ದ ನಮಗೆ, ಈ ವಿಧವಾದ ಅಪವಾದ ಮೊಂದಂ ಘಳಿಸಿ, ಮತ್ತಷ್ಟು ಸಂತಾಪಮಂ ಬೆಳೆಯಿಸುವಿಯಾ, ಎಂದು ಹಂಬಲಿಸುತ್ತಾ, ಇದನಾರೊಳುಸುರದೆ, ತನ್ನೊಳುತಾನೆ ವೇಧಿಸುತ್ತಿರ್ದಳು.

ಆಕೆಯ ಪತಿಯಾದ ಸೋಮಶೇಖರರಾಯಂ ತನ್ನ ರಾಣಿಯುಂ ಕಾಣದೆ ಕಾರಣಮೇನೆಂದಾಲೋಚಿಸಿ, ರಾಣಿವಾಸದ ಪರಿಚಾರಿಣಿಯರಂ ಬರಿಸಿ ರಾಜಮಹಿಷಿಯುಂ ಇಂದಿಗೆ ಮೂರು ನಾಲ್ಕುದಿನಗಳಂ ಕಾಣಲಿಲ್ಲ, ಹೀಗಾಗಲು ಕಾರಣಮೇನೆಂದು ಯೋಚಿಸೆ, ಯಾ ಅಂತಃಪುರದ ದಾದಿಯರಂ ಕರಸಿ ಕೇಳಲ್ ಭಯಭರಿತರಾಗಿ ಹೇಳಲು ಹೇಗೆ? ಸುಮ್ಮನಿರುವದೆಂತು? ಎಂದು ಚಿಂತಿಸುತ್ತಾ, ಮುಕುಳಿತಕರ ಕಂಜರಾಗಿ ಜೀಯ್ಯಾ ಜಿನ್ನೈಸೆ, ಭಯಗೊಂಡಿರುವೆವು, ಆದರೆ ಈ ಅಪರಾಧಮುಂ ಕ್ಷಮಿಸಬೇಕೆಂದೊರೆದು ಸಾವಿಯಾ ಇಂದಿಗೆ ಮೂರು ದಿನಗಳ ಮುಂದು, ನಂದಿನೀದೇವಿಯರ ಅಂತಃಪುರಪರಿಚಾರಿಣಿಯರೈತಂದು, ಅಮ್ಮಣ್ಣಿಯವರೊಳು ರಹಸ್ಯಮಾಗಿ ವಿನೋ ಜಿನ್ನೈಸಿದರು, ಅದಂ ಕೇಳುತ್ತಾ, ಅಮ್ಮನವರು ಆಗ್ಗೆ ಸುಮ್ಮನಿದ್ದು, ಮರುದಿನದುಪಯದೊಳು ತಮ್ಮ ಸುಕುಮಾರಿಯ ಅಂತಃಪುರವನ್ನೈದಿದರು, ಆ ನಂದಿನೀದೇವಿಯು ಅಂದಿನ ಉಪಚಾರಾಲಂಕಾರಂಗಳನ್ನೆಲ್ಲಮಂ ಅಮ್ಮನವರೇ ಮಾಡಿಪರಂತೆ. ಆ ದಿನದಸ್ತಮಾನಕ್ಕೆ ತಮ್ಮ ಅಂತಃಪುರಮುಂ ಸಾರಿದವರು, ಅನ್ನಾದಿಗಳಂ ತೊರೆದು ಯಾತೊಂದಿಗೂ ಉಸುರದೆ, ಚಿಂತಾಗಾರಮುಂ

ಳರಿ, ಮುಂಜದೊಳು ಮುಳಗಿಹರು. ಕಾರಣವೇನೋ ತೋರದು ಎಂದಾದಾದಿ
ಾದೆಯೆ, ರಾಯಂ ಕಾರಣಮರಿಯದೆ ಚಿಂತೆಗೆಡೆಗೊಡದು. ತಾನೇ ಹೋಗಿ ತಿಳಿ
ುವೆನೆಂದು ನಿಶ್ಚೈಸಿ ಅಲ್ಲಂ ಹೊರಟು ರಾಣಿವಾಸವಂಸಾರಿ, ಚಿಂತಾಗಾರ
ೂಳು ಮುಳಗಿರುವ ರಾಣಿಯ ಬಳಿಸಾರಿ, ಮೈದಡವುತ್ತಾ ಮುಕ್ತಾಸರಂಗಳ
ಾಲು ಸುರಿಯುತ್ತಿರುವ ಕಂಬನಿಗಳಂ ತನ್ನ ಚೇಲಾಂಚಲದಿಂದೊರಸುತ್ತಾ ಹೇ,
ೋಹನಾಂಗಿಯಾದ ಪ್ರಾಣಕಾಂತೆಯೇ ನೀನಿಂತು ಚಿಂತಾಕ್ರಾಂತಳಾಗಿ ದುಃಖಿ
ಲು ಕಾರಣಮೇಂ ನನ್ನಿಂದೇಂ ಅಪರಾಧಮಾದುದು, ನಿನಗಾವುದಕ್ಕಿ ಕೊರತೆಯಾಗಿ
ುದೆಂದು ನುಡಿಯುತ್ತಾ ಸಮಾಧಾನಗೊಳಿಸಿ, ಕೇಳಲು ಮಾರಾಣಿಯು ಎಲ್ಲೈ
ಪ್ರಾಣಕ್ಕಾಂತನೇ ಲಾಲಿಪುದು ದೇವರವರ ಕೈಯುಂ, ಪಿಡಿದ ಕಾಲಮಾಗೀಪರಿಯಂ
ು ನಾನೊಂದರೊಳೂ ಕುಂದಂಗೊಳ್ಳದೆ, ಮಹದಾನಂದ ಪದವಿಯುಂ ಹೊಂದು
ುದ್ದೆನು. ಈಗಲಾದರೋ ಸಂಭವಿಸಿರುವ ಮನೋರೋಗವು ಬಹಳ ಪ್ರಮಾದ
ವಾಗಿಹುದು ಇದಲ್ಲದೆ ಮತ್ತಾವ ದೇಹೋಪದ್ರವವೂ ನನಗಿಲ್ಲಂ ಅಮನೋ
ೋಗಮುಂ ನಾನೆಂತೊರೆಯಲಿ ಹೇಗೆ ತಾನೇ ಸುಮ್ಮನಿರಲಿ, ಲೋಕದೊಳು
ಮರ್ಯಶಃಪ್ರಾಪ್ತಿಗಿಂತಲೂ ಪ್ರಬಲ ಮಾದುದೊಂದಿಲ್ಲಂ ಅದಂ ತಾಳಿ ಬದುಕುವ
ಕ್ಕಿಂತಲೂ ಪೂರ್ವಮೇ ಪ್ರಾಣತ್ಯಾಗಮೇ ಸರ್ವೋತ್ತಮ ಮಾದುದೆಂದುನಾಂ
ಶ್ಚೈಸಿ ಅದಕ್ಕೆ ತಕ್ಕುಪಾಯಮುಂ ಸಾಧಿಸುತ್ತಿರುವೆನೆಂದುಸುರಿ ಬಿಸುಸಯ್ಗಳಂ
ಡುತ್ತಾ ಸುಮ್ಮನಾಗೆ ಆ ಸೋಮಶೇಖರರಾಯಂ, ಕಾಂತಾಮಣಿಯೇ ನೀನಾ
ರೂ ದಿಕ್ಕಿಲ್ಲದ ನನ್ನೀ ದೇಹಮುಂ ಕಾಪಾಡುವಿ ಯೆಂದಿರ್ಪೆಂ ಅದಕ್ಕೂ ಅಪಾ
ಯಮುಂ ಚಿಂತಿಸುವಿಯಾ ಲೋಕಜಾತದಲ್ಲಿ ಮನುಜರಿಗೆ ಪ್ರಾಪ್ತಿಯಾಗುವ
ಸುಖ ದುಃಖಂಗಳಿರವೂ ಪೂರ್ವಾರ್ಜಿತಂಗಳೇ ಹೊರತು ಅನ್ಯಮುಲ್ಲಂ ಅದು
ತ್ಯಾಗಸ್ಸುವಿಯೋ :—

ಅವಶ್ಯಮನುಭೋಕ್ತವ್ಯಂ ಕೃತಂಕರ್ಮಶುಭಾಶುಭಂ ॥
ಅತ್ಯುತ್ಕಟವಿಪತ್ಕಾಲೇ ಸೂಕ್ಷ್ಮಾನಿಪರಜನ್ಮನಿ ॥

ಪುಣ್ಯ ಪಾಪಂಗಳು ಮಹತ್ಕರಂಗಳಾದರೆ ಮಾಡಿದ ಕ್ಷಣದಲ್ಲಿಯೇ ಅನುಭ
ಿಸಬೇಕು. ಅವು ಅಲ್ಪಂಗಳಾದರೆ ಜನ್ಮಾಂತರಗಳಲ್ಲಾದರೂ ಅನುಭವಿಸಬೇಕು.
ಮಾಡಿದ ಕರ್ಮವು ಶುಭವಾಗಲಿ ಅಶುಭವಾಗಲಿ ಅನುಭವಿಸದಿರ್ದೊಡೆ ಬಿಡಲಾರದು
ಂದು ಧರ್ಮಶಾಸ್ತ್ರಂಗಳು ಹೇಳುವವು ಆದಕಾರಣ ಆದನ್ನೀಗಲೇ ಅನುಭವಿ
ೋಣವೆಂದು ನುಡಿಯುತ್ತಿರುವ ತನ್ನ ಕಾಂತನಂ ಕುರಿತು ಎಲ್ಲೈ ಪ್ರಾಣೇಶನೇ !
ಾವು ಮಕ್ಕಳಿಲ್ಲದೆ ಅನೇಕ ಕಾಲ ತಪವಂ ಮಾಡಿ, ದೈವಾನುಗ್ರಹದಿಂದೆ ಕನ್ಯೆ
ುಂ ಪಡೆದು ಆ ಸುಂದರಿಗೆ ತಕ್ಕ ವರನಂ ಹುಡುಕಿ, ಶ್ರಮೆಯಾಂತು, ಕಡೆಯೊ
ು ದೈವಯೋಗದಿಂದ ಅನುರೂಪನಾದ ವರನಂ ತಂದು ಮದುವೆಯಂ ಮಾಡಿದೆ

ವು. ಆ ಕಾಲದಲ್ಲಿಯೇ ಉತ್ಸಾಹ ಭಂಗವಾಗಿ ಆವರಂ ಕಾಣದೆ ಹೋದೆನು. ಈ ವರಿಗೂ ಹುಡುಕಿ ನೋಡಿದರೂ ಇಂಥಾ ಕಡೆಯೊಳಿದ್ದಾನೆ ಇಲ್ಲವೆಂಬುವದೇ ತಿಳಿಯದೆ ದುಃಖಿಸುತ್ತಿರುವ ವೇಳೆಯೊಳು, ಆ ಚಂದ್ರಾಕ್ಕನಾಗಿರುವಂಥಾ ದ್ದೊಂದಪಕೀರ್ತಿಯು ತಲೆದೋರಿದುದು, ಅತಿ ಭೀತಿ ಯುತರಾದ ಅತ್ಯಪುರದ ದಾದಿಯರು ತಿಳುಹಲಾರದೆ ಬಂದು ನನ್ನೊಳು ಉಸುರಿದರು. ಅದು ಸಟೆಯೋ ವಿನೋ ಎಂದು ನಾನೇ ಪ್ರತ್ಯಕ್ಷವಾಗಿ ಪರೀಕ್ಷಿಸಿದೆನು. ನಮ್ಮ ಕುವರಿಯು ಗರ್ಭವತಿಯಾಗಿರುವಂತೆ ಕಾಂಬಳು, ಇದರ ನಿಜಸ್ಥಿತಿಯಂ ವಿಚಾರಿಸಲು ಯತ್ನಿಸಿದರೆ, ಈ ವಾರ್ತೆಯಂಬ ದುರ್ಲತೆಯು ವೃದ್ಧಿಯನ್ನೈದಿ ಲೋಕವೆಲ್ಲವಂ ವ್ಯಾಪಿಸುವದು. ಈ ಅಪವಾದ ಜನಿತ ದುಃಖಮುಂ ತಾಳಲಾರದೆ, ತಾವೇನಾಗ್ಯು ವಿರೋ ಎಂಬ ಸಂಕಟ ವೊಂದೆಡೆಯೊಳೂ, ಆ ಮಗಳಿಗೆ ತಿಳಿದರೆ ಅವಮಾನ ಮಾದುದೆಂದು ವೊದಲೇ ಪ್ರಾಣತ್ಯಾಗವೆಂ ಮಾಡುವಳೆಂಬ ಚಿಂತೆ ಮತ್ತೊಂದು ಭಾಗದಲ್ಲೂ ಬೇರೆ ಬಾಧಿಸುತ್ತಿರುವದಂ ಕಂಡು ಈ ಅನರ್ಥಂಗಳೊದಗುವದಕ್ಕೆ ಮುನ್ನವೇ ನನ್ನೀ ದೇಹವನ್ನೇ ತೊರೆಯುವದುಚಿತವೆಂದೆಣಿಸಿ, ಈ ಪರಿಯಂ ತಾಳಿರುವೆಂ ಎಂದುಸುರುವ ತನ್ನ ಪ್ರಾಣಕಾಂತೆಯಂ ಕುರಿತಾರಾಯಂ ಇದೇಂ ಇಂಥಾ ಅಜ್ಞಾನಳಾದೆ ಸಕಲ ಧರ್ಮಂಗಳಂ ತಿಳಿದವಳಲ್ಲವೇ ನೀನು ? ಇನ್ನು ಮುಂದಾ ಲೋಚನೆಯನ್ನೆಣಿಸಲೇ ಬೇಡ ನೀಂ ಶಂಕಿಸುತ್ತಿರುವ ಅಪವಾದ ಜನಕವಾದ ಭಾಗಮುಂ ಆರೂ ಅರಿಯುದಂತೆ ಪರಿಹರಿಸುವೆನು ನಮ್ಮ ಮಗಳು ಸತ್ತು ಹೋದಳೆಂದೇ ನಿಶ್ಚಯಮುಂ ತಾಳಿರು ನಾನಾದರೋ ವೃದ್ಧನಾಗಿಯೂ ಪುತ್ರಹೀನನಾಗಿಯೂ ನೀನೇ ಮುಪ್ಪಿನೊಳು ಸಂರಕ್ಷಕಳೆಂದು ತಿಳಿದಿರುವೆಂ ನನ್ನ ಮನೋಗತವಂ ನೀರು ಪಾಲುವಾಗಬೇಡವೆಂದೊಡಂಬಡಿಸಿ ಮಲಗಿದ್ದ ಕಾಂತೆಯಂ ಎಬ್ಬಿಸಿ ಕುಳ್ಳಿರಿಸಿ ಅಕೆಯಿಂದನುಮತಿಯಂಕೊಂಡು ತನ್ನ ಅತ್ಯಪುರಮಂ ಸಾರಿ, ಆ ರಾತ್ರಿಯೊಳಿಲ್ಲಾ ತಕ್ಕ ಉಪಾಯಮುಂ ಯೋಚಿಸುತಿದ್ದು ಮರುದಿನದುದಯದೊಳಿದ್ದು ಕಾಲೋಚಿತ ಕರ್ಮಂಗಳಂ ನೆರವೇರಿಸಿಕೊಂಡು ಆಪ್ತರಾದ ಮಂತ್ರಿ ಪುರೋಹಿತರಂ ಬರಿಸಿ ಅನವೊಂದಿಗೆ ವಿಕಾಂತಾಂತಃಪುರವಂ ಸೇರಿ ಕುಳಿತುಕೊಂಡಾರಾಯಂ ಎಲ್ಲೆ ಪರಮಾಪ್ತರಾದ ಮಂತ್ರಿ ಪುರೋಹಿತಾಗ್ರಗಣ್ಯರೇ ! ನನಗಾದರೋ ದೇಹಾವಸಾನ ಕಾಲವು ಪ್ರಾಪ್ತಿಯಾಗಿದೆ. ಪರಮ ರಹಸ್ಯಮಾದ ಕಜ್ಜವೊಂದಿ ನಿಹುದು ಅದಂ ನಿಮ್ಮೊಳುಸುರುವೇಂ ನೀವದಂ ನಿಮ್ಮ ಪ್ರಾಣಾಧಿಕಾಪ್ತರೊಳಾದರೂ ಅರುಹದೆ ನೆರವೇರಿಸುವಿರಾ ! ಎಂದೊರೆಯುವ ತಮ್ಮಾಣ್ಮನಂ ನೋಡಿ, ಇದೇನಿಂತು ಆಜ್ಞಾಪಿಸುವನೆಂದು ಯೋಚಿಸುತ್ತ, ಅವದನ್ನೂ ನುಡಿಯದೆ ಮೌನ ವಾಂತಿರಲು, ಆ ರಾಯಂ ಎಲ್ಲೆ ಪ್ರಾಣಾಪ್ತರೇ ! ಅತ್ಯುತ್ಕಟಮಾದೊಂದು ದುರ್ಭಾಗ್ಯಂ ತಲೆದೋರುವಂತಿರುವದು, ಅದೇನನ್ನುನಿರೋ ನನ್ನ ಮಗಳಾದ ನಂದಿನಿಯು

ಗರ್ಭವತಿಯಾಗಿರುವಳು. ಕಾರಣವಂ ವಿಚಾರಿಸಲು ಯುತ್ಪಿಸಿದೊಡೆ, ಲೋಕದ ಪ್ರಖ್ಯಾತಿಯು ಹರಡಿಕೊಳ್ಳುವದು ಇದಕ್ಕೆ ಮುನ್ನವೇ ಈ ನನ್ನ ಕುವರಿಯಂ ಅತ್ತೆ ಮಾವಂದಿರಂ ನೋಡಿ ಬರುವದೆಂದು ಪ್ರಯಾಣಮಂ ಮಾಡಿ ಕಳುಹಿಸಿಕೊಡುವೆನು. ಮನೋವ್ಯತ್ಯಯಂ ಹೊರಪಡಿಸದೆ ನೀವಿರ್ವರೂ ಜೊತೆಯೊಳು ಹೊರಟುಹೋಗಿ ನಮ್ಮ ದೇಶದ ಸರಹದ್ದಿನ ಕೊನೆಯೊಳು, ಮಹದಾರಣ್ಯಮಂ ನೋಡಿಸುತ್ತ ಎರಡು ಗಾವುದ ಜನ ಸಂಚಾರವಿಲ್ಲದೆಡೆಯೊಳು ಕಾರ್ಗತ್ತಲೆಯೊಪ್ಪಗಿದಾಗ ಆ ಬಳಿಯೊಳಾನಂದಿನಿಗೆ ತೋರದಂತೆ ಬಿಟ್ಟು ಬರಬೇಕೆಂದು ನುಡಿಯೆ ಅದಂ ಕೇಳುತಾ ಮಂತ್ರಿಶ್ರೇಖರನು ಎಲೈ ಮಹಾರಾಜನೇ ಲಾಲಿಸು ! ಯಾವ ಕಾರ್ಯಮನಾದರೂ ತಾಂ ಕಣ್ಣಾರ ಕಂಡ ಹೊರತು ಪರಿಕಿಸಿದ ಹೊರೆತು ಮುಂದಾಲೋಚಿಸಲಾಗದು, ತತ್ಕಾಪಿ ಇಂಥಾ ಸಂದರ್ಭಂಗಳೊಳು ಬಹುತರಮಾಗಿ ಪರ್ಯಾಲೋಚಿಸಿದರೇನೇ ವಿನಾ ದುಡುಕದಾರದು, ಇಂಥಾ ಸಂದರ್ಭ ಗರ್ಭಿತಮಾದೊಂದಿತಿಹಾಸವಿರ್ಪುದು ಅದನ್ನೊರೆವೇಂ ಲಾಲಿಸೆಂದು ಪೇಳತೊಡಗಿದಂ.

ಮಂತ್ರಿಯು ಸಂದರ್ಭಾನುಸಾರವಾಗಿ ಹೇಳಿರುವ ಕಥೆ.

ಈ ಧರಾಮಂಡಲದೊಳು ಭೋಗವತಿಯೆಂದು ಪ್ರಸಿದ್ಧವಾದುದೊಂದು ಪುರ ಭೇದನವಿರ್ದುದು. ಚಂದ್ರಚೂಡನೆಂಬೊರ್ವ ತರಿಯರಸನದಂ ಪಾಲಿಸುತ್ತಿರ್ದಂ. ಮುಂದಯಾನೆಯೆಂಬ ಪೆಸರುಳ್ಳ ಚಂದಿರಾಸ್ಯೆಯೊರ್ವಳ್ ಕುವರಿಯಾಗಿರ್ದಳ್. ಆಕೆಯು ವಿನೋದಾರ್ಥಮಾಗಿ ಒಂದು ಲೇಲಾಕರವೆಂಬ ಪೆಸರುಳ್ಳ ಅರಗಿಳಿಯಂ ಪೊರೆಯುತ್ತಾ, ಸಕಲ ಭಾಷೆಗಳಂ ಅಭ್ಯಾಸಗೊಳಿಸಿದಳ್. ಆ ಗಿಳಿಯು ಸಮಸ್ತ ಭಾಷಾರಚಿತಮಾದುದಾಗಿ ಚಿತ್ರತರಂಗಳಾದ ಇತಿಹಾಸಂಗಳಂ ಮುಖ್ಯಮಾಗಿ ಪತಿವ್ರತಾ ಧರ್ಮಂಗಳನ್ನೇ ಬೋಧಿಸುತ್ತಾ ಬರಲು ಅದರೊಳತ್ಯಂತ ಅನುರಾಗ ಪರಳಾಗಿ ಅದರ ಆಹಾರಾರ್ಥಮಾಗಿ ದಿವ್ಯ ಸುಪಕ್ವಫಲಂಗಳಂ ತರಿಸಿ ತಿನ್ನಿಸುತ್ತಾ ಕಾಲ ಕಾಲಕ್ಕೆ ಕ್ಷೀರಾನ್ನಾದ್ಯಾಹಾರಂಗಳಂ ಕೊಡುತ್ತಾ ಪರಮಾನುರಾಗದಿಂ ಪೋಷಿಸುತ್ತಾ ರಾತ್ರಿಕಾಲಂಗಳೊಳು ಆಶುಕಕ್ಕೆ ಪ್ರಿಯಾಲಾಪಂಗಳಂ ಕಲಿಸುತ್ತಾ, ಅದಂ ಸಜಾತೀಯ್ಯ ಸಮುದಾಯದೊಂದಿಗೆ ಸಂಚರಿಸಲೆಳಸಿದರೆ ಬಿಟ್ಟು ಕಳುಹುತ್ತಾ ಹೀಗೆಯೇ ಕಾಲಮಂ ಸುಖವಾಗಿ ಕಳೆಯುತ್ತಿರಲು, ಆ ಶುಕಂ ಪ್ರಾತಃಕಾಲವಾಗೆ ತನ್ನ ಸ್ವಜಾತಿ ಸಮುದಾಯದೊಂದಿಗೆ ಸೇರಿ ವನಾರಾಮಂಗಳಂ ಚರಿಸಿ ವಿನೋದವಾಗಿ ಕ್ರೀಡಿಸುತ್ತಿರ್ದು ಸೂರ್ಯಾಸ್ತಮಯಕ್ಕೆ ಮುನ್ನವೇ ರಾಜಕುಮಾರಿಯ ಅಂತಃಪುರಮಂ ಸಾರಿ, ಆ ರಾತ್ರಿಯೊಳು ತಾಂ ಕಂಡುಬಂದತಿಶಯಂಗಳನೆಲ್ಲವು ನಾಕೆಯೊಳುಸುರುತ್ತಾ ಹೀಗೆಯೇ ಇರಲೊಂದಾನೊಂದುದಿನ ನಾಶುಕಂ

ತನ್ನ ಕುಲಕೋಟಿಯೊಡನೆ ಬಹು ದೂರಂ ಸಂಚರಿಸಿ ಬಂದು, ಆ ರಾತ್ರಿಯೊಳಾ ರಾಜಪುತ್ರಿಯೊಳು ಮುನ್ನೀವೊಲು ನುಡಿಯುತ್ತಿರುವಾಗ್ಯೆ ಎಲೌ ತಾಯಿಾ! ನಿನ್ನೆಯ ದಿನದೊಳು ನಮ್ಮ ಕುಲದವರೆಲ್ಲರೂ ಸೇರಿ, ವಿಂಧ್ಯಾರಣ್ಯಕ್ಕಾಗಿ ನಾಳೆಯದಿನ ಹೋಗಬೇಕೆಂದು ಯೋಚಿಸಿರುವರು, ನನ್ನನ್ನೂ ಬರುವಂದೆಂದು ನಿರ್ಬಂಧಿಸುತ್ತಿದ್ದಾರೆ, ಅದಕ್ಕೆ ತವ್ಮಾಜ್ಞೆಯನ್ನು ಕೇಳುಹೆನೆಂದೊರೆಯೆ ಹೋಗಿಬರುವಂತೆ ಆಜ್ಞೆಯನಿತ್ತು ಮುತ್ತಿಟ್ಟು ಕಳುಹಲು, ಆ ಶುಕಂ ಮರುದಿನದುದಯಾತ್ಪೂರ್ವಮೇ ಹೊರಟು ತನ್ನ ಕುಲಕೋಟಿಯೊಂದಿಗೆ ಕಲೆತು, ಹೋಗುತ್ತಾ ಆ ನಗರಾಗ್ರದೊಳು ವಿಸ್ತರವಾದೊಂದು ತಪೋವನಂ ಕಣ್ಗೆ ಮಂಗಳವಾಗೆ ಎಲ್ಲರೂ ಆ ವನಪಂಸಾರಿ ವೃಕ್ಷಗಳ ಶಾಖೆಗಳೊಳು ಕುಳಿತು, ಆ ವನದ ಸೊಬಗಂ ನೋಡುತ್ತಾ ಬಂದುದು. ಆ ವೇಳೆಯೊಳಾರಾಜಾತ್ಮಜಾ ಪೋಷಿತ ಶುಕಂ, ತನ್ನು ಕುಲದವರಂ ಕುರಿತು, ಎಲ್ಯೆ ಶುಕಶ್ರೇಷ್ಠರುಗಳಿರಾ ಕೇಳಿ ! ನಾವೀವರೆಗಂ ಸಂಚರಿಸಿದೆಡೆಗಳೊಳು ಇಂತು ಸಿಂಗರವಾಗಿ ಸಕಲ ಲತಾವೃಕ್ಷಗಳೂ ಪೂತು, ಫಲಿಸಿ ಸಾಂದ್ರವಾಗಿ ನೋಡೆ ರಮಣೀಯವಾಗಿದ್ದುದಂ ಕಾಣಲಿಲ್ಲವು. ಇದಂ ನೋಡಲು ಯಾರದೋ ಪರಮ ಮುನಿಗಳ ತಪೋವನದಂತೆ ತೋರುವದು, ಅದಕ್ಕೆ ತಕ್ಕಂತೆ ಮುಂಗಡೆಯೊಳು ಪರ್ಣಶಾಲೆಯುಂ ಕಾಂಬುದು. ಅದುದರಿಂ ನಾನೀ ಎಡೆಯೊಳು ಮನಸ್ವೀ ಧ್ವನಿಮಾಡುತ್ತಾ, ಈ ಪಕ್ವ ಫಲಂಗಳಂ ಕೆಡಿಸಿದರೆ ಆ ಮಹನೀಯ್ಯರ ಕೋಪಕ್ಕೆ ಪಾತ್ರರಾಗಿ ಶಾಪಕ್ಕೆ ಭಾಜನರಾಗುವೆವು, ಆದ್ದರಿಂದೀಗ ಮಹನೀಯ್ಯರಂ ಸಂದರ್ಶಿಸಿ, ಅವರನುಜ್ಞೆಯುಂ ಪಡೆದು, ಫಲಂಗಳಂ ಭಕ್ಷಿಸಿದರೆ ಯುಕ್ತವಾಗಿರುವದೆಂದೊರೆಯಲು, ವಿವೇಕ ಹೀನನಂಗಳಾದ ಆ ಪಕ್ಷಿ ಸಂಕುಲವುದಂ ಕೇಳದೆ ಕಲಕಲಧ್ವನಿಯಂ ಮಾಡುತ್ತಾ ಸ್ವೇಚ್ಛೆಯೊಳು ಚರಿಸುತ್ತಾ ಬಂದವು, ಆಗಲಾ ರಾಜಪುತ್ರಿಯ ಲೀಲಾಶುಕವು ಅಂತೆಸಗದೆ ಪರ್ಣಶಾಲೆಯೊಳು ಧ್ಯಾನಾರೂಢನಾದ ಮುನೀಂದ್ರನ ಮುಂಗಡೆಯುಂ ಸಾರಿ ಕುಳಿತುಕೊಂಡಿದ್ದುದು. ಆ ಶುಕ ಕಲಕಲಾರವವಂ ಕೇಳುತ್ತೆ ಬಹಿರ್ಮುಖನಾದ ತಾಪಸೇಂದ್ರಂ ಶಮಿಸುವದಕ್ಕಾಗಿ ಕಣ್ದೆರೆದು ನೋಡುವನಿತರೊಳಾ ಬಳಿಯೊಳಿರ್ದೀ ಲೀಲಾಶುಕಂ, ಎಲ್ಯೆ ತಾಪಸಾಗ್ರಗಣ್ಯನೇ ! ತಾವು ಕೋಪಮುಂ ತಾಳಲಾಗದು, ನಾವು ಜ್ಞಾನಶೂನ್ಯವಾದ ಪಕ್ಷಿಗಳು, ತಿಳಿಯದೆ ಶಬ್ದಮಾಡುತ್ತಾ, ಫಲಾದಿಗಳಂ ತಿಂದ ಅಪರಾಧಮುಂ ಕ್ಷಮಿಸಬೇಕೆಂದು ರಮಣೀಯ್ಯವಾಗಿಯೂ ಲಲಿತವಾಗಿಯೂ ನುಡಿಯುತ್ತಿರುವೀ ರಾಜಶುಕಮುಂ ನೋಡಿ, ಅತ್ಯಾನಂದಾಶ್ಚರ್ಯ ಮಗ್ನನಾಗಿ ಎಲ್ಯೆ ಶುಕಶ್ರೇಷ್ಠನೇ ! ನಿನ್ನ ವಿವೇಕಾದಿಗಳಿಗೆ ನಾನು ಮೆಚ್ಚಿದೆನು, ನೀನು ಬಹು ವೃದ್ಧವಯಸ್ಸಿನದಾಗಿರುವಿ, ಈ ಫಲಮುಂ ಭಕ್ಷಿಸು, ಪ್ರಾಯಮುಳ್ಳದ್ದಾಗಿ ಬಹುಕಾಲಂ ಜೀವಿಸುವೆ, ಎಂದಾ ತಾಪಸೇಂದ್ರಂ ಜೂತಫಲವೊಂದಂ ಅಭಿಮಂತ್ರಿಸಿ ಕೊಡಲಾ ಶುಕಮಲ್ಲಿಯೇ ಭಕ್ಷಿಸಲು, ಅಕ್ಷಣದೊಳೇ

ನು ಬಾಲವಯಸ್ಕನಾದ ಶುಕನಿಗೆ ತನ್ನಿರವಂ ನೋಡಿಕೊಳ್ಳುತ್ತಾ, ಪರಮ ವಿಸ್ಮ
ಮಂ ತಾಳಿ, ಆ ಮುನೀಂದ್ರನಿಗಭಿನಮಿಸಿ, ಮಹನೀಯ್ಯರೇ ಇನ್ನೊಂದು
ವಿಜ್ಞಾಪನೆ ಇಹುದು, ಲಾಲಿಸಿ ಅನುಗ್ರಹಿಸಬೇಕು. ನನ್ನ ಒಡತಿಯಾದ ರಾಜಾ
ಜೆಯು ಲೋಕೋತ್ತರ ಸುಂದರಿಯು. ಅನುರೂಪನಾದ ಪತಿಯಂ ಕಾಣದೆ ಆಕೆ
ತಂದೆಯು ಆಕೆಗೆ ವಿವಾಹಮಂ ಮಾಡಿಕೊಡಲಿಲ್ಲ. ಆಕೆಯಾದರೋ ಯೌವ್ವ
ವಸ್ಥೆಯಂ ತಾಳಲಾರದೆ ವಿಪರೀತ ಸಂಕಟವನ್ನನುಭವಿಸುತ್ತಿಹಳು. ಪತಿವ್ರತಾ
ರ್ಮಣಿಯಾದ್ದರಿಂದ ಪರಮಕ್ರೂರನಾದ ಮಾರನ ಬಾಧೆಗೆ ಒಳಗಾಗಿ, ತಾಪ
ಂ ಸಹಿಸಲಾರಳು, ಈಕೆಗೆ ತಕ್ಕ ಪತಿಯುಂ ಅನುಗ್ರಹಿಸಬೇಕು. ನನ್ನನ್ನು
ರು ಪ್ರೀತಿಯಾಗಿ ಪರಿಪಾಲಿಸುವ ರಾಜಾತ್ಮಜೆಯು ಸಂತಾಪಮಂ ಪರಿಹರಿಸದೆ
ೀದರೆ, ನನ್ನೀ ಜನ್ಮವು ನಿರರ್ಥಕಮಾದುದಲ್ಲದೇ ? ಎಂದು ಸವಿನಯಮಾಗಿ
ನಿಸುವ ಲೀಲಾಶುಕದಾಲಾಪಂಗಳಂ ಕೇಳಿ, ಪರಮಾಹ್ಲಾದಮಂ ತಾಳ್ದಿ ತಾ
ಪಂ, ಆ ಶುಕಮಂ ಕುರಿತು, ಎಲ್ಲೆ ಪಸ್ಪಷ್ಟಶ್ರೇಷ್ಠನೇ ಕೇಳು ! ಈ ಪರ್ವತದ ತಪ್ಪ
ಲಿಯು ಸುಂದರಾರಾಮನೊಂದಿಹುದು. ಅದರೊಳು ಶಾಪಗ್ರಸ್ತಳಾದ ಅಪ್ಸರಾಂ
ನಿಯೇ ! ರಕ್ಷಿಸಿಯಾಗಿ ವಾಸಿಪಳು. ಆಕೆಯುಂ ಲೋಕೋತ್ತರ ಸುಂದರನಾದ
ರಂತೀ ದೇಶಾಧಿಪತಿಯಾದ ಚಿತ್ರಾಂಗದ ಮಹಾರಾಯ ಕುಮಾರನಾದ ಚಿತ್ರಸೇನ
ಹಾರಾಯನಂ ತಂದಿರಿಸಿಕೊಂಡಿಹಳು. ಆತಂ ಲೋಕೋತ್ತರಸುಂದರನು,
ನ್ಮಥ, ಜಯಂತ, ವಸಂತರಂ, ರೂಪಾತಿಶಯದಿಂ ತಿರಸ್ಕರಿಸುವನು, ಸಕಲ
ಾಪ್ರವೀಣಂ, ಸಮಸ್ತಪ್ರಶಸ್ತ ಗುಣಾಭರಣಂ, ಈತನಂ ನಿನ್ನೊಡತಿಗೆ ಪತಿಯಾಗಿ
ಡಿಕೊಮುವೆಂ, ಆದರೆ ಕೆಲಕಾಲ ಮಾತ್ರಮಾ ಸುಂದರಾಂಗನು, ರಾತ್ರಿಕಾಲಂ
ೊಳು ಬಂದಾ ರಾಜಾತ್ಮಜೆಯೊಳು ಸೇರಿ ಸುಖಿಸುತ್ತಿರುವಂ. ಆ ಅಪ್ಸರಾಂ
ಗೆ ಶಾಪವಿಮೋಚನಮಾದ ಖಿಲಿಕ ಸಕಲೈಶ್ವರ್ಯ ಭರಿತವಾದಾತನ ರಾಷ್ಟ್ರಮಂ
ರಿ, ಪ್ರಸಿದ್ಧನಾಗಿ ನಿನ್ನೊಡತಿಯೊಡನೆ ಸಕಲ ಭೋಗಂಗಳಂ ಹೊಂದುವಂ.
ಅಪ್ಸರಾಂಗನೆಯು ಶಾಪಾವಸಾನಂ ೦೮ ಶಿಂಗಳು ಅವಧಿಗೊಂಡಿಹುದು, ಆಕೆಯು
ಮಸ್ತ ಲೋಕಂಗಳಂ ಚರಿಸಿ ತನ್ನ ಮನಕ್ಕಾಕರೂ ಸುಂದರರಲ್ಲವೆಂದರಿತೀ ವೋ
ನಗಾತ್ರನಂ ಮೆಚ್ಚಿ ತಂದಿರಿಸಿಕೊಂಡು ಆತನೊಳು ಸುಖಿಸುತ್ತಿರುವಳೆನೆ ಆ ಲೀಲಾ
ಕಮದೆಲ್ಲಮಂ ಕೇಳಿ ಎಲ್ಲೆ ತಾಪಸೇಂದ್ರನೇ ! ನಿನ್ನ ಮಾತುಗಳಿಲ್ಲಮಂ ಕೇಳಿ
ಂಪೋಷಿತಳಾವೆಂ, ಆ ರಕ್ಷಸಿಯು ನಿರ್ಬಂಧದೊಳಿರುವಾಗ ಸುಂದರನು ನನ್ನೊ
ತಿಯಂ ಸಾರುವನೆಂತು ಹೇಗೆ ತಾನೆ ಆಕೆಯು ಬಿಟ್ಟಿರುವಳು. ಈ ಸಂದರ್ಭ
ಾರಕ್ಷಸಿಯರಿತೊಡೆ ಆತದಂ ನುಂಗದೆ ಬಿಡುವಳೇ ಈ ಭಾಗದೊಳಾಂ ಶಂಕೆಗೊಂ
ರುವೆನೆನೆ ಆ ಮುನೀಂದ್ರಂ ಆ ಗಿಳಿಯಂ ಕುರಿತು ಎಲ್ಲೆ ವಿಹಗಕುಲಲಲಾಮನೇ
ೀಳು, ರಾತ್ರಿಕಾಲಗಳೊಳಾ ರಕ್ಷಸಿ ಯಾತನನೊರ್ವನನ್ನೇ ಬಿಟ್ಟು ತಾಂ ತನ್ನಾ

ಹಾರಾರ್ಥವಾಗಿ ವನಾಂತರಂಗಳನ್ನೆಲ್ಲಿ ಮರುದಿನ ಸೂರ್ಯೋದಯವಾದ ಬಳಿಕ ತನ್ನೆಡೆಯಂ ಸಾರಿ ಆತನೊಳು ಕೂಡಿ ವಿಹರಿಸುತ್ತಿರುವಂತೆ ಸಮಯ ಬಂಧಮಂಮಾಡಿಕೊಂಡವರಂತೆ ನಡೆಯುತ್ತಿರುವಳು. ಆ ರಾಜನಂದನಂ ಸಕಲ ಮಂತ್ರಮುಜ್ಜೈಷಧಿಗಳ ಪ್ರಯೋಗಮುಂ ನನ್ನೊಳು ಉಪದೇಶಮುಂಕೊಂಡಿಹನಾಗಿ ಆತಂ ಆಕೆಗೆ ಭಯಪಡಲಾರಂ ಕಾರಣಾಂತರದಿಂದಾಕೆಯು ವಶವರ್ತಿಯಾಗಿರುವಂ ಆದ್ದರಿಂದ ರಾತ್ರಿಯೊಳು ಆಕೆಯು ಶಾಪಾವಧಿವರೆಗಂ ಒರುತ್ತಿರುವಂ ಎಂದೊರೆದು ಆ ರಾಜಾತ್ಮಜಂ ಮಧ್ಯಾಹ್ನ ಕರ್ಮಮುಂ ನೆರವೇರಿಸಲೋಸುಗ ವಿಮಾನಾರ್ಗವಾಗಿ ಸರೋವರಕ್ಕೈತರುವಂ ಅತನಂ ಸಮ್ಮತಗೊಳಿಸಿ ಕಳುಹಿಸಿಕೊಡುವನೆಂದೊರೆಯುತ್ತಿರುವನಿತರೊಳು ಆ ಭೂಕಾಂತಾತ್ಮಜಂ ತನ್ನ ನಿತ್ಯಕರ್ಮವಂ ತೀರಿಸಿಕೊಂಡು ಪರ್ಣಶಾಲೆಯ ಮಾರ್ಗವಾಗಿ ಬರುತ್ತಿರಲಾ ಮುನೀಂದ್ರಂ ಅತನಂ ಕರೆಯಬಂದಾತಂ ಸಾಷ್ಟಾಂಗವೆರಗಿ ಮುಕುಳಿತಹಸ್ತನಾಗಿ ಆಜ್ಞಾಧೀನನಿಗೆ ಒರೆಪಕಾರ್ಯಮೇನೆನ್ನೆ, ಕೇಳ್ಕೈ ನಿನ್ನ ರೂಪಾತಿಶಯಂಗಳಿಗೆ ಅನುರೂಪಳಾದ ಭೋಗವತೀಪುರದ ದೊರೆಯಾದ ಚಂದ್ರಚೂಡನೆಂಬ ಭೂಕಾಂತನ ಕುವರಿಯೊರ್ವಳು ಯಾರನ್ನೊ ಒಡಂಬಡದೆ ತಕ್ಕ ಪತಿಯನುಕೂಲಿಸದೆ ಚಿಂತಾಲೋಲಳಾಗಿ ವಾಥೆಗೊಳ್ಳುತ್ತಿರುವಳು. ಈ ರಾತ್ರಿಯೊಳೀ ಆಕೆಯಂ ಗಾಂಧರ್ವವಿವಾಹದಲ್ಲಿ ಕೈಪಿಡಿದು ಸುಖಿಸುತ್ತಾ ಈ ಅಪ್ಸರಾಂಗನೆಯು ಶಾಪಾವಧಿ ಮುಗಿಯೆ ನಿನ್ನ ರಾಷ್ಟ್ರಮುಂಸಾರಿ ಸಕಲ ಭೋಗಂಗಳನ್ನನುಭವಿಸುತ್ತಾಬರೆ ನಿನ್ನ ವಂಶೋದ್ಧಾರವಾಗುವದೆನೆ ಮುಹನೀಯ್ಯರ ಆಜ್ಞಾನುಸಾರಮೆಂದೊರೆದು ಬಳಿಯೊಳಿಪ್ಪ ಶುಕಮಂ ಕಂಡು ಅದರ ವೃತ್ತಾಂತಮನೆಲ್ಲಮಂ ತಾಪಸೇಂದ್ರನಿಂದ ಕೇಳಿ ಸಂತೋಷಭರಿತನಾಗಿ ಆ ರಾಜಕೀರಮಂ ಮುದ್ದಿಟ್ಟು ಬಿಟ್ಟು ಹೊರಟುಹೋಗೆ ಆ ಲೀಲಾಶುಕಂ ಹರ್ಷಮಂ ತಾಳಿ ಮುನಿವರನಿಂದನುಜ್ಞೆಯಂ ಪಡೆದು ತನ್ನ ಕುಲಕೋಟಿಗಳೊಂದಿಗೆ ಬಂದು ಸೇರಿ ವಿಹರಿಸುತ್ತಿರ್ದು ವಾರ್ತಾಂಡಮಂಡಲಮುತ್ತಾಚಲಮಂ ಸಾರುವದಂ ಅರಿತು ಅಲ್ಲಿಂ ಹೊರಟು ತನ್ನ ಸ್ವಜಾತೀಯ ಸಮುದಾಯದೊಡನೆ ಕೆಲವು ದೂರಂ ಬಂದು ಅನಂತರ ತನ್ನ ಪಾಲಕಳಾದ, ರಾಜನಂದನೆಯ ಅಂತಃಪುರಮಂ ಸಾರಿ ಆಕೆಯಿಂದ ಲಾಲಿಸಲ್ಪಡುತ್ತಾ ರಾತ್ರಿಯಾಗೆ ಈ ಸಮಾಚಾರಮೆಲ್ಲಮಂ ತನ್ನೊಡತಿಯೊಡಸುರಲು ಈಗಿಳಿಯ ರೂಪಂ ಬದಲಾಗಿ ವೃದ್ಧಸ್ಥಿತಿಯಾಗಲ ತಾರುಣ್ಯಮಾಂತಿರುವದಂ ಕಂಡು ಅಚ್ಚರಿಗೊಳ್ಳುತ್ತಾ ಮಿಕ್ಕದುದೆಲ್ಲಾ ನಿಜಮೆಂಬೆಣಿಸಿ, ತನಗೆ ತಕ್ಕ ಪತಿಯು ದೊರೆಯುವನಲ್ಲಾ, ಎಂದು ಸಂತೋಷಸ್ವಾಂತಳಾಗಿ. ದಿವ್ಯಾಂಬರಾ ಭರಣಂಗಳಿಂದಲಂಕೃತೆಯಾಗಿ ಮನ್ಮಥನ ಸಾಮ್ರಾಜ್ಯಲಕ್ಷ್ಮಿಯೋ ಎಂಬಂತೆ ರಾರಾಜಿಸುತ್ತಾ ಶಯ್ಯಾಗಾರಮಂ ಅಲಂಕರಿಸಿ ಸಮಸ್ತ ಭೋಗಾರ್ಹಂಗಳಾದ ಶಸ್ತವಸ್ತುಗಳಂ ಸಿದ್ಧಗೊಳಿಸಿಕೊಂಡು, ಆ ರಾಜಾ

ತ್ಮಜನೆಂತಿರುವನೋ ನೋಡಬೇಕೆಂಬ ಲವಲವಿಕೆಯಿಂ ಅಂತಃಪುರದ ದ್ವಾರದೊಳು ನಿಂತಿರ್ದಳ್.

ಅತ್ತಲಾ ಚಿತ್ರಾಂಗದಮಹಾರಾಜನ ತನೂಭವನಾದ ಚಿತ್ರಸೇನರಾಜಂ ಸೂರ್ಯಾಸ್ತಮಾನಮಂ ನಿರೀಕ್ಷಿಸುತ್ತಿರಲಾವೇಳೆಗೆ ಸರಿಯಾಗಿ ಯಾ ರಕ್ಕಸಿಯಾಗಿರುವ ಅಪ್ಸರಾಂಗನೆಯು ತನ್ನ ಪದ್ಧತಿಯಂತೆ ಆ ರಾಜಕುಮಾರನಂ ತನ್ನ ನಿವೇಶನದೊಳು ತೊರದು, ತಾಂ ಹೊರಬರುಹೋಗಲ್, ಆ ರಾಜಾತ್ಮಜಂ ಮಣಿಮಂತ್ರೌಷಧ ಶಕ್ತಿಗಳಿಂದ ಹೊರಬರು ಅಂತರಿಕ್ಷಗಾಮಿಯಾಗಿ ಬಂದೀ ಭೋಗವತಿಯಂ ಸಾರಿ, ಚಂದಿರಾಸ್ಯೆಯಾದ ಮುಂದಯಾನೆ ನೃಪ ಕುವರಿಯ ಅಂತಃಪುರದ ಮೇಲ್ಬಾಗದೊಳು ನಿಂತು ಲೀಲಾಶುಕಮೊರೆದ ಕುರುಹುಗಳಿಂದ ಆಕೆಯು ಅಂತಃಪುರಮಿರಬಹುದೆಂದರಿತು, ಚಂದ್ರಶಾಲೆಗಿಳಿದು ತನ್ನ ನಾರೂ ಆರಿಯದಂತೆಯೂ ಆ ರಾಜಾತ್ಮಜೆಗೆ ಮಾತ್ರ ಕಾಣಬರುವ ತೆರದೊಳು ಮಂತ್ರಶಕ್ತಿಯಂ ಕಲ್ಪಿಸಿಕೊಂಡು, ಅಂತಃಪುರದ ಬಾಗಲಗೈತರುವನಿತರೊಳಾ ರಾಜಕುವರಿ ಎದುರ್ಪಂದು ನೋಡೆ ಮನ್ಮಥವಸಂತ ಜಯಂತರಂ ಮೀರುವ ರೂಪ ಲಾವಣ್ಯಾದಿಗಳಿಂ ಪೆರಿವಾ ಭೂಭುಜಾತ್ಮಜಂ ಕಣ್ಗೆ ಮಂಗಳಮಾಗೆ ಲೀಲಾಶುಕಂ ತಿಳುವಿಪ ರಾಜಕುಮಾರನೀತನೇ ಎಂದರಿತು, ಹಸ್ತಲಾಘವಮಿತ್ತು ಅಂತಃಪುರಮಂ ಹೊಗಿಸಿ ದಿವ್ಯರತ್ನಖಚಿತ ಸಿಂಹಾಸನದೊಳು ಕುಳ್ಳಿರಿಸಿ ಎಲ್ಲೆ ಲೋಕಸುಂದರನೇ ! ನಿನ್ನ ಸವಾಚಾರಮಂ ನನ್ನ ಲೀಲಾಶುಕಮುಖೇನ ಕೇಳಿದವೊದಲು ನಿನ್ನಂನೋಡುವೆಂದೆಂದು ಕಳವಳಿಸುತ್ತಿದ್ದೆನು. ಇಂದೆನ್ನ ಕೋರಿಕೆಯು ಈಡೇರಿತು ನಾಂ ಧನ್ಯಳಾದೆನು. ಗಾಂಧರ್ವ ವಿವಾಹದಲ್ಲಿ ಕೈಪಿಡಿದು ಮನೋರಥಸಿದ್ಧಿಯಂ ಮಾಡಿಸೆಂದು ವಿನಯಳಾಗಿ ಪ್ರಾರ್ಥಿಸುವ ಮುಂದಯಾನೆಯಂ ನೋಡಿ, ಹಾ ! ಇಂತಿಹ ಸರ್ವೋತ್ತಮಸುಂದರಿಯು ನನ್ನ ಕರಗತಳಾದುದಕಾಂ ಧನ್ಯಂ, ಕಮಲಾಸನನಾದಾ ಸೃಷ್ಟಿಕರ್ತನು ತಕ್ಕ ಕಾಂತಾಮಣಿಯನ್ನೀ ಜೊತೆಗೂಡಿಸಿದನೆಂದು ಹೊಗಳುತ್ತಾ ಮಾರನರಗಿಳಿಯೇ ನಿನ್ನಿಷ್ಟಾನುಸಾರವಾಗಿಯೇ ಆಗಲಿ, ಎಂದಾಕೆಯ ಕರಕಮಲಮಂ ಪಿಡಿದೆಳೆದು ತನ್ನ ತೊಡೆಯಮೇಲೆ ಕುಳ್ಳಿರಿಸಿಕೊಂಡು, ಮುಖಮುಂ ಚುಂಬಿಸೆ ಆ ಎಂದು ಭರದಿಂ ತನ್ನ ಎರಡು ಬಾಹುಗಳಿಂದಲೂ ಆತನಂ ಬಿಗಿದಪ್ಪಿ ತನ್ನ ಸುಂದರವಾದ ಕನಕ ಕಲಶಂಗಳವೊಲ್ ರಾರಾಜಿಸುವ ಬಟ್ಟಬಲ್ಮೊಲೆಗಳನ್ನಾತನ ವಕ್ಷದೊಳೊತ್ತುತ್ತ ಸೀತ್ಕಾರ ಪೂತ್ಕಾರಂಗಳಿಂದಾತನ ವದನ ಸರೋಜಮುಂ ಚುಂಬಿಸುತ ಅಧರಮುಂ ಸವಿಯುತ ಎಲ್ಲೆ ಪ್ರಾಣಕಾಂತನೇ! ನಾನೇ ಲೋಕೈಕವೀರನೆಂದು ಬಹುಕಾಲಮಾಗಿ ನನ್ನಂ ಕಾಡುತ್ತಿದ್ದಾ ಕ್ರೂರನಾದ ದುರುಳವಾರನಂ ಪರಾಭವಿಸುವದಕ್ಕಾಗಿ ನಾವಿರ್ವರುಂ ಸೇರಿ ಪೋರಾಡುವೆವೆಂದುಸುರಿ, ಅಂತೆಯೇ ಶಯ್ಯಾಗೃಹಮಂ ಹೊಗಿಸಿ ನವರತ್ನ ಚಿತ್ರಿತವಾದ ಮುಂಜದೊಳ್ಮೆರೆವ ಹಂಸತೂಲಿಕಾ ತಲ್ಪಮಂ ಸಾರಿ ಸಕಲ ಭೋಗಾರ್ಹಂಗಳಾದ ಪದಾರ್ಥಂಗಳಿಂ

ದುಪಚರಿಸಿ; ಗಂಧಪುಷ್ಪ ತಾಂಬೂಲಾದಿಗಳಿಂ ಪರಸ್ಪರ ಭೂಷಿತಾಂಗರಾಗಿ ತ
ಬೂಲಮುಂ ಸವಿಯುತ್ತಾ, ಓರೊರ್ವರ ಪೂರ್ವೋತ್ತರಂಗಳಂ ಹೇಳಿಕೊಳು
ರ್ವರೂ ಕಾಮತಂತ್ರ ಪರರಾದ್ದರಿಂದ ರತಿಕ್ರೀಡೆಯಂ ಸಲಪುತ್ತ ಲೊರ್ವರನೊ
ರು ಮೆಚ್ಚಿಸುತಾ ರಾತ್ರಿಯುಂ ಪರಮಸುಖಮಾಗಿ ಕಳೆದು ಅರುಣೋದಯಾ
ರ್ವಮೇ ಎಚ್ಚತ್ತು ಕಾಂತೆಯಿಂ ಬೀಳ್ಕೊಟ್ಟವನಾಗಿ ಮುನ್ನಿನಂತೆ ಅಲ್ಲಿಂ ತ
ವಿಂಧ್ಯಾರಣ್ಯದ ಪ್ರಾಂತದೊಳಿರುವಾ ರಕ್ಕಸಿಯ ಆವಾಸಮುಂ ಸಾರಿ ಏನೊ
ಮರಿಯದವನಂತೆಯೇ ಇರುತಿದ್ದಂ. ಈ ಪ್ರಕಾರಮಾಗಿಯೇ ಬಹುಕಾಲಮಾ
ಬರುತ್ತಾ, ಮುಂದಯಾನೆಯುಂ ಕೂಡಿ ಸಕಲ ಸೌಖ್ಯಗಳಂ ತಾಳುತ್ತಾ ವ
ಹೋಗಿ ಬರುತ್ತಾ, ಈ ಸಂದರ್ಭದೊಳೇ ಅನ್ಯೋನ್ಯರಿಯುವೆಯೇ ಸುಖಿಸಾಮ್ರಾಜ್ಯ
ಮಾಡುತ್ತಿರಲು ಮುಂದಯಾನೆಯು ಆತನಿಂ ಗರ್ಭಮುಂ ತಳೆದ್ದಳು. ಗರ್ಭಸ್ಥ ಶಿ
ದಿನೇದಿನೇ ಶುಕ್ಲಪಕ್ಷೇಂದುವಿನಂತೆ ವೃದ್ಧಿಯನ್ನೈದುತ್ತಾ ಬಂದುಜು. ಕ
ಗರ್ಭಿಣಿಯಾಗೆ ಬಯಕೆಗಳು ತಲೆದೋರುತ್ತಾ ಬರಲು ಪ್ರಬಲಮಾಗಿರೆ ಈಕೆ
ನೋಡಿ ಬಹುಕಾಲವಾದುಡೆಂದು ತಂದೆಯಾದ ಚಂದ್ರಚೂಡ ಮಹಾರಾಯಂ
ರಿಯ ಅಂತಃಪುರಮುಂ ಸಾರಿ, ನಂದಿನಿಯಂ ಕಂಡಾನಂದಸ್ಪಂತನಾಗಿ, ಆಕೆ
ವಂದಿಸಲ್ಪಟ್ಟು ಉಚಿತಾಸನಾಸೀನನಾಗಿ ಮಗಳ ಯೋಗಕ್ಷೇಮವಂ ವಿಚಾರಿಸ
ರಲು, ಆಕೆಯು ತನ್ನ ಮನೋಗತವಾದ ಅಭಿಪ್ರಾಯವುಂ ತಾತಂಗರಿಕೆವ
ಆಗಗೊಳಿಸುವೆನೆಂದು ಮಗಳಂ ಸಂತೈಸಿ, ತನ್ನಂತಃಪುರಮುಂ ಸಾರಿದಂ.
ಹತ್ತಾರು ದಿನಂಗಳಂ ಕಳೆಯೆ, ಈ ರಾಜನಂದಿನಿಯು ಗರ್ಭಿಣಿಯಾಗಿರುವಳೆ
ಕೆಯ ಗೌಡಿಯರರಿತು. ರಾಜಮಹಿಷಿಯೊಳು ತಿಳಿಸೆ, ಭಯಗ್ರಸ್ತರಾಗಿ ತಿಳು
ಇರುವದೆಂತೆನುತ ಚಿಂತಿಸುತ್ತಾ ಹೇಳಿದ ಹೊರತು ನಾವು ಸುಖಿಗಳಾಗಲಾರೆ
ರಿತು ಅರಿಕೆಮಾಡೆ ಆ ರಾಜಾಂಗನೆಯು ಪರಮ ದುಃಖಾಕ್ರಾಂತಳಾಗಿ, ಆ
ಯೊಳು ತನ್ನ ಕಾಂತಂಗರುಹುತ್ತಾ, ಈ ಮಹತ್ತಾದ ದುರ್ಯಶಮುಂ ನಿವಾ
ಕೊಳ್ಳುವದಸಾಧ್ಯಮಾಗಿಹುದಲ್ಲಾ, ಮುಂದೇನು ಗತಿ ಎಂದು ಹಂಬಲಿಸುತ
ಪ್ರಾಣಕಾಂತೆಯೇ ಇಂತೇಕೆ ಚಿಂತಿಸುವೆ? ಈ ಒಂದು ಹೆಂಣುಮಗಳು ತಾನು ಇ
ಏನಾಗುತ್ತಿತ್ತು, ಹೇಗಾದರೂ ಪುತ್ರಹೀನರೆಂಬುವದೇ ನಿಜವಾಯ್ತು. ಇ
ಮೃತಳಾಗಳೆಂದು ಸುಮ್ಮನಿರು. ಉಪಾಯಾಂತರದಿಂದ ಈ ದುರ್ಯಶಂ ಅಂ
ಮಾಗುವದಕ್ಕೆ ಮುನ್ನೇ ಕಾರಣವಾದುದಂ, ತನ್ನಷ್ಟಕ್ಕೆ ತಾನೇ ತೊಲಗು
ಮಾಳ್ಪೆನೆಂದು ಪೇಳಿ, ಮರುದಿನದುದಯದೊಳು ಮಂತ್ರಿಯಂ ಕರಿಸಿ, ರಹಸ್ಯದ
ಕುಳಿತು, ಎಲೈ ಮಂತ್ರಿವರ್ಯನೇ ! ಅಪರಿಮಿತವಾದ ಪ್ರಭಾವವೊಂದುದಯ
ಶಾಶ್ವತವಾದೊಂದಪಖ್ಯಾತಿಯುಂ ನೆಲಗೊಳಿಸುವಂತಾಗಿಹುದು, ನನ್ನ ಕುವರಿ
ಅಕಸ್ಮಾತ್ ಗರ್ಭಮುಂ ತಾಳಹಳು ಆಕೆಯು ನದೀತೀರದೊಳು ವನವಿಹಾರ

ಬಯಸುವಳು, ಈ ವ್ಯಾಜೇನ ಅವಳು ಕಾಡುಸಾಲಾಗಿ, ಮೃಗಾಹಾರಮಾಗಿ ಪೋಪಳ್. ಇದರಿಂದಪಖ್ಯಾತಿ ಜನ್ಮಭಯಂ ನಿವೃತ್ತಿಯಾಗುವದೆಂದೊರೆಯೆ, ಸಕಲ ಕಲಾ ಕೋವಿದನಾಗಿ ನಿಖಿಲತಂತ್ರ ಸ್ವತಂತ್ರನಾದರೂ ಆ ಮಂತ್ರಿ ರಾಜಾಜ್ಞೆಯಂ ವಿಾರಲಾರದೆ ಅದಂ ಅನುಮೋದಿಸೆ, ವನವಿಹಾರಕ್ಕೆಂದು ಸಕಲ ಪರಿವಾರದವರಂ ಸಕಲ ಸಂಭಾರಗಳನ್ನಣಿಗೊಳಿಸಿರುವದಾಗಿಯೂ ನಾಳೆ ದಿನವೇ ಪ್ರಯಾಣಮುಂ ನಿಶ್ಚಿಸಿರುವದಾಗಿಯೂ, ಕುವಾರಿಯ ಅಂತಃಪುರಕ್ಕೆ ಸುದ್ದಿಯಂ ಕಳುಹಿ, ಅದರಂತೆ ಪ್ರಯಾಣಮುಂ ಮಾಡಿಸಿ ಮಂತ್ರಿಯಂ ಮೃಗಾವಲಿಗಾಗಿ ನೇಮಿಸಿ ಕಳುಹಿಸಿದಂ.

ರಾಜಾಜ್ಞೆನುಸಾರಮಾಗಿ ಯಾ ಮಂತ್ರಿಯು ತನ್ನ ಪರಿವಾರದೊಡನೆ ತನ್ನ ಸಖಿಯರೊಂದಿಗೆ ಹೊರಟ ಮಂದಯಾನೆಯುಂ ಪ್ರಯಾಣವಾಡಿಸಿಕೊಂಡು ಹೊರಟು ತಮ್ಮ ದೇಶಮುಂ ದಾಂಟಿ, ನರ್ಮದಾನದಿಯ ತೀರದೊಳಿರುವ ಕಾಂತಾರಮುಂ ಹೊಕ್ಕು, ನದೀ ತೀರದೊಳು ಪಟಗೃಹಂಗಳಂ ನೆಲೆಗೊಳಿಸಿ, ಎಲ್ಲರಂ ತಕ್ಕ ಸ್ಥಾನಂಗಳೊಳು ಇಳುಹಿ ತಾನೊಂದು ಪಟಗೃಹದೊಳಿದ್ದು, ರಾಜಾತ್ಮಜೆಯ ವಿನೋದಾರ್ಥವಾಗಿ ತಕ್ಕವರನ್ನು ನೇಮಿಸಿ, ಮುಂದಿನ ಕಾರ್ಯಾಲೋಡನೆಯಂ ಮಾಡುತ್ತಿರ್ದಂ.

ರಾಜಾತ್ಮಜೆಯು ತನ್ನ ಒಯ್ಯಕೆ ಈಡೇರಿತಲ್ಲಾ ಎಂದು ಹರುಷಾಕ್ರಾಂತಳಾಗಿ ಈ ಕಪಟೋದ್ಯೋಗಮುಂ ತಿಳಿಯದೆ, ತನ್ನ ಸಖೀಜನರೊಂದಿಗೆ ಕೂಡಿ, ವನಮುಂ ಸಾರಿ, ಸರಸಸಲ್ಲಾಪಗಳಂ ಗೈಯುತ ಅಲ್ಲಲ್ಲಿ ಕಾಣಬರುವ ಕುಸುಮುಮಂಗಳಂ ಕೊಯ್ಯುತ್ತಾ ಇಂಪಾಗಿ ಕಲಕಲರವಿಂಗಳಂ ಮಾಡುವ ಖಗಕುಲಂಗಳಂ ನೋಡಿ, ಸಂತೋಷಿಸುತ್ತಾ ನಾನಾವಿಧವಾದ ವೃಕ್ಷಂಗಳೊಳು ಬೆಳೆದು ಒಲೆದು, ತೂಂಗುತ್ತಿರುವ ಫಲಜಾಲಂಗಳಂ ಕಂಡು ಕೊಯ್ದು ದಣಿಯುತ್ತಾ, ಕಣ್ಗೆ ಮಂಗಳಮಾದ ಸರೋವರಂಗಳೊಳು ರಾರಾಜಿಸ ಕಮಲ ಕಲ್ಹಾರ ಕುಸುಂದ ಮೊದಲಾದ ಕುಸುಮುಮಂಗಳಂ, ಜಲಚರಂಗಳಾಟಂಗಳಂ ಜಲ ಪಕ್ಷಿಗಳ ನಾಟ್ಯಂಗಳೀ ಮೊದಲಾದವುಗಳಂ ಕಂಡು, ಆನಂದಗೊಳ್ಳುತ್ತಾ, ಬಳ್ಳಿ ಮನೆಗಳೊಳು ಸುಂದರಮಾದ ಹಾಸುಗಲ್ಲುಗಳೊಳು ಕುಳಿತು ವಿಶ್ರಾಂತಿಯಂ ತಾಳುತ್ತಾ ಈಪರಿಯೊಳು ಪರಮಾನಂದಭರಿತಳಾಗಿ ವನವಿಹಾರ ಸುಖಮುಂ ಹೊಂದಿ ಅಸ್ತಮಾನಕಾಲಕ್ಕೆ ಸರಿಯಾಗಿ ಬಂದು ಪಟಗೃಹಗಳಂ ಸಾರಿ, ಸ್ನಾನ ಭೋಜನಾದಿಗಳಂ ಮಾಡಿ, ಹಂಸತೂಲಿಕಾ ತಲ್ಪಮುಂ ಸಾರಿ ಮಲಗಲು ವನವಿಹಾರಶ್ರಮೆಯಿಂ ಬಳಲಿದವಳಾದ್ದರಿಂದ ಅಗಾಧವಾದ ಗಾಢನಿದ್ರಾವಶಳಾಗಿ ಮಲಗಲು, ಈಪರಿಯಂ ಮೊದಲೇ ತನ್ನಾಪ್ತಜೂತಿಯರ ಮುಖೇನ ತಿಳಿದಿರ್ದಾಮಂತ್ರಿಯು. ಆ ಕಾಲಕ್ಕೆ ಸರಿಯಾಗಿ ಮೊದಲೇ ಸಿದ್ಧಪಡಿಸಿದ್ದ ಒಂದು ಪೆಟ್ಟಿಗೆಯೊಳಾ ರಾಜಾತ್ಮಜೆಗರಿಕೆಯಿಲ್ಲದಂತಾಕೆಯಂ ಮಲಗಿಸಿ, ಗಾಳಿಯಾಡುವದಕ್ಕೂ ನೀರು ಒಳಹೋಗದಂತೆಯೂ, ಭದ್ರವಾಗಿ ಮುಚ್ಚಿಸಿ ಕದಲದಂತಾ ಪೆಟ್ಟಿಗೆಯಂ ಕೊಂಡೊಯಿಸಿ, ಪರಿಪೂರ್ಣವಾಗಿ ಹರಿಯುತ್ತಿರ್ದಾ ನರ್ಮ

ದಾಪ್ರವಾಹದೊಳು ಹೊಗಿಸಿ ತಾನೇನೂ ಕಾಣದವನಂತೆ ತನ್ನ ನೆಲೆಯೊಳು ಮಲಗಿ ಕೊಂಡನು. ಉದಯವಾಗಲಿದ್ದಾ ಮುಂಜಯಾನೆಯ ಸಖೀಜನರೂ, ಅಪರರಾದ ಗೌಡಿಯರೂ ತನ್ನು ಒಡತಿಯುಂ ಕಾಣದೆ, ಗಾಬರಿಗೊಂಡು ಸುತ್ತುಮುತ್ತಲರಸುತ್ತಾ, ಮಂತ್ರಿಗೀಹದನಂ ವರ್ದೀಮಾಡೆ ಗಾಬರಿಗೊಂಡವನಂತೆ ನಟಿಸುತ್ತಾ ಮುಂದೇನು ಗತಿ ತನ್ನ ರಾಜನಿಗೇನೆಂದು ಪೇಳಲಿ ಎಂದು ಕಳವಳಿಸುತ್ತಾ, ಅಲ್ಲಲ್ಲಿ ಹುಡುಕಿಸಿದವನಂತೆ ಮಾಡಿಸಿ, ಬಹು ಪ್ರಮಾದವಾದುದೆಂದು ಭಯವಾಂತವನಂತೆ ಆಕ್ಷಣಮೇ ಅಲ್ಲಿಂ ಪ್ರಯಾಣಮುಂ ಮಾಡಿ ತನ್ನ ಪುರಮುಂ ಹೊಕ್ಕು ರಾಯಂಗೀಹದನಮುಂ ರಹಸ್ಯವಾಗರುಹಿ, ಬಹಿರಂಗವಾಗಿ ಹೀಗೆ ಅನ್ಯಾಯವಾದುದಲ್ಲಾ ಎಂದು ಎಲ್ಲರೂ ಕಪಟಚಿಂತಾಕ್ರಾಂತರಾಗಿದ್ದರು.

ಇತ್ತಲಾ ಮುಂಜಯಾನೆಯು ಮಲಗಿ ಗಾಢನಿದ್ರಾಸಕ್ತಳಾಗಿರುವ ಪೆಟ್ಟಿಗೆಯು ಉಭಯ ಕೂಲಮುಂ ತುಂಬಿ ಸಂಪೂರ್ಣ ಪ್ರವಾಹವಾಗಿ ಹರಿಯುತ್ತಿರುವ, ನರ್ಮದಾನದಿಯ ಮಧ್ಯಪ್ರವಾಹದೊಳು ಕೊಚ್ಚಿ ಕೊಂಡು ಬಹು ದೂರವಾಗಿ ಹೋಗೆ, ಆ ಸನುಯಕ್ಕೆ ಚಂದ್ರನುದಯಿಸಿ ಬೆಳದಿಂಗಳತಿ ಪ್ರಕಾಶವಾಗಿ ತುಂಬಿರಲು ಗಾಳಿಯು ನದೀಸಂಶ್ಲೇಷದಿಂದ ಶೀತಲವಾಗಿ ಬೀಸುತ್ತಿರೆ, ಪೆಟ್ಟಿಗೆಯೊಳು ಮಲಗಿದ್ದ ಮುಂಜಯಾನೆಗೆ ಎಚ್ಚರತಲೆದೋರಲು, ಪ್ರವಾಹದ ವೇಗದುಂದುಂಟಾದ ಘೋರವಾದ ಒರೆತವು ಜಲಪಕ್ಷಿಗಳ ಕಲಕಲಾರವವೂ, ಬಹು ಭಯಂಕರವಾಗಿ ಕೇಳಬರಲು ಗಾಬರಿಗೊಂಡವಳಾಗಿ, ಎದ್ದು ಕುಳಿತು ಕಿವಿಗೊಟ್ಟು ಚನ್ನಾಗಿ ಪರಿಕಿಸಿ ನೋಡೆ ಭಯನಿವ್ಮಡಿಸಲು ; ಅಹಾ ? ಇದೇನೋ ಮೋಸವಾದುದು, ನಾಂ ಕುಳಿತುಕೊಂಡಿರುವದು ಪಟಗೃಹವಲ್ಲ, ಪೆಟ್ಟಿಗೆಯಾಗಿರುದು, ನದೀಪ್ರವಾಹದ ಮೇಲೆ ಹರಿದು ಹೋಗುವಂತೆ ಕಾಣುವುದು ಹಾ ! ಹಾ ! ದೈವವೇ ಮುಂದೇನುಗತಿಯೆಂದು ಗಟ್ಟಿಯಾಗಿ ಪ್ರಲಾಪಿಸುತ್ತಾ, ದುಃಖಾತಿಶಯುನುಂ ತಾಳಲಾರದೆ ಹಾಗೆಯೆ ಮೂರ್ಛಿತಳಾಗಿ, ಸ್ವಲ್ಪಕಾಲಕ್ಕೆ ಸ್ಮೃತಿಯುಂ ತಾಳಿ ಅಯ್ಯೋ ! ನಾನೇನು ಪಾಪಿಯೋ, ಈವಿಧಮಾಪದುರವಸ್ಥೆ ಬಂದುದಲ್ಲಾ ? ಎಂದು ಗೋಳಿಡುತ್ತಾ ಪಾಶಸಂಚಾರಾರ್ಥವಾಗಿರ್ಪ ರಂಧ್ರಗಳಿಂದಿಣಿಕಿ ನೋಡಲು, ಅತ್ಯಂತ ಶುಭ್ರವಾಗಿ ತುಂಬಿರುವ ಬೆಳದಿಂಗಳೊಳು ಅಂಧಕಾರದ ಸಮುದಾಯವೇನಾದರೂ ಸಾಲಲಾಗಿ ನಿಂತಿಹುದೋ, ಎಂದು ಭ್ರಾಂತಿಯನ್ನುಂಟುಮಾಡುತ್ತಾ ಉಭಯ ಕೂಲಸ್ಥವಾದ ವೃಕ್ಷಸಮುದಾಯಂಗಳು ಭಯವಂ ಜನಿಸುತ್ತಾ ಕಾಂಬುವದು. ಅಗಾಧವಾಗಿ ಹರಿಯುತ್ತಿರುವ ನದೀ ಶಬ್ದವಾದರೋ ಪ್ರಳಯಕಾಲದ ಸಮುದ್ರಾರವದಂತೆ ಭೋರ್ಗರೆವುದು, ಬೆಳ್ಳಿಯ ಗುಡ್ಡಗಳಂತೆ ನೋಡುವಪಕ್ಕೆ ಭಯಂಕರವಾಗಿ, ನೊರೆಗಳ ಸಮೂಹಂಗಳಿಂದೊಡಗೂಡಿ ಹಂಸ ಸಾರಸ ಬಕ ಕಾರಂಡಾದಿ ಜಲಪಕ್ಷಿನಿಚಯದಿಂದಲೂ, ಮತ್ಸ್ಯ, ಕಚ್ಛಪ ಮುಂಡೂಕ ಮಕರ ಗಜಾಶ್ವ ಶ್ವಾಪದ ಫೇನುಗಳೇ ಮೊದಲಾದ ಜಲ

ಮೃಗಂಗಳಿಂದಲೂ, ಕಮಲ ಕಲ್ಹಾರ ಕುಮುದೋತ್ಪಲಂಗಳಿಂದಲೂ, ನಿಬಿಡಿತವಾಗಿಯೂ, ಜಲಬುದ್ಬುದ ಶೀಕರ ನಿಕರ ಮಂಡಿತವಾಗಿ, ಅವತೋತ್ಕ್ಷಿಪ್ತ ಶೀಕರ ಮಾಲಾ ಸವಾವೃತವಾಗಿಯೂ, ಕಣ್ಗೆ ಮಂಗಳವಾಗೆ, ಹರಹರ ಈ ಪ್ರವಾಹದ ಮಧ್ಯದೊಳು ನಾನೇಂ ಬದುಕುವೆನು ಹಾ ಮಾತಾ ಪಿತೃಗಳಿರಾ ! ನಿಮಗಿನಿತಾದರುಂ ನಾಂ ದೋಷಿಯಲ್ಲವಲ್ಲವೇ, ನನಗೀ ಕೀಪರಿಯವಸ್ಥೆಯು ಪ್ರಾಪ್ತಿಸಿತೋ ಹಾ ಪ್ರಾಣಕಾಂತ! ಲೋಕೈಕಸುಂದರಾ ! ನಿನ್ನ ಮುಖಾಬ್ಜಮಂ ಇನ್ನೊಂದು ಸಲ ಮಾದರೂ ನೋಡಿ ಸಂತೋಷಿಸದೆ ಹೋದೆನೆ ಎಂದು ಗಟ್ಟಿಯಾಗಿ ಪ್ರಲಾಪಿಸುತ್ತಾ, ಸುಕುಮಾರಗಾತ್ರಳಾಗಿಯೂ, ಗರ್ಭವತಿಯಾಗಿಯೂ ಇದ್ದ ಕಾರಣ ರೋದನಂ ಗೈಯ್ಯೆ ಶಕ್ತಿ ಸಾಲದೆ ಬಸವಳಿದು ಭಯಶೋಕಾಂಬುಧಿ ಮಗ್ನಳಾಗಿ, ಹಾಗೆ ಮೂರ್ಛಿತಳಾಗಿ ಹೋಗಿ ಬಿದ್ದಿರಲು, ಅಕೆಯು ಕುಳಿತಿದ್ದಾ ಪೆಟ್ಟಿಗೆಯು, ನದೀವೇಗದಿಂದ ಬಹುದೂರವಾಗಿ ಹೊಡೆದುಕೊಂಡು ಹೋಗಿ ನದೀತೀರದೊಳೊಂದೆಡೆ ಅರೆಬಂಡೆಗಳ ನಡುವಣ ಭಾಗದೊಳು ಗಿಡಗಳ ಹೊದರಲ್ಲಿ ಸಿಲುಕಿಕೊಂಡು ನೀರಿನ ವೇಗದಿಂ ತಪ್ಪಿಸಿಕೊಂಡಿತು. ಆ ಕಾಲಕ್ಕೆ ಸರಿಯಾಗಿ ಅಪ್ಸರಾಂಗನೆಯಾದ ರಕ್ಕಸಿಯು ತನ್ನ ಆಹಾರಾರ್ಥವಾಗಿ ಹೋಗಿದ್ದವಳು ವನಸಂಚಾರಮಂ ಮಾಡುತ್ತಾ ಅಕಸ್ಮಾತ್ತಾಗಿ, ಈ ಪೆಟ್ಟಿಗೆಯು ಮಾರ್ಗವಾಗಿ ಬರುತ್ತಾ ಎಚ್ಚತ್ತು ಆ ಮಂದಯಾನೆಯು ಸ್ವರಮುಂ ಕೇಳಿ ಯಾರೋ ಮಾನವರಳುವಂತೆ ಕಾಂಬುದು, ಆಹಾ ! ಈದಿನ ಸುಭೋಜನಂ ಪ್ರಾಪ್ತಿಸಿತೆಂದು ಸಂತೋಷಿಸುತ್ತಾ ಸವಿಾಪಕ್ಕೈದಿ ಪೆಟ್ಟಿಗೆಯೊಳು ಭದ್ರಪಡಿಸಿರುವದರಿಂದ ತೆಗೆಯಲು, ಯೋಚಿಸಿ, ಯುತ್ಪಿಸುವ ಕಾಲಕ್ಕೆ ಸೂರ್ಯೋದಯವಾಗುತ್ತಾ ಬರೆ ತನ್ನನಧಿಕಾಲಂ ಮುಗಿದುದು. ರಾತ್ರಿಯು ಆಹಾರಕ್ಕೇನೇ, ಈ ಮನುಷ್ಯಳು ಉಪಯೋಗಿಸುವಳೆಂದು ನಿಶ್ಚೈಸಿ ತನ್ನ ಕಾಂತನಾದಾಭೂಕಾಂತ ಸುತನಂ ನೆನೆದು ನಿಲ್ಲಲಾರದೆ, ಆ ಪೆಟ್ಟಿಗೆಯನ್ನೇ ಹೊತ್ತುಕೊಂಡು ತನ್ನ ಆವಾಸಸ್ಥಾನವಂ ಸಾರಿ, ಈ ಪೆಟ್ಟಿಯನೊಂದೆಡೆಯೊಳಿಳುಹಿ, ತನ್ನ ಕ್ರೂರರೂಪಮುಂ ತೊರೆದು ಸೌಮ್ಯವಾದ ಸುಂದರರೂಪವನ್ನಾಂತು ಪ್ರಾಣಕಾಂತನಾದ ರಾಜನಂದನನ ಬಳಿಗೈದಿ, ಸರಸ ಸಲ್ಲಾಪಾದಿಗಳಂ ಗೈಯುತ್ತಿರುವನಿತರೊಳು, ಆ ಅಪ್ಸರಾಂಗನೆಗೆ ರಾಕ್ಷಸ ಜನ್ಮಾವಧಿ ಶಾಪಕಾಲಂ ಪೂರೈಸಿ ಬರೆ, ಅಂತೆಯೇ ಆ ರಾಕ್ಷಸದೇಹಮುಂ ತೊರೆದು ದಿವ್ಯ ಸುಂದರವಾದ ಚಂದಿರಾಸ್ಯೆಯಾಗಿ, ಆ ಚಿತ್ರಸೇನರಾಯಂಗೆ ಬಲವಂದೆರಗಿ ಕೈಮುಗಿದು ನಿಂದು, ಸ್ವಾಮಿ ರಾಜಾಗ್ರಗಣ್ಯರೇ ! ನಾನಿಂದು ಶಾಪವಿಮುಕ್ತಳಾಗಿ ಧನ್ಯಳಾದೆನು. ಅಜ್ಞಾನವಶಾತ್ ಆ ನೀಚಜನ್ಮದೊಳು ಸಕಲ ರಾಜಭೋಗಂಗಳಿಂ ಬಿಡಿಸಿ, ಅನೇಕ ಕಷ್ಟಂಗೊಳಿಸಿದೆನು. ನನ್ನ ಅಪರಾಧಮುಂ ಕ್ಷಮಿಸಬೇಕು, ನನ್ನ ಲೋಕಮುಂ ಕುರಿತು ತೆರಳುವದಕ್ಕೆ ಅನುಜ್ಞೆಯಂ ಬೇಡುವೆನೆಂದು ನುಡಿಯುತ್ತಿರಲು, ಅತ್ತಲಾ ಪೆಟ್ಟಿಗೆಯೊಳು ಕುಳಿತಿದ್ದ ಮಂದಯಾನೆಗೆ ಮೂರ್ಛೆತಿಳಿದು

ಪ್ರಜ್ಞೆತಲೆದೋರಲು, ಹಾ ನಿಧಿಯೇ ! ಜನ್ಮಾಂತರದಲ್ಲಿ ನಾನಾರಂ ಈಪರಿ ಸಂತಾಪಗೊಳಿಸಿದ್ದನೋ, ಅದರ ಫಲಂ ಪ್ರಾಪ್ತಿಯಾದುದು, ಅದರೂ ನನ್ನಂತಹ ಪಾಪಿಯು ಈ ಲೋಕದೊಳೆಲ್ಲಿಯೂ ಜನಿಸಲಾರಳೆಂದಾಲಾಪಿಸುವ ಆರ್ತಧ್ವನಿಯೊಂದು ಕೇಳಿಬರಲು, ಇದೇನೀಯಡೆ ಸ್ತ್ರೀಯಳ ರೋದನಂ ಕೇಳುತ್ತಲಿದೆ ಎಂದವರಿರ್ವರೂ ಏತಂದು, ಆ ಪೆಟ್ಟಿಗೆಯ ಮುದ್ರೆಯಂ ತೆಗೆದು ಒಳಗಿರುವ ಕಾಂತಾರತ್ನಮುಂ ನೋಡುತಾರಾಯಂ ಹಾ ಪ್ರಾಣಕಾಂತೆಯೆ ! ನಿನಗೀಪರಿ ಕಷ್ಟಮುಡರಿತೆ ನನ್ನ ಕೈಯಂ ಪಿಡಿದುದಕೆ ಇದೇ ನನ್ನಿಂದಾದ ಸುಖಮೆಂದು ಆ ಮಂಜ್ಞಯಾನೆಯುಂ ಬಿಗಿದಪ್ಪಿ ದುಃಖಿಸೆದಿರು, ಭಯಮುಂ ಬಿಡು, ನಾಂ ನಿನ್ನ ಕೈಪಿಡಿದ ಚಿತ್ರಸೇನರಾಯಂ ಕಣ್ದೆರದು ನೋಡೆಂದು ಮೈದಡವಿ, ಸಮಾಧಾನಗೊಳಿಸೆ, ಮುಚ್ಚಿರ್ದ ಕಂಗಳಂ ತೆರೆದು ತನ್ನ ಪತಿಯುಂ ನೋಡಿ, ದರಿದ್ರಂ ನಿಧಿಯುಂ ಕಂಡಂತೆ, ಹರುಷಿತಳಾಗಿ, ತನಗೊದಗಿದ ಪರಿಯಂ ನೆನೆದು ಶೋಕಿಸುತ ಪತಿಯಂ ಬಿಗಿದಪ್ಪಿ ಎಲ್ಲೆ ಪ್ರಾಣನಾಥನೇ ! ಮೃತ್ಯುವಶಳಾದ ನಾನು ನಿನ್ನ ಪುಣ್ಯೋದಯದಿಂದ ಜೀವಿತಳಾದೆನು ಎಂದು ತನ್ನ ಸಮಾಚಾರಮೆಲ್ಲಮುಂ ಪತಿಗುಸುರಲು, ಅವರಿರ್ವರೂ ಸಂತೋಷಸ್ವಾಂತರಾಗಿರೆ, ಬಳಿಯೊಳಿರ್ದ ಅಪ್ಸರಾಂಗನೆಯು ಕಂಡು, ಎಲ್ಲೆ ಲೋಕೈಕಸುಂದರನಾದ ಮಹಾರಾಜನೇ ! ಧರ್ಮಪತ್ನಿಯನ್ನೊಡಗೂಡಿ ನಿನ್ನಂ ನೋಡಿ ಇಂದು ನಾಂ ಪರಮಾನಂದ ಭರಿತಳಾದೆನು. ಈ ಸುಂದರಾಂಗಿಯೊಡನೆ, ನೀನೀಗ ನಿನ್ನ ರಾಜ್ಯಮುಂ ಸಾರಿ ಸಾಮ್ರಾಜ್ಯಮಾಳುತ್ತಾ, ಸುಖಿಯಾಗಿರಲು, ನಿನ್ನೊಡನೆ ತೆರಳುವರಾಗಿ ನನಗಾಗಿ ಸ್ವರ್ಗದಿಂ ಬಂದಿರುವ ನಮ್ಮ ವಿಮಾನಮುಂ ನಿನ್ನ ಧರ್ಮಪತ್ನಿಯೊಡನೆ ಹತ್ತುವನಾಗು, ನಿನ್ನ ರಾಜಧಾನಿಯುಂ ಹೊಗಿಸಿ ನಾನನಂತರದೊಳು ನನ್ನ ಲೋಕಮುಂ ಸಾರುವೆನೆಂದು ಅವರಿರ್ವರೊಡನೆ ಅಪ್ಸರ ಸುಂದರಿಯು ವಿಮಾನವನ್ನೇರಿ ಆಕಾಶಮಾರ್ಗಮಾಗ್ಯೆತಂದು ಈ ಚಿತ್ರಸೇನ ಮಹಾರಾಜನ ಪುರೋದ್ಯಾನದೊಳವರಿರ್ವರಂ ಬಿಟ್ಟು ಅನುಜ್ಞಾತಳಾಗಿ ತನ್ನ ಲೋಕಮುಂ ತಾನೈದಿದಳ್.

ಅನಂತರಮಾ ಚಿತ್ರಸೇನರಾಯಂ ವನಪಾಲಕರ ಮುಖೇನ ತಾತನಾದ ಚಿತ್ರಾಂಗದ ಮಹಾರಾಜಂಗೆ ಸುದ್ದಿಯಂ ಮುಟ್ಟಿಸಲಾ ವೃದ್ಧರಾಜಂ ಪರಮಾಹ್ಲಾದಯು ತನಾಗಿ, ಪುತ್ರನಂ ನೋಡುವ ಲವಲವಿಕೆಯುಂ ತಾನೇ ಹೊರದು, ಸಕಲ ಪರಿವಾರ ಸಮಾವೃತನಾಗ್ಯೆತಂದು ಪುರೋದ್ಯಾನಮುಂ ಸಾರಲು ಪತ್ನಿಸಮೇತನಾದಾ ಚಿತ್ರಾಂಗದಂ ಎದುರ್ಗೊಂದು ತಾತನ ಚರಣಾಂಬುಜಗಳೊಳೆರಗಿ ನಿಲ್ಲಲು ಇರ್ವರಂ ತೆಗೆದಪ್ಪಿ, ಮೈದಡವುತ್ತಾ, ಕುಮಾರನಂ ಸೊಸೆಯುನ್ನೋಡಿ ಉಕ್ಕುತ್ತಾ ಅತ್ಯಂತ ಸಂಭ್ರಮದೊಳು ಪುರಮಂ ಹೊಗಿಸಿ ರಾಜಾಲಯಮುಂ ಪ್ರವೇಶಿಸಿ, ಬಂಧುಮಿತ್ರರೊಂದಿಗೆ ಕುಳಿತು ಕುಶಲಪ್ರಶ್ನಾಪೂರ್ವಕ ಸರಸ ಸಲ್ಲಾಪಂಗಳಂ ಮಾಡುತ್ತಾ, ಷಡ್ರಸಾನ್ನಾರೋಗಣೆಯಂ ಗೈದು ಎಲ್ಲರೂ ತಮ್ಮ ತಮ್ಮ ಶಯನಾಗಾರಂಗಳೊಳು ಸುಖಮಾಗಿ

ನಿದ್ದೆಯಂಗೈವು ಮರುದಿನ ದುದಯವಾಗೆ ಸಕಲ ಸಂಭ್ರಮದೊಡನೆ ಚಿತ್ರಸೇನನಂ ಸಿಂಹಾಸನಾರೂಢನಂ ಮಾಡಿ ರಾಜಮುದ್ರೆಯನಾತಂಗಿತ್ತು, ವೃದ್ಧರಾಜಂ ವಿಶ್ರಾಂತಿಸುಖಮಂ ತಾಳೆ, ಮನುಧರ್ಮಾನುಸಾರವಾಗಿ ಪ್ರಜಾಪಾಲನಂಗೈಯುತ್ತಾ ಪ್ರಜಾರಂಜಕನಾಗಿ ರಾಜ್ಯವಾಳುತ್ತಿರೆ, ಗರ್ಭವತಿಯಾದಳಾ ಮಂದಯಾನೆಯು ಪೂರ್ಣಗರ್ಭಿಣಿಯಾಗಿ ಸಲ್ಲಗ್ನ ಶುಭಮುಹೂರ್ತದೊಳು ಕೋಟಿಸೂರ್ಯ ಪ್ರಕಾಶಮಾನನಾದ ಪುತ್ರನನ್ನು ಪಡೆದಳು. ಚಿತ್ರಸೇನಮಹಾರಾಯಂ ಪರಮೋತ್ಸಾಹದೊಳು ಜಾತಕರ್ಮ ನಾಮಕರಣಾದಿಗಳಂ ಮಾಡಿಸಿ, ಸುಖಮುಂ ತಾಳಿ ಕೆಲಕಾಲಂ ಪತ್ನೀ ಪುತ್ರಾನಂದ ಪರವಶನಾಗಿರುತ್ತಿರ್ದಂ.

ತದನಂತರಮಾ ಮಂದಯಾನೆಯು ತನ್ನ ಮಾತಾಪಿತೃಗಳನ್ನು ಲೀಲಾಶುಕವನ್ನು ಸ್ಮರಿಸಿ ನೋಡಬೇಕೆಂದು ಭ್ರಾಂತಿಯಿಂದ ಪತಿಯಿಂದಾಜ್ಞಪ್ತಳಾಗಿ ಪತಿಪುತ್ರರೊಂದಿಗೆ ಮಿತ ಪರಿವಾರ ಸೈನ್ಯದೊಂದಿಗೆ ಕೂಡಿ ಹೊರಟು ತನ್ನ ತಂದೆಯಾದ ಚಂದ್ರಚೂಡಮಹಾರಾಜನ ರಾಜಧಾನಿಯಾದ ಭೋಗವತೀಪುರದ ಪ್ರಾಂತದೊಳ್ಬಿ ತರುತ್ತಿರ್ದಳು.

ಇತ್ತಲಾ ಚಂದ್ರಚೂಡ ಮಹಾರಾಜಂ ಮಗಳ ಮೂಲಕವಾಗಿ ಜನಿಸುವದೆಂಬ ದುರ್ಭಾಶದಭಯ ವಿಮುಕ್ತನಾಗುತ್ತಿರುವಾಗ ಮಂದಯಾನೆಯು ಲೀಲಾಶುಕಂ ತನ್ನ ಒಡತಿಯುಂ ಕಾಣದೆ, ಯಾವ ವಿಧನಾದಾಕೆಯು ಸವಪಾಚಾರಮರಿಯದೆ ನಿದ್ರಾಹಾರಂಗಳಂ ತೊರೆದು ಶೋಕಿಸುತ್ತಿರೆ, ಗೌಡಿಯುರ್ಕಿಈ ವಾರ್ತೆಯುಂ ಧರಣೀಧರಂಗರುಹಲು, ಪಂಜರಸ್ಥವಾದ ಗಿಣಿಯುಂ ತರಿಸಿ ವಿಕಿಂತು ಚಿಂತಿಸೆ, ನಿನಗೇನು ದೇಹತಾಪತ್ರಯವೆನೆ, ಆ ಲೀಲಾಶುಕಂ ರಾಯನೆನ್ನು ಕುರಿತು, ಎಲ್ಲೆ ಮಹಾರಾಜನೇ ಲಾಲಿಸು ! ನನ್ನ ಒಡತಿಯಾದ ಮಂದಯಾನೆಗಾಗಿ ನಾಂ ದುಃಖಿಸುವೆ, ಆಕೆ ವಿನಾ ಬೆಳೋ ಕಾಣೆನು, ನನ್ನಂ ಬಹು ದಯೆಯಿಂದ ಪಾಲಿಸುತ್ತಿರ್ದಳಾಗಿ, ಆಕೆಯುಂ ಕಾಣದೆ ನನಗೊಂದು ಮನೋವ್ಯಥೆಯೊದಗಿಹುದು. ಇದುವು ಮಲ್ಲದೆ ಆಕೆಯ ಸೌಂದರ್ಯಾದಿ ಸಕಲ ಸದ್ಗುಣಜಾಲಂಗಳಿಗೂ ಅನುರೂಪನಾದ ಲೋಕೈಕ ಸುಂದರನಾದ ಸಕಲ ಮಣಿಮಂತ್ರೌಷಧಗಳಿಂ ಕುಶಲನಾದ ಚಿತ್ರಸೇನಮಹಾರಾಜನೆಂಬ ಅವಂತೀ ದೇಶಾಧೀಶ್ವರನಂ ವಿಂಧ್ಯಾಚಲವಾಸಿಯಾದ ಮಹರ್ಷಿಯೊರ್ವನನು ಗ್ರಹವಿಂದ ಗಾಂಧರ್ವ ವಿವಾಹತ್ವೇನ ಕಾರಣಾಂತರವಿಂದ ರಹಸ್ಯವಾಗಿ ಕೈಪಿಡಿದು, ಆತನೊಳು ಅರುಅರಿಯದಂತೆ ಸಕಲ ಭೋಗಂಗಳಂ ತಾಳುತ್ತಾ ಆತನಿಂದಲೇ ಗರ್ಭಧಾರಿಣಿಯಾಗಿಯೂ ಇದ್ದಳು. ಇಂಥಾ ಪತಿವ್ರತಾ ಶಿರೋಮಣಿಯು ನನ್ನೊಳ್ಪ್ರಾಣವಿಟ್ಟು ಜೀವಿಸುತ್ತಿರ್ದು ಕಾಣದೇ ಹೋದಳಲ್ಲವೆಂಬುವದೇ ನನ್ನ ಮನೋರೋಗವೆಂದೊರೆದು, ದುಃಖಮುಂ ತಾಳಲಾರದೆ, ಹಾ ಒಡತಿಯೇ ಎಂದು ಪ್ರಾಣಮುಂ ಬಿಟ್ಟು ರಾಯನ ಮುಂಗಡೆಯೊಳು ಬಿದ್ದಳು.

ಈಪರಿಯನ್ನೆಲ್ಲಮುಂ ಕೇಳುತಾ ರಾಯಂ ಸ್ಮೃತಿರಹಿತನಾಗಿ, ಅಯ್ಯೋ ಪಾವಿಯಾದೆ, ಎಂದು ಗಟ್ಟಿಯಾಗಿ ಕೂಗಿ ಧೊಪ್ಪನೇ ಭೂಮಿಯೊಳು ಬಿದ್ದು ಮೂರ್ಛಿತನಾಗಿ, ಶೈತ್ಯೋಪಚಾರಂಗಳಿಂ ಪ್ರಜ್ಞಾಮಾತ್ರನಾಗಿ, ಆಹಾ ಯುಕ್ತಾಯುಕ್ತ ಮರಿಯದೇ ವಿಚಾರಶೂನ್ಯನಾಗಿ, ಲೋಕೈಕಸುಂದರಿಯಾಗಿಯೂ ಸಕಲ ಸದ್ಗುಣಾಢ್ಯಳಾಗಿಯೂ, ಸತಿವ್ರತಾ ಶಿರೋರತ್ನನಾಗಿಯೂ, ವಂಶಾಂಕುರಳಾಗಿ ಗರ್ಭವತಿಯಾಗಿಯೂ ಇದ್ದ ನೆಂದನೆಯಂ ನೀರುಪಾಲು ಮಾಡಿದೆನಲ್ಲಾ, ಇನ್ನು ನಾಂ ಬದುಕಿ ಪ್ರಯೋಜನಮಿಲ್ಲವೆಂದು ಅಗ್ನಿಯಂ ಪ್ರವೇಶಿಸಿ ಪ್ರಾಣಮುಂ ತೊರೆದಂ, ಆತನ ಪತ್ನಿಯೂ ಈ ವಾರ್ತೆಯಂ ಕೇಳುತ್ತಲೇ ಪತಿಯು ಗತಿಯನ್ನೇ ಹೊಂದಿದಳು ಮಂತ್ರಿಯು ಈ ವಾರ್ತೆಯಂ ಕೇಳಿ, ನಾನೇ ಈ ಪಾತಕಕ್ಕೆ ಅಧಿಕಾರಣನು. ಒದುಕಿರೆ ಅಪಕೀರ್ತಿ ಆಜಂದಕ್ಕರ್ಕವಾಗಿ ನಿಲ್ಲುವದೆಂದು ದೊರೆಯ ಗತಿಯನ್ನೇ ತಾನೂ ಸಾರಿದಂ, ಆತನ ಧರ್ಮಾಂಗನೆಯು ಪತಿಯನ್ನಗಲಿರಲಾರದೆ ಪತಿಯ ಲೋಕವನ್ನೇ ಸಾರಿದಳು. ಹೀಗೆ ಆ ರಾಜಕವಾಗಿಯೂ, ಮಂತ್ರಿ ರಹಿತವಾಗಿಯೂ ಇರುವ ರಾಜ್ಯಭಾರಮುಂ ಮಂತ್ರಿ ನಂದನನಾದ ಜಾಲಂ ವಹಿಸಿ, ನಿರ್ಬಹಿಸುತ್ತಾ ಇರ್ದಂ.

ಹೀಗಿರುವ ಕಾಲದೊಳಾ ರಾಜಕುವರಿಯಾದ ಮಂದಯಾನೆಯು ೫ ವರುಷಗಳ ಪ್ರಾಯದವನಾದ ತನ್ನ ಕುಮಾರನೊಂದಿಗೆ ಪತಿಸಮೀಪತರಾಗಿ ಸಕಲ ಸಂಪತ್ತಿನೊಡನೆ ಬರುತ್ತಿದ್ದವಳು, ಪುರಾಸ್ಸಾಂತಪ ರಾಜೋದ್ಯಾನಮುಂ ಸಾರಿ, ತಂದೆಗೆ ಈ ಸುದ್ದಿಯಂ ಹೇಳಿಕಳುಹೆ, ನುಂತ್ರಿನಂದನನು ಕೇಳುತ್ತಾ ಸಕಲ ಪರಿವಾರ ಚತುರಂಗ ಸಮಾನ್ವಿತನಾಗಿ ಬಂದು, ರಾಜಾತ್ಮಜೆಯಂ ಪತಿ ಪುತ್ರರೊಂದಿಗೆ ಕಂಡು, ಮುಜರೆಯಂ ಸಮರ್ಪಿಸಿ, ಮಯ್ದಾದೆಯೊಂದಿಗೆ ಪುರಪ್ರವೇಶಮುಂ ಮಾಡಿಸಿ, ಹಾಗೆಯೇ ರಾಜಾಲಯಮುಂ ಹೊಗಿಸಲು, ಶೂನ್ಯವಾಗಿ ಕಾಂಬ ರಾಜಾಲಯಮುಂ ಕಂಡು ಪ್ರಶ್ನೆಯಂ ಮಾಡೆ, ನಡೆದ ಪರಿಯನ್ನೆಲ್ಲಮುಂ ಮಂತ್ರಿ ನಂದನನಿಂ ಕೇಳುತ್ತ, ಹಾ! ಎಂದು ಪ್ರಲಾಪಿಸಿ, ಅಂತೆಯೇ ಮೂರ್ಛಿತಳಾಗಿ, ಉಪಚಾರಂಗಳಿಂದ ಪ್ರಜ್ಞೆಯಂ ತಾಳಿದವಳಾಗಿ, ಅಯ್ಯೋ ಮಾತಾಪಿತೃಗಳಿರಾ ! ನನ್ನಿಂದಲ್ಲವೇ ನೀವೆಲ್ಲರೂ ಮೃತರಾದಿರಿ, ಎಲೈಲೀಲಾಶುಕವೇ! ಇನಿತು ಸುಖಿಗಳಂ ನನಗೆ ಕೈಗೂಡಿಸಿ, ಮಹ ದುಪಕಾರಿಯಾದ ನೀನೂ ನನಗಾಗಿಯೇ ಪ್ರಾಣತ್ಯಾಗಮುಂ ಮಾಡಿದೆಯಾ, ಆಹಾ ಎಂದು ಪ್ರಲಾಪಿಸುತ ತನ್ನ ಪತಿಯಂ ಕುರಿತು, ಸ್ವಾಮಿನಾ ಪ್ರಾಣೇಶನೇ ! ಇಂಥಾ ಮಹತ್ಸಂಕಟವನ್ನೂ, ಕಾಲಮೇಘದಂತೆ ಲೋಕಾವೃತಿವಾದ ದುರ್ಯಶವನ್ನೂ ತಾಳಿ, ನಾನೊಂದು ಕ್ಷಣಮಾದರೂ ಜೀವಿಸಲಾರೆನು, ಈ ರಾಜ್ಯಮುಂ ನನ್ನೀಕು ಮಾರನಿಗೆ ವಹಿಸಿಕೊಡ್ಡು, ನಾನೇ ಈ ಸುಕುಮಾರನೆಂದರಿತಿರುವದೆಂದೊರೆದು, ತಾನೂ ಮಾತಾಪಿತೃಗಳ ಲೋಕಮನ್ನೇ ಹೊಂದಿದಳು.

ಆದುದರಿಂದ ಆತುರಮಾಗಿ ಯಾವ ಕಾರ್ಯಮುಂ ಮಾಡಲಾದೀತು. ಕಡೆಗೆ

ಆತ್ಮನಾಶವೇ ಲಭಿಸುವದೆಂದೊರೆಯುವ ಮಂತ್ರಿಯ ಮಾತಂ ಕೇಳುತಾ ಕೋಪಾರೂಢನಾಗಿ, ಛಿ ದುರಾತ್ಮಕನೇ? ನನಗೆ ಪ್ರತಿಯಂ ಹೇಳುವಿಯಾ ಎಂದು ಗರ್ಜಿಸಲು ಪರಾಧೀನವೃತ್ತಿಯೇ ನೀಚತರಮೆಂದರಿತು, ಅಜ್ಞಾನುಸಾರನೇ ನೆರವೇರಿಸುವೆನೆಂನೊರೆದು, ರಾಯನಂ ಬೀಳ್ಕೊಟ್ಟವನಾಗಿ ರಾಜ ಪುರೋಹಿತನೊಡಗೊಂಡು ಬಂದು ಆಜ್ಞಾನುಸಾರಮಾಗಿ ಸಕಲ ಸಾಮಗ್ರಿಗಳಂ ಸಿದ್ಧಗೊಳಿಸಿಕೊಂಡು ಕಾದಿರ್ದಂ. ದೊರೆಯು ತನ್ನ ಮಗಳಾದ ನಂದಿನಿಯಂ ಕರೆಯಿಸಿ, ಅಮ್ಮಸುಕುಮಾರಿಯೇ? ನಿಮ್ಮ ಅತ್ತೆಮಾವಂದಿರು ಬಂದು ಪುರೋದ್ಯಾನದೊಳಿಳಿದಿಹರು, ನಿನ್ನಂ ನೋಡಬೇಕೆಂದು ಬಯಸುವರಂತೆ ಅವರಿಲ್ಲಿ ಬರಲೊಲ್ಲರು, ದುಃಖಿತರಾದವರಂ ಸಮಾಧಾನಗೊಳಿಸುವದು ಲೇಸು, ಆದ್ದರಿಂದ ನೀಂ ಪೋಗಿ ಅವರಂ ಕಂಡು ನಾಲ್ಕುಮಾತನಾಡಿ, ಆ ಕೂಡ್ಲೆ ಹಿ ತಿರಿಗಿ ಬಾ ನಿನ್ನಂ ಬಿಟ್ಟು ನಾನಿರಗಳಿಗೆಯೂ ಇರಲಾರೆನೆಂದು ಕಪಟೋಕ್ತಿಗಳಂ ನುಡಿಯೆ, ನಿಜಮೆಂದರಿತಾ ನಂದಿನಿಯು ತಾತಂಗೆರಗಿ, ತಾಯಿಯ ಬಳಿಯ ಸಾರೆ, ಮಂಗಳ ಮಜ್ಜನಾಲಂಕಾರ ದಿವ್ಯಾನ್ನ ಭೋಜನಂಗಳಂ ಮಾಡಿಸಿ, ಮನದೊಳು ಅಯ್ಯೋ ಇಂದಿಗಿವಳ ಋಣಾನುಬಂಧವು ತೀರಿದುವೇ? ಎಂದು ದುಃಖಿಸುತ, ಭಾವವಂ ಹೊರಸೂಸದೆ ಮಾರ್ಗಕ್ಕೆ ಬುತ್ತಿಯಂ ಕಲ್ಪಿಸಿಕೊಟ್ಟು, ಆಲಿಂಗಿಸಿಕೊಂಡು ಗಟ್ಟಿಯಾಗಿ ಅತ್ತು ಬೀಳ್ಕೊಡಲು, ಅಲ್ಲಿಂ ಬಂದು ಅಂದಳವನ್ನೇರಿ ಕುಳಿತುಕೊಳ್ಳಲು, ತಕ್ಕ ಪರಿವಾರದೊಡನೆ ಮಂತ್ರಿಯು ಆ ಪಲ್ಲಕ್ಕಿಯನ್ನೇರಿದ ನಂದಿನಿಯೊಡನೆ ಹೊರಟು ಬಹುದೂರಂ ಅಕೆಗೆ ಅರುಹದಂತೆ ಕರೆದೊಯ್ದು, ಸೂರ್ಯಾಸ್ತಮಾನಮಾಗೆ ಘೋರಾರಣ್ಯಮಾರ್ಗಮಾಗಿ ಸಾರಿ ಹೋಗುತ್ತ ಕತ್ತಲೆಯಾಗೆ ಆ ನಂದಿನಿಗೆ ನಿದ್ರಾವೇಶಂ ಬಂದು ಮೈಮರೆದೊರಗಲು, ಅದಂ ಕಂಡು ಪರಿವಾರಮೆಲ್ಲಮುಂ ಹಿಂಗಳುಹಿ ತಾಂ ಕೆಲಹೊತ್ತಲ್ಲಿರ್ದು ಸದ್ದು ಗೈಯ್ಯದೆ ಹಿಂದಕ್ಕೆ ಬಂದು, ಎಲ್ಲರೊಳು ಸೇರಿ, ಆ ರಾತ್ರಿಯೇ ಪುರಮುಂ ಸಾರಿ, ಈ ಕಜ್ಜಮುಂ ರಾಯಂಗರುಹಿ, ತನ್ನ ಮನೆಯಂ ಹೊಂದಿ, ತಾ ಮಾಡಿದ ನೀಚಕಾರ್ಯಮುಂ ಚಿಂತಿಸುತ ಮಲಗಿರ್ದಂ.

ಇತ್ತಲಾ ನಂದಿನಿಯು ನಿದ್ದೆಯಂ ತೊರೆದು, ತನ್ನ ಗೌಡಿಯರಂ ಪಸರಿಟ್ಟು ಕೂಗಲು, ಪ್ರತಿಧ್ವನಿ ಬಾರದಿರೆ ಮಂತ್ರಿಯಂ ಕರೆಯಲು, ಆತನು ಪ್ರತ್ಯುತ್ತರವಿಯ್ಯದೆ ಪೋಗಲು, ಕೆಲಕಾಲಂ ಸುಮ್ಮನಿದ್ದು ಮರಳಿ ಕೂಗಲು ಅಂತೆಯೇ ನಿಶ್ಶಬ್ದವಾಗಿರಲು ಕಿವಿಗೊಟ್ಟು ಆಲಿಸಲು, ಕ್ರೂರ ಮೃಗ ಪಕ್ಷಿಗಳ ಘೋರ ಧ್ವನಿಯು ಕೇಳಿಬರಲು, ಇದು ಘೋರಾರಣ್ಯಮಾಗಿರಬಹುದೆಂದು ಯೋಚಿಸುತಾ ಹೊರಗೆ ಬಂದು ನೋಡೆ, ತನ್ನ ಮನೋಗತವೇ ನಿಜವಾಗೆ ಭಯಾಕ್ರಾಂತಳಾಗಿ ಪಲ್ಲಕ್ಕಿಯಂ ಸಾರಿ ಬಾಗಿಲ್ಗಳಂ ಮುಚ್ಚಿಕೊಂಡು, ಹಾ? ಹೀಗಾಗುವದಕ್ಕೆ ಕಾರಣವೇನು, ಇದೇಂ ಕನಸೋ ಅಲ್ಲದೇ ಭ್ರಾಂತಿಯೋ ಅಲ್ಲದೊಡೆ ನಿಜಮಾಗಿ

ಕಾಡುಪಾಲಾದೆನೋ ಕಾಣೆನಲ್ಲಾ ಎಂದು ಚಿಂತಿಸಿ ಕ್ರೂರಮೃಗಾವಿಗಳ ಘೋರಾ
ರವಂ ಜನ್ಮಾಗಿ ಕೇಳಿ ಬರುವದು, ಇದು ಕಾಂತಾರವೇ ನಿಜಂ, ಅಯ್ಯೋ ನನ್ನ
ತಂದೆಯು ನಿತಕೆಂತು ಗೈಸಿದನೋ, ಹಾ ! ಈಪಾಪಿಯಾದ ಗರ್ಭಂ ಇಷ್ಟನರ್ಥಕ್ಕೆ
ಕಾರಣವಾದುದು, ಗಂಧರ್ವರನುಣ್ಮೇಯುರಿಗೆ ಕೊಟ್ಟ ವಾಗ್ದಾನದಂತೆ ನಾಂ ನನ್ನ
ನಿಜಕಾಂತನ ಬರುವಿಕೆಯುಂ ಹೊರಪಡಿಸದೆ ಧರ್ಮಕ್ಕೆ ಬದ್ಧಳಾದ್ದರಿಂದ ಈಯವಸ್ಥೆ
ಯು ಪ್ರಾಪ್ತಿಯಾದುದು ಇದರ ನಿಜತತ್ವಮರಿಯದ ನನ್ನ ತಾತಂ ನಾಂ ಪತಿಯಿಲ್ಲದವ
ಳಾದ್ದರಿಂದ ಗರ್ಭಮುಂತಾಳಿ,ದುರ್ಯಶಂಬಂದಪ್ಪು ದೆಂದು, ಇಂತುಗೈಸಿಪರ್ಕನೇಹೊತುಳ
ದನ್ಯೆಮಿಲ್ಲಂ ಪ್ರತ್ಯಕ್ಷವಾಗಿ ಕೊಲ್ಲಿಸಲು ಸರ್ವಥಾ ಕ್ರೂರತರಮೆಂದೀಯುಪಾಯ
ಮುಂ ಯೋಚಿಸಿದಂ ನಿಜಾರಮಿಲ್ಲದೇ ಈರೀತಿಯೊಳು ಗೈದ ತಾನೇ ನಾಶವಂ ಹೊಂ
ದುವಂ ಎಂದು ಬಗೆಬಗೆಯಾಗಿ ಚಿಂತಿಸಿ, ಪ್ರಲಾಪಿಸುತ್ತಾ ಎಲೈ ವನದೇವತೆಗಳಿರಾ !
ನಮ್ಮ ತಂದೆಯುವಾಡಿದ ಯತ್ನವು ಹೀಗಾಗುವದು ಹ್ಯಾಗನ್ನುವಿರೋಧ ಜೋತಿ
ಷಕ್ಕನೆಂದು ನಟಿಸುವ ಒರ್ವಪಾಷ್ಪಂ ತನ್ನ ಪತ್ನಿಯು ಗಂದು ಮೊಗುವಂಪ್ರಸವಿಸಲು,
ತತ್ಕಾಲ ಲಗ್ನಮಂ ಕಂಡುನೋಡಿ,ಇದು ಪಿತೃಗಂಡವಾಗಿಹುದೆಂದು ನಂಬಿ ಆ ಶಿಶು
ವಂಕೊಂಡೊಯ್ದು, ಮನೆಯು ಹಿಂಭಾಗದ ಭಾವಿಯೊಳು ಹಾಕಲು, ಆತನ ಧರ್ಮಾಂ
ಗನೆಯು, ಶಿಶುವಂ ಕಾಣದೇ ಗೊಳಾಡುತ್ತಾ, ಅಲ್ಲಲ್ಲಿ ಅಲೆಯುತ್ತಾ ನಿದ್ರಾಹಾ
ರಂಗಳಂ ತೊರೆದು, ದುಃಖಿಸುತ್ತಿರೆ,ಒಂದಾನೊಂದು ಕಾಲದೊಳಾಶಿಶು, ಭಾವಿಯೊ
ಳು ಹಾಕಲ್ಪಟ್ಟಿತೆಂದು ಕೇಳಿ ಅರಿತು ಆಭಾವಿಯೊಳೇ ತಾನೂ ಬಿದ್ದು ಮೃತಳಾದಳು.
ತನಗೆ ಅನ್ನಾಹಾರಂಗಳಿಗೆ ಅನುಕೂಲ ವಿಲ್ಲದುದೇ ಎಂದು ಹಂಬಲಿಸುತ್ತಾ ತಾನೂ
ಅದೇ ಭಾವಿಯೊಳು ಬಿದ್ದು ಮೃತನಾದನು, ಕಡೆಗೆ ಇದೇರೀತಿಯಿಂ ನನ್ನ ಪಿತನೂ
ಮೃತಿಯಾಗುವನೆಂದು ತಿಳಿಯುವೆನು. ತಂದೆ ತಾಯಿಗಳೇ ಮಕ್ಕಳಿಗೆ ದ್ರೋಹವುಂ
ಮಾಡಿದರೆ ಮಾಡುವದೇನು.

ಮಾತಾಯದಿವಿಷಂದದ್ಯಾತ್ಪಿತಾವಿಕ್ರಯತೇಸುತಂ । ರಾಜಾಹರತಿಸ
ರ್ವಸ್ವಂಕಾತತ್ರಪರಿವೇದನಾ ॥

ಮಕ್ಕಳಿಗೆ ತಾಯಿಯಾದವಳು ವಿಷವನ್ನಿಟ್ಟರೂ, ತಂದೆಯಾದವನುಮುಕ್ಕ
ಳಂ ಮಾರಿಕೊಂಡರೂ, ರಾಜ್ಯಾಧಿಪತಿಯು ಪ್ರಜೆಗಳ ಸರ್ವಸ್ವಮುಂ ಅಪಹರಿಸಿದ
ರೂ, ಈದುಃಖಗಳಂ ಯಾರಲ್ಲಿ ಹೇಳಿಕೊಳ್ಳಬೇಕು, ಎಂಬುವ ನ್ಯಾಯಾನುಸಾರವಾ
ಗಿ, ನನ್ನ ಜನ್ಮಾಂತರ ಪಾಪಬಲದಿಂದ ನಾನೀಪರಿಯಂತಾಳಿದೆನು, ಜೀಳಿಗಾ ಅವಸಾ
ನ ಕಾಲಕ್ಕೆ ಗರ್ಭವೇ ಹ್ಯಾಗೆ ಕಾರಣವಾಗಿ ನಾಶವಾಗುವದೋ ನನಗೂ ಅಂತೆಯೇ
ಈಗರ್ಭವು ಮೃತ್ಯುವಾದುದು, ಈಗ ಪ್ರಾಣತ್ಯಾಗಮುಂ ಮಾಡಿಕೊಳ್ಳೋಣವೆನೆ ಈ
ಗಾಢಾಂಧಕಾರದೊಳು ಯಾವದೊಂದು ಸಾಧನವೂ ಕಾಣಬಾರದು. ಭ್ರೂಣಹತ್ಯಾ
ದೋಷಕ್ಕೆ ಭಯಪಡದಿದ್ದರೂ ಪ್ರಾಣತ್ಯಾಗಕ್ಕೆ ಅನುಕೂಲವಾದಉಪಾಯ ಸಾಧನಂ
ದೊರೆಯಲಿಲ್ಲವೆಂದಾದರು ದುಃಖಿಸಲೇಕಾಗಿದೆ.

ಅರಿರ್ಮಿತುಂವಿಷಂಪಥ್ಯಂಅಥರ್ಮೋಧರ್ಮತಾಂವ್ರಜೇತ್ । ಅನುಕೂಲೇ
ಜಗನ್ನಾಥೇದವಿಪರೀತೇವಿಪರ್ಯಯಃ ॥

ಲೋಕೇಶನಾಗಿಯೂ, ಸರ್ವವ್ಯಾಪಿಯಾಗಿಯೂ ಇರುವ ಚಂದ್ರಚೂಡನ ಕೃಪಾಕಟಾಕ್ಷವಿದ್ದರೆ ಶತ್ರುಗಳು ಅಶಿವಮಿತ್ರರಾಗುತ್ತಾರೆ ವಿಷವೇ ಔಷಧವಾಗುವದು, ಅಧರ್ಮವಾದದ್ದಾದರೂ ಧರ್ಮದಂತೆ ಪರಿಣಮಿಸಿ ಕೈಸಾರುವದು. ಆ ಭಗವತ್ಕಟಾಕ್ಷವಿಲ್ಲದಿರುವಾಗಲೋ ಈಮೂರುಭಾಗಗಳೂ ವ್ಯತ್ಯಾಸವಾಗುವವು ಅಂದರೆ, ಅಮೃತವು ವಿಷವಾಗಿ ಕೊಲ್ಲುವದು, ಮಿತ್ರನು ಶತ್ರುವಾಗಿ ನಾಶಕನಾಗುವನು, ಧರ್ಮವೇ ಪಾಪರೂಪವಾಗಿ ಅವನಿಗೆ ಕೇಡುಮಾಡುವದು.ನಾನು ದೈವಸಹಾಯವಿಲ್ಲದ ವಳಾಗಿರುವ ಕಾರಣ ಪ್ರಾಣತ್ಯಾಗಕ್ಕೂ ದಾರಿಹೋರಪೆ, ಸಂಕಟಗೊಳಿಸುವದು. ಈಗ ನನ್ನ ಪ್ರಯತ್ನಗಳೇನೇನೂ ನಡಿಯಲಾರದು, ಎಂದು ಹಂಬಲಿಸುತ್ತಾ, ಕಷ್ಟಕಾಲಕ್ಕೆ ದೇಹಬಾಂಧವರು ಒದಗುತ್ತಾರೆಂಬ ಯೋಚನೆಯುಂ ಮಾಡಲಾಗದೆಂದು ನಾನೇ ದೃಷ್ಟಾಂತವಾಗಿರುವೆನೆಂಬದಾಗಿ ಸಾರುವೆನು.

ನೈವಮಾತಾನಚಪಿತಾನಾಸ್ತಿಬಂಧುಸ್ಸಹೋದರಃ । ವಿಪತ್ಸುಸಂಕಟೇ
ಪ್ರಾಪ್ತೇದೈವಮೇವಾಸರಾಗತಿಃ ॥

ವಿಪತ್ಕಾಲಗಳೊದಗಿದಾಗಲು, ಸಂಕಟಪ್ರಾಪ್ತಿಯಾದಾಗಲೂ, ದೇವರೇ ಕಟಾಕ್ಷಿಸಿ ಪರಿಹರಿಸಬೇಕೇ ಹೊರತು ತಾಯಿಯೂ ತಂದೆಯೂ ಒಡಹುಟ್ಟಿದವರೂ ಬಂಧುಗಳೂ ಯಾರೂ ಪರಿಹರಿಸಲಾರರು. ಎಂಬನ್ಯಾಯವೂ ನನ್ನ ಪಾಲಿಗೆ ಇಲ್ಲದೇ ಹೋದುದಲ್ಲಾ ಹಾ ನನ್ನ ದುರಾದೃಷ್ಟವೇ ನೀನೆಂತು ಬಲಶಾಲಿಯಾಗಿರುವೇ ! ಎಂದು ಘಟ್ಟಿಯಾಗಿ ಪ್ರಲಾಪಿಸುತ್ತಾ ತನ್ನ ವ್ಯಥಾಸಾಗರಕ್ಕೆ ಪಾರವನ್ನೇ ಕಾಣದೆ ಅಂತೆಯೇ ಮೂರ್ಛಿತಳಾಗಿ ಧರೆಯೊರಗಿದಳು, ಎಂದು ಹೇಳುತ್ತಾ ಪುತ್ಥಳಿಕೆಯು ಸ್ವಾಮಿನಾ ವಿಕ್ರಮಾರ್ಕ ಮುನೀಂದ್ರನೇ ಎರಡನೇ, ಯಾಮವಾದರೋ ಕಳೆದು ಹೋದುದು, ಆಜ್ಞೆಯಾದರೆ ವಿಶ್ರಾಂತಿ ಸುಖವಂತಾಳುವೆನೆನೆ ಹಾಗೆಯೇ ಮಾಡೆಂದು ವಿಕ್ರಮಾದಿತ್ಯಂ ಆಜ್ಞೆಯಂಕೊಡಲು ರಾಜನಂ ನಮಸ್ಕರಿಸಿ ಮೌನದೊಳಿರ್ದುದೆಂಬಲ್ಲಿಗೆ ಕರ್ನಾಟಕವಾಷಾವಚನ ರಜಿತ ಸೌಂದರ್ಯಾದ್ಭುತ ರುರೀಚಿತ್ರ ಬೃಹತ್ಕಥಾಮಂಜರಿಯೋಳ್ ಲೀಲಾವತೀ ಗರ್ವಭಂಗವೆಂಬ ಎರಡನೇ ಯಾವುದ ಕಥೆಯು ಸಂಪೂರ್ಣವಾದುದು.

ತದನಂತರವಾ ವಿಕ್ರಮಾರ್ಕ ಭೂದೇವೇಂದ್ರಂ ಅಲ್ಲಿರ್ದ ದೀಪದಗೊಂಬೆಯಂ ಕುರಿತು, ಹೇ ಪುತ್ಥಳಿಕೆಯೇ ! ನಿದ್ರೆಯಾದರೋ ಬಾರದು ಈ ಲೀಲಾವತಿಯು ಮೌನವುಂತಾಳಿಹಳು ಹೊತ್ತಾದರೋ ಕಳೆಯಲಾಗದಾಗಿ ನೀನೊಂದು ಚಿತ್ರವಾದ ಕಥೆಯುಂ ಹೇಳಿಂದಾಜ್ಞಾಪಿಸೆ, ಆದೀಪಿಕಾ ಪುತ್ಥಳಿಯು, ರಾಜನೆ ಬಳಿಯನ್ಯೈದಿ ಮುಕುಳಿತ ಕರಾಬ್ಜಳಾಗಿ ಸ್ವಾಮಿನಾ ಭೂಮೀಂದ್ರರೇ ಲಾಲಿಸಿ ? ಅವಂತೀದೇಶದಲ್ಲಿ ಕಾಲಚಂಡನೆಂಬೋರ್ವ ವ್ಯಾಧನಿರ್ದನೆನೆ ಆ ಲೀಲಾವತಿಯದಂ ಕೇಳುತ ಕಾಡುಪಾಲಾದಾ

ನಂದಿನಿಯು ಅವಸ್ಥೆಯೇನಾಮದೋ ಎಂದು ಕಳವಳಿಸುತ್ತಾ ಅದಂ ಸಾಂಗವಾಗಿ ತಿಳಿಯಲೋಸುಗ,ಹೇ ಪುತ್ಥಲೀ ನಂದಿನಿಯಗತಿಯು ಕಡೆಗೇನಾಯಿತೆಂದೋ ಅದಂ ಪೂರ್ತಿಯಾಗಿ ಪೇಳುವಳಾಗೆನಲು ನನಗೆ ಒಡೆಯನಾಗಿರುವ ವಿಕ್ರಮಾರ್ಕರಾಯನಂ ಪ್ರಾರ್ಥಿಸಿ ಆತನಿಂದಾಜ್ಞೆಯ ಕೊಡಿಸಿದರೆ ಆಗ್ಯೆ ಹೇಳುವೆ. ನೀನೆನಗೆ ಒಡತಿಯಲ್ಲವೆನೆ, ಕಥೆಯಂ ಕೇಳುವದರೊಳತ್ಯಾಸಕ್ತಳಾಗಿಯುಂ, ಕಿಂಪುರುಷಂದಂಯೋಚಿಸದೆ, ಆ ವಿಕ್ರಮಾದಿತ್ಯನಂ ಪ್ರಾರ್ಥಿಸಲು ಕಥೆಯಂ ಪೂರ್ತಿಸೆಂದಾ ಗೊಂಬಿಗಾತನಾಜ್ಞೆಯನಿತ್ತಂ.

ಮೂರನೇ ಯಾಮದೊಳು ದೀಪದಗೊಂಬೆ ಹೇಳುವ ಕಥೆ.

ಎಲೈ ಮಹಾರಾಜನೇ ಲಾಲಿಸು! ಘೋರಾರಣ್ಯ ಮಧ್ಯ ಭಾಗದೊಳು ಸುಟ್ಟಿಯಾಗಿ ಪ್ರಲಾಪಿಸುತ್ತಿದ್ದ ನಂದಿನಿಯು ಸುಕುಮಾರಗಾತ್ರಳಾದ್ದರಿಂದ ಬಳಲಿ ಕಂಗೆಟ್ಟು ಅಂತೆಯೇ ಮೂರ್ಛಿತಳಾಗಿದ್ದವಳು, ಆರಾತ್ರಿಯು ನಾಲ್ಕನೇ ಝಾಮವು ತಲೆದೋರಿ ಉದಯ ಸೂಚಕವಾದ ಮಂದಮಾರುತವು ಮೆಲ್ಲನೆ ಬೀಸುತ್ತಾಬರಲು ಹಾಗೆಯೇ ಮೂರ್ಛೆಯಂ ತಿಳಿದು ಕುಳಿತುಕೊಂಡು, ಹಾ ದೈವವೇ ! ನನ್ನವಸ್ಥೆ ಇಂತಾಯಿತೇ ಎಂದು ಹಂಬಲಿಸುತ್ತಿರುವಾಗಳ್ ಸವಿಾಪದೊಳಿದ್ದ ಅಶ್ವತ್ಥವೃಕ್ಷದೊಳು ವಾಸವಮಾಡಿಕೊಂಡಿರುವ ಶಾರಿಕಾಯುಗ್ಮದೊಳು ಸ್ತ್ರೀಪಕ್ಷಿಯು ಪುರುಷಪಕ್ಷಿಯಂ ಕುರಿತು, ಎಲೈ ಕಾಂತನೇ! ಆ ಬಳಿಯೊಳು ನೆಲದಲ್ಲಿ ಬಿದ್ದಿರುವ ಸ್ತ್ರೀಯಗತಿ ಎಂತಾಗುವದೋ ಕಾಣೆನಲಾ ಎಂದುಸುರಲಾ ಗಂಡು ಹಕ್ಕಿಯು ಪ್ರಾಣಕಾಂತೆಯೇ ಕೇಳು, ಈಕೆಯು ಗರ್ಭಿಣಿಯಾಗಿರುವಳು ಕೆಲವು ಕಾಲಕ್ಕೆ ಗಂಡು ಮಗುವಂ ಪೆತ್ತು ನಂತರ ತನ್ನ ಪತಿಯಂ ಶೀಘ್ರಿ ಸಕಲ ಭೋಗಂಗಳಂ ಅನುಭವಿಸುತ್ತಾ ಬಾಳುವಳು, ಲೋಕದೊಳು ದೈವಗತಿಯು ಅತಿ ವಿಚಿತ್ರವಾಗಿಹುದು, ಅದು ತಿಳಿಯಲು ಯಾರಿಗೂ ಅಸಾಧ್ಯವಾಗಿಹುದು.

ಕಾಂತಂಪ್ರಾಹಕಪೋತಿ ಕಾಕುಲಧಿಯಾನಾಥಾಂತ್ಯ ಕಾಲೋದ್ಯಮಾ
ವ್ಯಾಧೋದ್ಯೋಧೃತಚಾಪಸಂಯುತಕರಾಶ್ಯೇನೋಪರಿಪ್ರಾಪ್ತಿತಿ ॥ ವಿ
ವಂಸತ್ಯಹಿ ನಾಸದಷ್ಟಶಿಷುಣಾ ಶ್ಯೇಪಿಶೇನಾಹತಸ್ತೂರ್ಣಂ । ತೌತು
ಯಮಾಲಯಂ ಪ್ರತಿಗೌತೌ, ದೈವೀವಿಚಿತ್ರಾಗತಿಃ ॥

ಈ ಶ್ಲೋಕಾನುಸಾರವಾಗಿ ಒಂದು ಕಥೆಯಂ ಪೇಳುವೆನು ಕೇಳು, ಒಂದಾನೊಂದು ಕಾಡಿನೊಳೊಂದು ಪೇರ್ಮರದಮೇಲಿರುವ ಶಾರಿಕಾಳಿಂಗಳು ಕುಳಿತು ಮಾತಾಡಿಕೊಳ್ಳುವವು. ಏನೆಂದರೆ—ಸ್ತ್ರೀಪಕ್ಷಿಯು ಪುರುಷಪಕ್ಷಿಯಂ ಕುರಿತು, ಎಲೈ ಪ್ರಾಣಕಾಂತನೇ ! ಇತ್ತನೋಡು ನಮಗೀರ್ವರಿಗೂ ಮರಣಕಾಲಂ ಅತ್ಯಾಸನ್ನವಾ

ಗಿಹುದು. ಧನುರ್ಧಾರಿಯಾದ ಶಬರನು ಬಿಲ್ಲನೊಳಂಬೇರಿಸಿ ನಮ್ಮಂ ಗುರಿಗೈದು ಬರುತ್ತಿರುವಂ ಇದಂ ತಪ್ಪಿಸಿಕೊಂಡು ಹಾರಿಹೋಗೋಣವಂದರೆ ಗಿಡಗನು ಮೇಲ್ಬಾಗದೊಳು ಸುತ್ತಾಡುತ್ತಾ ಸವಯವಂ ಕಾದಿರುವಂ. ಮುಂದೇನು ಗತಿ ಎಂದು ಚಿಂತಾಶೋಕದಿಂದ ನುಡಿಯುತ್ತಿರುವಾಗ ಈ ಪಕ್ಷಿಗಳಂ ಗುರಿಗೈದು ತದ್ಪೈಕಾಯತ್ತ ಚಿತ್ತನಾಗಿ ಕೆಳಗೆ ನೋಡದೇ ಬರುತ್ತಿದ್ದಾ ವ್ಯಾಧನ ಕಾಲಂ ಇವನಿಂ ತುಳಿತಮಾಂತ ಬಿಲಸ್ಥಮಾದ ಕೃಷ್ಣಸರ್ಪಂ ಕುಟುಕಲು, ಆ ಬಾಧೆಯಿಂ ಚಲನಮಾದ ತೀಕ್ಷ್ಣಮು ಳ್ಳಬಾಣವು ಹಾರಿಬಂದು ಆಕಾಶದೊಳು ತಿರುಗುತಿರ್ದ ಗಿಡಗನಿಗೆ ತಾಕಿ ಮೃತಿಯಂ ತಾಳಿ ಬಿದ್ದುದು. ಆ ವ್ಯಾಧಂ ಕಚ್ಚಲ್ಪಟ್ಟ ಹಾವಿನವಿಷಂ ತಲೆಗೇರಲು, ಸ್ಖಲಿತತಪ್ಪಿ ಧೊಪ್ಪನೇ ನೆಲದೊಳು ಬಿದ್ದು ಮೃತನಾದನು. ವೃಕ್ಷದೊಳು ಕುಳಿತು ಭೀತಿಯ ನ್ನಾಂತು ಚಿಂತಿಸುತ್ತಾ ಇದಾರ್ ಖಗಯುಗ್ಮಂ ಸಂತೋಷಮುಂ ತಾಳಿ, ಸ್ವೇಚ್ಛಾ ವಿಹಾರಾರ್ಥಮಾಗಿ ಹೊರಟು ಹೋದವು. ಹೀಗೆ ದೈವಗತಿಯು ಬಹಳ ವಿಚಿತ್ರಮಾ ಗಿರುವದ್ದರಿಂದ ಯಾರಿಗೂ ತಿಳಿಯಲಾಗದು, ಎಂದುತ್ತರಮಂ ಪೇಳುತ್ತಿರಲದಂ ನಂದಿನಿಯು, ಈ ಪಕ್ಷಿಯ ಮಾತಿಗನುಸಾರಮಾಗಿಯೇ ಇಹುದು ದೈವಗತಿಯು. ಆದುದರಿಂ ನಾಂ ಪ್ರಾಣತ್ಯಾಗಮಾಡಿಕೊಳ್ಳದೇ ಜೀವಿಸಿ ನೋಡುವೆನೆಂದು ಯೋಚಿಸಿ, ಸೂರ್ಯೋದಯಮಂ ನಿರೀಕ್ಷಿಸುತ್ತಾ. ನಾಂ ಮೊದಲೇ ರೂಪವತಿಯು ಈ ದಿವ್ಯಾಂ ಬರಾಭರಣ ಭೂಷಿತಳಾಗಿ ವಿಕಾಂಗಿಯಾಗಿರೆ, ಮಾರ್ಗಸ್ಥರಾದ ಕಾಮುಕರೆನ್ನಂ ನೋ ಡಿದರೆ ಬಲಾತ್ಕರಿಸದೇ ಬಿಡಲಾರರು. ನಾಂ ಅಬಲೆಯಾದ್ದರಿಂದ ಅವರ ಕೈಸಾರ ಜೇಕಾಗುವದು, ಇದರಿಂದ ಪತಿವ್ರತಾ ಭಂಗಂ ಸಂಭವಿಸುವದೇ ನಿಜಮೆಂದರಿತು, ಅಂದಳದೊಳು ಹಾಸಿದ್ದ ವಸ್ತ್ರಮುಂ ತೆಗದು, ಮೈ ಕೈಗಳಿಗೆಲ್ಲಾ ಚಿಂಗಿಚಿಂದಿಗ ಳಾಗಿ ಮಾಡಿ ಸುತ್ತಿಕೊಂಡು, ಭೂಷಣಾಂಬರಾಲಂಕಾರಂ ಕಾಣಿಸದಂತೆ ಮಾಡಿ, ಬಳ್ಳಿಗಳ ಸೊಪ್ಪಂ ತರದು, ರಸವುಂ ತೆಗದು ಮೈಮೇಲೆ ಲೇಪಿಸಿಕೊಂಡು, ಮಿಕ್ಕಾ ದುದಂ ದೊಟ್ಟೆಗಟ್ಟಿ ತಲೆಯಮೇಲೆ ಹೊತ್ತು ಕೈಲ ದಂಡವುಂ ಪಿಡಿದು, ರೋಗಿ ಯಂತೆ ನಟಿಸುತ್ತಾ ಹೊರಟು, ಬಹುದೂರಂ ಬಂದು, ಮಧ್ಯಾನ್ಹಮಾಗೆ ಸರೋ ವರಮುಂ ಸಾರಿ, ಅಲ್ಲಂ ತನ್ನ ಕ್ಷುದ್ಬಾಧೆಯುಂ ತೀರಿಸಿಕೊಂಡು ಅಲ್ಲಂ ಹೊರಟು ಸೂರ್ಯಾಸ್ತವಾನಕ್ಕೆ ಒಂದು ರಾಜಮಾರ್ಗದೊಳು ವೃಕ್ಷಚ್ಛಾಯೆಯನ್ನಾಶ್ರಯಿಸಿ ಕುಳಿತುಕೊಂಡಿರೆ, ಬ್ರಾಹ್ಮಣಪತ್ನಿಯಾದ ವೃದ್ಧ ಸುವಾಸಿನಿಯು ಮಾರ್ಗವಶಾತ್ ಅಬಲೆಗೈತಂದು ಈ ನಂದಿನಿಯಂ ಕಂಡು ಕನಿಕರದಿಂ ಎಲೌ ತಾಯಿಯೇ ನೀನಾರು ! ನಿನ್ನ ದೇಹ ತಾಪತ್ರಯವೇನು ? ನಿನ್ನ ಮುಖವಂ ನೋಡಿದರೆ ರಾಜಾಂಗನೆಯಂತೆ ಕಾಂಬೆ ಎನೆ, ಆ ನಂದಿನಿಯು ಎಲೈ ವೃದ್ಧಸುವಾಸಿನಿಯೇ ಲಾಲಿಸು ! ನಾವು ದಂಪತಿಗಳೀರ್ವರೂ ವಾನಪ್ರಸ್ಥಾಶ್ರಮದಲ್ಲಿರುವೆವು. ನನಗೆ ನಾಲ್ಕಾರು ತಿಂಗಳಿಂ ಉದರವೃದ್ಧಿಯುಂಟಾಗಿ, ಆ ಬಾಧೆಯಂ ತಾಳಲಾರದೇ ಹಿಂದಾದೆನು. ಪತಿಯು

ಮುಂದರಿದು ಹೋದ್ದರಿಂದ ಹುಡುಕುತ್ತಾ ಬಂದೆನು. ನೀಂ ನೋಡಿದಯಾಳುವಾ ಗಿರುವಂತೆ ತೋರುವಂತೆ ತೋರುತ್ತದೆ, ನಾಲ್ಕಾರು ದಿನಗಳು ನನ್ನಂ ಮನೆಯೊಳಿ ಟ್ಟುಕೊಂಡು ಪೋಷಿಸಿದರೆ, ಚಿಕಿತ್ಸರಲ್ಲಿ ಔಷಧಸೇವೆಯಂ ಮಾಡಿಕೊಳ್ಳುವೆನು. ನನಗೆ ಮಾಡಿದ ಉಪಕಾರಕ್ಕಾಗಿ ನನ್ನಲ್ಲಿರುವೀ ಯಾಭರಣವುಂ ಕೊಡುವೆನೆಂದು ಒಂದು ಮುತ್ತಿನ ಸರವುಂ ತೆಗದು ಆ ಮುತ್ತೈದೆಯ ಕೈಗೆ ಕೊಡಲು, ರಿಕ್ಷಾವ ಸ್ಥೆಯಲ್ಲಿರುವಳಾದ ಕಾರಣ ಅದರೊಳಾಸೆಪಟ್ಟು ಕೈಯ್ಯೊಳ್ಳಾಂತು, ಆ ನಂದಿನಿಯುಂ ಒಡಗೊಂಡು ತನ್ನ ಮನೆಯುಂ ಸಾರಿ, ತನ್ನ ಕಾಂತನಾದ ವೃದ್ಧಬ್ರಾಹ್ಮಣನಿಗೆ ತೋರಿಸಿ, ಸಮಾಧಾನರಾಗಿ ಈರ್ವರೂ ಆ ರಾಜಪುತ್ರಿಯುಂ ಮನ್ನಿಸುತ್ತಾ ಮನೆಯೊಳಿರಿಸಿಕೊಂಡಿದ್ದರು.

ಇತ್ತಲಾ ಸೋಮಶೇಖರರಾಯನ ಧರ್ಮಾಂಗನೆಯು ಪುತ್ರೀವಿಯೋಗ ದುಃಖದಿಂದ ನಿದ್ರಾಹಾರಂಗಳಂ ತೊರೆದು, ಪಗಲೂ ಇರಳೂ ಗೋಳಾಡುತ್ತಾ ಮಲಗಿದ ವಳು ಮೇಲಕ್ಕೇಳದೇ ಶೋಕಿಸುತ್ತಿರುವಾಗ ಕಟ್ಟಿಯುಂತಾ ಗಂಧರ್ವ ಕಾಂತೆಯರು ನಾಗರಾಜನಂ ಒಡಗೊಂಡು ಬಂದು ನಂದಿನಿಯು ಅಂತಃಪುರದ ಮೇಲೆಬಿದ್ದು ತಮ್ಮ ದೇವರ ಸೇವಾರ್ಥಮಾಗಿ ತಾವು ಪೋಗೆ, ಈ ನಾಗರಾಜಂ ತನ್ನ ಕಾಂತೆಯು ಶಯ್ಯಾಗೃಹಮಂ ಪೊಕ್ಕು, ಕಾಂತಾರಹಿತವಾದಂತಃಪುರಮುಂ ಕಂಡು, ಹುಡುಕಿ ಕಾಣದೇ ವಿನಾದಳೋ ಎಂದು ಶೋಕಿಸುತ್ತಾ ಕುಳಿತು, ಕಾಲವುಂ ಕಳೆಯುತ್ತಿರುವಾಗ್ಯೆ ಎಂದಿನೊಳಾ ಗಂಧರ್ವಾಂಗನೆಯರ್ಕ್ಕಳಂದು ಈ ರಾಜಪುತ್ರನಂ ಕರೆಯಲು ಹೊರಗೆಬಂದು ಈ ರಾಜನಂದನನೆ ಮುಖರಸಮುಂ ಕಂಡು, ಇದೇನ್ಬೆ ನಿನ್ನೀಮುಖರಸಂ ನೊಂದಿಹುದು. ಎಂದಿನೊಲಲ್ಲಂ ಕಾರಣವೀನೆನೆ, ತನ್ನ ಪತ್ನಿಯು ಈಯಂತಃಪುರದೊಳಿಲ್ಲಂ, ವಿನಾದಳೆಂಬುದಂ ಕಾಣದೇ ಯೊಳ್ಳಿಸುತ್ತಿರುವೆನೆನಲು, ಆ ವಿಭುಮಂದಿಗಳೊಳಿರ್ವಳು ನಮಗೇಕೆ ಈ ತಾಪತ್ರಯಂ ಮುಂದಿದರಿಂದೇ ನಾದರೂ ಕುಂದಕ ಬರುವದೋ ವಿನೋ ಈ ರಾಜನಿಂ ಸುಖಿಸಿದ್ದೀವರಿಗೇ ಸಾಕು, ಇನ್ನೀತಂ ತನ್ನ ರಾಷ್ಟ್ರದೊಳಿದ್ದು ಸುಖಿಸಲಿ ಎನಲು, ಅದಕ್ಕೆಲ್ಲರೂ ಳಿಂಗೀಕರಿಸಿ, ರಾಜನಂ ಸನಿಾಪಕ್ಕೆ ಕರದು, ಎಲ್ಬೆ ಸುಂದರಾಂಗನೇ ! ನೀನಿನ್ನು ಸಕಲ ಭೋಗ ಭಾಗ್ಯಂಗಳಂ ತಾಳಿ ಸುಖಿಯಾಗಿರೆಂದಾಶೀರ್ವಾದಮಂ ಮಾಡಿ, ತಮ್ಮ ಲೋಕಮುಂ ಸಾರಿದರು.

ಇತ್ತಲೀ ನಾಗರಾಜಂ ಗಂಧರ್ವಾಂಗನಾವಿಯೋಗ ದುಃಖದಿಂದಲೂ ದುಃಖಿತನಾಗಿ ತಾಳಲಾರದೆ, ಕಾಂತಾಮಣಿ ಸುಂದ ಹಂಸತೂಲಿಕಾತಲ್ಪಗತನಾಗಿ ಮಲಗಿಕೊಳ್ಳಲು, ಅಂತೆಯೇ ನಿದ್ರಾಂಗನಾವಶನಾದಂ. ಆ ದಿನದ ಸೂರ್ಯೋದಯ ಸಮಯದೊಳಾ ಅಂತಃಪುರದ ದಾಸಿಯರು ನಂದಿನೀ ಶಯ್ಯಾಗಾರದೊಳು ಶ್ವಾಸ ಶಬ್ದಮುಂ ಕೇಳಿ ಬಳಿಯಂ ಸಾರಿ, ಕಿಟಕಿಯೊಳು ನೋಡಲು, ನಂದಿನಿಯ ಮುಂಚ

ದೊಳು ಮಲಗಿ ನಿದ್ದೆಗೈಯ್ಯುವ ಪುರುಷನಂ ನೋಡಿ, ಗಾಬರಿಗೊಂಡು ಭರದಿಂ ಬಂದುರಾಜ ಮಹಿಷಿಯೊಳರಿಕೆಯುಂ ಮಾಡೆ, ಆಕೆಯುಂ ಭಯಗೊಂಡವಳಾಗಿ ಥಟ್ಟನೆ ಬಂದು ನೋಡಿ, ಚಿಂತಿಸುತ್ತಾ ತನ್ನ ಪ್ರಾಣಕಾಂತನೆಡೆಗೈದಿ, ಈ ಸುದ್ದಿಯುಂ ತಿಳುಪಲು, ಆ ನೋವುಶೇಖರರಾಯಂ ಕೇಳುತ ಖತಿಗೊಂಡು, ವರೆಯಿಂ ಕಿತ್ತು ಕತ್ತಿಯಂ ಕೈಯ್ಯೊಳಾಂತು ಮಂತ್ರಿ ಪುರೋಹಿತರಂ ಜೊತೆಗೊಂಡು ಬಹು ವೇಗವಾಗಿ ಹೊರಟು, ಒಳಗಿರುವ ದುರುಳನಂ ತರಿದು ಬಿಸುಡುವೆನೆಂದು ಬರುತ್ತಿರುವ ರಾಯನಂ ನೋಡಿ, ಓಹೋ ಈ ಮೂರ್ಖನು ವಿಚಾರಹೀನನಾದ್ದರಿಂದ ಕಾರ್ಯಮುಂ ಕೊನೆಸಾಗಿಸುವನೆಂದರಿತು, ಎಲ್ಲೆ ಮಹಾರಾಜನೇ ಆತುರಪಡಲಾಗದು ! ಮೊದಲು ಆತುರಗೊಂಡುದಕ್ಕೆ ಪುತ್ರಿಶೋಕಂ ಇನ್ನೂ ಬಿಡಲಿಲ್ಲಂ. ಹೀಗೆ ವಿಚಾರಹೀನರಾಗಿ ದುಡುಕಿ, ನಂತರ ಪರಿತಪ್ತರಾದವರನೇಕರಿಹರು. ಇದಕ್ಕಾಗಿ ಒಂದಿತಿಹಾಸಮುಂ ಸೇಳುವೆನೆಂದು ಒಂದು ಕಥೆಯುಂ ಹೇಳಲುಸಕ್ರಮಿಸಿದಂ.

ಮಂತ್ರಿಯು ಧೂರೆಗೆ ದೃಷ್ಟಾಂತರವಾಗಿ ಹೇಳುವಕಥೆ.

ಶ್ವೇತದ್ವೀಪದೊಳು ನೀತಿಪಾರಂಗನೆಂಬ ಓರ್ವ ಬೇರಿಗನಿರ್ದಂ. ಆತಂ ರತ್ನ ವ್ಯಾಪಾರಮುಂ ಮಾಡುತ್ತಾ ವಿಶೇಷ ಲಾಭಾರ್ಜನೆಯುಂ ಮಾಡಿ, ಅನೇಕ ಲಕ್ಷಾಧಿಕಾರಿಯಾಗಿ ಸಕಲ ಸದ್ಗುಣ ಸಂಪನ್ನೆಯಾದ ಲೋಕೈಕ ಸುಂದರಿಯಾದ ಕಾಂತೆಯನ್ನೊಡಗೂಡಿ, ಸಕಲ ಭೋಗಂಗಳಂ ಹೊಂದುತ್ತಾ, ವಂಶೋದ್ಧಾರಕನಾದ ಪುತ್ರನಂ ಪಡೆದು, ಸಮಸ್ತಭೋಗಂಗಳಂ ಹೊಂದುತ್ತಾ ಇರ್ದಂ. ಹೀಗಿರುತ್ತಾ ಇರಲೊಂದಾನೊಂದು ಕಾಲದೊಳು ಕಪ್ಪದಂ ಹತ್ತಿ ರತ್ನ ವ್ಯಾಪಾರಾರ್ಥವಾಗಿ ಮತ್ತೊಂದು ದ್ವೀಪಕ್ಕೆ ಹೋಗಿ, ಅಲ್ಲಂ ಸರ್ವೋತ್ತುಮಂಗಳಾದ ರತ್ನಂಗಳಂ ಕೊಂಡುಕೊಂಡವನಾಗಿ ಹಿಂತಿರುಗಿ ಬರುತ್ತಿರುವಲ್ಲಿ ಒರ್ವನ್ಮೋಜ್ಜ್ವರ್ಯಂ ಈ ಬೇರಿಗಳಂ ಕುರಿತು, ಎಲ್ಲೆ ಪುರುಷಶ್ರೇಷ್ಠನೇ ಲಾಲಿಸು ! ನಿನಗೊಂದು ಸಹಾಯಮುಂ ಮಾಡಬೇಕೆಂದಾಲೋಚಿಸಿರುವೆನು, ಅದೇನನ್ನುವಿಯೋ ನನ್ನೊಳು ಸರ್ವೋತ್ತಮವಾದ ಎರಡು ಕುರ್ಕುರಂಗಳಿಹವು. ಇವುಗಳ ಗುಣಾತಿಶಯಂಗಳಂ ಶಕ್ತಿ ಸಾಹಸೆಂಗಳಂ ಇನಿತೆಂದು ಪೇಳಲಾರೆನು. ನೀನು ವಿಶೇಷ ದ್ರವ್ಯವಂತನಾಗಿಯೂ ಏಕಾಂಗಿಯಾಗಿ ದೂರದೇಶಂಗಳಂ ಸಂಚರಿಸುವವನಾದ್ದರಿಂದ ಇವುಗಳಲ್ಲೊಂದು ನಿನಗೆ ಕೊಡಬೇಕೆಂದೆಣಿಸಿ ಇಹೆನು. ಈ ನಾಯಿಯೊಂದು ಬಳಿಯೊಳಿರ್ದಾದೊಡೆ, ನೂರಾಳಿದ್ದಂತೆ ಧೈರ್ಯವಾಗಿಹುದು. ತನ್ನ ಸ್ವಾಮಿಯಂ ಪರಮಭಕ್ತಿಯೊಳು ಅನುಸರಿಸಿರುವದು, ತಕ್ಕ ಬೆಲೆಯುಂ ಕೊಡುವಿಯಾದರೆ ಕೊಡುವೆನು, ಕೊಂಡೊಯ್ದು ಕೆಲಕಾಲಂ ಪರಿಕಿಸಿದೊಡೆ, ಇವರಗುಣಾತಿಶಯಂಗಳು ಕಾಣಬ

ರುವದೆನಲಾ, ವ್ಯಾಪಾರಿಯದಂ ಕೇಳಿ,ಅಚ್ಚರಿಗೊಂಡು, ಹಾಗಿರುವದೇ ಎಂದು ಅ
ದರ ಬೆಲೆಯಂ ಕೇಳಿ, ಅವನ ಮಾತಿನಂತೆ ಮೌಲ್ಯಮಂಕೊಟ್ಟು, ಆನಾಯಿಗಳೊ
ಳೊಂದಂ ಕೊಂಡು ಯಥಾಪ್ರಕಾರಮಾಗಿ ಹಡಗನ್ನೇರಿ, ತನ್ನ ದೇಶಕ್ಕೆ ಬಂದಿ, ತನ್ನ
ಮನೆಯಂ ಸಾರಿ, ಆ ಕುರ್ಕುರನಂ ಕಾಲಕಾಲಕ್ಕೆ ಅನ್ನಾದಿಗಳಿಂ ಕೊಡುತ್ತಾ, ತಾ
ನ್ಮೆದುವ ಕಡೆಯೊಳು ಜೊತೆಯಾಗಿ ಕರದೊಯ್ಯುತ್ತಾ ಹೀಗೆಯೇ ಬಹುಕಾಲಂ
ಕಾಪಾಡುತ್ತಿರ್ದಂ. ಹೀಗಿರುತ್ತಾ ಮಣಿಪುರಾಧಿಪತಿಯಾದ ಖಡ್ಗವರನೆಂಬ ರಾಜಂ
ಅನಘ್ಯ. ರತ್ನಖಚಿತವಾದ ಆ ಭರಣಂಗಳಂ ತರುವದಾಗಿ, ಈ ವ್ಯಾಪಾರಿಗೆ ಹೇ
ಳಿಕಳುಹಲು, ಅನೇಕ ವಿಧಂಗಳಿಂದ ಅಮೌಲ್ಯ ದಿವ್ಯರತ್ನಾಭರಣಂಗಳನೇಕಮುಂ
ಕೊಂಡು, ಮಿತಪರಿವಾರಾವೃತನಾಗಿ ಈ ನಾಯಿಯುಂ ಒಡಗೊಂಡು ಪೋಗಿ,
ರಾಯುಂ ಬೈಸಿದಾಭರಣಂಗಳಂ ಕೊಟ್ಟು, ಅದರ ಮೌಲ್ಯಮಂ ಭಂಡಿಗಳಲ್ಲಿ ಹೇರಿ
ಸಿಕೊಂಡವನಾಗಿ ಮಿಕ್ಕ ರತ್ನಾಭರಣಂಗಳಂ ಕೆರದಾನೊಂದು ಪೆಟ್ಟಿಗೆಯೊಳಿಟ್ಟು, ಭ
ದ್ರಪಡಿಸಿ, ತನ್ನ ಸಂಗಡಲೇ ತೆಗದುಕೊಂಡು,ಆ ಪುರದಿಂ ಹೊರಟು, ಒಂದೆರಡು
ದಿನಗಳ ಪ್ರಯಾಣಂ ಬಂದು ದಾರಿಯೊಳೊಂದು ದಿವ್ಯವಾದ ವನಮುಂ ಕಂಡು, ಮ
ಧ್ಯಾಹ್ನಕಾಲಂ ಸನಿಹಾಪಿಸುತ್ತಾ, ಬರಲಾಬಳಿಯುಣ ಮುಂಟಪದೊಳು ಬಿಡಾರಮುಂ
ಗೈದು, ಸ್ನಾನಭೋಜನಾದಿಗಳಂ ಮಾಡಿ, ಮಾರ್ಗಾಯಾಸಮುಂ ಪರಿಹರಿಸಿಲೋ
ಸುಗ ಭೇರಿಗಂ ನಿದ್ರಾಲೋಲನಾದಂ ಆ ಕುರ್ಕುರಂ ಆಹಾರಮುಂ ಗೈದು ತನ್ನ ಯ
ಜಮಾನನ ಕಾಲ್ಗೆ ಶೆಯೊಳು ಮಲಗಿ ನಿದ್ರೆಯುಂ ತಾಳಿದಂತೆ ಕಣ್ಮುಚ್ಚಿ, ಆರು ಮ
ರಿಯದಂತೆ, ಕಣ್ಣೆರದು ಸಾವಾನುಗಳೆಲ್ಲಮಂ ನೋಡುತ್ತಾ ಅತ್ಯಂತ ಜಾಗರೂ
ಕತೆಯಿಂದ ಕಾಯುತ್ತಾಯಿರ್ದುದು, ಹೀಗಿರಲಾಗಿ ಆ ವ್ಯಾಪಾರಿಯು ಸೇವಕರೊ
ಳೋರ್ವಂ ಬಹುದಿನವಾಗಿ ವಿಶೇಷ ಪದಾರ್ಥಮುಂ ಕೊಂಮು ತನ್ನ ಯಜಮಾನನ
ರಿಯದಂತೆ, ಅಪಹರಿಸಿ ದೂರು ಅನ್ನರೊಳು ಹೊರಿಸಬೇಕೆಂದು, ದುರಾಲೋಚನೆ
ಯುಂ ಮಾಡುತ್ತಾ, ಸಮಯು ನಿರೀಕ್ಷಣೆಯೊಳಿರಲು ಈ ಕಾಲಂ ಅನುಕೂಲಮಾಗಿ
ಹುದೆಂದು ಯೋಚಿಸಿ, ಯಾರು ಮರಿಯದಂತಾ ರತ್ನ ಭೂಷಣಂಗಳ ಪೆಟ್ಟಿಗೆಯುಂ
ಕೊಂಡು ಮೆಲ್ಲನ್ನೆದಿ ಬಳಿಯುಣ ಕಾನನಮುಂ ಸಾರಿ ಅಲ್ಲಿಯೊಂದರೆಯು ಅಡಿಯೊ
ಳದಂ ಹೂಳಿ, ಕುರುಹವಂಗೈದು ಹಿಂತಿರಿಗಿ ಬಂದು ತಾನೇನಂ ಕಾಣದವನಂತೆ
ಒಂದೆಡೆಯೊಳು ಮಲಗಿಕೊಂಡಂ, ಈ ಕುರ್ಕುರನಿವಾಪರಿಯನ್ನೆಲ್ಲಮುಂ ನೋಡಿ,
ತನ್ನ ಯಜಮಾನನು ಬಸವಳಿದು ನಿದ್ದೆಯುಂ ಮಾಡುವನೆಂದರಿತು ಆಗಲದಂ
ಸೂಚಿಸದೆ ಮಲಗಿದ ಕಡೆಯಂಬಿಟ್ಟು, ದೂರವಾಗಿ ಪೋಗಿ ಈ ಬಿಡಾರಮುಂ ಈ
ಕೃತ್ಯಮುಂ ಗೈದವಂ ಕಾಣುವಂತೆಯೂ ರತ್ನ ಭೂಷಣಂಗಳ ಪೆಟ್ಟಿಗೆ ಹೂಳಿರುವ
ತಾಣಮುಂ ಭದ್ರವಾಗಿ ನೋಡುತ್ತಾ ಕಾದುಕೊಂಡಿದ್ದುದು.

ಇತ್ತಲಾಧನಿಕಂ, ಎಚ್ಚತ್ತು ನೋಡಲು ಸೂರ್ಯಾಸ್ತಮಾನ ಕಾಲಂ ಬಹು ಸವಿಾಪವಾಗಿ ಕಾಣುತ್ತಿರಲು ಓಹೋ ಇದು ನಡುಕಾಡು ಕಳ್ಳರಕಾಟಂ ಸಂಭವಿಸಿ ದರೇಂಗತಿ ಎಂದು ಘಾಬರಿಗೊಂಡವನಾಗಿ ಬೇಗನೇ ಭಂಡಿಗಳಂ ಕಟ್ಟಿಸಿ ಹೊರಡಲುದ್ಯುಕ್ತನಾಗೆ ಆ ಕುಗ್ಜುಕರಂ ಬಂದು ಮುಂದಾಯಿಸದೆ ಮೈಮೇಲೆ ಬಿದ್ದು ಮುಖವಂ ನೋಡಿ ವಿಕಾರಮಾಗಿ, ಕೂಗುತ್ತಾ ದ್ರೋಹಿಯಾದಾ ಸೇವಕನಂನೋಡಿ, ಘುರ್ರನೆ ಬಗಳುತ್ತಾ ಪ್ರಯಾಣಕ್ಕೆ ತಡೆಯುಂಟಾಡೆ, ಆ ವರ್ತಕಂ ಮೈಲ್ಗಡವಿ ಎಷ್ಟು ಸಮಾಧಾನಗೊಳಿಸಿದರೂ ಸುಮ್ಮನಿರದೆ ತನ್ನ ಬಾಯಿಂದ ಯಜಮಾನನ ವಸ್ತ್ರವಂ ಕಚ್ಚಿಯೆಳೆಯುತ್ತಾ ಬರೆ ಅಜರ ದಾರಿಯಂ ಹಿಡಿದು ಪೋಗಲು ಬಟ್ಟೆಯಂ ತೊರದು ಆ ಭರಣಗಳ ಪೆಟ್ಟಿಗೆ ಹೂತಿರುವ ಅರೆಯ ಬಳಿಗ್ಯೈದಿ ಘಟ್ಟಿಯಾಗಿ ಬೊಗಳಲು ಇದೇನೋ ಇರಬಹುದೆಂದಾ ಯಜಮಾನಂ ಬಂದಾಸ್ಥಳದ ಬಳಿಯೊಳು ನಿಲ್ಲಲು ಆ ಬಂಡೆಯ ಕೆಳಗೆ ಮುಸುಡಿಯಂ ಚಾಚಿ ಕೆರೆಯುತ್ತಾ ಬರಲು, ಈ ಧನಿಯು, ತಾನೇ ಪೋಗಿ ಕೈಯಗಳಿಂದ ಮುಚ್ಚಿದ್ದ ಮುಣ್ಣನ್ನತೆಗಿಯೆ ತನ್ನ ಆ ರತ್ನಾಭರಣಗಳ ಪೆಟ್ಟಿಗೆಯಂ ಕಂಡು ಪರಮಾನಂದಾಶ್ಚರ್ಯ ಮಗ್ನನಾಗಿ ಪೆಟ್ಟಿಗೆಯಂ ಬಗುಳೊಳಿರಿಸಿಕ್ಕೊಂಡು ಆ ನಾಯಿಗುಂ ಮುದ್ದಾಡುತ್ತಾ ತನ್ನ ಸಾಮಾನು ಗಾಡಿಯ ಬಳಿಗೆ ಬಂದು ತನ್ನ ಸವಾರೀ ಭಂಡಿಯುಂ ಹತ್ತುತ್ತಿರಲು ಸೇವಕನೋರ್ವಂ ಬಂದು ಸ್ವಾವಿಾ ನಮ್ಮ ಜನರಳೋರ್ವಂ ಸೇವಕಂ ಈ ಬಳಿಯಳ ಭಾವಿಯೊಳು ಬಿದ್ದು ಮೃತನಾದನೆನೆ, ಅವನ ಮೇಲೆಯೇ ಬಿದ್ದು ಕೋಸವಂತೋರಿದುದೀ ಕುನ್ನಿಯು ಆದ್ದರಿಂದ ಅವನೇ ಈ ಕಾರ್ಯವುಂ ಮಾಡಿದ ಪಾಪಿಯು ಹಾ, ಅನ್ಯಾಯವಾಗಿ ಮುಳುಗಿ ಹೋಗುತ್ತಿದ್ದನಲ್ಲಾ ಈ ನಾಯಿಂದಲೇ ನಾನಿಂದು ಬದುಕಿದೆನೆಂದು ಸಂತೋಷಿಸುತ್ತಾ, ಆಪಂ ತೆಗದು ಭಂಡಿಯೊಳೀರಿಸಿಕೊಂಡು ಸಂತೋಷವಾಗಿ ಹೊರಟು ಒಂದೆರಡು ದಿನಗಳಲ್ಲಿ ತನ್ನ ಮನೆಯಂ ಶೇರಿದಂ ಅಂದಿನಿಂದಾ ಕುರ್ಕುರಮಂ ಪರಮವಿಶ್ವಾಸವಾಗಿ ಪಾಲಿಸುತ್ತಾ ದಿವ್ಯಾಹಾರಮುಂ ಕೊಡಿಸುತ್ತಾ ಕಾಪಾಡುತ್ತಿರ್ದಂ.

ಹೀಗಿರುತ್ತಾ ಕೆಲಕಾಲಮಾಗೆ ಒಂದಾನೊಂದು ದಿನದೊಳು ತನ್ನ ಸಂಸಾರದೊಂದಿಗೆ ವನವಿಹಾರಾರ್ಥಮಾಗಿ ಹೊರಟು ಪುರೋದ್ಯಾನವನ್ಹೈದಿ ಅಲ್ಲಿ ಸ್ನಾನಭೋಜನಾದಿಗಳಂ ಮಾಡಿಕೊಂಡು, ಗೀತವಾದ್ಯಂಗಳಂ ಕೇಳಿ ಸುಖಿಸುತ್ತಾ ನೃತ್ಯಾಭಿನಯನಂಗಳಂ ನೋಡಿ ಸಂತೋಷಿಸುತ್ತಾ ಪುಷ್ಪಪಣ್ಯಾದಿ ಆದಗಳನ್ನಾಡುತ್ತಿದ್ದು ಅಸ್ತಮಯಾತ್ಪೂರವೇ ತನ್ನ ಕಾಂತಾಜನರಂ ಮನೆಗೆ ಹೋಗುವಂತೆ ನೇಮಿಸಲು ಈ ಶೆಟ್ಟಿಯ ಹೆಂಡತಿಯು ವನವಿಹಾರಾಯಾಸಮುಂ ತೊರೆಯಲೋಸುಗ ತಾನಲಂಕರಿಸಿಕೊಂಡಿದ್ದ ಅಮೂಲ್ಯಂಗಳಾದ ದಿವ್ಯ ರತ್ನಾಭರಣಂಗಳೊಳು ಭಾರಮಾಗಿ ತೋರುವ ಕೆಲವಂತೆಗದು, ಬಳಿಯಣ ಕೊಪ್ಪರ್ನದೊಳು

ಕಟ್ಟಿಸ್ಥನಳು ಮನೆಯಂ ಕುರಿತು ಬರುವ ಸಜ್ಜನರ ಗದ್ದಲದೊಳಿಲ್ಲಿಯೇ ಮುರಿತು ಸರಸಲ್ಲಾಪಂಗಳಂ ಗೈಯ್ಯುತ್ತಾ ಅದೇ ಸಮೂಹದೊಳು ಬೆರೆತು ಹೊರಬರುಬಂದಳ್ಳು, ಈ ವರ್ತಕಂ ತನ್ನಾಸ್ಥರೊಂದಿಗೆ ಸೇರಿ ಸಸ್ನೋದನಾಗಿ ಆಡುತ್ತ ಪಾಡುತ್ತಲಿರುವಾಗಲಾ ಪೊಳಲಿನ ರಾಜಂ ತನಗೆ ಬೇಕಾದ ಕೆಲವಾಭರಣಂಗಳಂ ಈಗಲೇ ತರುವದಾಗಿ ಅರಮನೆಯು ವರ್ತಕನೇ ವ್ಯಾಪಾರಿಯಾದೀ ಸೆಟ್ಟಿಯು ಬಳಿಗೆ ಮೊದಲೇ ಹೇಳಿಕಳುಹಿಸಿದ್ದ ಸುದ್ದಿಯಂ ನೆನೆಪಾಂತು ಅತಿತ್ವರ್ಗಮಾಗಿ ಎಲ್ಲರಂ ಬೀತಗೊಂಡು ಹೊರಡಲಾ ಕುರ್ಕುರಂ ದಾರಿಯಂಕಟ್ಟಿ ಮುಂದಾಯುಲೀಸದೆ ಕಾಲಂ ಪಡಜುತ್ತಾ ಮುಖವಂನೋಡಿಕೊಗುತ್ತಾ, ಈ ಆ ಭರಣಗಳಂ ಯಾರಾವರೂ ತೆಗದು ಕೊಂಡು ಹೋದಾರೆಂಬ ಚಿಂತೆಯಿಂ ತನ್ನ ಧಣಿಯಂ ಕಿಡಿಪೆಳೆಯುತ್ತ ಬರಲಾ ಹಿತಾಹಿತಮರಿಯದೆ ಅತುರನಾಗಿ ಅವಿವೇಕಿ ವರ್ತಕಂ ಇದ್ದೇನು ಈ ನಾಯಿಯು ದೊರೆಯ ಕೆಲಸಕ್ಕಾಗಿ ಹೋಗುವ ನನ್ನಂ ತೊಂದರೆಗೊಳಿಸುತ್ತದೆಂದು ಬರುವಲಾಭ ಕೆದ್ದು ಹೋಗುವದೆಂಬ ಯೋಜನೆಯಿಂ ಕೋಪಗೊಂಡವನಾಗಿ ತನ್ನ ಕಾಲಿನಿಂದಾ ಕುನ್ನಿಯಂ ಒದ್ದಂ. ಹಾಗಾದರೂ ಬಿಡದೆ ಆ ನಾಯಿಯು ನಿರ್ಬಂಧ ಪಡಿಸುತ್ತಾ ಬರಲು ಆಕುರಗೊಂಡವನಾಗಿ ಕೈಯ್ಯೊಳ್ಳಿ ಕಟ್ಟಿಗೆಯಿಂದದಂ ಹೊಡೆಯಲು ಆ ಸೆಟ್ಟು ಜಾರಿಬಂದು ಆ ನಾಯಿಯು ತಲೆಯಮೇಲೆ ಬೀಳಲಾ ನಾಯಿಯೂ ಅದಂ ತಾಳಲಾರದೆ ಗಿರ್ರನೆ ಸುತ್ತಿ ಏಮ್ಮ ಆಗಲೂ ತನ್ನ ಬಾಲಕನ ಗಂಟುಹೋಗುವದಲ್ಲಾ ಎಂದು ಮೆಲ್ಲನೆ ಬಂದು ಆಭರಣಂಗಳು ಕಟ್ಟಿದ್ದ ಗಂಟಿನ ಮೇಲೆ ಮಲಗಿ ಕೋಲಿನ ಪೆಟ್ಟಿಗಂ ತಾಳಲಾರದೆ ಸಂಕಟಪಡುತ್ತಿರ್ದ್ದ ಕೆಲಕಾಲದಲೇ ಪರಲೋಕವನ್ನೈದಿತು.

ಇತ್ತಲಾ ಸಾಹುಕಾರಂ ರಾಜಕೋಪಕ್ಕೆ ಪಾತ್ರನಾಗದಾರದೆಂತಲೂ, ವಿಶೇಷ ಲಾಭಂ ದೊರೆಯುವದೆಂದು ಚಿಂತಿಸುತ್ತಾ ತನ್ನ ಮನೆಯ ಸವಿಾಪಕ್ಕೆ ಬರುವಾಗ್ಯೆ ಅತನಿಗಾಗಿ ಕಾದಿರ್ದ ರಾಜಭೃತ್ಯನೆದುರ್ಪಟ್ಟಂದು, ಸ್ವಾವಿಾ ರತ್ನವ್ಯಾಪಾರಿಗಳಿರಾ ! ನಮ್ಮೊಡೆಯರು ನಿಮ್ಮೊಳು ಹೇಳಿಸ್ದ ರತ್ನಾಭರಣಗಳಂ ನಾಳೆಯ ದಿನ ಮಧ್ಯಾಹ್ನಾತ್ಪರಂ ಬಂಡಿತವಾಗಿ ತರುವಂತೆ ಆಜ್ಞಾಪಿಸಿರುವರೆಂದೊರೆದು ಹೊರಟು ಹೋಗೆ ಆ ವರ್ತಕನೆಂತೆಂತೋ ಮನೆಯಂ ಸಾರಿ ಕುಳಿತುಕೊಳ್ಳಲಾ ವರ್ತಕನ ಹೆಂಡತಿಯು ಬಹು ವೇಗವಾಗಿ ಬಂದು ಪತಿಯನ್ನೋಡಿ, ಪ್ರಿಯನೇ ಹಾ ಮೋಸವಾದುದಲ್ಲಾ ? ನುಂದೇನುಗತಿ ಸಗ್ಗೋತ್ತಮಂಗಳಾದ ಮಕರ ಕಂಠಿಯೇ ಮೊದಲಾದ ವಿವ್ಯರತ್ನಾಭರಣಗಳಂ ಗಂಟುಕಟ್ಟಿ ತೋಟದೊಳೀ ಇದ್ದು ಮರೆತುಬಂದೆನಲ್ಲಾ ಅದು ಹೇಗೆ ದೊರೆಯುವದು ಯಾರ ಕೈಸಾದ್ದುದೋ ಎಂದು ಗೋಳಿಡುತ್ತಾ ಬರಲು, ಈ ವರ್ತಕನದಂ ಕೇಳುತ ಭಯಾಕ್ರಾಂತನಾಗಿ ತಹತಹಗೊಳ್ಳುತ್ತಾ ಛದ ದೊಳ್ಕೈತಂದು ಆ ಬಳಿಯೊಳು ನೋಡೆ, ಕುರ್ಕುರಂ ಮೃತವಾಗಿ ಬಿದ್ದಿರ್ದುದು.

ಅದರೆಡೆಯೊಳು ಅಧರಣಂಗಳ ವೊಟ್ಟೆಯಂ ಕಂಡು ಕೈಕೊಂಡು ನೋಡಿ ಹಾ ಈ ನಾಯಿಯುಂ ಇದಕ್ಕಾಗಿಯೇ ನನ್ನಂ ನಿರ್ಬಂಧಗೊಳಿಸಿತು. ನಾನದಂ ತಿಳಿಯದೆ ಆ ತುರನಾಗಿ ಇದಂ ಕೊಂಡೆನಲ್ಲಾ ಅಯ್ಯೋ ಎಂದು ಗೋಳಿಡುತ್ತಾ ಆ ಕುನ್ನಿಯುಂ ತೆಗೆದು ಮುನ್ದಿಡುತ್ತಾ ಈ ಪ್ರಾಣಿಯು ಇದಂ ಸೇರಿ ಎರಡಾವೃತ್ತಿ ನನಗೆ ಆಸರಿಮಿ ತವಾದ ಸಹಾಯಮುಮಂ ಮಾಡಿತಲ್ಲಾ ಅಜ್ಞಾನಿಯಾಗಿ ಇಂಥಾ ಉಪಕಾರಿಯುಂ ಕೊಂದ ನನ್ನಂಥಾ ಪಾಪಿಯು ಈ ಭುವನದೊಳಿರುವನೇ ? ಛೀ ! ಇಂಥಾ ಕೃತಘ್ನನಾದ ನಾಂ ಜೀವಿಸಿ ಫಲವೇನೆಂದು ಅಲ್ಲಿಯೇ ತನ್ನ ವಸ್ತ್ರವಂಹರದು ಉರಲುಹಾಕಿ ಕೊಂಡು ಪ್ರಾಣತ್ಯಾಗಮಂ ಮಾಡಿಕೊಂಬವನಾದನು. ಎಲೈ ಮಹಾರಾಜನೇ ! ಅತುರನಹೆನ್ದೆಡವೆಂದು ಸದಾಧಾನವಂ ಪೇಳಲು, ಹಾಗಾದರೆ ನಿನ್ನಿಷ್ಟಾನುಸಾರ ವಾಗಿ ಮಾಡೆಂದುಸುರಿ ಸುಮ್ಮನೆಯಾಗಲಾ ಮಂತ್ರಿಶ್ರೇಷ್ಠಂ ಅಲ್ಲಿಂ ಭಯ್ಯಾರ್ಗ್ಯ ಹಮುಂ ಪ್ರವೇಶಿಸಿ, ನುಲಿಗಿ ನಿನ್ನಿಸುತ್ತಿರ್ದ ರಾಜಾತ್ಮಜನಂ ನೋಡಿ ಮುಖ ವಿಹ್ವಾ ದಿಗಳಿಂದ ನಾಗರಾಜನೇ ಎಂದು ತಿಳಿದು ತಟ್ಟಿ ಎಚ್ಚರಗೊಳಿಸಿ ಕುತ್ತುಕೊಂಡ ಮೇಲೆ, ಎಲೈ ನೀಂ ನಾಗರಾಜನಲ್ಲವೇ ! ಎಂದು ಮಾತನಾಡಿಸಿ ಗೊತ್ತಾಗಿ ತಿಳಿದು, ಅಲ್ಲಿಂ ಹೊರಗೆ ಬಂದು, ಎಲೈ ಮಹಾರಾಜನೇ ಕೇಳು ! ಅತುರನಾಗಿ ಕಾರ್ಯಮುಂ ಕೆಡಿಸುತ್ತಿರ್ದೆಯಲ್ಲಾ, ಮಾಲಗಿ ನಿನ್ನಿಸುತ್ತಿರ್ದಾತಂ ನಿನ್ನೆಯನಾದ ನಾಗರಾಜಂ ನಂದಿನಿಯ ಪ್ರಾಣೇಶನು ಎಂಬೊರೆದು ಒಳಗೆ ಕರೆದುಕೊಂಡು ಹೋಗಲು, ಮಾವನಂ ಕಾಣುತಲೆದ್ದು ಬಂದು ಪಾದಂಗಳೊಳಿರಗಿ ನಿಲ್ಲಲು, ಅಳಿಯ ನನ್ನು ನೋಡಿ ಶೋಕಾನಂದಪರಿತಪ್ತಾಂತನಾಗಿ, ಅಯ್ಯೋ ಅತುರನಾಗಿ ಮಗಳಂ ಕೊಂದೆನಲ್ಲಾ ಅಳಿಯುಂ ಕೇಳಲು ವಸಪೇಳಲಿ ಎಂದು ದುಃಖಿಸುತ್ತಾ ಅಳಿಯನನ್ನಾ ದರೂ ನೋಡಿದೆನಲ್ಲಾ ಎಂದು ಸಂತೋಷಿಸುತ್ತಾ ಲೋಲಮಾನಸನಾಗಿ, ಆ ವಾ ರ್ತೆಯುಂ ಅಂತಃಪುರಕ್ಕೆ ಪೇಳೆ ಕಳುಹಲಾ ಮಹಿಷಿಯು ಭರದೊಳ್ಬೈತಂದು, ಅಳಿ ಯನಂ ಕಾಣುತಲಾ ನಾಗರಾಜಂ ತತ್ಪಿಯ ಪಾದಗಳೊಳು ಮಣಿದೆದ್ದು ಕುಳಿತುಕೊ ಳ್ಳಲು, ತನ್ನ ಮಗಳಂ ಸ್ಮರಿಸಿಕೊಂಡು, ಕಣ್ಣೀರಂ ಸುರಿಸುತ್ತಾ, ಮುಂದೆಂತು ಮಾಳ್ಪುದು, ನಗಳ ಸರಿಯನ್ನೆಂತು ಉಸುರಲಿ? ಸುಮ್ಮನಿರುವದೆಂತೆನುತ ಶೋಕಾ ಗ್ನಿಯೊಳು ಬೆಂದವಾನನಳಾಗಿ ಅಂತೆಯೇ ಸ್ತಬ್ಧಳಾಗಲು, ಸೋಮಶ್ರೇಷ್ಠಿವರರಾಯಂ ತನ್ನಳಿಯನಂ ಕುರಿತು. ಎಲೈ ಸುಕುಮಾರಸುಂದರಾಂಗನೇ ! ನೀನಿನಿತುಕಾಲವೆ ಲ್ಲಿದ್ದೆಯೋ ತಿಳಿಯದೆ, ಸಂತಾಪಗೊಳ್ಳುತಿರ್ದೆನಲ್ಲಾ, ನಿನ್ನ ನೋಡಿ ಈಗನಾವ್ ಹರ್ಷಿತರಾದೆವು. ನಿನ್ನ ವೃತ್ತಾಂತಮೆಲ್ಲಮಂ ಕೇಳಿಲಜ್ಜಿಸುವೆವು ಎಂದು ಪ್ರಶ್ನೆ ಯಂಮಾಡಲು ನಾಗರಾಜಂ ಸೋಮಶ್ರೇಷ್ಠಿವರರಾಯನಂ ಕುರಿತು, ಮಾವಾಜಿಯ ವರೇ ಲಾಲಿಪುದು ! ಮದುವೆಯು ನಾಲ್ಕನೆಯ ದಿನದ ರಾತ್ರಿ ದೇವತಾ ದರ್ಶನಕ್ಕಾಗಿ ಹೋಗಿದ್ದ ಕಾಲದೊಳು ನಾವು ದೇವಾಲಯದ ಮಹಾದ್ವಾ

ರದ ಬಳಿಗ್ಗೆದುವಾಗ್ಗೆ ಒಳಗಣಿಂದ ಏಳುಮಂದಿ ಗಂಧರ್ವಾಂಗನೆಯರು ಒಂದು ನನ್ನಂನೋಡಿ ವೋಹಿಸಿಪವರಾಗಿ ತಮ್ಮ ಮಾಯಾ ಶಕ್ತಿಯಿಂದೆಲ್ಲರಂ ಭ್ರಾಂತಿಗೊಳಿಸಿ ಮಂತ್ರಶಕ್ತಿಯಿಂದ ನನ್ನಂ ಗಿಳಿಯಾಗಿ ಮಾಡಿಕೊಂಡು ತಮ್ಮ ಲೋಕವಂ ಸಾರಿ ಪುನಶ್ಚ ನನ್ನಂ ಅಪಹರಿಂತ್ರಿಸಿ ಮುನ್ನಿನವಗಲು ಮನುಷ್ಯನಂ ಮಾಡಿ ಅವರೆಲ್ಲರೂ ನನ್ನಂ ಸೇರಿ ಸಕಲ ಭೋಗಂಗಳಂ ಶಾಶ್ವತ್ತಿದ್ದರು. ನನ್ನ ಪ್ರಾಣಕಾಂತೆಯು ವಿರಹಶಾಕಮಂ ವಾಗಲವಶಾತ್ ಕಂಡವರಾಗಿ ಈಗ್ಗೆ ಆರು ತಿಂಗಳ ಮೊದಲು ಪ್ರತಿಶುಕ್ಲವಾರ ಮುಂಗಳವಾರಗಳಲ್ಲೂ ತಮ್ಮೊಡನೆ ಕರೆತಂದು ಈ ಅಂತಃಪುರದೊಳು ಬಿಟ್ಟುಹೋಗಿ ಬರುತ್ತಿದ್ದರು. ಇಂತು ಬಹುಕಾಲವಾಗಿ ಮಾಡುತ್ತಿದ್ದಂತೆ ದೇವತಾಸ್ತ್ರೀಯರ್ಮಾಡಿಕೊಂಡು ಹಿಂದಿನಂತೆ ಬರುತಿರಲು ಅರುಣೋದಯಕ್ಕೆ ಮುನ್ನೆ ಮೇ ನನ್ನಂ ಪಡತೆಯೊಳು ಕರೆದುಕೊಂಡು ಹೋಗುತ್ತಾ ಇದ್ದರು. ನಿನ್ನೆಯ ರಾತ್ರಿಯೊಳು ಯಥಾ ಪ್ರಕಾರವಾಗಿ ಕರೆತಂದ್ ಯಂತಃಪುರದ ಡೆಯೊಳು ಬಿಟ್ಟು ಹೋದವರು ಅರುಣೋದಯಾತ್ಪೂರ್ವಂ ಬಂದು ಬಾಗಿರುವ ನನ್ನ ಮುಖಮಂ ನೋಡಿ, ಕಾರಣಮೇನೆಂದು ಬೆಸಗೊಳ್ಳಲು, ನನ್ನ ಪ್ರಾಣಕಾಂತೆಯು ಈ ಅಂತಃಪುರದೊಳು ಕಾಣದೆ ಇರುವಳಾದ್ದರಿಂದ ಚಿಂತಿಸುತ್ತಿರುವೆನೆಂದೊರೆಯಲು, ಓಹೋ ಆಕೆಯು ಮಯಾವತಿಪ್ರತೆಯು, ನಾವೀಪರಿಯಂ ಆಕೆಯು ಗಂಡನಂ ಕರೆದುಕೊಂಡು ಪೋಗುತ್ತಿರಲು, ನೀನೋ ಋಣಕೆಗೊಂದು ಗುರ ಸಾಧನೆಗಾಗಿ ತೋಗಿರಬಹುದು. ಅದ್ದರಿಂದ ನಮಗೇನಾಗುವದೋ ಎಂದು ಚಿಂತಿಸಿ ನನ್ನ ಕರದೊಯ್ದು ಇಲ್ಲಿಂದೀ ಬಿಟ್ಟುಪೋಗುವಂತೆ ಗೊತ್ತು ಮಾಡಿಕೊಂಡು, ಆಕೆಯೇ ಬಿಟ್ಟುಕೊಂಡರು. ನನ್ನ ಕಾಂತೆಯು ಕಾಣಿರುವಳೆಲ್ಲಾ, ಎಂದುಸುರುವ ಕಾಲ ಕ್ಕಾಕ್ಷರಾಯಂ ತನ್ನ ಕಾಂತೆಯ ಮುಖವಿಲಂ ನೋಡಲು, ಆಕೆಯು ಮಗಳಂ ನೆನೆದು, ಹಾ ಮಗಳೇ ! ಎಂದು ಗಟ್ಟಿಯಾಗಿ ರೋದಿಸಲಂಗ್ಗೆಯುವನಿತರೊಳು, ಮಂತಿಯು ಪರಮ ಬುದ್ಧಿಶಾಲಿಯಾದ್ದರಿಂದ ಸಂಜ್ಞಾಮುಖೇನ ಎಚ್ಚರಗೊಳಿಸಲು, ಮುಂದಕ್ಕೆ ಉಸುರದೆ, ಕಣ್ಣೀರು ಸುರಿಸುತ್ತಾ ಅಂತೆಯೇ ನಿಂತಿರಲು, ಆ ನಾಗರಾಜಂ ಈ ಪರಿಯನ್ನರಿತು ಪರಮ ಚಿಂತಾಕ್ರಾಂತನಾಗಿ ತನ್ನ ಕಾಂತೆ ಏನಾದೋ ಎಂಬ ಸಂಶಯದಿಂದ ಅಕ್ಕೈವಾವಂದಿರುಗರಾ ! ನನ್ನ ಕಾಂತೆಯ ಸಮಾಚಾರಮಂ ಸ್ಪಷ್ಟವಾಗಿರುಹದೆ ಹೋದರೆ ನನ್ನೀ ಪ್ರಾಣವನ್ನೀಗಲೆ ಬಿಡ್ಡುವೆನೆಂದೆ, ಆಕೆಯ ವಿಷಯವಾಗಿ ಮನಂ ಸಂಶಯಂಗೊಳ್ಳುತ್ತಿರುವುದು, ಎಂದು ಮೂಖತನಾಗಿ ನಡೆಯುತ್ತಿರುವದಾಗಿ ರಾಜ್ಞೀ ರಾಜರಿರ್ವರೂ ಸಮಾಧಾನಮಂ ಹೇಳಲರಿಯದೆ, ಅಯ್ಯಾ ನಾಗರಾಯನೇ ! ಎಂದುಸುರುವನಿತರೊಳಾ ಮಂತ್ರಿಶ್ರೇಶ್ವರಂ ಆಕೆಯ ಚಿಕ್ಕಮ್ಮನು ಬಂದು ಕರೆದುಕೊಂಡೊಯ್ದು ಮೂರು ದಿನಂಗಳಾದವು. ತಾವು ಬರುವ ಸಂದರ್ಭಂ ನಮಗರುಹವಿಲ್ಲದೆ ಹೋಗಲು ಕಳುಹಿಸಿದ್ದಾಯಿತು ಚಿಂತಿಸಬೇಡಿ,

ನಾನೇ ಹೋಗಿ ಕರತರುವೆನು, ನೀವು ಸುಖವಾಗಿಹುದೆಂದು ಸಮಾಧಾನಂಗೊಳಿಸಿ, ರಾಜನಂ ಹೊರಗೆಕರೆದು, ಅಳಿಯನಂ ಸಕಲೋಪಚಾರಂಗಳಿಂ ಮನ್ನಿಸುತ್ತಾ, ಈ ಸುದ್ದಿಯನ್ನಾತನ ಕಿವಿಯೊಳೀ ಬೀಳಿಸದಂತೆ ಎಲ್ಲಾ ಪರಿವಾರದವರನ್ನೂ ಕಟ್ಟುಮಾಡಬೇಕೆಂತಲೂ, ಯಾರಾದರೂ ಎಷ್ಟು ಬಗೆಯಾಗಿ ಕೇಳಿದರೂ ನಂದಿನಿಯು ಚಿಕ್ಕಮ್ಮನವರ ಮನೆಗೆ ಹೋಗಿದ್ದಾಳೆಂದು ಹೇಳಬೇಕೇ ಹೊರತು, ಈ ಪರಿಯುಂ ಹೇಳದಂತೆ ಎಲ್ಲರಂ ಭದ್ರಪಡಿಸಿಕೊಂಡು, ಅಳಿಯನಂ ಸ್ನಾನಭೋಜನಾದಿಗಳಿಂ ಮನ್ನಿಸುತ್ತಾ, ಈ ಚಿಂತೆಗೆ ಮನಂಗೊಡದಂತಿಹುದು. ನಾನಾದರೋ ನಂದಿನಿಯನ್ನೇ ಹುಡುಕುತ್ತಾ ಹೋಗುವೆನು, ದೈವವಶಾತ್ ದೊರತರೇ ಸಮ, ಇಲ್ಲವಾದರೆ ಮುಂದಂ ಯೋಚಿಸೋಣ, ಆ ವರಿಗಂ ಈ ನಾಗರಾಜನಂ ಇಲ್ಲಿಯೇ ಇಟ್ಟುಕೊಂಡಿರಬಹುದು ಎಂದು ಪರುತವಿಸಿ, ಮಿತಪರಿವಾರಮಂ ಕೊಂಡು, ನಂದಿನಿಯಂ ಪಿಟ್ಟಿದ ಕಾಡಿನ ಮಾರ್ಗವಾಗಿಯೇ ಹುಡುಕುತ್ತಾ ಹೊರಟು ಅತ್ತಲಾ ಸೋಮಶೇಖರರಾಯಂ ತಕ್ಕ ಸೇವಾಜನರಂ ನೇಮಿಸಿ, ಸ್ನಾನ ಭೋಜನಾದಿಗಳಿಂದ ವಿಶೇಷ ಸುಖಿಗೊಳಿಸುತ್ತಾ, ಯಾರನ್ನು ಕೇಳಿದರೂ ನಂದಿನಿಯು ಚಿಕ್ಕಮ್ಮನಮನೆಗೆ ಹೋಗಿದ್ದಾಳೆಂದು ಹೇಳುವಂತೆನಿಬಂಧನೆಯಂ,ನಾಡಿಮಗಳಂ ನೆನೆದು ನೆನೆದು ದುಃಖಿಸುತ್ತಾ ಅನ್ನಾಹಾರಗಳಂ ತೊರೆದು ಮರುಗುತ್ತಿರ್ದಂ. ರಾಜಪತ್ನಿಯು ಮಗಳಂ ಸ್ಮರಿಸುತ, ಅಯ್ಯೋ ನಾನೆಷ್ಟು ಪಾಪಿಯೋ ಗರ್ಭವತಿಯಾಗಿದ್ದ ಪತಿವ್ರತಾಶಿರೋಮಣಿಯಾದ ಮಗಳಂ ಕಾಡುಪಾಲುಮಾಡಿ ಜೀವಿಸಿದೆನೆಲ್ಲಾ ಎಂದು ಗೋಳಿಡುತ್ತಾ, ಅನ್ನ ನೀರ್ಮುಡಿಯದೆ ನಿದ್ದೆಯಂ ತಾಳದೆ ಹಂಬಲಿಸುತ್ತಿರಲಾ ಮಂತ್ರಿಯು ತಾಂ ನಂದಿನಿಯಂ ಬಿಟ್ಟುಬಂದ ಕಾಡಿನೊಳಾಕೆಯಂ ಕಾಣದೆ ಮುಂದರಿದು ಹುಡುಕುತ್ತಾ, ಹೊರಟುಹೋದಂ.

ಇತ್ತಲಾ ನಾಗರಾಜಂ ನಿದ್ರಾಹಾರಂಗಳೊಳು ಪ್ರೀತಿಮಾಡದೆ, ಅತ್ತೆಮಾವಂದಿರ ಮನ್ನಣೆಗೆ ಮನಂಗೊಡದೆ, ಹಗಲೂ ರಾತ್ರಿಯಲ್ಲಿಯೂ ಪ್ರಾಣಕಾಂತೆಯಾದ ನಂದಿನಿಯಂ ನೆನಸು ನೆನೆದು ಕಣ್ಣೀರಂ ಸುರಿಸುತ್ತಾ, ಮಂತ್ರಿಯಾಗಮನವನ್ನೇ ನಿರೀಕ್ಷಿಸುತ್ತಿರ್ದಂ.

ಇತ್ತಲಾ ವೃದ್ಧಬ್ರಾಹ್ಮಣನ ಮನೆಯೊಳಿರ್ದ ನಂದಿನಿಯು ಆ ವೃದ್ಧಸುವಾಸಿನಿಯಿಂದ ಪೋಷಿತಳಾಗುತ್ತಾ ಆರೇಳು ದಿನಗಳಂ ಕಳೆದು ಮತ್ತೊಂದು ದಿನದೊಳು ತನ್ನ ಕೈಕಾಲ್ಗಳಿಗೆ ಸುತ್ತಿರ್ದ ಹಳೆ ಅರಿವೆಗಳಂ ಬಿಚ್ಚಿಹಾಕಿ, ಸ್ನಾನ ಮುಂಮಾಡಿ ವಸ್ತ್ರಾಭರಣಗಳಂ ಧರಿಸಿಕೊಂಡು ಆ ಮುತ್ತೈದೆಯ ಬಳಿಯಂ ಸಾರಿ ನಮಸ್ಕರಿಸಿ, ಕೈಗಳಂ ಜೋಡಿಸಿಕೊಂಡು, ಎಲೌ ತಾಯಿಯೇ ! ನೀಂ ಪ್ರೀತಿಪೂರ್ವಕವಾಗಿ ಆದರಿಸಿಕೊಟ್ಟ ಅನ್ನಪಾನಂಗಳೀ ಸಂಜೀವನವಾಗಿ, ನನ್ನಂ ಸುಖಿಗೊಳಿಸಿದುದು, ಎಂದು ಸೇಳುತ್ತಿರಲಾ ಮಾತುಗಳಂ ಗಮನಿಸದೆ, ಈಕೆಯು

ಸರ್ವೋತ್ತಮವಾದ ಸೌಂದರ್ಯವಂ ನೋಡಿ, ಅಹ ಈಕೆಯು ಲಕ್ಷ್ಮಿಯೋ, ರತೀದೇವಿಯೋ, ಅಲ್ಲದೊಡೆ ಲೋಕೈಕಸುಂದರಿಯಾದ ಪಾರ್ವತಿಯೋ, ಎಂದು ಭ್ರಾಂತಳಾಗಿ ಮನದಣಿಯೆ ನೋಡಿ, ಆಹಾ ! ಇಂಥಾ ಸರ್ವಾಂಗಸುಂದರಿಯಾಗಿಯೂ ತರುಣಿಯಾಗಿಯೂ ಇರುವಳು ರಾಜಾಂಗನೆಯಲ್ಲದೆ ಮತ್ತಾರೂ ಅಲ್ಲವೆಂದು ನಿಶ್ಚಯಿಸಿಕೊಂಡು, ಎಲೌ ತಾಯಿಗಾ ! ನೀನಾರು ? ನಿನ್ನ ನೋಡಿದರೆ ಮಹಾರಾಜನ ಧರ್ಮಪತ್ನಿಯೆಂದೇ ಕಾಣುವುದು, ನಿಜಸ್ಥಿತಿಯಂ ಮಾಜದೆ ನನ್ನೊಳುಸುರೆನಲಾ ನಂದಿನಿಯು ಆ ವೃದ್ಧಪುರಂಧ್ರಿಯಂ ಕುರಿತು, ಕೇಳಮ್ಮಾ ಪತಿವ್ರತಾಶಿರೋಮಣಿಯೇ ! ನಾನು ರಾಜಕುವರಿಯಾಗಿದ್ದರೆ ಫಲವೇನು ? ಅದನ್ನೆಲ್ಲಮಂ ವಿಚ್ಛಿವಿಸಲು ನಾಚಿಕೆಯಾಗುವುದು, ನನ್ನ ತಾಯಿ ತಂದೆಗಳು ಗಂಧರ್ವರಿಗಿಂತಲೂ ಪರಮಸುಂದರನಾದ ರಾಜಕುಮಾರನಿಗಿತ್ತು ವಿವಾಹಮಂ ಮಾಡಿದರು. ನನಗೆ ಮೃತ್ಯುವಾಗಿಯೇ ಈ ಗರ್ಭವು ಪ್ರಾಪ್ತಿಯಾಯಿತ.. ಮಾತಾಪಿತೃಗಳು ನನ್ನಂ ಕರೆದುಕೊಂಡುಪೋಗಿ ಪತಿಗೃಹದೊಳು ಬಿಟ್ಟುವದಕ್ಕಾಗಿ ಹೊರಟುಬರುತ್ತಾ, ದಾರಿಯೊಳು ನದಿಯಂ ದಾಂಟಲೋಸುಗವೆಲ್ಲರೂ ನಾವೆಯಂ ಹತ್ತಿದವರಾಗಿ ಬರುತ್ತಿರಲಾನಾವೆಯು ಒಡೆದು ಹೋಗೆ ಅವರೆಲ್ಲರೂ ನದಿಯಪಾಲಾದರು. ಈ ಕಷ್ಟಂಗಳಿಂ ಅನುಭವಿಸುವದಕ್ಕಾಗಿಯೇ ನಾಂ ಜೀವಿಸಿದೆನು, ಇದು ನನಗೆ ಮಹತ್ಕಷ್ಟಕಾಲವಾದರಿಂದ ನನ್ನನ್ನೀಗ ರಕ್ಷಿಸಿದವರೇ ತಂದೆ ತಾಯಿಗಳು, ಈಗಲಾದರೋ ನನಗೆ ಮಹದ್ವಿಪತ್ಕಾಲವು, ಹೇಗೆನ್ನುವಿರೋ !

ಕ್ಷತ್ರಿಯಾಣಾಂರಣೇ ಮೃತ್ಯು ರ್ಯೋಷಿತಾಂ ಪ್ರಸವೇತಥಾ ॥
ವ್ಯಾಧಕಪಕ್ಷಿಮೃಗಾಣಾಂಚ ಪ್ರಾಯುಶಃ ಕ್ಷುದ್ರಜನ್ಮನಾ ॥

ಲೋಕಜಾತದಲ್ಲಿ ಕ್ಷತ್ರಿಯುರಾದವರಿಗೆ ರಣದಲ್ಲಿಂದೇ ಮೃತ್ಯುವು, ಸ್ತ್ರೀಯರಿಗೆ ಪ್ರಸವಕಾಲವೇ ಮರಣಕಾರಿಯು, ಮೃಗಗಳಿಗೂ ಪಕ್ಷಿಗಳಿಗೂ ಬೇಟೆಗಾರರಲ್ಲಿಯೇ ನಿಧನಾವಧಿಯು, ಉಂಟಾಗುವದೇ ರೂಢವಾಗಿರ್ದು, ಇತರ ವಿಧವಾಗಿ ಮೃತಿ ಸಂಭವಿಸುವದಪರೂಪವಾಗಿರ್ಪೆ ಇಹುದು, ಎಂದು ಕಂಬನಿದುಂಬಿದವಳಾಗಿ, ಬಿಕ್ಕಿಬಿಕ್ಕಿ ಅಳುತ್ತಾ, ಆಕಾಶಮಂ ನೋಡುತ್ತಿರೆ, ಆ ವೃದ್ಧಸುವಾಸಿನಿಯು ಈ ನಂದಿನಿಯಂ ಕುರಿತು ಅಮ್ಮಾ ಸುಕೃಮಾರಿಯೇ ! ನೀನೇತಕೆಂತು ಚಿಂತಿಸುವೆ ವನವಾಸವು ಯಾರಿಗೂ ತಪ್ಪಿದ್ದಲ್ಲವು. ಪೂರ್ವ ಕಾಲದೊಳು ಸಾಕ್ಷಾನ್ನಾರಾಯಣಮೂರ್ತಿಯು ಪರಾವತಾರಮಂ ತಾಳಿ ಚಕ್ರವರ್ತಿಯೆಂದು ಖ್ಯಾತನಾದ ರಾಮಮೂರ್ತಿಯು ಕೈವಿಡಿದ ಭೂಪುತ್ರಿಯಾದ ಚಕ್ರವರ್ತಿ ತನೂಜೆಯಾಗಿಯೂ ಇದ್ದ ಸೀತಾದೇವಿಯು ಗರ್ಭಮಂ ತಾಳಿದ್ದಾಗ ಅರಣ್ಯವಾಸಮಂ ಮಾಡಲಿಲ್ಲವೆ ? ಆಕೆಯು ತಾನಾಗಿ ವಾಲ್ಮೀಕ್ಯಾಶ್ರಮವಂ ಸಾರಿ, ಆ ಮಹರ್ಷಿಯಿಂ ಪೋಷಿತಳಾಗಿ ಲೋಕೈಕಶೂರರಾದ ಅವಳ ಮಕ್ಕಳಂ ಪಡೆದು ಕಡೆಯೊಳು ಸುಖ

ಮುಂ ತಾಳಲಿಲ್ಲವೆ ? ನೀನೂ ಹಾಗೆಯೇ ಗಂಡುನುಗುವಂ ಹೆತ್ತು ಸಂತೋಷಮುಂ ತಾಳುವೆ. ನೀನು ನಮ್ಮ ಮನೆಯಂ ಸಾರ್ದುದು ಬಡವರ ಮನೆಗೆ ಧಾನ್ಯಲಕ್ಷ್ಮಿ ಬಂದಂತಾದುದು, ನಮಗೆ ಮಕ್ಕಳಿಲ್ಲವಾಗಿ ನೀನೇ ಮಗಳಿಂದು ಭಾವಿಸುತ್ತಾ ನಿನ್ನಂ ನೋಡಿ ಸುಖಿಸುವೆನೆಂದು ನವೂಢಾನೆಗೊಳಿಸಲು ಆ ನಂದಿನಿಯು ಅಮ್ಮಾ ನೀವೇ ಮಹನೀಯರಾದ ವಾಲ್ಮೀಕಿಮುನಿಯ ಧರ್ಮಪತ್ನಿಯು ನಿಮ್ಮ ಯಜಮಾನರೇ ವಾಲ್ಮೀಕಿ ಮಹಾಋಷಿಗಳು ಇವರು ಜಾನಕೀದೇವಿಯಂ ಪರಿಪಾಲಿಸಿದಂತೆ ನೀವೂ ನನ್ನಂ ಕಾಪಾಡಿದರೆ ಇಹಪರ ಧರ್ಮಂಗಳು ಪ್ರಾಪ್ತಿಯಾಗುವದೆಂದೊಯಲು, ಆ ವೃದ್ಧ ದಂಪತಿಗಳಿರ್ವರೂ ಲೋಕ್ಟಿಯಲ್ಲಿ ಹುಟ್ಟಿದ ಮಗಳಿಗಿಂತಲೂ ಅತಿಶಯುವಾಗಿ ಮನವಿನಲ್ಲಿಯೂ ಅಭ್ಯಂಗಮುಂ ಮಾಡಿಸುತ್ತಾ ಬಯಸಿದ ಪದಾರ್ಥಗಳನ್ನೆಲ್ಲವುಂ ತರಿಸಿಕೊಡುವುತ್ತಾ ದಿವ್ಯಭಕ್ಷ್ಯ ಭೋಜ್ಯಾದಿಗಳಂ ಮಾಡಿಸಿ ಭೋಜನವಂ ಮಾಡಿಸುತ್ತಾ ಅತಿ ವಿಶ್ವಾಸನಾಗಿ ವೃದ್ಧೆಗೆ ಆಸ್ಪದಮುಂ ಕೊಡದೆ ಪೋಷಿಸುತ್ತಿರುವಾಗ್ಯೆ ಆ ಪಟ್ಟಣದೊಳಿರುವ ವೃದ್ಧಳಾದ ವೇಶ್ಯಾಂಗನೆಯು ತನ್ನ ಮನೆಯಲ್ಲಿ ನಡೆಯಬೇಕಾದ ಪ್ರಣ್ಯಾಹಕರ್ಮವಂ ಮಾಡಿಸುವದಕ್ಕಾಗಿ ಗಾ ಮಪೌರೋಹಿತನಾದ ಈ ಬ್ರಾಹ್ಮಣನಂ ಕರತರಲೋಸುಗ ತನ್ನ ಗೌಡಿಯರೊಳಿರ್ವಳಂ ಈ ಬ್ರಾಹ್ಮಣನ ಮನೆಗೆ ಕಳುಹಿಸಲು, ಆ ಪರಿಚಾರಿಣಿಯು ಬಂದು ಪುರೋಹಿತರೊಳು ತನ್ನ ಯಜಮಾನಿಯು ಹೇಳಿಕಳುಹಿಸಿದಂತೆರದು ಹಿಂದಿರುಗಿಹೋಗುವಾಗ ಆ ವೃದ್ಧ ಬ್ರಾಹ್ಮಣಪತ್ನಿಯೊಳು ಸಂಭಾಷಿಸುತ್ತಿದ್ದ ನಂದಿನಿಯಂ ನೋಡಿ ಆಕೆಯ ಸೌಂದರ್ಯಾತಿಶಯಕ್ಕೆ ಮೆಚ್ಚಿ ತಲೆದೂಗುತ್ತಾ ಅಲ್ಲಿಂದತಿವೇಗಮಾಗಿ ಬಂದು ತನ್ನ ಯಜಮಾನಿಯಾದ ವೇಶ್ಯಾಂಗನೆಯಂ ಕುರಿತು ಎಲ್ಲೆ ವೇಶ್ಯಾರತ್ನವೇ ಲಾಲಿಸು, ನಿನ್ನೊಲು ಸುಂದರಿಯಾದ ಸ್ತ್ರೀಯೇ ಎಲ್ಲೆಲ್ಲಿಯೂ ಇಲ್ಲವೆಂದು ಜನರೆಲ್ಲರೂ ಕೊಗಳುತ್ತಿದ್ದರಷ್ಟೆ ! ನಿನ್ನಾಜ್ಞಾನುಸಾರವಾಗಿ ನಾಂ ಪೋಗಿ ಪುರೋಹಿತರಂ ಕರೆಯುತ್ತಿರುವಾಗ ಅವರ ಮನೆಯೊಳಿರ್ವ ಕರುಣೀಮಣಿಯನ್ನು ನೋಡಿದೆನು ಆಕೆಯ ಸೌಂದರ್ಯ ಲಾವಣ್ಯಾದಿಗಳು ಬ್ರಹ್ಮನ ಸೃಷ್ಟಿಯೊಳು ಯಾರಿಗೂ ಇಲ್ಲವೆಂದು ನಂಬುತ್ತೇನೆ. ಸೌಂದರ್ಯಶಾಲಿಗಳೊಳು ರತಿಯೂ ಲಕ್ಷ್ಮಿಯೂ, ಶಚೀದೇವಿಯೂ ಇತರೆಲ್ಲರಿಗಿಂತಲೂ ಪಾರ್ವತೀದೇವಿಯಂ ಪ್ರಸಿದ್ಧರಾಗಿರುವರು. ಆಕೆಯ ರೂಪ ಲಾವಣ್ಯ ಶೃಂಗಾರಾದಿಗಳಂ ನೋಡಿದರೆ ರತೀದೇವ್ಯಾದಿಗಳಾದರೂ ಗಣನೆಕ್ಕೇನೇ ಬಾರರು, ನೀನಾದರೊ ನಾಚಿಕೆಯಿಂ ತಲೆವಾಗಿರಬೇಕು ಆ ಸುಂದರೀಮಣಿಯನ್ನು ನಿರ್ಮಿಸುವಾಗ್ಯೆ ಸೃಷ್ಟಿಕರ್ತನಾದಾ ಬ್ರಹ್ಮನು ಸೌಂದರ್ಯ ವಸ್ತುಗಳ ಸರ್ವಸಾರಮಂ ಸಂಗ್ರಹಿಸಿ ಅತಿ ಪ್ರಯಾಸದಿಂದೀ ಮೋಹನಾಂಗಿಯನ್ನು ನಿರ್ಮಿಸಿದನೇ ಹೊರತು ಮತ್ತೆಲ್ಲಿರೆ ಅಲ್ಲಂ, ಪ್ರಾಯವಾದರೋ ನಿನಗೆ ವಿಾರುತ್ತಾ ಬಂತು. ಕಾಂತಿಯು ಸ್ಥಿರತ್ವವೊಂದು ನಿನಗಿದ್ದೊಡೆ ನವನಿಧಿಗಳೂ ನಿನ್ನ ಸ್ವಾ

ಧೀಸಂಗಳೇ, ಲೋಕದೊಳಗಿನ ವಿಟಪುರುಷರೆಲ್ಲಾ ನಿನ್ನ ಮನೆಯು ಬಾಗಿಲಂ ಕಾಯುವವರೇ ಆಗುವರು. ಇದರೊಳಿಂದೂ ಸಿದ್ಧಿಸದ ಹೋಗಲಾರದೆಂದುಸು ರಲು, ಆ ವೇಶ್ಯಾಂಗನೆಯು ಭ್ರಾಂತಿಳಾಗಿ ಆದಿನ ಸಾಯಂಕಾಲದೊಳು ಸರೋಜೋತ್ಪ ಮಂಗಳಾದಿ ಪಲಪುಷ್ಪಂಗಳಿಂ ದಿವ್ಯ ಗಂಧ ತಾಂಬೂಲಾದಿಗಳಿಂ ತೆಗೆಯಿಸಿಕೊಂಡು ತಾನೂ ಅಲಂಕೃತಗಾತ್ರಳಾಗಿ ಬಂದು ನಂದಿನಿಯಂ ಕಂಡು ಈ ಪಲಾದಿಗಳಂ ಮುಂದಿಟ್ಟು ಕೈಮುಗಿದು ಎದುರಾಗಿ ಕುಳಿತುಕೊಂಡು, ಎಲ್ಲೆ ಲೋಕೈಕಸುಂದ ರಿಯಾದ ರಮಣೀಮಣಿಯೇ ! ನೀನಾರು ? ಎಲ್ಲಿಂದ ಬಂದಿರುವೆ ? ನಿನ್ನ ಪೊಂಪ್ಪೋ ತ್ಕರವೇನು. ನಿನ್ನಂ ನೋಡಿದ ನಿನ್ನ ಕಂಗಳು ಸಫಲಂಗಳಾದವು, ನಿನ್ನೀಜನ್ಮವು ಧನ್ಯವಾದುದೆಂದು ಮುಗುಳುನಗೆಗೆಯ್ದನು, ಸೂಸುತ ಬಹುವಿಶ್ವಾಸಂ ತೋ ರುತ್ತ ಮಾತನಾಡಿಸಲಾ ನಂದಿನಿಯು ಬ್ರಾಹ್ಮಣ ಪಂಪತಿಗಳೊಂದಿಗೆ ನುಡಿದಂ ತೆಯೇ ಆ ರೂಪಾಜೀವಿಯೊಳಂ ಪೇಳ್ದ, ಅವಳ ಅಂಗಜ ಕೈಗಳಿಂದಲೂ ಮಾತು ಗಳ ಶಯ್ಯೆಯಿಂದಲೂ ಉಡಿಗೆಗಳಿಂದಲೂ ಈ ನಾರಿಯು ವೇಶ್ಯಾಂಗನೆಯೆಂದರಿತು ಎಲ್ಲೆ ಸುಂದರಿಯೇ ! ನಾನು ನಿನ್ನೊಡನೆ ಕುಳಿತು ಮಾತಾಡುಂ ದೇಹಾಯಾಸ ಮುಂ ಪೊಂದಿರುವೆನಾಗಿ ಸಮಯಮಿಲ್ಲ ಮತ್ತೊಂದು ಕಾಲದೊಳಾಗಲಿ ಎನೆ, ಆ ವೇಶ್ಯೆಯು ಎಲೌ ತಾಯಿಂಬೀ! ನಿನಗೆ ಹಾಗೆ ದೀಕ್ಷಾಯಾಸವಿದೋಡೆ ನಾನೇ ಸ್ವಾನಾಗಳಂ ಮಾಡಿಸುವೆನು. ಮನಸ್ಸಿಗೆ ಬೇಸರವಾದರೆ ನಮ್ಮ ಮನೆಗೆ ಬಂದು ಅಗಾಗ್ಗೆ ಬೇಸರಮಂ ಪರಿಹರಿಸಿಕೊಂಡು ವಿನೋದವಾಗಿ ಮಾತಾಡು ತ್ತಿದ್ದು ಬರಬಹುದು. ನೀನು ಯಾವಜಕ್ಕೂ ಯೋಚಿಸಬೇಡ. ನಿನ್ನ ಸೇವೆಯಂ ಮಾಡಿ ನಾಂ ಧನ್ಯಳಾಗುವೆನೆಂದು ಪೇಳಲಾ, ನಂದಿನಿಯು ನಾನು ಇದ್ದಪೆಯಂ ಬಿಟ್ಟು ಹೊರಗೆ ಬರುವಳಲ್ಲ. ಪರಪುರುಷರ ಮುಖವನ್ನೇ ನೋಡುವವಿಲ್ಲವೆಂಬ ವ್ರತಮುಳ್ಳವಳಾಗಿದ್ದೇನೆ. ಪತಿಯು ಪ್ರವಾಸದೊಳಿರುವಾಗ್ಗೆ ಅಲಂಕಾರಾದಿಗಳಿಂ ಹೊಂದಲೆಳಸುವವಳಲ್ಲಂ, ಎಂದುತ್ತರವನಿತ್ತು ಅಲ್ಲಿಂ ತನ್ನ ಕಾರ್ಯಕ್ಕಾಗಿ ಹೊರ ಟುಹೋಗಲು, ಈ ವೇಶ್ಯಾಂಗನೆಯು ತನ್ನ ಮನೆಯಂ ಸಾರಿ ಹೇಗಾದರೂ ಉಪಾಯಾಂತರದಿಂದ ಈಕೆಯಂ ವೈವಶಗೊಳ್ಳಬೇಕೆಂದು ಯೋಚಿಸುತ್ತಾ ಪ್ರತಿದಿ ನದಲ್ಲಿಯೂ ತಾನೇ ಬಂದು ಪಲ ಪುಷ್ಪ ತಾಂಬೂಲಗಳಂ ಕೊಟ್ಟು ಮೃದುವಚನ ಗಳಿಂ ಮಾತನಾಡಿಸುತ್ತಾ ಹೀಗೆಯೇ ಸಮಯ ನಿರೀಕ್ಷಣೆಯಲ್ಲಿರುವಾಗ್ಗೆ ಈ ನಂದಿನಿಗೆ ನವಮಾಸಂಗಳು ತುಂಬಿ ಪ್ರಸವಕಾಲಂ ಸನಿಹವಿಸಲು, ಇದನರಿತಾ ವೇಶ್ಯಾಂಗನೆಯು ಇದೀಗ ತನಗೆ ಯುಕ್ತಕಾಲಂ. ಈಕೆಗೆ ಉಪಾಯಮಾಗಿ ಹೆರಿ ಗೆಯಂ ಮಾಡಿ ಈ ಮೂಲಕ ಈಕೆಯ ಜಯಿಯಂ ಸಂಪಾದಿಸಿಕೊಳ್ಳುವದಲ್ಲದೆ ಹುಟ್ಟಿದ ಮಗುವಂ ಉಪಾಯವಾಗಿ ಅಪಹರಿಸುವೆನೆಂದು ಯೋಚಿಸಿ ಗೃಹಕೃತ್ಯೋ ಪಯುಕ್ತಂಗಳಾದ ವಿಶಿಷ್ಟ ಪದಾರ್ಥಂಗಳನ್ನು ತರಿಸಿ ಆ ಬ್ರಾಹ್ಮಣನ ಮನೆಯೊ

ಳು ಹಾಕಿಸಿ ವಿಶೇಷವಾಗಿ ಹಾಲುಕರೆಯುವ ಹಸುವಂ ತಂದು ಈ ಬ್ರಾಹ್ಮಣನ ಮನೆಯೊಳು ಕಟ್ಟಿಸಿ ದಿವ್ಯ ಸುಗಂಧ ಪುಷ್ಪಗಳನ್ನು ಪಲಂಗಳನ್ನೂ ತರಿಸಿಕೊಡು ತ್ತಾಬರಲಾ ನಂದಿನಿಯು ಅವುಗಳಂ ಕಣ್ಣಿಂದಲಾದರೂ ನೋಡದೆ ಆ ಮುತ್ತೈದೆ ಯಿಂದಲೆ ಇತರ ಸುವಾಸಿನಿಯರಿಗೆ ಕೊಡುತ್ತಿರುವ ಕಾಲದೊಳು ಪ್ರಸವಸೂಜನೆ ತೋರಲಾ ನಂದಿನಿಯು ಮುಖವಂ ಹಿಂಡಿಕೊಳ್ಳುತ್ತ ಬರಲದಂ ತಿಳಿದಾ ಬ್ರಾಹ್ಮ ಣ ಪತ್ನಿಯು ದಿನವಹಿ ಬರುತ್ತಾ ಹೋಗುವ ಸ್ತ್ರೀಜನಂ ನಿಲಿಸಿದ ವಾರಾಂ ಗನೆಯೊಳುಸುರಲು, ಆ ವಾರನಾರಿಯು ಇದಕ್ಕೆ ಸಮಯವೆಂದು ಯೋಚಿಸಿ, ತನ ಗನುಕೂಲೆಯಾದ ಸೂಲಗಿತ್ತಿಯಂ ಕರೆಯಿಸಿ ಸಿಕ್ಕುವಷ್ಟು ಅಸಾಧ್ಯವಾದ ವಿನೋ ಒಂದು ಪದಾರ್ಥವುಂ ತರುವಂತೆ ಆ ಬ್ರಾಹ್ಮಣಂಗೆ ಗೊದ್ದು ನೇಮಿಸಿ ಕಳುಹಿ ಆ ಬ್ರಾಹ್ಮಣಪತ್ನಿಯನ್ನೂ ಅಂತೆಯೇ ಮಾಡಿ ಕಳುಹಿಸಿ ನಂದಿನಿಯಂ ಹೆರುವ ಸಣ್ಣ ಮನೆಯೊಳು ಕರೆತಂದು ಕುಳ್ಳಿರಿಸಿ, ಎಲೌ ತಾಯಿ ನೀನು ರಾಜಪುತ್ರಿ ಯು ಚೊಚ್ಚಲು ಹೆರಿಗೆಯಂ ಹೆರುವವಳಾಗಿರುವದ್ದರಿಂದ ಹುಟ್ಟುತ್ತಲೇ ನೋಡ ಬಾರದು, ನಿನ್ನ ಪತಿಗೆ ಅಮಂಗಳವಾಗುವದೆಂದು ಕೆದರಿಸಿ ಸೆರಗಿನಿಂದ ಕಣ್ಮರೆ ಯುಮಾಡಿ ಸೂಲಗಿತ್ತಿಯಂ ಕರೆದು ಮಗುವ ಹುಟ್ಟಿದಕೂಡಲೆ ನಾಳಚ್ಛೇದನಂ ಮಾಡಿ ತತ್ಕ್ಷಣದಲ್ಲಿಯೇ ಪಾಣಂತಿಗೆ ಅರಿಕೆಯಿಲ್ಲದೆ ನನ್ನ ಕೈಯ್ಯೊಳ್ಳೀಯ್ಯ ಬೇಕೆಂದು ರಹಸ್ಯವಾಗಿರುವಿ ತಾನೂ ಬಾಗಿಲಲ್ಲಿಯೇ ನಿಂತು ನಂದಿನಿಯಂ ಸಮಾಧಾನಗೊಳಿಸುತ್ತಿರೆ, ಆ ರಾತ್ರಿಯ ಮೂರನೆಯಾಮದೊಳು ಗಂಡುಮ ಗುವಂ ಹೆತ್ತಳು.

ಆ ಕೂಡಲೆ ಸೂಲಗಿತ್ತಿಯು ಶಿಶುವಿನ ನಾಳವಂ ಛೇದಿಸಿ ಮರದೊಂದಿಗೆ ಈ ವೇಶ್ಯಾಂಗನೆಯ ಕೈಗೆ ಕೊಡಲು ನೋಡಿ ಸರ್ವೋತ್ತಮ ಸೌಂದರ್ಯವಾಗಿ ದ್ದರೂ ಗಂಡುಶಿಶುವಾದ್ದರಿಂದ ತನಗೆ ಉಪಯೋಗವಿಲ್ಲವೆಂದರಿತು ಈ ಶಿಶುವಂ ಈ ನಂದಿನಿಯೊಳಿಟ್ಟಿದ್ದರೆ ಮೈಗಳವಾಗಿ ತನ್ನ ಕಾರ್ಯಕ್ಕೆ ಮುಂದೆ ಪ್ರಯೋಜನವಿ ಲ್ಲವೆಂದರಿತು ತನ್ನ ದಾವಿಯರಂ ಮೆಲ್ಲನೆ ಕರೆದು ಮರದೆಂಕೆಯಾಗಿ ಆ ಶಿಶುವಂ ಅವರ ಕೈಗಿತ್ತು ಶಿಶುವಂ ಕೊಂಡೊಯ್ದು ಕೋಟೆಯ ಆಗಳ್ತಿಯೊಳು ಬಿಸಾ ಟುಬರುವಂತೆ ಆ ಗೌಡಿಯರಿಗೆ ಆಜ್ಞೆಯಂಮಾಡೆ ಅವರಾ ಶಿಶುವಂ ಕೈಯ್ಯೊಳಾಂ ತು ಅದರ ಸೊಬಗಂ ನೋಡಿ ಹಾ ! ಆ ಪಾಪಿಯು ಎಂಥಾ ದಯಾಶೂನ್ಯಳು ಅವ ಳಾಜ್ಞಾನುಸಾರವಾಗಿ ಈ ಮಹಾಪಾಪವುಂ ಹೇಗೆ ಮಾಡುವುದು, ಪೂರ್ವಜನ್ಮ ದೊಳು ಇಂಥಾ ಮಹಾ ಪಾಪಂಗಳಂ ಮಾಡಿದ್ದರಿಂಪಲೇ ಈ ವೇಶ್ಯಾಂಗನೆಗೆ ದಾಸಿ ಯಾಗಿ ಈ ವಿಧಂಗಳಾದ ಕಷ್ಟಂಗಳಂ ಹೊಂದುತ್ತಿರುವೆವು. ಈಗಲೂ ತಿಳಿದುತಿ ಳಿದು ಇಂಥಾ ದುಷ್ಕೃತ್ಯಂಗಳಂ ಮಾಡಿ ಮುಂದೂ ಪಾಪಿಗಳಾಗಿ ಇನ್ನೆಂತು ಕಷ್ಟಂಗಳಂ ಹೊಂದಬೇಕೋ ? ಈ ಮಗುವನ್ನು ನೋಡಿದರೆ ಮಹಾಪುರುಷ

ಲಕ್ಷಣಂಗಳಂ ಪೊರೆಯುತ್ತಿರುವುದು. ಸರ್ವಥಾ ಇದಂ ಕೊಲ್ಲಬಾರದೆಂದಾ ಲೋಚಿಸಿ ಕೋಟಿಯು ಕಂಚಕಿದೊಳು ಒಂದೆಡೆ ನುರಿಬಾವ ಸ್ಥಳದೊಳು ಮುರವಂ ನಿಟ್ಟು, ಅಲ್ಲಂ ಹೊರಟುಬಂದು ತಮ್ಮ ಯಜಮಾನಿಯಾದ ಸೂಳೆಯೊಳಂತೆಯೇ ಪೇಳದೆ, ಅಕೆಯ ಆಜ್ಞಾನುಸಾರವಾಗಿ ಗೈದೆವೆಂದು ಬಂದೊರೆದರು. ಆ ಒಳಗಾಗಿಯೇ ಆ ವಾರನಾರಿಯು ನಂದಿನಿಯ ಕಂಗಳಿಗೆ ಕಟ್ಟಿಯಿದ ಬಟ್ಟೆಯಂ ಬಿಚ್ಚಿ ಕಪಟವ್ಯಥೆಯಂ ತೋರುತ್ತಾ ಅಮ್ಮ ನೀನು ಹೂಂದಿದ ಕ್ರಮೆಯುಂ ಪಲವಿಲ್ಲದೆ ಪೋದುದು ನೀನಾಂತಿರ್ಪ ಗರ್ಭವು ವಾತಗರ್ಭವೇ ಹೊರತು ಮತ್ತಾವದೂ ಅಲ್ಲಂ ಬರೀ ನೀರುಹೊರಬಂಪುದು. ಎಂದೊರೆಯಲು ಕೇಳುತ್ತಾ ನಂದಿನಿಯು, ಹಾ! ಈ ಪಾಪಿ ವೇಶ್ಯೆಯು ಹುಟ್ಟಿದ ಶಿಶುವಂ ನಿನ್ನೋ ತಂತ್ರಗೊಳಿಸಿರುವಳು ಕೆಲಸವು ಕೆಡುಹೋದುದಲ್ಲಾ, ಅಯ್ಯೋ! ಪಾಪಿಯಾದೆನೇ ನಾನಾಂತ ಕ್ರಮೆಯಿಂದ ಮಗನನ್ನೇ ಹೆತ್ತಿರುವೆನು ಎಂದು ದುಃಖಿಸುತ್ತಾ ಸಮುದ್ರದ ತೆರೆಗಳಂತೆ ತಂಚಶಂಕವಾಗಿಯೇ ದುಃಖಗಳು ಬರುವನಲಲ್ಲಾ, ಎಂದು ಹಂಬಲಿಸುತ್ತಾ ತಾಂ ಮಗುವಂ ಹೆತ್ತ ಲಗ್ನ ದಿನ ವಾರಂಗಳಂ ಮಾತ್ರ ಆ ಮನೆಯು ಗೊಹೆಯೊಳು ಗುರ್ತು ಹಾಕಿ, ತನ್ನ ಪತಿಯನ್ನು, ತನಗುಂಟಾದ ದುಃಖ ಪರಂಪರೆಯನ್ನು ನೆನೆದು ಬಿಸುಸುಯ್ಗುತ್ತಂ ಬಿಡುತ್ತಾ ಶೋಕಾಂಬುಧಿಮಗ್ನೆಯಾಗಿದ್ದಳ್.

ಎಂದೊರೆದು ಎಲ್ಲೆ ವಿಕ್ರಮಾರ್ಕರಾಯರೇ? ತದ್ಭಾಗ್ಯಾನುಸಾರವಾಗಿ ಒಂದು ಯಾಮನಾದುದು. ಅಷ್ಟರೊಳಗಾದರೆ ವಿಶ್ರಾಂತಿಯುಂ ಹೂಂದುವೆನೆನಲು ರಾಯಂ ಸಮ್ಮತಿಯಂ ತೋರಲು ಆ ಬೊಂಬೆಯು ಸುಮ್ಮನಾದುದೆಂಬಲ್ಲಿಗೆ ಕನ್ನಾಟಕ ಭಾಷಾ ವಡಸರಚಿತ ಸೌಂದರ್ಯಾದ್ಭುತರತ್ನಾಕರ ಚಿತ್ರ ಬೃಹತ್ಕಥಾಮಂಜರಿಯೊಳ್ ಲೀಲಾವತೀ ಗರ್ವಭಂಗವೆಂಬ ಎರಡನೆ ಭಾಗದೊಳು ಮೂರನೆಯಾಮದ ಕಥಾ ವಿರಾಮ ನಾದುದು.

ತದನಂತರಮಾ ವಿಕ್ರಮಾರ್ಕಭೂಮೀಂದ್ರಂ ಲೀಲಾವತಿ ಆರಾಧಿಸುತ್ತಲಿರ್ದ ಗೌರಿಯಂ ಕುರಿತು ಎಲೌ ಕಾತ್ಯಾಯನಿದೇವಿಯೆ! ಬೆಳಗಾಗುವಷ್ಟರಿಗೂ ನೀನೊಂದು ಕಥೆಯಂ ಹೇಳಬೇಕೆಂದು, ಸಂಪ್ರಾರ್ಥಿಸಲಾ ಭವಾನಿಯು, ವಿಲ್ಲಿ ವಿಕ್ರಮಾದಿತ್ಯ ಧರಣೀಂದ್ರನೇ ಲಾಲಿಸು, ಗಂಗಾನದೀ ತೀರದೊಳು ಮಂಗಳರಂಗವೆಂದು ಪ್ರಸಿದ್ಧಿಯಾದೊಂದು ಪುರಭೇದನವಿಪ್ಪುದು. ಆ ಪಟ್ಟಣಮಂ ಸರ್ವಾಭೀಷ್ಟಸಿದ್ಧಿರಾಯಂ ಪರಿಪಾಲಿಸುತಿರ್ದನೆನಲು, ಆ ಲೀಲಾವತಿಯು ಮೇಲಕ್ಕೆದ್ದು ಹಾಸಿಗೆಯೊಳು ಕುಳಿತು, ಹಾ? ಪುರುಷರು ಕ್ರೂರಚಿತ್ತರೆಂಬುವದು ಸ್ಪಷ್ಟಮಾಗಿ ತೋರಬರುವದಲಲ್ಲಾ, ಪರಮ ದುಃಖಾಕ್ರಾಂತಳಾದ ನಂದಿನಿಯ ಗತಿಯನ್ನೂ ಅಗಳ್ತಿಯೊಳು ಬಿದ್ದಿದಾ ಶಿಶುವಿನ ಅವಸ್ಥೆಯನ್ನು, ನಾಗರಾಜನ ಸ್ಥಿತಿಯನ್ನೂ ತಿಳಿಯದೆ, ನನ್ನ ಮನವು ತುಂದಾ ಕಳವಳಗೊಳ್ಳುತ್ತಿಹುದು, ನನ್ನ ಪ್ರತಿ

ಜ್ಞಾಭಂಗಮಾದರೂ ಚಿಂತೆಯಿಲ್ಲ, ಅವರುಗಳ ಗತಿಯಂ ತಿಳಿದಹೊರಕು, ನಾಂ ಸಮಾಧ್ಯಾನಮಂ ಹೊಂದಲಾರೆನೆಂದು, ವಿಕ್ರಮಾದಿತ್ಯರಾಯನ ಬಳಿಯಂ ಸಾರಿ, ಸ್ವಾಮಿ! ನನ್ನ ಪ್ರತಿಜ್ಞಾಭಂಗವಾದರೂ ಚಿಂತೆಯಿಲ್ಲ, ನಂದಿನಿಯಗತಿಯೂ ಆ ಕೆಯ ಪತಿಯೇ ಮೊದಲಾದವರ ಸ್ಥಿತಿಗಳೇನಾದುವೊ ತಿಳಿಯಲು ಕಳವಳಮಾಂ ತಿರುವೆನಾಗಿ ದಯವಾಡಿ ಆ ಕಥೆಯನ್ನೇ ಮುಂದಕ್ಕೆ ಹೇಳುವಂತೆ ಮಾಡಿಸಬೇ ಕೆನೆ, ರಾಯುಂ ಗೌರಿದೇವಿಯುಂ ಪ್ರಾರ್ಥಿಸಲು, ಆ ಗೌರಿಯು ಸೇಳಲಾರಂಭಿಸಿದಳು.

ಲೀಲಾವತಿಗೆ ಗೌರಿದೇವಿಯು ನಾಲ್ಕನೆಯಾಮದೊಳು ಹೇಳುವ ಕಥೆ.

ಕೇಳೈ ವಿಕ್ರಮಾರ್ಕಾವನೀಂದ್ರನೇ! ಕೋಟೆಯ ಅಗಳ್ತೆಯೊಳು ಮಲಗಿದ್ದ ಶಿಶುವಿನೊಳು ಕನಿಕರಮಾಂತ ಲೋಕೇಶನಾದ ಪರಮೇಶ್ವರಂ ಆ ಪೊಳಲಿಗಧಿಪತಿ ಯಾದ ಭದ್ರರಾಜನ ಸ್ವಪ್ನದಲ್ಲಿ ಬಂದು, ಎಲ್ಲೆ ರಾಯನೇ! ನಿನ್ನ ರಾಜ್ಯದೊಳು ಶ್ರಮಾದ ಕಾರ್ಯವೊಂದು ನಡೆಯಿಹುದು, ವಿನೆನ್ನು ವಿಂಧ್ಯೋ ನುಹಾ ರಾಜಾತ್ಮಜೆ ಯಾದ ಪಿವಳ ಮಹಾಪತಿವ್ರತಾ ಗರ್ಭದೊಳು ಸರ್ವೋತ್ತಮ ಪುತ್ರರತ್ನಂ ಜನಿಸಿ ದುದು, ಪಾಪಿಯಾದೊರ್ವಳು ತಂತ್ರಮಂ ಮಾಡಿಸಿ, ಆ ಶಿಶುವಂ ಸಾಗಿಸಿ ಕೋ ಟೆಯ ಅಗಳ್ತೆಯೊಂದರೆಗಲ್ಲಿನ ಮರೆಯೊಳು ಮಲಗಿಸಿಹಳು, ನೀನೀಕ್ಷಣದೊಳು ಅಲ್ಲಿಗ್ಯೆದಿ ಪುತ್ರರಹಿತನಾಪ್ಪರಿಂದೀ ಕಾರ್ಯಮಂ ಮಾಡೆ, ಈ ಪುಣ್ಯಕಾರಣದಿಂ ಮುಂದೆ ನಿನ್ನ ವಂಶೋದ್ಧಾರವಾಗುವದೆಂದೊರೆಯಲಾ ರಾಯಂ ಅಂತೆಯೇ ನಿಶ್ಚಯಂ ತೊರೆದೆದ್ದು, ನಿತ ಪರಿವಾರಾವೃತನಾಗಿ ಬೊಂಬಾಳಂಗಳಂ ತೆಗಿಸಿ ಕೊಂಡು, ಆ ಅಗಳ್ತೆಯ ಬಳಿಗ್ಯೆದಿ ಅರೆಯ ಬಂಡೆಯ ಮರೆಗ್ಯೆದಿ ನೋಡಲು, ಕೋಟಿಸೂರ್ಯ ಪ್ರಕಾಶಮಾನವಾಗಿ ಸುಂದರತರ ಕಂದವಾಗಿ ಹೊಳೆಯುತ್ತಿರುವ ಶಿಶುವಂ ನೋಡಿ ಭ್ರಾಂತನಾಗಿ ಪುತ್ರರಹಿತನಾದ್ದರಿಂದ ಅತ್ಯಂತ ಮಮತೆಯೊಳಾ ಶಿಶುವಂ ತನ್ನ ಕೈಗಳಿಂದೆತ್ತಿ ಅಪ್ಪಿಕೊಂಡು, ತನ್ನ ದಿವ್ಯ ದುಕೂಲಮುಂ ಹೊದಿಸಿ, ಅರಮನೆಗೆ ತಂದು ತನ್ನ ಪ್ರಾಣಕಾಂತೆಯ ಕೈಗೆ ಕೊಡಲಾಕೆಯುಂ, ಆ ಮಗುವಂ ನೋಡಿ, ಪರಮಾನಂದಭರಿತಳಾಗಿ ದಿವ್ಯತರವಾದ ಹೊದಿಕೆ ಹಾಸುಗಳಂ ತರಿಸಿ, ಅದರೊಳ್ ಮೊಗುವಂ ಮಲಗಿಸಿ, ಜನನಕಾಲದೊಳು ಮಾಡಬೇಕಾದ ಸಕಲ ಕೃತ್ಯಂ ಗಳಂ ಮಾಡಿಸಿ, ಮೊಗುವಿನ ಚಲುವಿಕೆಯನ್ನೋಡಿ ಸಂತೋಷಿಸುತ್ತಾ, ತಕ್ಕದಾ ದಿಯರಂ ನೇಮಿಸಿ, ಪರಿವಿಡಿದು, ಆ ಮಗುವಂ ಪೋಷಿಸುತ್ತಾ, ಇದ್ದಳು. ಮರು ದಿನದುದಯದೊಳೆದ್ದಾರಾಯಂ ಪಿಲಗಕ್ಕೈವಿ ಮಂತ್ರಿಯುಂ ಕರದು, ಎಲ್ಲೆ ಸಚಿ ವಾಗ್ರೇಸರನೇ ಕೇಳು? ನಿನ್ನೆಯ ರಾತ್ರಿಯೊಳೊಂದು ಗಂಡುಶಿಶುವು ನನಗೆ ದೊರ ಕುದು, ಅದರ ಜಾತಿಯಾವದೋ, ಅದಂ ಹೆತ್ತವಳಾರೋ ತಿಳಿಯಬೇಕಾಗಿ ನೀನ

ದಂ ವಿಚಾರಿಸೆಂದಾಜ್ಞಾಪಿಸಲಾ ಮಂತ್ರಿಶೇಖರಂ ಹಾಗೆಯೇ ಯೋಚನೆಯಂ ಮಾಡಿ, ಒಂದುಪಾಯಮಂ ಕಂಡು ಪುರದೊಳಿಲ್ಲಾ ಡಂಗೋರೆಯಂ ಕೂಯಿಸಿದಂ ಹೇಗಂದರೆ;—ಇಂದ್ರಶೈಲದಿಂದ ಮಹಾದೇವಿಯೈತಂದು ಊರು ಹೊರಗಣ ಮಾವಿನ ತೋಪಿನೊಳಿೂಂದಾಲದ ಮರದಮೇಲೆ ವಾಸವಾಗಿಹಳು, ಆಕೆ ನಾಡಿಪ್ಪು ಶುಕ್ರವಾರದ ದಿನ ಈ ಊರಿಂ ಮುಂದರಿದು ತನ್ನಾ ವಾಸಕ್ಕೈದುವಳು, ಆ ದೇವಿಗೆ ನಾಳೆ ಪ್ರಾತಃಕಾಲ ಮೊದಲು ಸಾಯಂತರದವರಿವಿಗೂ ನಾಡಿಪ್ಪು ಇದೇಮೇರಿಗೆ ಊರಲ್ಲಿ ಸಮಸ್ತ ವರ್ಣಾಶ್ರಮದ ಹೆಂಗಸರೂ ಬಂದು ಆರಾಧಿಸಬೇಕು, ಯಾವ ಹೆಂಗಸು ಬಾರದಿರುವಳ್ಳೋ ಅವಳ ಕುಲವನ್ನೆಲ್ಲವಂ ನಾಶಗೊಳಿಸುವಳಿಂತೆ ಹೆಂಗಳಾವವರು ಉಪಾಧಿಗ್ರಸ್ತರಾಗಲಿ, ಮತ್ತಾವ ನಿರ್ಬಂಧದವರೇ ಆಗಲಿ ಆಕೆಯ ದರ್ಶನವನ್ನಾದರೂ ದೂರವಾಗಿ ಬಂದು ಮಾಡಿಕೊಂಡು ಹೋದರೆ ಅವರಿಗೆ ಯಾವ ಅಪಾಯವೂ ಆಗಲಾರದು, ಹೀಗೆಂದು ಮಹಾರಾಜರಿಗೆ ಸ್ಪಷ್ಟವಾಗಿ, ಅವರಿಂದ ಆಜ್ಞಾಪಿಸಿರುವವಾಗಿ ಪುರದೊಳಿಲ್ಲಾ ಪ್ರಸಿದ್ಧಿಯಂ ಮಾಡಿ, ತೋಪಿನೊಳು ಆಲದಮರಕ್ಕೆ ವಸ್ತ್ರಾಭರಣಾದಿಗಳಿಂದ ಅಲಂಕರಿಸುವಂತೆಯೂ, ಏರ್ಪಡಿಸಿ, ಜನಗಳು ಬಂದು ಹೋಗುವದಕ್ಕೆ ಪ್ರತ್ಯೇಕವಾಗಿ ದಾರಗಳಂಗಳಂ ಮಾಡಿ ಆ ಬಳಿಯೊಳು ಮಹಾಬುದ್ಧಿಶಾಲಿಗಳಾದ ವೈದ್ಯರಂ ನಿಲ್ಲಿಸಿ, ಅವರೊಳು ನಿನ್ನೆ ಮೊನ್ನೆಯಲ್ಲಿ ಪ್ರಸವಿಸಿದ ಚಿನ್ನೆಗಳು ಕಾಣುವ ಯಾವ ಹೆಂಣನ್ನೇ ಆಗಲಿ, ಕಂಡಾ ಹಿಡಿಯಬೇಕೆಂದು ರಹಸ್ಯವಾಗಿ ಹೇಳಿ ಕ್ರಮಿಸಿಡಿಸಿ, ತಾನು ದೂರವಾಗಿ ಬಂದವರೆಲ್ಲರೂ ಚನ್ನಾಗಿ ಕಾಂಬಂತೆ ಕಕ್ಕ ಸ್ಥಳದೊಳು ನಿಂತುಕೊಂಡನು, ರಾಜಾಜ್ಞಾನುಸಾರವಾಗಿ ಬಂದು ಸೇವೆಮಾಡಿಕೊಂಬು ಹೋಗುವ ಸಮಸ್ತ ಜಾತಿಯವರನ್ನೂ, ತತ್ಕಾಲ ಗಂಡನಿಲ್ಲದವರನ್ನು ವಿಶೇಷವಾಗಿ ಮುಖಕಾಂತಿಯೇ ಮೊದಲಾದ ಚಿಹ್ನೆಗಳಿಂ ಅವರಿಗೆ ತಿಳಿಯದಹಾಗೆ ಪರಿಕಿಸಿಕೊಳ್ಳುತ್ತಾ, ಎರಡು ದಿನಗಳು ನೋಡಿದರೂ, ಅಂತೆಯ ಹೆಣ್ಣೇ ಕಣ್ಣಿಗೋಚರಿಸಲಿಲ್ಲ, ಮಂತ್ರಿಯು ಹೀಗೆ ಸಾಧ್ಯವಾಗಲಿಲ್ಲವೆಂದು ಮತ್ತೊಂದುಪಾಯವಂ ಯೋಚಿಸಿ, ಅದೇದಿನದ ಸೂರ್ಯಾಸ್ತವಾನ ಸಮಯದೊಳು ಮಂತ್ರಿಸಾನಿ ಕೆಲಸಮಂ ತಿಳಿದವರಾರಾದರೂ ಸರಿಯೇ ಅಂತಿಯ ಸ್ತ್ರೀಯರೆಲ್ಲರೂ ಬರಬಹುದು, ಪರಿಕ್ಷೆಯಲ್ಲಿ ಯಾರು ಜಯವಂ ಹೊಂದುವರೋ ಅವರಿಗೆ ಅವರೊಳ್ ದೊಡ್ಡ ಸಂಬಳದ ಉದ್ಯೋಗಂಗಳು ದೊರೆಯುವವು, ಎಂದು ಡಂಗೋರೆಯಂ ಹೊಯಿಸಿ, ಇವರ ಪರಿಕ್ಷಾಕಾಲವು ನಾಳಿನ ಮಧ್ಯಾಹ್ನಕ್ಕೆ ಆರಂಭವಾಗಿ ಸಾಯಂಕಾಲಕ್ಕೆ ಪೂರ್ತಿಸುವದೆಂತಲೂ, ಪ್ರಸಿದ್ಧಿಯಂ ಮಾಡಿ ಮರುದಿನದೊಳು ಸೂಲಗಿತ್ತಿತನ ಮಾಡುವವರಲ್ಲಿ ಸ್ವಲ್ಪ ಬಲ್ಲವರೂ, ಬುದ್ಧಿವಂತರಾದವರೂ ತಿಳಿದೂ ತಿಳಿಯದವರೂ ಸುತರಾಂ ಆ ಸಂಗತಿಯೇ ತಿಳಿಯದ ಹೆಂಗಸರೂ ಸಹಾ ಸುಮಾರು ಇನ್ನೂರುಮಂದಿವರಿವಿಗೂ

ಬಂದು, ಅರಮನೆಯೊಳು ಕ್ಲುಪ್ತಸ್ಥಾನದೊಳು ಸೇರಲು ಮಂತ್ರಿಯೇ ಪರೀಕ್ಷೆ
ಕನಾಗಿ ಕುಳಿತು ಒಬ್ಬೊಬ್ಬಳನ್ನೇ ಸಮೀಪಕ್ಕೆ ಕರದು, ನೀಂ ಎಷ್ಟುದಿನಗಳಿಂದೀ
ಸೂಲಗಿತ್ತಿಯು ಕೆಲಸಮಂ ಮಾಡುತ್ತೀಯೆ ? ಎಂದುದಿನಗಳಿಂದೀಚಿಗೆ ನೀಂ ಹೆರಿ
ಗೆಮಾಡಿದ ಸ್ಥಳಗಳೆಷ್ಟು ಅವುಗಳೊಳು ಮಕ್ಕಳುಮಾತ್ರಾ ಬದುಕಿ, ತಾಯಿಗಳ
ಳಿದವೆಷ್ಟು ? ತಾಯಿಯರುಳಿದು ಮಕ್ಕಳು ಹೋದವೆಷ್ಟು ! ಎಂದು ಕೇಳಿ ಅವ
ರು ಕೊಡುವ ಉತ್ತರಂಗಳಂ ಒರೆದುಕೊಳ್ಳುವನಂತೆ ನಟಿಸುತ್ತಾ ಅವರ ಹೆಸರು
ಗಳಂ ಬರದುಕೊಂಡು ಕರೆಯಿಸಿದಾಗ ಬರಲೀಕೆಂದೊರೆಯುತ್ತಾ ಒಂದೊಂದು ವರ
ಹನಂ ಕೈಗೆಕೊಟ್ಟು ಕಳುಹುತ್ತಾ ಬರಲು ನೂರಾರು ಮಂದಿಗಳನ್ನು ವಿಚಾರಿಸಿ
ಕಳುಹಿಪನಂತರದೊಳು ಈ ನಂವಿನಿಗೆ ಹೆರಿಗೆಮಾಡಿದ ಸೂಲಗಿತ್ತಿಯು ಬರಲು
ಅವಳನ್ನೂ ಯಥಾ ಪ್ರಕಾರವಾಗಿ ಕೇಳಲಾರಂಭಿಸೆ, ಸ್ವಾಮಿ ಮಂತ್ರಿಶೇಖರ
ರೇ ನಾನೀಗ್ಯೆ ಮೂರು ದಿನಗಳ ಕೆಳಗೆ ಈ ಊರೊಳಿರುವ ಗ್ರಾಮ ಪೌರೋಹಿ
ತರಾದ ಸಂಜೀವ ಜೋಯಿಸರ ಮನೆಗೆ ಬಂದಿರುವ ಗಂಧರ್ವಾಂಗನೆಯಂತಿರುವ
ಗರ್ಭಿಣಿಗೆ ಹರಿಗೆಯಂ ಮಾಡಿದೆನು ಗಂಡು ಮಗುವ ಜನಿಸಿದುದು ಆ ಕಾಲಕ್ಕೆ
ಬಂದಿರ್ದ ಈ ಊರಲ್ಲಿರುವ ಶ್ರೀಲೋಕಸುಂದರಿಯೆಂಬ ವೇಶ್ಯಾಂಗನೆಯು ಬಂದು
ತೆಗೆದುಕೊಂಡಳು ಹೀಗೆ ಅನೇಕ ಕಡೆಗಳೊಳು ಇದಕ್ಕೆ ಹಿಂದೆ ಹೆರಿಗೆಯಂಮಾಡಿ
ದ್ದೇನೆ. ಮಕ್ಕಳೂ ಬಾಣಂತಿಯರೂ ಸುಖಿಗಳಾಗಿದ್ದಾರೆ ಎನಲು ಅವಳಿಗೂ
ಬಹುಮಾನಮಂ ಕೊಟ್ಟು ಒಂದೆಡೆ ನಿಲ್ಲಿಸಿ ಅಕ್ಷಣದೊಳೇ ಆ ವೇಶ್ಯಾಂಗನೆಯಂ
ಕರೆಯಿಸಿ ವಿಚಾರಿಸಿ ಭೀತಿಗೊಂಡಪಳಾದಾ ವಾರಾಂಗನೆಯು ಸ್ವಾಮಿ ನಾನೇ
ನೋ ಆ ಮಗುವಂ ಕೈಗೊಂಡದ್ದು ನಿಜಂ ಅನಂತರ ದಾದಿಯರ ಕೈಗೆ ಕೊಟ್ಟೆನೆನೆ
ಅವಳಂ ನಿರ್ಬಂಧದೊಳು ನಿಲ್ಲಿಸಿ ಆ ದಾದಿಯರಂ ಕರೆಯಿಸಿ ವಿಚಾರಣೆಯಂಮಾಡೆ
ಸ್ವಾಮಿ ಮಂತ್ರಿವರ್ಯರೆ ಲಾಲಿಪುದು ! ಈ ನವ್ಯ ಯೌವನೆಯಾದ ವಾರನಾರಿಯ
ಸೂಲಗಿತ್ತಿಯಂ ತಾನೇ ಗೊತ್ತುಮಾಡಿ ಕರೆತಂದಳು, ಅಲ್ಲಿ ಎಲ್ಲಾ ಕಾರ್ಯಂಗ
ಳಿಗೂ ತಾನೇ ಯಜಮಾನಿಯಾಗಿದ್ದು ಮಗು ಹುಟ್ಟಿದ ಕೂಡ್ಲೆ ನಮ್ಮಕೈಗೆಕೊ
ಡದ್ದು, ಕೋಟೆ ಕಂದಕದೊಳು ಬಿಸಾಡು ಬನ್ನಿರೆಂದು ಆಜ್ಞಾಪಿಸಿಕೊಡ್ದು ಕಳುಹಿ
ದಳು, ನಾವಾ ಶಿಶುವಂ ಕೊಲ್ಲಲಾರದೇ ಒಡತಿಯ ಆಜ್ಞೆಯನ್ನುಲ್ಲಂಘಿಸಲಾಱದೆ
ಯೋಚಿಸುತ್ತಾ ಹೋಗಿ ಏನಾದರೂ ಆಗಲೀ ಮಗುವಂ ಕೊಲ್ಲುವಪಸುಚಿತಮೆಂದ
ರಿತು ಎಳೇ ಚಿಗುರುಗಳಂ ತಂದು ಹಾಸು ಹೊದಿಕೆಗಳಂ ಮಾಡಿ ಕುಕ್ಕೆಯೊಳು ಮಲ
ಗಿಸಿ ಕಂದಕದ ಅರೆಯ ಮರೆಯೊಳಿರಿಸಿ, ಈಪರಿಯಸ್ವಾಮಿಗೆ ಅರುಹದೆ ನಿಸ್ವಾಜ್ಞಾ
ನುಸಾರವಾಗಿ ಮಾಡಿದೆವೆಂದು ಹೇಳಿದೆವೆ ಮಂತ್ರಿಯು ಆ ಸೂಳೆಯಂ ನಿರ್ಬಂ
ಧದೊಳಿರಿಸಿ ಮಿಕ್ಕವರೆಲ್ಲರಂ ಹಿಂದೆ ಕರೆದುಕೊಂಡು ರಾಜಾಸ್ಥಾನಮಂ ಪ್ರವೇ
ಶಿಸಿ ಒಡ್ಡೋಲಗಮಾಗಿ ಕುಳಿತಿರುವ ರಾಜನಬಳಿಯನ್ಯೈದಿ ಮುಕುಳಿತಹಸ್ತ

ನಾಗಿ ಸ್ವಾಮಿನಾ ! ಸಂಶಯು ನಿವತ್ತಿಯಾದುದು, ಈ ಊರೊಳಿರುವ ಗ್ರಾಮ ಪುರೋಹಿತನ ಮನೆಯೊಳು ನಡದ ಕೃತ್ಯವಿದು, ಆ ಬ್ರಾಹ್ಮಣದಂಪತಿಗಳಂ ಕರೆಯಿಸಿ ದೃಷ್ಟಾಂತಮಾಡಿಸುವೆನೆಂದು ಅವರಂ ಕರೆಯಿಸಿ ನಿಲ್ಲಿಸಿಕೊಳ್ಳಲು. ರಾಜಾಜ್ಞೆನುಸಾರವಾಗಿ ಸೂಲಗಿತ್ತಿಯುಂ ಕರೆಯಿಸಿ ಮುಂದೆ ನಿಲ್ಲಿಸಲು ಆ ಸೂಲಗಿತ್ತಿಯು ರಾಯನನ್ನು ಕುರಿತು, ಸ್ವಾಮಿನಾ ಪೃಥ್ವೀಂದ್ರರೆ ! ನಾನು ಹೇಳುವದರೊಳು ಏನಾದರೂ ನನ್ನಪರಾಧಂ ಕಾಣಬಂದರೆ ಕ್ಷಮಿಸಿ ನನ್ನಂ ಕಾಪಾಡಬೇಕು. ಈಗಾ ಮುದ ಪೌರೋಹಿತರಾದ ಸಂಜೀವಚೋಯಿಸರ ಮನೆಗಾರೋ ರಾಜಾತ್ಮಜೆಯೊರ್ವಳು ಬಂದಿಹಳು, ಈ ನಾರನಾರಿಯಾದ ತಿಲೋಕಸುಂದರಿಯು ನನ್ನಂ ಕರೆಮುಕೊಂಡುಹೋಗಿ ಅಲ್ಲಿ ಬಿದ್ದು ತನ್ನ ದಾದಿಯರನ್ನೇ ಅಲ್ಲಿನ ಕೆಲಸಗಳಿಗೆ ಓಡಾಡಿಸುತ್ತಾ ತಾನು ಮುಖಂಡಳಾಗಿ ಬಾಗಿಲೊಳು ಕುಳಿತು ಮನೆಯ ಯಜಮಾನರಾದ ಬ್ರಾಹ್ಮಣ ದಂಪತಿಗಳಂ ಕಾರ್ಯಾಂತರಕ್ಕಾಗಿ ಹೊರಗೆ ಕಳುಹಿಸಿ ರಾಜಪುತ್ರಿಯುಂ ಕುರಿತು, ಎಲ್ಲೆ ಸುಂದರಾಂಗಿಯೇ ! ನೀನು ಪ್ರಥಮಗರ್ಭಿಣಿಯಾಗಿರುವಿ ಈ ಹೆರಿಗೆಯುಂ ನೀನು ನೋಡಬಾರದು ನೋಡಿದರೆ ನಿನ್ನ ಪತಿಗೆ ಅಮಂಗಳವಾಗುವದು ಎಂದುಸುರಿ ಅಕೆಗೆ ಕಣ್ಣುಕಟ್ಟಿ ಹೆರಿಗೆಯುಮಾಡಿಂದು ನನಗೊರೆದು ಗಂಡುಮಗುವ್ ಜನಿಸಿದಕೂಡಲೆ ತನ್ನ ಕೈಗೆ ತೆಗದುಕೊಂಡು ನನಗೆ ಹತ್ತು ವರಹಗಳಂ ಕೊಟ್ಟು ಕಳುಹಿದಳು. ಅಮೇಲೆ ಶಿಶುವಿನಗತಿ ಏನಾಯಿತೋ ನಾ ಕಾಣೆನೆಂದೊರೆಯಲು ದಾದಿಯರಂ ಮುಂದು ನಿಲ್ಲಿಸಿ ವಿಚಾರಿಸೆ, ಸ್ವಾಮಿನಾ ಈ ಮಾತುಗಳೆಲ್ಲವೂ ನಿಜಂ ! ಆ ಮಗುವಂ ನಮ್ಮ ಕೈಗೆ ಕೊಟ್ಟು ಕಂದಕದೊಳು ಬಿಸಾಟುಬರುವಂತೆ ಹೇಳಿದಳು, ನಾವ ಶಿಶುಹತ್ಯಕ್ಕೆ ಅಂಜಿ ಅಂತೆಮಾಡದೆ ಮರೆಯಾಗಿ ಒಂದೆಡೆ ಮಲಗಿಸಿ ಬಂದೆವೆಂದು ಹೇಳಿ ಸುಮ್ಮನಾಗಲು, ಆ ವೃದ್ಧದಬ್ರಾಹ್ಮಣ ದಂಪತಿಗಳಂ ಕರದು ವಿಚಾರಿಸುತ್ತಾ ಬರಲು, ಆ ವೃದ್ಧಬ್ರಾಹ್ಮಣನು ಎಲ್ಲೆ ಮಹಾರಾಜನೆ ! ಜಯಶೀಲನಾಗಿ ಬಾಳೆಂದು ಆಶೀರ್ವದಿಸಿ ಕೇಳ್ವೆ ಭೂಪತಿಯೇ ! ನಮ್ಮ ಮನೆಯೊಳಿರುವಾಕೆಯು ರಾಜಾತ್ಮಜೆಯಂತೆ. ಆಕೆಯ ತಂದೆ ತಾಯಿಗಳು ಅತ್ತೆಮನೆಯಿಂದ ತೌರುಮನೆಗೆ ಕರತರುತಾ ನಾವೆಯಂ ಏರಿ ಬರುತ್ತಿರುವಾಗ್ಯೆ ನಾವೆಯು ಮುಳುಗಿಹೋಗಲು ಅವರೆಲ್ಲರೂ ಮೃತರಾಗಿಹೋಗೆ ಈಕೆಯನ್ನು ನಾತ್ಯ ಯಾರೋ ಎಳೆದು ತಡಿಯಂ ಸಾರಿಸಿದರಂತೆ, ಆ ನದೀತೀರದೊಳು ಕುಳಿತು ಚಿಂತಿಸುತ್ತಿರುವ ಕಾಲದೊಳು ನನ್ನ ಪತ್ನಿಯು ಸ್ನಾನಾರ್ಥವಾಗಿ ಹೋಗಿದ್ದವಳು ಆಕೆಯಂ ನೋಡಿ ವಿಚಾರಿಸಲು, ಅಮ್ಮ ನನ್ನಗತಿ ಹೀಗಾದುದು, ನಾನನಾಥಳಾಗಿಧ್ದೇನೆ. ನನ್ನಂ ಕಾಪಾಡಿದರೆ ನಿಮಗೆ ಧರ್ಮವೂ ಕೀರ್ತಿಯೂ ಬರುವದು ಎಂದು ಪ್ರಾರ್ಥಿಸಲು ಕರುಣೆಯಾಂತು ನನ್ನ ಪತ್ನಿಯು ಜೊತೆಗೊಂಡು ಮನೆಗೆ ಬಂದು, ನನಗಾಸುದ್ದಿಯಂ ಪೇಳಿ ತೋರಿಸಲು, ಹಾ ! ಎಂತವರಿಗಾದರೂ ಕಷ್ಟಂಗಳು

ಪ್ರಾಪ್ತಿಸದೆ ಹೋಗಲಾರದು, ಆಪತ್ಕಾಲದಲ್ಲಿ ಕಾಪಾಡಿದರೆ ಪರಮಧರ್ಮವೆಂದು ಭಗವದ್ವಾಕ್ಯವಿಹುದು. ಒಂದುವೇಳೆ ನನಗೇನೇ ಕಷ್ಟಪ್ರಾಪ್ತಿಯಾದರೆ ನನ್ನಂ ಯಾರಾದರೂ ಕಾಪಾಡಬೇಕು ಎಂದು ಯೋಚಿಸಿ ಪತ್ನಿಮಾತಿಗೆ ಸಮ್ಮತಿಸಿ ಆಕೆಯುಂ ಮನೆಯೊಳಿಟ್ಟುಕೊಂಡು ಪೋಷಿಸುತ್ತಿದ್ದನು. ಹೆರಿಗೆಕಾಲಕ್ಕೆ ಮೃತ್ಯುದೇವತೆ ಯಂತೆ ಈ ವಾರಕಾಂತೆಯೈದಿ ಆ ಶಿಶುವಂ ಅಪಹರಿಸಿಕೊಂಡು ಹೋದಳು. ಆ ಶಿಶುವಂ ಕಳಕೊಂಡ ಬಾಣಂತಿಯುಂ ನಿದ್ರಾಹಾರಗಳಂ ಬಿಟ್ಟು ಪಗಲೂ, ಇರಳು ಗೋಳಾಡುತ್ತಿರುವಳು. ಅದನ್ನು ನೋಡಿ ನಾನು ಸಹಿಸಲಾರೆನು ಎಂದು ಪೇಳಲು ಕೇಳುತ್ತಾ ಭದ್ರರಾಯುಂ ವೇಶ್ಯೆಯೊಳು ವಿಪರೀತ ಕೋಪವಂ ತಾಳಿ, ಎಲೈ ಮಂ ತ್ರಿಂಯೇ ! ಈ ದುಷ್ಟಾಂಗನೆಗೆ ಶಿರೋಮುಂಡನಂ ಮಾಡಿಸಿ ಗಾರ್ದಭಾರೂಢ ಳಂಮಾಡಿ ಊರೊಳು ಸಾರಿಸುತ್ತಾ ಮೆರಿಸಿ ಈ ನಿಮಿಷದೇ ಗಡಿಪಾರುಮಾಡಿ ಸೆಂದಾಜ್ಞಾಪಿಸಿ ಆ ಸೂಲಗಿತ್ತಿಗೆ ಬಹುಮಾನಮುಂ ಕೊಟ್ಟು ಕಳುಹಿ ಆ ಪ್ರೌಢೋ ಹಿತನಿಗೆ ವಸ್ತ್ರಾಭರಣಂಗಳಂ ಬಹುಮತಿಯುಂ ಗೈಸಿ ಅದೇ ಗೌಡಿಯರಿಂದ, ಆ ಶಿಶು ವಿನ ತೊಟ್ಟಿಲಂ ತೆಗೆಯಿಸಿಕೊಂಡು ಆ ಬ್ರಾಹ್ಮಣನ ಮನೆಗೈದಿ, ಚಿಕ್ಕಮನೆಯ ಬಾಗಿ ಲನ ಹೊಸಲಿನಲ್ಲಿ ಕುಳಿತುಕೊಂಡು ನಂದಿನಿಯಂ ಕುರಿತು, ಎಲೌ ತಾಯಿ ರಾಜ ಪುತ್ರಿಯೇ ಕೇಳು, ನಾನೀಪುರಕ್ಕೆ ದೊರೆಯಾದ ಭದ್ರಕನೆಂಬ ರಾಯನು, ಇಂದಿಗೆ ನಾಲ್ಕು ದಿನಗಳ ಕೆಳಗೆ ರಾತ್ರಿಯೊಳು ಜಗತ್ಪರಿಪಾಲಕನಾದ ಪರಮೇಶ್ವರನು ಸ್ವಪ್ನ ದೊಳ್ಪೇಳಿದಂದನು. ಈ ಪುರದಗಳ್ತಿಯೊಳು ಯಾರೂ ಅರಿಯದಂತೆ ಮಗೆಯೊಳಿಂದ್ಯ ಗಂಡುಶಿಶು ಇಹುದು ತೆಗೆದುಕೊಂಡು ಬರುವಂತೆಯೂ ಅದಂ ಪೋಷಿಸುತ್ತಿರುವದಾ ಗಿಯೂ ಆಜ್ಞಾಪಿಸಲಾಕ್ಷಣದೊಳೇ ನಾಂ ಪೋಗಿ ನೋಡಿ, ಆ ಶಿಶುವಂ ತೆಗೆದು ಕೊಂಡು ಬಂದು ಪೋಷಿಸುತ್ತಾ ಇದರ ನೆಲೆಯುಂ ವಿಚಾರಿಸುತ್ತಿರುವಾಗ್ಯೆ ನೀನಿಲ್ಲಿ ರುವಂತೆ ತಿಳಿದುಬಂದು ಇಪ್ಪೆನೆ. ಇಗೋ ನಿನ್ನ ಬಾಲಕಂ ನೋಪು ಪ್ರೈವಗೋಗ ದಿಂದ ನನಗೆ ದೊರೆತರೂ ತಾಯಿಯು ನೀನೆಂದು ಕಂಡು ಬಂದನೀಲೆ ತಾಯಿ ಮಕ್ಕಳಂ ಅಗಲಿಸಬಾರದೆಂಬ ನ್ಯಾಯಾನುಸಾರವಾಗಿ ನಿನ್ನ ತನುಸಂಭವನಂ ನೀನೆತ್ತಿಕೊಂಡು ಸುಖಿಯಾಗಿಬಾಳು, ನೀನಾರು? ಯೇಂ ಕಾರಣಮಿಲ್ಲಿ ಬಂದಿರುವೆ, ನಿನಗೆ ನನ್ನಿಂದಾಗಬೇಕಾದ ಸಹಾಯವೇನು ? ಹೇಳಿದೊಡೆ ಅವಶ್ಯಕವಾಗಿ ಮಾಡಿ ಸುವೆನೆಂದು ಸಮಾಧಾನವಂ ಹೇಳುತ್ತಿರುವ ಭದ್ರನುಹಾರಾಯನಂ ಕುರಿತು ಆ ಶೀಲ ವತಿಯು ಎಲೈ ರಾಜಾಧಿರಾಜನಾದ ಧರ್ಮಾತ್ಮನಾದ ಧರಣೀಶನೇ ಲಾಲಿಪುದು ! ಬ್ರಾಹ್ಮಣ ದಂಪತಿಗಳಿಂದನೆ ತನ್ನ ವೃತ್ತಾಂತವನ್ನೆಂತು ಪೇಳಿದ್ದಳೋ ಅಂತೆಯೇ ಪೇಳಿ ಪರಮೇಶ್ವರಾನುಗ್ರಹದಿಂ ದೊರೆತ ಶಿಶುವಂ ಪರಮೇಶಾನುಜ್ಞೆಯಂತೆ ನೀವೇ ಸಾಕಿಕೊಳ್ಳಬಹುದು. ನನಗೆ ತಿಂಗಳು ವೃದ್ಧಿಯು ತೀರುವವರಿಗೂ ದಿನಕ್ಕೆ ೞಾವೃತ್ತಿ ಬಂದು ಶಿಶುವಿಗೆ ಸ್ತನ್ಯಪಾನಮುಂ ಮಾಡಿಸುತ್ತಿರುವೆನು ಅನಂತರ ನಿಮ್ಮ

ಪುತ್ರಿಯಾದ ನನ್ನೊಳು ಕನಿಕರವುಳ್ಳಂತು ಈ ಮಗುವಂ ಸಾಕಿಕೊಳ್ಳಿರೆಂದು ಆ ಶಿಶುವಂ ರಾಜಪತ್ನಿಯ ಮಡುಲೊಳು ಹಾಕಿ, ಅಮ್ಮಾ ನಾನು ನಿನ್ನ ಪುತ್ರಿಯು ಈ ಶಿಶುವು ದೌಹಿತ್ರನು ಎಂದಭಿಮಾನಿಸಿ. ಒಂದು ತಿಂಗಳಾದ ತರುವಾಯ ನಿಮ್ಮ ದಾಸಿಯರಲ್ಲಿ ನಾಲ್ಕುಮಂದಿಯನ್ನೂ ಮಂತ್ರಿಯನ್ನೂ, ಈ ಬ್ರಾಹ್ಮಣ ದಂಪತಿಗಳನ್ನೂ ಕೊಡ್ಸುಕಳುಹಿಸಿದರೆ ನಾನು ನನ್ನ ಗಂಡನ ಮನೆಯನ್ನು ಸೇರಿಕೊಳ್ಳುತ್ತೇನೆ ದಯಮಾಡಿ ನನ್ನ ಮನವಿಯಂ ಲಾಲಸಬೇಕೆಂದು ಕೈಮುಗಿದು ಬೇಡಿಕೊಳ್ಳಲಾಗಿ ಆ ರಾಜದಂಪತಿಗಳಿರ್ವರೂ ಬಹಳ ಸಂತೋಷಭರಿತರಾಗಿ, ಅಮ್ಮಾ ಸುಕುಮಾರಿಯೇ ಕೇಳು ನಿನಗೆ ಬೇಕಾದಷ್ಟು ದಾದಿಯರಂ ಕೊಡುವೆನು ಇಷ್ಟಂಗಳಾದ ಪದಾರ್ಥಂಗಳಂ ತಂದುಕೊಡುವಂತೆ ತಕ್ಕ ನಿಯೋಗದವರಂ ಆಜ್ಞಾಪಿಸಿ, ನಿನ್ನ ಸೇವೆಯೊಳಿರುವಂತೆ ಮಾಡುವೆನು, ನಿನ್ನ ಜೊತೆಯೊಳು ಈ ಬ್ರಾಹ್ಮಣ ದಂಪತಿಗಳನ್ನೂ ಕರೆದುಕೊಂಡು ಬಂದು ರಾಜಾಲಯದೊಳಿರೆಂದು ಪ್ರಾಸಾದದೊಳಿರ್ದು, ನಿನ್ನವಧಿಕಾಲದವರಿವಿಗೂ ಶಿಶುವಂ ಪೋಷಿಸುತ್ತಲಿರು, ಸಂತರ ನಾವೂ ತಕ್ಕ ಪರಿವಾರದೊಂದಿಗೆ ಜೊತೆಯೊಳು ಬಂದು ನಿನ್ನ ಬಂದು ಸಮೂಹವನ್ನೆಲ್ಲಮುಂ ನಿನ್ನೊಂದಿಗೆ ಸೇರಿಸಿ ಸುಖಿಸುವುದಂ ಕಂಡು ನಾವೂ ಹರುಷಿತರಾಗಿ ಹಿಂತಿರುಗಿಬರುವೆವು ಎಂದುಪಚಾರಮುಂ ಪೇಳಿ, ಆ ಮಾತಿಗೆ ನಂದಿನಿಯುಂ ಒಡಂಬಡಿಸಿ, ಆಕೆಯ ಮಾತಿನಂತೆ ಬ್ರಾಹ್ಮಣ ದಂಪತಿಗಳೂ ಅನುವೋದಿಸಲು ಭದ್ರರಾಜಂ ಆ ನಿಮಿಷದೊಳು ತನ್ನರಮನೆಯಿಂದ ಅಂದಳಮಂ ತರಿಸಿ, ಶಿಶುವಿನೊಂದಿಗೆ ಬಾಣಂತಿಯನ್ನ ದರೊಳೇರಿಸಿ, ತನ್ನ ಮಖವಿಯ ರಥದೊಳು ಬ್ರಾಹ್ಮಣ ಪತ್ನಿಯಂ ಕುಳ್ಳಿರಿಸಿ, ತಾನೂ ಮಂತ್ರಿಯೂ ಆ ವೃದ್ಧ ಬ್ರಾಹ್ಮಣನೂ ದಿವ್ಯರಥಾರೂಢರಾಗಿ ತನ್ನ ಮಂದಿರಮುಂ ಸಾರಿ, ಸುಂದರವಾದೊಂದು ಸೌಧದೊಳಾನಂದಿನಿಯುಂ ಶಿಶುವಿನೊಂದಿಗೆ ಇಳುಹಿ ಸಮಸ್ತ ಸೇವಾಜನರನ್ನೂ, ಕಾವಲುಗಾರರನ್ನೂ ಪರುಠವಿಸಿ, ತಾನೂ ತನ್ನ ಪತ್ನಿಯೂ ಮೇಲ್ವಿಚಾರಣೆಯುಂ ತೆಗೆದುತ್ತೊಳ್ಳುತ್ತಾ, ಸ್ನಾನ ಭೋಜನಾದಿಗಳಿಂ ದ್ವಿಜ ದಂಪತಿಗಳಂ ಉಪಚರಿಸುತ್ತಾ, ಶಿಶು ಬಾಣಂತಿಯರಂ ಪಥ್ಯಪಾನಂಗಳಿಂ ಪೋಷಿಸುತ್ತಾಯಿರ್ದ್ದಂ.

ಇತ್ತಲಾ ಸೋಮಶೇಖರಮಹಾರಾಯನ ಮಂತ್ರಿಯಾದ ಸುಬುದ್ಧಿಯು ನಂದಿನಿಯಂ ಹುಡುಕುತ್ತಾ, ಈ ಭಾನುಮತೀಪಟ್ಟಣದ ವಾರ್ತೆಯಮಂ ಹಿಡಿದು ಬರಲು, ವಾಯಸಂ ಎಡಗಡೆಯಿಂ ಬಲಕ್ಕೆಸಾದುದು. ಸುವಾಸಿನಿಯರ ತಂಡ ತಂಡಂ ಮಂಗಳದ್ರವ್ಯಂಗಳಂ ಕೊಂಡು ಎದುರ್ಕೊಂದರು, ವಾರನಾರಿಯರೂ, ವಾದ್ಯಂಗಳೂ, ಗೋವ್ರಗಳೂ, ಶವಂಗಳೂ ಕಾಣುತ್ತಾ ಬಂದವು. ಇವುಗಳಂ ನೋಡುತ್ತಾ ಸಂತಸವನ್ನಾಂತಾ ಮಂತ್ರಿಯು ಪುರಮಂಸಾರಿ, ಭದ್ರರಾಜನ ಮಂತ್ರಿಯಮನೆಯೊಳಿದುಕೊಂಡು ಆತನಿಂ ಸತ್ಕೃತನಾಗಿ, ಸ್ನಾನ ಭೋಜನಾದಿಗಳಂ

ಮಾಡಿ ಕುಳಿತು, ತಾಂಬೂಲವನು ಸವಿಯುತ ಪರಸ್ಪರ ಯೋಗಕ್ಷೇಮುಂಗಳಂ ವಿಚಾರಿಸುತ್ತಲಿರುವಾಗಳ್, ಭದ್ರರಾಜನ ಮಂತ್ರಿಯಂ ಕುರಿತು, ಈ ಸೋಮಶೇಖರರಾಯರ ಮಂತ್ರಿಯು, ಎಲ್ಲೆ ಮಹಾರಾಜನ ಮಂತ್ರೀಂದ್ರನೇ ! ನಿಮ್ಮ ಒಡೆಯನಿಗೆ ಪುತ್ರರಿಷ್ಟುಮಂದಿ ಇಹರು, ಪುತ್ರಿಯರಿಷ್ಟು ಜನ ? ಎನುತಂ ಬಿನಗೊಳಲ್, ಆ ಮಂತ್ರಿಯು ಕೇಳಿರೈ ಸಚಿವಶಿರೋಮಣಿಗಳೀ! ನಮ್ಮ ಪೃಥ್ವೀಶ್ವರಿಗೆ ಸಂತತಿಯೇ ಇಲ್ಲವು, ಈಗ ಈ ಊರು ಪುರೋಹಿತರ ಮನೆಗೆ ಮಾರ್ಗವಶಾತ್ ಬಂದಿದ್ದ ಯಾವಳೋ ಒರ್ವಳಾದ ರಾಜನಂದನೆಯಂ ಅವಳ ಶಿರುಪಿನೊಂದಿಗೆ ಕರತಂದಿಂದಿಗೆ ಕೆಲವು ದಿನವಾಗಿರ್ದು, ಅರಮನೆಯೊಳಿರಿಸಿಕೊಂಡು ಪಾಲಿಸುತಿಹರು ಎನೆ, ಆ ಮಂತ್ರಿ ಶೇಖರಂ ತನ್ನೊರಾಜಾತ್ಮಜೆಯಾದ ನಂದಿನಿಯಂ ಸ್ಮೃತಿಪಥದೊಳಾಂತು, ವ್ಯಥೆಯಿಂ ಕಂಣೀರ್ತಂದು ಅಂತೆಯೇ ಚಿಂತಿಸುತ್ತಾ, ಈಕೆಯೇ ನಮ್ಮ ನಂದಿನೀದೇವಿ ಇರಬಹುದೆಂದು ತಿಳಿದು, ಅಯ್ಯೋ ವಿಧಿಯೇ ! ನಿನ್ನ ಪರಿಣಾಮವನ್ನು ತಿಳಿದವರು ಯಾರು, ಹರಿಹರಾದಿಗಳಿಗೂ ನಿನ್ನ ಶಕ್ತಿಯು ಅಗೋಚರವಾಗಿರುವದಲ್ಲಾ, ಎಂದು ಚಿಂತಿಸುತ್ತಾ, ಕಂಣೀರು ಸುರಿಸುತ್ತಿರಲು, ನೋಡುತಾ ಭದ್ರರಾಜನ ಮಂತ್ರಿಯು, ನಿನ್ನೆ ಮಂತ್ರಿಶಿರೋಮಣಿಯೇ ! ನಿರ್ಹೇತುಕವಾಗಿ ಶೋಕಸಾಗರ ಮಗ್ನರಾಗಲು ಕಾರಣವೇನು ಎಂದು ಕೇಳಲಾ ಸುಬುದ್ಧಿಯು ತಾಳಿನೈ ಮಂತ್ರಿವರ್ಯನೇ ! ನಿಮ್ಮ ದೊರೆಯ ಪೋಷಣೆಯಲ್ಲಿರುವಾಕೆಯೇ ನಮ್ಮ ಮಹಾರಾಜಪುತ್ರಿಯು ನನ್ನ ಬರುವಿಕೆಯೇ ಆಕೆಗಾಗಿರುವದು. ದೇಶದೇಶಂಗಳಂ ಆಕೆಯನ್ನೇ ಹುಡುಕುತ್ತಾ ತಿರುಗಿ ಶ್ರಮವೆಯಾಂತೆನು, ತಾವ್ಮ ಕರುಣಾಳುಗಳಾಗಿ ನಿಮ್ಮ ರಾಜಸಂದರ್ಶನವಂ ಮಾಡಿಸಬೇಕು. ಅವರ ಮುಖಾಂತರವಾಗಿ ಆಕೆಯನ್ನು ನೋಡಿ, ಮಾತಾಡುವೆನು ಎಂದು ವಿನ್ನೈಸಲಾ ಮಂತ್ರಿಯು ಈ ಸೋಮಶೇಖರ ಸಚಿವನಂ ಕರೆದುಕೊಂಡು ತಮ್ಮ ರಾಜಸನ್ನಿಧಿಯನ್ನೈದಿ, ಈ ಮಂತ್ರಿಯಂ ಮುರ್ಯಾದೆಯಿಂದಾಸನಾಸೀನನಂ ಮಾಡಿಸಿ, ಈ ಮಂತ್ರಿಯ ಬರುವಿಕೆಯಂ ಮತ್ತು ಈತನಿಂತಿಯುವನೆಂದೂ ಅರುಹಲು, ರಾಯಂ ಸಂತಸಗೊಂಡವನಾಗಿ ನಂದಿನಿಯ ಅಂತಃಪುರಮಂ ಸಾರಿ, ಅಮ್ಮಾ ಸುಕುಮಾರಿಯೇ ! ನಿಮ್ಮ ಮಂತ್ರಿಯು ನಿನ್ನ ಸಂದರ್ಶನ ಸಂಭಾಷಣೆಗಾಗಿ ಬಂದಿರುವಂ, ಏನೆಂದಾಜ್ಞಾಪಿಸುವೆ, ಎನಲಾ ನಂದಿನಿಯು ಪರಮಪಾವಿಯಾದಾ ಮಂತ್ರಿಯ ಮುಖವನ್ನೇ ನೋಡಲು ಇಚ್ಛಿಸಲಾರೆನು. ಆದರೆ ನನ್ನ ಪತಿಯ ಸಮಾಚಾರಮಂ ತಿಳಿಯಲಾತುರಳಾಗಿ, ಸಮಾಚಾರಮಂ ಕೇಳಬೇಕಾಗಿರುವದೇ ಹೊರ್ತು. ಅವನ ಶಬ್ದವನ್ನಾದರೂ ಕೇಳಲೆಣಿಸೆನು, ಆದರೂ ನನ್ನೆದುರೊಳು ಪರ್ದೆಯಂ ಬಿಡಿಸಿ ಆ ತೆರೆಯ ಮುಂಗಡೆಯೊಳಾ ಮಂತ್ರಿ ಬಂದು ನಿಂಕರೆ, ನಾಂ ಕೆಲವು ಮಾತುಗಳನ್ನಾಡಿ, ಪತಿಯ ಯೋಗಕ್ಷೇಮವಂ ತಿಳಿಯುವೆನೆನೆ, ಆ ರಾಯನಂತೆಯೇಗ್ಯೆದು ಆ

ಮಂತ್ರಿಯಂ ಕರೆದು ನಿಲ್ಲಿಸಲು, ನಂದಿನಿಯು ಆ ಮಂತ್ರಿಯಂ ಕುರಿತು, ಎಲೈ ಪರಮಪಾಪಿಯಾದ ದುರ್ಮಂತ್ರಿಯೇ ! ನಿನಗೆ ನಾನೇನು ದ್ರೋಹಮಂ ಮಾಡಿದೆನು ನನ್ನಂ ಕರೆತಂದು ಘೋರಾರಣ್ಯದೊಳು ನಿದ್ರಿಮಾಡುತ್ತಿರುವಾಗ ಒರ್ವಳನ್ನೇ ಬಿಟ್ಟು ಹೋದೆಯೇ ಅದಕ್ಕಿಂತಲೂ ಶಿರಶ್ಛೇದನೆಯಂ ಮಾಡಿದ್ದರೆ ನಾನೀ ಪರಿಯ ದುಃಖಿಂಗಳಿಗೆ ಗುರಿಯಾಗದೆ ಇಪ್ಪೆನು, ನೀನಾಡಿದ ಮಹಾದ್ರೋಹಕ್ಕೆ ನಿನ್ನ ಮುಖವನ್ನೇ ನೋಡಲಾರೆನು, ನಾನಾಡುವದಕ್ಕೆ ಮನಂ ದಾರದು, ಆದರೂ ನನ್ನ ಪತಿಯ ಯೋಗಕ್ಷೇಮವಂ ತಿಳಿಯಲೋಸುಗಂ ಇನಿತು ಮಾತಾಡಿದೆನೇ ಹೊರತು ಇನ್ನುಸುರಲಾರೆನೆನಲು, ಆ ಮಂತ್ರಿಯು ಕೇಳುತ ಶೋಕಾಕುಲನಾಗಿ, ಅಮ್ಮಾ ಸುಕುಮಾರಿಯೇ ! ನಿನ್ನ ವಿಷಯವಾಗಿ ನಾನೇನೂ ದ್ರೋಹವಂ ಚಿಂತಿಸಿದವನಲ್ಲ, ನಿನ್ನಂ ಕಾಡುಪಾಲು ಮಾಡುವದಕ್ಕಾಗಿ ನಿನ್ನಂ ಕರೆದು ಯೋಚಿಸಿದ ನಿಮ್ಮ ತಂದೆಯುಂ ಕುರಿತು ನಾನೆಷ್ಟು ಬಗೆಯಾಗಿ ಸಮಾಧಾನಂಗಳಂ ಪೇಳಿದರೂ ಕೇಳಿದೆ ಮುಂದಂ ಯೋಚಿಸದೆ ಅತ್ಯುರನಾಗಿ ನನ್ನಂ ಶಿರಶ್ಛೇದನೆಮಾಡಿಸುವೆನೆಂದು ಕೋಪಮಾಂತ ಆ ರಾಜನ ಆಜ್ಞಾನುಸಾರವಾಗಿ ಅಂತೆಗ್ಯೆದೆನೇ ಹೊರತು ನಾನು ಶ್ರೀಕರಣದೊಳು ಮಾಡುವನಲ್ಲ. ನನ್ನ ಕೆಲಸನ್ನು ನಾನೂ ಪರಾಧೀನಮಾಗಿಹೆವು, ಸ್ವಾಮಿಯಾಜ್ಞಾನುಸಾರವಾಗಿ ನಡೆಯದೆ ಹೋದರೆ ಪಾಪಿಯಾಗುವೆನಲ್ಲವೆ, ಈ ನಂದಿನಿಯಮ್ಮಂ ನಿನಗೆ ಅರಿಕೆಮಾಡಿಗ್ಗಳೆ ಭಯಗೊಂಡವಳಾಗಿ ಆ ನಿಮಿಷವೇ ಪ್ರಾಣವಂ ಬಿಡುತ್ತಿರ್ಪ ದೈವಗತಿ ಸಹಾಯವಾಗಿದ್ದರೆ, ಕಾಡನೊಳು ಬಿಟ್ಟರೂ ಜೀವಿಸಿ ಸುಖಿಯಾಗಿರುವಳೆಂದು ತಿಳಿದು ಸಾಮಿಕಾರ್ಯಕ್ಕೆ ದ್ರೋಹಮಂ ತಾರದೆ ಅಂತುಗ್ಯೆದೆನು, ನನ್ನೊಳು ನೀಂ ಕೋಪಿಸಲಾಗದು, ಪೂರ್ವಕಾಲದೊಳು ಮಹಾಚಕ್ರವರ್ತಿಯಾದ ನಳಮಹಾರಾಯನ ವಿಧಿಯು ಅರಣ್ಯವಾಸಮಂ ಮಾಡಜೀಕೆಂದಿರುವಾಗ ಪುಷ್ಕರನೆಂಬುವ ಅತನ ಭ್ರಾತೃಯು ಮೂಲಕಮಾಗಿ ಆ ಚಕ್ರವರ್ತಿಯು ಕಾಡುಪಾಲಾದನೆಂದು ಹೇಗೆ ಪುಷ್ಕರಗೆ ದುರ್ಯಶಂ ಪ್ರಾಪ್ತಿಯಾಗುವದೋ ನಿನ್ನ ಮೂಲಕವಾಗಿಯೂ ನನಗಂತು ಅಪಖ್ಯಾತಿಯು ತಲೆಯುಮೇಲೆ ಹತ್ತಿತು. ನನ್ನ ವಿಧಿಯು ಹೀಗಿದ್ದುದೋ ವಿನೋ ಲೋಕದೊಳು ತನ್ನ ಕಾಲಕ್ಕುಪ್ತಿಯಂತೆ ಬಂದೊದಗುವ ಪ್ರಾರಬ್ಧಂಗಳಂ ವಿಾರಲು ಯಾರಿಂದಲೂ ಆಗಲಾರದು, ಆ ಅನುಭವದಿಂದಲೇ ನಿವೃತ್ತಿಯಂ ಹೊಂದಬೇಕು, ನಿನ್ನ ಜನ್ಮಾಂತರ ಕರ್ಮವು ವನವಾಸಮಂ ಮಾಡಿಸುವದಾಗಿರುವಲ್ಲಿ ನಾನು ತಪ್ಪಿಸಬೇಕೆಂದು ಯತ್ನಿಸಿದರೆ ಕೈಸಾರುವದೇ ಎಂದು ದೈನ್ಯವಾಗಿ ಸಮಾಧಾನಮಂ ಹೇಳುತ್ತಾ ಬರಲು, ಆ ನಂದಿನಿಯು ಅದನ್ನೆಲ್ಲಮಂ ಕೇಳಿ ಯೋಚಿಸಿ, ಸತ್ಯಂ ಸತ್ಯಂ ಎಂದು ನುಡಿಯುತ್ತಾ ನನ್ನ ಪತಿಯು ಸದಾಚಾರವೇನಾದರೂ ಬಲ್ಲೆಯಾ ಎನೆ, ಆ ಮಂತ್ರಿಯು ಹರ್ಷಿತನಾಗಿ, ಲಾಲಿಸೌ ಸುಕುಮಾರಿಯೇ ! ನಾಂ ನಿನ್ನಂ ಕಾಡುಪಾಲುಮಾಡಿದ ದಿನ

ದೊಳೀ ನಿನ್ನ ಪ್ರಾಣಕಾಂತನಾದ ನಾಗರಾಯಂ ಬಂದು, ನಿನ್ನಂತಃಪುರದೊಳು ನಿನ್ನ ರನ್ನದ ಮಂಚದವೇಲೆ ಮಲಗಿದ್ದನು. ಅಂತಃಪುರದ ದಾದಿಯರು ಬಂದು ನಿನ್ನ ಶಯನಗೃಹದೊಳು ಯಾರೋ ಒಬ್ಬ ಪುರುಷನು ಬಂದು ಮಲಗಿರುತ್ತಾನೆಂದು ನಿನ್ನ ತಂದೆಯೊಳು ಬಿನ್ನೈಸಲು, ಆಕ್ಷಣದೊಳೀ ಆತನು ನನ್ನಂ ಕರೆಯಿಸಿಕೊಂಡು ಒಬೆಯಿಂ ಕತ್ತಿಯುಂ ಕೆತ್ತು ಕೈಯೊಳು ಪಿಡಿದು ರುಳಿಪಿಸುತ್ತಾ ಆ ಮಲಗಿರುವ ದುರುಳನನ್ನು ತರಿದು ಬಿಸುಡುವೆನೆಂದು ರೋಷಾರುಣನೇತ್ರನಾಗಿ ಕಟಕಟನೆ ಹಲ್ಲುಗಳಂ ಕಡಿಯುತ್ತಾ ಅತಿಭರದಿಂದಂತಃಪುರದೆಡೆಗ್ಗೈದಿ ಶಯ್ಯಾಗೃಹದೊಳು ನುಗ್ಗುತ್ತಿರಲು ಕೈ ಹಿಡಿದು, ಸ್ವಾಮಿ ಮಹಾರಾಜಗೇ ! ದುಡುಕಲಾಗದು ಹಿಂದೆ ವಿಚಾರಹೀನರಾಗಿ ಮಾಡಿದ ಕಾರ್ಯಕ್ಕೆ ಸುಕುಮಾರಿಯನ್ನು ನೆನೆದುನೆನೆದು ಶೋಕಿಸುತ್ತಿರುವಿರಿ, ಹೀಗೆಯೇ ವಿಚಾರಹೀನರಾಗಿ ದುಡುಕಿಹ ಅನೇಕರು ಕಡೆಯೊಳು ತಮ್ಮ ಪ್ರಾಣಂಗಳನ್ನೇ ತೊರೆದುಕೊಂಡಿರು, ಎಂದು ನಾನಾಬಗೆಯೊಳು ಸಮಾಧಾನವಂ ಪೇಳಿ ಶಾಂತಗೊಳಿಸಿ, ನಾನೇ ಒಳಗೆಹೋಗಿ ನಿನ್ನ ಪತಿಯಿಂದರಿತು ಯೋಗಕ್ಷೇಮಂಗಳಂ ವಿಚಾರಿಸಿ, ಹೊರಗೈತಂದು ರಾಜಂಗರುಹಿ ಎಲ್ಲರೂ ಒಳಹೊಕ್ಕು ಯೋಗಕ್ಷೇಮಂಗಳನ್ನು ಕುರಿತು ಮಾತನಾಡುತ್ತಿರುವಾಗ್ಯೆ ನಿನ್ನ ಕಾಂತನಾದ ನಾಗರಾಜಂಮದುವೆಯ ನಾಲ್ಕನೆಯದಿನದ ರಾತ್ರಿ ತನ್ನಂ ಗಂಧರ್ವಾಂಗನೆಯರು ಅಪಹರಿಸಿಕೊಂಡು ಹೋದ ಮೊದಲು, ನಿನ್ನೆಯ ರಾತ್ರಿಯವರಿಗೂ ನಡೆದ ಪರಿಯನ್ನೂ ಇನ್ನು ಮುಂದು ತಾಂ ಗಂಧರ್ವರೊಂದಿಗೆ ಹೋಗದೆ ಇರುವದಕ್ಕೆ ಕಾರಣವನ್ನೂ ತಿಳುಹಿಸಿ ಅನಂತರ ನಿನ್ನಂ ಕುರಿತುಕೇಳಿದಂ. ನಿನ್ನ ಮಾತಾಪಿತೃಗಳು ಶೋಕಿಸುತ್ತಾ ನಿಜಸ್ಥಿತಿಯಂ ಪೇಳಲುಪಕ್ರಮಿಸುವದರೊಳಗಾಗಿಯೇ ನಾನು ಸಂಜ್ಞೆಯಿಂದೆನ್ನನೆಚ್ಚರಿಸಿ, ಆಕೆಯಂ ಅನಂತರ ಚಿಕ್ಕಮ್ಮನ್ನು ಕರೆದುಕೊಂಡು ಹೋಗಿದ್ದಾಳೆ, ನಾನೇ ಹೋಗಿ ಭರದೊಳು ಕರೆತರುವೆನೆಂದೂ ರೆದು, ನಿನ್ನ ಸಮಾಚಾರಮಂ ಹೇಗೂ ಕಿಂಚಿತ್ತಾದರೂ ಆತಂಗರುಹಬಾರದೆಂದು ನಿಮ್ಮ ಮಾತಾಪಿತೃಗಳಿಗೂರೆದು, ಇತರರಿಗೂ ಆಜ್ಞಾಪಿಸಿ, ನನ್ನ ಬರುವಿಕೆಯನ್ನೇ ಎದುರುನೋಡುತ್ತಿರುವೆನೆಂದೊರೆದ ನಿನ್ನ ಪತಿಯಾಜ್ಞಾನುಸಾರವಾಗಿ ಹುಡುಕುತ್ತಾ ಬಂದೆನು. ಈ ಪುರಪ್ರಾಂತಕ್ಕೈದಲು ಶುಭಶಕುನಂಗಳಾಗೆ ಸಂತೋಷಿಸುತ್ತಾ ಒಳಹೊಕ್ಕೆನು. ನಾಂ ಪುರಮಂ ಬಿಟ್ಟಾರುಮಾಸಂಗಳಾದವೆನೆ, ಆ ನಂದಿನಿಯು ಪರಮಾನಂದ ತುಂದಿಲಸ್ವಾಂತಳಾಗಿ, ಆನಂದ ಬಾಷ್ಪಗಳಂ ಸುರಿಸುತ್ತಾ, ತೆರೆಯಂತೆಗೆಯಿಸಿ ಮಂತ್ರಿಯ ಮುಖಮಂ ನೋಡಿ, ಆತನೊಳಿದ್ದ ಕ್ರೋಧಮನೆಲ್ಲಮಂ ಬಿಟ್ಟು, ಎಲೈ ಮಂತ್ರಿಶ್ರೇಷ್ಠರನೇ ಲಾಲಿಸು ! ಹಾಗಾದರೆ, ನನ್ನ ಪ್ರಾಣಕಾಂತನು ಈ ವರಿಗೂ ನಮ್ಮ ಪೊಳಲೊಳೀ ಇರುವನೋ, ಮತ್ತೆಲ್ಲಿಗಾದರೂ ಹೋದನೋ ಹೇಗಿರುವದೋ ತಿಳಿಯದಲ್ಲಾ, ಈಗಲೇ ನಾನಿಲ್ಲಿಂ ಹೊರಡಲು, ಈ

ಯವಸ್ಥೆಯೊಂದಿಹುದಲ್ಲ, ಎಂತು ಗೈಯ್ವುದು ಎಂದು ಹಂಬಲಿಸುತಿತ್ತಾ ಇರುವ ನಂದಿನಿಯಂ ಕುರಿತು, ಅಮ್ಮಾ ನೀನೇಕೆ ಇಂತು ಚಿಂತಿಪುದು, ಮುಂದಾಗಿಯೇ ಕಾಗದಮಂ ಬರೆದು ರಾವುತರ ಮೂಲಕಮಾಗಿ ಕಳುಹುವೆಂ, ಯೋಗಕ್ಷೇಮ ವೊಂದವರಿಗೆ ತಿಳಿದದ್ದಾದರೆ ನಾವ ಸಾನುಕಾಶನಾಗಿ ಹೊರಡಬಹುದೆಂದುಸುರಿ, ಪತ್ರಮಂ ಬರೆದನದೆಂತೆನೆ— ಸ್ವಸ್ತಿ ಶ್ರೀಮದ್ರಾಜರಾಜ ಸಮಸ್ತನೃಪಕುಲ ಮಣಿ ಮೌಳಿ ಮಂಡಿತಪದಾಂಬುಜ, ಸುವ್ರತ, ಸೋಮವತೀ ನಿಲಯ, ಸೋಮ ಶೇಖರ, ಭೂವಿಖ್ಯಾಂದ್ರನಜದಾವರೆಯು ನನ್ನಿಧಿಯೊಳು, ಅಜ್ಞಾಪಾರಕ ಸಂತತಂ ಪಾವ ಸೇವ್ಯೈಕಸರನಾಪ ತನ್ನು ವುಯ್ಯಿಸಜಿನ ಸುಬುದ್ಧಿಯ ಜನ್ಮಹವದೆಂತನೆ, ಭವದೀಯಾಜ್ಞಾನುಸಾರವಾಗಿ ಬಂದಾಂ ಈವರಿಗೆ ಕ್ಷೇಮಿಯಾಗಿಯಿರುವೆ. ಭವ ದ್ವಿಭವಾತಿಶಯಂಗಳಂ ತಿಳಿಗುಳಿಪಸುವೆಂ ಸಂಪ್ರತಿಸನ್ನಿಧಿಯಂ ಬಿಡ್ಡು ಬಂದವಂ ಸುಕುಮಾರಿಯಾದ ನಮ್ಮ ನಂದಿನಿಯನ್ನೊಪಗೊಂಡು, ಸಕಲ ಪುಣ್ಯಕ್ಷೇತ್ರಂ ಗಳಂ ಸಂದರ್ಶಿಸಿ, ಸಮಸ್ತಪುಣ್ಯತೀರ್ಥಂಗಳಂ ಸೇವಿಸಿಕೊಂಡು ಬರುತಿತ್ತಾ ಭಾನುಮತೀ ಪಟ್ಟಣಮಂ ಸಾರಿ, ಆ ಪುರದಾಣ್ಮಂಪ ಭದ್ರರಾಜರಾಜ್ಞಾನುಸಾರ ವಾಗಿ, ಅವರ ಮಂದಿರದೊಳು ಸುಖದಿಂದಿರುವೆವು,- ಇವರಂ ಕರೆದುಕೊಂಡು ಇಪ್ಪತ್ತೈದು ದಿನಗಳೊಳಗಾಗಿಯೇ ನನ್ನಿಧಿಯಂ ಸಾರುವೆವು, ಸೇವಕಜನಾಭಿಮಾ ನಿಗಳಾದ ನಮ್ಮಳಿಯಂದಿರಾದ ನಾಗರಾಜರಿಗೂ, ಈ ಸುದ್ದಿಯಂ ಅರುಹಬೇ ಕೆಂದು ವಿಜ್ಞಾಪಿಸುವೆಂ, ಎಂದು ಪನ್ನಿಪತ್ರಲೆಯುಂ ಬರೆದು ನಂದಿನಿಯ ಕೈಯೊ ಳಿಯ್ದು ಆಕೆಯುದಂನೋಡಿ, ಅತ್ಯಂತ ಸಂತೋಷಿತಸಪ್ತಾಂತಳಾಗಿ, ಆಪತ್ರ ವೊಳೀ ತನ್ನೆ ಪ್ರಾಣವೆಂಬೆಯನಂ ಕುರಿತು ಎಲ್ಲೆ ಪ್ರಾಣನಾಥಾ ! ನಿನ್ನ ಚರ ಣಾಂಬುಜ ಸೇವಕಳಾದನಾಂಭವತ್ಪಾದಾಂಬುರುಹಕ್ಕೆರಗಿದೆನು ಮುನಿಚಂದ್ರ ಚಂ ದ್ರಿಕಾಪತಸನಂ ಬಯಸುತ್ತಲಿರ್ಪಂ ಎಂದೊಂದು ಪತ್ರಿಯಂ ಬರೆದು ತನ್ನ ಕೈಬ ರಹಮಂಮಾಡಿ ತನ್ನ ಮಂತ್ರಿಯಕೈಗೆ ಕೊಡಲಾತನದಂ ಮುದ್ರಿಸಿ, ಮೇಲ್ ಬರಹಮುಂ ಬರೆದು ಸನಿಹಪೊಳಿದ್ದ ನಾಗವೇಣಿಯೆಂಬ ಗೌಡಿಯ ಕೈಯ್ಯೊಳಿತ್ತು ಭದ್ರರಾಜನಲ್ಲಿ ಕೊಡುವಂತಾಜ್ಞಾಪಿಸಲನಳು, ಅಂತೆಯೇ ತಂದು ಆ ರಾಯ ರೊಳೊಪ್ಪಿಸಲು, ಆ ರಾಯನಾ ಒಕ್ಕಣೆಯಂ ನೋಡಿ, ಆ ಈಕೆಯುಂ ಸೋಮವೇ ಖರರಾತ್ಮಜಾತೆಯೇ, ಎಂದರಿತು ಪರಮ ಹರ್ಷಿತನಾಗಿ, ಆ ಕೂಡಲೆ ಇದಂ ಅತಿಭರದೊಳು ಕಳುಹಿಸಬೇಕೆಂದು ಮಂತ್ರಿಗೆ ಆಜ್ಞೆಯಂ ಕೊಡಲಾ ಮಂತ್ರಿ ಯು, ಮಹಾ ಬುದ್ಧಿಶಾಲಿಗಳಾಗಿಯೂ, ವಾಯುವೇಗಾಶ ಂಗಳುಳ್ಳವರಾಗಿಯೂ, ಇರುವ ರಾವುತರಂಕರೆಯಿಸಿ ಅವರ ಕೈಗಿತ್ತು ಅತಿಭರದಿಂ ಸೋಮವತಿ ಪುರವಂ ಸಾರಿ, ಸೋಮಶೇಖರ ಮಹಾರಾಯರಿಗೆ ಸಮರ್ಪಿಸಿ ಪ್ರತಿಯಂಕೊಂಡು ಬರ ಲೆಂಕೆಂದು ಆಜ್ಞಾಪಿಸಿಕಳುಹಿಸಲು.

ಇತ್ತಲು ಸೋಮಶೇಖರರಾಯನ ಪಟ್ಟಣಕ್ಕಾಗಿ ಪ್ರಯಾಣಮಂ ಮಾಡ ಬೇಕೆಂಬ ಲವಲವಿಕೆಯಿಂದ ಭದ್ರರಾಯಂ ನಂದಿನಿಗೂ ಔತಣವಂಮಾಡಿಸಿ ಮಂ ತ್ರಿಗೆ ದಿವ್ಯಾಂಬರಾಭರಣಗಳಿಂದುಪಚರಿಸಿ, ನಂದಿನಿಯಂ ಅಕೆಯ ಮಗನಂ ದಿ ವ್ಯವಸ್ತ್ರಾಭರಣಂಗಳಿಂದಲೂ, ರತ್ನದ ತೊಡಿಗೆಗಳಿಂದಲೂ, ಸಂತೃಪ್ತರನ್ನಾಗಿ ಮಾಡಿ, ತಾನೂ ತನ್ನ ಮಂತ್ರಿಯೂ ವೈಶ್ಯಬ್ರಾಹ್ಮಣದಂಪತಿಗಳೂ ಪ್ರಯಾ ಣಮಂ ಮಾಡಿ ಚತುರಂಗ ಬಲಸಮೇತನಾಗಿ ಸ್ತ್ರೀಜನರಂ ಅಂದಳಿಂಗಳಿಂಳೇರಿಸಿ ಪುರುಷರೆಲ್ಲರೂ ಪ್ರತ್ಯೇಕ ರಥಾರೂಢರಾಗಿ, ಪ್ರಯಾಣಮಂಮಾಡಿ, ಹೊರ ಪುಬರುತ್ತಾ ಕೆಲವು ದಿನಂಗಳು ಮಾರ್ಗದೊಳು ಕಳೆದು, ಸೋಮವತೀಪುರ ಪ್ರಾಂತಮಂಸಾರಿ ಪುರೋದ್ಯಾನದೊಳಿರ್ದು ಆ ವಾರ್ತೆಯಂ, ಸೋಮಶೇಖರ ರಾಯನ ಮಂತ್ರಿಮುಖೇನ, ಆ ರಾಯಂಗೆ ಸುದ್ದಿಯಂ ಕೊಡಲು ಆ ತಿರೆಯಾ ಣ್ಣನಂ ಚತುರಂಗ ಬಲಸಮನ್ವಿತನಾಗಿಯೂ, ಸಮಸ್ತ ಪುರಜನ ವಾರನಾಗಿ ಯೂ, ಸಮಸ್ತ ಪುರಜನ ಪೌರಜನ ವಾರನಾರೀ ವೃಂದಪರಿವೃತನಾಗಿಯೂ ಹೊರಟು ಬಂದು ಪುರೋದ್ಯಾನವಮಂ ಸಾರಿ ಭದ್ರರಾಯನಂ ಕಂಡು, ಮರ್ಯಾ ದೆಯನಿತ್ತು ಅತನಿಂ ಮರ್ಯಾದೆಯಂಕೊಂದು ಕುಶಲಪ್ರಶ್ನಾಪುರಸ್ಸರವಾಗಿ, ಸಲ್ಲಾಪಂಗಳಂ ನಡಾಯುತ್ತಾ ಕುಳಿತಿರುವ ಸಮಯದೊಳು ತನ್ನ ಮಗಳಿಲ್ಲಿಹ ಳೆಂದು ಮಂತ್ರಿಯಂ ಸಂಜ್ಞಾರೂಪಸನಾಗಿ ಕೇಳಲಾರಾಯಂ ಈ ಸೋಮಶೇಖರ ರಾಯನನ್ನೂ, ಅತನ ಪತ್ನಿಯನ್ನೂ ಕರೆದುಕೊಂಮ ನಂದಿನಿಯ ಪದಗೃಹಮಂ ಸಾರಿ, ಎದುರಾಗಿ ನಿಲ್ಲಲು ಸೋಮಶೇಖರರಾಯನೂ, ಅತನ ಪತ್ನಿಯೂ ನಂ ದಿನಿಯಂ ನೋಡಿ, ಹರ್ಷಶೋಕ ಪುಳಕಿತಗಾತ್ರರಾಗಿ, ಅಕೆಯಂ ಕುರಿತು,ಅಮ್ಮಾ ಸುಕುಮಾರಿಯೇ ನಾವಿದ್ದರೂ ಮಹಾ ಪಾಪಿಗಳು ನಮ್ಮಂ ನೀನು ನೋಡಬೇಡ ಕಣ್ಣಮುಚ್ಚಿಕೊಳ್ಳುವಳಾಗು, ನಾವಿರ ರೂ ಕಂಗಳಿಂನೋಡಿ ನಮ್ಮ ಪಾಪಂಗ ಳಂ ಹೋಗೊಳಿಸಿಕೊಳ್ಳುವೆವು ಎಂದು ಗದ್ಗದಕಂಠರಾಗಿ ನಿನಗೆ ಮಾಡಿದ ದ್ರೋ ಹಕ್ಕಾಗಿ ನಮ್ಮಂ ಲೋಕದೊಳು ಇವರೇ ದಯಾಹೀನರೊಳಗ್ರಗಣ್ಯರೆಂದು ಹೊಗಳುವಂತಾಯಿತು, ಹಾ ವಿಧಿಯೇ ! ಎಂದು ಶೋಕಿಸುತ್ತಿರಲಾ ನಂದಿನಿಯು ದಿಗ್ಗನೆ ಎದು ಬಂದು ತನ್ನ ಪತಿಯ ಪಾದಾರವಿಂದಗಳೊಳೆರಗಿ, ಪ್ರಾಣನಾಥ ! ನನ್ನಪರಾಧಂಗಳನ್ನೆಲ್ಲಮಂ ಕ್ಷಮಿಸೆಂದು ಪ್ರಾರ್ಥಿಸಿ ಲಜ್ಜಾಭಾರಪರವಶಳಾಗಿ ಇನ್ನೇನು ನುಡಿಯುವೆ ತಲೆವಾಗಿನಿಂತು ತಂದೆತಾಯಿಗಳಿಂ ಕುರಿತು ನಾಂ ನಿಮ್ಮ ಮಗಳಲ್ಲ ಎಂದು ಕಾಡುಪಾಲುಮಾಡಿಸರೋ ಅಂದೇ ನಿತ್ತು ಮಗಳು ಮೃತ ಳಾದಳೆಂದು ತಿಳಿಯಿರಿ, ನಾಂ ಪುಣ್ಯಾತ್ಮರ ಮಗಳಾಗಿ ಪತಿಚರಣಾಂಬುಜ ಸಂದ ರ್ಶನಕ್ಕಾಗಿ ಬಂದೆನೆನಲು, ರಾಜಮಹಿಷಿಯುಹಾ ! ಎಂದು ನಂದನೆಯಾದ, ನಂದಿನಿಯಂಬಾಚಿ ಬಿಗಿದಪ್ಪಿ, ಅಯ್ಯೋ ದೈವವೇನಾವೆನಿತು ಪಾಪಿಗಳು, ಇಂತಿ

ಹ ಮಹಾಸತಿವ್ರತಾ ಶಿರೋಮಣಿಯಾಡ, ಮಗಳಂ ವಿಚಾರಶೂನ್ಯರಾಗಿ ಕ್ರೂರತ್ವಮಂ ಹೊಂದಿ ಕಾಡುಪಾಲುಮಾಡಿದೆವಲ್ಲಾ ; ಈ ಸುಕುಮಾರಿಯೇ ಪ್ರಾಣಪದಕವೇ ಇಂತೇಕೆ ಕೋಪವಾಂತಿರುವಿ, ಎಂದು ಬಗೆಬಗೆಯಾಗಿ ಒಣ್ಣಿಸುತ್ತಾ ಶೋಕಿಸುತ್ತಿರಲು ತನ್ನ ವಸ್ತ್ರದಿಂ ಮುಖಮಂ ಮುಚ್ಚಿಮಾಡಿಕೊಂಡು ಹೋ ಎಂದು ಗೋಳಿಡುವ ತಂದೆಯನ್ನೂ, ತಾಯಿಯನ್ನೂ ನೋಡಿ, ತಾಯಿಯಂ ಕುರಿತು, ಎಲೌ ತಾಯಿಯೇ ನವಮಾಸಂಗಳಂ ಹೊತ್ತು ಶೀತತಾಪಜಾಧೆಗಳಿಂದಲಿ ಆಹಾರನಿದ್ರಾತೃಷೆಗಳಂತಾಳಿ, ವಿಧವಿಧಂಗಳಾದ ಕಷ್ಟಂಗಳಂ ಸಹಿಸಿ ನೆತ್ತು ಬಾಲ್ಯಂ ಮುಗಿಯುವನರಿಗೂ ನನಗುಂಟಾದ ಬಾಧೆಗಳಿಗೂ, ತಾಳಿಕೊಂಡು ಮಲಮೂತ್ರಂಗಳಂ ಸೆಹಿಸಿ ವ್ಯಪದ್ಯಮಾನಂ ಗೈದೆ. ಬಾಲ್ಯಮೊದಲು ಯೌವನಾತಿಂಗಳು ಹಿಂದಿನವರಿಗೆಂದರೆ, ಐವತ್ಸಂವತ್ಸರಗಳವರಿಗೂ ನಿನ್ನಿಂದಮಂಟಾದ ಉಪಕಾರಾಧಂಗಳು ಅಡಗುವುದಕ್ಕೆ ಮಾತ್ರ ನಿನ್ನುದರದೊಳು ಅವಕಾಶವಿಲ್ಲ, ಈ ಸಂಕಲ್ಪಶಕ್ತಿಗೆ ಕಾವಿಲ್ಲದೆ ಹೋಯಿತೆ. ಮಕ್ಕಳು ಮಾಡಿದ ತಪ್ಪನ್ನು ವಿಚಾರಮಾಡದೆ ಮಾತಾ ಪಿತೃಗಳೇ ಆತುರಗೊಂಡು ಹಿಂಡಿಸುತ್ತಾ ಬಂದರೆ ರಕ್ಷಿಸುವವರಾರು ; ಎಂದು ಕಠಿನೋಕ್ತಿಗಳಿಂದ ತಾಯಿಯಂ ಜರೆಯುತ್ತಿರೆ, ಆ ತಾಯಿಯು ಲಜ್ಜೆಯಿಂ ಶಿರಬಾಗಿ ಶೋಕಸಾಗರ ಮಗ್ನೆಳಾಗಿ ಕಣ್ಣೀರು ಸುರಿಸುತ ಪ್ರತಿವಾಕ್ಯಮಾಡಲು ಬಾಯಿ ಇಲ್ಲದವಳಾಗಿ ಸ್ತಬ್ಧಳಾಗುತ್ತಿರಲು ಸೋಮಶರ್ಮನಿವರಾಯಂ ಮಗಳನ್ನು ಕುರಿತು, ಅಮ್ಮಾ ಸುಳುವಾರಿಸಿ ! ಈ ವಿಚಾರಿಸಿದ ನಡಿಯಲು ಯಾರೂ ಕಾರಣಕರ್ತರಲ್ಲ ನಿನ್ನ ವಿಧಿಯಬಲವು ಹಾಗೆ ಇದ್ದ ಪರಿಂದ ನಮಗೂ ಅದಕ್ಕನುಸಾರವಾಗಿಯೇ ಬುದ್ಧಿಯೂ, ಆ ಕಾಲಕ್ಕೊದಗಿತು. ಕಾಲಕ್ಕೊದಗಿದ ಕರ್ಮಫಲವಂ ಅನುಭವಿಸಿಯೇ ತೀರಬೇಕು ಇದಂ ಪರಿಹರಿಸುವುದಕ್ಕೆ ಯಾವ ಉಪಾಯವೂ ಸಾಧ್ಯವಲ್ಲಂ, ಹಾಗಿದ್ದರೆ ಜಗದ್ರಕ್ಷಕನಾದ ಶ್ರೀವಿಷ್ಣುವಾಗಿಷ್ಟುವ ತಾಂ ಹೊಂದಬೇಕಾಗಿ ಬಂದ ದಶಾವತಾರಗಳನ್ನು ನೋಂದದೆ. ಯಾತಕ್ಕೆ ತಪ್ಪಿಸಿಕೊಳ್ಳಲಿಲ್ಲ. ಕೈಲಾಸ ವಾಸಿಯಾದ ದೇವದೇವನಾದಾ ಜಂಗಮ ಜೂಟಂ ದಿಗಂಬರನಾಗಿ ಸ್ಮಶಾನದೊಳು ವಾಸಿಸುತ್ತಾ, ಕಪಾಲವಾಣಿಯಾಗಿ ಭಿಕ್ಷಾವೃತ್ತಿಯಂ ಹೊಂದಬೇಕಾಗಿದ್ದ ವಿಧಿಯ ತಪ್ಪಿಸಿಕೊಳ್ಳುವುದಕ್ಕೆ ಯುತ್ನಿಸದೆ ಹೋದನೆ, ಇಂಥಾವರೆಲ್ಲರೂ ವಿಧಿಬದ್ಧರಾಗುವರೆ, ಆದ್ದರಿಂದ ನಿನ್ನ ವಿಷಯೇ ಕಾರಣಮೆಂದರಿಯಬೇಕೆಂದು, ಬಹು ಪ್ರಕಾರವಾಗಿ ಮಗಳಂ ಸಂತೈಸಿ ವ್ಯನೆಯಿಂ ವಿಮುಕ್ತಳಂಮಾಡೆ ಹರ್ಷಸ್ವಾಂತಳಾದಾ ನಂಬಿಯಣ್ಣು ಮಾತಾಪಿತೃಗಳಗಧಿವಂದಿಸಿ, ತನ್ನ ಶಿಶುವಂ ಅವರಕ್ಕೆಯೊಳ್ಳೀಯೆ ಅವರಿತ್ತರೂಢಿ ದೌತ್ಯನಂ ಅಪ್ಪಿ ಮುದ್ದಾಡುತ್ತಾ ಶಿರವನಾಘ್ರಾಣಿಸುತ್ತಾ ಬಾರಿಬಾರಿಗಾ ಶಿಶುವಿನ ಸೌಂದರ್ಯಾತಿಶಯಮಂ ನೋಡಿ ನೋಡಿ, ಅನಂದಿಸುತ್ತಾ ಎಲ್ಲರೂ ತಮ್ಮ ತಮ್ಮ ಯಾನಂಗಳೊಳು

ಕುಳಿತು ಅತ್ಯಂತ ಸಂತಸದೊಳ್ಪೆತಂದು ರಾಜಮಂದಿರವಂ ಸಾರಲು ರಾಜಾಜ್ಞಾ
ನುಸಾರವಾಗಿ ಪರಿಚಯಿಸಿದ್ದ ಆವರವರ ಬಿಡಾರಂಗಳೊಳಿಲ್ಲರೂ ಪ್ರವೇಶಿಸಿ,
ತಕ್ಕ ಪರಿವಾರದವರಿಂ ನಿರ್ಮಿಸಲ್ಪಟ್ಟ ಸ್ನಾನಭೋಜನಾದಿಗಳಿಂದುಪಚರಿತರಾ
ಗಿರಲು ರಾಯಂ ತನ್ನ ಆಳಯನಿಗೂ ಮಂಗಳ ಸ್ನಾನಂಗಳಂ ಮಾಡಿಸಿ, ಭ
ಕ್ಷ್ಯಭೋಜ್ಯಾದಿ ದಿವ್ಯಾನ್ನಂಗಳಿಂದ ತಾನೂ ತನ್ನ ಪತ್ನಿಯೂ ಅವರೊಂದಿಗೆ
ಕುಳಿತು, ಭೋಜನವಂ ಮಾಡಿ, ದಿವ್ಯಗಂಧ ಪುಷ್ಪ ತಾಂಬೂಲಂಗಳಿಂ ಸತ್ಕರಿಸಿ,
ಅಲಂಕೃತಮಾದ, ಶಯ್ಯಾಗಾರಮಂ ಹೊಗಿಸಲು, ಆ ದಂಪತಿಗಳಿರ್ವರೂ ಪರ
ಸ್ಪರ ಅನುರಾಗಯುಕ್ತರಾಗಿ ಸರಸ ಸಲ್ಲಾಪಗಳಂ ಗೈಯುತ್ತಾ, ತಮ್ಮ ನಂದ
ನನಂ ನೋಡಿ ಹಿಗ್ಗುತ್ತಾ ಪರಮಾನಂದಭರಿತರಾಗಿ ರತಿಕೇಳೀ ಸೌಖ್ಯದೊಳು
ತೇಲಾಡುತ್ತಾ ಆ ರಾತ್ರಿಯುಂ ಸುಖಮಾಗಿ ಕಳೆದರು.

ಮರುದಿನದುದಯದೊಳು ಉಷ್ಣವಡಿಸಿದ ಈ ಸಮಸ್ತರೂ ತಮ್ಮ ಕಾಲೋ
ಚಿತಂಗಳಹ ನಿತ್ಯಕೃತ್ಯಂಗಳಂ ನೆರವೇರಿಸಿಕೊಂಡು ರಾಜಾಜ್ಞಾನುಸಾರವಾಗಿ
ನಂದಿನಿಯೂ, ನಾಗರಾಜನೂ, ಸೋಮಶೇಖರ ರಾಜಮಾಹಿಷಿಯು ತನ್ನ ಧ
ರ್ಮಾಂಗನೆಯೊಡನಾ ಭವ್ಯರಥಿಯನೂ ಉಭಯ ಮಂತ್ರಿಗಳೂ, ಮುಖ್ಯ
ಸಾಮಾಜಿಕರೂ ಸೇರಿ ಸಭೆಯಾಗಿ ಕುಳಿತು ಪರಸ್ಪರ ಯೋಗಕ್ಷೇಮ ವೃತ್ತಾಂ
ಗಳಂ ಲೇಳುತ್ತಾ ಕೇಳುತ್ತಾ, ಆಶ್ಚರ್ಯಮಂ ಕಂಡು ಸಂತೋಷಿಸುತ್ತಿರುವಾಗ್ಗೆ
ಆ ನಂದಿನಿಯು ತನ್ನ ವಿಪತ್ಕಾಲದೊಳು ಕುಬೈರಿಸಿ ತನ್ನ ತಂದೆ ತಾಯಿಗಳನ್ನೂ
ಪತಿಯನ್ನೂ ಕರೆಯಿಸಿ ಇವರಂ ತೋರಿ ಈ ಧರ್ಮಾತ್ಮರಾದವರೇ ನನ್ನಂ ಮಹದ್ವ್ಯ
ಪತ್ತುಗಳೊಳು ಪೋಷಿಸಿ ಹೆತ್ತವರಿಗಿಂತಲೂ ಸೂರ್ಮಡಿಯಾಗಿ ಪೋಷಿಸುವರೆಂದು
ಕೊಂಡಾಡುತ್ತಾ ಬರಲು ಸೋಮಶೇಖರರಾಯಂ ಕೇಳುತ ಅತ್ಯಂತ ಹೃಷ್ಟ
ಮಾನಸನಾಗಿ ಆ ದ್ವಿಜೇಂದ್ರನಂ ಕುರಿತು ? ನಮ್ಮ ಮಗಂಗೆ ತಾಯಿ ತಂದೆಗಳು
ನಾವಲ್ಲ ನಾವು ಮಹಾ ಪಾಪಿಗಳಾದವರು ನೀನೇ ಹೆತ್ತ ಮಾತಾವಿತೃಶಳಿಗಿಂ
ತಲೂ ಅಧಿಕರಾದ ತಂದೆ ತಾಯಿಗಳು.

ಜನಕಶ್ಚೋಪನೀತಾಚಯಶ್ಚ ವಿದ್ಯಾಂ ಪ್ರಯಚ್ಛತಿ | ಅನ್ನದಾ
ತಾಭಯತ್ರಾತಾಪಂಚೈತೇ ಪಿತರಸ್ಮೃತಾಃ ॥

ಹೆತ್ತವರೂ ಬ್ರಹ್ಮೋಪದೇಶವಂ ಮಾಡಿದವರೂ ವಿದ್ಯಾದಾನವಂ ಮಾಡಿ
ದವರೂ ಅನ್ನವಂಕೊಟ್ಟು ಪರಿಪಾಲಿಸುವವರೂ ಮಹದ್ಭಯದಿಂ ನಿವೃತ್ತಿಮಾಡಿ
ಕಾಪಾಡಿದವರೂ ತಂದೆ ತಾಯಿಗಳೆಂದು ಧರ್ಮಶಾಸ್ತ್ರವು ಹೇಳುವುದಾದ್ದರಿಂದ
ನಿನುಗಿಂತಲೂ ಈ ಸುಕುಮಾರಿಗೆ ಅಧಿಕರಾದ ಬಾಂಧವರಾರೂ ಇಲ್ಲವೆಂದು
ಅವರಂ ಕೊಂತಾಡಿ ಕೆಲವು ದಿನಗಳಲ್ಲಿಯೇ ಸನ್ಮಾನಿಸುತ್ತಿದ್ದುಕೊಂಡಿದ್ದು ಮ
ಣಿಧನಕನಕ ದಿವ್ಯವಸನಗಳಿಂ ಬಳುವಾನಿಸಿ ತಕ್ಕ ಮರಾ ದೆಯಿಂದುಪಚರಿಸಿನಾ

ದ ಭದ್ರರಾಜನೊಡನೆ ಬೀಳ್ಕೊಟ್ಟನು, ಅನಂತರಮಾ ಅನಾಗರರಾಜಂ ಮಾವನನ್ನೂ ಅತ್ತೆಯನ್ನೂ ಕುರಿತು ನಮ್ಮ ತಾಯಿತಂದೆಗಳಂ ಬಿಟ್ಟು, ನಾಂ ಬಹುಕಾಲಮಾ ದುದು, ನನ್ನ ಮುಖಮಂ ನೋಡದೆ ಆ ನೃಪ್ಪರು ಎಷ್ಟು ಹಂಬಲಿಸುವರೋ ಎಂಬ ಕಳವಳವು ನನ್ನಂ ಅಸುರಿನಿಮಾಗಿ ಬಾಧಿಸುತ್ತಿಹದು ಅದರಿಂದಾಜ್ಞೆಯಂ ಕೊಟ್ಟರೆ ಅವರ ಸನ್ನಿಧಿಯಂ ಸಾರಿ ಅವರ ಚರಣಸೇವೆಯಿಂ ಧನ್ಯನಾಗುವೆನು ಎನೆ ತನ್ನ ಮಗಳಿಗೂ ಅಳಿಯನಿಗೂ ಅಭ್ಯಂಜನಂಗಳಂ ಮಾಡಿಸಿ ಸಕಲ ಭಕ್ಷ್ಯ ಭೋಜ್ಯಂಗಳಂ ಪೆಕಣಮುಂ ಮಾಡಿಸಿ ನಾನಾಬಗೆಗೂಡ ರತ್ನ ಖಚಿತಂ ಗಳಾದ ಬಾಲದೊಡಿಗೆಗಳಿಂದ ದೌಹಿತ್ರನನ್ನೂ, ಬಗೆಬಗೆಯಾದ ನವರತ್ನ ಚಿತ್ರಿತಂಗಳಾದ ಆಭರಣಂಗಳಿಂದಲೂ, ದಿವ್ಯದುಕೂಲಂಗಳಿಂದಲೂ ದಾಸೀ ಸಹಸ್ರದಿಂದಲೂ ಮಗಳಿಗೆ ಕೊಡಬೇಕಾದ ನಾನಾಬಗೆ ಸಾಮಾನುಗಳಿಂದಲೂ ಬಹುಮಾನಿಸಿ ಚತುರಂಗಬಲಸಮಂ ಸಂಗಡಕೊಟ್ಟು ತಾನೂ ಪತ್ನಿಯೊಡನೆ ಕೆಲವು ದೂರಂಬಂದು ಅವರಿಗೆ ಸರಕೆಯನಿತ್ತು ಅನುಂ ನಮಸ್ಕೃತರಾಗಿ ಬಂದು ಸುಖಮಾಗಿ ಪ್ರಜಾಪರಿಪಾಲನೆಯಂ ಮಾಡುತ್ತಾ ಬಂದಂ

ಅತ್ತಲಾ ನಾಗರಾಜನತ್ತೀ ಪುತ್ರಸಮನ್ವಿತನಾಗಿ ತನ್ನ ರಾಜಧಾನಿಯ ಸವಿಾಪವನ್ಯೆದಿ ಅವಾಕೇಯಂ ದೇವಸೇನ ಮಯಾರಾಯಂಗರುಹಿ, ವಿಭವಾತಿ ಶಯವಿಂವಿದಿಗ್ಭಂದ ತಂದೆಯ ಪದಾಂಬುಜಗಳೊಳು ಪತ್ನೀಪುತ್ರಸಮೇತನಾಗೆರ ಗಿ ತಂದೆಯಿಂದಾಶೀರ್ವಾದಿತನಾಗಿ ಮಹದುತ್ಸವದೊಂಗೆ ಪುರವಂಸಾರಿ ರಾಜ್ಯಾ ಭಿಷಿಕ್ತನಾಗಿ ಸುಖದಿಂ ರಾಜ್ಯಪರಿಪಾಲನೆಯಂ ಮಾಡುತ್ತಿರಲಾ ಕಾಲದೊಳು ಆ ನಂದಿಯು ಎಮ್ಮಗರಂ ಪ್ರವೇಶಿಸಲು, ಅಶುಭವಾರ್ತೆಯನ್ನು ಸೋಮಶೇಖರ ಮಹಾ ರಾಯಂಗರುಹಿ ಬರಮಾಡಿಕೊಂಂ ನಂದಿಯಮಾತಿನಂತೆ ಆ ಭದ್ರರಾಯನಂ ಪತ್ನೀಸಮೇತನಾಗಿ ಬರಮಾಡಿಸಿಕೊಂಡು ಪರಮ ವಿಭವದೊಂಗೆ ನಾಮಕರ ಣೋತ್ಸವಂ ಮಾಡಿ ಸಮಸ್ತ ದಾನಧರ್ಮಾಂಗಳಂ ದ್ವಿಜನಿಕರಮಂ ತೃಪ್ತಿಗೊ ಳಿಸಿ, ಭೂಪಕುಮಾರರ ಪಠಣಂಗಳಿಂ ಬಹುವಾನಿಸಿ ಪರಮಸಂಭ್ರಮದಿಂದಿರುತಿ ರುವಾಗಾ ನಂದಿಸಿಯು ತಮ್ಮ ಬಾಂಧವರೆಲ್ಲರ ಸಮಕ್ಷದೊಳು ಮಾಹನೀಯ್ಯ ರಾದ ಈ ಭದ್ರರಾಜರಿಗೆ ದೈವಪ್ರೇರಣೆಯಿಂದ ನನ್ನ ಜ್ಯೇಷ್ಠಕುಮಾರನು ದೊರ ತಿದ್ದಂ ಆದಲೆ ಶಾಸ್ತ್ರಾನುಸಾರಮಾಗಿಯೂ ನನ್ನಂ ನನ್ನ ತಾಯಿತಂದೆಗಳು ಪ ಡೆಯುಹಾಗೆ ದೌಹಿತ್ರಸಂತತಿಯಿಂದ ನಿನ್ನ ವಂಶಾಭಿವೃದ್ಧಿಯಾಗಬೇಕೆಂದು ಭಗ ವಂತನಾಥ ಚಂದ್ರಮೌಳಿಯು ಅನುಗ್ರಹಿಸಿರುವದರಿಂದ ಈ ಜ್ಯೇಷ್ಠಕುಮಾರನು ನನ್ನ ಪಿತೃಸಂತತಿಯೋಳಿಗೆಗಾಗಿ ಸಲ್ಲುತಕ್ಕವಂ, ಈಗ ಸಂಜಾತರಾಗಿರುವ ಇವ ರು ಗಂಡುಮುಕ್ಕಳೊಳು ಜ್ಯೇಷ್ಠಪುತ್ರನಂ ಆ ಸರ್ವಜ್ಞೇಷ್ಠನಿಗೆ ಬದುಕಲಾಗಿ ಈ ಭದ್ರರಾಯರಿಗೆ ಕೊಡುವೆನೆಂದೊರೆದು ತನ್ನ ಪತಿಯಂ ಒಪ್ಪಿಸಿ ತಂದೆತಾಯಿ

ಗಳ ಅತ್ತೆಮಾವಂದಿರ ಅಜ್ಞೆಯಂ ಪಡೆದು ಅವರ ಆಜ್ಞಾನುಸಾರವಾಗಿ ಅವಳಿ ಜವಳಿ ಮಕ್ಕಳೊಳು ಹಿರಿಯನೆಂ ಭದ್ರರಾಯನ ಧರ್ಮಾಂಗನೆಯ ಮಡಿಲೊಳು ಹಾಕಲು ಆ ದಂಪತಿಗಳು ಬಹಳಂ ನಿಧಿಯುಂ ಕಂಡುಕೊಂದಂತೆ ಪರಮಾನಂದಭರಿತರಾಗಿ ತೆಗೆದುಕೊಂಡು ಮನ್ಸಿಸಲ್ಪಟ್ಟವರಾಗಿ ಮಹದುತ್ಸವದೊಂದಿಗೆ ತಮ್ಮ ರಾಜಧಾನಿಯುಂ ಸಾರಿದರು. ಇತ್ತಲೀ ಸೋಮಶೇಖರರಾಯಂ ದೌಹಿತ್ರಸಂ ಒಪ್ಪಿಗೊಂಡು ತನ್ನ ರಾಜಧಾನಿಯುಂ ಸಾರಿ ಆತನಂ ಪೋಷಿಸುತ್ತಾ ಸುಖದಿಂದಿರ್ದಂ. ಅನಂತರದೊಳು ನಾಗರಾಜಂ ಪತ್ನೀಪುತ್ರಸಮನ್ವಿತನಾಗಿ ಪರಮೋತ್ಸಾಹದೊಂದಿಗೆ ರಾಜ್ಯಭಾರಮಂ ಮಾಡುತ್ತಾ ಸಮಸ್ತ ಭೋಗಂಗಳಂ ಅನುಭವಿಸುತ್ತಾ ಸುಖದಿಂ [illegible]ದೊರೆದಾ ಗೌರೀದೇವಿಯು, ಎಲ್ಲೆ ವಿಕ್ರಮಾದಿತ್ಯರಾಯನೇ ; ಸೂರ್ಯೋದಯಮಾಗುತ್ತಾ ಬಂದುದು ವಿಶ್ರಾಂತಿಯುಂ ತಾಳುವೆನೆನೆ ರಾಜಂ ಆದಕ್ಕೊಪ್ಪಲು ಗೌರಿಯು ಸುಮ್ಮನಾದಳೆಂಬಲ್ಲಿಗೆ ಕರ್ನಾಟಕ ಭಾಷಾ ವಚನರಚಿತ ಸೌಂದರ್ಯೋದ್ಭಾವಕ ಸುಚರಿತ್ರ ಬೃಹತ್ಕಥಾಮಂಜರಿಯೊಳು ಲೀಲಾವತೀ ಗರ್ವಭಂಗವೆಂಬ ಎರಡನೆ ರಾತ್ರಿಯ ಕಥೆಯು ಸಂಪೂರ್ಣಮಾದುದು.

ತದನಂತರಮಾ ಲೀಲಾವತಿಯು ತನ್ನ ಮಂಚದಿಂದೆಳಿದು ಬಂದು ವಿಕ್ರಮಾರ್ಕಮಹಾರಾಜನ ಬಳಿಯೊಳು ನಿಂತು ಮುಕುಳಿತಹಸ್ತಳಾಗಿ ಶೌರ್ಯೌದಾರ್ಯ ಶಕ್ತಿಸಾಹಸಂಗಳಂ ಪೊಲ್ಲವರು ಈ ಲೋಕಜಾತದೊಳೆಲ್ಲಿಲ್ಲಿಯೂ ಕಾಣುವದಿಲ್ಲಂ, ತನುಗೆ ನಾಂ ಸೋತುಕೊಂದೆನು ತಮ್ಮ ಪಾದಸೇವಳಾಗಿರಲು ಸನ್ನಿಧಿಯಂ ಪ್ರಾರ್ಥಿಸುವೆನೆಂದು ನಿಂತಿರುವ ಲೀಲಾವತಿಯುಂ ಕಟಾಕ್ಷಿಸಿ ಅವಳ ವಿಜ್ಞಾಪನೆಯನ್ನಂಗೀಕರಿಸಲು ಆಕೆಯು ಎಲ್ಲೆ ಪ್ರಾಣನಾಥನೇ ; ಆಜ್ಞೆಯಾದರೆ ಈ ರಾಜ್ಯಭಾರದ ಮುಯ್ರೆಯಂ ನನ್ನ ತಂಗಿಗೊಪ್ಪಿಸಿ ಬರುವೆನೆಂದೊರೆದು ಅತನಾಜ್ಞಾನುಸಾರವಾಗಿ, ತಂಗಿಯು ಅಂತಃಪುರಮಂ ಸಾರಿ ತಂಗಿಯಂ ಕಂಡು, ಎಲೌ ತಂಗೀ ; ನಾನಾ ವಿಕ್ರಮಾರ್ಕರಾಯನಿಂ ಪರಾಜಿತಳಾದೆಂ ಈ ರಾಜ್ಯಭಾರದ ಮುಯ್ರೆಯಂ ನನ್ನ ತಂಗಿಗೊಪ್ಪಿಸಿ ಬರುವೆನೆಂದೊರೆದು ಅತನಾಜ್ಞಾನುಸಾರವಾಗಿ, ತಂಗಿಯ ಅಂತಃಪುರಮಂ ಸಾರಿ ತಂಗಿಯಂ ಕಂಡು, ಎಲೌ ತಂಗೀ ? ನಾನಾ ವಿಕ್ರಮಾರ್ಕರಾಯನಿಂ ಪರಾಜಿತಳಾದೆನು ಈ ರಾಜ್ಯಮುದ್ರಿಕೆಯಂ ತೆಗದುಕೊಂಡು ಸುಖದಿಂ ಪ್ರಜೆಗಳಂ ಪಾಲಿಸುತ್ತಿರು ನಾನಾತನ ಸೇವಾಪರಳಾಗಿ ಜೊತೆಯೊಳೇ ಹೋಗುವೆನೆನಲು ಲತಾಂಗಿಯು ಕೇಳುತ ಪಕ್ಕನೆ ನಕ್ಕು ನಿನ್ನಕ್ಕನಾದ ಪದ್ಮಾವತಿಯಂ ಬಿಟ್ಟಿರಲಾರದೆಯೂ, ಆತನಂ ಮೋಹಿಸಿಯೂ, ಹೀಗೊರೆಯುವೆ ನಿನ್ನ ಶಕ್ತಿಸಾಹಸಂಗಳಿಗೆ ಕಡೆಯೊಳಿದೇನೇಪಲಂ ? ? ಎಂದು ಹಾಸ್ಯಮಂ ಮಾಡಿ, ತನ್ನ ಬಳಯೊಳಿದ್ದ ದೂತಿಯಂಕರೆದು, ಪಿಂಬಾಧರಿಯೀ

ನಾನೆಂತು ಪೇಳುವೆನೋ ಅಂತೆಯೇ ಆ ವಿಕ್ರಮಾರ್ಕರಾಯನೊಳು ಪೇಳುವಳಾಗಿ, ಆತನ ಉತ್ತರಮುಂಬಿಡದೆನಗರುಹಬೇಕು. ಏನೆಂದು ಪೇಳಬೇಕೆನ್ನುವಿಯೋ ? ಎಲ್ಲೆ ವಿಕ್ರಮಾರ್ಕರಾಯನೇ ! ನಮ್ಮಕ್ಕಂದಿರಿಂದೀವರ್ವರಂ ಜಯಿಸಿದೆನೆಂಬ ಅಹಂಕಾರಮುಂ ಬಿಡಬೇಕು. ಅವರ ತಂಗಿಯಾದ ಕಲಾವತಿಯೆಂಬ ಹೆಸರಿನ ನಾನೋರ್ವಳಿಹೆನು. ಅವರಂ ಜಯಿಸಿದಪಾಗಲ್ಲ ನನ್ನಂ ಜಯಿಸುವದು ಮುಂದಿರಲಿ ಬಂದು ಅವಮಾನವಂ ತಾಳುವದಕ್ಕಿಂತಲೂ, ಸುಮ್ಮನಿರುವದು ಲೇಸು ನನ್ನ ಹೆಸರಂ ಪರ್ಯಾಲೋಚಿಸಿ, ನಂತರ ಜಯೇಚ್ಛೆಯಂ ಬಯಸುವನಾಗು, ವ್ಯರ್ಥಾದುರಹಂಕಾರ ಮಗ್ನನಾಗಬೇಡವೆಂದೊರೆಯುಬೇಕೆಂದು ದೂತಿಕೆಗೆ ಆಜ್ಞಾಪಿಸುವಷಂ ಕೇಳಿದಾ ಲೀಲಾವತಿಯು, ಎಲೌ ತಂಗಿ ನೀನಾತನ ಗುಣಾದಿಗಳಂ ತಿಳಿಯದೆ ಅಂತು ನುಡಿಯುಲಾಗದು, ಆತನು ಸಕಲ ಕಲಾಕೌಶೀಣನು ಸಮಸ್ತ ಶಕ್ತಿ ಸಮಾವೃತನು, ನನ್ನಂಥಾವಳೇ ಈ ಯುವಸ್ಥಿಯಂ ಕೊಂದಿದೆನು, ಎನಲು, ಗಹಗಹಿಸುತಾ ನೀನು ಕಾಮನ ವಶಳಾದ್ದರಿಂದ, ಆತನಿಗೆ ವಶವರ್ತಿನಿಯಾದೆ, ನನ್ನನ್ನು ಹಾಗೆ ತಿಳಿದಿರುವಿಯೋ ಎಂದು ಹಾಸ್ಯಾಳಿಸಿನಗುತಾ, ಬರಲಾ ಲೀಲಾವತಿಯು ತನ್ನ ಮಾನಸಳಾಗಿ ವಿಕ್ರಮಾರ್ಕರಾಯನ ಬಳಿಗೆ ಬರಲಾತಂ ಈಕೆಯು ಮುಖವಂ ನೋಡಿ ಇದೇಂ ಬಂತು ಬಿನ್ನೆಲೆಯನಾಂತಿರುವೆ ಎನಲಾಕೆಯು ತಂಗಿಯು ವೃತ್ತಾಂತಮನೆಲ್ಲಮಂ ಪೇಳಿ ನಮ್ಮಿತಮುಖಿಸರೋಜಳಾಗಿ ನಿಲ್ಲಲಾತರಾಯಂ ಓ ಸುಂದರಿಮಣಿಯೇ ! ಚಿಂತಿಸಬೇಡ, ನಾನಾ ಕಲಾವತಿಯಂ ನಾನಾ ವಿಧನಾಗಿ ಭಂಗಿಸಿ ಅವಳ ಗತಿಯಂ ಏನುಮಾಡುವೆನೋ ನೋಡುವೆ ಎಂದು ಸಮಾಧಾನವಂ ಪೇಳುತ್ತಿರುವನಿತರೊಳಾ ಕಲಾವತಿಯ ದೂತಿಕೆಯೆಬ್ಬಂದು, ರಾಯಂಗೆರಗಿ ಮುಕುಳಿತ ಕರಕಂಜಳಾಗಿ, ತನ್ನೊಡತಿಯಾಜ್ಞಾಪಿಸಿದಂತೆ ರಾಯನೊಳು ಬಿನ್ನೈಸಲಾ ವಿಕ್ರಮಾರ್ಕಾವನೀಂದ್ರಂ, ಆ ದೂತಿಕೆಯಂ ಕುರಿತು, ಎಲ್ಲೆ ಪರಿಚಾರಿಣಿಯೇ. ನಿನ್ನೊಡತಿಯೊಳು ನಾಂ ಸೋತುಹೋದರೆ ಆಕೆಯ ಅಕ್ಕಂದಿರನ್ನು, ಆಕೆಯಲ್ಲಿ ಬಿಟ್ಟು ಕಲಾವಂತನೆಂದು ಆಕೆಯ ನಾಮವನ್ನೇ ನಾನಾಂತು ಕೊಗುವೆನು ಅವಳ ಅಕ್ಕಂದಿರು ಮಾನವತಿಯರಾಗಿ ನಿನ್ನೊಂದಿಗೆ ಸೇರುವರು, ಆ ಮುಂದಗಮನೆಯನ್ನು ಈ ರಾತ್ರಿಯಲ್ಲಿಯೇ ಪರಾಭವವಂ ಹೊಂದಿಸಿ, ಬಿಗಂಬರಳಾಗಿ ಲಜ್ಜೆಯಿಲ್ಲದೆ ನನ್ನೆಡೆಗೆ ಬಂದು ಅನೇಕವಿಧವಾಗಿ ನನ್ನಂ ಪ್ರಾರ್ಥಿಸುವಂತೆ ಮಾಡುವೆನು, ಈ ಯರ್ಥಮಂ ಖಂಡಿತವಾಗಿ ನಿನ್ನೊಡತಿಗೆ ತಿಳಿಸಬೇಕೆಂದಾಜ್ಞಾಪಿಸಿ, ಆವಳಂ ಕಳುಹಿಸಿಕೊಟ್ಟು ಪದ್ಮಾವತೀ, ಲೀಲಾವತಿಯರೊಂದಿಗೆ, ಸಖ್ಯನಭೋಜನಾದಿಗಳಂ ಮಾಡಿ, ಕುಳಿತು ಗಂಧ ಪುಷ್ಪ ತಾಂಬೂಲಾದಿಗಳಂ ಸೇವಿಸುತ್ತ ಅರವಿಂದಬಾಂಧವನು ಚರಮಾಶಾಂಗ ನಾವಶನನಾಗುವದಂ ನಿರೀಕ್ಷಿಸುತ್ತಿದ್ದನೆಂಬಲ್ಲಿಗೆ ಎರಡನೆ ಕಥೆಯಾದ ಲೀಲಾವತೀ ಗನ್ಧರ್ವಂಗವೆಂಬಾಖ್ಯಾನಂ ಸಮಾಪ್ತವಾದುದು.

ಕಲಾವತೀ ಮಾನಾಪಹಾರವೆಂಬ ಮೂರನೆಯ ಭಾಗಂ.

ನೀರಸೇನನೆಂಬ ಮಹಾರಾಯಂ, ಹಂಸತೂಲಿಕಾತಲ್ಪಗತನಾಗಿ, ತನ್ನ ಮಂತ್ರಿಯಾದ ಚಿತ್ರವರ್ಮನಂ ಕುರಿತು ಎಲ್ಲೈ ಮಂತ್ರಿವರ್ಯನೆ ! ಆ ವಿಕ್ರಮಾರ್ಕಾವನೀಂದ್ರಂ ಕಲಾವತಿಯ ಮಾನಭಂಗವಂ ಮಾಡಲೋಸುಗವೇಂಗೈದನೋ ಆ ತಂತ್ರಮಂ ಪೇಳು ಬಹಳ ಕುತೂಹಲಮುಳ್ಳವನಾಗಿರುವೆನು. ಈ ರಾತ್ರಿಯೊಳು ನಿದ್ದೆಯಿಲ್ಲದಿದ್ದರೂ ಚಿಂತೆಯಿಲ್ಲಂ. ಆ ಪರಿಯನ್ನೆಲ್ಲಮಂ ವಿಸ್ತಾರಮಾಗಿ ಪೇಳೆಂದು ಬೆಸಗೊಳ್ಳಲು ಆ ಚಿತ್ರವರ್ಮಂ ಪೇಳಲಾರಂಭಿಸಿದನದೆಂತೆನೆ.

ಎಲ್ಲೈ ಮಹಾರಾಜನೇ ಲಾಲಿಸು ! ವಿಕ್ರಮಾರ್ಕರಾಯಂ ಲೀಲಾವತಿಯಂ ಸ್ವಾಧೀನಮಾಡಿಕೊಂಡು ಪದ್ಮಾವತೀ ಲೀಲಾವತಿಯರೊಂದಿಗೆ ರಾತ್ರಿಯಾಗೆ ಭೋಜನವಂಮಾಡಿ ಗಂಧಪುಷ್ಪಾದಿಗಳಿಂ ಭೂಷಿತನಾಗಿ ದಿವ್ಯತಾಂಬೂಲಮಂ ಸವಿಯುತೆ ಅವರೀರ್ವರಂ ಜೊತೆಯೊಳು ಕರೆದುಕೊಂಡು ಕಲಾವತಿಯ ಅಂತಃಪುರಮಂ ಸಾರಿ, ಅಕೆಯಿಂದ ಅಣಿಮಾಡಿಸಲ್ಪಟ್ಟಿದ್ದ ಮಣಿಮಂಜದೊಳು ಸೇರಿ ತನ್ನ ಕಾಂತೆಯರಾದವರೊಂದಿಗೆ ಕುಳಿತು, ಅವರೀರ್ವರಿಂದುಪಚರಿಸಲ್ಪಡುತ್ತಿರುವಾಗ, ಈ ಸಮಾಚಾರಮಂ ಕೇಳುತಾ ಲೀಲಾವತಿಯೂ, ಬೇರೆ ಮಾರ್ಗದೊಳ್ಮೈತಂದು ಈ ಮಹಾರಾಯನ ಮಂಚಕ್ಕೆದುರಾಗಿ ಹಾಕಿದ್ದ ಮಂಚದೊಳು ಕುಳಿತು ಈ ಎರಡು ಮಂಚಗಳಿಗೂ ನಡುವೆ ಕಾಂಡಪಟವಂ ಬಿಡಿಸಿ. ಬುರುಕೆಯಂ ಹಾಕಿಕೊಂಡು ತನ್ನ ಗೌಡಿಯೊಂದಿಗೆ, ತಾಂ ಬಂದಿರುವೆನೆಂದು ರಾಯಂಗೆ ಹೇಳಿಕಳುಹಲು ವಿಕ್ರಮಾದಿತ್ಯರಾಯಂ ತನ್ನುಭಯ ಪಾರ್ಶ್ವಗಳೊಳಿರುವ ಪದ್ಮಾವತೀ ಲೀಲಾವತಿಯರಂ ನೋಡಿ ಈ ನಿಮ್ಮ ತಂಗಿಯು ನಿಮ್ಮಂತೆಯಲ್ಲಂ ಮಹಾಪ್ರಾಥಳಂತೆ ಕಾಂಬಳು ಇವಳ ಗರ್ವವಂ ಮುರಿವೆನಲ್ಲದೆ ಮಾನವನ್ನೂ ಆಕೆಯಾಗಿ ಬಿಡುವಂತೆ ಮಾಳ್ಪಂ, ಕಣ್ಣಾರ ನೋಡಿರೆಂದೊರೆದು ಭೀಕಾಳನಂ ಸ್ಮರಿಸಲಾ ಭೂತಾದಿಪತಿಯಾದ ಭೀಕಾಳಂ ತತ್ಕ್ಷಣದೊಳೇ ಪ್ರತ್ಯಕ್ಷವಾಗಿ ರಾಯಂಗಭಿನಮಿಸಿ ಮುಕಳಿತ ಹಸ್ತನಾಗಿ, ಸ್ವಾಮಿ ಮಹಾರಾಯನೇ ! ನನ್ನಂ ಸ್ಮರಿಸಲೇಂ ಪ್ರಕೃತಾವ ಸರವೆನಲು ರಾಯಂ, ಆ ಭೀಕಾಳನ ಸತ್ಯಸಂಧತೆಗೆ ಮೆಚ್ಚುತಾ ಎಲ್ಲೈ ಆಶ್ರಿತಾಬಿವಾನಿಯೇ ! ಈ ದಿನದೊಳು ಬಂದು ಮಂಚದೊಳು ಕುಳಿತಿರುವನಳು, ಇವರೀರ್ವರಂತೆ ಅಲ್ಲ. ಮಹಾಗರ್ವಿಷ್ಠಳು ಇವಳ ಮಹಾಗರ್ವಂಗಳಂ ನಾಶಗೊಳಿಸಬೇಕೆಂದಾಜ್ಞಾಪಿಸಿ ಆನಂತರ ಎರಡು ಮಂಚಗಳಿಗೂ ಮಧ್ಯದೊಳಿರುವ ಕಾಂಡಪಟವೇ ನನಗೆ ನಿದ್ದೆಯೂ ಬಾರದು ಹೊತ್ತುಹೋಗದು ನಿನ್ನೊಡತಿಯಾದ ಕಲಾವತಿಯಾದರೋ ಮುಖವನ್ನು ಸಹಾ ತೋರದೆ ಮೌನೆ

ಧಾರಿಣಿಯಾಗಿಹಳು. ಆದ್ದರಿಂದ ಅತ್ಯಾಶ್ಚರ್ಯಕರವಾದೊಂದು ಕಥೆಯಂ ಹೇಳಿ ಕಾಲಕ್ಷೇಪಮಂ ಮಾಡಿಸೆಂದಾಜ್ಞಾಪಿಸಲಾ ಭೀತಾಳಂ ತೆರೆ ಹಚ್ಚಡದೊಳು ಸೇರಿ ಕಲಾವತಿಗೆ ಕಾಣದಂತೆ ಹಚ್ಚಡದಲ್ಲಿ ಅವರಿಸಿಕೊಂಡು ಕಥೆಯಂ ಹೇಳಲಾರಂಭಿಸಿದಂ

ತೆರೆ ಹಚ್ಚಡ ಪ್ರಥಮಯಾಮದಲ್ಲಿ ನಡೆಯುವ ಕಥೆ.

ಕೇಳೈ ನಿಕ್ರಮಾಕ್ಷ ಭೂವಿಖಾಂದ್ರನೇ ! ಧರಾಮಂಡಲದೊಳು ಧದ್ರಾವತೀಪುರಿಯೆಂಬ ಪುಣ್ಯಭೇದನ ಮೊಂದಿದ್ದುದು. ಆ ಪ್ರೌಢಪುರಂ ಉಗ್ರಸೇನನೆಂಬೊರ್ವ ಮಹಾರಾಯಂ ಪರಿಪಾಲಿಸುತ್ತಿರ್ದಂ, ಅತನ ಧರ್ಮಾಂಗನೆಯು ಗರ್ಭಮಂತಾಳಿ ಗಂಡು ಮೊಗುವಂ ಪ್ರಸವಿಸಿದಳು. ರಾಜಪುರೋಹಿತನಂ ಕರೆಯಿಸಿ ಜಾತಕಮುಂ ಬರೆದು ಫಲಂಗಳಂ ತಿಳಿಸಬೇಕೆಂದು ರಾಯುಂ ಪ್ರಾರ್ಥಿಸಲಾ ಪುರೋಹಿತಂ ಜನನಕಾಲಮುಂ ಕಂಡು, ತತ್ಕಾಲ ಗ್ರಹಸ್ಪುಟಮುಮಂಮಾಡಿ ಜಾತಕಮುಂ ಬರೆದು ನೋಡಲಾಗಿ, ಗ್ರಹಸ್ಥಿತಿಯು ರಾಜ್ಯಹಾನಿಕರವಾದುದಾಗಿಯೂ ಮಾತಾಪಿತೃಗಳಿಗೆ ಪಾಪಕರವಾದ ಫಲಪ್ರದಮಾಗಿಯೂ ಕಂಡುಬರಲು ಆತಂ ಯೋಚಿಸುತ್ತಾ, ಎಲೈ ಮಹಾರಾಜನೇ ! ಈ ಜಾತಕಕ್ಕೆ ಇರುವ ಗ್ರಹಸ್ಥಿತಿಯಂ ಚನ್ನಾಗಿ ಗಣಿತಮಾಡಿ ಕಂಡು ಹಿಡಿಯಬೇಕಾಗಿರುವ ಕಾರಣ ಸಾವಕಾಶಮಾಗಿ ನೋಡಿ ವಿಜ್ಞಾಪಿಸುವೆನೆಂದೊರೆದು ನಿಜಸ್ಥಿತಿಯನಾಡಲು ಭಯಮಾಂತವನಾಗಿ ತನ್ನ ಮನೆಯಂ ಸಾರಿ ವಿನೇದು ರಾಯುಂಗರುಹಲಿ ಎಂದು ಚಿಂತಿಸುತಿರ್ದಂ.

ಇತ್ತಲಾ ರಾಯುಂ ಪುತ್ರಜನಿತಾನಂದ ತುಂದಿಲ ಸ್ವಾಂತನಾಗಿ, ಮುಂದೆ ಬರುವ ವಿಪತ್ಪರಂಪರೆಗಳಂ ತಿಳಿಯದೆ ಜನಿಸಿದ ಪುತ್ರನಿಗೆ ಕಾಲಕಾಲಂಗಳಂ ಕಂಡು ಜಾತಕರ್ಮ ನಾಮಕರಣಾನ್ನ ಪ್ರಾಶನ ಚೌಲೋಪನಯನಂಗಳಂ ಮಾಡಿ ಸಂತೋಷಿಸುತ್ತಾ ಪುಷ್ಕರನೆಂಬ ಪೆಸರನ್ನಿತ್ತು ಅವನಿಗೆ ವಿದ್ಯಾಭ್ಯಾಸಮುಂ ಮಾಡಿಸಲು ಸಕಲಕಲಾಭಿಜ್ಞರಾದವರಂ ಕರೆಯಿಸಿ ಅವರಿಗೆ ಸಕಲ ವಿಷಯಗಳಲ್ಲಿಯೂ ಜೀಕಾದುವುಗಳಂ ಅಣಿಮಾಡಿಕೊಟ್ಟು ವೇತನಂಗಳಂ ಕೊಡುತ್ತಾ ಆಗಾಗ ಮಣಿಕನಕವಸನಾದಿಗಳಂ ಕೊಟ್ಟು ಬಹುಮಾನಿಸುತ್ತಾ ಬರಲು ಅವಿದ್ವಾಂಸರು ಶ್ರದ್ಧಾಭಕ್ತಿ ಪೂರ್ವಕಮಾಗಿ ವಿದ್ಯಾಭ್ಯಾಸಮುಂ ಮಾಡಿಸುತ್ತಾ ಬರಲು ಕೆಲವು ಕಾಲಕ್ಕೆ ಆ ರಾಜಾತ್ಮಜಂ ಸಕಲ ಕಲಾಕೋವಿದನಾದಂ. ಸಕಲ ವಿದ್ಯಾಪ್ರವೀಣನಾಗಿಯೂ ವಿವಾಹ ಕಾಲಮುಂ ಹೊಂದಿದವನಾಗಿಯೂ ಇದ್ದುದರಿಂದ ತಕ್ಕ ಕನ್ನೆಯಂ ತಂದು ವಿವಾಹಮುಂ ಮಾಡಬೇಕೆಂಬ ಕುತೂಹಲಮುಳ್ಳವನಾಗಿ ಕನ್ಯಾರ್ಥಿಯಾಗಿ ಕೆಲವರಂ ದೇಶಂಗಳಿಗೂ ಕಳುಹಿಸಿ, ನಿರೀಕ್ಷಿಸುತ್ತಿರ್ದಂ. ಹೀಗಿರುತ್ತಿರುವ ಕಾಲದೊಳು ಅರಾಯನ ದುರದೃಷ್ಟದಿಂದ ಶತ್ರುಗಳು ಯುದ್ಧಮುಂಮಾಡಿ ಜಯಿಸುವದಕ್ಕಾಗಿ ಚತುರಂಗಬಲ ಸಮೇತರಾಗಿ ಒಂದು ಮುತ್ತಿಗೆಯಂ ಹಾಕಿದರು. ಅಗಲೀ ಧರಣೀಪಾಲಂ ಚತುರಂಗಬಲ ಸನಾಮೃತನಾಗಿ

ಶತ್ರುಸೈನ್ಯಮಂ ಪ್ರವೇಶಿಸಿ ಸೇನಾಧಿಪತಿಯು ಸಂಜ್ಞೆಯಿಂದ ಮುಸ್ತಸಸೈನ್ಯವೂ, ಶತ್ರುವೋಹರವಂ ಹೊಕ್ಕು ತಮ್ಮ ತಮ್ಮ ವಾಹನಂಗಳಂ ವಿಚಿತ್ರತರಮಾಗಿ ನಡೆಯಿಸುತ್ತಾ, ಆಯುಧಂಗಳಿಂ ಪ್ರಹರಿಸುತ್ತ ಬೊರೆಯುತ್ತಲಿರಲು ದೈವಯೋಗದಿಂದ ತನ್ನ ಬಲವೆಲ್ಲವೂ ನಾಶಮಂ ಹೊಂದಲು, ಧನುರ್ಧಾರಿಯಾಗಿ ತಾನೇ ಮುಂದರಿದು ಕ್ರೂರವಾದ ನಾರಾಚಂಗಳಿಂ ಶತ್ರುಸೈನ್ಯಮಂ ಕಡಿಯುತ್ತ ಯಮಪುರಿಗೆ ಅತಿಥಿಗಳಂ ಮಾಡುತ್ತಾ, ಬರೆ ಪ್ರತಿಬಲದ ಜಾತುರಂಗವೆಲ್ಲವು ನಾಶಮಾಗಲಾ ರಾಯಂ ಖತಿಗೊಂಡು ಸೇನಾಪತಿಯಂ ಹಿಂದುಳುಹಿ, ತಾನೇ ಧನುರ್ಧಾರಿಯಾಗಿ ಈ ರಾಯುಂಗೆ ಎಮುರಾಂತು ಯುದ್ಧಮಂ ಮಾಡುತ್ತಾ ಬರಲು, ಇರ್ವರ ಬಾಣಂಗಳಂ ಓರೋರ್ವರು ಕತ್ತರಿಸಿ ಒಟ್ಟಿಗೆ ರಾಶಿಗಳು ಪೆರ್ಚಿಟ್ಟಂಗಳಂತಾಗೆ, ಆ ಶತ್ರುರಾಯಂ ಪರಮ ರೋಷಾರುಣನೇತ್ರನಾಗಿ, ಈತನ ಬಿಲ್ಲು ಕೈಯಿಯಾಗಿ ವತಡಲು, ಕೃಪಾಣ ಪಾಣಿಯಾಗಿ ರಭಸದಿಂದುಮಿಕ್ಕಿ, ಕತ್ತಿಯಿಂ ವೆರಸು ಕೆಡೆಯು ಬರಮಂ ಸವರುತ್ತಾ ರಾಯನ ಸರಿಸಾರಕ್ಕೆ ಬರುವನಿತರೊಳು, ಆ ಶತ್ರುರಾಯಂ ತನ್ನ ಕಾರ್ಮುಕದೊಳು ನಿನ್ಯವಾಜೊಂದರ್ಧ ಚಂದ್ರಾಕೃತ ಬಾಣಮಂ ಸಂಧಾನಮಾಡಿ, ಕಿವಿವರೆಗಂ ಸೆಳೆದು, ಈ ರಾಯನ ಕಂಠಕ್ಕೆ ಗುರಿಗೈದು ಬಿಡಲಾ ನಾರಾಚಂ ಈ ರಾಯನ ಶಿರಮಂ ಪುಟಿಜಂಡಿನೊಲು ಆಕಾಶಮಾರ್ಗಮುಂ ಹೊಂಮಿಸಿತು. ಈ ಪರಿಯಿಂ ಮೃತನಾದ ಉಗ್ರಸೇನ ಮಹಾರಾಯನ ಕಾಂತೆಯು ಈ ಪರಿಯನಾಲ್ಕೆಸುತ ಪತಿಯೇ ಮೃತನಾದನೆಂಬೆಲೆ ತಾಂ ಜೀನಿಸಿ ಫಲಮೇನೆಂದು ನಿಶ್ಚಯಿಸಿ, ಪುರುಷ ವೇಷಧಾರಿಣಿಯಾಗಿ ಎರಡು ಕೈಗಳೊಳೂ ಖಡ್ಗಂಗಳಂ ಪಿಡಿದು, ಅಶ್ವಾರೂಢಳಾಗಿ ಹೊರಟು ಹತಶೇಷರಾದ ಸೈನ್ಯದ ಜನಂಗಳಿಗೆ ಹಿಂಬಲಮುಂ ಕೊಡುತ್ತಾ ಪ್ರಳಯಕಾಲದ ಶಿಡಿಲೆನಂದದಿ ಸೈನ್ಯದೊಳು ನುಗ್ಗಿ, ಶತ್ರುಗಳಂ ಭಂಗಿಸುತ್ತ ಬರಲು, ಹಾ! ಇವನಾರೋ ಮಹಾ ಶೂರನಾಗಿ, ನಮ್ಮ ಸೈನ್ಯಮನ್ನೆಲವಂ ನಾಶಗೊಳಿಸುವ ವನೆಲಾ, ಎಂದು ಶತ್ರುವೊಹರದ ಶೂರರೆಲ್ಲರೂ ಒಂದಾಗಿ ಸೇರಿ ಖಡ್ಗ, ತೋಮರ, ಕುಂತ, ಭಿಂಡಿಪಾಲ, ಮುಸಲ, ಮುದ್ಗರಾದ್ಯನೇಕ ಆಯುಧಂಗಳಿಂದಲೂ, ಸರಳ, ಶಲ್ಯ, ನಾರಾಚಾರ್ಧಚಂದ್ರಾದಿಬಾಣ ಜಾಲಂಗಳಿಂದಲೂ ಮಳೆಯಂ ಸುರಿಸುತ್ತಾ ಬಂದು, ನಾನಾ ಮುನಿದೊಳು ಮುತ್ತಿಕೊಳ್ಳಲಾ ರಾಜಾಂಗನೆಯು ಧೈರ್ಯಮಂಬಿಡದೆ, ಸಾಹಸಾತಿಶಯಮುಂ ತೋರುತ್ತಾ, ತನ್ನ ಕರಖಡ್ಗದಿಂ ನಿವಾರಿಸುತ್ತಾ ಬರುವಲ್ಲಿ ಓರ್ವಭಟಂ ತನ್ನ ಕರಕೃಪಾಣದಿಂ ದೀಕೆಯ ಶಿರಮಂ ಛೇದಿಸಿ ಭೂಮಿಯೊಳು ಕೆಡಹಿದಂ. ಹತಶೇಷರಾದವರು ಪಲಾಯನಂ ಗೈಯ್ಯೆ ಪರಮೋತ್ಸಾಹದೊಳು ಶತ್ರುರಾಯನ ವೋಹರಂ ಮುಂದರಿದು ಬಂದು, ಕೋಟೆಯಂ ಮುತ್ತಿ, ಬಾಗಿಲ್ಗಳಂ ಮುರಿದು ಒಳ

ಹೊಗುತ್ತಿರುವಾಗಲಾ ಉಗ್ರಸೇನ ಮಹಾರಾಯನ ಪುರೋಹಿತಂ, ಹಾ ದೈವವೇ ! ನಮ್ಮ ಮಹಾರಾಯನಗತಿ ಇಂತಾದುದೇ ಎಂದು ಹಂಬಲಿಸುತ್ತಾ ನಾನಾವಿಧರೋ ಬ್ರಾಹ್ಮಣನು, ಯದ್ಧವಾಪಲಸಮರ್ಥನು, ಆ ಮಹಾರಾಯನ ಮುಖಾಂತರವಾಗಿಯೇ ಜೀವಿಸಿದವನಾದ್ದರಿಂದ ಆತನ ಮಗನಂ ಶತ್ರುರಾಯರ ಕೈವಶವಂ ಮಾಡಲಾರೆನೆಂದು ನಿಶ್ಚೈಸಿ ಅರಮನೆಯುಂ ಸಾರಿ. ಇನ್ನೂ ಬಾಲ್ಯಾವಸ್ಥೆಯಂ ಬಿಡದ ಆ ರಾಜಕುಮಾರನಂ ಅಪಹರಿಸಿಕೊಂಡು ಬಂದು, ಅವನಿಗೆ ಬ್ರಾಹ್ಮಣವೇಷವಂ ಹಾಕಿ, ಬ್ರಾಹ್ಮಣ ಬ್ರಹ್ಮಚಾರಿಯೆಂದು ಪೆಸರಿಟ್ಟುಕೊಂಡು ಪೋಷಿಸುತ್ತಿರುವಾಗಲಾ ರಾಜಕುಮಾರನ ದುರ್ಭೋಗವಿಂದ ಬ್ರಾಹ್ಮಣನು ಪರಲೋಕವಂ ಸಾರಿದನು. ಅನಂತರ ಆ ಬ್ರಾಹ್ಮಣವಟು ವೇಷಮಂ ಧರಿಸಿಕೊಂಡಿದ್ದ ರಾಜಕುಮಾರಂ ಪೋಷಕರಿಲ್ಲದೆ ದೇಶಾಂತರಗತನಾಗಿ ಅಲ್ಲಲ್ಲಿ ಅಲೆಯುತ್ತಾ ಕಡೆಯೊಳು ಸೌಂಗೆಂಬಿಧಾನ ಪಟ್ಟಣಮಂ ಸಾರಿ, ಅಲ್ಲಲ್ಲಿ ತಿರುಗುತ್ತಾ ತಿರಿವು ಕೊಟ್ಟೆಯಂ ತುಂಬಿಸಿಕೊಳ್ಳುತ್ತಾ ಇರಲೊಂದಾನೊಂದುದಿನ ಆ ಪುರದೊಳಗಿದ್ದ ದೊಡ್ಡ ವಿದ್ಯಾಶಾಲೆಯನ್ನೆದಿ, ಆತನ ಪರಿಯನ್ನೆಲ್ಲಮಂ ನೋಡಿ, ಅಯ್ಯೋ ನಾಂ ಕಲಿತ ವಿದ್ಯೆಗಳೆಲ್ಲಾ ನಿಷ್ಫಲಂಗಳಾದವಲ್ಲ, ಇದು ಸಕಲಕಲಾಕೋವಿದವಾದ ವಿದ್ವಾಂಸರಿಂದ ನಿಷಿಡವಾಗಿರುವುದು, ನನ್ನ ಎಲ್ಲಾ ವಿದ್ಯೆಗಳಂ ಇಲ್ಲಿ ಅಭಿವೃದ್ಧಿಮಾಡಿಕೊಳ್ಳಲನುಕೂಲವಾಗಿಹುದು, ವಿದ್ಯೆವಿಲ್ಲದವನು ಲೋಕದಲ್ಲಿ ತೃಣಕ್ಕಾದರೂ ಕಡೆಯಾದವನು.

ವಿದ್ಯಾ ನಾಮನರಸ್ಯರೂಪಮಧಿಕಂ ಪ್ರಚ್ಛನ್ನಗುಪ್ತಂಧನಂ। ವಿದ್ಯಾಭೋಗಕರೀ ಯಶಸ್ಸುಖಕರೀ ವಿದ್ಯಾಗುರೂಣಾಂಗುರುಃ॥ ವಿದ್ಯಾ ಬಂಧುಜನೋವಿದೇಶಗಮನೇ ವಿದ್ಯಾವರಾದೇವತಾ। ವಿದ್ಯಾರಾಜಸುಪೂಜಿತಾನಹಿಧನಂವಿದ್ಯಾವಿಹೀನಃಪಶುಃ॥

ವಿದ್ಯೆಯಂಬುವದೇ ಮನುಷ್ಯನಿಗೆ ಸುರೂಪವು, ವಿದ್ಯೆಯೇ ಬಚ್ಚಿಟ್ಟ ರಹಸ್ಯವಾದ ಹಣವು, ವಿದ್ಯೆಯೇ ಸಮಸ್ತ ಭೋಗಂಗಳನ್ನೂ ಸೌಖ್ಯಂಗಳನ್ನೂ, ಯಶಸ್ಸನ್ನೂ ಉಂಟುಮಾಡುತ್ತದೆ. ಆ ವಿದ್ಯವೇ ಗುರುಗಳಿಗೆಲ್ಲಾ ಪರಮಗುರುವಾದದ್ದು. ಪರದೇಶಗತರಾಗಿರುವಾಗ ವಿದ್ಯೆಯೇ ಬಂಧುವಾದದ್ದು. ಆ ವಿದ್ಯೆಯೇ ಸರ್ವೋತ್ತಮನಾದ ಭಗವಂತನು, ಅರಸರಿಂದ ಬಹುಮಾನಿಸಲ್ಪಡುವದೂ ವಿದ್ಯೆಯೇ, ಹಣವಿದ್ದರೆ ಈ ಪೂಜ್ಯತ್ವವು ಉಂಟಾಗಲಾರದು, ಇಂಥಾ ವಿದ್ಯೆವಿಲ್ಲದಿದ್ದರೆ ಅವನೇ ಪಶುವೆಂದು ತಿಳಿಯಬೇಕು, ಎಂದು ನ್ಯಾಯಶಾಸ್ತ್ರಜ್ಞರು ಹೇಳುವನಾತುಗಳೇ ನಿಜವಾದದ್ದು, ಎಂದು ಯೋಚಿಸಿದವನಾಗಿ ವಿದ್ಯಾಶಾಲೆಯಂ ಸಾರಿ, ಅಲ್ಲಿನ ಬೋಧಕರ ಸನ್ನಿಧಿಗ್ಯೆದಿ, ಎಲ್ಲ ಮಹಾನುಭಾವರೇ ! ನಾಂ ವಿದ್ಯಾವಿಹೀನನು, ವಿದ್ಯಾದಾನಮುಂ ಮಾಡಬೇಕೆಂದು ಅವರ ಪದಪಂಕಜಂಗಳೊಳಿರಿಗಿ, ಮುಕುಳಿತ ಹಸ್ತನಾಗಿ ಅತ್ಯಂತ ವಿನಯದಿಂ ಪ್ರಾರ್ಥಿಸುತ್ತಿ

ರುವವನಂ ಕಂಡು, ಅವರು ಕನಿಕರವನ್ನಾಂತು ನಿನ್ನಿಚ್ಛಾನುಸಾರವಾಗಿರುವೆನೆಂದು ಆ ವಟುವನ್ನೇಷಧಾರಕನಿಗೆ ಪೇಳಿ, ವಿದ್ಯಾಭ್ಯಾಸವಂ ಮಾಡಿಸುತ್ತಾ ಬಂದರು. ಈತಂ ತಂದೆಯಿಂದ ಬಾಲ್ಯದೊಳು ಸಕಲ ವಿದ್ಯೆಗಳಂ ಕಲಿಸಿ ಮರೆತನಾದ್ದರಿಂದ ನೋಡಿದ ಮಾತ್ರದಿಂದಲೇ ಹೇಳಿದಂತೆ ಸಂಗ್ರಹಿಸುತ್ತಾ, ಅಲ್ಲಿ ವಿದ್ಯಾಭ್ಯಾಸಮಂ ಮಾಡುವ ವಿದ್ಯಾರ್ಥಿಗಳೊಳು ಇವನೇ ನೆಗ್ಗಳನಾಗಿ ಸ್ವಲ್ಪ ಕಾಲದೊಳು ಸಕಲ ವಿದ್ಯಾಪಾರಂಗತನಾಗಿ ಬೋಧಕರಿಗೆ ಹರ್ಷಮಂ ಹೊಂದಿಸುತ್ತಾ, ಅವರಾಜ್ಞಾ ಪರತಂತ್ರನಾಗಿ ಕಾಲಮಂ ಕಳೆಯುತ್ತಿರ್ದಂ.

ಈ ವಿದ್ಯೆಶಾಲೆಯು ನೆಲಗೊಂಡಿರುವ ಪಟ್ಟಣದ ದೊರೆಯಾದ ಭೋಜಮಹಾರಾಯನು ಚಂದ್ರಸೇನ ಭಯಸೇನರೆಂಬ ಇರ್ವರು ಮಂತ್ರಿಗಳಿಂದಲೂ, ಬಹುದಾತನೆಂಬ ಸೇನಾಪತಿಯಿಂದಲೂ, ಆಪ್ತಮಿತ್ರನಾದ ವಸುಪಾಲನೆಂಬ ವೈಶ್ಯವರ್ಯನಿಂದಲೂ ಕೂಡಿದವನಾಗಿ, ಸಮ್ಯೋತ್ತಮ ರಾಜಧರ್ಮಾನುವರ್ತಿಯಾಗಿ ರಾಜ್ಯಪರಿಪಾಲನೆಯಂ ಮಾಡುತ್ತಾ, ಶೋಭನಾಕೆಗಿಯೆಂಬ ರಾಜಮಹಿಸಿಯೊಳಿಡಗೂಡಿ, ಸಕಲ ಭೋಗಂಗಳಂ ಅನುಭವಿಸುತ್ತಾ ಇರಲು, ಆ ಕಾಂತಾಮಣಿಯೊಳು ಸ್ತ್ರೀರತ್ನವೊಂದುದಯಿಸಿತು. ಗುಣಿಗಣಿ ಎಂಬ ಪೆಸರನ್ನಾಕೆಗಿತ್ತು ನೋಡಿ ಸಂತೋಷಿಸುತ್ತಿದ್ದರೂ, ಪುರುಷ ಸಂತಾನವಾಗಲಿಲ್ಲವೆಂದೊಂದೇ ಪರಿದಾದ ಚಿಂತೆಯುಂ ತಾಳಿದ್ದವರಾಗಿದ್ದರೂ ಈ ಮಗಳಂ ನೋಡಿ, ಅದಂ ಮರೆತು, ಅವಳಿಗೆ ವಿದ್ಯಾಭ್ಯಾಸಮಂ ಮಾಡಿಸಲೋಸುಗ ಮಹಾವಿದ್ಯಾವಂತನಾದೋರ್ವ ಪಂಡಿತವರ್ಯನಂ ಬರಮಾಡಿಸಿ, ಆತನಿಗೆ ತಕ್ಕ ಉಪಚಾರಂಗಳು ನಡೆಯುವಂತೆ ಅರಮನೆಯೊಳೇ ಪರುಣಿಸಿ, ಆತನಿಗೆ ಅಲ್ಲಿಯೇ ವಾಸಸ್ಥಾನಮಂ ಮಾಡಿಸಿ, ಸಕಲೋಪಚಾರಂಗಳಿಂದ ಮನ್ನಿಸುತ್ತಾ, ಆತನಿಂ ತನ್ನ ಮೋಹದ ಪುತ್ರಿಗೆ ವಿದ್ಯಾಭ್ಯಾಸಮಂ ಮಾಡಿಸುತ್ತಾ ಬರಲು, ದಿನೇ ದಿನೇ ಹೇಳಿದುದನೆಲ್ಲಮಂ ಸಂಗ್ರಹಿಸುತ್ತಾ, ನಾಲ್ಕೈದು ವರುಷಂಗಳೊಳು ಸಕಲಕಲಾ ಪ್ರವೀಣಳಂ ಮಾಡಿಸಿದನು. ಚಂದ್ರಸೇನನೆಂಬ ಮಂತ್ರಿ ನಂದನನಾದ ಚಂದ್ರದತ್ತನು ಭಯಸೇನನ ಪುತ್ರಿಯಾದ ಚಂದ್ರಮತಿಯು, ಸೇನಾಧಿಪನ ತನೂಭವೆಯಾದ ಹಂಸಮತಿಯು, ಧನಪಾಲನೆಂಬ ಶೆಟ್ಟಿ ಮಗಳಾದ ಗಿರಿನಂದನೆಯೂ, ಈ ನಾಲ್ವರೂ ರಾಜಪುತ್ರಿಗೆ ಸಹಾಧ್ಯಾಯಿನಿಗಳಾಗಿ ವಿದ್ಯಾಭ್ಯಾಸಮಂ ಮಾಡುತ್ತಾ, ಪಾನಾಹಾರ ನಿದ್ರಾಭೋಗ ವಿಹಾರಂಗಳಲ್ಲೊರ್ವರೊರ್ವರನ್ನಗಲದೇ ಪರಮಾಪ್ತರಾಗಿ ಗುರುವಿನೊಳು ವಿದ್ಯಾಭ್ಯಾಸಮಂ ಮಾಡಿ ಚದುರೆಯರಾದರು ಮಂತ್ರಿಪುತ್ರನಾದ ಚಂದ್ರದತ್ತನು, ಈ ನಾಲ್ವರೊಳು ಪರಮ ವಿಶ್ವಾಸವುಳ್ಳವನಾಗಿ, ಅವರ ಇಷ್ಟಾನುಸಾರಂ ಬೇಕಾದ ಕಥೆಗಳಂ ಹೇಳುತ, ಬಯಸಿದ ಪದಾರ್ಥಂಗಳಂ ಅಕ್ಕರೆಯಾಗಿ ತಂದುಕೊಡುತ್ತಾ, ಅವರನ್ನೆಡಬಿಡದೇ ಅವರ ಪ್ರೀತಿಗೆ ಪಾತ್ರನಾಗಿ

ದ್ದಂ. ಹೀಗಿರುವದರಿಂದ ಒರ್ವರೊರ್ವರು ಅಗಲದೇ ಎಲ್ಲರೂ ಏಕೋದರ ನ್ಯಾಯವಾಗಿರುತ್ತಾ, ವಿದ್ಯಾವ್ಯಾಸಂಗಿಗಳಾಗಿರುವಲ್ಲಿ ಈ ಕನ್ಯಕಾಮಣಿಯರು ಆಸನ್ನ ಯೌವ್ವನವುಳ್ಳವರಾವರೆಂತಲೂ, ಮಂತ್ರಿ ಪುತ್ರನು ಯೌವ್ವನಸ್ಥನಾದ ನೆಂತಲೂ ತಿಳಿದಂಥವನಾಗಿ ಇನ್ನು ಮುಂದಿವರೆಲ್ಲರೂ ಸಹವಾಸಿಗಳಾಗಿದ್ದರೆ, ಅಪಾಯವೇನಾದರೂ ಸಂಭವಿಸುವದೋ ಏನೋ ಎಂಬ ಶಂಕೆಯಿಂದ ರಾಯಂ ವಿದ್ಯಾಬೋಧಕನಂ ಕರೆದು, ಎಲೈ ವಿದ್ಯಾನಿಧಿಯೇ ! ಇಂದುಮೊದಲು ಈಕ ನ್ಯಾರತ್ನಗಳಿಗೆ ಪ್ರತ್ಯೇಕಿಸಿ, ವಿದ್ಯಾಭ್ಯಾಸಮಂ ಮಾಡಿಸಬೇಕು. ಮಂತ್ರಿಸುತ ನಿಗೂ ಅಂತೆಯೇ ಮಾಡಿಸುವನೆಂದಾಜ್ಞಾಪಿಸಲು, ವಿದ್ಯನ್ಮಣಿಯು ಅಂತೆಯೇ ಮಾಡುವೆನೆಂದುರಾಯನಿಂ ಬೀಳ್ಕೊಟ್ಟವನಾಗಿ ಬಂದು ಮಂತ್ರಿಪುತ್ರನಂ ಕರೆದು, ಎಲೈಮಂತ್ರಿನಂದನನೇ ! ಈ ದಿನವಾದಿಯಾಗಿ ನಾನೇ ನಿನ್ನ ಮನೆಗೆ ಪುದ್ಯಾ ಹ್ನಾತ್ಪರಂಬಂದು ಪಾಠಂಗಳಂ ಹೇಳುವೆನು. ರಾಜಪುತ್ರಿಯೇ ಮೊದಲಾದವ ರಿಗೆ ರಾಜನುಮಂದಿರದೊಳೇ ಪಾಠಂಗಳಂ ಪ್ರಾತಃಕಾಲದೊಳು ಹೇಳುವೆನು ಹೀಗೆ ಬೇರೆ ಬೇರೆ ಹೇಳಬೇಕೆಂದು ರಾಯಂ ಆಜ್ಞಾಪಿಸಿರುವನೆಂದೊರೆದು, ಆ ಬಾಲಿಕಾ ಮಣಿಗಳಿಗೂ ಆಜ್ಞೆಯನ್ನೊರೆಯಲು, ಎಲ್ಲರೂ ಸಹವಾಸವುಗಲಿ ಹೋದಪ್ಪ ಕ್ಕಾಗಿ ಚಿಂತಿಸುತ್ತಾ ರಾಜಪುತ್ರಿಯಂ ಮುಂದುಮಾಡಿಕೊಂಡು ಹೊರಟು ರಾಯನೆಡೆಗೈದಿ, ಪುಂದಿನಂತೆ ಎಲ್ಲರೂ ಒಂದೆಡೆಯೊಳೇ ಪಾಠಂಗಳಂ ಓದುವಂತೆ ಆಜ್ಞೆಯಂ ಮಾಡಬೇಕೆಂದು, ರಾಜಸನ್ನಿಧಿಯಂ ಸಾರಲು, ಆ ರಾಯಂ ತನ್ನ ನಂದನೆಯುಂ ಕರೆದುತೊಡೆಯ ಮೇಲೆ ಕುಳ್ಳಿರಿಸಿ. ಮಗಳಂ ಮೈದಡವುತಾ ಸುಕುಮಾರಿಯೆ ನಿನ್ನ ಮುಖಕಮಲವೇಂ ಕಳೆಗುಂದಿಹುದು ಕಾರಣವೊರೆಯು ವದೆಂದು ಕೇಳಲು ಆ ಕನ್ಯಕಾಮಣಿಯು ತಾತ ಲಾಲಿಸು ! ನಾವೆಲ್ಲರೂ ಸೇರಿ ವಿದ್ಯಾಭ್ಯಾಸಮಂಮಾಡಿ ಸುಖಿಸುತ್ತಿದ್ದೆವು. ಎಲ್ಲರೂ ಬಹುಕಾಲಮಾಗಿ ಸಹೋ ದರರಂತೆ ಆಡುತ್ತಾ, ಪಾಡುತ್ತಾ, ವಿನೋದವಾಗಿ ಕಾಲಮುಂ ಕಳೆಯುತ್ತಾ, ವಿದ್ಯಾ ವ್ಯಾಸಂಗ ಕಾಲದಲ್ಲಿಯೂ ಪರಸ್ಪರಸಹಾಯಮಂ ಮಾಡುತ್ತಾ, ಸುಖವಾಗಿ ದ್ದೆವು. ಇಂದುಪ್ರತ್ಯೇಕವಾಗಿ ಪಾಠಮುಂ ಓದುವಂತೆ ಸನ್ನಿಧಾನದಿಂದಾಜ್ಞೆಯಾ ದಂತೆ, ಉವಾಧ್ಯಾಯರು ಆಜ್ಞಾಪಿಸಿದರೆಂದು ಹೇಳಿ ಸುಮ್ಮನಾಗಲು, ರಾಯಂ ಎಲೌತಾಯಿಯೇ ! ನೀವುಗಳು ದೊಡ್ಡವರಾಗುತ್ತಾ ಬಂದಿರಿ, ಮಂತ್ರಿಸಂದ ನನು ಪ್ರಾಯಸಮರ್ಥನಾಗುತ್ತಾ, ಬಂದನಾದ್ದರಿಂದ ಈ ಕಾಲದೊಳು ಎಲ್ಲರೂ ಒಂದು ಕಡೆ ವಾಸವಾಗುವದು ಅಯುಕ್ತವೆಂದು ನಾನಂತೆಯೇ ಮಾಡಿದೆನು. ಇದು ಯುಕ್ತವೆಂದರಿಯದೆ ಯೋಚಿಸಲಾಗದೆಂದು ಸಮಾಧಾನಮಂ ಹೇಳಿ ಕ ಳುಹಲು ಆ ಬಾಲಿಕಾಮಣಿಯರು ಮನಸ್ಸಿನ ಕಳವಳವಂ ಬಿಟ್ಟು ಶುದ್ಧಮಾನರಾ ಗಿ ಬಂದು ಈ ನಾಲ್ವರೊಂದಿಗೆ ಕುಳಿತು ವಿನೋದಮಾದ ಕಥೆಗಳಂ ಪೇಳುತ್ತಿ

ದ್ದು ಸರಸಸಲ್ಲಾಪಂಗಳಂ ಆಡುತ್ತಾ ವಿನೋದನಾಗಿ ಕುಳಿತಿರುವ ಕಾಲದೊಳ್ಳ
ನಾಲ್ವರಂಕುರಿತು ನೀವು ನನ್ನಂ ಮದುವೆಮಾಡಿಕೊಳ್ಳುವದಕ್ಕೆ ಸಮ್ಮತಿಸುವಿರಾ?
ಎಂದು ಪ್ರಶ್ನೆಮಾಡಲು, ರಾಜಪುತ್ರಿಯೇ ಮೊದಲಾದ ನಾಲ್ಕುಜನವೂ ಪರ
ಮಾನಂದಮಂ ತಾಳ್ದಿ ಹಾಗೆಯೇ ಆಗಲೆಂದು ಒಪ್ಪಿಕೊಳ್ಳಲು ಮಂತ್ರಿನಂದನ
ನಂ ಗೆಳತಿಯರೇ ನಿಮ್ಮಂ ಮದುವೆ ಮಾಡುವದಾಗಿ ನಮ್ಮ ತಂದೆ ಮುಖಾಂತರ
ಮಾಗಿ ನಿಮ್ಮ ತಂದೆಗಳಿಗೆ ಹೇಳಿ ತಿಳುಹಿಸುವೆನು ಅವರು ಅದಕ್ಕೆ ಸಮ್ಮತಿಸಿದರೆ
ಸರಿಪ್ಪೋತ್ತಮವಾಡುದು ದೈವಯೋಗದಿಂದ ಅವರು ಸಮ್ಮತಿಸದೆ, ನನ್ನ ಮನೋ
ರಥವು ಕೈಸಾರದೆ ಹೋದರೆ ನೀವು ಪುಷ್ಪವತಿಗಳಾದ ಕೂಡಲೆ ನನ್ನೊಂದಿಗೆ
ಶೀರಿ ಸುರತಸುಖವಂಕೊಡ್ಡು ಅನಂದಗೊಳಿಸುವಿರಾಗಬೇಕೆಂದು ನುಡಿಯೆ ಅಂತೆ
ಯೇ ಆಗಲೆಂದವರು ಸುಮ್ಮತಿಸುವಂತೆಮಾಡಿ ಅದರಂತೆ ಅವರು ಭಾಷೆಯನ್ನಿ
ತ್ತು ಕಳುಹಿದರು. ಹೀಗೆಯೇ ಕೆಲವು ಕಾಲಂ ಕಳೆಯೆ ಇವರೆಲ್ಲರೂ ಯುವ
ತಿಯರಾಗುವಕಾಲಂ ಬಹು ಸಮೀಪಮಾಗಲು ರಾಜಪುತ್ರಿಯಂ ರಾಣಿವಾಸದೊ
ಳು ಸೇರಿಸಿ, ಮಂತ್ರಿನಂದನೆಯನಂತರ್ಯೇ ಗ್ಯೆಯಲು, ಸೇನಾಪತಿ, ಸುತೆಯೂ
ವರ್ತಕನ ಪುತ್ರಿಯು ತಮ್ಮ ತಮ್ಮ ತಂದೆಗಳ ಮನೆಗಳಂ ಸಾರಲು, ಈ ಮೂ
ವ್ವರು, ಅಗಾಗ್ಯೆ ತಮ್ಮಗೆಳತಿಯಾದ ರಾಜಪುತ್ರಿಯ ಅಂತಃಪುರಕ್ಕೆ ಹೋಗಿ
ವಿನೋದಮಾಗಿ ಮಾತುಗಳಾಡುತ್ತಿದ್ದರ್ ಅನಂತರ ತಮ್ಮ ತಮ್ಮ ಮನೆಗಳಂ
ಸಾರುತ್ತಿದ್ದರು. ಅನಂತರ ಆ ಮಹಾಭೋಜದರಣೀಂದ್ರಂ ಆ ವಿದ್ಯಾಬೋಧಕನಂ
ಕರೆಯಿಸಿ, ಅತನಿಗೆ, ಧನಕನಕ ಮಣಿವಸ್ತ್ರಾಭರಣಂಗಳಂ ಕೊಟ್ಟು ಬಹುಮಾ
ನಿಸಿ ಕಳುಹಿ ತನ್ನ ಕುಮಾರಿಯು ವಿವಾಹಕ್ಕೆ ಅನುಕೂಲವಾದ ವಯಸ್ಸುಳ್ಳವ
ಳಾದಳು ತಕ್ಕ ವರನಂ ಹುಡುಕಿಸಬೇಕೆಂದು ಯೋಚಿಸುತ್ತಿರ್ದಂ. ಅನಂತರ
ಈ ಮಂತ್ರಿನಂದನಂ, ರಾಜಪುತ್ರಿಯಂ ಮದುವೆ ಮಾಡಿಕೊಳ್ಳಬೇಕೆಂಬ ಕೋರಿಕೆ
ಯುಳ್ಳವನಾಗಿ ಅದಂ ತಾನಾಗಿ ತನ್ನ ತಂದೆಯೊಳು ತಿಳಿಸಲು ನಾಚಿಕೊಂಡು ಇ
ತರರ ಮುಖಾಂತರವಾಗಿ ಹೇಳಿಸಲಾ ಮಂತ್ರಿಯು ತನ್ನ ರಾಯನೊಳು ಮಗ
ನ ಮನೋರಥಮಂ, ಅರಿಕೆ ಮಾಡೆ ಆ ರಾಯಂ ಮಂತ್ರಿಯನ್ನು ಕುರಿತು,
ಎಲೈ ಮಂತ್ರಿಶೇಖರನೇ ! ನಾವಿರ್ವರೂ ಈ ಸಮ್ಬಂಧಮಂ ಮಾಡುವದನುಚಿತವು,
ನಿನ್ನೆ ಕುಮಾರನಿಗೆ ಸರ್ವಾಂಗ ಸುಂದರಿಯಾದ ಕನ್ಯಾಮಣಿಯಂ ತಂದು ಮದು
ವೆಯಂ ಮಾಡೋಣವೆಂದು ಸಮಾಧಾನವಂ ಹೇಳಿಕಳುಹಿಸಲಾವಾರ್ತೆಯಂ,
ಈ ಮಂತ್ರಿನಂದನಂ ಅಲಿಸುತ ಖಿನ್ನಮಾನಸನಾಗಿ ಮಂತ್ರಿಪುತ್ರಿಯೇ ಮೊದ
ಲಾದ ಮೂವ್ವರಂ ಅಂತರಂಗಮಾಗಿ ಕರೆಯಿಸಿಕೊಂಡು, ರಾಜಪುತ್ರಿಯ ಸಮಾ
ಚಾರಮಂ ತಿಳುಹಿ ನಿಮ್ಮ ಸಮಾಚಾರಮೇನೆಂದು ಕೇಳಲಾ ಮೂವ್ವರೂ, ಎ
ಲೈ ಸಖನೇ ನಿನ್ನಂ ಮದುವೆಯಾಗೆಂದು ರಾಜಪುತ್ರಿಯಂ ನಾವು ಬಲವಂತ

ಮುಂ ಮಾಡಲಾರೆವು, ನಮ್ಮ ತಂದೆಗಳಿಗೂ ನಿನಗೆ ಕೊಡ್ಬುಲಗ್ನಮುಂ ಮಾಡೆಂ
ದು ಹೇಳಲಶಕ್ಯರಾಗಿರುತ್ತೇವೆ, ನಿನ್ನೊಂದಿಗೆ ಮಾಡಿದ ಪ್ರತಿಜ್ಞೆಯನ್ನು ಮಾತ್ರ
ಹೇಗಾದರೂ ನಡೆಯಿಸಿಕೊಡುವೆವು. ಎಂದೊರೆಯಲು ಕೇಳಿ ಭಗ್ನಮಾನಸನಾಗಿ
ಶೋಕಾಂಬುಧಿಯೊಳು ಮುಳುಗಿ ದಿವಾರಾತ್ರಿಯಲ್ಲಿಯೂ ಇದನ್ನೇ ಚಿಂತಿಸುತ್ತಾ
ನಿದ್ರಾಹಾರಂಗಳಂ ತೊರೆದು ವಿಕಾಂತ ಗೃಹದೊಳು ಮುಲಗಿ ಹೊರಗೆ ಸಂಚರಿ
ಸುವದನ್ನೇ ಬಿಟ್ಟು ಹಂಬಲಿಸುತ್ತಿರ್ದಂ

ಇತ್ತಲಾ ನಾಲ್ವರೂ ಋತುಮತಿಯರಾಗಿ ಬಾಲ್ಯ ವಿಮುಕ್ತಸ್ನಾನವಂ
ಮಾಡಿವದರಾದರು. ಎಂದಿನಂತೊಂದುದಿನ ವಿಶಾಮೂವ್ವರೂ ಸೇರಿ ರಾಜಾತ್ಮ
ಜೆಯ ಅಂತಃಪುರವಂ ಸೇರಿ ಸರಸ ಸಲ್ಲಾಪಂಗಳಂ ಮಾಡುತ್ತಿರ್ದ ಮಂತ್ರಿನಂ
ದನನಿಗೆ ತಾವೆಲ್ಲರೂ ಕೊಬ್ಬು ವಾಗ್ದಾನಮಂ ನೆನೆದು ಅದಂ ಕುರಿತು ಯೋಚಿ
ಸುತ್ತಾ, ನಾವು ನಾಲ್ವರೂ ಅತನಂ ಮದುವೆಮಾಡಿಕೊಳ್ಳುವದು ಬಹುದುಷ್ಕರ
ವಾಗಿಹುದು. ಅದು ಸಿದ್ಧಿಪ್ರದಂ ಕಾಣಲಾರೆವು ವಾಗ್ದಾನಭಂತಿ ನಡೆಯುವರಾ
ದರೆ ಅನಂತರ ಇತರರಂ ಮದುವೆ ಮಾಡಿಕೊಂಡಲ್ಲಿ ವ್ಯಭಿಚಾರಿಣಿಯರಾಗುತ್ತೇ
ವೆ. ಕೊಬ್ಬು ಭಾಷೆಯಂ ತಪ್ಪಿದರೆ ಮಹಾನರಕ ಭಾಗಿನಿಯರಾಗುವೆವು. ಈ
ಭಾಗದೊಳು ಮುಂತೋರದಲ್ಲಾ ಎಂದು ಚಿಂತಿಸುತ್ತಿರುವಾಗ್ಗೆ ರಾಜಪುತ್ರಿಯು
ಈ ಮೂವ್ವರು ಗೆಳತಿಯರಂ ಕುರಿತು, ಎಲೌ ಸಖಿಯರೇ ! ನಾವು ಬಾಲ್ಯದೊ
ಳು ವಿವೇಕಶೂನ್ಯರಾಗಿ ಮಂತ್ರಿ ಪುತ್ರನಿಗೆ ವಿರುದ್ಧವಾದ ವಾಗ್ದಾನಮಂ ಮಾಡಿ
ದೆವು ಈಗಲಾದರೋ, ನಮ್ಮ ತಾತಂದಿರು ನಮಗೆ ಮದುವೆಯಂಮಾಡಲು
ಯತ್ನಿಸುತ್ತಿರುವರು. ಈ ಕಾರ್ಯಂ ಕೈಗೂಡಿದರೆ ನಮ್ಮ ವಾಗ್ದಾನವಂ ನಡೆಯಿ
ವದಕ್ಕಾಗಲಾರದು, ಇವರಿಂದ ನಮ್ಮ ಶಪಥವು ಕೈಸಾರದೆ ಭಂಗಬರುವದು.
ಇದಕ್ಕೆ ನಾವೀಗ ಪ್ರಯತ್ನಿಸಿದರೆ ಮುಂದೆ ಇದೇ ಅಭ್ಯಾಸವಾಗಿ ನಮ್ಮಸ್ಥಿತಿಯು
ಕೆಡುವದಾದ್ದರಿಂದ ಈಗಲೇ ನಮ್ಮ ಮಾತಂನಾವು ಊರ್ಜಿತ ಪಡಿಸಿಕೊಳ್ಳೋ
ಣವೆಂದು ಪೇಳಲಾ ರಾಜನಂದನೆಯುಮಾತಂ ಎಲ್ಲರೂ, ಒಪ್ಪಿಕೊಂಡವರಾಗಲು
ರಾಜಾತ್ಮಜೆಯು ನಾಳೆ ದಿನವೇ ರಾತ್ರಿಯೊಳು ಸಂಕೇತಸ್ಥಾನಂಗಳಂ ನಿರ್ಣಯಿಸಿ
ಕೊಂಡೀ ಸುದ್ದಿಯಂ ಮಂತ್ರಿಪುತ್ರನಿಗೆ ಹೇಳಿಕಳುಹಿಸೋಣವೆಂದು ಗೊತ್ತು
ಮಾಡಿಕೊಂಡು ಅಲ್ಲಿಂದ ತಮ್ಮ ತಮ್ಮ ಮನೆಗಳಿಗೆ ಬಂದು ಆ ರಾತ್ರೆ ಮಂತ್ರಿಯ
ಮಗಳು ವಿದ್ಯಾಶಾಲೆಯೊಳು ಸಂಕೇತಸ್ಥಾನಮಂ ಗೊತ್ತು ಮಾಡಿದಳು. ರಾಜ
ಪುತ್ರಿಯು ತನ್ನಂತಃಪುರಕ್ಕೆ ಸಮೀಪದಲ್ಲಿರುವ ದೇವಾಲಯದೊಳು ಸಂಕೇತ
ಸ್ಥಾನಮಂ ಕಲ್ಪಿಸಿಕೊಂಡಳು. ಸೇನಾಪತಿಯ ಮಗಳು ತನ್ನ ಮನೆಗೆ ಸಮೀಪ
ವಾಗಿರುವ ಊರುಬಾಗಿಲು ಬಳಿಯುಣ ಮಂಟಪದೊಳು ಸಂಕೇತಸ್ಥಾನವಾಗಿ
ಗೊತ್ತು ಮಾಡಿಕೊಂಡಳು. ಹೀಗೆ ನಾಲ್ವರೂ ತಾವಾಂಗಳಂ ಸಹ ನಿಶ್ಚಯಿಸಿ

ಕೊಂಡು ಆಪ್ತರಾದ ದಾದಿಯರೊಂದಿಗೆ ಮಂತ್ರಿಪುತ್ರನಿಗೆ ಹೇಳಿ ಕಳುಹಿಸಲಂತೆಯೇ ಆಗಲೆಂದು ಹೇಳಿಕಳುಹಿ ಪರಮ ಸಂಭ್ರಮದೊಳು ಸೂರ್ಯಾಸ್ತಮಾನಮಂ ನಿರೀಕ್ಷಿಸುತ್ತಿರ್ದಂ. ಆ ಕಾಲಕ್ಕೆ ಸರಿಯಾಗಿ ಚಂದ್ರಪತ್ತನ ತಂದೆಯು, ರಾಜಕಾರ್ಯದ ಅತ್ಯವಸರದಿಂದ ಮಗನಾವಿವನಂ, ಆಕಾರ್ಯನಿರ್ವಾಹಕ್ಕಾಗಿ ಕಳುಹಿಸಲು ಹೊರದು ಹೋದವಂ ಈ ಕಾಂತೆಯರ ಕಾಲಕ್ಕೆ ಸರಿಯಾಗಿ ಒದಗಲು ಅನು ಕೂಲಿಸದೆ ವ್ಯತ್ಯಾಸವಾಗಿ ಬಂದಂ.

ಆ ಕಾಲಕ್ಕನುಸಾರವಾಗಿ ಆ ಪಟ್ಟಣದೊಳು ವಿದ್ಯಾಶಾಲೆಯಲ್ಲಿ ವಿದ್ಯಾರ್ಥಿಯಾಗಿರುವ ಉಗ್ರಸೇನ ಮಹಾರಾಯನ ಪುತ್ರನಾದ ಪುಷ್ಕರಾಖ್ಯಂ ಆಪಟ್ಟಣದೊಳು . ಭಿಕ್ಷಾನ್ನವಂತಂದು ಭೋಜನವಂ ಮಾಡಿ, ತನ್ನ ಮನಬಂದ ಕಡೆಯಲ್ಲಿ ಮಲಗುತ್ತಾ ಯಿದ್ದವನು ಆ ದಿನದೊಳೂ ಅಂತೆಯೇ ಭೋಜನವಂ ಮಾಡಿ, ಮಲಗಲು, ರಾಜಪುತ್ರಿಯ ಸಂಕೇತಸ್ಥಾನವಾಗಿದ್ದಾ ದೇವಾಲಯಕ್ಕೆ ಬಂದು ಮಲಗಿ ನಿದ್ರಿಸುತ್ತಲಿರ್ದ ರಾಜಪುತ್ರಿಯು ರಾತ್ರಿಯ ಪ್ರಥಮಯಾಮದೊಳು ದಿವ್ಯಾಲಂಕಾರ ಶೋಭಿತ ಗಾತ್ರಳಾಗಿ ಮಂತ್ರಿನಂದನಂ ಕಾವಿರುವನೆಂದು ರಹಸ್ಯಮಾರ್ಗದೊಳ್ಪೊದಿ, ದೇವಾಲಯಮಂ ಪ್ರವೇಸಿಶಿ, ಮಲಗಿರುವವನೇ ಮಂತ್ರಿನಂದನನೆಂದು ಭ್ರಾಂತಳಾಗಿ ಎಬ್ಬಿಸಿ, ಆತನಂ ಕೂಡಿ ಕಾಮಕೇಳೀಸೌಖ್ಯಮಂ ಹೊಂದಿದ ನಂತರಮಿವಂ ಮಂತ್ರಿಪುತ್ರನಲ್ಲವೆಂದರಿತು, ಹಾ ದೈವವೇ ! ನಾನೊಂದಂ ಚಿಂತಿಸಿದರೆ ಅದಕ್ಕೆ ಪ್ರತಿಯಾಗಿ ನೀಂ ಚಿಂತಿಸುವೆ (ಅನ್ಯಥಾಚಿಂತಿತಂ ಕಾರ್ಯಂ ದೈವಮನ್ಯೇತ್ರಚಿಂತಯೇತ್) ಎಂಬ ನ್ಯಾಯಾನುಸಾರಮಾದುದಲ್ಲಾ, ಒಳ್ಳೆಯದು ಎಂದು ಆತನ ಬಳಿಯೊಳಿರ್ದ ಪುಸ್ತಕದೊಳು ತನ್ನ ಕಣ್ಣಾಡಿಗೆಯಿಂ (ಅವಶ್ಯಮನುಭೋಕ್ತವ್ಯಂ) ಎಂಬೊಂದುಪಾದ ಶ್ಲೋಕಮುಂ ಬರೆದು, ಆ ಪುಸ್ತಕವನಲ್ಲಿಯೇ ಇಟ್ಟು ತನ್ನಂತಃಪುರಮಂ ಸಾರಿದಳು. ಆನಂತರಮಾ ಮಂತ್ರಿನಂದನಂ ಕೊತ್ತಾದುದಲ್ಲಾ ಎಂದು ಕಳವಳಗೊಳ್ಳುತ್ತಾ, ಈ ದೇವಾಲಯುಕ್ಕೆ ಬಂದು ಮಲಗಿದ್ದಾ ರಾಜಕುಮಾರನಾದ ವಿದ್ಯಾರ್ಥಿಯಂ ನೋಡಿ, ನೀನಾರಲಾ ಎಂದು ಎಬ್ಬಿಸಲಾ ವಿದ್ಯಾರ್ಥಿಯಾಪವಂ ಎಚ್ಚೆತ್ತು, ಇವಂ ಮಂತ್ರಿನಂದನನೆಂದರಿತು, ಸ್ವಾಮಿಯೆ ? ನಾನೀಪ್ರದೇಶದೊಳು ಭಿಕ್ಷಾನ್ನಮುಂತಂದು ತಿನ್ನುತ್ತಾ ವಿದ್ಯಾಕಾಲಕ್ಷೇಪಮಂ ಮಾಡುತ್ತಿರುವ ಬ್ರಾಹ್ಮಣ ವದುವೆಂದೊರೆಯಲು, ನೀನಿಲ್ಲಿ ಮಲಗಲಾಗದು, ಮತ್ತೆಲ್ಲಿಗಾದರೂ ಹೋಗೆಂದಾಜ್ಞಾಪಿಸಿ ಕಳುಹಲಾತಂ ಅಲ್ಲಿಂ ಬಂದು, ಧನುರ್ವಿದ್ಯಾಶಾಲೆಯೊಳಿಂದೆಡೆ ಮಲಗಿಕೊಳ್ಳುತ್ತಿರುವ ಕಾಲಕ್ಕೆ ಆ ಮಂತ್ರಿನಂದನೆಯೈತಂದು ಹೊತ್ತಾದುದೆಂಬ ಗಾಬರಿಯಿಂದವನೇ ತನ್ನ ಸಂಕೇತ ಪ್ರಿಯನೆಂದು ಭ್ರಾಂತಳಾಗಿ ಆತನಂ ಕೂಡಿ ಮದನರಾಜನ ಮಾನಭಂಗಮಂ ಸಲುವಿದ ನಂತರ, ಮದನಜೇಷ್ಟೆಗಳಿಂ ತನ್ನ ಗೆಳೆಯನಲ್ಲವೆಂದರಿತು

ಹಾ ! ವೋಸವಮಾಡುವೇ ! ಅಯ್ಯೋ ದೈವಸಂಕಲ್ಪವಿಂತಿದ್ದುದೇ ? ಒಳ್ಳಿತೆಂದು ದೃಢಚಿತ್ತಳಾಗಿ ಅವನೊಳಗಿದ್ದ ಪುಸ್ತಕವಂ ಕೈಗೊಂಡು, ನೇತ್ರಾಂಜನವೇ ಶಾಯಿಯಾಗೆ ಕೈಬೆರಳಿನುಗುರೇ ಜೇಖಸವಾಗೆ [ಕೃತಂಕರ್ಮಶುಭಾಶುಭಂ] ಎಂಬ ಎರಡನೆ ಪಾದವಂ ಬರೆದು, ಅಲ್ಲಿಂದ ಹೊರಟು ನಮ್ಮ ವಾಗ್ದಾನವೇನೋ ನೆರವೇರಿತು, ಅವನು ಬಾರದಿರೆ ಅದೃಷ್ಟಹೀನನೆಂದು ತಿಳಿಯಬೇಕೆಂದಾಲೋ ಚಿಸುತ್ತಾ ಮನೆಯಂ ಸೇರಿಕೊಂಡಳು, ಈ ಮಂತ್ರಿಕುಮಾರನಾದ ಚಂದ್ರದತ್ತನು, ಹಾ ! ರಾಜಪುತ್ರಿಯು ವೋಸವಮಾಡಿದಳಲ್ಲಾ ? ವೃಥಾ ನನಗಿಂತು ಕಷ್ಟಮಂ ಉಂಟುಮಾಡಿದಳೇ ? ಎಂದು ಕಳವಳಿಗೊಳ್ಳುತ್ತಾ, ಅಲ್ಲಿಂದ ಹೊರಟು ಮಂತ್ರಿಪುತ್ರಿ ಸಂಕೇತ ಸ್ಥಳಕ್ಕಾದರೂ ಹೋಗಿ ನೋಡೋಣವೆಂದು ಬರಲು ಅಲ್ಲಿಯೂ ಯಾರೋ ಮಲಗಿರುವಂತೆ ಕಾಣಿಸೆ ಬಂದು ಮಂತ್ರಿಕುವರಿ ಇರಬಹುದೆಂದು ತಟ್ಟಿ ಎಬ್ಬಿಸಲು ಪುರುಷನಾಗಿರೆ, ಎಲಾ ನೀನಾರೆಂದು ಪ್ರಶ್ನೆಮಾಡಲು, ಅಯ್ಯಾ ನಾನೀ ಪಾಠಶಾಲೆಯ ಒಲೆಕಾರನು ಎಂದಿನಂತೆ ಕಾವಲು ಕಾಯುವದಕ್ಕೆ ಮಲಗಿಹೆನೆಂದು ನಸುನಗುತ್ತಾ ಉತ್ತರಮಂ ಕೊಡಲು, ನೀನಿಲ್ಲಿರಬೇಡ ಎಲ್ಲಿಗಾದರೂ ಹೋಗಿ ಮಲಗಿಕೋ, ಈಗ ಇಲ್ಲಿ ಕಳ್ಳರಂ ಹುಡುಕಲು ತಕ್ಕ ಪ್ರಯತ್ನಗಾರನು ಸೇರುವರೆಂದೊರೆದು ಕಳುಹಿಸೆಲು, ಇದೇನೋ ತಂತ್ರವೆಂದರಿದು ಅಲ್ಲಿಂದ ಹೊರಟು ಮತ್ತೆಲ್ಲಿಯೂ ಸ್ಥಳಮಂ ಕಾಣದೆ ಊರುಬಾಗಲು ಬಳಿಯಣ ಮಂಟಪಕ್ಕೈದಿ, ಅಲ್ಲಿ ನಿದ್ರಿಸುತ್ತಿರ್ದಂ ಈ ಮಂತ್ರಿಪುತ್ರಂ ಚಂದ್ರಮತಿ ಹೇಳಿ ಕಳುಹಿಸಿದ ಎರಡನೆ ಯಾಮಕಾಲಂ ಪೂರ್ತಿಯಾಗುವವರೆಗೂ ಕಾದು ಕಾದು ಸಾಕಾಗಿ ಬೇಜಾರುಗೊಂಡು, ಛೀ ! ಈ ನೀಚಳೂ ವೋಸಗಾರಳೇ ಹೌದೆಂದು ಕೋಪಾಕ್ರಾಂತನಾಗಿ ಅಲ್ಲಿಂದ ಹೊರಟು, ಸೇನಾಪತಿಯ ಮಗಳೇನಾದರೂ ಬಂದಿರುವಳೋ ಏನೋ ಅದನ್ನು ಪರಿಕಿಸಿ ನೋಡೋಣವೆಂದು ಆ ಸಂಕೇತ ಮಂಟಪಕ್ಕೈದುವ ಕಾಲಕ್ಕೆ ಮೊದಲೇ ಸೇನಾಪತಿ ಪುತ್ರಿಯಾದ ವೋಹನಾಂಗಿಯು, ಸರ್ವಾಲಂಕಾರ ಭೂಷಿತ ಗಾತ್ರಳಾಗಿ, ಮಂತ್ರಿನಂದನಂ ಬಂದು ಕಾದಿರುವನೋ ಏನೋ ಎಂಬ ಆತುರದಿಂದ ತನ್ನ ಸದನಕ್ಕೆ ಸಮೀಪ ಮಾದೇಕಾಂತ ಮಂಟಪಕ್ಕೈದಿ, ಅಲ್ಲಿ ಮಲಗಿ ವಿಶ್ರಾಸಮಂ ಅನುಭವಿಸಿ ಅನಂತರ ಮಾತನಲ್ಲವೆಂದು ತಿಳಿದು ಪಶ್ಚಾತ್ತಾಪ ಸಂಪನ್ನಳಾಗಿ ಜನ್ಮಾಂತರ ಕರ್ಮಫಲವನ್ನು ವಿಸ್ತಾರಲಸಾಧ್ಯಮೆಂದರಿತು ಚಿಂತಿಸದೆ, ರಾಜಾತ್ಮಜೆ ಮಂತ್ರಿತನೂಜಯಂತೆಂಬೀ ಅವನ ಪುಸ್ತಕದೊಳು, [ಕ್ಷಯಂನಯಾತಿತತ್ಕರ್ಮ] ಎಂಬ ಮೂರನೆ ಪಾದವಂ ಬರೆದು ತನ್ನ ಮನೆಯಂ ಸಾರಿ, ಯಾರು ಮರಿಯದಂತೆ ತನ್ನ ಶಯನಗೃಹಮಂ ಸೇರಿ ಮಲಗಿಕೊಂಡಿದ್ದಳು.

ಕೋಪಾಕ್ರಾಂತನಾಗಿ ಅತ್ಯಾತುರದೊಳಾ ಮಂತ್ರಿಸುತನು ಮಂಟಪದೊ

ಳು ಮಲಗಿ ನಿದ್ರಿಸುವವನಂ ಕಾಣುತ್ತಲೇ ಕೋಪವು ಇಮ್ಮಡಿಯಾಗೆ ಹಲ್ಲುಗಳಂ ಕಡಿಯುತಾ, ಎಲ್ಲೆಲ್ಲಿ ಬಂದರೂ ಕಾರ್ಯಹಾನಿಗಾಗಿ ಒರೊವ್ವರು ಮಲಗಿ ಹರಲ್ಲಾ, ಎಂದು ಮಲಗಿರುವವನ ಬಳಿಗ್ಹೋದಿ ಎಲಾ ಮೂಖರ್ಾಧಮನೇ ! ನೀನಾರು ? ಎಂದು ಕಾಲುಗಳಿಂತಾಡಿಸಿ ಕೈಲಿರುವ ಚುಬುಕಿಯಿಂದ ಹೊಡೆಯಲು, ನಿದ್ರಾಭಂಗವಾಗಿ ಎಚ್ಚತ್ತು ರಾಜಕುಮಾರಂ ಪೆದ್ದುಗಳಂ ಚಿಂತಿಸದೆ, ಇವನ ಕಾರ್ಯಕ್ಕೆ ನಸನಗುತಾ, ಸ್ವಾವಿಾ ! ನಾನೀ ಊರಿನ ಕೊತ್ತವಾಲನು, ಎಂದು ನಿಂತುಕೊಳ್ಳಲು, ಛೀ ಛೀ ಮೂಷನೇ ! ಮಲಗಿ ನಿದ್ದೆಹೋಗುವದೇ ನಿನ್ನ ಕೆಲಸವು, ಈವರಿಗೂ ರಾಜ್ಯಕಾರ್ಯವಂ ಇಂತೆಯೇ ಮಾಡುವಿಯೋ ಒಳ್ಳೆಯದು ಉದಯವಾಗಲಿ, ನಿನ್ನ ಗತಿ ಏನಾಗುವದೋ ಕಾಣುವೆ, ನನ್ನೆದುರಿಗೆ ನಿಲ್ಲಬೇಡ, ರಾಜದ್ರೋಹಿಯೇ ಹೊರಗೆ ಹೋಗೆಂದು ಧಿಕ್ಕರಿಸಿ ಕಳುಹಲು, ಈ ಪಾಪಿಯು ನಾನೆಲ್ಲಿಗೆ ಹೋದರೂ ಅಲ್ಲಿಗೆಲ್ಲಾ ಬಂದು ನಿದ್ರಾಭಂಗಮಾಡುವನಲ್ಲಾ ಎಂದು ಯೋಚಿಸುತಾ, ಇವನಿಗರಿಯದಂತೆ ಎಲ್ಲಿಯಾದರೂ ದೂರವಾಗಿ ಮಲಗುವೆನೆಂದು ಯೋಚಿಸುತಾ ಹೊರಟು, ನಟೀಸೋಪಾನ ಮಧ್ಯ ಮಂಟಪಕ್ಕೈದಿ, ಅಲ್ಲಿ ಮಲಗಿಕೊಂಡು ನಿದ್ರಿಸುತ್ತಿದ್ದನು. ಆಗ್ಯೆ ನಾಲ್ಕನೆಯಾಮವು ತಲೆದೋರ್ದುದು. ಆ ಕಾಲಕ್ಕೆ ಸರಿಯಾಗಿ ಸಾಹುಕಾರನ ಮಗಳಾದ ಸುಂದರಾಂಗಿಯು ಬಂದು, ಈ ಮಲಗಿರುವವನನ್ನು ಎಬ್ಬಿಸಿ, ಮಂತ್ರಿಕುಮಾರನೆಂದು ಭ್ರಾಂತಳಾಗಿ, ಅವನೊಡನೆ ಸೇರಿ, ಕಂದರ್ಪನ ದಸಳವನ್ನು ಹಾನಿಗೊಳಿಸಿ ಹೊರಡುವಾಗ್ಗೆ ಮುಂಬಿಳಗುತಾ ಬರಲಾ ಪುರುಷನಂ ನೋಡಿ, ಇವಂ ಮಂತ್ರಿ ಪುತ್ರನಲ್ಲವು ಎಂದರಿತು, ಅಯ್ಯೋ ದುರದೃಷ್ಟವೇ ! ನಾವು ಸತ್ಯಭಾಷಿಗಳಾಗಬೇಕೆಂದು ಕೊಟ್ಟ ಭಾಷೆಯಂ ಸಲ್ಲಿಸುವದಕ್ಕಾಗಿ ಯತ್ನವಾಡಲು ರೋಧವಾಗಿ ಮತ್ತೊಂದಂ ಮಾಳ್ಪುದಲ್ಲಾ, ಎಂದು ಕಳವಳಗೊಳ್ಳುತಾ ಅವನ ಬಳಿಯೊಳಿದ್ದ ಪುಸ್ತಕವಂ ತೆಗದುನೋಡುತಾ ಬರಲು ಮೂರು ಪಾದಗಳಾಗಿ ಬರವಿದ್ದ ಶ್ಲೋಕವಂ ಓದಿಕೊಂಡು, (ಜನ್ಮಕೋಟಿಶತೈರವಿ) ಎಂದು ನಾಲ್ಕನೆ ಪಾದಮಂ ಬರೆದು ಶ್ಲೋಕಮಂ ಪೂರ್ತಿಮಾಡಿ, ಆ ರಾಜಾತ್ಮಜನಂ ಕಂಡು ನೀನೆನ್ನ ಅಂತಃಪುರಕ್ಕೆ ಆಗಾಗ್ಯೆ ಬಂದು, ನನ್ನ ಮನಃಸಂತೋಷಮಂ ಮಾಡುತಾ ಬಂದು ಹೋಗುತ್ತಿರಬೇಕು. ನಾನದಕ್ಕೆ ತಕ್ಕ ಜನರಂ ಅಂತಃಪುರ ದೆಡೆ ಸಿದ್ಧಗೊಳಿಸಿರುತ್ತೇನೆ, ಎಂದು ಹೇಳಿ, ಅಲ್ಲಿಂದ ಹೊರಟು ತನ್ನ ಮನೆಯಂ ಸೇರಿಕೊಂಡಳು.

ಅನಂತರಮಾ ರಾಜಾತ್ಮನಾಗಿರುವ ಬ್ರಾಹ್ಮಣವಟುವು, ಯಥಾ ಪ್ರಕಾರ ಮಾಗಿ ಸ್ನಾನಮಂ ಮಾಡಿ, ಪಾಠಶಾಲೆಗೆ ಬಂದು ವಿದ್ಯಾವ್ಯಾಸಂಗಮಂ ಮಾಡುತ್ತಿದ್ದು ಮಧ್ಯಾಹ್ನವಾಗಲು ಭಿಕ್ಷಾನ್ನಮಂ ತಂದು ಭೋಜನಮಂ ಮಾಡಿ

ತನ್ನ ನಿದ್ಯಾಕಾಲಕ್ಷೇಪದೊಳೇ ಇರ್ದನು.

ಮರುದಿನದೊಳು ಮೂರು ಮಂದಿಯೂ ಸೇರಿ, ರಾಜಪುತ್ರಿಯು ಅಂತಃಪುರಮಂ ಸೇರಿ, ತಾವೆಲ್ಲರೂ ಆ ರಾತ್ರಿಯೊಳು ಮೋಸಹೋದ ಸಂಗತಿಯುಂ ಕುರಿತು ಮಾತಾಡಿಕೊಳ್ಳುತ್ತಿರುತ್ತಾ, ರಾಜಾತ್ಮಜೆಯು ನಾವೆಲ್ಲರೂ ಸೇರಿ, ಧರ್ಮಬದ್ಧರಾಗಿ ಮಾಡಬೇಕೆಂದು ಯತ್ನಿಸಿದ ಕಾರ್ಯವು ಅನ್ಯಥಾ ಜರಿಗಿಹೋದುದು. ದೈವಗತಿಯು ಹೇಗಿರುವದೋ ಅದರಂತೆ ನಡೆಯುತ್ತದೆಯೇ ಹೊರತು ಅದಕ್ಕೆ ವಿಪರೀತವಾಗಿ ನಡೆಯಲಾರದು.

ಅನ್ಯಥಾಚಿಂತಿತಂಕಾರ್ಯಂದೈವಮನ್ಯತ್ರಚಿಂತಯೇತ್। ವಿಷಜೂರ್ಣಪ್ರಯೋಗೇನ ವೇಶ್ಯಾಮಾತಾವಿನಶ್ಯತಿ ॥

ಲೋಕದೊಳು ಮನುಷ್ಯನು ಒಂದಂ ಮಾಡಬೇಕೆಂದು ಯೋಚಿಸಿ ಪ್ರಯತ್ನಮಾಡಲು, ದೇವರು ಅದನ್ನೇ ಬೇರೊಂದು ಬಗೆಯಾಗಿ ಮಾಡುತ್ತಾನೆ. ಹೇಗೆಂದರೆ ವೃದ್ಧಳಾದ ವೇಶ್ಯಾಂಗನೆಯು ಬಹು ದಿನಂಗಳಿಂದ ತನ್ನ ಮಗಳಿಗೆ ಬಂದು ಹೋಗುತ್ತಿದ್ದ ಒಬ್ಬ ವಿಟನಬಳಿಯಣ ಸರ್ವದ್ರವ್ಯವನ್ನು ಅಪಹರಿಸಿಕೊಳ್ಳಬೇಕೆಂದು ಯೋಚಿಸಿ, ಅವನನ್ನು ಕೊಂದಹೊರತು, ಅವನ ಬಳಿಯಿದ್ದ ದ್ರವ್ಯವು ಸ್ವಾಧೀನವಾಗಲಾರದೆಂದು ನಿಶ್ಚೈಸಿ, ಒಂದಾನೊಂದು ದಿನಮಾವಿಟಂ ತನ್ನ ಮಗಳೊಡನೆ ಕೂಡಿ ಕ್ರೀಡಿಸುತ್ತಿರ್ದು, ಅಯಾಸದಿಂ ಮೈಮರೆದು ನಿದ್ರಿಸುತ್ತಿರುವಾಗಲಾ ವೃದ್ಧವೇಶ್ಯೆಯು ಅತನಂ ಉಪಾಯವಾಗಿ ಕೊಲ್ಲಲು ಯತ್ನಿಸಿ, ಕ್ಷಣಮಾತ್ರದೊಳು ಮರಣಂಗೊಳಿಸುವ ವಿಷವುಂ ತಂದು ಜೂರ್ಣಿಸಿ, ಒಂದು ಕೊಳವೆಯೊಳು ಹಾಕಿಆ ಕೊಳವೆಯಂ ಆ ವಿಟಪುರುಷನ ಆಸನದ್ವಾರದೊಳು ಮೆಲ್ಲನೆ ಅತನಿಗೆಚ್ಛರವಾಗದಂತೆ ಸೇರಿಸಿ, ತನ್ನ ಮುಖವುಂ ಆ ಕೊಳವೆಯ ಮೇಲ್ಭಾಗ ದ್ವಾರಕ್ಕೆಇಟ್ಟು, ಶ್ವಾಸವುಂ ಬಂಧಿಸಿ, ಘಟ್ಟಿಯಾಗಿ ಪೂತ್ಕರಿಸಬೇಕೆಂದಿರುವನಿತರೊಳು ದೈವಯೋಗದಿಂದ ಮಲಗಿ ನಿದ್ರಿಸುತಿರ್ದ ವಿಟನಿಗೆ ಅಪಾನವಾಯುವು, ಹೊರಪಡಲು ಆ ಗಾಳಿಯಿಂದ ವಿಷಜೂರ್ಣವು ಊರ್ಧ್ವಮುಖಿಯಾಗಿ ಹತ್ತಿ ಆ ವೃದ್ಧವೇಶ್ಯೆಯ ಜಾಯೊಳು ತುಂಬಿಕೊಳ್ಳಲಾ ನಿಮಿಷದಲ್ಲಿಯೇ, ಆ ವಿಷಜ್ವಾಲೆಯು ಸರ್ವಾಂಗವುಂ ವ್ಯಾಪಿಸಿ ಅವಳಂ ಯಮಲೋಕಕ್ಕೆ ಅತಿಥಿಯುಂ ಮಾಡಿತು. ಎಂಬುವ ಇತಿಹಾಸಕ್ಕೆ ಅನುಸಾರವಾಗಿಯೇ ದೈವತಂತ್ರವು ಇರುವುದು, ಇದುಯಾರಿಗೂ ಗೋಚರವಾಗಲಾರದು. ನಾವು ಯಾರಂ ಸೇರಬೇಕೋ, ದೇವರು ಅವನನ್ನೇ ಹೊಂದಿಸುವನು, ಇದಕ್ಕೆ ನಾವು ಚಿಂತಿಸಿ ಪ್ರಯೋಜನವಿಲ್ಲವು ಎಂದು ಸಮಾಧಾನವುಂ ಪೇಳುತ್ತಾ, ಆ ವೈಶ್ಯಪುತ್ರಿಯಾದ ಗಿರಿನಂದನೆಯುಂ ಕುರಿತು ಎಲ್ಲೆ ಗೆಳತಿಯೇ ನಾನೊಂದು, ಉಪಾಯವುಂ ಹೇಳುವೆನು ಕೇಳು, ನಿನ್ನವ

ನೆಗೆ ಪ್ರತಿದಿನದಲ್ಲಿಯೂ ಆ ಪುರುಷನು ಬರುತ್ತಿರುವನಲ್ಲವೆ, ಇತಃಪರಂ, ಆತನು ಭಿಕ್ಷಾವೃತ್ತಿಯಂ ಮಾಡುವದನ್ನು ಬಿಡಬೇಕು, ಒಂದು ಮನೆಯಂ ಮಾಡಿಕೊಂಡು ಅದರೊಳು ತಕ್ಕ ಪರಿವಾರಮುಂ, ಇಟ್ಟುಕೊಂಡು ಬೇಕಾದ ಪದಾರ್ಥಗಳಂ ತರಿಸಿಕೊಳ್ಳುತ್ತಾ ಭೋಜನಾದಿಗಳಂ ಮಾಡಿ ಸುಖವಾಗಿರುವಂತೆ ಹೇಳಿ ಈ ದ್ರವ್ಯಮುಂ ಕೊಟ್ಟು ಕಳುಹಿಸು, ಮುಂದಿನ ಪರಿಯಂ ಯೋಚಿಸಿ ಹೇಳುವೆನು, ಅವರಿಂಗೆ ಆತನಂ ಎಲ್ಲಿಯೂ ಹೋಗದಂತೆಯೂ ಹಾಗೆ ಹೋಗಬೇಕಾದರೆ ನಿನ್ನೊಳು ತಿಳುಹಿ, ಹೋಗಬೇಕೆಂದು ಹೇಳಿದರು, ಎಂದೊರೆಯಲಾ ಅಂತೆಯೇ ಆಗಲೆಂದು ಹೇಳಿ ಆ ದ್ರವ್ಯಮುಂ ಕೊಂಡುಬಂದು, ರಹಸ್ಯವಾಗಿ ವಿದ್ಯಾರ್ಥಿಯಾಗಿದ್ದ ರಾಜಪುತ್ರನಂ ಕರೆಕಳುಹಿಸಿ, ಆ ದ್ರವ್ಯಮುಂ ಆತಂಗಿತ್ತು, ರಾಜನಂದನೆ, ಹೇಳಿದಂತಾತನೊಳೊರೆದು ಪ್ರತಿದಿನದೊಳು, ತನ್ನ ಬಳಿಗೆ ಬಂದು ಹೋಗುತ್ತಾ ಇರಬೇಕೆಂದು ಹೇಳಿ, ಕಳುಹಿಸಿ, ಆತನು ಬಂದಾಗ, ಅವನೊಂದಿಗೆ ಕೂಡಿ ಸಕಲ ಭೋಗಂಗಳಂ ಹೊಂದುತ್ತಾ ಇದ್ದಳು.

ಇಂತೆಯೇ ಕೆಲವು ದಿನಂಗಳಂ ಕಳೆಯಲು, ಮಹಾಭೋಜರಾಯಂ, ತನ್ನ ಮಗಳಿಗೆ ತಕ್ಕಂಥಾವರನಂ ಹುಡುಕಿ ತರುವಂತೆ, ಆಜ್ಞಾಪಿಸಿ, ತಕ್ಕಪರಿವಾರಮುಂ ಕೊಟ್ಟು, ಕಳುಹಿದಂ.

ಈ ವಾರ್ತೆಯಂ ಕೇಳುತಾ ರಾಜಾತ್ಮಜೆಯು ತನ್ನ ಮೂವ್ವರು ಗೆಳತಿಯರಂ ಕರೆಯಿಸಿ· ಆಲೋಚಿಸಬೇಕೆಂದಿರುವನಿತರೊಳು ಮಂತ್ರಿ, ಸೇನಾಪತಿ, ವೈಶ್ಯರೂ, ತಮ್ಮ ತಮ್ಮ ಮಕ್ಕಳಿಗೆ, ಮದುವೆಯಂ ಮಾಡಬೇಕೆಂದು ಪ್ರಯತ್ನಂಗಳಂ ಮಾಡಿಕೊಂಡಿದ್ದರು, ಅವರ ಕುಮಾರಿಯರರಿತು, ಈ ಭಾಗವುಂ, ತಮ್ಮ ಗೆಳತಿಯರಾದ ರಾಜನಂದನೆಯೊಳಾಲೋಚಿಸಲು ತಾವೇ ಹೊರಟುಬಂದು ಆಕೆಯ ಅಂತಃಪುರವುಂ ಸಾರಲು ನಿಮ್ಮಂ ಕರೆಯಿಸುವೆನೆಂದಿರುವಲ್ಲಿ ನೀವೇ ದೈವಯೋಗದಿಂದ ಬಂದಿರಿ ಎಂದೆಲ್ಲರೂ ರಹಸ್ಯವಾಗಿ ಸೇರಿ ಕುಳಿತುಕೊಂಡು, ಯೋಚಿಸುತ್ತಿರುವಲ್ಲಿ, ಆ ಮೂವ್ವರಂ ಕುರಿತು ರಾಜನಂದನೆಯು ಎಲೌ ತಂಗಿಯರಿರಾ ? ನನಗೊಂದು ತೋರುವದು ಅದಂ ನಿಮ್ಮೊಳು ಪೇಳಲೇ, ಬೇಡವೇಯೆಂದು ಡೋಲಾಯಮಾನಳಾಗಿರುವೆನೆನೆ, ಆ ಮೂವ್ವರೂ, ಅಮ್ಮಾ ಸಖೀ ? ನಿನ್ನ ಮಾತಿನಂತೆ ನಾವು ನಡೆಯದೆ, ಅನ್ಯಥಾ ಯೋಚಿಸುವರೇ ನೀನರಿಯೆಯಾ ? ಇಂದೇತಕೆಂತು ಸಂಶಯುಳ್ಳಾಗಿರುವೆ, ನಮ್ಮಂ ಅಂತಹವರೆಂದು ಎಂದಿಗೂ ತಿಳಿಯಲಾಗದು. ನಿನ್ನಾಜ್ಞೆಯುಂಮೀರಿ ನಾವೆಂದಿಗೂ ಹೋಗಲಾರೆವೆಂದೊರೆಯಲಾಗಲಾ ರಾಜನಂದನೆಯು ಕೇಳಿ ಎಲೌ ಸಖಿಯರೇ ! ನಮ್ಮ ತಂದೆಯು ನನಗೆ ವಿವಾಹಪ್ರಯತ್ನವಂ ಮಾಡಿರುವನೆನೆ ನಮ್ಮಗಳ ತಂದೆಗಳು ಅಂತೆಯೇ ಯೋಚಿಸಿರುವರೆಂದವರೂ ಸೇಳಲು, ಆದರೆ ಚಿನ್ನಾಗಿ ಆಲೋ

ಚಿಸಿ ಸೀಘ್ರವಾಗಿಯೇ ನೆರವೇರಿಸಬೇಕೆಂದರಿತು, ನಾವು ನಮ್ಮ ತಾತಂದಿರಾ ಜ್ಞಾನುಸಾರವಾಗಿ ಮದುವೆಗಳಂ ಮಾಡಿಕೊಂಡರೆ, ವ್ಯಭಿಚಾರಿಣಿಯರಾಗುವೆವು, ಈ ಬ್ರಾಹ್ಮಣಂಗೆ ನಮ್ಮಂಕೊಟ್ಟು ಮದುವೆಯಂ ಮಾಡೆಂದೊರೆದರೆ, ಅವರು ಅಂಗೀಕರಿಸಲಾರರು, ನಮ್ಮ ನಿಜಸ್ಥಿತಿಯಂ ತಿಳುಪಿದರೆ ದೋಷಿಗಳೆಂದು ಏನು ಮಾಡುವರೋ ಎಂದು ಭಯವಾಗುವದು, ಇದಕ್ಕೆ ಏನುಮಾಡಬೇಕೋ ನಮು ಗಾರಿಗೂ ತೋರುವುದಿಲ್ಲವೆಂದು ಎಲ್ಲರೂ ಚಿಂತಿಸುತ್ತಿದ್ದರು. ಆಗ ರಾಜ ನಂದನೆಯು ಕುರಿತಾಮುಖವ್ರರೂ ಅವ್ಯಾ ; ನಮ್ಮೊಳ್ಳು ನೀನೇ ಹದುರೆಯಾ ಗಿರುವಿ ನ್ಯಾಯವಿರುದ್ಧವಿಲ್ಲದಂತೆ ಪಾಪಕ್ಕೆ ಮಾಡುಲೊಪ್ಪದಹಾಗೂ, ದಾರಿ ಯಂ ತೋರಬೇಕು. ಎಲ್ಲರೂ ನಿನ್ನಂತೆಯೇ ನಡೆಯುವವು ಎನ್ನಲು ಹಾಗೆ ಯೇ ಯೋಚಿಸಿದವಳಾಗಿ ಕೇಳಿದ್ದೆ ಒಡನಾಡಿಯರೇ ನಾವಾದರೆ ಆ ಬ್ರಾಹ್ಮಣ ನನ್ನು ಹೊಂದಿ ಸುಖಿಸಿದೆವು ಈಗ ಅನ್ಯಪುರುಷನಂ ಕೈಪಿಡಿದರೆ ವ್ಯಭಿಚಾರಿಣಿಗಳಾ ಗುವೆವು. ಇದೇ ಸಕಲ ಧರ್ಮಶಾಸ್ತ್ರಸಿದ್ಧಾಂತವು. ಈಗ ಹೇಗಾದರೂ, ಆತನ ನ್ನೇ ಸೇರಬೇಕು. ನಮ್ಮ ಹಣೆಯಬರಹ ಅಂತೆಯೇ ಯಿದ್ದದ್ದರಿಂದಲೇ ನಾವೊಂ ದು ಯೋಚಿಸಿರುವಲ್ಲಿ ಅದೊಂದು ವಿಧವಾಗಿ ಪರಿಣಮಿಸಿತು, ನಾವೂ ಧರ್ಮವಂ ಬಿಡದೆ ನಡೆಯುವರಾದ್ದರಿಂದ ಅವನೇ ಪತಿಯೆಂದು ನಿಶ್ಚಯಿಸಬೇಕು. ನಮ್ಮ ಅದೃಷ್ಟವು ಒಳ್ಳಿತಾದರೆ ಅವನೇ ಭೂಮೀಂದ್ರನೇತಕ್ಕಾಗಬಾರದು, ನಾವು ಪ ರಾಧೀನರಾಗಿರುವೆನಲ್ಲ. ಈ ನಮ್ಮ ಕೋರಿಕೆಯು ಹೇಗೆ ಕೈಸಾರುವುದೆನ್ನುವಿ ರೋ ಅದಕ್ಕೆ ತಕ್ಕ ಉಪಾಯವಂ ಯೋಚಿಸಿರುವೆನು. ಕೇಳಿ ನಮ್ಮ ದೊರೆಯು ಇಂದಿಗೆ ನಾಲ್ಕನೆ ದಿವಸದಲ್ಲಿ ನದೀತೀರದೊಳು ವನಭೋಜನಪ್ರಯತ್ನವಂ ಮಾಡಿ ಸಿರುವನು, ಆಕಾಲಕ್ಕೆ ನಾವೆಲ್ಲರೂ ಅಬಳೆಗೆ ಹೋಗಬೇಕಾಗುತ್ತದೆ, ನಾವು ಹೊ ರಡುವಾಗ ನಮಗೆ ಬೇಕಾದ ಭಾರಿಭಾರಿ ಆಭರಣಗಳಂ ತೆಗೆದುಕೊಂಡು ಅ ಮೌಲ್ಯಂಗಳಾದ ಒಡವೆಗಳಂ ದಿವ್ಯಾಂಬರಗಳಂ ಧರಿಸಿಕೊಂಡು, ಅಲಂಕೃತೆಯು ರಾಗಿ ನಮ್ಮ ಪ್ರಾಣಾಪ್ತರಾದ ದಾದಿಯರಂ ಒಡಗೊಂಡು ಹೊರಡೋಣ ಆ ಬ್ರಾ ಹ್ಮಣನಂ ಸ್ತ್ರೀವೇಷಧರನಾಗಿ ಅಕಾಲಕ್ಕೆಬಂದು ನದೀತೀರದಲ್ಲಿರುವಂತೆ ನೀನು ವೊದಲೇ ಕ್ರಮಪಡಿಸಿರು, ಹೋದ ನಾವೆಲ್ಲರೂ ಹರಿಗೋಲಂಹತ್ತಿ ನದಿಯೊಳು ಆಡಬೇಕೆಂದು ಅಭಿಪ್ರಾಯಗೊಂಡರೆ, ಆಗ್ಗೆ ನಾವೆಯಂ ನಡಿಯಿಸುವುದಕ್ಕೆ ಸ್ತ್ರೀ ಯರೇ ಬೇಕಾಗುವುದು. ಅದಕ್ಕಾಗಿ ಹುಡುಕುತ್ತಿರುವಾಗ ವೇಷಧಾರಿಯಾದ ಬ್ರಾ ಹ್ಮಣಂ ನಾನು ಅಂಬಿಗಳು ನನಗಾಕೆಲಸದ ಪಾಂಡಿತ್ಯವಿಹುದೆಂದು ಆಬಳಿ ಬಂದ ದನಾದರೆ ನಾವೆಲ್ಲರೂ ಶೀರಿ ನಾವೆಯನ್ನೇರಿ ದೂರದೇಶಕ್ಕೆ ಹೋಗಿ ಆತನೇ ಪತಿಯೆಂದು ಕೈಹಿಡಿದು ಸುಖದಿಂ ಬಾಳಬಹುದು ಅಲ್ಲದೊಡೆ ನಮ್ಮ ಬಗೆಯಲ್ಲ ವೂ ಕೆಟ್ಟು ಭ್ರಷ್ಟರಾಗುವೆವೆನಲು ಆ ಮುವ್ವರೂ, ರಾಜನಂದನೆಯು ಮಾತಂ ಅನು

ಮೋದಿಸಿ ವೈಶ್ಯನಂದನೆಯು ನಾನು ಅರುಪುವೆನೆಂದು ಒಪ್ಪಿಕೊಂಡು ಎಲ್ಲರೂ ತಮ್ಮ ತಮ್ಮ ಮನೆಗಳಂಕುರಿತು ಬಂದು, ಆ ಕಾಲಮಂ ನಿರೀಕ್ಷಿಸುತಿದ್ದರು.

ಆ ಮಹಾ ಭೋಜರಾಯಂ ವನಭೋಜನವಂ ಮಾಡಿಸಬೇಕೆಂದು ಪ್ರಯತ್ನ ಮುಂ ಮಾಡಿ ಆ ದಿನದುದಯದೊಳು ತನ್ನ ಪರಿಜನರೆಲ್ಲರಂ ಅಂತಃಪುರಾಂಗನೆಯರೆಲ್ಲರಂ ಮಂತ್ರಿ, ಸೇನಾಪತಿ, ವೈಶ್ಯವರ್ಯನೇ ಮೊದಲಾದ ಸ್ನೇಹಿತಮಂಡಲಿಯ ಸ್ತ್ರೀಜನಸಮೇತನಾಗಿ ಹೊರಡುವಂತೆ ಆಜ್ಞಾಪಿಸಲು ಎಲ್ಲರೂ ಪ್ರಯಾಣವಂಗೈಯ್ಯೆ ಈ ನಾಲ್ಕುಮಂದಿ ಕನ್ಯಾಮಣಿಗಳು ತಮ್ಮ ಮನೋರಥಂಗಳು ಕೈಕೂಡುನ್ದೆಂಬ ಸುಧಾಸಾಗರಮಗ್ನರಾಗಿ ಆ ಬ್ರಾಹ್ಮಣವೇಷಧಾರಿಗೆ ರಹಸ್ಯಮಾಗಿ ಈಸಂದರ್ಭಮುಂ ತಿಳುಪಿ ತಮ್ಮ ಒಡವೆತೊಡಗೆಗಳಂಕೊಂಡು ಮನೆಯೊಳಿದ್ದ ಅಮೂಲ್ಯಾಭರಣಂಗಳಿಂದಲಂಕೃತರಾಗಿ ನದೀತೀರದ ವನಭೋಜನಸ್ಥಾನವಂ ಸೇರಿ ಆ ಬಳಿಯೊಳ್ತಾವು ತಮ್ಮ ಪ್ರಿಯಸಖಿಯರೊಂದಿಗೆ ಕೂಡಿರಾಡುತ್ತಾ ಪಾಡುತ್ತ ವಿನೋದಮಾಗಿ ಕಾಲಮುಂ ಕಳೆಯುತ್ತಿದ್ದು ತಮ್ಮ ಕೋರಿಕೆಯುಂ ಕೈಸೇರಿಸಿಕೊಳ್ಳಲೋಸುಗ ಚಾರರಂ ಕರೆದು ಸ್ತ್ರೀಯರೇಸೇರಿ ಹರಿಗೋಲೊಳು ಕುಳಿತು ನದಿಯೊಳು ವಿನೋದಮಾಗಿ ಸಂಚರಿಸಬೇಕೆಂದು ಯೋಚಿಸಿದ್ದೇವೆ ನಾವೆಯನ್ನೆಡಸುವರು ಸ್ತ್ರೀಯರಾಗಬೇಕೇಹೊರತು ಪುರುಷರಾಗಬಾರದು. ಅಂತವರಂ ಹುಡುಕಿ ತರಬೇಕೆಂದು ಆಜ್ಞಾಪಿಸಲು ಆ ಚಾರರು ಅಂತೆಯೇ ಹುಡಕುತ್ತಾ ಬರಲು ರಾಜಕುವರನಾಗಿದ್ದ ಬ್ರಾಹ್ಮಣವೇಷಿಯು ದೀಕ್ಷೆಯುಂ ಧರಿಸಿ ತಲೆಕೂದಲಂ ಬೆಳೆಯಿಸಿದ್ದಕಾರಣ ತಲೆಯಂಬಾಚಿ ಹೆರಳ್ವಾಕಿಕೊಂಡು ನದೀತೀರದೊಳು ಸಂಚರಿಸುತಿದ್ದು ಈ ವಾರ್ತೆಯಂಕೇಳುತ್ತ ತನ್ನನ್ನು ಮದುವೆಮಾಡಿಕೊಳ್ಳುವುದೇ ನಿಜವೆಂದು ಅದಕ್ಕನುಸಾರಮಾಗಿ ಹೇಳಿ ಕಳುಹಿಸಿದ್ದವಾತುತಳೆಲ್ಲಾ ನಿಶ್ಚಯಮಾದುದೆಂದು ನಂಬಿ ಸಂತೋಷದಿಂದುಕ್ಕುತ್ತಾ ಆ ರಾಜಭಟರೆಡೆಗೈದಿ ಎಲ್ಲೆ ರಾಜಸೇವಕರಿರಾ ! ನಾನೆಂಬಿಗಳು, ಮಹಾ ಪ್ರವಾಹದೊಳಾದರೂ ಹರಿಗೋಲನ್ನು ಬೇಕಾದ ಕಡೆಗೆ ಬಾಗುರಿಯುಂತೆ ತಿರುಗಿಸುವಂತೆ ನಡಿಸಬಲ್ಲೆನೆನಲು, ಆ ರಾಜಭಟರು ಸಂತೋಷಿಸುತ್ತಾ ಈ ಸ್ತ್ರೀವೇಷಿಯುಂ ಕರತಂದು ರಾಜಪುತ್ರಿಯ ಮುಂಗಡೆಯೊಳು ನಿಲ್ಲಿಸಿ, ಅಮ್ಮಣ್ಣಿಯವರೇ ಈ ಹೆಂಗಸು ಹರಿಗೋಲಂ ನಡೆಯಿಸುವವರಲ್ಲಿ ಬಹು ಚದುರೆಯು ಎಂದೊರೆಯಲು, ಆ ವೇಷಧಾರಿಣಿಯಂ ನೋಡಿ, ಇವನೇ ತಮ್ಮ ಕಾಂತನೆಂದು ಮನದೊಳು ನಿಶ್ಚೈಸಿ ನಸುನಗುತ, ಎಲೌ ಅಂಬಿಗಳೇ ನಿನಗೆ ಪೂರ್ಣಪ್ರವಾಹದೊಳು ಹರಿಗೋಲಂ ನಡೆಯಿಸುವ ಶಕ್ತಿ ಇರುವದೇ? ನಾವೆಲ್ಲರೂ ಅಬಲೆಯರು, ಈ ನದಿಯಾದರೋ ಪೂರ್ಣ ಪ್ರವಾಹಮಾಗಿ ಹರಿಯುತ್ತಲಿರುವದು, ನಮ್ಮಂ ನದೀಪಾಲುಮಾಡದೆ, ನಮ್ಮಿಷ್ಟಾರ್ಥಂಗಳಂ ಸಲ್ಲಿಸುವಿಯಾ ? ಎಂದು ಪೇಳಲು, ಸ್ತ್ರೀವೇಷಧಾರಿಣಿಯು ನಸುನಗುತ, ಹಾಗೆಂದು ಯೋಚಿಸದಿರಿರಿ. ನಾಂ ನನ್ನ ಕೆಲಸ

ದೊಳು ಸಮರ್ಥಳಾಗಿಹೆನು ಈ ನಾವೆಯಂ ಏರಿನೋಡಿ, ನನ್ನ ಚಮತ್ಕಾರಮಂ ತೋರುವೆನೆನಲು ರಾಜಪುತ್ರಿಯೇ ಮೊದಲಾದ ನಾಲ್ವರೂ ಸರಮಹರುಷ ತುಂದಿಲಸ್ವಾಂತರಾಗಿ ತಮ್ಮ ಮುಖ್ಯಗೆಳತಿಯರಾದ ನಾಲ್ಕು ಜನರಂ ಒಡಗೊಂಡು ಆ ಹರಿಗೋಲಂ ಈ ಎಂದುಜನಮಾತ್ರ ಹತ್ತಿ ಕುಳಿತುಕೊಳ್ಳಲು ಸ್ತ್ರೀವೇಷಧಾರಿಣಿಯಾದಾರಾಜಾತ್ಮಜಂ ಹರಿಗೋಲಿನ ಮುಂಗಡೆಯೊಳು ನಿಂತು, ಬಿಡುರು ಜಲ್ಲಿಯಂ ಕೈಯ್ಯೊಳಾಂತು ಗಿವಡ ಬುಷಕ್ಕೂ ಆ ಕರಿಗೋಲಿಗೂ ಕಟ್ಟಿದ್ದ ಹಗ್ಗಮಂ ಬಿಚ್ಚಿ, ಹರಿಗೋಲಂ ಪ್ರವಾಹದೊಳು ಬಹು ಚಮತ್ಕಾರವಾಗಿ ನಡೆಯಿಸುತಾ ಪ್ರವಾಹದ ಸುಳಿಗಳಿಗೆ ಹರಿಗೋಲಂ ಸಿಲುಕಿಸದೆ ಮಧ್ಯಪ್ರವಾಹದೊಳು ಕೊಂಡೊಯ್ಯುತ್ತಿರುವ ಚಮತ್ಕೃತಿಯಂ ನೋಡಿ, ಈತಂ ಬ್ರಾಹ್ಮಣನುಸೋರೆ ಅಲ್ಲವು ಬ್ರಾಹ್ಮಣಂಗೆ ಇನಿತು ಹಸ್ತಲಾಘವ ಎಂದಿಗೂ ಬರಲಾರದು. ಈತಂ ರಾಜಕುಮಾರನೇ ಅಹುದು, ಇತರನಲ್ಲ ಎಂದರಿತು ಸಂತೋಷದಿಂ ಸುಖಿಸುತ್ತಾ, ಸಖೀಜನರೊಳು ಹೇಳಿ ಅವರೊಂಗಿಗೆ ಆನಂದಮಂ ತಾಳುತ್ತಾ ಇದ್ದು, ಕಣ್ಣುಸ್ಪೈಗೆಯಂ ಮಾಡಲುಪಕ್ರಮಿಸಿದಾ ರಾಜಾತ್ಮಜಂ ಜಲ್ಲಿಯಂತೆಗದು ಹರಿಗೋಲಿಗೆ ಸಿಲುಕಿಸಿ, ತಾಂ ಒಳಗೆ ಧುಮಿಕಿ ಬಂದಾರಾಜಕುಮಾರಿಯನಾಲಂಗಿಸಿಕೊಂಡು, ಮುಖಮುಂ ಚುಂಬಿಸಿ ಮಿಕ್ಕ ಮೂವರನ್ನುಂತೆಯೇ ಸಂತೋಷಿಸಿ, ಸರಸಸಲ್ಲಾಪಗಳನಾಡುತ್ತಾ ರಾಜಾತ್ಮಜೆಯ ತೊಡೆಯಮೇಲೆ ತೊಪೆಯುಂ ಹಾಕಿ ಕುಳಿತುಕೊಂಪನು. ಆ ನದಿಯು ತುಂಬಿ ಪ್ರಾಣಕ್ಯಾಗಿ ಹರಿಯುತ್ತಾ ಇದ್ದ ದ್ದರಿಂದ ಮಧ್ಯಭಾಗದೊಳಿರ್ದ ಹರಿಗೋಲು ಕೊಚ್ಚಿಕೊಂಡು ಹೋದುದು. ಈ ಪರಿಯಂ ಕಂಡಾರಾಜಭಟರೆಲ್ಲರೂ ಆ ಹರಿಗೋಲಂ ಕಂಪುಹಿಡಿಯಲು ತಮ್ಮ ಶಕ್ತಿಸಾಹಸಂಗಳನ್ನೆಲ್ಲವುಂ ವ್ಯಯವಾಡಿ ನೋಡಿದರೂ ಹರಿಗೋಲು ಕಣ್ಣಿಗೆ ಗೋಚರವಾಗದೆ ಹೋಗಲು, ಈ ವಾರ್ತೆಯುಂ ರಾಜನಿಗೂ, ಮಂತ್ರಿ, ಸೇನಾಪತಿ, ವೈಶ್ಯವರ್ಯರಿಗೆ ತಿಳಿಸಲು, ಅವರು ತಮ್ಮ ಪತ್ರಿಯರೊಂಗಿಗೆ ಕೇಳುತ್ತಾ, ವಜ್ರಾಹತಪರ್ವತಗಳಂತೆ ಧೊಪ್ಪನೆ ಭೂಮಿಯೊಳು ಬಿದ್ದು ಮೂರ್ಚಾಕ್ರಾಂತರಾಗಿ ಅಂತೆಯೇ ಎಚ್ಚತ್ತು ಶೋಕಾಕ್ರಾಂತವಿವಶರಾಗಿ ಗೋಳಾಡುತ್ತಾ ಬರಲು, ನೋಡಿದವರೆಲ್ಲರೂ ಅಯ್ಯೋ ಪಾಪಿಗಳು ಏನೊಂದುಕಾರಣದೆ ನದೀಪಾಲಾದರಲ್ಲಾ ಎಂದು ಶೋಕಾಕ್ರಾಂತರಾಗಿದ್ದರು. ಎಂದು ಹೇಳಿ ಎಲ್ಲೆ ಮಹಾರಾಜಾಧಿರಾಜನೇ ! ಇಂದು ಯಾವುಕಾಲವಾದುದು, ಆಜ್ಞೆಯಾದರೆ ವಿಶ್ರಾಂತಿಯುಂ ಹೊಂದುವೆನೆಂದು ಅಂತೆಯೇ ಆಗಲೆಂದು ಆಜ್ಞಾಪಿಸಿದ ಮಹಾರಾಜನ ಅಪ್ಪಣೆಯಂತೆ ಯಾ ತೆರೆಯು ಸುಮ್ಮನಾದುದು. ಎಂಬಲ್ಲಿಗೆ ಪ್ರಥಮ ಯಾಮ ಕಥಾ ವಿರಾಮವಾದುದು.

ತದನಂತರವಾ ವಿಕ್ರಮಾರ್ಕಾವನೀಂದ್ರಂ ಬುರ್ಕಿಹಾಕಿಕೊಂಡು ಮೌನ

ಧಾರಿಣಿಯಾಗಿ ಮುಂಚದೊಳು ಕುಳಿತಿರುವ ತನಗೆ ವಿಮುಖಳಾದ ಕಲಾವತಿಯನ್ನು ದ್ವೇಷಿಸಿ, ಗಹಗಹನೆ ನಗುತ್ತಾ, ಎಲೌ ಮುಗ್ಧಾಂಗನಾಮಣಿಯೇ ? ನೀನಾದರೆ ಮಾತನಾಡದೆ ಸುಮ್ಮನಿರುವಿ, ಹೊತ್ತಾದರೋ ಕಳೆಯುವದು ಕಷ್ಟವಾಗಿರುವದು ಎಂದು ಹೇಳಿ ಎಲೇ ಕಲಾವತಿ ಹೊದ್ದಿರುವ ಬುರುಕೆಯೇ ನೀನಾದರೂ ದಯಮಾಡಿ ನನ್ನೊಳು ಒಂದು ಕಥೆಯಂ ಹೇಳೆಂದು ಆಜ್ಞಾಪಿಸಲು, ಮುಕುಳಿತ ಹಸ್ತನಾಗಿ ಸಮ್ಮುಖದೊಳು ನಿಂತಿರ್ದ, ಭೇತಾಳನು ಆ ಬುರುಕೆಯಂ ಸೇರಿ ಕಥೆಯಂ ಹೇಳಲಾರಂಭಿಸಿದಂ.

ಎಲ್ಲೆ ರಾಜಾಧಿರಾಜನೇ ಲಾಲಿಸು ? ಕೊಂಕಣದೇಶದಲ್ಲಿ ಧವಳಾಂಗದ ನೆಂಬೊರ್ವ ಧರಣೀಧರಂ ಕಾಂತಾಲಲಾಮಳೆಂಬ ತನ್ನ ಕಾಂತೆಯೊಡನೆ ಕೂಡಿ ರಾಜ್ಯಮಂ ಪರಿಪಾಲಿಸುತಿರ್ಪಂ. ಎಂದು ಹೇಳಲುಪಕ್ರಮಿಸಲಾ ಮುಖಳಾಗಿ ಕುಳಿತಿದ್ದಾ ಕಲಾವತಿಯು ನದೀವೇಗದಲ್ಲಿ ಕೊಚ್ಚಿ ಹೋದಾ ನಾವೆಯೊಳು ಕುಳಿತಿದ್ದಾ ಜನರ ಗತಿ ವಿನಾದುದೋ ತಿಳಿಯದಲ್ಲಾ ? ಎಂದು ರಾಯಂ ಕೇಳುವಂತೆ ಪೇಚಾಡಿಕೊಂಡರೂ ಆ ಬುರಕೆಯಳ್ಳಿನ ಭೇತಾಳಂ ಲಕ್ಷ್ಯವಾಡದೆ ಇದೇ ಕಥೆಯನ್ನೇ ಮುಂದೊರೆಯಲುಪಕ್ರಮಿಸಲು, ಅಯ್ಯೋ ನದೀಪಾಲಾದವರ ಗತಿ ವಿನಾದುದೋ ಅದನ್ನೇ ಮುಂದಕ್ಕೆ ಹೇಳಿಸಬಾರದೇ ವಿಕ್ರಮಕಿಂತು ದಯಾಶೂನ್ಯತೆಯಂ ತೋರುವಿರೆನಲು, ವಿಕ್ರಮಾರ್ಕರಾಯಂ ಕೇಳುತ್ತಾ, ಹಾಗೆ ನಿನ್ನಿಷ್ಟವಿದ್ದರೆ, ಆ ಮಾತಂ ನಮಗೆ ಬರೆಸುಕೊಟ್ಟು ನನುಗಭಿಮುಖಳಾಗಿ ಕುಳಿತುಕೊಂಡರೆ, ನಾವು ಹೇಳುವಂತಾಜ್ಞಾಪಿಸುವೆವೆನಲು, ಆ ಕಲಾವತಿಯು ಅಂಯ್ಯೋ ವಿಧಿಯೇ ನಾನೂ ಪ್ರತಿಜ್ಞಾಭಂಗಳಾಗಬೇಕಾದುದಲ್ಲಾ ವಿನೆಮಾಡಲಿ, ಸುಮ್ಮನಿರುವೆನೆಂದರೆ ಮನಂ ಕಳವಳಗೊಳ್ಳುವದೆಂದು ಚಿಂತಿಸಿ ಹಾಗಾದರಾಗಲಿ, ಆವರ ಗತಿಯಂ ಕೇಳಿದಕ್ಕಾದರೆ ಸಂಶಯಂ ಪರಿಹಾರವಾಗಲಾರದೆಂದರಿತು, ತನ್ನ ಮೂಢಾಂಧಕಾರಮಂ ವಿವೇಕಸೂರ್ಯನಿಂ ನಾಶಗೊಳಿಸಿ, ವಿಕ್ರಮಾರ್ಕರಾಯನಂ ಕುರಿತು, ಎಲ್ಲೆ ರಾಜಮೌಳಿಯೇ ! ನಿನ್ನಿಷ್ಟಾನುಸಾರವಾಗಿ ಬರೆದು ಕೊಟ್ಟಿರುವೆನು. ಮುನ್ನಿನ ಕಥೆಯನ್ನೇ ಹೇಳಿಸೆಂದು ಅಭಿಮುಖಳಾಗಿ ಕುಳಿತು ಕೊಳ್ಳಲಾ ಬುರುಕೆಯಲ್ಲಿ ಅಂತರ್ಗತನಾದ ಭೇತಾಳಂ ಮುನ್ನಿನ ಕಥೆಯಂ ಹೇಳಲಾರಂಭಿಸಿದನೆಂಬಲ್ಲಿಗೆ ಕರ್ನಾಟಕ ಭಾಷಾ ವಚನ ರಚಿತ ಸೌಂದರ್ಯಾದ್ಭುತ ರುಚಿರಚಿತ್ರ ಬೃಹತ್ಕಥಾಮಂಜರಿಯೊಳು ಕಲಾವತಿಯ ಅಹಂಕಾರ ಭಂಗವೆಂಬ ಮೂರನೆ ಭಾಗದೊಳು ಪ್ರಥಮಾಯಾಮಕಥಾ ವಿಶ್ರಾಂತಿಯಾದುದು.

ಲಾಲಿಸ್ಯೆ ವಿಕ್ರಮಾರ್ಕಾವನೀಶ ಚಕ್ರವರ್ತಿಯೇ ! ಅತ್ತಲಾ ನದೀವೇಗದೊಳು ಹೊಡೆದುಕೊಂಡು ಹೋಗುತ್ತಿದ್ದ ನಾವೆಯು ಬಹುದೂರವಾಗಿ ಹೋಗಲು, ಒಳಗೆ ಕುಳಿತಿದ್ದಾ ರಾಜಕುಮಾರಂ ತನ್ನ ಸ್ತ್ರೀವೇಷಮಂ ತೊರೆದು,

ಜಲ್ಲಿಯುಂ ಕೊಂಡು, ಮೆಲ್ಲಮೆಲ್ಲನೆ ನದಿಯ ಪಡಕ್ಕೆ ಹರಿಗೋಲನಲ್ಲಿ ಕಟ್ಟಿದ್ದ ಹಗ್ಗಮುಂಬಿಚ್ಚಿ, ನದಿಯ ಪಡದ ವೃಕ್ಷಮೂಲಕ್ಕೆ ಹಾಕಿ ಸಿಲುಕಿಸಲು, ಹರಿಗೋಲು ಮುಂದರಿದುಹೋಗದೆ ನಿಂತುಕೊಳ್ಳಲು, ತಾನಿಳಿದುಬಂದು, ಆ ಹಗ್ಗವಿಂ ಭದ್ರಮಾಗಿ ಆ ನಾವೆಯುಂ ನೆಳೆದು ಗಿಡದ ಬುಡಕ್ಕೆ ಕಟ್ಟಿ, ಗದ್ದಲ್ಲಿನ ಉದ್ದವಾದ ಸಂಣರೆಂಬೆಗಳಂ ಮುರಿದು ಆ ಹರಿಗೋಲು ಕದಲದಂತೆ ನಿಲ್ಲಿಸಿ, ಆ ನಾಲ್ವರು ತರುಣೀಮಣಿಗಳಂ ಮೆಲ್ಲನೆ ಇಳಿಸಿಕೊಳ್ಳಲು, ಮಿಕ್ಕಪರಿಚಾರಿಣಿಯರು ತಾವೇ ಇಳಿದುಬರಲು, ಎಲ್ಲರೂ ಜೊತೆಯಾಗಿ ಹೊರಟು ಸೂರ್ಯಾಸ್ತಮಯ ಸಮಯಕ್ಕೆ ಸರಿಯಾಗಿ ಆ ದಾರಿಗೆ ಸಮೀಪದೊಳಿದ್ದ ಹಳ್ಳಿಯುಂ ಸಾರಿ ಊರೊಳು ಒಬ್ಬರ ಮನೆಯಂ ಸೇರಿ, ಅವರಿಗೆ ತಾತ್ಕಾಲೋಪಯುಕ್ತಕ್ಕೆ ಬೇಕಾದ ದ್ರವ್ಯಮುಂ ಕೊಟ್ಟು, ಸ್ನಾನಭೋಜನಾದಿಗಳಂ ಮಾಡಿ ಆ ರಾತ್ರಿಯೊಳಲ್ಲಿಯೇ ವಾಸಿಸಿ ಮರುದಿನದೊಳು ಭೋಜನಮುಂ ಮಾಡಿಕೊಂಡು ಅಲ್ಲಿಗೆ ದೂರದೊಳಿರುವ ಸೋಮವಾತಶಿಯೆಂಬ ಪುರಮುಂಸಾರಿ ಆ ಪುರದೊಳು ಸಕಲಜನ ಪರಿಚಿತನಾದ ಲೋಕಸಹಾಯಕನೆಂಬ ಧರಣೀದೇವನ ಮನೆಯುಂಸಾರಿ ಅತನಿಂದ ತಮಗನುಕೂಲಮಾಗಿರುವಂತೆ ಮನೆಯುಂ ಪಿಡಿಸಿಕೊಂಡು ಅತನಂ ವಶವರ್ತಿಯನ್ನಂ ಮಾಡಿಕೊಂಡನಂತರಾಗಿ ತಮಗೆ ಬೇಕಾದ ಗೃಹಕೃತ್ಯ ಸಾಮಗ್ರಿಗಳಂ ತರಿಸಿಕೊಂಡು ಸ್ನಾನ ಭೋಜನಾದಿಗಳಂ ಮಾಡಿ ತಾಂಬೂಲಮುಂ ಸವಿಯುತ್ತಾ ತನ್ನ ಪ್ರಾಣಕಾಂತೆಯರಾದ ನಾಲ್ವರೊಂದಿಗೆ ಕುಳಿತು ಸರಸ ಸಲ್ಲಾಪಂಗಳನಾಡುತ್ತಾ ಹಾಸ್ಯ ಪರಿಹಾಸ್ಯಂಗಳೊಳು ನಿನೋದಮಾಗಿ ಕಾಲಮುಂ ಕಳೆದುರಾತ್ರಿಯಾಗೆ ಕಾಲೋಚಿತ ಕರ್ತವ್ಯಂಗಳಂ ಮಾಡಿಕೊಂಡು ಕಾಂತೆಯರಂ ಕೂಡಿ ಸುಖಮಾಗಿ ಭೋಜನಮುಂ ಮಾಡಿ ಶಯ್ಯೆಯೊಳು ಸೇರಿ ಎಲ್ಲರಂ ಕಾಮಯುದ್ಧದೊಳು ಪರಾಜಿತರಂ ಮಾಡಿ ಅನಿಬರೊಂದಿಗೆ ಸುಖಿಯಾಗಿ ನಿದ್ರಾಂಗನಾವಶವಾದಂ. ಹೀಗಿಯೇ ಸುಖಿಯಾಗಿ ಕಾಲಮುಂ ಕಳೆಯುತ್ತಿರಲೊಂದಾನೊಂದು ದಿನದೊಳು ಕುಳಿತು ತನ್ನ ನಾಲ್ವರು ಪ್ರಾಣಕಾಂತೆಯರೊಳು ಹಾಸ್ಯಪರಿಹಾಸ್ಯಗಳನ್ನಾಡುತ್ತಿರುವಾಗಳ್ ರಾಜಾತ್ಮಜೆಯಾದ ಸುಗುಣವಂತೆಯುಂ ಕುರಿತು ತನ್ನ ಜನ್ಮಾದಿ ತತ್ಕಾಲದವರಿಗೂ ನಡೆದ ತನ್ನ ಎಲ್ಲಾ ಚರಿತಮುಂ ಪೇಳಿ ನಿಮ್ಮಗಳ ವೃತ್ತಾಂತಗಳಂ ಪೇಳುವರಾಗೆಂದು ಕೇಳಲು ಬಹಳ ಕುತೂಹಲ ಮುಳ್ಳವನಾಗಿರುವನೆಂದರಿತು ಕೇಳುತ್ತಿರುವ ತಮ್ಮ ಪ್ರಾಣೇಶನಂ ನೋಡಿ, ನಾವೆಲ್ಲರೂ ಪರಮ ಭಾಗ್ಯಶಾಲಿನಿಗಳೇ ಹೌದು ನಮ್ಮ ಸತ್ಕೃಜಾಪಲದಿಂದಿಂತಾ ಕಾಂತಂ ದೊರಕಿದನೆಂದು ಸಂತೋಷಗೊಳ್ಳುತ್ತಾ, ಆ ನಾಲ್ವರೂ, ತಾವು ಹುಟ್ಟಿದುದು ಮುಂತ್ರಿನಂದನನೊಳು ಜೊತೆಯಾಗಿ ವಿದ್ಯಾಭ್ಯಾಸಮುಂ ಮಾಡಿದುದು, ಬಾಲ್ಯದೋಷದಿಂದ ತನ್ನೊಳುಮಾಡಿದ ವಾಗ್ದಾನದ ಪರಿಯುಂ ಅದಕ್ಕನುಸಾರಮಾಗಿ

ತಾವು ಪ್ರೌಢೆಯರಾದ ನಂತರ ಒಂದೆಡೆಯೊಳು ಕುಳಿತುಮಾಡಿದ, ಯೋಚನೆಯುಂ ಪಾಪಭೀತರಾಗಿ ವಾಗ್ದಾನವಂ, ಅತಂಗೆ ಕೈಗೂಡಿಸುವದಕ್ಕಾಗಿ, ಕಾಲಂಗಳಂ ಸ್ಥಳಂಗಳಂ ಕ್ಲುಪ್ತವಾಡಿ, ಆ ಮಂತ್ರಿನಂದನಂಗೆ ಹೇಳಿ ಕಳುಹಿಸಲು, ಅತಂ ವಿನು ಕಾರಣವೋ ಜಾರದೆ, ನೀಂ ದೊರೆತು, ನಿನ್ನಂ ಪತಿಯಾಗಿ, ಕೈಗೊಂಡೆಪೆಂಬುದೇ ಮೊದಲಾದವುಗಳನೆಲ್ಲವಂ ನುಡಿಯಲು ಕೇಳುತ್ತಾ ಪುಷ್ಕರಂ, ಇವರ ಧರ್ಮವಾರ್ಗ ಪ್ರವೃತ್ತತೆಯನ್ನೂ ಪತಿವ್ರತಾ ಧರ್ಮವನ್ನೂ ಜೀತಿಸಿ ಮೆಚ್ಚುತ್ತಾ, ರಾಜನಂದನೆಯೇ ಮೊದಲಾದ ನಾಲ್ವರಂ ಕುರಿತು ಎಲೈ ಸಾಧಿ ಶಿರೋಮಣಿಗಳಿರಾ ! ನೀವು, ಅಂತೆ ವಾಗ್ದಾನಮಂ ಕೊಟ್ಟು ಅತನಂ ಕೂಡದೆಹೋದರೆ, ಪ್ರತಿಜ್ಞಾಭಂಗವಾಗಿ ನೀವು ಪಾಪಭಾಗಿನಿಯರಾಗಲಿಲ್ಲವೆ ? ಎಂದು ಕೇಳಲು ಆ ರಾಜನಂದನೆಯೊಪ್ಪ, ಸುಗುಣವತಿಯು, ತನ್ನ ಮನೋವಲ್ಲಭನಂ ಕುರಿತು, ಹೇಳುವಳು. ಕೇಳ್ಯೆ, ಸತ್ಶೀಲನೆ ! ಒಂದು ಕಾರ್ಯಮಂ ಮಾಡಿಕೊಡುತ್ತೇನೆಂದು ಒರ್ವನೊಳು, ಪ್ರತಿಜ್ಞೆಯಂಮಾಡಿ ಆ ಕಾರ್ಯಮಂ ಮಾಡುವದಕ್ಕಾಗಿ ಮನಃಪೂರ್ತಿಯಾಗಿ ಹೊರದು, ಆ ಕೆಲಸಮಂ ನೆರವೇರಿಸಿದರೆ, ಯಾರಿಗಾಗಿ ಆ ಕಾರ್ಯದ ಫಲಂ ಕೈಕೂಡಿಸುವೆನೆಂದೊರೆದಿದ್ದನೋ ಅವನು ಬರದೇ ಮತ್ತೊರ್ವಂಬಂದು, ಅದಂ ಹೊಂದಿಹೋದರೆ, ಇವನು ಮಾಡಿದ ಕೆಲಸವು, ಭಂಗಮಾಗಲಿಲ್ಲಂ. ಪ್ರತಿಜ್ಞಾಭಂಗವೂ ಆಗಲಾರದು. ತದು ಹೇಗೆನ್ನುವಿಯೋ, ಒಂದಾನೊಂದು ಪಟ್ಟಣದೊಳು, ಆ ಪುರಾಧೀಶ್ವರನು ತನ್ನ ಬಹುಕಾಲಮಾಗಿ ಆಶ್ರಯಿಸಿರ್ದ ಆ ಜನ್ಮದರಿದ್ರನಾದ, ಬ್ರಾಹ್ಮಣನನ್ನು ಬಡುಕಿಸುವೆನೆಂದು ವಾಗ್ದಾನಮಂ ಕೊಟ್ಟಿರ್ದಂ. ರಾಜಂ ತನ್ನ ದಾರಿದ್ರ್ಯಮಂ ಹೋಗಲಾಡಿಸಿ, ಭಾಗ್ಯವಂತನಂ ಮಾಡುತ್ತಾನೆಂದು ನೆಚ್ಚಿ ಪ್ರತಿದಿನವಲ್ಲಿಯೂ, ರಾಜಸನ್ನಿಧಿಯಂ ಕಾಯುತ್ತಿರ್ದಂ ಆ ಭೂದಿನಾಶಂಅನೇಕ ಕಾಲದೊಳು ಸ್ವಲ್ಪ ಸ್ವಲ್ಪ ದ್ರವ್ಯ ಸಹಾಯಮುಂ ಮಾಡುತ್ತಿದ್ದರೂ ಆಹುಟ್ಟುದರಿದ್ರಂ ಕೊಟ್ಟದ್ದಂ ಕೊಟ್ಟಾಗಲೇ ಖರ್ಚು ಮಾಡಿ ತನ್ನ ಸ್ಥಿತಿಯಲ್ಲಿಯೇ ಇರುತ್ತಿರ್ದಂ. ಆ ರಾಜನೀಶ್ವರಿಯನೆಲ್ಲಮಂ ಕಂಡು, ಈ ಬ್ರಾಹ್ಮಣನು ಜನ್ಮದರಿದ್ರನು. ನಾನೆಷ್ಟುಕೊಟ್ಟರೂ ಇವನಸ್ಥಿತಿ ಹೀಗೆ ಇರುವುದೆಂದರಿತು, ಒಂದುಪಾಯಮುಂ ಯೋಚಿಸಿ, ಆ ಬ್ರಾಹ್ಮಣಂಗಿಂತೆಂದಂ. ನಿಲ್ಲೈ ಭೂಸುರೋತ್ತಮನೇ ! ನಿನಗೆ ನಾಂ ಕೊಟ್ಟಿದ್ದ ವಾಗ್ದಾನದಂತೆ ನಾಳೆಯದಿನ ನಿನ್ನ ದಾರಿದ್ರ್ಯ ಹತಮುಂ ಮಾಡಿಸುವೆನೆನೆ, ಆ ದ್ವಿಜಂ ಹರ್ಷಿತನಾಗಿ, ಕಾಲಮುಂ ನಿರೀಕ್ಷಿಸುತ್ತಿರ್ದಂ. ರಾಯಂ ಮರುದಿನದೊಳು ತಾಂ ಮಾಡುತ್ತಿರ್ದ ವಿಶೇಷ ದಾನಗಳೊಂದಿಗೆ, ಒಂದು ಕುಂಬಳಹಣ್ಣಂ ತರಿಸಿ ಅದರಡಿಯೊಳು ರಂಧ್ರಮುಂ ಮಾಡಿ, ಅದರೊಳು ದಿವ್ಯ ರತ್ನಂಗಳಂ ಮುತ್ತುಗಳಂ ತುಂಬಾ ತುಂಬಿ ಬಾಯಿಯುಂ ಯಾರಿಗೂ ತಿಳಿಯದಂತೆ ಮುಚ್ಚಿ ಈ ಬ್ರಾಹ್ಮಣನಂತೆಯೇ ಬಂದಿರ್ದ

ಎಲ್ಲಾ ಬ್ರಾಹ್ಮಣರಿಗೆ ದಿವ್ಯ ರತ್ನಾಭರಣಂಗಳಿಂ ದಿವ್ಯ ಭೂಮಿ ಗೃಹಂಗಳಂ ಧನಂಗಳಂ ಕೊಟ್ಟು ಕಳುಹಿಸಿ, ತನ್ನಂ ಬಹುಕಾಲಮಾಗಾಶಿಸುತ್ತಿದ್ದೀ ಬ್ರಾಹ್ಮಣನಿಗೆ ಈ ಕುಂಬಳಹಣ್ಣನ್ನು ಹತ್ತು ವರಹಗಳನ್ನೂ ಕೊಟ್ಟು ಕಳುಹಲು, ಆ ಬ್ರಾಹ್ಮಣನು ಅಯ್ಯೋ ಪಾಪಿಯಾದ ಧೊರೆಯೇ ! ಇಷ್ಟು ಕಾಲಮಾಗಿ ಕಾಯುತ್ತಿದ್ದ ನನ್ನಂ ಪುಣ್ಯವಂತನಂ ಮಾಡುತ್ತೇನೆಂದು ವಾಗ್ದಾನವಂ ಕೊಟ್ಟು ಕಡೆಗೆ ಈ ದಾನದಿಂ ಕಡೆಹಾರಿಸಿದನೆ ಎಂದು ಚಿಂತಿಸುತ್ತಾ ಬರುವ ದಾರಿಗೊಳ್ಗರಿದ್ರನಾದ ಒರ್ವ ಶೂದ್ರಂ ಹೋಗುತ್ತಿರಲು, ಈ ಹಣ್ಣಂ ಕ್ರಯಕ್ಕೆ ಕೊಟ್ಟು ಎರಡು ದುಡ್ಡು ಅವನಿಂ ಕೊಂದು ಆ ಹಣ್ಣಂ ಅವನಿಗೆ ಕೊಟ್ಟು, ತಾಂ ತನ್ನ ಮನೆಯಂ ಸಾರಿದನು. ಎರಡು ಮೂರು ದಿನಂಗಳನಂತರ ಆ ಬ್ರಾಹ್ಮಣನು ಮುನ್ನಿನಂತೆಯೇ ದೈನ್ಯಸ್ಥಿತಿಯೊಳು ರಾಜ ಸನ್ನಿಧಿಯಂ ಸಾರಿ, ತನಗೆ ಕೊಟ್ಟ ದಾನಮುಂ ಅದಂತಾಂ ಹೊಂದಿಸಿದಪರಿಯನೆಲ್ಲಂ ರಾಯಂಗೆ ಹೇಳಿದಂ, ಆಗಲಾ ಧೊರೆಯು ಆ ಬ್ರಾಹ್ಮಣನೊಳಿಂತೆಂದಂ, ಭೂಸುರನೇ ! ನಾನು ಮಾಡಿದ ವಾಗ್ದಾನದಂತೆ ನಿನ್ನೆಯೇ ನಡಿಸಿದೆನು, ನೀಂ ದುರದೃಷ್ಟಿಯಾದ್ದರಿಂದ ನಿನಗೆ ಲಬಿಸದೆಹೋಯಿತು, ಎಂದು ದೃಷ್ಟಾಂತಮುಂ ಮಾಡಿಸಿಕೊಟ್ಟುಂ, ಅದರಿಂದ ರಾಯನು ನಿಗೆ ವಾಗ್ದಾನಭಂಗದೋಷಂ ಪ್ರಾವಿಸಿದುದೇಂ ಅಲ್ಲದೆ ಈ ಭಾಗದೊಳು ಮತ್ತೊಂದಿತಿಹಾಸನುಂಟು, ನಾಂ ವಿಸ್ತಾರವಾಗಿ ವಿಜ್ಞಾಪಿಸುವೆನೆಂದು ಹೇಳಲಾರಂಭಿಸಿದಳ್.

ರಾಜಪುತ್ರಿಯು ದೃಷ್ಟಾಂತವಾಗಿ ಹೇಳುವ ಕಥೆ.

ಲಾಲಿಪುದ್ದಿ ಮನೋವಲ್ಲಭಾ ! ಚಿತ್ತರಂಜನಿಯೆಂದುದೊಂದು ಪಟ್ಟಣಮಿದುಂಟು, ನೀತಿಸಾಗರನೆಂಬ ಧರಣೀಕಾಂತಂ ಆ ಪುರಮುಂ ಸಕಲದರ್ಮಪರನಾಗಿಯೂ, ಪ್ರಜಾರಂಜನನಾಗಿಯೂ ಪಾಲಿಸುತ್ತಿರ್ಪಂ, ಆ ಪುರದೊಳು ದೇವದಾಸನೆಂಬ ಒರ್ವ ವೈಶ್ಯಶಿಖಾಮಣಿಯು ಸದ್ಧರ್ಮ ಪರಿಪಾಲನೈಕಪರನಾಗಿ ಸಕಲೈಶ್ವರ್ಯಸಂಪನ್ನನಾಗಿ ಸುಖದಿಂದಿರ್ದಂ. ಆತನಿಗೆ ದೈವಯೋಗದಿಂದ ಒಪ್ಪಿ ಕನ್ಯಾಮಣಿಯು ಜನಿಸಿದಳು. ದಿನೇದಿನೇ ಅಭಿವೃದ್ಧಿಯನ್ನೈದುತ್ತಾ ಬರಲು, ವಿದ್ಯಾಭ್ಯಾಸಕ್ಕಾಗಿ ಬೋಧಕನಂ ಕರೆಯಿಸಿ, ವಿದ್ಯಾಭ್ಯಾಸಮಂ ಮಾಡಿಸುತ್ತಿದ್ದಂ. ಆದೇ ವಿದ್ಯಾಬೋಧಕನಲ್ಲಿ ಆ ಪುರದ ಗ್ರಾಮ ಪುರೋಹಿತನ ಧರ್ಮರತ್ನಾಕರನೆಂಬವನ ಕುಮಾರಂ ನೀತಿ ಮುರುತ್ತನೆಂಬೊರ್ವನೂ ವಿದ್ಯಾವ್ಯಾಸಂಗಮಂ ಮಾಡಿಕೊಂಮು ಬರುತ್ತಿದ್ದಂ. ಇವರಿರ್ವರಿಗೂ ದಿನೇದಿನೇ ಉಂಟಾಗುತ್ತಾ ಬಂದ ಸಹವಾಸಬಲದಿಂದ ಅನ್ಯೋನ್ಯ ಸ್ನೇಹವು ಜನಿಸಿ ಅಭಿವೃದ್ಧಿಯಾಗುತ್ತಾ ಬಂದುದು, ಬಾಲ್ಯವಾದ್ದರಿಂದ ಇರ್ವರೂ ಸೇರಿ ಓದಿದ ಪಾಠವಂ ಚಿಂತನೆಮಾ

ಡುತ್ತಾ ಜೊತೆಯಲ್ಲಿಯೇ ಪಾಠವಂ ಓದುತ್ತಾ ಆಟಪಾಟಂಗಳಂ ಸಲುಪುತ್ತಾ ನಾಲ್ಕಾರು ವರುಷಂಗಳು ಕಳೆಯಲು ಇರ್ವರೂ ಸಕಲ ವಿದ್ಯಾಪ್ರವೀಣರಾಗುತ್ತಾ ಬರಲಾ ಸುಂದರೀಮಣಿಗೆ ಹನ್ನೆರಡು ವರುಷಂಗಳು ತುಂಬಲಾ ವೈಶ್ಯಂ ವಿದ್ಯಾಗುರುವಿಗೆ ಮಾನ ಸನ್ಮಾನಗಳಂ ಮಾಡಿ ಸಕಲ ಪದಾರ್ಥಂಗಳಂ ಅನೇಕ ದ್ರವ್ಯಮುಂ ಕೊಟ್ಟು ಸಂತೋಷಗೊಳಿಸಿ ಕಳುಹಲು, ಸ್ನೇಹವಾತ್ಸಲ್ಯದಿಂದಾ ನೇತಿಸಾಗರಂ ಪ್ರತಿದಿನದಲ್ಲಿ ಬರುವುದು ಆ ಸುಂದರಾಂಗಿಯೊಡನೆ ಮಾತಾಡುತ್ತಾ ಹೋಗುವುದೂ ಇದೇರೀತಿಯಾಗಿ ಕೆಲವುದಿನಗಳು ಕಳೆದವು. ಎಂದಿನಂತೇ ಆ ಬ್ರಾಹ್ಮಣನು ಆ ವೈಶ್ಯಶಿರೋಮಣಿಯ ಮನೆಗೆ ಬಂದು ಬಾಲ್ಯ ಸ್ನೇಹಿತಳಾದಾ ಕಾಂತಾಮಣಿಯೊಡನೆ ಕುಳಿತು ವಿನೋದವಾಗಿ ಮಾತಾಡುತ್ತಿರುವಾಗ ಹಾಗೆಯೇ ಅವಳ ರೂಪಾತಿಶಯಮುಂ ನೋಡಿದನು ಸ್ವಭಾವವಾಗಿಯೇ ಆ ಕಾಂತಾಮಣಿಯು ಸರ್ವಾಂಗಸುಂದರಿಯಾವಳು ಕಳೆದುಳಿದ ರನ್ನೆಯಾಗಿರುವದರಿಂದ ಕಾಮ ಸಾರ್ವಭೌಮನ ಸಾಮ್ರಾಜ್ಯಲಕ್ಷ್ಮಿಯಂ ತಿರಸ್ಕರಿಸುವ ವಿಭವಾತಿಶಯದಿಂ ರಾರಾಜಿಸುತ್ತಿರ್ದಳು. ಕಣ್ಣಾರ ನೋಡಿದವನಾಗಿ ಹಾ ಇಂತಿಹ ಭಾವಾಮಣಿಯು ಬ್ರಹ್ಮಾಂಡದೊಳೆಲ್ಲಾದರೂ ಇರುವಳೇ ? ನಾಂ ಅನೇಕ ಪುರಾಣಂಗಳಂ ಇತಿಹಾಸಂಗಳಂ ಕೇಳಿ ನೋಡಿ ಇರುವೆನು, ಅವ್ವಗಳಲ್ಲಿಯೂ ಕೇಳಿ ಇಲ್ಲವು ಭೂಮಂಡಲದೊಳು ಪುಟ್ಟಿರುವಳೇಂ, ಈಕೆಯಂ ನಿರ್ಮಿಸುವಾಗ ಆ ಕಮಲಾಸನಂ ಎನಿತು ಶ್ರಮವೆಯನಾಂತು, ತನ್ನ ಶಕ್ತಿಯನೆಲ್ಲಮಂ ವ್ಯಯಮಾಡಿ ನಿರ್ಮಿಸಿದನೋ ? ಅಲ್ಲದೊಡೆ ಈಕೆಯೊಳಿನಿತು ಸೌಂದರ್ಯಮೆಲ್ಲಿಯದು ಎಂದು ಯೋಚಿಸಿ ಹಾಗೆಯೇ ಸ್ತಬ್ಧನಾಗಿ ಈಕೆಯಂ ಮದುವೆಮಾಡಿಕೊಂದು ರತಿಸುಖವನನುಭವಿಸದ ಜನ್ಮವು ನಿಷ್ಫಲವಾದುದು, ನಾನಾದರೆ ದರಿದ್ರನಾದ ಬ್ರಾಹ್ಮಣನು ಇವಳೋ ಮಹದೈಶ್ವರ್ಯಸಂಪನ್ನೆಯು ನನ್ನಂ ಮದುವೆಯಾಗೆಂದು ಎಂತು ಪೇಳಲಿ ಕೇಳದೆ ಸುಮ್ಮನಿರುವದೆಂತು ? ಎಂದು ಚಿಂತಿಸುತ್ತಿರುವ ಕಾಲದೊಳು ಆ ಸುಂದರಿಯ ತಂದೆಯು, ಕರೆಯುತಿಹನೆಂದಾಕೆಯ ಧೂತಿಕೆಯು ಬಂದೊರೆಯಲು, ಈ ಬ್ರಾಹ್ಮಣನಂ ಕಳುಹಿ ತಾತನಾಜ್ಞಾನುಸಾರಂ ಹೊರಟುಹೋದಳು.

ಈ ವ್ವಿಜನು ಅವಳಲ್ಲಿ ಸಿಲುಕಿದ ಮನಸ್ಸುಳ್ಳವನಾಗಿ ತನ್ನ ಮನೆಗೈತಂದು ಚಿಂತಾಸಾಗರ ಮಗ್ನನಾಗಿ ನಿದ್ರಾಹಾರಂಗಳಂ ತೊರೆದು ಮಲಗಿ ಹಾಗೆಯೇ ಯೋಚಿಸಿದನು. ನಾನಾದರೊ ಪರಮದರಿದ್ರನು ಆ ವೈಶ್ಯಶಿರೋಮಣಿಯಾದರೊ ಮಹದೈಶ್ವರ್ಯ ಸಂಪನ್ನನು, ರಾಜನನ್ನಾದರೂ ಲಕ್ಷ್ಯಮಾಡನು, ನಾಂ ಹೋಗಿ ನಿನ್ನ ಮಗಳಂ ಕೊಟ್ಟು ವಿವಾಹಮಂ ಮಾಡೆಂದು ಕೇಳಿದರೆ ಲಕ್ಷ್ಯಮಾಡದೆ ನಿರಾಕರಿಸುವನು. ಅಲ್ಲದೆ ಅವಳ ಮುಂಖವನ್ನೂ ನೋಡಲಂತಾಗುವದು, ವಿಧಿಯೇ ಸುಮಾಡಲಿ ಎಂದು ರಾತ್ರಿಯೊಳೆಲ್ಲಾ ಹಂಬಲಿಸುತ್ತಿದ್ದು ಬೆಳಗಿನಜಾವದಲಿ

ಹೀಗೆಂದು ಯೋಚಿಸಿದಂ. ನಮ್ಮ ಕುಲದೇವತೆಯಾದ ಸ್ಥನಾರ್ಣವಿಯು ಮನ
ಸಾರಿದರೆ ಈ ಕಾರ್ಯವು ಕೈಸಾರುವದೆ ಹೊರತು ಮತ್ತಾವ ಉಪಾಯಂಗಳಿಂದ
ಲೂ ಸಾಧ್ಯವಾಗದು ಎಂದು ನಿಶ್ಚೈಸಿ, ಅಲ್ಲಗೆ ಮೂರು ಗಾವುದ ದೂರ
ದೊಳಿರುವ ನೀರಶೈಲದೊಳು ನೆಲೆಗೊಂಡಿರುವ ದೇವಾಲಯಕ್ಕೆ ಸಾರಿ, ಸ್ನಾ
ನವಂ ಮಾಡಿ, ಶುಚಿಭೂತನಾಗಿ ಅರಣ್ಯದೊಳು ಪಲಪುಷ್ಪಂಗಳಂ ತಂದು,
ಭಕ್ತಿಪೂರ್ವಕವಾಗಿ ದೇವಿಯಂ ಆರಾಧಿಸಿ, ದೇವೀ ! ಪರಮಪಾತ್ರೇ ! ಭಕ್ತ
ವತ್ಸಲೇ ! ಶಂಕರಾರ್ಧಾಂಗಿಯೇ ! ನಾಂಬುಯುಸಿರುವ ಕನ್ಯಾರಾಮಣಿಯಂ ಕೈಸಾ
ರುವಂತೆ ಮಾಡೆಂದು ಪ್ರಾರ್ಥಿಸಿ, ಎಮರಾಗಿ ಕುಳಿತು ಮುಕುಳಿತ ಹಸ್ತನಾಗಿ
ದೇವಿಯನ್ನೇ ಧ್ಯಾನಿಸುತ್ತಾ ತದೇಕಾಯತ್ತ ಚಿತ್ತನಾಗಿ ಕುಳಿತಿರಲು, ಹೀಗೆ
ದೊಂದು ಶಬ್ದಂ ಕೇಳಿಬಂದುದು. ಈ ಗಿರಿಯು ಉತ್ತರಶಿಖರದ ತೊರ್ಪಿಯೊಳು
ವಾಸವಾಗಿರುವ ಸಂಜೀವಕನೆಂಬ ಉಲೂಕರಾಜನಂ ಪ್ರಾರ್ಥಿಸಿದೊಡಿ ನಿನ್ನ
ಕೆಲಸವು ಸಿದ್ಧಿಪುದು. ಆ ಶಬ್ದವಂ ಕೇಳುತಲಾ ಬ್ರಾಹ್ಮಣಂ ದೇವಿಯೇ ಹೀಗೆ
ದೊರೆದಳೆಂದು ನಿಶ್ಚೈಸಿ, ಅಲ್ಲಂ ಹೊರಟು ಆ ಶಿಖರದ ಬಳಿಗೈದಿ, ಅಗೂ
ಗೆಯಂ ಕುರಿತು, ಎಲ್ಲೈ ಸಂಜೀವಕನೆಂಬ ಕೌಶಿಕರಾಯನೆ ! ದೇವಿಯ ಆಜ್ಞೆ
ನುಸಾರಂ ನಿನ್ನ ಸನ್ನಿಧಿಗ್ಗೈತಂದಿರೆನು. ನನ್ನ ವಿಜ್ಞಾಪನೆಯಂ ಲಾಲಿಸಿ, ನನ್ನ
ಕೋರಿಕೆಯಂ ಕೈಸಾರಿಸೈ ಎಂದು ವಿಜ್ಞಾಪಿಸಲು, ತನ್ನ ಮರಿಗಳೊಡಗೂಡಿ ಕ
ತ್ತಿಯೊಂಬಗೆ ಸುಖವಾಗಿ ಸಂಭಾಷಿಸುತ್ತಾ ಇದ್ದ ಸಂಜೀವಕನೆಂಬ ಗೂಗೆಯು
ಕೇಳುತ್ತಾ ಹೊರಗೆ ಬಂದು ವಿನ್ನೆ ದ್ವಿಜೋತ್ತಮನೇ ; ನಿನ್ನ ಮನೋರಥವ
ನಿನು ; ಅದಕ್ಕಾಗಿ ನನ್ನಿಂದಾಗುವ ಸಹಾಯಮೇನೆಂದು ಕೇಳಲು, ಆ ಬ್ರಾಹ್ಮಣಂ
ಸಂತೋಷಿತನಾಗಿ ತನ್ನ ಮನೋಗತವನ್ನೆಲ್ಲವಂ ಆ ಗೂಗೆಯೊಳಾರೆದು, ಅಯ್ಯಾ
ಉಲೂಕರಾಯನೇ ; ಆ ಸುಂದರೀಮಣಿಗೆ ಮದುವೆಯಾದರೆ ನನ್ನ ಕೋರಿಕೆಯು
ಭಂಗವಾಗುವದು, ನಾಂ ಜೀವಿಸಿದೂಕ್ ಫಲವಿಲ್ಲವು, ದಯವಾಡಿ ಜಾಗ್ರತೆ
ಯೊಳು ಬಂದು, ನನ್ನಂ ಧನ್ಯನಂ ಮಾಡಬೇಕೆಂದು ಪ್ರಾರ್ಥಿಸಲು, ಆ ಉಲೂ
ಕವು ಎಲ್ಲೈ ದ್ವಿಜವರ್ಯನೇ ; ಇದು ಬೆಳದಿಂಗಳಿನಕಾಲವು, ನಮಗೆ ಸಂಚಾರ
ಯೋಗ್ಯವಾದ ಕಾಲಮುಲ್ಲಂ, ಆದ್ದರಿಂದ ಕತ್ತಲೆಯುಕಾಲಂ ಬಂದಮೇಲೆ ನಾಂ
ಬಂದು ನಿನ್ನ ಕಾರ್ಯಮಂ ಮಾಡಿ ಕೊಡುವೆನೆನಲು, ಆ ಬ್ರಾಹ್ಮಣನು ಎಲ್ಲೈ ಪಕ್ಷಿ
ಶ್ರೇಷ್ಠನೇ ; ಈ ಕಾಲವಾದರೋ ಮಾಸ್ಯಾಂತ ಪಂಚಕಸಮಯಂ, ಆ ಸುಂದ
ರೀ ರಮಣಿಯಾದರೋ ಪತಿಸಂಭೋಗ ಸುಲಭವಾಗುಸ್ಕಳಾಗಿರುವಳು, ಅವಳ
ತಂದೆಯಾದರೋ ಕುಬೇರ ಸದೃಶ ಶ್ರೀಮಂತನು ಸ್ಮರಿಸಿದ ಮಾತ್ರದೊಳು ಪ
ಘ್ನವಾದ ಕಾರ್ಯವನ್ನಾದರೂ ಅತಿ ಸುಲಭವಾಗಿ ಸಾಧಿಸುವನು, ಆದ್ದರಿಂದ
ಜಾಗ್ರತೆಗುಲ್ಲಿಯೇ ನನ್ನ ಕೆಲಸವಂ ಮಾಡಿಕೊಡಬೇಕು, ಬೇರೆ ಯೋಚಿಸಬಾ

ರದೆನೆ, ಆ ಕೌಶಿಕಂ ಎಲ್ಲೆ ಭೂಸುರನೇ ; ನಾನು ಕೊಟ್ಟು ಭಾಷೆಗೆ ತಪ್ಪುವ ನಲ್ಲ. ನನಗೆ ಅನುಕೂಲವಲ್ಲದ ಕಾಲವಾಗಿರುವದರಿಂದ ಹಾಗೆ ನುಡಿದೆನೇ ಹೊರತು ಬೇರೆಯಲ್ಲಂ, ಹಾಗೆ ನಿನ್ನ ಕಾರ್ಯಭಂಗವಾಗುವವಾದರೆ, ನಾಳೆ ದಿನ ರಾತ್ರಿಯೊಳು ಬಂದು ನನ್ನ ಕೈಯಲ್ಲಾದ ಸಾಹಸವುಂ ಮಾಡಿ ನೋಡುವೆನು ದೈವಯೋಗವೆಂತಿಹುದೋ ತಿಳಿಯದು ಎಂದೊರೆದುದು. ಆ ಬ್ರಾಹ್ಮಣನಂ ಸಂತೋಷಗೊಳ್ಳುತ್ತಾ ತನ್ನ ನುನೆಯುಂ ಸಾರಿ, ಉಲೂಕನ ಆಗಮನ ಕಾಲವಂ ನಿರೀಕ್ಷಿಸುತ್ತಿರ್ದಂ.

ಮರುದಿನದ ಸೂರ್ಯಾಸ್ತಮಾನದೊಳಾ ಸಂಜೀವಕನೆಂಬ ಗೂಗೆಯು ತನ್ನ ಕಾಂತೆಯಂ ಕುರಿತು, ಹೇ ಪ್ರಾಣನಾಯಕೀ ; ನಾನು ನಿನ್ನೆಯ ದಿನದೊಳು ಬಂದಿರ್ದ ಬ್ರಾಹ್ಮಣೋತ್ತಮನ ಕಾರ್ಯವಂ ಮಾಡಿಕೊಟ್ಟು ಬರಬೇಕೆಂದು ಪ್ರಯಾಣಮುಂ ಮಾಡಿರುವೆನು. ಈ ಪರ್ವತದೊಳು ನಮ್ಮ ವೈರಿಗಳಾದ ವಾಯಸಂಗಳು ಅನೇಕವಿಹವು. ನಾನಿಲ್ಲವಿರುವ ಕಾಲದೊಳು ಬಂದು ವಿನಾಕಾರಣ ಹಿಂಸೆಯಂಮಾಡುವರು, ನಕ್ಕೆಗಳು ಜಾರದೆ ಕದಲಲಿಕ್ಕೆ ಶಕ್ತಿಯಿಲ್ಲದ ಬಾಲರು ಇರುವರು. ಇವರಂ ಹೊರಗೆ ಬಿಡದೆ. ಕಾಯುತ್ತಾ ಅರ್ಧರಾತ್ರಿಯಾದಮೇಲೆ ಹೊರಗೆ ಹೋಗಿ, ಆಹಾರವುಂ ಮಾಡಿಕೊಂಡು, ಈ ಬಾಲರಿಗೂ ಆಹಾರವುಂ ತಂದು ಕೊಟ್ಟು, ಜಾಗರೂಕತೆಯಿಂ ಪಾಲಿಸುತ್ತಾ ಇರು, ಕೂಡಿದ ಮಟ್ಟಿಗೆ ಜಾಗ್ರತೆಯಾಗಿಯೇ ಹೊರಟು ಬರುವೆನೆಂದು ಹೇಳುತ್ತಿರುವ ತನ್ನ ಕಾಂತನಂ ಕುರಿತಾ ಹೆಣ್ಣುಗೂಗೆಯು, ಎಲ್ಲೆ ಪ್ರಾಣನಾಥನೇ ಲಾಲಿಸು ! ನಾನು ಅ ಬಲೆಯು ನಾಲ್ಕೈದುಮುಂದಿ ಬಾಲರು ಇರುವರು, ಈ ಪರ್ವತದೊಳಾದರೋ ಬಹುಕಾಲದಿಂದ ನಮ್ಮಮೇಲೆ ದ್ವೇಷಮುಂ ಸಾಧಿಸಿಕೊಂಡು ಪರಿವಾರವುಂ ಸಿದ್ಧಗೊಳಿಸಿಕೊಂಡು ಸಮಯಮುಂ ನಿರೀಕ್ಷಿಸುತ್ತಾ, ಬಲಿಪುಷ್ಟನೆಂಬ ವಾಯಸಾಗ್ರೇಸರಂ ಕಾದಿರುವನು, ದಿನಗಳಾದರೋ ಬೆಳದಿಂಗಳಿಂದ ಬಹಳ ಪ್ರಕಾಶಮಾನಂಗಳಾದವುಗಳು. ರಾತ್ರಿವೇಳೆಯಲ್ಲಿ ಚಂದ್ರನ ಪ್ರಭೆಯಿಂದ ನಮಗೆ ಕಣರಿಯಜಾರವು, ವೈರಿಜಾತಿಗೆ ಸ್ವಲ್ಪಮಾತ್ರವಾದರೂ ಕಾಣಬರುವವು. ನೀನಿಲ್ಲವೆಂದರಿತರೆ ಅವರು ಬಂದು ಮುತ್ತಿಗೆಯಂ ಹಾಕಿಕೊಂಡು ಪ್ರಾಣಂಗಳನ್ನೇ ತೆಗೆದು ಬಿಡುವರು. ಇದೂ ಅಲ್ಲದೆ ವಿಶೇಷವಾಗಿ ಕಾಣದೆ ಇರುವ ಈ ರಾತ್ರಿ ಕಾಲದಲ್ಲಿ ನೀಂ ಹೊರಹೊರಟರೆ ಈ ಸುಳಿವಂ ಕಂಡಾವೈರಿ ಸಂಘವು ದಾರಿಯಂ ಕಟ್ಟಿ ಭಂಗಗೊಳಿಸುವರು, ಇದನ್ನಾದರೂ ತಪ್ಪಿಸಿಕೊಂಡು ಹೋಗುತ್ತೇನೆಂದು ಹೇಳುವಿಯೋ ನಿನ್ನೋ ಅರಣ್ಯದಲ್ಲಿ ಎಲ್ಲೆಲ್ಲಿಯೂ ಬಲೆಗಳಂ ಬೀಸಿಕೊಂಡು ಕಾಯುತ್ತಿರುವ ವ್ಯಾಧರ ಭಯವೊಂದು ಸಂಪೂರ್ಣವಾಗಿಹುದು. ಕಾಣದೆ ನೀನೆಂತು ಪೋಗಿಬರುವೆನೆಂದು ಪೇಳುವೆ, ಯೋಚಿಸುವವನಾಗೆಂದು

ಪೇಳುವ ತನ್ನ ಕಾಂತೆಯಂ ಕುರಿತಾ ಕೌಶಿಕಂ ಇಂದು ಬರುವೆನೆಂದು ಆ ದ್ವಿ
ಜೋತ್ತಮನುಸಿಗೆ ವಾಗ್ದಾನಮಂ ಕೊಟ್ಟಿರುವೆನು, ಇದನ್ನೆಲ್ಲಮಂ ಯೋಚಿಸು
ತ್ತಾ ಬಂದೆನೆ, ಈಗ ಹೋಗುವದನ್ನೇ ಮನ್ನಿಸಬೇಕು, ಇದರಿಂದ ವಾಗ್ದಾನ
ಭಂಗವು ಜನಿಸುವುದೇ ಹೊರತು ತಪ್ಪಲಾರದು. ಈ ಪಾತಕಕ್ಕೊಳಗಾಗಲಾರೆ
ನೆಂದು ಸೇಳಿ, ಅಲ್ಲಿಂ ಹೊರಟು, ಅರಣ್ಯದೊಳು ತುಂಬಿರುವ ಬಿಳಿದಿಂಗಳಿನ
ಪ್ರಭೆಯಿಂ ಕಂಣುಕಾಣದೆ ತಡವಾಸುತ್ತಾ ಮೆಲ್ಲನ್ನೆ ತರುವಾಗ ಗಿಡಗಳ ಮಧ್ಯ
ಕೊಳು ಬಹು ಕೆಳುವಾಗಿರುವ ನಿಸ್ತಾರವಾದ ಬಲೆಯೊಡ್ಡಿರಲದಂಕಾಣದೆ, ಈ
ವಿವಾಂಧವ್ಯ ಅದರೊಳು ಸಿಲುಕಿಕೊಂಡಿತು. ಒಡನೆಯಾಬಳಿ ಕಾದಿದ್ದ ಬೇಡರ
ವಂಬಂದು ತಟತಟನೆಂದು ಒದ್ದಾಡುತ್ತಿರುವದಂ ನೋಡಿ, ಯಾವದೋ ಬಲ
ವಾದ ಪಕ್ಷಿಯೊಂದು ಸಿಲುಕಿಹುದೆಂದು ಒಳಿಗ್ಗೆಬಿನೋಡಲು, ತನ್ನ ಕೆಲಸಕ್ಕೆ
ಬಾರದ ಗೂಗೆಯಾದ್ದರಿಂದ ಹೊರತೆಗೆದು ಕೊಂದು ಹಾಕಲು ಉದ್ಯುಕ್ತನಾಗಲಾ
ತನಂ ಕುರಿತು ವಿನಯವಾಗಿ ನುಡಿಯುತ್ತಾ ಬಂದುದು. ಎಲೈ ಸ್ವಜಾತಿಶ್ರೇ
ಷ್ಠನೇ ! ನಾನಾವದೋ ನಿನ್ನ ಆಹಾರಕ್ಕೊಪಗದ ನೀಚವಾದ ಪಕ್ಷಿಯು ನನ್ನಂ
ವ್ಯರ್ಥಾ ಕೊಲ್ಲಲು ನಿನಗೇಂ ಫಲವಹುದು ಎಂದೊರೆಯಲು, ಆ ವ್ಯಾಧ
ಎಲೆ ನೀಚಪಕ್ಷಿಯೇ ನೀಂ ಜೀವಿಸಿದ್ದಾತೆ ಎಲ್ಲರಿಗೂ ಕೇಡನ್ನು ಹುಟ್ಟಿಸುವಿ,
ನಿನ್ನಿಂದಾರಿಗೂ ಪ್ರಯೋಜನವಿಲ್ಲ. ನೀಂವ್ಯತಿರಿಕ್ತರಾದರೂ ಯಾರಿಗೂ ಆಹಾ
ರವಾಗಲಾರದು, ದುಷ್ಟಜೀವಿಯುಂ ಕೊಲ್ಲುವದೇ ಯುಕ್ತವೆಂದು ಕರಗತವಾ
ದ ಮೊಣ್ಣೆಯಂ ಮೇಲಕ್ಕೆತ್ತಲು, ಎಲ್ಲಿ ಧರ್ಮಾತ್ಮನೇ ತಾಳುತಾಳು, ನಿನ್ನ
ಮನವಿಯುಂ ಲಾಲಿಸು, ಅನಂತರ ನಿನ್ನಿಷ್ಟಾನುಸಾರವಾಗಿರು ಎನಲಾತಂ ಕೈ
ಮಾಡಿದೆ, ಕೇಳೈ ನಾನು ನೀಶಿತಾಗರನೆಂಬರ್ತಾಯನ ಪಟ್ಟಣದೊಳಿರುವ ಒಬ್ಬ
ಮಹಾದರಿದ್ರನಾದ ಬ್ರಾಹ್ಮಣನ ಕಾರ್ಯಕ್ಕಾಗಿ ಬರುವೆನೆಂದು ವಾಗ್ದಾನಮಂ ಕೊ
ಟ್ಟು ಇರುವೆನು, ಅದಂ ಪರಿಪಾಲಿಸುವದಕ್ಕಾಗಿಯೇ ಹೋಗುತ್ತಿದ್ದೆನು. ನೀನೇ
ಗ ಕೊಂದುಹಾಕಿದರೆ ಆ ಬ್ರಾಹ್ಮಣನ ಕಾರ್ಯವ್ಯ ಕೆಟ್ಟುಹೋಗುವದು, ನಾನೂ
ಭ್ರಷ್ಟನಾಗುವೆನು ಇದರಿಂದ ಬ್ರಾಹ್ಮಣಕಾರ್ಯಹಾನಿಯಂ ಗೈದ ಪಾಪಕ್ಕೆ ನೀಂ
ಗುರಿಯಾಗುತ್ತಿ ! ಆದ್ದರಿಂದ ನನ್ನಂ ಕೊಲ್ಲಬೇಡವನಲು, ಆ ಶಬರಂ, ಎಲೆ
ಪಾಪಿ ಪಕ್ಷಿಯೇ ? ನೀನೆಲ್ಲಿ ಆ ಬ್ರಾಹ್ಮಣನೆಲ್ಲಿ, ನಿನ್ನಂದಾಗುವ ಅಂಥಾ ಸಹಾ
ಯವೇನು ? ಮುಷ್ಟರಾದವರು ತಮ್ಮನ್ನು ಕಾಪಾಡಿಕೊಳ್ಳುವದಕ್ಕೆ ಹೀಗೆಸಟೆಯಂ
ಹೊಗಳುವರೆನಲು, ಅಯ್ಯಾ ! ನಾನು ಸಟೆಯಂ ಹೇಳಿ ಎಷ್ಟುಕಾಲಂ ಬದುಕಿ
ರಬೇಕು, ಆ ಪಟ್ಟಣದೊಳು ರಾಯನಿಗೆ ಪರಮ ಮಿತ್ರನಾದ ಧನಪಾಲಸೆಟ್ಟಿ
ಯುಂಬೊರ್ವ ವೈಶ್ಯಂ ಕುಬೇರಸಂಪತ್ತಿಗೆ ಸರಿಯಾದ ಐಶ್ವರ್ಯದಿಂ ಕೂಡಿರುವನು,
ತ್ರಿಲೋಕ ಸುಂದರೀಮಣಿಯೆಂದು ಪ್ರಖ್ಯಾತ ಸೌಂದರ್ಯವತಿಯಾದವಳು ಆತಂಗೆ

ಮಗಳಾಗಿರುವಳು. ಆಕೆಯೊಳು ವ್ಯೋಹಿತನಾದ ಬ್ರಾಹ್ಮಣನ ಗೋಳಂ ನೋಡ ಲಾರದೆ, ನಾಂ ಪೋಗಿ ಆ ವೈಶ್ಯನೊಳು ಹೀಗೆಂದು ಹೇಳುವೆ, ನಿನ್ನ ಮಗಳಂ ಆ ಬ್ರಾಹ್ಮಣಂಗೆ ಕೊಮ್ಮು, ತಪ್ಪಿದರೆ ನಾಂನಿನ್ನ ಮನೆಯುಂ ಸಾರಿ, ನಿನ್ನವಂ ಶಂ ಹಾಳುಮಾಪುವೆನು ಎಂದು. ವೈಶ್ಯಂ ಭಯಾಕ್ರಾಂತನಾಗಿ ತನ್ನ ಮಗಳಂ ಕೊಡ್ದು, ಆ ಬ್ರಾಹ್ಮಣನಂ ಸಂತೋಷಿಸುವನು. ಬಾಲರಾದ ಮಕ್ಕ ಳನ್ನೂ ಬಾಲ ಪ್ರಾಯಮುಳ್ಳ ಹೆಂಪತಿಯನ್ನೂ ಬಿಟ್ಟು, ಶತ್ರುಗಳ ಬಾಧೆಯಂ ಲಕ್ಷ್ಯವಾಡದೆ ಕಂಣುಕಾಣದ ಈ ಬೆಳದಿಂಗಳೊಳು ಬರಬೇಕಾದ ಕಾರಣಮೇ ನಿತ್ತು, ಈ ಕಾರ್ಯನಿರ್ವ್ಯಾಹಮಂ ಪಾಲಿಸಿ ವಾಗ್ವಾನಮಂ ಸಲ್ಲಿಸಿ ಬರುವೆನು, ಆಗ ನಿನ್ನಿಷ್ಟಾನುಸಾರವಾಗಿ ಮಾಡಬಹುದೆಂದು ಅತಿದೈನ್ಯವಾಗಿ ಪ್ರಾರ್ಥಿಸುವ ಆ ಉಲೂಕದ ಮಾತುಗಳು ನಿಜವಾಗಿದ್ದರೂ ಇರಬಹುದೆಂದು ಯೋಚಿಸಿ ಬಿಟ್ಟು ಬಿಡಲಾ, ಕೌಶಿಕವು ಅಲ್ಲಿಂದ ಹೊರಟು ನೀತಿಸಾಗರಮಹಾರಾಯನ ಪಟ್ಟಣ ಮಂ ಸಾರಿ ಆ ವೈಶ್ಯಶಿರೋಮಣಿಯ ಮನೆಯ ಹಿಂಭಾಗದ, ಉದ್ಯಾನವನದೊ ಳೊಂದು ಆಲದಗಿಡದಮೇಲೆ ಕುಳಿತು, ತನ್ನ ಭಯಂಕರವಾದ ಶಬ್ದದಿಂ ಗಟ್ಟಿ ಯಾಗಿಕೂಗಿತು. ಆ ಕಾಲಕ್ಕೆ ಸರಿಯಾಗಿ ಆಗಿಡದಪೊಟರೆಯೊಳಿದ್ದ ಮತ್ತೊಂದು ವೃಕ್ಷದೊಳು ದಂಪತಿಗಳಾಗಿದ್ದ ಎರಡು ಕಪೋತಂಗಳು ಈ ಶಬ್ದಮಂ ಕೇಳಿ ಮಾತಾಡುತ್ತಾ ಬಂದವು. ಪುರುಷ ಪಕ್ಷಿಯಂ ಕುರಿತು ಸ್ತ್ರೀಪಕ್ಷಿಯು, ಎಲೈ ಕಾಂತನೇ ! ಈ ಉದ್ಯಾನಾಧ್ಯಕ್ಷನಾದ ವೈಶ್ಯಶಿಖಾಮಣಿಗೆ ಬರುವ ವಿಪತ್ಪರಂಪ ರೆಗಳನ್ನು ನೋಡಿದಿಯಾ, ಯಾರು ಹಿಂಸೆಯಂ ಹೊಂದುವರೋ ಅವರಿಗೇ ಮತ್ತಷ್ಟು ದುಃಖಿಂಗಳು ಪ್ರಾಪ್ತಿಯಾಗುವವು, ಇದು ಅದೃಷ್ಟಾಯತ್ತವಲ್ಲವೆ ? ಈ ವೈಶ್ಯಶ್ರೇಷ್ಠನಿಗೆ ಪುತ್ರಿಯಾಗಿದ್ದ ಲೋಕೈಕ ಸುಂದರಿಯಾದ ಭಾವಮಾಮಣಿ ಯನ್ನು ನಿನ್ನೆಯದಿನ, ಸೂರ್ಯಾಸ್ತಮಾನಕಾಲದೊಳು, ಯಾವಳೋ ರಾಕ್ಷಸ ಸ್ತ್ರೀಯು ಅಪಹರಿಸಿಕೊಂಡು, ಎಲ್ಲಿಯೋ ಹೋದಳು. ಪುತ್ರೀಶೋಕದಿಂದ ಸಂತಪ್ತನಾಗಿ ಶೋಕಾಂಬುಧಿಮಗ್ನನಾಗಿರುವನು, ಇಂತಹ ಸಂತಾಪದೊಳು ಈ ಸಮಿಪದೊಳಿರುವ, ವಟವೃಕ್ಷದಲ್ಲಿ ಒಂದು ಕೌಶಿಕವು ಬಂದು ಕುಳಿತು, ಈತನಮನೆಯಂ ಹೊಕ್ಕರೆ ಮನೆಯೆಲ್ಲರೂ ಹಾಳಾಗಿ ಇದೊಂದು ದುಃಖವು ಪ್ರಾ ಪ್ತಿಸುವದಲ್ಲವೆ ? ದೈವಗತಿಯು, ಬಗೆಯು ಅತಿಚಿತವಾಗಿರುವದಲ್ಲಾ, ಎಂದು ಮಾತಾಡಿಕೊಳ್ಳುತ್ತಿರುವದಂ ಕೇಳುತ್ತಾ ಗೂಗೆಯು, ಅಯ್ಯೋ ನಾನಿಷ್ಟು ಕಷ್ಟವಾಂತು ಬಂದರೂ ಕಡೆಗೆ ಆ ಬ್ರಾಹ್ಮಣನ ಕೆಲಸವಾಗದೆ ಕೆಟ್ಟು ಹೋದು ದುಲ್ಲಾ ನಾನೇನೋ ಕೊಟ್ಟಮಾತಂ ಸಲ್ಲಿಸಿದಂತಾದುದು. ಆತನ ಕಾರ್ಯ ವಾದರೆ, ಕೈಸಾರಲಿಲ್ಲವು, ಈಗ ನಾನಿಲ್ಲಿ ಮಾಡಬೇಕಾದ ಕಾರ್ಯವೊಂದೂ ಯಿಲ್ಲವು ಎಂದು ಯೋಚಿಸಿ, ಹೊರಟು ಬೆಳಕರಿಯುತ್ತಾ ಬಂದುದೆಂಬ ಭೀತಿ

ಯಿಂದ ಮಹಾವೇಗದಿಂ ಹರಿದು ಬರುತ್ತಾ ಬಲಿಯೊಳು ಸಿಲುಕಿದ್ದ ಬಳಿಗೈವಿ ಅಲ್ಲಿಯ ಬಲಿಗಾರನಾದ ವ್ಯಾಧನಂ ಹುಡುಕಿನೋಡಿ ಆತನಲ್ಲಿ ಕಾಣದೆ ಹೋದದ್ದರಿಂದ ಹಾ! ಈತನಿಗೆ ಕೊಟ್ಟಿರ್ದ ವಾಗ್ದಾನವೂ ಸಾರ್ಥಕವಾಗದೆ ಹೊದುದಲ್ಲ ಎಂದು ಚಿಂತಿಸುತ್ತಾ, ತನ್ನ ವಾಸಸ್ಥಾನಮಂ ಸಾರಿ, ಪತ್ನೀಪುತ್ರರ ಮುಖಿಂಗಳಿಂ ನೋಡಿ ಸಂತೋಷಿತಸ್ವಾಂತವಾಗಿ ಕಾಂತೆಯೊಡನೆ ನಡೆದ ಸಮಾಚಾರಂಗಳಿಂ ಹೇಳುತ್ತಾ ಸುಖವಾಗಿರ್ದುದು.

ಅತ್ತಲಾ ಬಡ ಬ್ರಾಹ್ಮಣನು ತಾನುನೋಡಿಸಿದ್ದ ಸುಂದರೀ ಮಣಿಯುಂ ರಾಕ್ಷಸ ಸ್ತ್ರೀಯ ಅಪಹರಿಸಿಕೊಂಡು ಹೋದ ಸಂಗತಿಯನ್ನರಿತು ಅಯ್ಯೋ ಪಾಪಿಯಾದವನು ನೋಡಿಸಿದ್ದರಿಂದ ಪುಣ್ಯಶಾಲಿಗೂ ದುರವಸ್ಥೆಯು ಪ್ರಾಪ್ತಿಯಾದುದಲ್ಲಾ ಎಂದು ಶೋಕಿಸುತ್ತಾ ಬಾಲ್ಯಾವಧಿ ಇವಳೊಳು ಸಿಲುಕಿಯಿದ್ದ ವ್ಯಾಮೋಹವು ವಿಪರೀತವಾಗಿ, ಇವನಂ ಬಾಧಿಸುತ್ತಾ ಬಂದುದರಿಂದ ಭ್ರಾಂತನಾಗಿ ಹುಚ್ಚನಂತ ಅಲೆಯುತ್ತಾ ಪರಮೇಶ್ವರಿಯ ಅನುಗ್ರಹವೂ ಫಲಪಿಲ್ಲದಂತಾಯಿತೆ? ನಾಂಬಂದು ನಿನ್ನಿಚ್ಛಾಸೂಚಿಕೆಯಂಮಾಡಿ ಸಂತೋಷಿಸುವೆನೆಂದು ವಾಗ್ದಾನಮಂಕೊಟ್ಟಿರ್ದ ಸಂಜೀವಕನೆಂಬ ಮೂಲೂಕವೂ ಮೋಸಮಾಡಿದುದಲ್ಲವೆ? ಎಂದು ಚಿಂತಿಸುತ್ತಾ ಪರ್ವತಶಿಖರಕ್ಕೆ ಬಂದು ಆ ಗೂಗೆಯ ಗುಹೆಯ ಒಳಿಯುಂ ಸಾರಿ ಎಲೈ ಪಕ್ಷಿಶ್ರೇಷ್ಠನಾದ ಸಂಜೀವಕನೇ! ನನಗೆ ಕೊಟ್ಟಿರ್ದ ವಾಗ್ದಾನಮುಂ ಸಲ್ಲಿಸದೆ ಮೋಸಮಾಡಿದೆಯಾ? ಎಂದು ಗಟ್ಟಿಯಾಗಿ ಕೂಗಲು ಗುಹೆಯೊಳಿದ್ದ ಆ ಸಿಂಜೀವಕನೆಂಬ ಗೂಗೆಯು ಗವಿಯಂಬಾಗಿಲಿಗೆ ಬಂದು ನಿಂತಿರ್ದ ಬ್ರಾಹ್ಮಣನಂನೋಡಿ ಎಲೈ ಬ್ರಾಹ್ಮಣೋತ್ತಮನೇ! ನಾನು ಮಾಡಿದ್ದ ಭಾಷೆಯ ಪ್ರಕಾರದನೆಲೆ ಮೊನ್ನೆ ರಾತ್ರಿಯೊಳು ಬಂದಿರ್ದೆನು ನೀನು ದುರದೃಷ್ಟವು ಳ್ಳವನಾಪ್ಪರಿಂದ ಆ ಕನ್ಯಾರತ್ನಮೇ ಮೋಡನಾಗಿ ಹೋಯಿತು ನಾನು ಸತ್ಯಪ್ರತಿಜ್ಞೆಯುಳ್ಳವನಾಗದೆ ಹೋಗಲಿಲ್ಲ ನಿನ್ನ ಪ್ರಾಣಾಂತರಕ್ಕೆ ಯಾರೇನು ಮಾಡಾರು ಪಲಮಿಲ್ಲದೆ ಹೋದುದಕ್ಕೆ ಚಿಂತಿಸಿ ಪ್ರಯೋಜನವೇನು ಸುಮ್ಮನಿರಿಂದೊರೆಯಲು ಆ ಬ್ರಾಹ್ಮಣನು ಎಲೈ ಪಕ್ಷಿರಾಜನೇ! ಬಹುಕಾಲವಾಗಿ ಕೈಕೂಡುವದೆಂದು ನಂಬಿದ್ದ ಕಾರ್ಯವು ಭಂಗವಾದರೆ ಮನಸ್ಸುಸ್ವಾಧಾನಮುಂ ತಾಳಿರುವದೆಂತು ಲೋಕಮಾತೆಯಾದ ಈ ಪರ್ಣಶವಾಸಿನಿಯಾಗಿರುವ ಮಹಾದೇವಿಯು ಕೊಟ್ಟಿರ್ದ ಭಾಷೆಗುಂ ತಪ್ಪಿಹೋದದ್ದಕ್ಕಾಗಿ ನಾನೆಷ್ಟು ಮನಸ್ಸಿಗೆ ನಿದಾನವಂ ತಾಳಿದರೂ ಮನವು ನನ್ನ ಬುದ್ಧಿಯ ಸ್ವಾಧೀನವಾಗದಲ್ಲಾ? ಎಂದು ಬಹು ವಿಧವಾಗಿ ಹಂಬಲಿಸುತ್ತಿರುವ ಬಡ ಬ್ರಾಹ್ಮಣನ ದುಃಖವಂ ನೋಡಿ, ಕನಿಕರವಾಂತು ದೇವಿಯು ಕೊಟ್ಟಿದ್ದ ಬಾಷೆಯು ಪಲಿಸದೆ ಹೋಗದು ಹೇಗಾದರೂ ಈತನ ಕೈ ಸಾರುವದೇ ನಿಶ್ಚಯವು ನಾನು ಕಾಡುಗಳಿಂ ತಿರುಗುತ್ತಿರುವೆನು, ದೈವಯೋಗದಿಂದ

ಆ ಕನ್ಯಕಾಮಣಿಯು, ಜೀವವಂತಳಾಗಿದ್ದರೆ, ತಕ್ಕ ಪ್ರಯತ್ನಮಾಡಿ ನೋಡುವೆನು, ಎಂದು ಯೋಚಿಸಿ, ಕೌಶಿಕವು, ಎಲ್ಲೆ ಬ್ರಾಹ್ಮಣನೇ ! ನೀನು ಹಂಬಲಿಸಬೇಡ ಆ ಕನ್ಯಾರತ್ನವು, ಜೀವಿಸಿದ್ದು, ನಿನ್ನ ಕೈಸಾರುವ ಯೋಗಿಸಿದ್ದರೆ ಹೇಗಾದರೂ ಪ್ರಾಪ್ತಿಯಾಗುತ್ತದೆ ನಾನೂ, ನಿನಗಾಗಿ ಅನೇಕ ಪರ್ವತಂಗಳಿಂ ಳು ಘೋರಾರಣ್ಯಗಳಿಂಳೂ ಸಂಚರಿಸಿ, ಹುಡುಕುವೆನು ಇಷ್ಟರವೇಲೆ ದೈವಸಂ ಕಲ್ಪವು ಹೇಗೆ ಇರುವದೋ ನೀನು ನಾಲ್ಕಕ್ಕೆ ಮೂರಕ್ಕೆ ನನ್ನ ಬಳಿಗೆ ಬಂದು ಹೋಗುತ್ತಿರು ಎಂದು ಹೇಳಿ ಕಳುಹಿಸಲಾ ಬ್ರಾಹ್ಮಣಂ ಹರ್ಷಿಸುತ್ತಾ ಹಿಂತಿರುಗಿ ಬಂದು ತನ್ನ ಮನೆಯಂ ಸೇರಿ ಗೂಗೆಯು ಮಾತಿನಂತೆಯೇ ಗೈಯುತ್ತಿರ್ದಂ. ಅತ್ತಲಾ ವೈಶ್ಯನಂದನೆಯನ್ನು ಪಹರಿಸಿಕೊಂಮ ರಾಕ್ಷಸಾಂಗನೆಯು ತನ್ನ ನೆಲೆಯಾದ ಬಿಲ್ವಾರಣ್ಯವೆಂಬ ಘೋರಾಟವಿಯಂ ಸಾರಿ ಅಲ್ಲಿ ತಾಂ ಆ ವಾಸಸಾಧನಮಾಗಿ ಮಾಡಿಕೊಂಡಿರುವ ಕಾಲಾಂಜನಗಿರಿಯ ಗುಹೆಯಂ ಸೇರಿ ಅವಳಂ ನೋಡಿ ಹಾ ! ಇಂತಿಹ ಸುಂದರಿಯಾದ ಸ್ತ್ರೀರತ್ನವು ಈ ಲೋಕಜಾತದಲ್ಲಿ ಎಲ್ಲಿಹುದು ನಾಂ ಕಂಡ ಸ್ತ್ರೀಜಾತಿಯೊಳು ಇವಳಂ ಪೋಲುವ ರಮಾಮಣಿಯು ಕಾಣಿಸುವದೇ ಇಲ್ಲವು ಗಂಧರ್ವಾಪ್ಸರಸ್ತ್ರೀಯರೇ ಸೌಂದರ್ಯವತಿಗಳೆಂದು ಪ್ರತೀತಿಯಾಗಿರುವದು, ಅವರ ಸೌಂದರ್ಯವು, ಇವಳ ಕಾಲುಂಗುವಂ ಪೋಲದು ! ಆದ್ದರಿಂದ ತನ್ನ ತನುಸಂಭವನಾದ ಜ್ಯೋತಿರ್ಮೋಧನಿಗೆ ಪತ್ನಿಯನ್ನಾಗಿ ಮಾಡುವೆನು ಎಂದು, ಇವಳಂ ಹಿಂಸೆಪಡಿಸದೆ ತನ್ನ ಮಾಯಾಶಕ್ತಿಯಿಂದ, ದಿವ್ಯವಾದ ಭವನವನ್ನು ರಾಜಭೋಗಾರ್ಹಂಗಳಾದ ಸರ್ವೋತ್ಕೃಷ್ಟಂಗಳಾದ ಪದಾರ್ಥಂಗಳಂ ಕಲ್ಪಿಸಿಕೊಟ್ಟು ಆಕೆಗೆ ಬೇಕಾದ ಸ್ನಾನಭೋಜನ ಶಯನಾಲಂಕಾರಂಗಳಿಗೆ ಅನುಕೂಲಮಂ ಮಾಡಿಕೊಟ್ಟು ಹಗಲೆಲ್ಲಮಾಯೆಡೆಯೊಳು, ತಾನಿರುತ್ತಾ, ರಾತ್ರಿಯಾಗೆ ಬಾಗಿಲ್ಗಳಂ ಭದ್ರಪಡಿಸಿ, ತನ್ನಾಹಾರವಿಹಾರಾರ್ಥಮಾಗಿ ಹೋಗುತ್ತಾ, ಸೂರ್ಯೋದಯಕಾಲಕ್ಕೆ ಬಂದು ತಾಣಮಂ ಸಾರುತ್ತ, ದ್ವೀಪಾಂತರಕ್ಕಾಗಿ ಹೋಗಿರುವ ತನ್ನ ಮಗನ ಬಯಸುವಿಕೆಯಲ್ಲಿಯೇ ಕಾಲಮಂ ಕಳೆಯುತ್ತಾ, ಇರ್ದಳು, ಭುವನೈಕಸುಂದರಿಯಾದಾ ವೈಶ್ಯನಂದನೆಯು, ಪ್ರಾಣಮಂ ಹೋಗಲಾಡಿಸಿಕೊಳ್ಳದೆ, ದೇಹಧಾರಣಾರ್ಥಮಾಗಿ ಅಲ್ಪಾಹಾರಮಂ ಮಾಡಿಕೊಂಡು ರಾತ್ರಿಕಾಲಂಗಳೊಳು ಸೌಧಾಂತದಲ್ಲಿ ಸೇರಿ ಗವಾಕ್ಷಮಂ ತೆರೆದುಕೊಂಡು ಹಾ ! ಎಂದು ತನ್ನ ಸ್ಥಿತಿಯನ್ನು ನೆನೆದು ಗಟ್ಟಿಯಾಗಿ ಪ್ರಲಾಪಿಸುತ, ತನ್ನ ಜನ್ಮಾದಿನಡೆದ ಪರಿಯನೆಲ್ಲಮಂ ಬಣ್ಣಿಸಿಕೊಂಡು ಶೋಕಿಸುತ್ತಿರ್ದಳು.

ಇತ್ತಲಾ ಸಂಜೀವಕನೆಂಬ ಕೌಶಿಕವು ಬ್ರಾಹ್ಮಣನೊಳು ಕನಿಕರಮುಳ್ಳದ್ದಾಗಿ ರಾತ್ರಿವೇಳೆಯೊಳು ಬಹುದೂರಮಾದ ಘೋರಾರಣ್ಯಗಳಂ ಬಿಟ್ಟುಗುಟ್ಟುಂಗಳಂ ತಿರುಗುತ್ತಾ, ಅಲ್ಲಲ್ಲಿ ರಾಕ್ಷಸಾವಾಸಂಗಳೊಳು ಕುಳಿತು ಮನುಷ್ಯರ ಸುಳಿವೇ

ನಾದರೂ ಇಹೂದೊ ? ಇಲ್ಲವೋ ? ಎಂದು ನೋಡುತ ಆ ಬ್ರಾಹ್ಮಣನ ಹೇಳಿಕೆಯಂತೆ ಆಕೆಯು ಜಗದೇಕ ಸುಂದರೀಮಣಿಯಾಗಿರುವಲ್ಲಿ ಯಾರಾದಾಗ್ಲೂ ಆಕೆಯಂ ಕೊಲ್ಲಲಾರದವಾಗಿ, ಜೀವಿಸಿಯೇ ಇರಬಹುದೆಂದು ನಂಬಿ ಹೀಗೆಯೇ ರಾತ್ರಿಕಾಲಂಗಳೊಳು ಹುಡುಕಾಡಿ ತನ್ನ ನೆಲೆಯಂ ಸೇರುತ ಈ ಪ್ರಕಾರವಾಗಿ ಅಲ್ಲಲ್ಲಿ ಸಂಚರಿಸುತ್ತಾ ಒಂದಾನೊಂದು ರಾತ್ರಿಯೊಳು ದೈವಯೋಗದಿಂದ ಆ ಬಿಲಾರಣ್ಯಮಂ ಸಾರಿ ಹುಡುಕುತ್ತಾ ಕಾಲಾಂಜನ ಪರ್ವತಾಗ್ರದೊಳು ಪೋಗುತ್ತಿರುವ ಕಾಲದೊಳು ಮನುಜ ಸ್ತ್ರೀರೋದನಂ ಕೇಳಿ ಬರಲು ಆ ಯೆಡೆಗೈ ದಿ ದೂರದೊಳು ಕುಳಿತು ಜಿನಾಗಿ ಕಿವಿಗೊಡ್ಡುತ್ತಾ ಕೇಳುತ್ತಾ ಬರಲು ಅವಳು ಎಂದಿನಂತೆ ತನ್ನ ಪೂರ್ವೋತ್ತರ ಚರಿತ್ರೆಯಂ ನೆನೆದು ಶೋಕಿಸುತ್ತಿರಲು ಅದನ್ನೆಲ್ಲಮಂ ಕೇಳಿ ಇವಳೇ ಆ ಬಾಹ್ಮಣಂ ಒಯಸಿರುವ ವೈಶ್ಯನಂದನೆಯೆಂದು ನಿಶ್ಚೈಸಿ ಸಂತೋಷವನು ಹೊಂದುತ್ತಾ, ಅಲ್ಲಿಂದ ಹೊರಟು ತನ್ನ ಆಹಾರಮಂ ಸಂಪಾದಿಸಿಕೊಂಡು ಈ ಹಣ್ಣಂ ರಾಕ್ಷಸಿಯು ಕೊಲ್ಲಲಾರದೆ, ಕಾಪಾಡುತ್ತಿರುವಳೆಂದು ನಂಬಿ, ತನ್ನ ಮನೆಯಂ ಸಾರಿದನು.

ಎಂದಿನಂತಾ ಬ್ರಾಹ್ಮಣಂ ಈ ಗೂಗೆಯಂ ಕಾಣುವದಕ್ಕಾಗಿ ಬಂದು ಮಾತನಾಡಿಸುತ್ತಿ, ಎಲೈ ಬ್ರಾಹ್ಮಣನೇ ಕೇಳು ! ನಿನ್ನ ಕಾರ್ಯಾರ್ಥವಾಗಿಯೇ ನಾನು ಅನೇಕ ಅರಣ್ಯಂಗಳನ್ನೂ, ಪೆದ್ದಗುಟ್ಟಂಗಳನ್ನೂ ಹುಡುಕುತ್ತಲಿರುವಾಗ್ಗೆ ಒಲವಾರಣ್ಯ ಮಧ್ಯದೊಳಿರುವ ಪರ್ವತಾಗ್ರದಲ್ಲಿ ವಾಸಮಾಡಿಕೊಂಡಿರುವ ರಾಕ್ಷಸಸ್ತ್ರೀನಿವೇಶನದಲ್ಲಿ ನೀಂ ಪೋಹಿಸಿರುವ ಕಾಂತಾರತ್ನದ ಶಬ್ದಮಂ ಕೇಳಿ, ಹೌದೋ ಅಲ್ಲವೋ ಎಂದು ಶಂಕಿಸಿ, ಕಡೆಯೊಳು ಅವಳೇ ಎಂದು ನಿಶ್ಚೈಸಿಕೊಂಡು ಬಂದಿರುವೆನು, ಆ ಬ್ರಾಹ್ಮಣನು, ಎಲೈಸತ್ಯಭಾಷಿಯೇ ! ನನಗಾಗಿ ನೀ ನೆಷ್ಟು ಕಷ್ಟಂಗಳಂ ಹೊಂದಿದೆ, ನಿನ್ನಂಥಾ ಪರೋಪಕಾರಿಯಾಗಿ ಸತ್ಯಭಾಷಿಯಾಗಿಯೂ ಇರುವ ಪ್ರಾಣಿಯನ್ನು ನಾನೀಲೋಕದೊಳಿಲ್ಲಿಯೂ ಕಾಣಲಿಲ್ಲವೆಂದು ಹೊಗಳಿ ಕಡೆಗೆ ಆ ರಮಣಿಯಂ ತನ್ನ ಕೈಸಾರುವಂತೆ ಮಾಡಿ, ಧರ್ಮ ಕೀರ್ತಿಗಳಂ ಹೊಂದಬೇಕೆಂದು ವಿನಯುನಾಗಿ ಬೇಡುವ ಬ್ರಾಹ್ಮಣನಂ ಕುರಿತು ಎಲ್ಲೆ ದ್ವಿಜವರ್ಯನೇ ! ನನ್ನ ಸ್ನೇಹಿತರನ್ನೆಲ್ಲರನ್ನೂ ಪೆಟ್ಟು ಶತ್ರುಗಳ ಕಾಟಮಂ ತಾಳಲಾರದೆ ಇಲ್ಲಿಗೆ ಬಂದು ಸೇರಿಕೊಂಡಿದ್ದೇನೆ. ಇಲ್ಲಿ ಯಾರೂ ನನಗೆ ಅಂಥಾ ಮಿತ್ರರಿಲ್ಲ, ನಿನಗಾಗಿಯೇ ಬಹು ದೂರವಾಗಿರುವ ನನ್ನ ಪೂರ್ವವಾಸ ಸ್ಥಾನಮಂ ಕುರಿತು ಹೋಗುತ್ತೇನೆ. ಅಲ್ಲಿ ಶತ್ರುಗಳ ಬಾಧೆಯು ನನಗೆ ತುಂಬಾ ಇರುವದು, ಆದರೂ ಚಿಂತಿಸದೆ, ನಿನ್ನ ಶಾಪಮಂ ನೋಡಲಾರದೆ ಹೋಗುತ್ತೇನೆ, ಶಮ್ಯಾರಣ್ಯದಲ್ಲಿ ಪಿಂಗಳಿಕನೆಂಬೊರ್ವ ಗಂಡಭೇರುಂಡನು ನನಗೆ ಬಹಳ ಪ್ರಿಯನಾಗಿರುವನು, ಅತನನ್ನು ಈ ಕಾರ್ಯಕ್ಕಾಗಿ ಪ್ರಾರ್ಥಿಸಲು ಕೈಯಲ್ಲಾ

ದಪ್ಪು, ಸಹಾಯುವುಂ ಮಾಡುವನೇ ಹೊರತು ನನ್ನ ಮಾತನ್ನು ತಿರಸ್ಕರಿಸಲಾರನು. ನೀಂ ಚಿಂತಿಸವಿರುವನಾಗು. ಆ ಪಿಂಗಳಕನೆಂ ಈ ಕಾಡಿಗೆ ಕರತರುವೆನು, ನಿನಗೆ ಸಮಕ್ಷವುಂಮಾಡಿ, ಅವನ ಪರಿಚಯುವಂ ಮಾಡಿಕೊಟ್ಟು ನಾನೂ ಸಹಾಯಕನಾಗಿರುವೆನೆಂದು ಹೇಳಿ, ಆ ರಾತ್ರಿಯೊಳೇ ಅಲ್ಲಿಂದ ಹೊರಟು, ಶನ್ಯಾರಣ್ಯಕ್ಕೆ ಹೋಗಿ, ತನ್ನ ಪರಮಾಪ್ತನಾದ ಪಿಂಗಳನೆಂಬ ಗಂಜಛೇರುಂಡನಂ ಕಂಡು, ಆ ಬ್ರಾಹ್ಮಣನ ವಿಷ್ಯಮಾನವನೆಲ್ಲವುಂ ಹೇಳಿ, ಅದಕ್ಕೆ ನೀನೇನಿಂತು ಆ ರಾಕ್ಷಸ ಸ್ತ್ರೀವಶಳಾದ ಸ್ತ್ರೀರತ್ನವುಂ ತಂದು ಬ್ರಾಹ್ಮಣಂಗಿತ್ತು, ಆತನಂ ಸಂತೋಷಿಸಲು, ನನ್ನ ಜೊತೆಯೊಳು ಬರಬೇಕೆಂದು ಹೇಳಿ, ಜೊತೆಯೊಳೇ ಕರೆದುಕೊಂಡು ಬಂದು ಆ ಬ್ರಾಹ್ಮಣನಿಗೆ ಸ್ನೇಹವುಂ ಮಾಡಿಸಿಕೊಡಲು, ಆ ಗಂಡಛೇರುಂಡನು ಆ ರಾತ್ರಿಯೊಳೇ ಅಲ್ಲಿಂದ ಹೊರಟು, ತನ್ನ ಸ್ವೀಕೃತನಾದ ಸಂಜೀವಕನಂ ಜೊತೆಗೊಂಡು, ಆ ಕೌಶಿಕಂ ತೋರುವ ಮಾರ್ಗವುಮಾಗಿಯೇ ಹೊರಟು ಬಂದು, ನೀಲಾಂಜನ ಪರ್ವತ ಶಿಖರಾಗ್ರದೊಳು ರಾಕ್ಷಸಿಯ ಆ ವಾಸಸ್ಥಾನವುಂ ಸಾರಲು, ಆ ಕಾಲಕ್ಕೆ ಸೂರ್ಯೋದಯಂ ಸವಿಾಪವುಮಾಗುತ್ತಾ ಬರಲು ಆಹಾರವುಂ ಸಂಪಾದಿಸಿಕೊಂಡಾ ರಕ್ಕಸಿಯು ಬಂದು ವಿಶ್ರವಿಸುತ್ತಾ ಇರುವಾಗ, ಈ ದುರುಳರಕ್ಕಸಿಯೇ ಆ ಸುಂದರಿಯುಂ ಅಪಹರಿಸಿಕೊಂಡು ಬಂದಿರುವಳೆಂದೊರೆದಾ ಗೂಗೆಯು ಕಂಣು ಕಾಣದೆ ಬಳಿಯೊಳಿರ್ದ ಜೀವಿನ ಬುಡದೊಳು ಕುಳಿತುಕೊಳ್ಳಲಾ ಗಂಡಛೇರುಂಡವು ಮಹಾ ರೋಷವುಂ ತಾಳಿ, ಆ ರಕ್ಕಸಿಯ ಬಳಿಗ್ಯೆದಿ, ತನ್ನ ತೀಕ್ಷ್ಣವಾದ ತುಂಡಾಗ್ರದಿಂದವಳಂ ಕಜ್ಜುತ, ರಕ್ಕೆಗಳಿಂದ ಹೊಡೆಯುತ್ತಾ, ತನ್ನ ಕಾಲುಗುರುಗಳಿಂ ದೇಹವುಂ ಸೀಳುತ್ತಾ, ಕ್ಷಣವಾತ್ರದೊಳಾ ರಾಕ್ಷಸಸ್ತ್ರೀಯುಂ ಯಮಲೋಕಕ್ಕೆ ಕಳುಹಿದುದು.

ಈ ರೀತಿಯುಂ ಕೇಳುತ್ತಾ ಸಂಜೀವಕನೆಂಬ ಗೂಗೆಯು ಪರಮ ಸಂತೋಷವುಂ ತಾಳಿ, ಎಲ್ಯೆ ಮಿತ್ರನೇ ! ನಾನಾ ಬಲ್ಲಹ್ಮಣನಿಗೆ ಕೊಟ್ಟ ವಾಗ್ದಾನವು ಪರಿಪ್ರೂರ್ತಿಯಾಯಿತೆಂದು ನಂಬಿದೆನು, ಇದೋ ಈ ಬಳಿಯೊಳಿರುವ ಸೌಧಾಂತದಲ್ಲಿಯೇ ಆ ರಮಣೀಮಣಿ ಇರುವಳು, ಅಕೆಯುಂ ನಿನ್ನ ಮೇಲೆ ಹತ್ತಿಸಿಕೊಂಡು ನನ್ನ ಗವಿಯಬಳಿಗೆ ಹೋಗು, ನಾನೂ ನಿನ್ನ ಜೊತೆಯೊಳೇ ಮೆಲ್ಲನೇ ಬರುವೆನು, ಎನಲು ಕಂಣುಕಾಣದೆ ನೀನೆಂತು ಈ ಹಗಲೊಳು ನನ್ನೊಂದಿಗೆ ಬರುವೆ, ನನ್ನ ಕಾಲುಗಳ ನಡುವೆ ಕುಳಿತುಕೋ, ಅಕೆಯುಂ ನನ್ನಮೇಲೆ ಹತ್ತಿಸಿಕೊಳ್ಳುವೆನು ಎಂದೊರೆದು, ಆ ಸೌಧಮುಂ ಸೇರಿ ಮಂಜದೊಳು ಕುಳಿತಿದಕ್ಕೆ ಆ ವೈಶ್ಯನಂದನೆಯನ್ನೆತ್ತಿ ತನ್ನ ಮೇಲೆ ಕುಳ್ಳಿರಿಸಿಕೊಂಡು, ಈ ಗೂಗೆಯುಂ ಕಾಲ್ಗಳ ಮಧ್ಯದೊಳು ಸಿಲುಕಿಕೊಂಡು ಮಹಾವೇಗವಾಗಿ ಆಕಾಶಮಾರ್ಗದೊಳು ಬರುತ್ತಾ ಇರ್ದುದು.

ಆ ಕಾಲಕ್ಕೆಸರಿಯಾಗಿ ಅಮ್ಮುತಶಿಲಾಪಟ್ಟದ ಧರಣೀಧವನಕುಮಾರನಾದ ವೀರವರ್ಮನೆಂಬ ರಾಜಕುಮಾರಂ ಪರಿವಾರದೊಂದಿಗೆ ಬೇಟೆಯನ್ನಾಡಲು ಆ ಅರಣ್ಯಕ್ಕೆ ಬಂದವನು ಹಂದಿಯುಂ ಹಿಂದಟ್ಟಿ, ಪರಿವಾರರಹಿತನಾಗಿ ಅಶ್ವವನ್ನೇರಿ ಮಹಾ ವೇಗದಿಂ ಬರುತ್ತಿರುವಾಗ ಆಕಾಶಮಾರ್ಗದಲ್ಲಿ ಗರುಡನಂ ಹತ್ತಿ ಬರುತ್ತಿರುವ ಶ್ರೀ ಮಹಾಲಕ್ಷ್ಮಿಯಂತೆ ರಾರಾಜಿಸುತ್ತಿರುವ ಸರ್ವಾಂಗ ಸುಂದರಿಯಾವೀ ರಮಣೀ ಮಣಿಯುಂ ನೋಡಿ ಭ್ರಾಂತಿಯುಂ ತಾಳಿ, ಆ ಇಂತಿಹ ಸುಂದರಿಯುಂ ನೇರಿ, ರತಿಸುಖವಂ ಅನುಭವಿಸದ ನನ್ನೀ ಜನ್ಮವು ಧರೆಯೊಳ ದೂ ೯ ಪ್ರಯೋಜನವಿಲ್ಲವೆಂದರಿತು, ಈ ಗಂಡಭೇರುಂಡವು ಮಹಾ ವೇಗವಾಗಿ ಹೋಗುತ್ತಿರುವದು, ಸಾವಕಾಶವಾದರೆ ಕೆಲಸವು ಕೆಟ್ಟುಹೋಗುವದೆಂದು ಯೋಚಿಸಿ ಕೈಯೊಳಗಿದ್ದ ಬಿಲ್ಲನೊಳು ಲಕ್ಷ್ಯಭೇದನಾಸ್ತ್ರವಂ ಸೇರಿಸಿ, ಆ ಪಕ್ಷಿಯುಂ ಗುರಿಮಾಡಿ ಪ್ರಯೋಗಿಸಲು ಗಂಡಭೇರುಂಡವು ಸರ್ವತಪಂತೆ ಭೂಪ್ಪನೆ ಭೂಮಿಯೊಳು ಬಿದ್ದು ಮೃತಿಯನ್ನೈದಿತು. ಮೇಲೆ ಕುಳಿತಿದ್ದಾ ಸುಂದರೀ ಮಣಿಯು ಪರಮ ಭಯಾಕ್ರಾಂತಳಾಗಿ ಅಂತೆಯೇ ಮೈಮರೆತಳು. ಕೂಡಲೆ ಬಳಿಗೆ ಬಂದಾ ರಾಜನಂದನನು ಆಕೆಯುಂ ಬಿಡಿಪೆತ್ತಿ, ತನ್ನ ಸೆರಗಿನಿಂ ಗಾಳಿಯುಂ ಬೀಸಲು ಎಚ್ಚೆತ್ತಾ ವೈಶ್ಯನಂದನೆಯು, ಸುಂದರನಾಗಿಯೂ, ಗುಣವಂತನವಂತನಾಗಿಯೂ, ಉಡಿಗೆತೊಡಿಗೆಗಳಿಂ ರಾಜನಂದನನೆಂದು ಕಾಣುತ್ತಿರುವಾತನಂ ನೋಡಿ, ಅಯ್ಯೋ ನನ್ನ ಹಣೆಬರಹವು, ಇನ್ನೂ ವಿನೇನು ಮಾಳ್ಪುದೋ ಎಂದು ಘಟ್ಟಿಯಾಗಿ ಶೋಕಿಸಲಾ ರಾಜಾತ್ಮಜಂ, ಎಲ್ಲೆ ಸುಂದರೀಮಣಿಯೇ ಹೆದರಬೇಡ, ನಾಂ ರಾಜಾತ್ಮಜಂ, ನಿನ್ನ ಸೌಂದರ್ಯಾತಿಶಯಕ್ಕೆ ಮೆಚ್ಚಿ, ಈ ಸ್ತೋರಾಕಾರವಾದ ವಪ್ಪುಯುಂ ಸಂಹರಿಸಿದೆನು. ನನ್ನಂ ಸೇರಿ ಸುಖಿಸುವಳಾಗು. ಎಂದು ಮೈದಡವಿ ಸಮಾಧಾನಮಂ ಹೇಳುತ್ತಾ ಬರಲು, ಆತನ ವಿನಯಾದಿ ಗುಣಗಳಿಂ, ರೂಪಾತಿಶಯಮುಂ ಸಹ ನೋಡಿ, ಎಲ್ಲೆ ಮಹಾರಾಜನೇ ! ನಿನ್ನಿಷ್ಟವಿದ್ದಂತಾಗಲಿ, ಇಂದಿಗೆ ನಾಂ ಧನ್ಯಳಾದೆನು, ಎಂದು ಪರಮಾನಂದ ಭರಿತಳಾಗಿ ಆತನಂ ಬಿಗಿದಪ್ಪಲು, ಆ ರಾಯುಂ ಕೈಯಿಂದಾಕೆಯ ಗಲ್ಲಮಂ ಪಿಡಿದು, ಮುಖಮುಂ ಚುಂಬಿಸುತ್ತಾ, ತಾನೂ ಆಲಿಂಗಿಸುತ್ತಾ ಹೀಗೆ ಸಂತೋಷ ಚಿತ್ತರಾಗಿರುವಾಗ್ಗೆ ಇಂದೆ ನಿಂತಿದ್ದಾತನ ಚತುರಂಗಸೈನ್ಯವು ಬಳಿಯನ್ನೈದಲು, ಆ ರಮಾಮಣಿಯುಂ ಕೈಪಿಡಿದು, ತನ್ನ ವಿವ್ಯರಥಮುಂ ವಿರಿಸಿ, ತಾನೂ ಕುಳಿತು ಅಲ್ಲಿಂದ ಹೊರಟು, ತನ್ನ ರಾಜಧಾನಿಯುಂ ಸಾರಿ, ಆಕೆಯೊಂದಿಗೆ ಸಕಲ ಭೋಗಂಗಳಂ ಹೊಂದುತ್ತಾ ಇದ್ದನು. ಮೃತವಾದ ಗಂಡಭೇರುಂಡನ ಕಾಲ್ಗೆಸೆಯೊಳು ಬಿದ್ದಿದ್ದಾ ಸಂಜೀವಕನೆಂಬ ಗೂಗೆಯು, ಸಾಯದೇ ಅಲ್ಲಿಂದ ಮೆಲ್ಲಮೆಲ್ಲನೆ ಸವಿಾಪದೊಳಿಪ್ಪ ಗಿಡವಂ ಸಾರಿ, ತನ್ನ ಸ್ನೇಹಿತನು ಮೃತನಾ

ದನಲ್ಲಾ ಎಂದು ದುಃಖಿಸುತ್ತಾ ರಾತ್ರಿಯಾಗೆ ತನ್ನ ನೆಲೆಯುಂ ಬಂದು ಸೇರಿತು.

ಇದೇ ರೀತಿಯಾಗಿ ನಾವು ವಾಗ್ದಾನದಂತೆ ನಡದುಕೊಳ್ಳಲು ಬಂದೆವ್ವ, ನಿರ್ಭಾಗ್ಯನಾದ ಬ್ರಾಹ್ಮಣನಂತೆ ಆ ಮಂತ್ರಿಪುತ್ರನಿಗೆ ಯೋಗವಿಲ್ಲದಿದ್ದದ್ದರಿಂದ ತಪ್ಪಿಹೋಯಿತು. ನಿಮ್ಮ ಕೈಪಿಡಿಯುವಂತೆ ಬ್ರಹ್ಮನು ಹಣೆಯೊಳು ಬರದಿದ್ದನು. ಅದಂತಪ್ಪಿಸುವಿಕೆ ಯಾರಿಗೆ ತಾನೇ ಸಾಧ್ಯವ್ವ, ಈ ಭಾಗದೊಳು ಒಂದು ಇತಿಹಾಸವಿಹುದು, ಅದಂ ಹೇಳುವೆನು ಲಾಲಿಸಬೇಕು.

ಪೂರ್ವ ಕೃತಯುಗದೊಳು ಶೂರ ಪದ್ಮಾಸುರನೆಂಬ ಮಹಾರಾಕ್ಷಸನೊರ್ವಂ ಈಶ್ವರ ವರಂಗಳಂ ಹೊಂದಿ, ಲೋಕವೊಗಾರೂ ಲಕ್ಷ್ಯವಿಲ್ಲದೆ ಮಹಾ ಗರ್ವಪರ್ವತನಾಗಿ ಬಾಳುತ್ತಿರ್ದಂ . ಒಂದಾನೊಂದು ದಿನದೊಳು ಒಡ್ಡೋಲಗವಾಗಿ ಕುಳಿತಿರುವ ಕಾಲದೊಳು ಅವನ ಮಂತ್ರಿಗಳಿಂಗೊರ್ವನಾದ ಮಾಹಾ ಲಕ್ಷನೆನ್ನುವನು, ಸ್ವಾಮಿನಾ ಪ್ರಭುಗಳಿರಾ ! ನೈಮಿಶಾರಣ್ಯದೊಳು ನಮ್ಮ ಉಕ್ಕಡವೊಂದಿದ್ದುದಷ್ಟೆ ; ಅದು ವಿಧಿಯೋಗವಿಂದ ದಾವಾನಲಾವೃತವಾಗಿ ಅಡರಲ್ಲಿನವರೆಲ್ಲರೂ ಅವರ ಹಣೆಯಬರಡಂತೆ ಮೃತರಾಪರೆಂದೊರೆಯಲು. ಎತ್ತ ಪ್ರಷ್ಟನೇ ವಿಧಿಯೆಂದರೆ ಯಾರು ? ಹಣೆಯ ಬರಹಮೆಂದರೆ ವಿನು ; ಸುಳ್ಳಂ ಸಟೆಗಳಂ ಹೊಗಳುವಿರಾ : ಎಂದು ತನ್ನ ಮಂತ್ರಿಯಂ ದಿಕ್ಕರಿಸಿ ನುಡಿಯಲು ಆ ಮಂತ್ರಿಯು, ಸ್ವಾಮಿನಾ ರಾಕ್ಷಸಸಾರ್ವಭೌಮರೇ ! ಲಾಲಿಸಬೇಕು ಬ್ರಹ್ಮ ವಿಷ್ಣು ಮಹೇಶ್ವರರೆಂಬ ತ್ರಿಮೂರ್ತಿಗಳು ತಾವು ತಾವು ಒಂದೊಂದು ಅಧಿಕಾರಂಗಳಂ ಹೊಂದಿ, ನೆರವೇರಿಸುತ್ತಿರುವರ್ಷ್ಟೆ ; ಅವರೊಳು ಲೋಕಂಗಳನೆಲ್ಲವಂ ಸೃಜಿಸುವ ಅಧಿಕಾರಿಯಾದವನನ್ನೇ ವಿಧಿಯೆಂದು ಹೇಳುವರು. ಸಕಲವಸ್ತುಗಳನ್ನು ನಿರ್ಮಿಸುವ ಕಾಲದೊಳು ಆಯಾ ವಸ್ತುಗಳ ಕರ್ಮಾನುಸಾರವಾಗಿ ಅವರ ಹಣೆಯೊಳು ಅತನೇ ಬರೆಯುವನು. ಆ ಬರಹಮಂ ಹರಿಹರಾದಿಗಳಿಗೂ ಒರಸಲು ಶಕ್ತಿಸಾಲದು ಎಂದೊರೆಯಲು ಆ ಶೂರಪದ್ಮಾಸುರನು ಎಲಾ ಮೂರ್ಖನೇ ನನ್ನ ಬಳಿಯೊಳಿರ್ದು ಹಗಲೂ ರಾತ್ರಿಗಳಲ್ಲಿ ನನ್ನಸಾಹಸಂಗಳಂ ನೋಡುತ್ತಾ ಬಂದರೂ, ಇಂಥಾ ಅಜ್ಞಾನದ ಮಾತುಗಳಂ ಆಡುವಿಯಾ : ಛೀ ಛೀ ಮೂಢನೇ ! ನನಗಿಂತಲೂ ಹೆಚ್ಚಾದವರು ಯಾರಿದ್ದಾರೆ ಆ ತ್ರಿಮೂರ್ತಿಗಳ ಅಧಿಕಾರಕ್ಕಿಂತಲೂ ನನ್ನಧಿಕಾರವ್ವ ಕೀಳಾದುದೇ ಎಂದು ಕೋಪಾಕ್ರಾಂತನಾಗಿ ಹೇಳಲು, ಸ್ವಾಮಿನಾ ರಾಕ್ಷಸೇಂದ್ರರೇ ವಿಧಿಗಿಂತಲೂ ಅಧಿಕರಾರೂ ಇಲ್ಲವೆಂದೊರೆಯಲು ಒಳ್ಳೆಯದು ಈಗಲೇ ನಾಂಪೋಗಿ, ಆ ಕಮಲಾಸನನನಂಜಿಸಿ, ಬರುವೆನೆಂದು ಹೇಳಿ ಯುಕ್ತಸೈನ್ಯದೊಂದಿಗೆ ಹೊರಟು ಬ್ರಹ್ಮಲೋಕಮಂ ಸೇರಿ ಕಮಲಾಸನನ ಸದನಮುಂಸಾರಲು ತನ್ನ ಮನೆಯೊಳು ಕುಳಿತು ದರ್ಭೆಗಳಂ ಒಂದಕ್ಕೊಂದಂ ಗಂಟುಹಾಕುತ್ತಿರ್ದಂ, ಅದಂ ಕಂಡು ಇವನೇನೇ ವಿಧಿಯು ಸರ

ನುದರಿದ್ರ ಬ್ರಾಹ್ಮಣನಂತಿರುವನು. ಯುದ್ಧಮಾಡಲು ಶಕ್ತನಲ್ಲ. ಇವನಂ ವಿ
ನುಮಾಡಲೂ ಮನಸ್ಸಿಗೆ ಅಸಹ್ಯಮಾಗಿರುವದು ಎಂದು ತಿಳಿದು ಆ ಪ್ರಜಾಪತಿ
ಯುಂ ವಿನನ್ನೂ ಮಾಡಲಿಚ್ಛಿಸದೆ ಎಲ್ಫೆ ಕಮಲಸಂಭವನೇ ಇದೇಂ ನೀವಾ
ಡುವ ಕೆಲಸವೆಂದು ಕೇಳಲು ಆ ಪರನೇಷ್ಠಿಯು ಒಬ್ಬ ಪುರುಷನಿಗೂ ಒರ್ವಸ್ತ್ರೀ
ಗೂ ಗಂಟು ಹಾಕುತ್ತಿರುವೆನೆನೆ ನೀನು ಗಂಟು ಹಾಕಿದಂತೆಯೇ ನುಡಿಯುವ
ದೋ ಹಾಗಾಪರೆ ನನ್ನ ಸುಕುಮಾರಿಗೆ ಯೋಗ್ಯಂ ಗಂಡುಹಾಕೆರುಪೆ ಎನಲು
ಇವನ ಗರ್ವಭಾವವನ್ನರಿತು ನಿನ್ನ ಮಗಳಿಗೂ ಕಾಡುಹಂದಿಗೂ ಗಂಟು ಹಾಕಿ
ರುವನೆನೆ ಕೇಳಿಕುಪಿತನಾಗಿ ಎಲಾ ಮುನಿಗಾಗಿಯೇ ! ನಾನಾರೆಂದರಿತಿರುವಿ. ಗರ್ಜಿ
ಸುತ್ತಾ ಈ ಮಾತು ನಡೆಯುವದರಾವಾಗ ಎನಲು ಆರುತಿಂಗಳ ಒಳಗಾಗಿ ಎಂ
ದುತ್ತರವಿತ್ತೆಯ್ದೆ ಹಾಗದರೆ ನಿನ್ನಂ ನಿರ್ಬಲಿಯಮಾಗಿಸುವೆನೆಂದು ಗದರುತ್ತಾ ತನ್ನ
ಮನೆಯಂ ಸಾರಿ ತನ್ನ ಮಗಳಾದ ನೀಲಕುಂತಲೆಯಂ ಭದ್ರಮಾದ ಮಣಿಗವಸ
ದೊಳಿಟ್ಟು ಬಹು ಭದ್ರಮಾಗಿ ಕಾವಲನ್ನಿಟ್ಟು ಹೊರಗೆ ತನ್ನ ಆಜ್ಞೆಯಿಲ್ಲದೆ
ಒಳಗೆ ಯಾರೂ ಬರಜಾರದೆಂದು ಖಂಡಿತಮಾಗಿ, ಉತ್ತರಮಂಮಾಡಿ ತಾನೂ
ಆಗಾಗ್ಯೆ ಮೇಲು ವಿಜಾರಣೆಯಂ ಮಾಡುತ್ತಿರುವ ಕಾಲದೊಳು ಈ ರಾಕ್ಷಸಶ್ರೇ
ಷ್ಠಂಗೆ ಸರ್ವೋತ್ತಮ ಸುಂದರಿಯಾದ ಮಗಳೊರ್ವಳಿಹಳು ಅತನಿಗೂ ತನಗೂ
ಜನ್ಮವೈರಮಾಗಿರುವುದರಿಂದ ತನಗೆ ಆ ಸುಂದರಿಯಂ ಕೊಟ್ಟು ಮದುವೆ ಮಾಡೆಂ
ದರೆ, ಮಾಡಲಾರೆನೆಂದರಿತು ಸೂಕರರಾಸುರನೆಂಬ ಹಂದಿಯರೂಪಮಾಗಿರುವ ಪಾ
ತಾಳ ವಾಸಿಯಾದೊರ್ವರಾಕ್ಷಸ ಶ್ರೇಷ್ಠಂ ದೈವದೇ ಆ ತರುಣೀ ಮಣಿಯಂ ನಾನೆಂ
ತು ಸಾರುವೆನು ನನಗಿಂತಲೂ ಮಾಯಾ ಶಕ್ತಿಯೊಳು, ಅವಂಗಟ್ಟಿಬ್ಬಗನು ಶಕ್ತಿಸಾಹ
ಸಂಗಳೊಳು ಸಮಾನನಾಗಿಹನು. ಯುದ್ಧಮಾಡಿ ಜಯಿಸುವೆನೆಂದರೆ ಬಹು ಶ್ರಮಸಾ
ಧ್ಯವ್ಯ ಎಂದು ಅನೇಕ ಪ್ರಕಾರವಾಗಿ ಚಿಂತಿಸುತ್ತಾ, ಕಡೆಯೊಳು ಒಂದುಪಾಯ
ಮುಂ ಯೋಚಿಸಿ, ಭೂಲೋಕಕ್ಕೆ ಬಂದು ಒಂದಡವಿಯೊಳು ಸೇರಿ ಅಲ್ಲಿ ಭೂಮಿ
ಯೊಳು ಮಾರ್ಗಮುಂ ತೋಡುತ್ತಾ ಮೇಲೆ ಕಾಣದಂತೆ ಈ ಶೂರ ಪದ್ಮಾಸುರನ
ಮಂದಿರದೊಳು ಸಾರಿ ಅಲ್ಲಿಂದ ಆ ಸುಂದರೀಮಣಿಯು, ಅಂತಃಪುರಕ್ಕೆ ದಾರಿ
ಯಂ ತೋಡಿ ಸಮಯನಿರೀಕ್ಷಣೆಯಿಂದಿರ್ದ ಆ ರಮಣಿ ನಿದ್ರಾವಶಳಾಗಿ ಮಲ
ಗಿರುವ ಕಾಲದೊಳು ಒಂದು ಅಂತಃಪುರವುಂ ಹೊಕ್ಕು ಆಲ್ಲಾಡದಂತೆ ಕಾಂತೆಯುಂ
ಎತ್ತಿಕೊಂದು ತನ್ನ ಕೋರೆದಾಡೆಯಿಂದ ಮಣ್ಣಂ ಕೆದರಿ ತಾಂ ಮಾಡಿದ ಮಾರ್ಗ
ಮುಂ ಮುಚ್ಚಿಕೊಳ್ಳುತ್ತಾ ಹೀಗೆಯೇ ಕಡೆಗೆ ತನ್ನ ವಾತಾಳಲೋಕಮುಂ ಸಾರಿ
ಆ ಸುಂದರಿಯುಂ ವಿಧಿಯುಕ್ತವಾಗಿ ಹೊಂದಿ ಸುಖಿಯಾಗಿದ್ದನು. ನಿನ್ನೆಯ ದಿನಕ್ಕೆ
ಆರುತಿಂಗಳು ಅವಧಿಕಾಲವು ಮುಗಿದುಹೋದುದು ಇನ್ನಾ ಬ್ರಾಹ್ಮಣನನ್ನು ಹಂಗಿ
ಸುವೆನೆಂಬ ಅಹಂಕಾರದಿಂದ, ತನ್ನ ಮಗಳ ಅಂತಃಪುರದೆಡೆಗೆ ಬರುವಾಗ್ಯೆ

ಅಲ್ಲಿ ಕಾವಲಿನ ಭಟರೆಲ್ಲಾ ದೀನವದನರಾಗಿರುವದಂ ಕಂಡು ಸಂಶಯ ಚಿತ್ತನಾಗಿ ಒಳಹೊಕ್ಕು ನೋಡುವಲ್ಲಿ ತನ್ನ ಮಗಳು ವಾಯುವಾಗಿಹುದಂ ಕಂಡು ಅತ್ಯಾಶ್ಚರ್ಯ ಕೋಪಾಕ್ರಾಂತನಾಗಿ ತಾನೇ ಮೊದಲಾದ ತನ್ನ ಪರಿವಾರವೆಲ್ಲವೂ ಧೂಮಾಂಡಲವೆಲ್ಲವಂ ಹುಡಿಕೆ ಬಿಂದು ಬಿಂಡಾಗಿ, ಅಯ್ಯೋ ನಾಂ ಮಾಡಿದ ಪ್ರತಿಜ್ಞೆಯಲ್ಲಿ ಈ ಸಂಕಟವೊಂದು ಪ್ರಾಪ್ತಿಯಾದುದೇ ಎಂದು ಚಿಂತಿಸುತ್ತಾ ಅಂತಯೇ ಕೋಪಾಕ್ರಾಂತನಾಗಿ ಮಂತ್ರಿಯಂ ಕರೆಯಿಸಿ, ಎಲೈ ಮಂತ್ರಿಯಾದ ಮಾಜಾರ್ಜಲಾಕ್ಷನೇ ; ಮೋಸಗಾರನಾದ ಕಮಲಾಸನನೇನಾದರೂ ನನ್ನಕುವರಿಯಂ ಅಪಹರಿಸಿಕೊಂಡು ಹೋಗಿರುವನೋ, ವಿನೋ ಅವನಂ ಹಿಡಿತಂದು ಬಂಧದೊಳಿರಿಸೆನಲು ಆ ಬಿಡಾಲಾಕ್ಷನು ಸ್ವಾಮಿನಿ ಶಾಂತಿಯಂ ತಾಳಿ ಯೋಚಿಸಿರಿ, ನಮ್ಮ ಕುವರಿಯಂ ಅಪಹರಿಸಿಕೊಂಡೊಯ್ಯುವದರಿಂದ ದೇವತೆಗಳಿಗೇನು ಪ್ರಯೋಜನವು ಆ ಪರಮೇಷ್ಠಿಯ ಕಾರ್ಯಮಂತಾದ್ದಲ್ಲವು, ಯೋಚಿಸಬೇಕೆಂದು ಪೇಳಲಾ ಮಾಜಾರ್ಜಲಾಕ್ಷನ ಮಾತಂ ನಂಬಿ ಪಾತಾಳಲೋಕಕ್ಕೆ ಜಾರರಂ ಕಳುಹಿ ಹುಡಿಕೆಸಲು ಸೂಕರಾಸುರಂ ಮಾಡಿದ ಕಾರ್ಯವೆಂದು ತಿಳಿದು ಅಯ್ಯೋ ನಾನೆನಿತು ಸಾಹಸವುಂಟಾಡಿ ಭದ್ರಪಡಿಸಿದ್ದರೂ ಆ ವಿಧಿಯ ಬಲವೇ ಪ್ರಬಲವಾಗಿ ಇಂತಾದುದಲ್ಲಾ ವಿಧಿಯಂ ವಿಚಾರುವದಕ್ಕೆ ದುರ್ಘಟವೆಂಬುವದೇ ಸತ್ಯಂ ಎಂದು ತಿಳಿದುಕೊಂಡನು.

ಹೀಗೆಯೇ ನನ್ನ ವಿಧಿಯೂ ನಿಮ್ಮ ಕೈಯ್ಯಂ ಸಾರಬೇಕೆಂದಿದ್ದದ್ದರಿಂದ ಆ ಮಂತ್ರಿಪುತ್ರನಂ ಹೊಂದಬೇಕೆಂದು ನಾವು ಮಾಡಿದ ಪ್ರಯತ್ನವೂ ಹೀಗೆ ಫಲಿಸಿತು ಎಂದು ಪೇಳುವಾ ರಾಜಾತ್ಮಜೆಯಾದ ಗುಣವತಿಯ ಮಾತುಗಳಿಗೆ ಮೆಚ್ಚಿ, ಆ ನಾಲ್ವರೊಂದಿಗೆ ಸೇರಿ ರತಿಸುಖ ಸಾಮ್ರಾಜ್ಯವನ್ನಾಳುತಾ ಸುಖವಾಗಿದ್ದನು.

ಹೀಗಿರುತ್ತಾ ಕೆಲವುಕಾಲಕ್ಕೆ ಈ ನಾಲ್ವರೊಳು ರಾಜಕುಮಾರಿಯಾದ, ಗುಣವಂತೆಯೆಂಬ ರಮಾಮಣಿಗೆ, ಗರ್ಭೋತ್ಪತ್ತಿಯಾಗಲು ವಿಕ್ಕ ಮೂವರೊಂದಿಗೆ ರಾಯಂ ಆಕೆಗೆ ಸಂತೋಷಗೊಳಿಸುತ್ತಾ ಬರಲು, ಆಕೆಯ ಗರ್ಭಂ ವೃದ್ಧಿಯು ನ್ನೈದಿ ನವಮಾಸಂ ತುಂಬಿ ಗಂಡುಮಗುವು ಜನನವಾಗೆ, ಇದಂ ಕಾಣುತ್ತಾ ರಾಜನಂದನಂ ಅಮುಂದಾನಂದ ತುಂದಿಲನಾಗಿ ಪುರೋಹಿತನಂ ಜೋಯಿಸನಂ ಸಹ ಕರೆಯಿಸಿ. ಪುತ್ರೋತ್ಸವಮಂ ಮಾಡಿಸಿ, ಜಾತಕಮಂ ಬರೆಯಿಸಲು, ಆ ಜೋಯಿಸಂ ಜಾತಕಸ್ಥಿತಿಗ್ರಹಂಗಳ ಬಲಾಬಲಮಂ ನೋಡಿ ಸ್ಪುಟಗ್ರಹಂಗಳಂ ಮಾಡಿನೋಡಲು, ಜನಿಸಿದಾಮಗುವಿಗೆ ಬಹುತರಂಗಳಾದ, ಕೇಡುಗಳು ಪ್ರಾಪ್ತಿಸುವವು, ಕಾರಣಾಂತರಂಗಳಿಂದ, ಇವು ಪರಿಹರಂಗಳಾಗುವವು ಅನಂತರ ಈ ಬಾಲಕಂಗೆ ಜಾತಕವಂ ಬರೆಯಬೇಕಾಗುವದು, ಈಗ ಬರೆಯಲಾಗದೆಂದು, ಹೇಳಿ.

ವಿತಕಾಸಾಲಕೌಶತ್ರೂ ರಾಜಾಖಡ್ಗಧರಸ್ತಥಾ ॥ ದೈವೇನಬಲವಾ
ಪ್ನೋತಿಜಾತಸ್ಯಮರಣಂಧ್ರುವಂ ॥

ಈ ಬಾಲಕಂಗೆ ತಂದೆತಾಯಿಗಳೂ, ಪಾಲಕರಾದವರೂ ಸಹ ಶತ್ರುಗಳಾ
ಳಾಗುವರು ಅರಸು, ಕೃಪಾಣ ಪಾಣಿಯಾಗಿ ಶಿರವಂ ಛೇದಿಸಬೇಕೆಂದು, ಸಿದ್ಧನಾ
ಗಿರುವನು, ದೇವಿಯು ಬಲಿಯುಂ ತೆಗೆಮುಕೊಳ್ಳಬೇಕೆಂದು ಬಯಸುತ್ತಾ ಇರುವಳು
ಇದರ ದೆಸೆಯಿಂದಲ್ಲದೆ, ಜನನಮಾತ್ರದಿಂದ ಮರಣವು ಸಿದ್ಧವಾಗಿಯೇ ಇರುವ
ದೆಂಬ ಅರ್ಥಸಂಯುಕ್ತಮಾದ, ಶ್ಲೋಕಮಂಬರೆದಾಜ್ಞೋಯಿಸಂ, ಈ ಪುರುಷನ
ಕೈಗೆ ಕೊಡಲು, ನೋಡುತ್ತಾ ಪುಷ್ಕರಂ, ಪರಮಾಶ್ಚರ್ಯ ಮಗ್ನ ಹೃದಯನಾಗಿ.
ದೈವಯೋಗವು, ಎಂತಿರುವದೋ ಇದುತಿಳಿಯಲು ಯಾರಿಗೂ ಸಾಧ್ಯವಿಲ್ಲ;
ಮುಂದೆಂತಿಹುದೊ ? ವಿನಾಗುವದೊ ! ಎಂದು ಯೋಚಿಸುತ್ತಾ, ಒಳ್ಳಿತು, ಈ
ಶ್ಲೋಕವನ್ನು ಈ ಶಿಶುವಿನ ಕಂಠದಲ್ಲಿಯೇ ಕಟ್ಟುವೆನೆಂದು, ಅದಂ ಸುತ್ತಿ ತಾತ
ಯೊಳು ಹಾಕಿ ಅದಂ ಒಂದು ದಾರದೊಳು ಬಂಧಿಸಿ ಆ ಶಿಶುವಿನ ಕೊರಳೊಳು
ಕಟ್ಟ್ಯದಂ.

ಹೀಗಿರುತ್ತಾ ಗುಣವತಿಯು ತಂದೆಯ ಮಂತ್ರಿಗಳಲ್ಲಿ ಎರಪನೆಯವನಾದ
ಜಯಸೇನನೆಂಬುವನು ತನ್ನ ಮಗನಿಗೆ ಕನ್ಯೆಯಂ ನೋಡಿಕೊಂಡು ಪೋಗುವ
ಕಾರ್ಯಾರ್ಥಿಯಾಗಿ, ಈ ಪುಷ್ಕರನು ವಾಸಮಾಡುತ್ತಿರುವ, ಪುರದ ಮಂತ್ರಿಯ
ಮಗಳಂ ವಿಚಾರಿಸುವಪಕ್ಕಾಗಿ ಬಂದಿದ್ದವನು ದಾರಿಯೊಳು ಬರುತ್ತಿರಲು ನೋ
ಡಿದಾ ಮಂತ್ರಿಸಂದನೆಯಾದ ಚಂದ್ರಮತಿಯು ಭಯಚಕಿತ ಹೃದಯಳಾಗಿ ಅತಿಭ
ರದೊಳು, ಮನೆಯಂ ಸಾರಿ ಬಾಗಿಲ್ಗಳಂ ಭದ್ರಪಡಿಸಿ, ಒಳಹೊಕ್ಕು ಆ ಮೂವ್ವ
ರಂ ಕರೆದು, ತೋರುತ್ತಾ, ನೋಡಿದಿರಾ ದಾರಿಯಲ್ಲಿ ಹೋಗುವ ಇರ್ವರಂ
ಮುಂಗಡೆಯೊಳು ಹೋಗುವನೇ ನಮ್ಮ ತೌರೂರಿನ ಮಂತ್ರಿಯಾದ, ಜಯಸೇ
ನನು, ಅವನ ಹಿಂಗಡೆಯೊಳು ಹೋಗುವನೇ ಆ ಮಂತ್ರಿಪುತ್ರನಾದ ಸೋಮದ
ತ್ತನು, ಎಂದು ಪೇಳಲು, ಎಲ್ಲರೂ ನೋಡಿ ತಮ್ಮ ಪತಿಯಾದವನಿಗೂ ತೋರಿ
ಸಲು, ನಿಜಮೆಂದರಿತು ಎಲ್ಲರೂ ಮಹಾ ಭಯಮಂ ತಾಳಿ, ಈ ಇರ್ವರೂ ಇಲ್ಲಿ
ಗೆ ಬರಲು ಕಾರಣಮೇನೋ, ನಮ್ಮಂ ಹುಡುಕುತ್ತ ಬಂದಿದ್ದಾರೆಯೋ ವಿನೋ
ಎಂದು ಚಿಂತಿಸುತ್ತಾ ಈ ಪರಿಯಂ ಗುಣವತಿಯೊಳು ಯೋಚಿಸಲು, ಆ ಗುಣವ
ತಿಯು, ನಾನು ಅಂತೆಯೇ ಯೋಚಿಸುವೆನು ತಮ್ಮ ತಂದೆಯ ಪ್ರೇರಣೆಯಿಂದ
ಲ್ಲವೆ ಈ ಪುರಮಂ ಸಾರಲು ಕಾರಣಮಿಲವ್ವ ಆ ರೀತಿಯೊಳಲ್ಲದಿರಲು ಈ
ಮಂತ್ರಿಸುತನಾದ ಸೋಮದತ್ತಗೆ ನಾವು ಮೋಸಮಂ ಮಾಡಿದೆವೆಂದರಿತು ಆ
ಕ್ರೋಪಾವೇಶದಿಂದ ಈ ನಿಧಮಾಗಿ ಹುಡುಕುತ್ತಾ ಬಂದಿರುವನೋ ವಿನೋ ಯಾ
ವದೂ ತಿಳಿಯದು, ಎಂದು ಚಿಂತಿಸುತ್ತಿರುವ ಗುಣವತಿಯನ್ನೂ, ನಿಕ್ಕ ಮುನ್ನ

ರನ್ನೂ, ಕರೆದು ರಹಸ್ಯದೊಳು ಕುಳಿತು, ಭಯಭರಿತನಾದ ಆ ಪುಷ್ಕರನು ಹೀಗೆಂದು ಅವರೊಳು ನುಡಿಯಲಾರಂಭಿಸಿದನು. ಎಲೈ ಕಾಂತಾವಣಿಗಳಿರಾ! ನಾವೀ ಪುರದೊಳು ಇದ್ದ್ದೇ ಆದರೆ ನಿಮ್ಮ ಮಂತ್ರಿಯೂ, ಆತನ ನಂದನನೂ, ನಮ್ಮಂ ನೋಡಿದೆ ಇರಲಾರರು, ಕಂಡಕೂಡಲೆ ಈ ಪುರಾಧೀಶ್ವರಂಗೆ ತಿಳುಹಿ ನಮ್ಮಂ ನಿರ್ಬಂಧಿಸಿ ಸೆರೆಯೊಳು ಇಡುವಂತೆ ಮಾಡದೆ ಇರುವದೇ ಇಲ್ಲ, ಅಲ್ಲದೆ ಈ ಸುದ್ದಿಯಂ ನಿಮ್ಮ ತಂದೆಗೆ ಮುಟ್ಟಿಸದೆ ಬಿಡನು. ಆತನ ಆಜ್ಞಾನುಸಾರವಾಗಿ ಈ ರಾಯನ ನಿರ್ಬಂಧದಿಂದ ನಿಮ್ಮ ರಾಜನ ಸನ್ನಿಧಿಯಂ ಹೊಂದಿಸುವನು. ರಾಜನೂ, ಮಂತ್ರಿ, ಸೇನಾಪತಿ, ವೈಶ್ಯವರ್ಯರೆಲ್ಲರೂ ಪರಮಾಪ್ತರಾದ್ದರಿಂದಲೂ, ನೀವು ನಾಲ್ವರೂ ಅವರ ಉದರ ಸಂಜಾತರಾದ್ದರಿಂದಲೂ, ಹೇಗೂ ನಿಮಗೇನೂ ಅಪಾಯಮುಂ ಮಾಡದೆ ಮನೆಗಳಂ ಹೊಗಿಸುವರು. ನಾನಾದರೋ ಅನ್ನಕ್ಕನು, ನಿಮ್ಮೂರೊಳು ಭಿಕ್ಷಾವೃತ್ತಿಯಿಂದ ಜೀವಿಸುತ್ತಿದ್ದವನು, ಈ ದುಷ್ಕಾರ್ಯವನ್ನು ಇಂತಾವನು ಮಾಡಿದನಲ್ಲಾ, ಎಂಬರೋಷನಂ ತಾಳಿ ನನಗೆ ಮರಣದಂತೆಗೆ ಸಮಾನವಾದ ದಂಡನೆಯಂ ವಿಧಿಸುವರು. ಅಂಥಾ ಅವಸ್ಥೆಯುಂ ತಾಳುವದಕ್ಕಿಂತಲೂ, ಕಾಡಿನೊಳು ಕಂದಮೂಲಾದಿಗಳಂ ತಿನ್ನುತ್ತಾ ಜೀವಿಸಿರುವೆನು. ನಿಮಗೂ ನನಗೂ ಋಣಾನುಬಂಧ ವಿನಾವರಿಗೆ ಸಾಕಾದುದೋ ಏನೋ ನಾನು ಎಲ್ಲಾದರೂ ತಲೆತಪ್ಪಿಸಿಕೊಂಡು ಹೋಗುವೆನು, ನೀವು ನಿಮ್ಮ ಪುರಮಂ ಸಾರಿ, ನಿಮ್ಮ ನಿಮ್ಮ ಮನೆಗಳೊಳು ಸುಖವಾಗಿರಿ ಎಂದು ಹೇಳುವ ತಮ್ಮ ಪತಿವಾಕ್ಯಂಗಳು ಶ್ರುತಿಗಳಿಗೆ ಶೂಲಂಗಳಂತಾಗೆ ನಾಲ್ವರೂ ಕಂಗಳೊಳು ಬಾಷ್ಪಂಗಳಂ ತುಂಬಿ ಎಲೈ ಪ್ರಾಣೇಶನೇ | ಲಾಲಿಸು ನಿನ್ನಂ ಬಿಟ್ಟು ನಾವು ನಿಮಿಷಮಾದರೂ ಇರಲಾರೆವು, ತಂದೆತಾಯಿಗಳಂತೊರೆದುಮಹತ್ಪದವಿಯನ್ನಗಲಿ, ಬಂಧುಮಿತ್ರರನೊಲ್ಲದೆ, ನೀನೇ ಗತಿಯೆಂದೂ ನಮ್ಮ ಜಾಗದಭಗವಂತನೆಂತಲೂ ನಂಬಿ, ನಿನ್ನೊಡನೆ ಬಂದೆವ್ವ. ಸುಖಕ್ಕೆ ಮುಖ್ಯ ಕಾರಣಭೂತನಾದ ನೀನಿಲ್ಲದಿರಲು ನಿಃಕ್ಕಾದನೆಲ್ಲ ಕಷ್ಟಂಗಳಾಗಿರುವವೇ ಹೊರತು ಸುಖಮೆಂದು ತೋರುವದೇ ಇಲ್ಲವ್ವ. ನಿನ್ನ ಜೊತೆಯೊಳೇ ನಾವ್ರೂ ಬರುವೆವ್ವ, ಆಗ ಕಷ್ಟಂಗಳೆಲ್ಲಾ ಸುಖಂಗಳಂತಯೇ ಕಾಂಬುದು. ಒಂದುವೇಳೆ ನಮ್ಮ ತಂದೆಗಳ ಬಳಿಯಂ ನಾವು ಸೇರಿದರೆ ಆ ಮಂತ್ರಿನಂದನಂ ಕೆಡಿಸದೆ ಬಿಡುವನೆ, ಇದರಿಂದ ಸ್ವೈರಿಣಿಯರೆಂಬ ದುರ್ನಾಮಂ ನಮಗೆ ಬಿಪಲಾರದಷ್ಟ್ಟ, ಈ ಅಪವಾದ ಶಂಕೆಯಿಂದವರು ನಮ್ಮನ್ನೇನು ಮಾಡುವರೋ, ಇದಕ್ಕಿಂತಲೂ ಮರಣವೇ ಸುಖಕರವಾದದ್ದು, ನೀನೊಂದುವೇಳೆ ದಯೆಯುಂ ತೊರೆದು ನಮ್ಮ ದುರದೃಷ್ಟಬಲದಿಂದ ಕೈಬಿಡುವವನಾದರೆ ನಮಗೆ ಮರಣವೇ ಪರಮಸುಖವಾದ ಪದವಯ್ಯ ಇದರೊಳೇನೂ ಸಂದೇಹವಿಲ್ಲವ್ವ, ಎನಲಾ ಪುಷ್ಕರರಾಯಂ ಗುಣವತಿ

ಯನ್ನು ಕುರಿತು, ಪ್ರಾಣಕಾಂತೆಯೇ! ಈ ಮೂರು ಮಂದಿಯೂ ನನ್ನೊಂದಿಗೆ ಬಂದರೂ ಬರುವರು, ನೀನು ಶಿಶುವಂ ಹೆತ್ತು ಹತ್ತುದಿನಗಳಾಗಿರುವದು ಶಕ್ತಿಯೂ ಸಾಲದು, ಎಳೆ ಕಂದನಂ ಕಟ್ಟಿಕೊಂಡು ಕಂಡಕಡೆಯೊಳು ಸಂಚರಿಸಲು ಶಕ್ಯವಲ್ಲ ಆದರ್ಿಂದ ನಿನ್ನ ತಂದೆಯ ಮನೆಯಂ ಹೊಂದಿ, ಮಗುವನ್ನು ನೋಡುತ್ತಾ ಸುಖಿಸುವಳಾಗು, ಎನಲಾ ಗುಣವತಿಯು ನನಗೆ ಜಾತಾ ಶೌಚ ಸ್ನಾನವಾಯು. ಹುಟ್ಟಿಸಿದವನಾರೋ ಅವನೇ ಆ ಮಗುವಂ ಕಾಪಾಡಿಕೊಳ್ಳುತ್ತಾನೆ, ನಿರ್ಮಿಸಿದ ಭಗವಂತನು ಮನಗಳಂ ಕಾಯ್ವುವನಲ್ಲ. ಶಿಶುವಿನ ಚಿಂತೆಯೇ ನನಗಿಲ್ಲ. ನೀವು ಚನ್ನಾಗಿದ್ದು ಮಕ್ಕಳ ಸುಖವಂ ಹೊಂದುವ ಯೋಗವೂ ಇದ್ದರೆ ಮುಂದೇತಕ್ಕಾಗಬಾರದು, ನಿಮ್ಮಿಚ್ಛಾನುಸಾರಿಯಾಗಿ ನಿಮ್ಮ ಚರಣಸೇವೆಯಂ ಮಾಡಿ ಧನ್ಯಳಾಗಿ ಕೆಂಬ ಕುತೂಹಲಂ ಪ್ರಬಲಗೊಂಡಿರುವದು. ಈ ನನ್ನ ಕೋರಿಕೆಯನ್ನು ಮಾತ್ರ ಈಡೇರಿಸಿಕೊಟ್ಟರೆ ನಾಂ ಧನ್ಯಳಾದೆನು, ಹಾಗೆ ಮಾಡದೆ ಕೈತೊರೆದವರಾದರೆ, ಈ ಭೂಮಿಯೊಳು ಪ್ರಾಣ ಧಾರಿಣಿಯಾಗಿ ನಿಮಿಷಮಾತ್ರವೂ ಬೀಳಿಸಲಾರೆನು, ದುರ್ಮರಣವನ್ನೇ ಹೊಂದುವೆನು, ಈ ಅರ್ಥದೊಳು ಸಂದೇಹವಿಲ್ಲವೆಂದು ಮನಃಪೂರ್ತಿಯಾಗಿ ನುಡಿಯುವ ಕಾಂತಾಮಣಿಯ ಅಭಿಪ್ರಾಯಮಂ ಅಂಗೀಕರಿಸಿ, ರಾತ್ರಿಯಾಗೆ ಎಲ್ಲರೂ ಭೋಜನಾದಿಗಳಂ ಮಾಡಿ, ಪ್ರಯಾಣೋನ್ಮುಖರಾಗಲು, ಆ ಪುಷ್ಕರರಾಯನು ಆ ಬಾಲಶಿಶುವಂ ಬಿಟ್ಟು ಹೋಗಲು, ಮನದೊಳಂದುಕೊಂಡು ಹಾಗೆಯೇ ಚಿಂತಿಸಿ, ಹತ್ತಿಬರುವ ದುಃಖವಂ ಅಂತೆಯೇ ನುಂಗಿ, ಬಂದು ಓಲೆಯೊಳು,-

ಯೋವೇಗರ್ಭಗತೇಸ್ಯಾವಿ ವೃತ್ತಿಂಕಲ್ಪಿತವಾನ್ಪ್ರಭುಃ । ತೇಷಾಮಪಿ
ವಿನಾಶಾಯ ಕಿಂವಾಸುಪ್ರೋಷಿತವಾನ್ಮೃತಃ ॥

ಯಾವ ಭಗವಂತನು ಗರ್ಭಗತನಾಗಿರುವಾಗ ನಿನಗೆ ಜೀವನವನ್ನು ಕಲ್ಪಿಸಿದವನೋ, ಅವನೇ ಮುಂದೂ ನಿನಗೆ ಎಲ್ಲಾ ವಾಗರ್ಥಗಳಂ ನೆಲಗೊಳಿಸಿರುವನು ಅಶನೇನು ಮಲಗಿರುವನೋ ಅಲ್ಲದೆ ಮೃತನಾಗಿದ್ದಾನೋ, ಎಂಬ ಅರ್ಥಗರ್ಭಿತವಾದ ಶ್ಲೋಕವನ್ನು ಅದರೊಳು ಬರೆದು ಶಿಶುವಿನ ಹಣೆಯೊಳು ಕಟ್ಟಿ ಅದಂ ತಲೆಸವರಿ, ಕಣ್ಣೀರು ತುಂಬಿದವನಾಗಿ ಬಿಟ್ಟು ಹೋಗಲು, ಕಾಲು ಬಾರದೆ ತಿರುಗಿ ತಿರುಗಿ ನೋಡುತ್ತಾ ಮತ್ತಲುವಾರ್ಗವಾಗಿ ಹೊರಟುಬಂದು ಹೊಸಗೆ ಸೇರ್ದಲು, ಆ ಶಿಶುವಿನ ತಾಯಿಯಾದ ಗುಣವತಿಯು ಆ ಮಗುವಂ ಬಿಟ್ಟು ಹೋಗಲಾರದೆ, ಎತ್ತಿ ತೊಡೆಯುನೇಲೆ ಇಟ್ಟುಕೊಂಡು, ಮುಖವನ್ನಾಘ್ರಾಣಿಸುತ್ತ, ಅಯ್ಯೋ ಕಂದನೇ ಈಕಾಲಕ್ಕೆ ನಿನಗೆ ಬಿಕ್ಕಿಲ್ಲದ ಸ್ಥಿತಿಬಂದುದೇ, ಪಾಪಿಗಳಾದ ನನ್ನುದರದಲ್ಲಿ ಜನಿಸಿದ ಕ್ಕೆ ಇದೇ ನಿನಗೆ ಫಲಂ ಎಂದು ಗಟ್ಟಿಯಾಗಿ ಬಿಕ್ಕಿ ಬಿಕ್ಕಿ ಅಳುತ್ತಾ ಅಂತೆಯೇ ಹೊತ್ತಾಡುವೆಂದೂ, ಪತಿಗೆ

ಕೋಪಂ ಬರುವುದೆಂತಲೂ ಚಿಂತಿಸಿ, ಮೊಗುವಿಗೆ ಕೊಟ್ಟಿತುಂಬಾ ಮೊಲೆಯು ನ್ನುಣಿಸಿ, ಮೃದುವಾಗಿ ಹಾಸಿ ಹೊದ್ದಿಸಿ, ಮೈದಡವಿ, ಗಲ್ಲಮಂ ಪಿಡಿದು ಮುತ್ತಿಟ್ಟು, ಆ ಶಿಶುವಿನ ತಲೆಕೆಳಗೆ ದಿವ್ಯರತ್ನಾಭರಣವೊಂದನ್ನಿಟ್ಟು, ದೈವವೇ ಹಾ ನಿನ್ನ ವಿಲಾಸವಿಂತಿರ್ದುದೇ ? ಎಂದು ಶೋಕಿಸುತ್ತಾ, ಅಲ್ಲಿಂ ಹೊರಡು ಮುಂದರಿಯಲು ನಡೆಯೆ ಕಾಲು ಬಾರದೆ ಹಿಂತಿರುಗಿ ಬಂದು ಬಂದೂ ಮಗುವಂ ನೋಡಿ ನೋಡಿ, ಬಿಕ್ಕಿಬಿಕ್ಕಿ ಅಳುತ್ತಾ ಅಂತೆಯೇ ತಾನೂ ಘತಿಯಂ ಹಿಂಬಾಲಿಸೆ ನಿಂತನುವ್ವರೂ ಆ ಶಿಶುವಂ ಬಿಟ್ಟು ಹೋಗಲಾರದೆ, ಚಿಂತಿಸುತ್ತಾ ಅಕೆಯ ದಾರಿಯನ್ನನುಸರಿಸಲು, ದಾದಿಯಗೂ ಅಂತೆಯೇ ನಡೆದುಬರಲು, ಎಲ್ಲರೂ ಒಂದಾಗಿ ಅಲ್ಲಿಂ ಮುಂದರಿದು ಹೋದರು ಎಂದು ಹೇಳಿದಾ ಕಲಾವತಿಯ ಬುರುಕೆಯು, ಎಲೈ ರಾಜೇಂದ್ರನೇ ಎರಡನೆ ಯಾಮವು ತೊಲಗಿದುದು, ನಾನಾದರೋ ವಿಶ್ರಾಂತಿಯನ್ನು ತಾಳಲು ಬಯಸಿಹೆನು ಆಜ್ಞೆಯಾದರೆ ವಿಶ್ರಮಿಸಿಕೊಳ್ಳುವೆನೆನಲು, ರಾಯಂ ಅಂತೆಯೇ ಮಾಡೆನೆ ಆ ಬುರುಕೆಯು ಸುಮ್ಮನಾದುದು.

ಅನಂತರಮಾ ವಿಕ್ರಮಾರ್ಕಮಂಡಲೇಶ್ವರನು, ಭೇತಾಳನಂ ನೋಡಿ ನಸು ನಗೆಯೊಳು ಕಲಾವತಿಯ ಕಂಚುಕನುಂ ಸಾರೆಂದು ಸಂಜ್ಞಾಮಾತ್ರದಿಂ ಹೇಳಿ, ಎಲೆ ಕಲಾವತಿ ತೊಟ್ಟಿರುವ ನನ್ನ ಕುಪ್ಪುಸವೇ ಕೇಳು ನಿನ್ನ ಯಜಮಾನಿಯು ಮಾತಾಡದೆ ಮೌನಮಂ ತಾಂಬರುವಳು, ನನಗಾದರೆ ನಿದ್ರೆಬಾರದೆ ಹೊತ್ತು ಕಳೆಯುವುದು ಅತಿದುಸ್ತರವಾಗಿರುವುದು ನೀನಾದರೂ ದಯವಾಡಿ ನನಗೊಂದು ಯಾಮದವರಿಗೂ ಒಂದು ಕಥೆಯಂ ಹೇಳಿ, ಹೊತ್ತಂ ಹೋಗುವಾಡೆಂದಾಜ್ಞಾಪಿಸಲು, ಆ ಕ್ಷಣಮೇ ಭೇತಾಳನು ಕಲಾವತಿ ತೊಟ್ಟಿರುವ ಕುಪ್ಪುಸದೊಳು ಸೇರಲು ತೊಪ್ಪ ಕುಪ್ಪುಸಂ ಪಟ್ಟನೆ ಬಿಗಿಯೆ, ನಾಚಿದವಳಾಗಿ ಯಾಕಾಂತಯು ಎಷ್ಟುಬಾರಿ ಅದಂ ಸೇರಿಸಿ ಕಟ್ಟಲಿಕ್ಕೆ ಯತ್ನಿಸಿದರೂ, ಅದು ಕೈಸಾರದೆ ಹೋಗಲು, ಅದರವೇಲೆ ಸಿಟ್ಟು ಬಂದು ಬಿಚ್ಚಿ, ದೂರದೊಳು ಬಿಸಾಡಲು ಆಗಲಾ ಕುಪ್ಪಸಂ 'ಕಥೆಯಂ ಹೇಳಲಾರಂಭಿಸಿದುದೆಂಬಲ್ಲಿಗೆ ಕರ್ನಾಟಕಭಾಷಾವಚನರಚಿತ ಸೌಂದರ್ಯಾದ್ಭುತರೂಪೀ ಚಿತ್ರ ಬೃಹತ್ಕಥಾಮಂಜರಿಯೊಳು ಕಲಾವತಿಯ ಅಹಂಕಾರ ಭಂಗವೆಂಬ ಮೂರನೆ ಭಾಗದೊಳು ಎರಡನೆ ಯಾಮದ ಕಥಾ ವಿರಾಮವಾದುದು.

ಕಲಾವತೀ ಕಂಚುಕವು ಮೂರನೆ ಯಾಮದಲ್ಲಿ ಹೇಳುವಕಥೆ.

ಎಲೈ ಭೂಭಂಛಲಲಾಮನೇ ! ಕೇಳು ಒಂದಾನೊಂದು ನಗರದೊಳು ಒಬ್ಬ ಬಿಸ್ತರವನಿದ್ದನು. ಆತನು ಜೀವನಕ್ಕಾಗಿ ವಿಾನುಗಳಂ ಹಿಡಿಯುವ ಕಾರ್ಯಮಂ ಮಾಡುತ್ತಿರುವನು, ಎನಲಾ ಕಲಾವತಿಯು, ಅಯ್ಯೋ ನನ್ನ ಕಂಚುಕವೇ! ಮಹಾಪಾಪಿಷ್ಠರಾದವರು ಕತ್ತ ಮಗುವಂ ವಿಕಾರಕ್ಕಾಗಿ ಬಿಟ್ಟು ಹೋದರ

ಲ್ಲಾ ; ಅವರಗತಿ ಯೇನಾದುವೆಂಬುದಂ ಹೇಳದೆ, ಈ ಕೆಲಸಕ್ಕೆ ಬಾರದ ವಿಾನು ಹಿಡಿಯುವನವನ ಕಥೆಯನ್ನೇಕೆ ಹೇಳಲಾರಂಭಿಸಿದೆ ಎನಲು, ಆ ಕಂಚುಕವು ಎಲೌ ಕಲಾವತಿಯೇ ನಾನಾ ಕಥೆಗಳಂ ಹೇಳುವದಕ್ಕೆ ನಿನ್ನ ಆಜ್ಞಾಧೀನಳಲ್ಲ, ಸ್ವತಂತ್ರಳಾದವಳು ಮೊದಲೆ ಅಲ್ಲವು, ಆ ಕಥೆಯಂ ಹೇಳೆಂದಾಜ್ಞಾಪಿಸುವದಕ್ಕೂ ಹೇಳುವದಕ್ಕೂ ನೀನಾರು, ನಾನಾರು ಅಂಥಾ ಸಮ್ಬಂಧವು ನಿನಗೂ ನನಗೂ ಮೊದಲೇ ತೊಲಗಿಹೋದುದು, ನಾನೆಷ್ಟು ಬಗೆಯಾಗಿ ನಿನ್ನ ಕುಚಂಗಳು ಹೊರಕಾಣದಂತೆ ನಿನ್ನ ವಸ್ತ್ರವಂ ಕಾಪಾಡಿಕೊಂಡು ಬರುತ್ತಿದರೂ, ನೀನಾ ಉಪಕಾರವನುಂ ಚಿಂತಿಸದೆ ಕೃತಘ್ನಳಾದೆ, ನಿನ್ನ ಮುಖವನ್ನೇ ನೋಡಬಾರದು, ಪರಮಧೂರ್ತಳಾದ ನಿನಗೆ ಯಾವದಾದರೇನು ? ಸಂತೋಷವೆಲ್ಲಿಹುದು ? ಪರಮ ಉಪಕಾರಿಯಾದ ನನ್ನಂದೂರವಾಗಿ ಬಿಸಾಟಿಯಲಲ್ಲಾ ! ಇದು ನಿನಗೆ ಧರ್ಮವೇ ! ಎಂದು ಹಿಯ್ಯಾಳಿಸುತ್ತಾ, ಬಲಲಾ ಕಲಾವತಿಯು, ಎಲ್ಲೆ ನನ್ನ ಪ್ರೀತಿಪಾತ್ರವಾದ ಕಂಚುಕವೇ ! ನೀನೇನಾದರೂ ಆಗು ನನ್ನ ಮನವಾದರೋ ಆ ಶಿಶುವಿನಗತಿ ಏನಾದುದೋ ಎಂದು ಕಳವಳವಂ ಹೊಂದಿಹುದು. ಆ ಕಥೆಯನ್ನೇ ಮುಂದಕ್ಕೆ ಹೇಳೆಂದು ತನ್ನ ಸೆರಗು ಬಿದ್ದು ಹೋಗಿದ್ದರೂ ಅದಂ ನೋಡಿಕೊಳ್ಳದೆ, ಬಹು ದೈನ್ಯಮಂ ತಾಳ್ದಿ ಕೇಳಿಕೊಳ್ಳುತ್ತಿರುವಳಂ ನೋಡಿ, ವಿಕ್ರಮಾದಿತ್ಯರಾಯಂ ಕಲಾವತಿಯ ಅಕ್ಕಂದಿರಾದ ಲೀಲಾವತಿ, ಪದ್ಮಾವತಿಯರೊಂದಿಗೆ ನಸು ನಗುತ್ತಿರುವಲ್ಲಿ ಆ ಕಂಚುಕಂ, ಕಲಾವತಿಯನ್ನು ಕುರಿತು, ಎಲ್ಲೆ ಗರ್ವಪರ್ವತವಂ ಹತ್ತಿದವಳೇ ! ನೀನು ಲೋಕಸುಂದರಿಯೆಂತಲೂ, ಸಕಲ ಕಲಾ ಪ್ರವೀಣೆಯಂತಲೂ ಮಹಾಗರ್ವವಂ ಹೊಂದಿರುವೆ, ನಿನ್ನ ಅಕ್ಕಂದಿರಿಗಿಂತಲೂ, ನೀನು ರೂಪವತಿಯಲ್ಲವೇ ಅಲ್ಲ, ವಿದ್ಯೆಯೊಳಾದರೆ, ಅವರ ಉಂಗುಟವನ್ನೇ ಹೋಲಲಾರೆ ! ಲೋಕದೊಳು ಕುರೂಪಿಗಳಾದವರೇ ತಾವು, ಬಹು ರೂಪವತಿಯರೆಂದು, ಕುಲುಕವರು, ವಿದ್ಯಾಹೀನರೆ ಮಹಾ ಪಂಡಿತರೆಂದು ಮೆರೆಯುವರು ಈಗ ನಿನಗಾ ಕಥೆಯಂ ಕೇಳಬೇಕೆಂದಾಶೆಯಿದ್ದಪ್ಪೆ ಆದರೇ ನಿನ್ನ ಗರ್ವಮಂ ಬಿಟ್ಟು, ನಮ್ಮ ಧಣಿಗೆ ಶರಣಾಗತಳಾಗಿ ಬಳಿಯುಂಸಾರಿ ಪ್ರಾರ್ಥಿಸುವಳಾಗು ಅತಂದಯಮಾಡಿ ನನಗೆ ಆಜ್ಞೆಯನ್ನಿತ್ತರೆ, ಹೇಳುವೆನೆನಲಾ, ಕಲಾವತಿಯು, ಮೈಮೇಲೆ ಸೆರಗಿಲ್ಲದ್ದಂ, ಕಾಣದೇ ಮುಕುಳಿತ ಹಸ್ತಳಾಗಿ, ಎಲ್ಲೆ ರಾಜಾಧಿರಾಜನೇ : ನಾನು ವ್ಯರ್ಥವಾಗಿ ನಿಮ್ಮ ಸಾಹಸವನ್ನೆರಿಯದೆ ಪ್ರತಿಜ್ಞೆಯಂ ಮಾಡಿದವಳಾದೆನು, ಆ ಶಿಶುವಿನ ಗತಿಯೇನಾದುದೋ, ಆ ಕಥೆಯನ್ನೇ ಮುಂದಕ್ಕೆ ಹೇಳಿಸಬೇಕೆಂದು ಬೇಡಿಕೊಳ್ಳುತ್ತಿರಲು ರಾಯಂ ಕನಿಕರವಾಂತು, ಎಲ್ಲೆ ಕಲಾವತಿಯೇ ! ಅದೇರೀತಿಯಿಂ ನಮ್ಮ ಬಳಿಗ್ಬೈದಿ ಬರಕೊಡ್ಡರೆ ಅದೇ ಕಥೆಯನ್ನು ಹೇಳಿಸುವೆನೆನಲು ಅಗಲಾ ಕಲಾವತಿಯು, ಅತುರ

ಳಾಗಿ ತಾನಿರ್ದಂತೆಯೇ ರಾಜನ ಬಳಿಗ್ಯೆತಂದು ಬರೆದು ಕೊಟ್ಟು ಕುಳಿತುಕೊ
ಳ್ಳಲು, ರಾಜನು, ಕಂಚುಕಕ್ಕಾಜ್ಞಾಪಿಸೆ, ನವಗತ್ಸ ಕುಪ್ಪುಸವು ಕಥೆಗುಂಪ್ಪುಮಂ
ದಕ್ಕೆ ಹೇಳಲು, ಪ್ರಾರಂಭಿಸಿತು.

ಲಾಲಿಸ್ಯೆ ಮಹಾರಾಜನೇ ! ಪುಷ್ಕರನೂ, ಅವನ ಹೆಂಜತಿಯರೂ, ಡಾ
ದಿಯರೊಂದಿಗೆ ಹೊರಟು ಹೋದ ಸ ಲ್ಪಕಾಲದ ಮೇಲೆ, ಆ ಮನೆಗಿದ್ದ ಶಿಶು
ವು ನಿದ್ರೆಯಂ ತೊರೆದು ಎಚ್ಚತ್ತು ಅಳಲಾರಂಭಿಸಿ ಗಟ್ಟಿಯಾಗಿ ಅರಚುತ್ತಾ
ಬರಲು ಆ ಮನೆಯ ಮುಂಭಾಗದ ಮನೆಯೊಳಿದ್ದ ಬ್ರಾಹ್ಮಣ ಪತ್ನಿಯು ಅಷ್ಟ
ಕ್ಕೇ ಬಹಳಹೊತ್ತಿನಿಂದ ಎಳೆಮಗುವು ಅಳುತ್ತಿರುವದು, ತಾಯಿಯು ನಿದ್ದೆಹೋ
ಗುವಳೋ ಏನೋ ಮಿಕ್ಕವರೇನು ಮಾಡುವರೆಂದನ್ನುತ್ತಾ, ಸುಮ್ಮನಿರಲು ಆ ಶಿ
ಶುವಿನ ರೋದನ ಧ್ವನಿಯು ಬಲವಾಗಿ ಕೇಳುತ್ತಾ ಬರೆ ಇದೇನು ಮದಗಜಂಗೆ
ಳಂತೆ ಇಷ್ಟುಮಂದಿ ಹೆಂಗಸರಿದ್ದು ಈ ಮಗುವಂ ಇಂತು, ಅಳುವಂತೆ ಬಿಟ್ಟಿರು
ವರಲ್ಲಾ ! ಎಂದು ಚಿಂತಿಸುತ್ತ, ಆ ಮನೆಯಂ ಸ ರಿ ನೋಡಲು ಅಲ್ಲಿ ಜನಗಳ
ಸುಳಿವೇ ಕಾಣಿಸದೆ ಶಿಶುವಿನ ರೋದನಂ ಮಾತ್ರ ಕೇಳಿಬಳುತ್ತಿರಲು ಶಿಶುವಿನ ಬಳಿ
ಯಂ ಸಾರಿ ಶಿಶುವಂ ಎತ್ತಿಕೊಂಡು ಮನೆಯಲ್ಲಿ ಹುಡುಕಿನೋಡಿದರೆ ಯಾರೂ
ಕಾಣದೆ ಹೋಗಲು ಭಯಂಗೊಂಡವಳಾಗಿ ಆ ಶಿಶುವಿನ ಹಾಸಿಗೆಯಂ ಎತ್ತುವ
ದಕ್ಕೆ ಯತ್ನಿಸಲು ತಲೆದೆಸೆಯೊಳಿದ್ದ, ದಿವ್ಯ ರತ್ನಾಭರಣಮಂ ಕಂಡುಕೊಂಡ
ತನ್ನ ಪತಿಯಬಳಿಗ್ಯೆತಂದು ಎಲ್ಯೆ ಪ್ರಾಣವಲ್ಲಭನೇ ; ನಮ್ಮ ಹಿಂಭಾಗದ ಮನೆಯೊ
ಳಿದ್ದವರೆಲ್ಲರೂ ಈ ಶಿಶುವಂ ಬಿಟ್ಟಲ್ಲಿಯೋ ಹೊರಟುಹೋದಂತೆ ಕಾಣುತ್ತದೆ
ಎಳದಾದ ಈ ಶಿಶುವಂ ಬಿಟ್ಟು ಹೋಗಲು ಆ ಪಾಪಿಗಳಿಗೆ ಮನಬಂತು ಬಂದು
ದೋ ಎನಲು ಆ ಬ್ರಾಹ್ಮಣನು ಅವರೇನೋ ಕಳ್ಳತನವಂ ಮಾಡಿಪೋಗಿರಬ
ಹುದು ಆದ್ದರಿಂದಲೇ ಇಂತಹ ಎಳೆಮಗುವಂ ಬಿಟ್ಟು ಹೋದರು ಎಂದೊರೆಯು
ತ್ತಾ ಆಭರಣಮಂ ನೋಡಿ, ಭ್ರಾಂತನಾಗಿ ನಾವು ಮುಕ್ಕಳಿಲ್ಲದವರು ಈ ಮಗುವು
ಉತ್ತಮಜಾತಿಯದಾಗಿರುವದು ಮಲೆಯಂ ಕೊಡುವುದಕ್ಕೆ ಹೆಂಗಸನ್ನು ಗೊತ್ತು
ಮಾಡೆಂದು ಹೇಳಿ ಆ ಹೆಣ್ಣಿನ ಕೈಗಿತ್ತು ಎಣ್ಣೆ ನೀರನ್ನೆರೆಯುತ್ತಾ ಆ ಹೆಂಗಸಿ
ನಿಂದ ಸ್ನಾನ್ಯಮಂ ಕೊಡಿಸುತ್ತಾ, ಆ ಶಿಶುವಿನ ಜಾಲಕ್ಕೆಳ್ಗೆ ವಿನೋದಂಗಳಂ
ನೋಡಿ ಸಂತೋಷಿಸುತ್ತಾ, ಪೊಸಿಸುತ್ತಾ, ಸಂತೋಷಮಾಗಿ ಕಾಲಮಂ ಕಳೆಯು
ತ್ತಿದ್ದರು. ಒಂದಾನೊಂದುದಿನ ಮಾಶಿಶುವಿನೆಡೆಯೊಳು ಬರೆದಿರ್ದ ಓಲೆಯು ಎಲ್ಲಿ
ಯೋ ಬಿದ್ದಿರ್ದುದು ಆ ಬ್ರಾಹ್ಮಣನಕೈಗೆ ಸಿಕ್ಕಲು ನೋಡುತ್ತಾ ಈ ಅಕ್ಷರಂಗ
ಳು ನಮ್ಮ ಮನೆಯೊಳಿರ್ದ ಪುರುಷನ ಕೈಬರಹವಾಗಿದೆ. ಈ ಮಗುವಿನ ನಿಜ
ಯದಲ್ಲಿರಬಹುದೆಂದು ಯೋಚಿಸಿ, ತನ್ನ ಹೆಂಡತಿಯಂ ಕರೆದು ಕೇಳಲು ಅಹುದು,
ಈ ಓಲೆಯೇ ಶಿಶುವಿನ ತಲೆದೆಸೆಯೊಳಿರ್ದುದು, ನಾಂನಿಮಗೆ ತೋರುವದಕ್ಕೆ ಮು

ರತೆನೆನೆ, ಆ ಶ್ಲೋಕಾರ್ಥಮುಂ ತಿಳಿದು, ಪ್ರಾಣಕಾಂತೆಯೇ, ನಮ್ಮ ಮು
ಯೊಳಿದ್ದವಡು ಎಲ್ಲಿಯೋ ಕಳ್ಳತನವಂ ಮಾಡಿದನರೆಂಬುವದೇ ನಿಶ್ಚಯ, ಹೆ
ಗಾದರೂ ಆಗಲಿ ದೈವಯೋಗದಿಂದ ದೊರತ ಮಗುವಂ ನಾವು ಪರಿಪಾ
ಸೋಣ, ಎಂದು ಹೇಳಿ, ತಂತೆಯೇ ಪರಿಪಾಲಿಸುತ್ತಿದ್ದರು.

ತನ್ನ ನಾಲ್ಕುಮಂದಿ ಪತ್ನಿಯರೊಡಗೊಂಡು ಹೊರಟು ಹೋದ ಪುಷ
ರನೆಂಬ ರಾಜಾತ್ಮಜನು, ಆ ರಾತ್ರೆಯೊಳು ಬಹುದೂರಂ ಬಂದು ಒಂದು ಹ
ಯೊಳಿಳಿದು ಮಾರ್ಗಶ್ರಮವಂ ಪರಿಹರಿಸಿ ಕೊಂಡವನಾಗಿ ಅಲ್ಲಿಂದ ಮುಂದ
ದುದು ಬರ್ಬರ ದೇಶಕ್ಕೆ ರಾಜಧಾನಿಯಾದ ಕಾಲಮುಷ್ಟಿಪಟ್ಟಣವಂ ಸೇರಿ ಆ
ರದೊಳೇ ನೆರೆಯಂ ಮಾಡಿಕೊಂಡು ವೈದ್ಯರಿಂದ ತನ್ನ ಹಿರಿ ಹೆಂಡತಿಗೆ, ಆ
ಟಾಗಿದ್ದ ಸ್ತನ್ಯಜನಿತ ಬಾಧೆಯಂ ನಿವಾರಣೆಯಂ ಮಾಡಿಸಿ ತಾನು ದೀಕ್ಷೆಯಂ
ತಾಳಿದ್ದವನಾದ್ದರಿಂದ, ಯೋಗೀಶ್ವರನೆಂದು ಪೆಸರನ್ನಿಟ್ಟುಕೊಂಡು ತನ್ನ ಕಾ
ತಾಮಣಿಯರನ್ನಿಟ್ಟಿರುವ ಮನೆಗೆ ದೂರಮಾಗಿರುವ ಮಹಾಶಕ್ತ್ಯಾಲಯದೊ
ವಾಸಮಂ ಮಾಡುತ್ತಾ ಬರಲು ಆ ದೇವಾಲಯದ ಪೂಜಾರಿಗಳು, ಈತನ
ನೋಡಿ ಇವನಾರೋ ಪರಮಯೋಗೀಶ್ವರನಾಗಿರಬಹುದೆಂದೂ ಇವನಂ ಆಶ್ರ
ಸಿ, ಇವನಿಂದಲೇನಾದರೂ ಮಹಾ ಮಂತ್ರೋಪದೇಶಮುಂ ಹೊಂದಬೇಕೆಂದ
ತನ್ನ ದೇವತಾರಾಧನೆಯ ಕಾಲಂ ಹೊರತು ಮಿಕ್ಕ ಕಾಲದೊಳು ಈ ಯೋ
ಶ್ವರನಂ ಆಶ್ರಯಿಸುತ್ತ ಅತನಿಗೆ ದಿವ್ಯಭಕ್ಷ್ಯ ಭೋಜ್ಯಾದಿಗಳಂ ಮಾಡಿ
ತಂದು ಸಮರ್ಪಿಸುತ್ತಾ ಆ ಯೋಗೀಶ್ವರನ ದಯೆಯಂ ಸಂಪಾದಿಸಬೇಕೆಂ
ನಿರೀಕ್ಷಿಸುತ್ತಿದ್ದಳಂ. ಆ ಪುರಾಧಿಪತಿಯಾದ ಗುಂಜಾಕ್ಷನೆಂಬ ಕಿರಾತರಾಜ
ಶಾರದಾ ನವರಾತ್ರಿಯೊಳು ಒಂಭತ್ತು ದಿನಗಳೂ, ಆ ದೇವಾಲಯದೊಳು ತ
ಪಟ್ಟದಕತ್ತಿಯನ್ನಿರಿಸಿ, ಮಹಿಷೋತ್ಸವಂ ಮಾಡಿಸುತ್ತಾ ಆ ಒಂಭತ್ತನೆಯ ದಿ
ದೊಳು ಯಾರಬಾಲಕನನ್ನಾದರೂ ಅವರ ಅನುಮತಿಯಂತೆ ತನ್ನ ಮನೆಯ
ರಿಸಿಕೊಂಡಿದ್ದು ಆ ದಿನದೊಳು ಆ ದೇವತೆಯಂ ಪ್ರಾರ್ಥಿಸಿ ಪೂಜಾರಿಯ ಕೈಯಿ
ದ ತನ್ನ ಖಡ್ಗಮಂ ತೆಗೆಯಿಸಿಕೊಂಡು ಆ ರಾಯಂ ಬಾಲಕನ ಶಿರವಂ ಆ
ವಿಯ ಮುಂಭಾಗದೊಳು ಕತ್ತರಿಸಿ ಅನಂತರ ದೇವತೆಗೆ ಮಂಗಳಾರತಿಯಂ ವ
ಡಿಸಿ ಮನೆಗೆ ಬಂದು, ಭೋಜನಾದಿಗಳಂ ಮಾಡುವ ಪದ್ಧತಿಯಂತೆಯೇ ಆ
ಲಕ್ಕೆ ಸರಿಯಾಗಿ ಆ ನವರಾತ್ರಿ ಹಬ್ಬವೂ ಪ್ರಾಪ್ತಿಯಾಗಲು, ಪೂರ್ವ ಪದ್ಧತಿಯ
ತೆ ನರಬಲಿಗೆ ಬೇಕಾದ ಬಾಲನಂ ಹುಡುಕುವಪೇಕ್ಷಾಗಿ ಮಂತ್ರಿಯು ಯಾ
ದರೂ ದೇವತಾ ಬಲಿಗಾಗಿ ಬಾಲಕನಂ ಕೊಡ್ಪರೆ ೧೦೦೦ ಸಾವಿರ ವರಹಗಳ
ಕೊಡುವದಾಗಿ, ವಿಚಾರಿಸಲು ಎಲ್ಲಿಯೂ ಯಾರೂ ಕೊಡದೆ ಹೋಗಲು ಮ
ತ್ರಿಯು ವಿಶೇಷಯೋಚನಾ ಪರನಾಗಿ ಯೋಚನಂ ತೋರದೆ ನವರಾತ್ರಿ ಪಾ

ವು ಮಾರನೆ ದಿನದಲ್ಲಿ ಪ್ರಾರಂಭವಾಗುವದೆಂದು ಯೋಚಿಸಿ ಕಟುಕರಂ ಕರೆದು ಬೀದಿಯಲ್ಲಿ ತಿರುಗಾಡುತ್ತಾ ಇರುವ ಮಗುವು ಯಾರದಾದರೂ ಸರಿಯೆ ಹಿಡಿತರುವಂತೆ ಆಜ್ಞಾಪಿಸಲು ಆ ಕಟುಕರು, ಆಲ್ಲಿಂದ ಹೊರಟು ಬೀದಿಗಳಲ್ಲಿ ಹುಡುಕುತ್ತಾ ಬರುವಾಗ್ಯೆ ಒಂದಾನೊಂದು ಬೀದಿಯೊಳು ಆ ಪೂಜಾರಿಯ ಮಗನು ಆಡುತ್ತಿರಲು ಅತಿಭರದಿಂದವನಂ ಹಿಡಿದವರಾಗಿ ಮಂತ್ರಿಗೆ ಸಮರ್ಪಿಸಿ ಮಂತ್ರಿಯಿಂದ ಬಹುಮತಿಯುಂ ಹೊಂದಿ ಹೊರಟು ಹೋದರು. ಈ ವಾರ್ತೆಯಂ ಕೇಳುತ್ತಾ ಪೂಜಾರಿಯು ಪರಮ ದುಃಖಾಕ್ರಾಂತನಾಗಿ ದಿಕ್ಕು ತೋರದೆ ತಾನೇನು ಮಾಡಿದರೂ ಹೇಗೆ ಹೇಳಿಕೊಂಡರೂ ತನ್ನ ಮಗನಂ ಬಿಡಲಾರದೆಂದರಿತು ಕರ್ತವ್ಯವನ್ನರಿಯದೆ ಶೋಕಿಸುತ್ತಾ ಆ ದೇವಾಲಯಕ್ಕೆ ಬಂದು ತಾನು ಆಶ್ರಯಿಸುತ್ತಿರುವ ಯೋಗೀಶ್ವರನಾದ ಪುಷ್ಕರರಾಯನಿಗೆ ಸಾಷ್ಟಾಂಗವಾಗಿ ನಮಸ್ಕರಿಸಿ ಅಲ್ಲಿಂದಬಂದು ತನ್ನ ಎಡಪು ಕೈಗಳಿಂದಲೂ ಆತನ ಕಾಲುಗಳಂ ಘಟ್ಟಿಯಾಗಿ ಬಿಡಿಪುಕೊಂಡು ತನ್ನ ತಲೆಯಂ ಪಾದಗಳಿಳು ಚಾಚಿ, ಎಲೈ ಯೋಗೀಂದ್ರನೇ ! ನನಗೀಗ ಮಹಾಪಾತಕಮೊಂದು ಪ್ರಾಪ್ತಿಯಾಗಿಹುದು ಈ ಕಾಲದೊಳು ನನ್ನಂ ಕಾಪಾಡುವರು ಈ ಲೋಕದೊಳಾರು ಇಲ್ಲವು. ನೀನೇ ಗತಿಯೆಂದು ನಿನ್ನ ಪಾದಗಳಂ ನಂಬಿರುವೆನು, ನಿನ್ನನ್ನು ಬಿಟ್ಟರೆ, ನನಗೆ ದಿಕ್ಕಿಲ್ಲಂ ನನಗೆ ಪುತ್ರದಾನವಂ ಕೊಟ್ಟು, ಉದ್ಧಾರಮಾಡಬೇಕು ಯೆಂದು ಪ್ರಾರ್ಥಿಸುತ್ತಾ ಕಾಲ್ಗಳಂ ಬಿಡದೆ ಶೋಕಿಸುತ್ತಿರುವ ಪೂಜಾರಿಯ ಪರಿಯನ್ನೋಡಿ ಕರುಣಾಗುಣಾಢ್ಯನಾದಪುಷ್ಕರಂ ಎಲೈ ಪೂಜಾರಿಶ್ರೇಷ್ಠನೇ ನೀನೇತಕಿಂತು ಶೋಕಿಸುವೆ ? ನನ್ನ ಕೈಯಲ್ಲಾಗುವ ಕೆಲಸವಾದರೆ ಕೂಡಿಪಮಟ್ಟಿಗೆ ಸಾಹಸವಂ ಮಾಡಿನೋಡುವೆನು ಹಿಂಜರಿದು ಭಯಪಡಲಾರೆನು, ನಾನು ಬ್ರಾಹ್ಮಣನಲ್ಲವು, ಜಾತಿಯೊಳು ವೀರಕ್ಷತ್ರಿಯನಾಗಿರುವೆ ಗಾಬರಿಯಂ ಬಿಟ್ಟು ಕಾರ್ಯದ ಪರಿಯನೆಲ್ಲಮಂ ಹೇಳು, ಪ್ರಯತ್ನಿಸಿ ನೋಡುವೆನು, ಎಂದು ಮೃದುವಾಗಿ ಸಮಾಧಾನಮಂ ಹೇಳುತ್ತಾ ಬರಲಾ ಪೂಜಾರಿಯು ಎದ್ದು ಕುಳಿತುಕೊಂಡು ಲಾಲಿಸೈ ಪರಮ ದಯಾಸಮುದ್ರನೇ ! ಈ ರಾಜ್ಯವನ್ನು ಕಿರಾತರರಸನಾದ ಗುಂಜಾಕ್ಷನೆಂಬೊರ್ವಂ ಪಾಲಿಸುತ್ತಿರುವಂ. ಈ ರಾಯಂ ತನ್ನ ಇಷ್ಟದೇವತೆಯಾಗಿರುವ ಮಹಾಶಕ್ತಿಯ ಪ್ರೀತಿಗಾಗಿ ಶಾರದಾನವರಾತ್ರೀ ಹಬ್ಬಮಂ ಪರಮ ಸಂಭ್ರಮದೊಂದಿಗೆ ಮಹದುತ್ಸವವಾಗಿ ಮಾಡಿಸುವಂ ಆ ಕಾಲದೊಳು ಆ ದೇವತೆಗೆ ನರಬಲಿಯುಂ ಕೊಡುವ ವಾಡಿಕೆಯೊಂದುಂಟು. ಈಗ ಪ್ರಾಪ್ತಿಯಾಗಿರುವ ನವರಾತ್ರಿಹಬ್ಬಕ್ಕಾಗಿ ಕೊಡಬೇಕಾದ ನರಬಲಿಗೆ ಹುಡುಗರಾರೂ ದೊರೆಯದೆ ಹೋಹದ್ದರಿಂದ ರಾಜಾಜ್ಞಾನುಸಾರವಾಗಿ ಮಂತ್ರಿಯು ಅಪ್ಪಣೆಯಂ ಮಾಡೆ, ಯಾರ ಹುಡುಗರಾದರೂ ಸರಿಯೆ, ಬೀದಿಯೊಳಿರುವವರಾವರೆ ಅವರಂ ಹಿಡಿದುತರುವಂ

ತೆ ಆಜ್ಞೆಯಂ ಹೋದಿದ ವಧಕರು, ನನ್ನ ಮಗನಂ ಹೊತ್ತುಕೊಂಡು ಹೋದ ರು ನಾಳೆ ಮಹಾನವಮಿವಿಷಯದ ಆ ಬಾಲಕಂಗೆ ಅಭ್ಯಂಗಮುಂ ಮಾಡಿ, ಹೊ ಸ ಅರಿಸಿನಪ ವಸ್ತ್ರಂಗಳಂ ಉಡಿಸಿ, ದೇವಾಲಯಕ್ಕೆ ಕೊಂಡೊಯ್ದು, ನವರಾ ತ್ರೀ ಪ್ರಾರಂಭದದಿನದಿಂದ ದೇವತೆಯ ಬಳಿಯೊಳಿಟ್ಟು ಪೂಜೆಯಂ ಮಾಡುತ್ತಿ ಖಡ್ಗಮುಂ ಪೂಜಾರಿಯಾದವನಿಂದ ತೆಗೆಯಿಸಿ, ರಾಜಂ ಕೈಕೊಂಡು ದೇವಿಯ ಕೊ ರಳೊಳಿದ್ದ ಪೂಮಾಲೆಯುಂ ಆ ಬಾಲಕನ ಕೊರಳೊಳು ಹಾಕಿಸಿ ನಮಸ್ಕರಿಸೆಂ ದು ಹೇಳಿ, ಬಾಲಕನು ಬಗ್ಗಿ ನಮಸ್ಕರಿಸಲು. ಯತ್ಕಿಸುವದರೊಳಗಾಗಿ ರಾ ಜಂ ತನ್ನ ಕೈಯಲ್ಲಿರ್ದ ಕತ್ತಿಯಿಂ ಆ ಬಾಲನ ಶಿರಮಂ ಛೇದಿಸಿ, ಮುಂಗಳಾರ ತಿಯುಂ ಮಾಡಿಸಿ ಆನಂತರಂ ಬಹಾ ಶೀರ್ಷಪ್ರಸಾದಂಗಳಂ ಕೊಂಡು ತನ್ನ ಮನೆ ಯುಂ ಸಾರುವನು. ಆ ದೇವಿಯ ಪೂಜಾರಿಯು ನಾನಾಗಿರುವೆನಾದ್ದರಿಂದ ಕೈ ಯ್ಯಾರ ಕತ್ತಿಯನೆತ್ತಿ, ಕಂಡಾರ ನನ್ನ ಮಗನಂ ಕೊಂದುದಂ ನಾನೇ ನೋ ಡಬೇಕಾಗಿದೆಯಲ್ಲಾ, ಎಂದು ಮಹಾದುಃಖಿಯಾಗಿದ್ದೇನೆ. ಈ ದೊಡ್ಡ ಗಂಡವ ನ್ನು ನೀನೇ ಪರಿಹರಿಸಿ, ನನ್ನಂ ಉದ್ಧಾರಮಾಡಬೇಕೆಂದು ಕಂಬನಿದುಂಬಿ ಗೋ ಳಿಡುತ್ತಿರುವ ಪೂಜಾರಿಯುಂ ನೋಡಿ, ಸಾಮಿ ಬ್ರಾಹ್ಮಣೋತ್ತಮರೇ ! ನಾನು ಸಹಯಾರುಮಿಲ್ಲದೆ ಯೇಕಾಕಿಯಾಗಿರುವೆನು. ವಿನಂಮಾಡುವದಕ್ಕೂ ಕಾಣವಿರುವದು. ಯಾವ ವಿಧನಾದ ಉಪಾಯದಿಂದ ಸಾಧ್ಯವಾಗುವದೋ ಅದಂ ಯೋಚಿಸಿ, ನನಗೊರೆದರೆ ಕೈಯಲ್ಲಾದ ಮಟ್ಟಿಗೂ ಪ್ರಯತ್ನಮಾಡಿ ನಿನ್ನ ಕೋರಿಕೆಯಂ ಕೈಸಾರುವೆನು ಹೇಳೆಂದು ಪುಷ್ಕರನು ಕೇಳಲು ಎಲ್ಲೈಮಹನೀ ಯ್ಯುರೇ ! ತಾವು ಕ್ಷತ್ರಿಯೋತ್ತಮರಾಗಿರುವದರಿಂದ ಇಷ್ಟುಮಾತ್ರ ಧೈರ್ಯಮುಂ ಕೊಟ್ಟವರಾದಿರಿ ತಾವು ಕ್ಷತ್ರಿಯೋತ್ತಮರಾಗಿರುವದರಿಂದ ತನುಗೆ ಯೋಗ್ಯಮಾ ದೊಂದುಪಾಯಮುಂ ಯೋಚಿಸಿರುವೆನು. ಆ ಶಬರರಾಜನ ಇಷ್ಟದೇವತೆಯ ದೇವಾಲಯವು ಇದೇ ಇಲ್ಲಿಯೇ ನವರಾತ್ರಿಯ ಉತ್ಸವಂ ನಡೆಯುವದು. ನಾನೇ ಆ ಕಾಲದೊಳೀ ದೇವಿಯನ್ನಾರಾಧಿಸುವೆನು. ದೇವಿಯ ಬಳಿಯೊಳಿಟ್ಟು ಪೂಜಿಸುವ ಖಡ್ಗಮುಂ ಬಲಿಯುಂ ಸಮರ್ಪಿಸುವಾಗ ದೇವಿಯನ್ನು ಪ್ರಾರ್ಥಿಸು ವ ರಾಯನ ಕೈಗೆ ನಾನೇ ಕೊಡುವವನು. ಆ ದಿನಕ್ಕೆ ಮುಂಚೆಯೇ ಸಮಯ ವರಿತು, ನಿಮ್ಮಂ ಬಹು ಕತ್ತಲೆಯಾಗಿರುವ ಈ ದೇವಾಲಯದ ಗರ್ಭಾಗಾರ ದೊಳು ಹೊಗಿಸುವೆನು, ದೇವಿಯ ಹಿಂಭಾಗದೊಳು ತಾವು ವಾಸಿಸುತ್ತಿರಬೇ ಕು. ಊದಿ ಉಪಚಾರಂಗಳೆಲ್ಲಾ ಅಲ್ಲಿಯೇ ನಡೆಯಿಸುವೆನು. ಆ ಮಹಾ ನ ವಮಿವಿಷದ ಬಾಲಕನಂ ಪದ್ಧತಿಯಂತೆ ಅಲಂಕರಿಸಿ ಕರೆತಂದು, ದೇವಿಯಮುಂದೆ ನಿಲ್ಲಿಸಿ ದೇವಿಗೆ ಸಂಗಳಾರತಿ ಮುಂತಾವವುಗಳಂ ಮಾಡೆಂದು ರಾಜನಾಜ್ಞಾಪಿ ಸುವಂ. ತದನಂತರಮಾತಂ ಮುಕುಳಿತನೇತ್ರ ಕರಕಮಲನಾಗಿ, ದೇವ್ಯಭಿ

ತಸ್ಯಾಂತನಾಗಿ ಬಳಿಯೊಳಿದ್ದು, ಒಂಭತ್ತು ದಿನಗಳೂ ಪೂಜಿಸುತ್ತಿದ್ದ ಖಡ್ಗ ಮುಂ ಕೊಡಿಸೆಂದು ಬೇಡುತ್ತಾ ನಿಂತಿರುವಂ ಆಗ ನಾನೇ ಅತನ ಕೈಗೆ ಆ ಕತ್ತಿ ಯನ್ನೆತ್ತಿ ಕೊಡಬೇಕಾದ ಪದ್ಧತಿಯು ಆದೇಮೇರಿಗೆ ಆ ಕತ್ತಿಯನ್ನೆತ್ತಿ, ಕತ್ತ ಲೆಯೊಳು ನನ್ನ ಹಿಂದಿನ ನಿಮ್ಮ ಕೈಯೊಳಯ್ಯುವೆನು. ನೀವಾಕತ್ತಿಯಂ ಕೊಂ ಡತಿಭರದಿಂ ಹೊರಗೈತಂದು, ಕಣ್ಮುಚ್ಚಿ ನಿಂಪು, ವಿಕಾರಿಯಾಗಿರುವ ರಾಯು ನ ತಲೆಯಂ ಛೇದಿಸಿದರೆ, ಆ ಕೂಡಲೆ ನಾಂ ದೇವತೆಗೆ ಪುಷ್ಕರಾರಾಧನೆಗೆಯುಂ ಮಾಡಿ, ತಮಗೇನೇ ಪ್ರಸಾದವಮಂ ಕೊಡುವೆನು ಆ ಕ್ಷಣದೊಳೇ ತಾವು ರಾಜಮಂದಿರವನು ಸಾರಿ ಮುಂದಿನ ಪದಾರ್ಥವಣೆಯಂ ಕ್ರಮಪಡಿಸಿಕೊಳ್ಳಬಹು ದು. ಕ್ಷತ್ರಿಯ ಶ್ರೇಷ್ಠರಾದ ರೀವ, ನುಂದಿನ ವಿಷಯವನುಂ ನಾನೊರೆಯಲು ಶಕ್ತಿಸಾಲದು ಎಂದು ಕಾಲೋಚಿತವಾದ ಯುಕ್ತಿಯಂ ಹೇಳಲು, ಸನ್ಯಾಸಿ ಯಾಗಿದ್ದ ಪುಷ್ಕರರಾಯಂ ಸಂತೋಷಿತನಾಗಿ, ನಿನ್ನಿಷ್ಟಾನುಸಾರವಾಗಿಸುವೆನೆಂ ದಾ ಪೂಜಾರಿಗೆ ನಂಬುಗೆಯನ್ನಿತ್ತು ಕೈಮುಟ್ಟಿ ಭಾಷೆಯಂ ಮಾಡಿಕೊಂಡಲಾ ಪೂಜಾರಿಯು ಆ ಪುತ್ರಂ ನಾಶವಾಗುವನೆಂಬ ದುಃಖಿಯಾಂಟಿದ್ದು. ಸಂತೋಷಿ ತಸ್ಯಾಂತನಾಗಿ, ಈ ಪುಷ್ಕರರಾಯಂಗೆ ಆದು ಮೊದಲಾಗಿ ಪರಮಭಕ್ತಿಯಿಂದ ಬಹುವಿಧಂಗಳಾದ ಭಕ್ಷ್ಯಾದಿಗಳಂ ರುಚಿರುಚಿಯಾಗಿ ಮಾಡಿಸಿ ತಂದಿಡುತ್ತಾ ಉ ಪಚರಿಸುತ್ತಿದ್ದನು.

ಆ ವೇಷಧಾರಿಯಾದ ಪುಷ್ಕರರಾಯನು ಇವನಾರೋ ಬ್ರಾಹ್ಮಣನು ವಿಕಪು ತ್ರನಾಗಿದ್ದೇನೆಂದು ಹೇಳಿಕೊಳ್ಳುವನು. ಇವನು ಜೀವುತ ಕಾರ್ಯ ನಿಂದ್ಯಮೆಂದೆ ಣಿಸುವದಾವರೂ ಕ್ಷತ್ರಿಯಧರ್ಮ ವಿರುದ್ಧ ಮಲ್ಲ ನಾನಾದರೋ ಕ್ಷತ್ರಿಯನು ನ ನ್ನ ಧರ್ಮವು ದುಷ್ಟ ನಿಗ್ರಹ ಶಿಷ್ಟಪರಿಪಾಲನಾತ್ಮಕವಾದದು, ಈ ಪುರಾಧೀಶನು ಮಾಡುವ ಕಾರ್ಯವು ಪರಮ ಪಾಪಕರವಾಗಿಹುದು ಮುಖವಾಗಿ ನನ್ನ ಧರ್ಮ ವು ಬ್ರಾಹ್ಮಣರಿಗೂ ವೇದಗಳಿಗೂ ಬರುವ ಅಪಾಯಂಗಳಂ ನಾಶಗೊಳಿಸುವದಾಗಿದೆ ಇಷ್ಟ ಜನಕನಾಗಿಯುಂ ಇರುವ ಈ ಅಜ್ಞಾನಿಕನ ಸಂಹಾರವಂ ಪರಿಹರಿಸಿವಂತಾಗು ವದಲ್ಲದೆ, ಈ ರಾಜ್ಯದ ಪ್ರಾಪ್ತಿಯಿಂದ ನನಗೂ ಸುಖವಿಹುದೆಂದು ಯೋಚಿಸಿ, ಆ ಕಾಲ ನಿರೀಕ್ಷಣೆಯೊಳಿದ್ದಂ.

ಯಾವನೊಂದನ್ನರಿಯದವನಂತೆಯೂ, ಮಗನಂ ಅದುವಿಸದೆಯೂ, ತನ್ನ ದೇವತಾರಾಧನೆಯಂ ಮಾಡುತ್ತಿರಲಾ ಪೂಜಾರಿಯು, ಆ ಕಿರಾತರಾಜನು ನವರಾ ತ್ರಿ ಪ್ರಾರಂಭವಾಗಲು ದೇವಿಯ ಆರಾಧನೆಗಾಗಿ ಸಕಲ ಸಾಮಗ್ರಿಗಳಂ ಕಳುಹಿ ಪಾ ಡ್ಯದ ದಿನದೊಳು ತನ್ನ ಪಟ್ಟದ ಕತ್ತಿಯಂ ತಂದು ದೇವಿಯ ಬಳಿಯೊಳಿಡಿಸಿ, ಉ ತ್ಸವಾದಿಗಳಂ ಮಾಡುತ್ತಿರೆ, ಹೀಗೆಯೇ ಎಂದು ದಿನಂಗಳು ಕಳೆದುಹೋಗಲು ಒಂಭತ್ತನೆಯ ದಿನಂ ಪ್ರಾಪ್ತಿಯಾಗೆ ಅಂದಿನಿರಳು ಪೂಜಾರ್ಥವಾಗಿ ಬಂದಿದಾ

ಪೂಜಾರಿಯು ಆ ಪುಷ್ಕರನಂ ಕರೆದು ದೇವಿಯ ಹಿಂಗಡೆಯೊಳು ಅಂಧಕಾರವಾಗಿ ರುವೆಡೆಯೊಳಾತನಂ ಕುಳ್ಳಿರಿಸಿ, ಬಾಗಿಲ್ಗಳಂ ಭದ್ರಪಡಿಸಿಕೊಂಡು ಹೋಗಿ ಸಾಯಂಕಾಲಕ್ಕೆದ್ದು ಬಾಗಿಲ್ಗಳಂ ತೆಗೆದು, ದೇವಿಯನ್ನಲಂಕರಿಸಿ ರಾಯನ ಬರುವಿಕೆಯಂ ನಿರೀಕ್ಷಿಸುತ್ತಿರೆ, ಆ ಗುಂಜಾಕ್ಷಾವನೀಶಂ ಆ ಪೂಜಾರಿಯ ಮಗನಂ ಪದ್ಧತಿಯಂತೆ ಸ್ನಾನವಸ್ತ್ರಾದಿಗಳಿಂದಲಂಕರಿಸಿ, ಮಂತ್ರಿ ಪ್ರಧಾನ ಸೇನಾನಾಯಕರೊಂದಿಗೆ ಸೇರಿ ಅವನಂ ಕರೆದುಕೊಂಡು ದೇವಾಲಯಮಂ ಸಾರಿ ದೇವಿಯ ಕಂಠದೊಳಿದ್ದ ಪೂವಮಾಲೆಯಂ ತೆಗೆಯಿಸಿ, ಆ ಮಾಲೆಯ ಕಂಠದೊಳು ಹಾರಕ ಕತ್ತಿಯಂ ಕೊಡಿಸೆಂದು ಮುಕುಳಿತಕರಸ್ತನಾಗಿ ಪ್ರಣಮ್ಯಪ್ತಿ ಕೊಂಡು ದೇವಿಗುಂ ಪ್ರಾರ್ಥಿಸುತ್ತಾ, ದೇವ್ಯರ್ಪಿತ ಚಿತ್ತನಾಗಿ ನಿಂತಿರುವ ಸಮಯದೊಳಾ ಪೂಜಾರಿಯು ದೇವಿಯ ಬಳಿಯೊಳಿರ್ದ ರಾಜಖಡ್ಗವನೆತ್ತಿ ಹಿಂದೆಯೋರ್ವ ಪುಷ್ಕರರಾಯನ ಕೈಗೆಲ್ಲಾಕ್ಷಣದೊಳು ಅಲ್ಲಿಂದಹೊರಪಡು ಹೊರಸಾರಿ ಆ ಕಿರಾತರಾಜನ ಶಿರಶ್ಛೇದನಗೆಯ್ದಾಡಿ, ನಿಲ್ಲಲು ಕೂಡಲೆ ಆ ಪೂಜಾರಿಯುದಂ ಕಂಡು ಮಹದಾಸಂತೃಪ್ತಿಯಿಂದ ತುಂಬಿಬಸಾ ಚಿತನಾಗಿ ದೇವಿಗೆ ವಂಗಳಾರತಿಯುಂ ನವಾಲು ಅಮ್ಮಣ್ಣ ಸೇನಾಪತಿ, ಮಂತ್ರಿ, ಮುಖ್ಯರಾದವರೆಲ್ಲರೂ ಈಪರಿಯಂ ಕಂಡು, ದೇವಿಯೀ ತನ ಅಂಶರೂಪಾತನಂ ನಿರ್ಮಿಸಿ, ಈ ರಾಜನೊಳೇನೋ ತಪ್ಪಂ ಕಂಡಿಂತು ಗೈಸಿರ್ಪಳೆಂದು ಕಾವೇನಾದರೂ ಕಾರ್ಯಭಾಗಮಂ ಮಾಡಿದರೆ ತನ್ನುಗತಿ ಏನಾಗುವದೋ ಎಂದು ಬೆಕ್ಕಸರಾಗಿ ಏನಂ ಮಾಡದೆ ಆ ಪುಷ್ಕರಾವನೀಶಂಗೆ ಪಾಜಿಯಂ ಸಮರ್ಪಿಸಿ, ಆನರೆಸರ ಮರಾಜಿಗಳಂ ತೋರುತ್ತಾ ನಿಂತಿರಲು ಪೂಜಾರಿಯುಂ ಕೊಹಕಪ್ರಸಾದಂಗಳಂ ಕೊಡಲು ಅದಂ ಸ್ವೀಕರಿಸಿದ ಪುಷ್ಕರಂ ಹೊರಸಾರಿ ಆ ರಾಯನ ಅಂಗಳದೊಳು ಕುಳಿತು ಕೊಳ್ಳಲು ಬೆಸ್ಸರು ರಾಜಮಂನಿರವಂಸಾರಿಸಿ, ಆ ಪುಷ್ಕರಂ ಆ ರಾಜಸದನಮಂ ಪ್ರವೇಶಿಸಿ ಆ ಒಡನೆ ಅಂಗಳಗಳಂ ಕಳುಹಿ ದಾನಿಯರೊಂದಿಗೆ ತನ್ನ ನಾಲ್ವರು ಕಾಂತೆಯರಂ ಕರೆಯಿಸಿಕೊಂಡು, ಅವರೊಂದಿಗೆ ಕುಳಿತು ಭೋಜನಾದಿಗಳಿಂದಾಡಿ, ತನ್ನ ಕಾಂತೆಯರಂಸೇರಿ ಆ ರಾತ್ರಿಯೊಳು ಸುಖವಾಗಿ ಕಾಲಮಂ ಕಳೆದು ಮರುದಿನದುದಯದೊಳು, ಮಂತ್ರಿ ಸೇನಾಪತಿ ದಂಡನಾಯಕಾದಿ ಸಮಸ್ತ ಪರಿಜನರಂ ಕರೆಯಿಸಿ ಎಲ್ಲರಂ ತನ್ನ ವಶವರ್ತಿಗಳನ್ನಾಗಿ ಮಾಡಿಕೊಂಡು ಆ ಶಬರ ರಾಜನ ಪತ್ನೀಪುತ್ರಾದಿಗಳಂ ನಿಬಂಧದೊಳಿರಿಸಿ, ಅವರಿಗಾವ ಸ್ವಾತಂತ್ರ್ಯವನ್ನೂ ಕೊಡದೆ ಅನ್ನ ವಸ್ತ್ರಂಗಳಂ ಕೊಡುಕೊಂಡು ಜನಾಧಿಮಾನಿಯಾಗಿ ಪ್ರಜಾರಂಜಕನಾಗಿ ರಾಜ್ಯಭಾರಮಂ ಗೈಯುತ್ತಾ, ತನಗೀಪದವ ಪ್ರಾಪ್ತಿಗೆ ಕಾರಣಭೂತನಾದ ಪೂಜಾರಿಯಂ ಪುತ್ರಸಮೇತನನ್ನಾಗಿ ಬರಮಾಡಿ ಸಕಲೋಪಚಾರಂಗಳಿಂ ಮನ್ನಿಸಿ, ಅನೇಕ ರತ್ನಾಭರಣ ದಿವ್ಯಾಂಬರಾದಿಗಳಿಂದ ಬಹುಮಾನವನ್ನು ಮಾಡಿ ರಾಜಾಸ್ಥಾನಕ್ಕೆ ಬಂದುಹೋಗುತ್ತಾ ಇರುವಂತೆ ಕಡ್ಡಲಿ

ಯುಂ ಕಷ್ಟ ಕಳುಹಿ ತನ್ನ ನಾಲ್ವರು ಕಾಂತಾಮಣಿಗಳೊಂದಿಗೆ ಸಕಲ ರಾಜಭೋಗ ಗಳಂ ಹೊಂದುತ್ತಾ ಪರಮಾನಂದಭರಿತನಾಗಿದ್ದಂ. ಈ ನಾಲ್ವರೊಳು ಹಿರಿಯ ಳೆಂಡತಿಯಾದ ಗುಣವತಿಯು, ತಾನು ಮಗುವಂ ಹೆತ್ತ ಜ್ಞಾಪಕವನ್ನೇ ಮರೆತು, ಆ ಮೂವ್ವರಂತೆ ತಾನೂ ಮಕ್ಕಳಿಲ್ಲದವಳೆಂದು ಮಹತ್ಪದವಿಯ ಮದದಿಂ ತಿಳಿಯ ದನಳಾಗಿ, ಪತಿಗೆ ಪರಮ ಪ್ರೀತಿಪಾತ್ರಳಾಗಿ ಕಾಮಕಲಾಕೋವಿದೆಯಾದ್ದರಿಂದ ಪತಿಯನ್ನು ನಾಲ್ವರೊಳು ತಾನೇ ಪರಮಾನಂದಗೊಳಿಸುತ್ತ ಸುಖದಿಂದಿರ್ದಳು. ಉಳಿದ ಮೂರುಮಂದಿಯೂ ಈಕೆಯು ರಾಜಪುತ್ರಿಯಾದ್ದರಿಂದ ಈಕೆಯ ಗುಣಾ ನುವರ್ತಿಗಳಾಗಿ ಪತಿಗೆ ಹಿತರಾಗಿ ಸುಖಸಾಮ್ರಾಜ್ಯಭಾಗಿಗಳಾಗಿ ಆಳುತ್ತಿದ್ದರು.

ಅತ್ತ ಗುಣವತಿಯು ಹೆತ್ತು ಬಿಟ್ಟು ಬಂದಿರ್ದ ಶಿಶುವಂ ಪೋಷಿಸುತ್ತಿರ್ದ ಬ್ರಾ ಹ್ಮಣದಂಪತಿಗಳು ವಾಸವಾಡಿಕೊಂಡಿದ್ದ ರಾಷ್ಟ್ರಕ್ಕೆ ದುರ್ಭಿಕ್ಷಬಾಧೆಯು ಪ್ರಾ ಪ್ತವಾಗಲು, ಎಲ್ಲಿಯವರೆಲ್ಲಿ ಫಲಾಯನಸೂಕ್ತಮಂ ಪಠಿಸಿ, ಈ ಬ್ರಾಹ್ಮಣನು ತ ನ್ನ ಪತ್ನಿಯೊಡಗೊಂಡು, ಈ ಗುಣವತಿಯ ಬಾಲನಂ ಕರೆದುಕೊಂಡು ಸುಭಿಕ್ಷ ವಾಗಿರುವ ಆ ಗುಂಜಾಕ್ಷನ ದೇಶವುಂ ಹೊಕ್ಕು, ಪುಷ್ಕರರಾಯನಾಳುತಿರ್ದ ಪುರ ಮುಂಸಾರಿ ಭಿಕ್ಷಾವೃತ್ತಿಯಂ ಕಲ್ಪಿಸಿಕೊಂಡು ಜೀವಿಸುತ್ತಾ ಆ ಐದು ವರುಷದ ಬಾಲನಂ ಪೋಷಿಸುತ್ತಾ ಭಿಕ್ಷದಿಂ ದೊರೆಯುವ ಪದಾರ್ಥದಿಂ ಜೀವಿಸಲು ಸಾಲ ದೆಕಷ್ಟಪಡುತ್ತಿದ್ದರು. ಹೀಗಿರುತಾ ಶಾರದಾ ನವರಾತ್ರಿಯು ಸವಿಾಪವಾಗೆ ಪುಷ್ಕರನ ಮಂತ್ರಿಯು ಸವಿಾಪವನ್ನೈದಿ, ಸ್ವಾಮಿ, ಮಹಾರಾಜರೇ ! ಈ ಪು ರಾಧಿದೇವತೆಯಾದ ಮಹಾ ಕಾಳ್ಯಾಲಯದೊಳು ಪ್ರತಿವರ್ಷವೂ ನವರಾತ್ರಿ ಉತ್ಸ ವಂ ಮಹಾತಿಶಯವಾಗಿ ನಡೆಯಿಸಲ್ಪಡುವ ಪದ್ಧತಿಯೊಂದಿಹುದು. ಎಂದು ಬಿ ನ್ನೈಸೆ ಆಗುವ ಕಟ್ಟಳೆಯುಂ ಕೊರತೆವಾಡದೆ ನಿಮ್ಮಜ್ಞಾ ನು ಸಾರವಾಗಿರಬಹುದೆಂ ದು ರಾಯಂ ಆಜ್ಞಾಪಿಸಲು ಅಮಂತ್ರಿಯು ವೈದ್ಯರಂ ಕರೆಯಿಸಿ ಪದ್ಧತಿಯಂತೆ ಸಾವಿರ ವರಹಂಗಳಂ ಕೊಂಡು ಬಲಿಸಮರ್ಪಣೆಗಾಗಿ ಮಗುವಂ ತರುವುದೆಂದಾ ಜ್ಞೆಯುಂ ;ಮಾಡಲಾ, ಕದುಕರು ಮಂತ್ರಿಯಾಜ್ಞೆಯಿತ್ತಂತೆ ಸಾವಿರ ವರಹಂಗಳಂ ಕೊಂಡು ದೇವಿಯ ಬಲಿಸಮರ್ಪಣೆಗಾಗಿ ಗಂಪುಮಗುವನಾರಾದರೂ ಕೊಡುವಿರಾ ! ಎಂದು ಸಾರುತ್ತಾ ಬೀದಿಬೀದಿಯುಂ ಸಂಚರಿಸುತ್ತಾ ಬರಲು, ಜೀವನಕ್ಕೆಲ್ಲದ ಪರ ಮ ದರಿದ್ರದೆಶೆಯಿಂದ ಬಾಧೆಪಡುತಿರ್ದ ಆ ಬ್ರಾಹ್ಮಣದಂಪತಿಗಳು ಈ ವಾರ್ತೆಯಂ ಕೇಳಿದವರಾದರು. ಮಕ್ಕಳಿಂ ಹೆತ್ತವರಲ್ಲ ನಮ್ಮ ಅದೃಷ್ಟವಶಾತ್, ಅವರು ಹೆತ್ತು ಬಿಟ್ಟುಹೋದ್ದರಿಂದ ಈ ಮಗುವು ದೊರತುದು ಇದನ್ನು ಬಹು ಪ್ರಯಾಸ ಪಟ್ಟು ಈವರೆಗಂ ಸಾಕಿದೆವು ಈ ಹುಡುಗನಿಗೆ ಐದು ವರ್ಷಗಳು ವಯಸ್ಸಾದುದು, ಈಗಲಾದರೋ ತಿನ್ನುವುದಕ್ಕಿಲ್ಲದೆ, ನಾವು ಕೊಂದಿರುವ ಸಂಕಟವಂ ದೇವರೇ ಬಲ್ಲ ಈಗಲಾದರೋ ನರಬಲಿಗಾಗಿ ಮಗುವಂ ಕೊಟ್ಟವರಿಗೆ ಸಾವಿರ ವರಹಂಗಳಂ

ಕೊಡುವಂತೆ ಈ ಪುರಾಧೀಶಂ ಸಾರಿಸಿದುವನು. ಈ ಸಾವಿರ ವರಹಂಗಳಿ ಕೊಂಡರೆ ನಮ್ಮ ದರಿದ್ರತ್ವವು ಹತವಾಗಿ ಸುಖಿಸಬಹುದು. ಕೈಯ್ಯಾರ ಬೆಳೆಯಿಸಿದ ಈ ಮಗುವಂ ಬಲಿಗೆ ಕೊಡೋಣವೆಂದರೆ ಕೈಬಾರದು. ಈದರಿದ್ರವಂ ಅನುಭವಿಸುವದಾದರೋ ಪರಮ ಸಂಕಟವಾಗಿರುವದು. ಹಂಗೆ ಜೀವಿಸುವದಕ್ಕಿಂತಲೂ, ಸಾಯುವದೇಲೇ ಸು ಅದ್ದರಿಂದ ಈ ಮಗುವಂ ಮಾರಿ ಸಾವಿರ ವರಹಂಗಳಂ ಕೊಂಡು ಕೆಲಕಾಲ ವಾದರೂ ಸುಖಿವಾಗಿದುಕ್ ಸಾಯೋಣ ಎಂದು ತನ್ನೊಳು ಯೋಚಿಸುತ್ತಿರುವ ಪತಿಯಂ ಕುರಿತು ಎಲೈ ಪ್ರಾಣವಲ್ಲಭನೇ ಲಾಲಿಸು ನಾವು ಪುತ್ರಹೀನರಲ್ಲಿ ಇವನೇ ಪುತ್ರನು ಹೇಗೆಂದರೆ ದಶವಿಧವಾದ ಸಂತಾನಂಗಳೊಳು ಪಾಲಕನು, ಪುತ್ರನಂತೆ ಯೇ ಶಾಸ್ತ್ರವು ಕಂಠೋಕ್ತವಾಗಿ ಹೇಳುತ್ತಿರುವದು. ತಲ್ಲಣಿ ಹತ್ತುದಿನಗಳ ಮಗುವಿನಿಂದಲೂ ಸಾಕುತಾ ಬಂದ ಮಮತೆಯು ಇರಲಾರದು, ಚಂದ್ರವಂಶದಲ್ಲಿ ಪಾಂಡುರಾಯನ ಧರ್ಮಪತ್ನಿಯಾದ ಮಾದ್ರಿಯು, ತನ್ನ ಹೊಟ್ಟೆಯಲ್ಲಿ ಹುಟ್ಟಿದ ನಕುಲ ಸಹದೇವರನ್ನು ಮಮತೆಯಿಲ್ಲದೆ ಬಿಟ್ಟು, ಪತಿಯೊಂದಿಗೆ ಸಹಗಮನವಂ ಮಾಡಿದಳು, ಹುಟ್ಟಿದ ಮೊದಲಾಗಿ ಕಾಪಾಡುತ್ತಿದ್ದ ಕುಂತಿಯು ತನ್ನ ಮಮತೆ ಮಕ್ಕಳಿಗಿಂತಲೂ ಇವರು ಬಾಲರಾಗಿದ್ದರಿಂದ, ಇವರನ್ನು ಪಾಲಿಸಿದಯಿಂದ ಪತಿಲೋಕವಂ ಸಾರದೆ ವಿಧವೆಯಾಗಿ ಅವರಂ ವೃದ್ಧಿಗೊಳಿಸುತ್ತಾ ತನ್ನ ಮಕ್ಕಳಿಗಿಂತಲೂ, ಇವರೇ ಪ್ರೀತಿ ಪಾತ್ರರೆಂದು ಅವರಂ ಕಾಪಾಡುತ್ತಿರಲಿಲ್ಲವೆ; ಯಶೋದೆಯು ಶ್ರೀಕೃಷ್ಣನಂ ಹೆತ್ತನಳು ಬೇರೆಯಾಗಿದ್ದರೂ ಪಾಲಿಸಿದ ಮಮತೆಯಿಂದ. ಆತನು ಮಾಡುವ ಕಾರ್ಯಂಗಳೆಲ್ಲವುಂ ಸಹಿಸಿ ಆತನಂ ದೂಡುವವರನೆಲ್ಲರಂ ತಿರಸ್ಕರಿಸಿ, ಪಾಲಿಸಲಿಲ್ಲವೆ ! ಪರಮ ನೀಚನಾಗಿಯೂ, ದುಃಖಾಕರ ಮಾಗಿಯೂ ಇರುವ ಈ ದ್ರವ್ಯಕ್ಕೆ ಆಶಿಸಿ, ಅಶಾಶ್ವತವಾದ ಈ ದೇಹಕ್ಕೆ ಪೋಷಣೆಯಂ ಮಾಡಲು ಸಮ್ಮತಿಸುವರಾಗಬಹುದೆ, ಇದರಿಂದ ಲೋಕಾಪವಾದವೂ, ಪರಮಪಾಪವೂ, ಪರಲೋಕನಾಶವೂ, ಪ್ರಾಪ್ತಿಸುತ್ತವೆ. ಜೀವಿಸಬೇಕಾಡದೆ ಉತ್ತಮವಾದ ವೃತ್ತಿಯಿಂದಲೂ, ದ್ರವ್ಯದಿಂದಲೂ ಜೀವನಮಂ ಮಾಡಬೇಕು ಪುತ್ರಸಂಮಾರಿ ಜೀವಿಸುವದು ಅಧಮಾಧಮವು ಲೋಕದೊಳು ದ್ರವ್ಯವೇ ಪರಮ ಪಾವಿಯಾದದ್ದೂ, ದುಃಖಜನಕವಾದದ್ದೂ, ಎಂದು ಹಿರಿಯರು ಹೇಳಿರುವರು.

ಅರ್ಥಾನಾಮರ್ಜನೇದುಃಖಮರ್ಜಿತಾನಾಂಚರಕ್ಷಣಂ । ನಾಶೇದುಃಖಮ್ಯಯೇದುಃಖಮರ್ಥೋದುಃಖಸ್ಯಭಾಜನಂ ॥

ಹಣವನ್ನು ಸಂಪಾದಿಸಬೇಕಾದರೆ ಮಹಾದುಃಖವನಂ ಹೊಂದಬೇಕು ಹಾಗೆ ಸಂಪಾದಿಸಲ್ಪಟ್ಟ ಹಣವಂ ಕಾಪಾಡಬೇಕಾದರೆ ಇದ್ದದ್ದೂ ದುಃಖವು, ಅಂಥಾ ಹಣವಂ ವೆಚ್ಚ ಮಾಡಬೇಕಾದರೆ ಇದ್ದದ್ದೂ ಪರಮ ದುಃಖವು ಅದು ನಾಶವಂ ಹೊಂದಿದರೆ ಅದಕ್ಕಿಂತಲೂ ದುಃಖವು, ಆದ್ದರಿಂದ ಈ ಹಣವೇ ದುಃಖಕ್ಕೆಕಾರಣ

ಣವಾಗಿರುವದೆಂದು ತಿಳಿದಿದ್ದರೂ ಅದಕ್ಕಾಶಿಸಿ ನೀನೇನೂ ಅರಿಯದ ಬಾಲನಂ ಮಾರಬಹುದೇ, ನಾವೆಂತು ಹೇಳಿದರೆ, ಅಂತೆ ಕೇಳುವ ಈ ಸುಕುಮಾರನಂ ಇಂಥಾ ನೀಚಕೃತ್ಯಕ್ಕೆ ಮಗಾರಿ ಜೀವಿಸುವದಕ್ಕಿಂತಲೂ ಮರಣವೇ ಹಿತವಾದದ್ದು ಅದಕ್ಕಿಂತಲೂ, ಈ ಕಷ್ಟಸ್ಥಿತಿಯು ಅತ್ಯುತ್ತಮವಾದುದು. ನಾವು ಸುಖಿಸುವ ಯೋಗವಿರುವದಾದರೆ ಹೇಗಾದರೂ ಲಭಿಸುವದು, ನಾವು ಧರ್ಮಪರರಾಗಿ ದೇವರನ್ನು ಪೂಜಿಸುತ್ತಾ ಧ್ಯಾನಿಸುತ್ತಿದ್ದರೆ ಆ ದೈವವೆಯಾಕೆ ಕರುಣಿಸಬಾರದು ಕಡೆಗೆ ನೀನೀದುರಾಲೋಚನೆಯಂ ಮಾಡಿದ್ದು ನೋಡಿ, ನಾನು ಶೋಕಿಸಬೇಕಾಗಿ ಬಂತು. ಆಯ್ಯೋ ದೇವರೇ ! ಈ ನೀಚ ಬುದ್ಧಿಯಂ ಕೊಡುವದಕ್ಕಿಂತಲೂ ಉತ್ತಮವಾದ ಮತಿಯನ್ನಿತ್ತು ಕಾಪಾಡಬಾರದೆ, ಎಂದು ದುಃಖಿಸುತ್ತಾ ಬರಲು ಆ ಬ್ರಾಹ್ಮಣನು ಆ ಕಾಂತೆಯಂ ಕುರಿತು ಎಲೈ ವಿವೇಕಹೀನಳೇ ಕೇಳು ! ನೀಚ ಕಾರ್ಯವುಂಮಾಡುವದಕ್ಕೂ, ಸತ್ಕಾರ್ಯದಲ್ಲಿ ಪ್ರವರ್ತಿಸುವದಕ್ಕೂ, ಯಾವದಕ್ಕೂ ಯಾರೂ ಸ್ವತಂತ್ರರಲ್ಲ, ಜಗದ್ರೂಪಿಯಾಜ್ಞಾನುಸಾರವಾಗಿ ಅವರವರ ಕರ್ಮಫಲಂಗಳೇ ಹಾಗೆ ಬುದ್ಧಿಯಂ ಕಲ್ಪಿಸುವವು, ಯಾವ ಯಾವ ಕಾಲಕ್ಕೆ ಯೆಂತೆಂತಿರಬೇಕೊ ಹೇಗೆ ನಡೆಯುಬೇಕೋ, ಯಾವ ಯಾವದು ಲಭಿಸಬೇಕೊ, ಅದು ಯಾರಿಗೂ ತಿಳಿಯುವ ಇದುವ ಮಲ್ಲದೆ.

ಋಣಾನುಬಂಧರೂಪೇಣ ಪಶುಪತ್ನಿಸುತಾಲಯಾಃ । ಋಣಕ್ಷಯೇಕ್ಷಯಂಯಾಂತಿಕಾತತ್ರಪರಿವೇದನಾ ॥

ಋಣಾನುಬಂಧ ವಿರುವನರಿಗೂ, ಪಶುಗಳೂ ಹೆಂಡತಿಯೂ, ಮಕ್ಕಳೂ ಮನೆಯೂ ಇದ್ದು ಸುಖಿಸುವನು, ಅವರ ಸುಖವಂ ಅನುಭವಿಸುವ ಋಣವು ನಾಶವಾಗಲು, ಮೇಲೆ ಹೇಳಿದ ಪಶ್ವಾದಿಗಳೆಲ್ಲಾ ನಾಶವಾಗಿ ಹೋಗುತ್ತವೆ. ಇದುವಲ್ಲದೆ ಒಂದು ಗಿಡದಮೇಲೆ ಸಾಯಂಕಾಲವಾಗಲು, ಅನೇಕ ಪಕ್ಷಿಗಳು ಸೇರಿ ಕಲತು ಪರಸ್ಪರ ಪ್ರೀತಿಯಂ ಹೊಂದಿ ಸಲ್ಲಾಪಂಗಳಂ ಮಾಡುತ್ತಿರುವವು. ಕತ್ತಲು ಕವಿಯಲು ಬಂದ ದಾರಿಯಂ ಹಿಡಿದುಹೋಗುವಂತೆ ನಮ್ಮಗಳ ಒಳಿಯೊಳಿದ್ದು ನಮ್ಮಿಂದ ಪೋಷಣೆಯಂ ಈವರಿವಿಗೂ ಹೊಂದಬೇಕಾದ ಋಣಾನುಬಂಧ ವಿದ್ದದ್ದರಿಂದಲೇ ಈ ಮಗುವು ನಮಗೆದೊರಕಿ ಇದುವರಿಗಂ ಪೋಷಿಸಲ್ಪಟ್ಟಿತು. ಈಗ ಋಣಾನುಬಂಧ ತೀರಿದ್ದರಿಂದಲೇ ನಮಗಿಂತು ಬುದ್ಧಿಯು ಜನಿಸಿತು. ನಮ್ಮಹೊಟ್ಟೆಯ ಲ್ಲಿ ಬಿನಾದರೂ ಹುಟ್ಟಿದವನೇ ಇವನಂ ನಾವೇತಕ್ಕೆ ಹೀಗೆ ಸಾಕಿದೆವು ? ಇವನ ಅದೃಷ್ಟವು ಇನ್ನೂ ಭೂಮಿಯೊಳು ಬದುಕಿರುವದಾಗಿದ್ದರೆ, ಕ್ರಯಕ್ಕೆ ಕೊಂಡವರು ಕೊಲ್ಲದೆ, ಅನ್ಯರಂ ಬಲಿಯಾಗಿ ಸಮರ್ಪಿಸಿ ಇವನಂ ಯಾಕೆ ಬದುಕಿಸಬಾರದು, ಇವನ ಅದೃಷ್ಟಕ್ಕೆ ಕಾರಣಕರ್ತಳಾದವಳು ನೀನಲ್ಲ. ಈ ಮುಖಾಂತರವಾಗಿ ನಮಗೆ ದ್ರವ್ಯಲಾಭವಿರುವದಾಗಿದ್ದರೆ ನಾವೇಕೆ

ವ್ಯಥಾ ಇಂತು ಚಿಂತಿಸಿ ಆ ಹಣವಮಂ ಬಿಡಬೇಕು, ನಾವು ಈ ವಿಧವಾಗಿ ಮಾರಿದರೂ ಇವನು ಚಿರಂಜೀವಿಯಾಗಿ ಬದುಕಬೇಕೆಂದು ನೀನು ಸಾರಿದಂತೆ ಆವನ ಜನ್ಮಾಂತರದ ಫಲದ ಬಲದಿಂದಲೇ ವಿತಕ್ಕಾಗಬಾರದು. ಇಂತಾ ಅಜ್ಞಾನ ಚಿಂತನವಂ ಬಿಡೆಂದು ಹೇಳಲು, ಚಂಚಲ ಹೃದಯಳಾಗಿ ಯಾವದೊಂದನಾಪಲಾರದೆ ಸುಮ್ಮನಾಗಿರಲು, ಈಕೆಯು ಸಮ್ಮತಿಸಿದಳೆಂದು ತಿಳಿದು ಬೀದಿಯಲ್ಲಿ ಬಂದು ಸಾರಿಕೊಂಡು ಹೋಗುತ್ತಿರುವ ರಾಜಭಟರಂ ಕರೆದು ಅಯ್ಯಾ ಭಟರೇ! ನಮ್ಮಲ್ಲಿ ಬಾಲಕನೊರ್ವನಿಹನು. ನಾವಾದರೆ ಈ ಸಾವಿರ ವರಹಂಗಳಂ ತೆಗೆದುಕೊಂಡು ಕೊಡಲು ಸಿದ್ಧನಾಗಿರುವೆಂ. ಆಕೆಯ ಮನವಾದರೋ ಬೇರೆ ಇರುವದು. ಆಕೆಯ ಇಚ್ಛಾನುಸಾರವಾಗಿಸಿ ಮಗುವಂ ಕೊಂಡೊಯ್ಯಲುಬಹುದೆಂದು ಪೇಳಲಾ ಕಟುಕರು ಒಳಬಂದು ಮಗುವಂ ನೋಡಿ ಭರದಿಂ ಮಂತ್ರಿಯ ಬಳಿಯಂ ಸಾರಿ, ಈಪರಿಯನ್ನೆಲ್ಲವಂ ಪೇಳಲು ಆ ಮಂತ್ರಿಯ ಮತ್ತೊಂದು ಸಾವಿರ ವರಹಂಗಳಿನಾ ವಧಕರ ಕೈಯೊಳಿತ್ತು, ನೀವು ತಾಳಿ ಹೋದವರಾದರೆ, ಅವರ ಮನಂ ಮರಳಿ ಎಂತಹುದೋ ಕಾಣಲರಿಯದು, ಆದುದರಿಂದ ಅತಿಭರದಿಂ ಪೋಗಿ ಈ ವರಹಂಗಳಂ ಆಕೆಯ ಕೈಯ್ಯೊಳಿತ್ತು, ಮಗುವಂ ಎಲ್ಲಯೂ ಬಿಡದೆ ಎತ್ತಿಕೊಂಮೆ ಬನ್ನಿರಿ ಇದು ತಪ್ಪಿಹೋದರೆ ಇನ್ನೆಲ್ಲಿಯೂ ದೊರೆಯಲಾರದು. ಕೆಲಸಕ್ಕೆ ಕುಂದಕಬಂದರೆ ರಾಜಾಗ್ರಹಕ್ಕೆ ಪಾತ್ರರಾಗುವಿರಿ, ಅರಸಂ ಚಂಡಶಾಸನನಾಗಿರುವಂ ಆದ್ದರಿಂದ ಬೇಗನೆ ಹೋಗಬೇಕೆಂದೊರೆಯಲು, ಮಂತ್ರಿಯಾಜ್ಞಾನುಸಾರವಾಗಿ ಹೋಗಿ ಹಣವಂ ಆಕೆಯ ಕೈಯ್ಯೊಳಿತ್ತು, ಮಗುವಂ ಭದ್ರವಾಗಿ ಎತ್ತಿಕೊಂಡು ಬಂದು, ಪ್ರಧಾನಮಂತ್ರಿಯ ಕೈಯ್ಯೊಳ್ಕೀಯ್ಯಲು, ಆ ಮಂತ್ರಿಯು ಪ್ರತಿದಿನದಲ್ಲಿಯೂ ಆ ಶಿಶುವಿಗೆ ಅಭ್ಯಂಜನಾದಿಗಳಂ ಮಾಡಿಸುತ್ತಾ, ಪ್ರತಿದಿನದಲ್ಲಿಯೂ ವಿವಿಧಭಕ್ಷ್ಯಭೋಜ್ಯಂಗಳಂಮಾಡಿಸಿ ಉಣಿಸುತ್ತಾ ನವರಾತ್ರಿಯು ಒಂಭತ್ತನೆಯ ದಿನದ ರಾತ್ರಿಯ ಸಮಯ ನಿರೀಕ್ಷಣೆಯೊಳಿರ್ದಂ.

ಮಂತ್ರಿಯ ಮನೆಗೆ ಆ ಮಗುವು ಬಂದ ದಿನವಾರಭ್ಯ ಆ ಪುಷ್ಕರರಾಯನಿಗೂ ಆತನ ಹಿರಿಯ ಪೆಂಡತಿಯಾದ ಗುಣವತಿಗೂ ಒಂದುವಿಧವಾದ ಹೇಳಲೊಲ್ಲದ ಚಿಂತೆಯು ಪ್ರಾಪ್ತಿಯಾಗಿ ಆ ಮೂಲಕವಾಗಿ ಬಾಯಿಕೆದ್ದು, ಅನ್ನಾದಿಗಳು ವಿಷಮಾಗಿ ತೋರುತ್ತಾವರೆ ಕಾರಣವಂ ತಿಳಿಯಲು ವೈದ್ಯರಂ ಕರೆಯಿಸಿ, ಕೈ ನೋಡಿಸಲು ನಾಡೀ ಪರೀಕ್ಷೆಯೇ ಮೊದಲಾದ ದೇಹಪರೀಕ್ಷೆಯಂ ಮಾಡಿ, ರೋಗಮೇನೂ ಕಾಣಬಾರದಿರೆ. ಈ ನಿಶ್ಚಯಾರ್ಥವಂ ರಾಯಂಗರುಹಿದರೆ, ಬಾಧೆಯಂ ಅನುಭವಿಸುತ್ತಿರುವನಾದ್ದರಿಂದ ನಂಬುವದಿಲ್ಲ. ಇದರ ಮೂಲಕ ನಾವು ವೈದ್ಯಶಾಸ್ತ್ರಜ್ಞರಲ್ಲವೆಂದು ತೋರಿ, ನಮ್ಮ ಜೀವನಂಗಳಿಗೆ ಭಂಗಮಂ ತರುವನು. ಆದ್ದರಿಂದ ನಿಜಮಂ ಹೇಳಬಾರದೆಂದರಿತು, ಒರೊರ್ವ

ರು ಒಂದೊಂದು ವಿಧವಾಗಿ ಜಾಡ್ಯಗಳಂ ಹುಟ್ಟಿಸುತ್ತಾ ಹೆಸರನ್ನು ತಕ್ಕಂತೆ ಇಡುತ್ತಾ ಬಂದು, ಇದಕ್ಕೆ ಇಂಥಾ ದ್ರವ್ಯಂಗಳಾಗಬೇಕೆಂದು ಎಲ್ಲಿಯೂ ದೊರೆಯದ ಪದಾರ್ಥಂಗಳಂ ಬರೆದುಕೊಟ್ಟು, ಅದು ದೊರೆಯದೆ ಹೋಗೆಲು ತಾವೇ ತರಿಸುವೆನೆಂದು ದ್ರವ್ಯಂಗಳಂ ನೆರೆದುಕೊಳ್ಳುತ್ತಾ, ಕೆಲವರು ಸಚ್ಚಕರ್ಪೂರ, ಕಸ್ತೂರಿ ಕೇಸರಿ, ಮುಂತಾದವುಗಳಂ ವಿಶೇಷವಾಗಿ ತರಿಸಿ, ದಾಕ್ಷೆ, ಸಕ್ಕರೆ ಜೇನು, ಇವುಗಳಂ ತರಿಸಿ, ಅಧಿಕವಾಗಿ ಔಷಧಂಗಳಂ ಮಾಡಿ, ತಮಗೆ ಬೇಕಾದ ರೋಗಿಗಳಿಗೆ ಕೊಡುತ್ತಾ, ರಾಜ್ಞೀರಾಜರಿಗೆ ಕೊಡ್ದು, ತಿನ್ನಿಸುತ್ತಾ ಬರುವರು. ಇವರಿವ್ವರೂ ತಂತ್ರಗಾರರಾದ ವೈದ್ಯರ ವೋಸಹಾವವಂ ಕಾಣದೆ ಅವರು ಕೊಟ್ಟ ಮದ್ದುಗಳನ್ನೆಲ್ಲಮಂ ತಿಂದರೂ ತಮ್ಮ ಮನೋರೋಗಂ ವೊಗಲೇ ಇಲ್ಲವು ಬಾಯಿಯ ಕಹಿಯು ತಪ್ಪಲೇ ಇಲ್ಲಂ ಹೀಗಿರುತ್ತಾ, ಇರಲು, ನವರಾತ್ರಿಯು ವೊದಲನೆ ದಿನಂ ತಲೆದೋರಲು, ಮಂತ್ರಿಯು ರಾಜಸನ್ನಿಧಿಗೈತಂದು ಸ್ವಾಮಿ ! ನವರಾತ್ರಿಯಾರಂಭಿಸಿತು, ದೇವಾಲಯದೊಳು ಪೂಜಾದಿಗಳಿಗೆ ಪ್ರಾರಂಭಿಸಬೇಕು, ತಮ್ಮ ಪಟ್ಟದ ಕತ್ತಿಯಂ ದಯಮಾಡಿರೆಂದು ಕೇಳಿ, ತೆಗೆದುಕೊಂಡು ಹೋಗಿ ಪದ್ಧತಿಯಂತೆ ಪೂಜಾರಿಯ ಕೈಗಿತ್ತು, ದೇವಾಲಯದೊಳಿರಿಸಿ ಪೂಜಾವಿ ಉತ್ಸವಂಗಳಿಗಾರಂಭಿಸಿ, ಆತ್ಯುತ್ಸಾಹದೊಳು ಪ್ರತಿದಿನದ ಆರಾಧನೆಗಳಂ ಮಾಡಿಸುತ್ತಾ, ಹೀಗೆಯೇ ಎಂಟು ದಿನಂಗಳಾಗೆ, ಒಂಭತ್ತನೆಯ ದಿನದ ಸಾಯಂಕಾಲವಾಗೆ, ಆ ಬಾಲಕಂಗೆ ಅಭ್ಯಂಗಮಂ ಮಾಡಿಸಿ ಹರಿದ್ರಾವಸ್ತ್ರಮಂ ಧರಿಸಿಕೊಂಡಲೊಳು ರಕ್ತ ಪುಷ್ಪಮಾಲೆಯಂ ಹಾಕಿಸಿ ದೇವಾಲಯಕ್ಕೆ ಕರೆತಂದು ದೇವಿಯ ಮುಂಭಾಗದೊಳು ಶಿರಬಾಗಿ ಕುಳಿತಿರುವಂತೆ ಜೇಳ್ಕುಳಿರಿಸಿದ ಮಂತ್ರಿಯು ರಾಜನಾದ್ದ ಪುಷ್ಕರನ ಸನ್ನಿಧಿಗೈದಿ, ಎಲ್ಲೆ ಮಹಾರಾಜರೇ ! ದೇವಾಲಯದೊಳು ಪೂಜೆಯೆಲ್ಲವೂ ಆಗಿ ಮಹಾ ಮಂಗಳಾರತಿಗಾಗಿ ಸನ್ನಿಧಿಯು ಬರುವಿಕೆಯು ನಿರೀಕ್ಷಿಸಲ್ಪಡುತ್ತಿರುವದೆಂದು ವಿಜ್ಞಾಪಿಸಲು, ಆ ರಾಯನು ಹರಹರಾ ! ಮಹಾದೇವ ಇದೆಂದು ಮಹಾ ಪಾಪಕಂಪುಟನ ಕಾರ್ಯಕ್ಕೆ ಗುರಿಮಾಡುವಿಯಾ ? ಎಂದು ಪೇಜಾಡುತ್ತಾ ಪದ್ಧತಿಯಂ ಮೀರಿದರೆ, ಪ್ರಜೆಗಳಿಗೆ ವಿರುದ್ಧನಾಗುವೆನು, ನಡೆಯಿಸುವದೆಂತು, ಅಯ್ಯೋ ಕಾಲಾನುಸಾರವಾಗಿ ನಡೆದು ಕೃಮೇಣ ಈ ಪದ್ಧತಿಯಂ ತಪ್ಪಿಸಬೇಕೆಂದು ಯೋಚಿಸಿ ಅಲ್ಲಿಂದೊರಟು, ಕಾಳಿಕಾಲಯಕ್ಕೆ ಬಂದು, ದೇವಿಯ ಮುಂಗಡೆಯೊಳು ನಿಂತು ಶಿರಬಾಗಿಸಿಕೊಂಡಿರುವ ಬಾಲಕನ ಪಾರ್ಶ್ವದೊಳು ನಿಂತು ದೇವಿಯಂ ಪಾರ್ಥಿಸುತ್ತಿರಲಾ ಪೂಜಾರಿಯು ದೇವಿಗೆ ಮಂಗಳಾರತಿಯಂಮಾಡಿ, ದೇವಿಯ ಸನ್ನಿಧಿಯಲ್ಲಿ ಖಡ್ಗಮಂ ತಂದು ರಾಜನಕೈಗೆ ಕೊಡಲು, ರಾಯಂ ಒರೆಯಿಂ ಕತ್ತಿಯಂ ಕಿತ್ತು ನಿಂತುಕೊಳ್ಳಲು, ಸ್ವಾಮಿ ! ಸಾವಕಾಶಮೇಕೆ ಬಲಯಂ ಸ

ಪುದಿಸಬಹುದೆಸಲು ರಾಯಂಕರಗತಕೃಪಾಣಮುಂ ಮೇಲಕ್ಕೆ ಎತ್ತಿದನು. ಇನ್ನು ಮುಂದೊರೆಯುತು ನಿದೆಯು ನಸ್ಯಂ ಬಾಧಿಸುವದು, ನಸ್ಯ ಸರದಿಯೂ ಪೂರ್ತಿಸಿದುದು, ಸಾಲ್ಯಸೆ ಯಾಮವು ತಲೆದೋರುತ್ತಿಹುದು, ಅಜ್ಞಿಯಾದರೆ ನಿಶ್ರಮಿಸಿಕೊಳ್ಳುವನೆಂದುಸುರೆ, ರಾಯಂ ಅಂತೆಯೇ ಮಾಡೆಂದು ಉತ್ತರವನ್ನಿತ್ತಂ. ಆನಂತರಮಾ ವಿಕ್ರಮಾರ್ಕಾವನೀಸಾರ್ವಭೌಮಂ ಕಲಾವತಿಯು ಸೀರೆಯೊಳು ಭೀತಾಳನಂ, ಅವಾಹನಂಗೈದು ಆ ಸೀರೆಯುಂ ಸಂಬೋಧಿಸಿ, ಹೇ ಕಲಾವತೀ ಸೀರೆಯೇ ! ಈ ನಾಳ್ಮನೆ ಯಾಮವು ತೀರುವ ವರಿಯಂತನ್ನೂ, ಹೊತ್ತು ಹೋಗುವಂತೆ ನೀನೊಂದು ಕಥೆಯುಂ ಹೇಳೆಂದು ಅಜ್ಞಾಪಿಸಲು, ಆಕೆಯುಬ್ಬಿ ರ್ದ ಸೀರೆಯು ತನ್ನಷ್ಟಕ್ಕೆ ತಾನೇ ಪಿಚ್ಚಿಪಿದ್ದು, ರಾಯನಮುಂದೆ ಬಂದದ್ದಾಗಿ ಕಥೆಯಂ ಹೇಳಲಾರಂಭಿಸಿದುದು ಎಂಬಲ್ಲಿಗೆ ಅಸಾಕ್ಷರಿಕ ಜಾಷಾ ವಚನರಚಿತ ಸೌಂದರ್ಯಾದ್ಭುತ ಮೂರ್ಚಿತ್ರ ಬೃಹತ್ಕಥಾಮಂಜರಿಯೊಳು ಮೂರನೆ ಯಾಮದ ಕಥಾ ವಿರಾಮವಾದುದು.

ನಾಳ್ಮನೆ ಯಾಮದೊಳಾ ಕಲಾವತಿಯುಬ್ಬಿನ ಕಲಾವತಿ ಸೀರೆಯು ಹೇಳುವ ಕಥೆ.

ಬೂಧುಜಲಲಾವಣ್ಯಮೇ ಲಾಲಿಸು ? ಕರ್ನಾಟಕ ದೇಶದೊಳು ಕಳಿಂಗನೆಂಬೊರ್ವ ಯೋಗಿಂದ್ರನಿದ್ದಂ ಎನೆ, ಕಲಾವತಿಯು ಪರತು ಸಂತಾಪಸಂಯುತಳಾಗಿ ಅಯ್ಯೋ ತಲೆಯುಂ ಕಡಿಯಬ್ಬೇಕೆಂದು ಕತ್ತಿಯುಂ ಮೇಲಕ್ಕೆ ಎತ್ತಿಯಿದ್ದ ಆ ಹುಡುಗನ ಗತಿ ವಿನಾಯಿತೋ ತಿಳಿಯಲಿಲ್ಲ, ಆ ಕಥೆಯುಂ ಹೇಗಪೆ ಈ ಸೀರೆಯು ಯಾವದನ್ನೋ ಉಪಕ್ರಮಿಸಿರುವದು, ಎನುತ ಪರಮ ಚಿಂತಾಕ್ರಾಂತಳಾಗಿ ಮೈಮೇಲೆ ಸೀರೆಯಿಲ್ಲವೆಂಬ ಯೋಚನೆ ಇನಿತಾದರು ಮಿಲ್ಲದೆ, ಮುಂಡಮುಂ ಬಿಟ್ಟು ದುಮಿಕಿ, ಬಂದು ವಿಕ್ರಮಾರ್ಕ ಮಹಾರಾಯನ ಮುಂಗಡೆಯೊಳು ನಿಂತು, ಎಲೈ ಮಹಾ ಶೂರಧೀರನೇ ! ನಿಮ್ಮ ಶಕ್ತಿಸಾಹಸಂಗಳಂ ಪರಿಕಿಸಲೆ, ನಿಮ್ಮೊಳು ನಾನು ವೃಥಾ ಇಂತು ಶಪಥಮಂತಾಳಿದೆನು. ಅಜ್ಞಾನದಿಂದ ಮಾಡಿದ ನನ್ನ ಅಪರಾಧಮುಂ ಮನ್ನಿಸಿ, ನನ್ನೊಳು ಕನಿಕರಮಾಂತು, ಮಗನೆಂಡರಿಯದೆ ತಲೆಯುಂ ಕತ್ತರಿಸಬೇಕೆಂದಿರ್ಕ ರಾಯನೇನಮಾಡಿದಂ, ಆ ಹುಡುಗನಂ ಕತ್ತರಿಸಿದನೋ ಇಲ್ಲವೋ, ಅದಂ ತಿಳಿಯದೆ ನನ್ನ ಮನಂ ಕಳವಳಿಸುತ್ತಿಹುದು. ಆ ಕಥೆಯನ್ನೇ ಮುಂದಕ್ಕೆ ಹೇಳುವಂತೆ ಕರುಣಿಸಬೇಕೆಂದು ಮುಕುಳಿತಕರಕಂಜಳಾಗಿ, ತನ್ನ ಮುಂಗಡೆಯೊಳು ನಿಂತು ಅತ್ಯಂತವಿನಯಳಾಗಿ, ಬೀಸುವ ಕಲಾವತಿಯೊಳು ಕೃಪೆಯುನ್ಮಾಂತು ಹಾಗೆಯೇ ಬರೆದುಕೊಡುವಳಾಗು. ನಿನ್ನಿಷ್ಟಾನುಸಾರವಾಗಗೊಳಿಸುವೆನೆನಲು ಅಂತೆ ನಿರ್ಣಯಳಾಗಿ, ಬಳಿಗ್ಯೈ ಬರಮುಕೊಡಲನಿತರೊಳು, ರಾಯ ಸಂಜ್ಞಾಜ್ಞೆಯಿಂದ ಶಾನೊಂದು ಗೃಹಗೋಧ

ಕಾರೂಪಮುಂ ತಾಳ್ದಿ ಆಕೆಯ ಮೇಲೆ ಮೂತ್ರಸ್ರಾವಮುಂ ಮಾಡಲು, ತಂ
ಣಗಾದ ವೈಯ್ಯುಳ್ಳವಳಾಗೆ ಹಾಗೆಯೇ ಪ್ರಜ್ಞಾನಂತಳಾಗಿ, ತಾಂ ನಗ್ನಳಾಗಿ
ರುವೆನೆಂದು ನಾಚಿಕೆಯುಂ ತಾಳಿ, ಪಕ್ಕನೆ ಹಿಂತಿರುಗಿ ಹೋಗಿ, ಬಳಿಯೊಳಿದ್ದ
ವಸ್ತ್ರವನ್ನುಟ್ಟುಕೊಳ್ಳಲು ಭೀತಾಳಿನದಂ, ಕಾಣದಂತೆ ಅಪಹರಿಸೆ, ಮತ್ತೊಂ
ದಂ ತೆಗದು, ಸುತ್ತಿಕೊಳ್ಳಲು, ಅದುಂ ಅಂತೆಯೇ ಆಗೆ ಅನ್ಯವಸ್ತ್ರಮುಂ ತೆಗೆದು
ಡಲು ಅದು ಸಹ ಮಾಯಮಾಗೆ, ಹೀಗೆಯೇ ಆ ಕಲಾವತಿಯ ಬಳಿಯೊಳಿರ್ದ
ಸಮಸ್ತ ವಸ್ತ್ರಂಗಳೂ, ಅಪಹರಿಸಲ್ಪಡಲು, ತಾನು ಮಾಡುವ ಸಾಹಸಂಗಳು
ಪ್ರಯೋಜನವಿಲ್ಲದೆ ಕೆಡುವವು, ಪುರುಷನ ಮುಂದೆ ನಿರ್ವಾಣಮಾಗಿ ನಿಲ್ಲಬೇ
ಕಾಯಿತಲ್ಲ, ಛೀ ನಾನಾಂತ ಗರ್ವವೇ ನನಗಿಂತು ಮಾಡಿತೆಂದು ಸಾಮಿ
ವಿಕ್ರಮಾಕರ್ಕರಾಯರೇ ! ಒಂದು ವಸ್ತ್ರಮುಂ ಕೊಡಿಸಿದರೆ, ಧರಿಸಿಕೊಂಡು, ಸ
ನ್ನಿಧಿಯೊಳು ಕುಳಿತು ಕಥೆಯುಂ ಕೇಳುವೆನೆನಲು, ನೀನು ಅಂತೆಯೇ ಎರಡು
ಕೈಗಳನ್ನೆತ್ತಿ ನೆತ್ತಿಯೊಳು ಜೋಡಿಸಿದ್ದು, ಬೇಡಿದರೆ ಕೊಡಿಸುವೆನೆನಲಾ ಕಲಾ
ವತಿಯು ಇಂತೆಯೇ, ಮಾನವುಂ ತೊರೆದು ನಗ್ನಳಾಗಿ ನಾನೆಂತು ಹೋಗಿ ದೇ
ಹಿಯೆಂದು ಪ್ರಾರ್ಥಿಸಲಿ ? ಸುಮ್ಮನಿರುವೆನೆಂದರೆ, ಇನ್ನೇನಂ ಮಾಡಿಸಿ, ಭಂಗಿ
ಸುವನೋ ಅಯ್ಯೋ ಆ ಕಥೆಯುಂ ಪೂರೈಸದೆ ನಿಲ್ಲಿಸುವನೋ ಎಂದು ಯೋ
ಚಿಸುತ್ತಿರೆ, ಆ ಸೀರೆಯೊಳು, ಆ ವಾಹನೆಯಾಗಿದ್ದ ಭೀತಾಳಿನು, ಯೋಗೀ
ಶ್ವರನ ಕಥೆಯನ್ನಾರಂಭಿಸಲು, ಕಲಾವತಿಯು ವ್ಯಕವಳಿದರೂ, ಸುಖವಾದರೂ
ಹೊಂದಜೇಕೆಂಬ ಗಾದೆಯಂತೆ ಮಾನಮೆಂತೂ ಹೋಯಿತು, ಕಥೆಯುಂ ಕೇಳಿ
ಮನಸ್ಸನ್ಮಾಧಾನವಂ ಹೊಂದುವೆನು. ಈ ಅವನೀಂದ್ರನಿಂದ ನಾಂ ಜಯಿಸ
ಲ್ಪಟ್ಟಿರುವೆನಾದ್ದರಿಂದ, ಈತನೇ ನನ್ನ ಕಾಂತನಾದುಂ, ಪತಿಯ ಮುಂದೆ ಸತಿ
ಯು ವಸ್ತ್ರಹೀನಳಾಗಿ ನಿಂತರೆ, ಅದು ಅವಮಾನವೇನೂ ಅಲ್ಲ, ಹಿಂದೆ ಗೋ
ವಿಕಾಂಗನಾ ಮಣಿಯರ ಜಲಕ್ರೀಡಾಕಾಲದೊಳು, ಕಾಮುಜನಕನು ಅವರವರ
ವಸನಂಗಳಂ ಅಪಹರಿಸಿ ಹೊನ್ನೆಯ ಗಿಡದ ಮೇಲೆ ಕುಳಿತಿರೆ, ಸರೋವರ ದ
ಶ್ಚಣಂ ನಿರ್ವಾಣವಾಗಿ ಅನೇಕ ಗೋವಿಕಾ ಸುಂದರಿಯರೈತಂದು, ಆ ಗಿಡದ
ಬುಡದಲ್ಲಿ ನಿಂತು ಕೈಗಳಂ ಎತ್ತಿಸ್ತುತಿಯುಂ ಮಾಡಲಿಲ್ಲವೆ ? ಅದಂ ಆ ಕಾಂ
ತೆಯರವಮಾನವೆಂದು ಯೋಚಿಸಿದರೆ ? ನಾನೀಗಲಂತೆಯೇ ಮಾಡುವದರಿಂದ ತ
ಪ್ಪಿಲ್ಲವೆಂದು ಸಮಾಧಾನಮಾಂತವಳಾಗಿ, ಬೆತ್ತಲೆಯಾಗಿ, ಬಂದು ರಾಯನ ಮುಂ
ಗಡೆಯೊಳು ನಿಂತು, ಕೈಗಳನ್ನೆತ್ತಿ ಹಸ್ತಂಗಳಂ ಜೋಡಿಸಿ ತಲೆಯ ಮೇಲಿಟ್ಟು,
ಎಲ್ಲೈ ಪ್ರಾಣಕಾಂತನೇ ! ಇಂತೇಕೆ ನನ್ನ ಮನವಂ ಸಂತಾಪಗೊಳಿಸುವೆ, ಕ
ರುಣಿಸಿ ವಸ್ತ್ರಮುಂ ಕೊಡಿಸಿ, ಕಥೆಯುಂ ಪೂರೈಸುವಂತೆ ಮಾಡಿ ಮನಮುಂ
ಸಂತೋಷಗೊಳಿಸು. ನಿನ್ನನ್ನು ನಾನೂ ಅಂತೆಯೇ ದೇಹಸುಖವಿತ್ತು

ನಂದಗೊಳಿಸುವೆನು ಎನಲು ವಿಕ್ರಮಾರ್ಕರಾಯಂ ಬಳಿಯೊಳಿರ್ದ ಪದ್ಮಾವತೀ ಲೀಲಾವತಿಯರಂ ನೋಡಿ ಪಕ್ಕನೆ ನಕ್ಕನಾಗೆ ಅವರಿರ್ವರೂ, ತಮ್ಮ ತಂಗಿಯು ಹೊಂದುತ್ತಿರುವ ಅವಮಾನದ ಪರಿಯಂ ನೋಡಿ ಅಸಮಾಧಾನ ಚಿತ್ತರಾಗೆ, ಅವರ ಮುಖರಸದಿಂದ ಅವರ ಭಾವಮುಂ ಕಂಡು ಭೇತಾಳನಂ ಸಂಜ್ಞೆಮಾಡೆ, ರಾಯನಾಜ್ಞಾನುಸಾರಮಾಗಿಯೂ, ಭೇತಾಳಂ ಸೂಕ್ಷ್ಮರೂಪಮಾದೊಂದು, ಅಂಶುಕವಂ ಕೊಡಲು ಅದಂ ಧರಿಸಿ ಮೇಲನ ಸೆರಗಿಗೆ ಸಾಲದೆ ಹೋದರೂ ಯೋಚಿಸದೆ, ವಿಕ್ರಮಾರ್ಕರಾಯನ ಮಂಚದ ಸಮೀಪದೊಳು ಕುಳಿತು ಕೊಳ್ಳಲು, ಭೇತಾಳನು ಮೂರುಯಾಮದಿಂದ ನಡೆದು ಬರುತ್ತಿರುವ ಕಥೆಯನ್ನೇ ಹೇಳುತ್ತಾ ಬಂದನು.

ತನ್ನ ತನುಸಂಭವನೆಂದರಿಯದೆ ಶಿರಚ್ಛೇದನೆಯಂ ಮಾಡುವದಕ್ಕೆ ಪುಷ್ಕರನು ಮೇಲಕ್ಕೆ ಎತ್ತಿದ ಕತ್ತಿಯು, ಕೈಸಡಿಲಿ ನೆಲದೊಳು ಬಿದ್ದು ಹೋದುದು, ಅವನಿಗೇನೋ ಬಗೆಯಾಗಿ ಮನಸ್ಸಿಗೆ ವ್ಯಥೆತೋರಿತು, ಇಷ್ಟರಿಂದಂತೆಯೇ ಸ್ವಬ್ಧತೆಯಂ ತಾಳಿ, ಅಂತೆಯೇ ಚೇತರಿಸಿಕೊಂಡು ಎಲೈ ಅರ್ಜಕ ಶಿರೋಮಣಿಯೇ ! ಇದೇನಿಂತಾದುದು, ಮುಂಚಿನ ರಾಜರ ಕಾಲದೊಳೆಂತಾದರಿಂತಾದುದುಬೋ ? ಅಲ್ಲದೊಡೆ ಕಾರಣಮೇಂ, ನೀನೇ ಹೇಳಬೇಕೆನಲು, ಸ್ವಾಮಿನಾ! ಮುನ್ನಿನರಾಯರ ಕಾಲದೊಳು, ಈ ಪರಿಯೆಂದೂ ನಡೆಯಲಿಲ್ಲ. ಈ ಬಾಲಕನಿಗೂ ನಿನಗೂ ಎನೋ ದೇಹಬಾಂಧವ್ಯಮಿರಬೇಕು ಅದೇ ಹೀಗೆ ಆಗುವದಕ್ಕೆ ಕಾರಣವಾಗಿದೆ ಯೋಚಿಸಬೇಕೆನಲು ಆ ಪುಷ್ಕರರಾಯಂ ನನಗೆಯಾರೂ, ಈ ಪ್ರಾಂತದೊಳಗಾಗಿ ದೇಹಬಾಂಧವರಿಲ್ಲ. ನಾನು ಹುಟ್ಟಿದವನೂ ಒಬ್ಬನೇ, ಇರುವವನೂ ಒಬ್ಬನೆ ಯೆನಲು ಬಳಿಯೊಳಿರ್ದ ಮಂತ್ರಿಯು ಸ್ವಾಮಿನಾ ಮಹಾರಾಯರೆ ! ನವರಾತ್ರಿ ಬಂದದ್ದು ಮೊದಲು ಕಾಲಕ್ಕೆ ಭೋಜನಾದಿಗಳಿಲ್ಲದೆಯೂ, ಈ ದಿನವಿನಾವರಿನಿಗೂ, ಆಹಾರವಿಲ್ಲದಿರುವದರಿಂದ ಇಂತಾದುದು. ಜಾಗ್ರತೆಯಾಗಿ ಬಲಿಯನ್ನರ್ಪಿಸಿ ಮನೆಯಂ ಸಾರಿ ಭೋಜನಮಾಡಿ, ವಿಶ್ರಾಂತರಾಗಿರೆಂದೊರೆಯೆ, ರಾಯಂ ಪುನಃ ಖಡ್ಗವನ್ನೆತ್ತಿ ಬಾಲಕನ ಕಂಠದಮೇಲೆ ಗುರಿಯಿಡಲು ಕೈ ಸೋತು ಆ ಕತ್ತಿಯು ಮರಳಿ ಭೂಗತವಾದುದು. ರಾಯಂಗೆ ಮೈಮರದುದು ಅಂತೆಯೇ ಚೇತರಿಸಿ ನಿಂತು ಯೋಚಿಸುತ್ತಿರುವಾಗ ಮಂತ್ರಿಯು ಸ್ವಾಮಿನಾ ಮಹಾರಾಜನೇ : ಯಾರೋ ಕದ್ದು, ಕಟ್ಟಿರಬಹುದು ಲೋಕದೊಳು ರಕ್ತವು ಸೋರದಂತೆಯೂ, ಕುರಿ ಕೋಣ ಮುಂತಾದವುಗಳಂ ಕಡಿಯುವಾಗ, ಎಷ್ಟುಸಲ, ಆಯುಧಂಗಳಿಂ ಅದರ ಕುತ್ತಿಗೆಯಂ ಕತ್ತರಿಸಿದರೂ ತುಂಡಾಗದೆ, ಹರಿಯದೆ ಆಯುಧದ ಬಾಯಿಯೇ ಮಂಡಾಗುವದು. ಆದ್ದರಿಂದ ಅಂತೆಯೇನಾದರೂ ಇರಬಹುದು ಎಂದು ಆ ಮಂತ್ರಜ್ಞರಂ ಕರೆಯಿಸಿ ಕದ್ದು

ಮುಂತ್ರಮುಂ ತುಂತ್ರಿಸಿದವೇಲೆ ರಾಯುಂ ಕೆತ್ತಿಯುಂ ಹಿಡಿಯುವಡಕ್ಕೆ ಯತ್ನಿಸೆ ಗಡಗಡನೆ ಕೈನಡುಗುತ್ತಾ, ಮನಸ್ಸಿಗೇನೋ ಒಂದು ಬಗೆಯಾಡ ಸಂಕಡವುತ್ತ ತೋರಿ ಧೊಪ್ಪನೆ ನೆಲವೊಳು ಬಿಳ್ದು, ಅಂತೆಯೇ ಮೇಲಕ್ಕೆಳ್ದು ನಿಂತು ಎಲೈ ಅರ್ಜಕ ಶ್ರೇಷ್ಠನೇ ; ಈ ಭಾಗದೊಳು ನೀನೇ ಯೋಚನೆಯುಂ ಹೇಳಬೇಕಲ್ಲದೆ ಬೇರೊಂದಿಲ್ಲವೆನಲಾ ಪೂಜಾರಿಯು ಸ್ವಾಮಿಗಾ ಸಾರ್ವಭೌಮರೇ ; ನಾನೇನೆಂದು ವಿಜ್ಞಾಪಿಸಲಿ, ನನ್ನ ಮಾತು ಚಿತ್ತಕ್ಕೆ ಬಾರದೆ ಪೋಯಿತು ನೊಡಲೇ ದೇಹಸಮ್ಬಂಧಮುಳ್ಳದೆ ಮತೊಂದು ವಿಧವಾದರೆ, ಹೀಗಾಗಲಾರದೆಂದು ನನ್ನಧಿಯೊಳು ಅರಿಕೆಮಾಡಿದ್ದೇನೆ. ಈಗಲೂ ಈ ಭಾಗದೊಳೇ ಯೋಚಿಸಬೇಕು. ಅತುರಗೊಂಡು ಕೈ ವಿಾರಿಸಿದವರಾದರೆ, ಮುಂದಿನ ದುಃಖಕ್ಕೆ ಪಾತ್ರರಾಗಬೇಕಾಗುತ್ತದೆ. ಯೋಚನೆಯಿಲ್ಲದೆ ಯಾವಾಗಲೂ ಕೆಲಸಮಾಡಬಾರದು, ಈ ಭಾಗದೊಳಿಂದು ಇತಿಹಾಸಮುಂ ಪೇಳುವೆನು ಲಾಲಿಸಬೇಕು.

ರಾಯನಿಗೆ ಪೂಜಾರಿಯು ದೃಷ್ಟಾಂತವಾಗಿ ಹೇಳುವ ಕಥೆ.

ಚಂಪಕಾರಣ್ಯ ಮಧ್ಯದೊಳು ಜಾಂಗಲಿಕನೆಂಬೊರ್ವ ಕಾಪಸಂತಪವನ್ನಾಚರಿಸುತ್ತಾ, ತನ್ನ ತಪಃ ಶಕ್ತಿಯಿಂದ ಸೆಲಕ ಮುಂತ್ರತಂತ್ರ ಮಣ್ಣೌಷಧಾದಿ, ಪ್ರಯೋಗವಿದ್ಯಾ ಪ್ರವೀಣ್ಯತೆಯುಂ ಹೊಂದಿದ್ದಂ. ಆತಂ ಹಿಂದಾನೊಂದು ದಿನ ಮಧ್ಯಾಹ್ನದೊಳು, ಸ್ನಾನಾರ್ಥವಾಗಿ ಹೋಗಿ ಮಾಧ್ಯಾಹ್ನಿಕ ಕ್ರಿಯೆಗಳಂ ಮಾಡಿಕೊಂಡು ಬರುತ್ತಿರುವ ದಾರಿಯೊಳು ಸರೊವ್ಯಕ್ತಮುಮಾಗಿರುವ ಅಗತಾನೇ ಜನಿಸಿದ ಸ್ತ್ರೀ ಶಿಶುವೊಂದೇ, ಎಲೆಗಳ ಹಾಸಿನೊಳು, ಮುಲಗಿಹುದಂ ಕಂಡು ಆಶ್ಚರ್ಯಯುಕ್ತನಾಗಿ ಬಳಿಗ್ಯೈದಿ ನೋಡಲು ಸ್ವಭಾವ ಕರುಣಾಶಾಲಿಯಾದ್ದರಿಂದ ಅಯ್ಯೋ ಹುಟ್ಟುತಲೇ ಈ ಯವಸ್ಥೆ ಬಂದುದೆ, ಎಂದು ಯೋಚಿಸಿ ನೋಡೆ ಗಂಧರ್ವಾಂಗನೆ, ಬೇಟಿಗಾಗಿ ಬಂದಿರ್ಪ ರಾಜೋತ್ತಮನಂ ವೀಕ್ಷಿಸಿ ಅವನಂ ಸೇರಿ ಮುದನ ಸಾಮ್ರಾಜ್ಯಸೌಖ್ಯಮುಂ ಹೊಂದಲು ಅವನಿಂಜನಿಸೀ ಶಿಶುವಂ ಇಲ್ಲಿಯೇ ಬಿಟ್ಟುಹೋದಳು ಎಂದರಿತು ಅದಂ ಪಾಲಿಸಲು ಎತ್ತಿಕೊಂಡು ತನ್ನಾಶ್ರಮಕ್ಕೆ ಬಂದು ಪೋಷಿಸುತ್ತಿರೆ ದಿನೇ ದಿನೇ ಅಭಿವೃದ್ಧಿಯನ್ನಾಂತ ಆ ಕನ್ಯಾರತ್ನವು ಆ ಮುನಿವರನಂ ಸಂತೋಷಗೊಳಿಸುತ್ತಾ, ಅವನ ಪೂಜಾಕಾಲಕ್ಕೆ ಪುಷ್ಪಾದಿಗಳಂ ತಂದೊದಗಿಸುತ್ತಾ ಅಚ್ಚು ಮೆಚ್ಚಾಗಿರುತ್ತಿರೆ ಆ ಕನ್ಯಾರತ್ನಕ್ಕೆ ತನ್ನೊಳಿದ್ದ ಅಥರ್ವಣರಹಸ್ಯ ವಿದ್ಯಂಗಳನೆಲ್ಲಮುಂ ತಿಳಿಸುತ್ತಾ, ಸಕಲ ಮಂತ್ರ ಪ್ರಯೋಗಗಳನ್ನೂ ಸಮಸ್ತ ತಂತ್ರ ಮಣ್ಣೌಷಧವಿದ್ಯಾಪ್ರಯೋಗಗಳಂ ತಿರುಳಿನಿಖಿಲ ವಿದ್ಯಾಪ್ರವೀಣಳಂ ಮಾಡಿದನು, ಆ ಕನ್ಯಾಮಣಿಯು ಬಾಲ್ಯಮುಂ ಕಳೆದು ಯುವತಿಯಾಗೆ ಅನುರೂಪವಾದ ಬ್ರಾಹ್ಮಣ ವರನಂ ಕರೆತಂದವನಿಗಿತ್ತು ತಾನಿರ್ದಂ. ಆ ಕಾಂಶಾಮಣಿಯುಂ ಮುದುವೆಮಾಡಿಕೊಂಡಾ ಬ್ರಾಹ್ಮಣಂ ತನ್ನ ಪತಿಯನ್ನೊಡ

ಗೊಂಡು ಬರುತ್ತಾ ದಾರಿಯೊಳು ಎಲ್ಲೆ ಕಾಂತಾರತ್ನವೇ ! ನಿನ್ನ ತಂದೆಯ ಬಳಿಯೊಳು ನೀಂ ಅಥರ್ವಣವೇದ ರಹಸ್ಯವನ್ನೂ, ಸಮಸ್ತಮಣ್ಯೌಷಧಾದಿ ಪ್ರಯೋಗತಂತ್ರಗಳನ್ನೂ ಕಲಿತಿರುವೆಯಷ್ಟೆ ? ಕೆಲವಂ ತೋರಿ ಸಂತಸಗೊಳಿಸೆಂದು ಪತ್ನಿಯಂ ಕೇಳಲಾ ಸುಂದರಿಯು ಪಾಪಿಷ್ಠನೇ ಇದು ಕಾಂತಾರವು, ಅವಿದ್ಯೆಯಂ ತೋರಲು ತಕ್ಕ ಉಪಕರಣಂಗಳಿಲ್ಲವು, ಅವುಗಳಂ ಕಲ್ಪಿಸಿಕೊಂಡು, ನಾನಾ ವಿಚಾಮತ್ಕಾರಂಗಳನ್ನೆಲ್ಲಮಂ ತೋರಿ ನಿನ್ನ ಹೃದಯಾಂಬುಜವನುಲ್ಲಾಸಗೊಳಿಸುವೆನು. ಇದು ತಕ್ಕ ಸಮಯವುಮಲ್ಲವೆಂದು ಹೇಳಿದರೂ ಅತುರನಾದವನಾಪ್ತರಿಂದ ಅವುಗಳಿಂದು ಕೆಲವನ್ನಾದರೂ ತೋರಿಂದು ಬಲಾತ್ಕರಿಸಲಾ ಸೌಣ್ಣಿಯು ಸ್ತ್ರೀಯಾದ್ದರಿಂದ ಪುರುಷನ ಮಾತಿಗೆ ಬೆರಗಾಗಿ, ಕೆಲನೊರ್ಜುಕಲ್ಲಳಂತಂಪು, ಪತಿಯ ಮುಂದೆ ರಾಶಿಯಾಗಿ ಸುರಿದು, ಅದಕ್ಕಭಿಮಂತ್ರಿಸಿ ಪತಿಯಂ ಕುರಿತು, ಪ್ರಿಯನೇ ; ನೀನು ನಾನಾ ವಿಧಂಗಳಿಂದ ಪಕ್ಷಿವ್ಯಾಘ್ರಾದಿಗಳಾಗಿ ಬರುವೆನು. ಒಂದೊಂದು ರೂಪಂ ಬಪಲಾಯಿಸಿ ನೋಡಲು, ಮನಸ್ಸುಬಂದಾಗ ಈ ಸೂಣಕಲ್ಲಳಿಂದ ನನ್ನಂ ಹೊಡೆಯುವವನಾಗು, ಆಗ ನನ್ನ ಸ್ತ್ರೀರೂಪವಂ ಹೊಂದಿ, ಪುನಃ ಬೇರೊಂದು ರೂಪವುಮಾಂತು ನಿನ್ನ ಮನವಂ ಸಂತೋಷಗೊಳಿಸುವೆನೆಂದೊರೆದು ತನ್ನ ಉಡಿಗೆ ತೊಡಿಗೆಗಳಂ ಕಳಚಿ ದೂರವಾಗಿಟ್ಟು, ನಗ್ನಳಾಗಿ ಮುಂತ್ರಪೂರ್ಣರಜೆಯುಂ ಮಾಡಲು, ಪೊದೆಯೊಂದು ನವಿಲಾಗಿ ಬಂದು, ನಾಟ್ಯಮಂ ಮಾಡುತ್ತಾ ನಿಲ್ಲಲು, ಅದಂ ನೋಡಿ ತನ್ನೆಡೆಯೊಳಿರ್ದ ಕಲ್ಲಿನಿಂ ಅದಂ ಹೊಡೆಯಲು ಆ ರೂಪವಂ ತೊರೆದು ಸ್ತ್ರೀರೂಪಿಣಿಯಾದಳು. ಮತ್ತೊಂದು ಕಲ್ಲಿನಿಂದ ಹೊಡೆಯಲು ಹಂಸೆಯಾದಳು. ಹೀಗೆಯೇ ವಿಧವಿಧವಾಗಿ ನಾನಾ ಪಕ್ಷಿಗಳಾಗಿ ತೋರುತ್ತಾ, ಈತನ ಕೈ ಕಲ್ಲುಗಳ ಪೆಬ್ಬೆಯಿಂ ಸ್ತ್ರೀರೂಪವಾಗುತ್ತಿದ್ದವಳು ಹೆಬ್ಬುಲಿಯಾಗಿ ಅಭಿಟಿಸುತ್ತಾ ಬರೆ, ಆ ಘೋರಾಕಾರವಾದ ಪೊಡ್ಡ ಹುಲಿಯಂ ನೋಡಿ ಭಯವುಮಾಂತು, ಅಲ್ಲಿಂ ಓಡಿಹೋಗಲು, ಹಿಂದು ಬಂದಾಹುಲಿಯು, ಆ ಬ್ರಾಹ್ಮಣನಂ ಹಿಡಮು ಕೊಂದು ರಕ್ತಮಂ ಹೀರಿ. ಆ ಧಾರ್ಮಿಂಗಕವಾಗಿ ತಿಂದು ಬಿಸುಡಿತು. ಈ ಪರಿಯನ್ನೆಲ್ಲಮಂ ನಂಗಡ ಬಂದಿರ್ದಾ ಮುನಿಶಿಷ್ಯರರಿತು ಭರದಿಂ ಹಿಂದಿರುಗಿಹೋಗಿ, ಅಕೆಯ ಪಾಲಕನಾದಾ ಮುನೀಂದ್ರನೊಳು ತಿಳುಹಲು, ಅಯ್ಯೋ ಪಾಪವಿಯೇ ಇಂತು ಗೈದಳೆ, ಲೋಕದಲ್ಲಿ ಸ್ತ್ರೀವಿದ್ಯಾಭ್ಯಾಸವು ಹಾನಿಯಂ ಜನಿಸುವದೆಂಬುದನಾವರಿತಿಪ್ಪರೂ ಪರೀಕ್ಷೆಗಾಗಿ ಇವಳಿಗೆ, ಹೇಳಿದ ವಿದ್ಯವು ದೃಷ್ಟಾಂತಮಾಯಿತೇ ? ಎಂದು ಕೆಲಕಾಲಂ ಚಿಂತಿಸಿ, ಅವಳ ಜನ್ಮಾಂತರ ಪಲಂ ಅಂತೆಯೇ ಸರಿ, ಉದಂ ತಪ್ಪಿಸಲು ಈಗಲಾರಿಗೂ ಶಕ್ತಿಸಾಲದು, ಎಂದು ಸವಧಾನವಂ ಮಾಡಿಕೊಂಡು, ಅಲ್ಲಿಂದಲೇ ಅಭಿಮಂತ್ರಿಸಲು ಆ ಹುಲಿಯು ರೂಪಮಂ ತೊರೆದು, ತನ್ನ ನಿಜರೂಪಮಂ ಹೊಂ

ದಿದಾ ಸ್ತ್ರೀಯು ಹುಲಿಯಾಗಿದ್ದ ತನ್ನಿಂದ ಅರ್ಧಭಕ್ಷಿತವಾಗಿ ತಿಂದು ಬಿಸುಟಿರುವ ತನ್ನ ಪತಿಯ ದೇಹವುಂ ನೋಡಿ ಅಯ್ಯೋ ವಿಧಿಯೇ ಮುಂದೇನುಗತಿ, ಒಂದು ದಿನವಾದರೂ ಮನಸಾರ ಪತಿಯೊಳು ಬೆರೆತು ಸುಖಸಲಿಲ್ಲವಲ್ಲಾ ಹಾ ಇಷ್ಟು ಬಾಲ್ಯವಯಸ್ಸಿನಲ್ಲಿಯೇ ವೈಧವ್ಯವು ಪ್ರಾಪ್ತಿಸುವಂತಿರ್ದುದೇ ? ನನ್ನ ಪೂರ್ವಾರ್ಜಿತಫಲವು, ಆದ್ದರಿಂದಲೇ ನನ್ನ ವಿವೇಕವು ಶೂನ್ಯವಾಯಿತು.

ರಾಮೋಹೇಮವ್ಯಗಂನವೇದನಹುಷೋ ಯಾನೇನಿಯೋಜ್ಯದ್ವಿ
ಜಾರ್ಜ | ವಿಪ್ರಸ್ಯೇಕತಮಸ್ಯೆವತ್ಸಹರಣೇ ಲಜ್ಜಾಂಜಹೌಹೇಹ
ಯಃ | ದ್ಯೂತೇಭ್ರಾತೃಜಶತುಷ್ಟಯಂಜಮುಹಿಸೀಂ ಧರ್ಮಾತ್ಮಜೋ
ದತ್ತವಾರ್ಜ | ಪ್ರಾಯಸ್ಸರ್ವಜನೋವಿನಾಶಸಮಯೇ ಬುಧ್ಯಾಪರಿ
ಹ್ಲೇಯ್ಯತೇ ॥

ರಘುವಂಶ ಸಂಭೂತನಾದ ಶ್ರೀರಾಮಮೂರ್ತಿಯು ಅರಣ್ಯವಾಸಮುಂ ಮಾಡುತ್ತಿರುವಾಗ ಬಂದ ಚಿನ್ನದವಿಕಾರವಾದ ಜಿಂಕೆಯುಂ ಮಾರೀಚನ ಕೃತ್ರಿಮವೆಂದು ಅರಿಯದೆ ಹೋದನು. ನಹುಷ ಚಕ್ರವರ್ತಿಯು ಇಂದ್ರಪದವಿಯುಂ ಹೊಂದಿದಾಗ ತನ್ನ ಪಲ್ಲಕ್ಕಿಯುಂ ಹೊರುವದಕ್ಕೆ ಸಪ್ತರ್ಷಿಗಳಂ ಗೊತ್ತುಮಾಡಿದನು. ಕಾರ್ತವೀರ್ಯಾರ್ಜುನನು ಭೃಗುಋಷಿಯ ಗೋವಂ ಅಪಹರಿಸಿದನು. ಧರ್ಮನಂದನನಾದ ಧರ್ಮರಾಯನು ನೆತ್ತಗಳನ್ನಾಳುತ್ತಿರುವಾಗ ತನ್ನ ಸಹೋದರರನ್ನೂ ಧರ್ಮಾಂಗನೆಯಾದ ದ್ರೌಪದಿಯನ್ನೂ, ದುರ್ಯೋಧನಂಗೆ ಸೋತುಬಿಟ್ಟನು ಮಹಾ ಪುರುಷರಾದ ಇಂಥಾ ಮಹನೀಯರೇ ಕರ್ಮಬಲದಿಂದ ಇಂಥಾ ವಿಪರೀತ ಬುದ್ಧಿಗಳಂ ತಾಳಿ, ಪಾರರಹಿತಂಗಳಾದ ಶ್ರಮೆಗಳನ್ನಾಂತರು, ನನ್ನ ಯೋಗವೂ ಅಂತೆಯೇ ಇರ್ದುದು, ನನ್ನ ಕರ್ಮಬಲದಿಂದಲೇ ನನಗೂ ಕಾಲಕ್ಕನುಸಾರವಾಗಿ ಬುದ್ಧಿಯೂ ಹುಟ್ಟಿತು ಹಾ ಪಾಪಿಯಾದ ಜನ್ಮವೇ ; ನೀನೇತಕೆನ್ನು ಬದುಕಿರುವೆ ? ನೀಂ ವಿದ್ಯವಂ ಕಲ್ತುದಕೆ ಇದೇ ಫಲವು. ಸ್ತ್ರೀಯರು ವಿದ್ಯಾಭ್ಯಾಸವಮಾಡಿದರೆ, ಕಾಲಾಕಾಲ ಹಿತಾಹಿತಂಗಳನರಿಯದೆ ನಡೆಯುತ್ತಾ, ಕಡೆಯೊಳು ಇಂತೆಯೇ ಫಲಂಗಳಂ ಹೊಂದುವರು, ಎಂದು ನಾನಾ ಬಗೆಯಾಗಿ ಬಣ್ಣಿಸಿಕೊಂಡು ಶೋಕಿಸುತ್ತಾ, ನಾನಿನ್ನು ಮನುಷ್ಯ ಜನ್ಮದೊಳಿದ್ದು, ಪ್ರಾಣಿಮಾತ್ರಕ್ಕೆ ಮುಖಮುಂ ತೋರಿಸಿಕೊಂಡಿರಲಾರೆನು, ಕಾಡುಮೃಗಮಾಗಿಯೇ ಅರಣ್ಯದ ಪಾಲಾಗಿದ್ದು ದೇಹಮುಂ ಬಿಡುವೆನೆಂದು ನಿಶ್ಚೈಸಿ, ಹುಲಿಯಾಗಿ ಕಾಡಿನೊಳು ನಡೆದು ಹೋದಳು. ಆದ್ದರಿಂದ ಮಹಾರಾಜನೇ ಯೋಚಿಸಿ ಕಾರ್ಯಮುಂ ಮಾಡದೆ ಹೋದರೆ, ಕಡೆಗೆ ಆ ಸ್ತ್ರೀಯಂತೆಯೇ ದುಃಖಕ್ಕೆ ಭಾಜನನಾಗುವಿ ಎಂದು ಹೇಳಲು, ಆ ಕಾಲಕ್ಕೆ ಸರಿಯಾಗಿ ಸಮೀಪದೊಳಿರ್ದ ಮಂತ್ರಿಯು ಮಹಾರಾಜನೇ ; ಇತ್ತನೋಡು, ಈ ಹುಡುಗನ ಕಂಠದೊಳು

ಯಂತ್ರವು ಕಟ್ಟಿಹುದು, ಇದರ ದೆಶೆಯಿಂದಲೇ ಇಷ್ಟು ಅನರ್ಥಂಗಳಾದವು ಈ ಬಾಲಕನ ತಂದೆಯು ಮಂತ್ರಗಾರನಾಗಿರಬಹುದು, ಹಣದಾಶೆಯಿಂದ ಒಂದಕ್ಕೆ ರಡು ತೆಗೆದುಕೊಂಡು ಹುಡುಗನು ಸಾಯುವಂತೆ ಮಂತ್ರಿಸಿ ದಿಗ್ಬಂಧನೆಯಂ ಮಾಡಿರುವನು. ಇದಂ ಕೆತ್ತುಹಾಕೆ ನಂತರ ಬಲಿಯಾಗಿ ಸೆನುವಿಕ್ಕಿಸುವನಾಗೆಂದು ಹೇಳಲು, ರಾಯುಂ ಬಾಲಕನ ಕಂಠದೊಳಿರ್ದ ಯಂತ್ರದಂತೆ ತೋರುವ ತಾತಿಯಂಕೆತ್ತು, ಅದರಮೇಲಿನ ಬರಹಮುಂ ನೋಡಿ ಸಂಶಯಗೊಂಡವನಾಗಿ, ಆ ತಾಯಿತಿಯುಂ ಭೇದಿಸಿ, ಒಳಗಣ ಓಲೆಯುಂ ನೋಡೆ ಆ ಲಿಖಿಯು ತನ್ನ ಕೈಬರಹಮಾಗಿ ಕಾಣಬರಲು, ಆ ಶ್ಲೋಕಾರ್ಧವನ್ನೂ ಅದರ ಮೇಲಿನ ಶ್ಲೋಕಾರ್ಧವನ್ನೂ ತಿಳಿದು ಅಂತೆಯೇ ಯೋಚಿಸಲು, ಬ್ರಾಹ್ಮಣನ ಮನೆಯೊಳು ತಾವು ಬಿಟ್ಟಿರ್ದ ಗುಣವತಿಯು ಶಿಶುವಿನ ಜ್ಞಾಪಕಂ ಬರಲು, ಆ ಬಾಲಕನ ಮುಖವಂ ಬಿಡಿದು, ಚೆನ್ನಾಗಿ ನೋಡಿದವನಾಗೆ, ತನ್ನ ಪ್ರತಿಬಿಂಬವೋ ಎಂಬಂತೆ ತೋರುವದಂ ಕಂಡು, ಇವನೇ ತನ್ನ ಮಗನೆಂದು ನಿಶ್ಚೈಸಿದವನಾಗಿ, ಅಯ್ಯೋ ವಿಧಿಯೇ ! ನನ್ನ ಮಗನಂ ನಾನೇ ಕೊಲ್ಲುತಿದ್ದೆನಲ್ಲಾ, ಹಾ ! ಎಂದು ಪ್ರಲಾಪಿಸುತ್ತಾ, ಅಂತೆಯೇ ಭೂಮಿಯೊಳು ಬಿದ್ದು ಮೂರ್ಛಾಕ್ರಾಂತನಾಗಲು, ಬಳಿಯೊಳಿರ್ದವರು ಘಾಳಿಯುಂ ಬೀಸಿ, ಶೈತ್ಯೋಪಚಾರಂಗಳಂ ಮಾಡಿ, ಪ್ರಜ್ಞೆಯುಂ ತಾಳಿ ಮೇಲಕ್ಕೆದ್ದು ಪುತ್ರನಂ ಬಿಗಿದಪ್ಪಿ, ಹಾ ವತ್ಸವಿಕುಮಾರನೇ ! ಎಂದು ತಲೆಯುಂ ಮೂಸಿನೋಡುತ್ತಾ, ಮೈದಡವುತ ತನುವ ಪುತ್ರದೇಹ ಸಂಸರ್ಗಜನಿತಮಾದ ಆನಂದದಿಂದ ಪರವಶವಾಗಿ ಕೈಮುರಿಯುಬ್ಬಿ, ಸಂತೋಷಾರ್ಣವ ಮಗ್ನನಾಗಿ ದೇವಿಗೆ ಮಂಗಳಾರತಿಯುಂ ಮಾಡಿಸಿ, ಪುತ್ರಸಮೇತನಾಗಿ ರಥಾರೋಹಣಂಗೈದು, ನಿವಿಷಮಾತ್ರದೊಳು ತನ್ನ ಮಂದಿರಮಂಸಾರಿ ಕುಳಿತುಕೊಂಡು ನಾಲ್ವರು ಪತ್ನಿಯರಂ ಕರೆದು, ಸುತ್ತಲೂ ಕುಳ್ಳಿರಿಸಿಕೊಂಡು ಪಟ್ಟದರಸಿಯಾದ ಗುಣವತಿಯುಂ ಕೂರಿಲು, ಎಲ್ಲೆ ಪ್ರಾಣಕಾಂತೆಯೇ ! ಈ ಬಾಲಕನಾರು ನೋಡಿರುವಿಯಾ ? ಎಂದು ಪ್ರಶ್ನೆಮಾಡಲು, ರಾಜಸಂಪತ್ಪ್ರಭಾವದಿಂದ ಪ್ರಜ್ಞೆಯಿಲ್ಲದವಳಾಗಿದ್ದದ್ದರಿಂದ ನೋಡಿದವಳಾಗಿ ಯಾರೋ ನಾಂ ಕಾಣೆನೆನಲು, ಆ ರಾಯುಂ ಅಯ್ಯೋ ಐಶ್ವರ್ಯಮದದಿಂದ ಹೆತ್ತ ಮಗನಂ ಮರತಿರುವಳಲ್ಲಾ, ಲೋಕದೊಳು ಈ ಧನಾದಿಗಳ ಪ್ರಾಪ್ತಿಯಿಂದುಂಟಾದಮದವು ಪರಮ ನೀಚಮಾದದ್ದು, ಬಧಿರಯತಿ ಕರ್ಣಕುಹರಂ ವಾಚಂ ಮೂಕಯತಿ ನಯನಮಂಧಯತಿ | ವಿಕೃತಯತಿಗಾತ್ರಯಷ್ಟಿಂ ಸಂಪದ್ಮೋಗೋಯಮಜಗತಿ ||

ಸಂಪತ್ತೆಂಬ ರೋಗವು ಪ್ರಾಪ್ತಿಯಾದರೆ ಕಿವಿಗಳನ್ನು ಕೇಳಿಸದಂತೆ ಮಾಡುವುದು, ಮಾತಾಡುತ್ತಿದ್ದರೂ ಮೂಕಭಾವಮುಂ ತೊಂದಿಸಿ ಕೇಳಿದವರಿಗೆ ಸರಿ

ಯಾದ ಉತ್ತರಮುಂ ಕೊಡಪಂತೆ ಮಾಳ್ಪುದು, ಎದುರಾಗಿ ನಿಂತಿದ್ದರೂ, ಹಗಲೂ ರಾತ್ರಿ ನೋಡುತ್ತಿದ್ದವರನ್ನಾದರೂ ನೋಡಿದರೆ ನೀನಾರು ? ಎಂದು ಕಾಣದವರಂತೆ ಮಾತಾಡುವ ರೀತಿಮಾಳ್ಪುದು, ಅಂದರೆ ಈ ವಿಧವಾದ ಕುರುಡುತನವು ಪ್ರಾಪ್ತಿಸುವದು, ಸಣ್ಣಗೆ ಸಿಳಕೆಯಾಗಿದ್ದರೆ, ಅಂಥವನಂ ವಿಶೇಷಸ್ಥೂಲಕಾಯನಂ ಮಾಡಿ, ಹೊಟ್ಟೆಯು ಬೆಳೆದು ವಿಕಾರವಾದ ರೂಪನಂ ಮಾಡುವದು, ಅವ್ವರಿಂದ ಲೋಕದೊಳು ಸಂಪತ್ತೆಂಬ ರೋಗವು ಪರಮಾಶ್ಚರ್ಯಕರ ಮಾದುದೆಂದು ಹಿರಿಯರಾದವರು ಹೇಳುತ್ತಿರುವ ನ್ಯಾಯೋಕ್ತಿಗಳು ನಿಜವಾದುದೇ ? ಎಂದು ತಿಳಿದು, ಹೇ ಸುಂದರೀಮಣೀ ! ನೀನೇ ರಾಜ ಸಂಪತ್ಪದವಿಯಿಂದ ನಿನ್ನ ಉದರದಲ್ಲಿ ಹುಟ್ಟಿದ ಮಗನನ್ನು ಮರತೆಯಾ, ಎನಲು ರಾಜಾತ್ಮಜೆಯು ತಾಂ ಹಡೆದು ಬ್ರಾಹ್ಮಣ ಗೃಹದೊಳು ಬೆಸುದು ಬಂದಿರ್ದ ಶಿಶುವಂ ನೆನೆದು, ಈ ಬಾಲನ ಮುಖವನೋಡಿ, ದೇಹಸಂಬಂಧ ಮಮಕಾರದಿಂದ ತೊಟ್ಟಿರ್ದ ಕಂಚುಕಂ ಬಿರಿಯುವಂತೆ, ಸ್ತನಗಳು ಉಬ್ಬಿ ಸ್ತನ್ಯಂ ಜನಿಸಿ ತೊಟ್ಟಿಡುತ್ತಾ ಬರಲು ನೋಹ ಮುಕ್ಕಿಬರೆ ಇವನೇ ನನ್ನ ಮಗನೆಂದರಿದುಕೊಂಡು, ತಲೆಯುಂ ಮೂಸಿನೋಡುತ್ತಾ ಅಯ್ಯೋ ಪಾಪಿಯಾದ ನಾನು ಹೆತ್ತಮಗುವಂ ಮರೆತೆನಲ್ಲ ಎಂದಳುತ್ತಾ ತೊಡೆಯೆ ಮೇಲೆ ಕುಳ್ಳಿರಿಸಿಕೊಂಡು ಗಲ್ಲಗಳಂ ಮುತ್ತಿಡುತ್ತ ಬರಲು ರಾಯನೂ ಅಂತೆಯೇ ಮಾತಾಡುತ್ತಾ ಬಂದನಾಗೆ, ಮಿಕ್ಕಮೂವರೂಪ್ರೇಮಾತಿಶಯದಿಂದ ಆ ಬಾಲಕನಂತೆಗದು ಬಿಗಿದಪ್ಪಿ ಅಯ್ಯೋ ಪಾಪಿಗಳಾದ ನಾವು ನಿನ್ನ ಮುಖವಂ ನೋಡುವ ಋಣಾನುಬಂಧವಿದ್ದ ದ್ದರಿಂದ ನೋಡಿದವರಾದೆವು, ಅಂತು ಹತ್ತುದಿನಗಳ ಶಿಶುವಂ ಬಿಟ್ಟು ಬಂದವಲ್ಲಾ ನಮ್ಮಂಥಾ ದಯಾಶೂನ್ಯರಾದವರು ಯಾರೂ ಇಲ್ಲವೆಂದು ಪ್ರಲಾಪಿಸುತ ಬರಲು ಆ ಬಾಲಕಂ ಇವರೆಲ್ಲಾ ಸೇರಿ ತನ್ನನ್ನು ವಿನುವಾಡುವರೋ ಎಂದು ಭಯಪಡ್ಡು ಗಪಗಡನೆ ನಡುಗುತ್ತಾ ಬರಲು ರಾಯಂಎಲ್ಲರಂ ಸಮಾಧಾನಗೊಳಿಸಿ ಬಾಲನಂ ಸಂತೈಸುತ್ತಾ ಮಂತ್ರಿಯಂ ಕರೆದು ಆ ದೇವಿಗೆ ಕೋಣನಂ ತರಿಸಿ, ಬಲಿಯುಂ ಅರ್ಪಿಸಿ ಪೂಜೆಯಂ ಸಮಾಪ್ತಿಗೊಳಿಸೆಂದಾಜ್ಞೆಯನ್ನು ಕೊಡ್ಡು ಕಳುಹಿ ಪಶ್ಚಿಮ ಪುತ್ರಸಮೇತನಾಗಿ ಕುಳಿತು ಷಡ್ರಸಾನ್ನಗಳಂ ಸಂತೋಷ ಭರಿತನಾಗಿ ಭೋಜನಮುಂ ಮಾಡಿ, ಶಯ್ಯಾಗೃಹಮುಂ ಸೇರಿ ಸುಖವಾಗಿ ನಿದ್ರಾಂಗನಾವಶನಾದನು. ಮರುದಿನದುದಯದೊಳೆದ್ದು ನಿರ್ವರ್ತಿತ ಕಾಲ್ಯಕೃತ್ಯನಾಗಿ ಆ ಸ್ಥಾನಮಂಡಪಮಂ ಸಾರಿ ಮಂತ್ರಿ ಪ್ರಧಾನಸಾಮಂತ ಸೇನಾಪತಿ ದಂಡನಾಯಕರೇ ಮೊದಲಾದ ಸಮಸ್ತ ಪರಿವಾರ ಪರಿವೃತನಾಗಿ ಒಡ್ಡೋಲಗಮಾಗಿ ಕುಳಿತಿರುತ್ತಾ ಮಂತ್ರಿಯಂ ಕುರಿತು ಎಲ್ಲೆ ಮಂತ್ರಿಶೇಖರನೇ ನಿನ್ನೆಯದಿನದ ಬಲಿಗೇಂದು, ಮಗುವಂ ಮಾರಿದ ಬ್ರಾಹ್ಮಣ ದಂಪತಿಗಳಂ ಕರೆಸಬೇಕೆಂದು, ಆಜ್ಞಾಪಿಸಲು, ಮಂತ್ರಿಯು ರಾಜಾಜ್ಞಾ

ನುಸಾರವಾಗಿ ಆ ಬ್ರಾಹ್ಮಣನನ್ನೂ ಆತನ ಹೆಂಡತಿಯನ್ನೂ ಕರೆಯಿಸಿ ರಾಜನ ಮುಂಗಡೆಯೊಳು ನಿಲ್ಲಿಸಲು, ಆ ಪುಷ್ಕರರಾಯಂ, ತನ್ನಂತಃಪುರದೊಳಿರ್ದ ಬಾಲಕನಂ ಕರೆಸಿ ತನ್ನ ಸನ್ನಿಧಿಯೊಳು ನಿಲ್ಲಿಸಿಕೊಂಡು, ಆ ಬ್ರಾಹ್ಮಣ ದಂಪತಿಗಳಂ ನೋಡಿ, ಎಲ್ಲೈ ಬ್ರಾಹ್ಮಣ ದಂಪತಿಗಳಿರಾ ? ನೀವು ದಾರಿದ್ರ್ಯದೋಷದಿಂದ ಈ ಮಗುವನ್ನೇನೋ ಮಾರಿದಿರಿ, ಹೀಗೆ ಮಾರಿದ್ದರಿಂದಲೇ ನಿಮ್ಮ ಹೊಟ್ಟೆಯೊಳು ಹುಟ್ಟಿದವನುಗುವಲ್ಲವೆಂದು ಸ್ಪಷ್ಟವಾಗಿ ತಿಳಿಯಿತ್ತು, ಈ ಮಗುವೆಲ್ಲಿಯದೂ ನಿಮಗೆಹೇಗೆ ಬಂದುದು ಇದರ ನಿಜಸ್ಥಿತಿಯಂ ಮುನಿಪರಾಜನ ಪೇಳಬೇಕು, ತಪ್ಪಿದವರಾದರೆ ತಕ್ಕ ಕ್ರೂರದಂಡನೆಗೆ ಪಾತ್ರರಾಗುವಿರಿ, ಎಂದು ರಾಯಂ ಕೇಳಲಾ ಬ್ರಾಹ್ಮಣಂ ಸ್ವಾಮಿ ಮಹಾರಾಜರೇ ! ಲಾಲಿಸಬೇಕು ನಾವು ನಿಜಮಂ ಪೇಳಲಾರೆವು, ನಡೆದ ಸಮಾಚಾರಮಂ ಸರಿಯಾಗಿ ವಿಜ್ಞಾಪಿಸುವೆವು. ಇಷ್ಟರವೇಲೆ ಚಿತ್ತಾನುಸಾರವಾಗಗೊಳಿಸಬಹುದು, ಎಂದು ಹೇಳಿ ನಾವು ನೊಂದಲು ವಾಸವಾಗಿದ್ದ ಸ್ಥಲವು ಕಲಿಕಾನಗರವು. ಅಲ್ಲಿರುವಾಗ ನಾಲ್ವರು, ಹೆಂಡತಿಯರೊಂದಿಗೊರ್ವ ಭೂಸುರಂ ನಮ್ಮ ಮನೆಯೊಳ್ಳೊಂದು ಭಾಗದೊಳಿಳದುಕೊಂಡು ವಾಸಿಸುತ್ತಿರ್ದಂ ಗರ್ಭವತಿಯಾಗಿದ್ದ ಆತನ ಹಿರಿಯ ಹೆಂಡತಿಯು ಪೂರ್ಣಗರ್ಭಿಣಿಯಾಗಿ ಈ ಗಂಡು ಮಗುವಂ ಹೆತ್ತಳು. ಹತ್ತುದಿನಗಳವರಿಗೂ ವಾಸವಾಗಿರ್ದವರು, ಆ ದಿನ ರಾತ್ರಿಯೊಳು ಈ ಬಾಲಶಿಶುವಂ ಒಂದನ್ನೇ ಮನೆಯೊಳು ಬಿಟ್ಟು ನಾಲ್ಕುಜನ ದಾದಿಯರೊಂದಿಗೆ ನಾಲ್ಕುಜನ ಹೆಂಗಸರೂ ಆ ಬ್ರಾಹ್ಮಣನೂ ಎಲ್ಲಿಯೋ ಪಲಾಯನಂ ಗೈದರು. ಈ ವರಿಗಂ ಅವರು ಎಲ್ಲಿಯೂ ಕಾಣಲೇಯಿಲ್ಲವು. ಅಳುತ್ತಿದಾ ಳೆಯ ಮಗುವಂ ನೋಡಲು ಮನೆಯೊಳು ಹೊಕ್ಕು ಕಾಣಲು ಯಾರೂ ಇಲ್ಲದೆ ಅಳುತ್ತಿದ್ದ ಬಾಲಕನಂ ನೋಡಿ, ಕರುಣೆಯುತಾಂತು ಎತ್ತಿಕೊಂಡು ಹೋಗಿ ಪಾಲಿಸುತ್ತಿದ್ದೆವು, ದೈವಯೋಗದಿಂದಾ ದೇಶಕ್ಕೆ ವೀರ ಕ್ಷಾಮ ಬರಲು, ದೇಶದ ಪ್ರಜೆಗಳೆಲ್ಲರೂ, ಕಂಡಕಡೆಗಳಿಗೆ ಓಡಿ ಹೋದರು. ನಾನೂ ತಮ್ಮ ಗರ್ಭವಾಸಮಂ ಸಾರಿ, ಭಿಕ್ಷಾವೃತ್ತಿಯೊಳು ಸುಖವಾಗಿ ಜೀವಿಸುತ್ತಿದ್ದೆನು, ದಾರಿದ್ರ್ಯವಂ ಅನುಭವಿಸುತ್ತಾ ಇದ್ದು ಅದಂ ಸಹಿಸಲಾರದೆ, ಈ ಮಗನಂ ಮಾರಿದ್ದೇನಿಶ್ಚಯಂ, ಎಂದು ಇದ್ದ ಸುದ್ದಿಯನ್ನೆಲ್ಲಮಂ ವಿಸ್ತಾರವಾಗಿ ವಿಜ್ಞಾಪಿಸಲು ಕೇಳುತಾ, ಪುಷ್ಕರಾವನೀಂದ್ರಂ ಇವನೇ ತನ್ನ ಮಗನೆಂದು ಪರಿಷ್ಕಾರವಾಗಿ ತಿಳಿಯ ಬಂದದ್ದರಿಂದ ಸಂತೋಷಿತನಾದರೂ, ಪಾಪಿಗಳಾದವರು ಕೃಯಕ್ಕೆ ಇಂಥಾ ದುಷ್ಕಾರ್ಯಕ್ಕೆ ಮಾರಿದರಲ್ಲವೇ ಎಂದು ಚಿಂತಿಸಿ ಆ ಬ್ರಾಹ್ಮಣ ದಂಪತಿಗಳಂ ಕುರಿತು ಎಲ್ಲೈ ವಿಪ್ರೋತ್ತಮರುಗಳಿರಾ ! ನೀವೀ ಸುಕುಮಾರನಂ ಈ ದುಷ್ಕಾರ್ಯಕ್ಕೆ ವಿಕ್ರಯಿಸಿದ್ದಕ್ಕಾಗಿ ನಿಮಗೆ ಕ್ರೂರವಾದ ದಂಡನೆಯಂ ವಿಧಿಸುವದಂ ಮನ್ನಿಸಬೇಕಾಗಿದೆ ಯೆಂದೊರೆದು ಅವರಿಗೆ ಸಾಕಾಗುವಷ್ಟು ಜೀವ

ನವಂ ಕಲ್ಪಿಸಿಕೊಡಿಸ್ಪ ಕಳುಹಿ ತನ್ನ ಮಗನಂ ಪರಮ ವಿಶ್ವಾಸವಾಗಿ ಕಾಪಾಡುತ್ತಾ, ವಿದ್ಯಾಭ್ಯಾಸಕ್ಕಾಗಿತನ್ನ ವಿದ್ಯಾಧನರಂ ಮನೆಯೊಳಿರಿಸಿಕೊಂಡು ಕಾಲ ಕಾಲಕ್ಕೆ ತನ್ನ ವಿದ್ಯೆಯಂ ಹೇಳಿಸುತ್ತಾ, ಬರಲು ಕೆಲವು ಕಾಲದೊಳು ಬಾಲ್ಯದೊಳು ಕಲಿಯಬೇಕಾದ, ವಿದ್ಯೆಗಳೊಳು ಪ್ರಾವೀಣ್ಯನಾಗಿ, ಮಾತಾಪಿತೃಗಳಂ ಸಂತೋಷಗೊಳಿಸುತ್ತಾ ಬರುತ್ತಿರ್ದಂ. ಹೆತ್ತತಾಯಿಗಿಂತಲೂ ಅಧಿಕಮಾದ ಪ್ರೀತಿಯುಳ್ಳವರಾದಾ ಮೂರು ಮಂದಿ ರಾಜಪತ್ನಿಯರು ತಮ್ಮ ಹೊಟ್ಟೆಯಲ್ಲಿ ಹುಟ್ಟಿದ ಮಗನಿಗಿಂತಲೂ, ಅಧಿಕನಾದವನೆಂದು ಕಾಲಕಾಲಕ್ಕೆ ಬೇಕಾದ ದಿವ್ಯ ಭೋಜ್ಯಾದಿಗಳನ್ನು ವಿಧವಿಧಮಾದ ಪಕ್ವಸಂಫಲಂಗಳನ್ನೂ ಪಾವನವಸ್ತ್ರಗಳನ್ನೂ ಕಲ್ಪಿಸಿಕೊಡುತ್ತಾ, ಬಗೆಬಗೆಯಾದ ರತ್ನ ಚಿತ್ರಮಾದ ತೊಡಿಗೆ ಉಡಿಗೆಗಳಿಂದಲಂಕರಿಸಿ ನೋಡಿ ಸಂತೋಷಿಸುತ್ತಾ ಪಾಪಾಡುತ್ತಾ ಬರುತ್ತಿದ್ದರು. ಹೀಗೆ ವಿದ್ಯಾಪಾರಂಗತನಾದ ತನ್ನ ಸುಕುಮಾರನಂ ಕಂಡಾ ಸುಗುಣವತಿಯು ಕುಮಾರನಾದರೆ ಪ್ರಾಪ್ತವಯಸ್ಸನಾಗುತ್ತಾ ಬಂದನು. ಈ ದೇಶದೊಳು ಸ್ವಜನವಿಲ್ಲಾ ಯಿಲ್ಲಾ, ಬಾಂಧವ್ಯಕ್ಕೆ ಯೋಗ್ಯರಾಗಿರುವವರಂ ಹುಡುಕುವದಕ್ಕಿಂತ ಸ್ವಂತ ಬಂಧು ಸಮಾಜವಿರುವ ತಂದೆಯರಾಷ್ಟ್ರಮಂ ಸಾರಿ ಅವರನ್ನು ಸಂದರ್ಶಿಸಿ ತಕ್ಕ ರೂಪವತಿಯಾದ ಕನ್ಯಾಮಣಿಯಂ ನೋಡಿ ಮಗನಿಗೆ ಲಗ್ನಮಂ ಮಾಡಿಕೊಂಡು ಬರಬೇಕೆಂದು ನಿಶ್ಚೈಸಿ, ತನ್ನ ಪತಿಯು ಅಂತಃಪುರಮಂ ಸಾರಿ ಸನ್ನಿಧಿಯೊಳು ಕುಳಿತು ಎಲ್ಲಿ ಪ್ರಾಣನಾಥನೆ ! ನಮ್ಮ ಸುಕುಮಾರನು ವಿವಾಹಯೋಗ್ಯವಯಸ್ಕನಾಗುತ್ತಾ, ಬಂದನು. ನಮ್ಮ ತಂದೆತಾಯಿಗಳನ್ನು ನೋಡುವ ಗಮನವೂ ಕಳವಳಿಸುತ್ತಿಹುದು, ಮಂತ್ರಿ ಸೇನಾಪತಿ ವೈಶ್ಯನೆಂದೆಯರೂ ಅವರವರ ತಂದೆತಾಯಿಗಳಂ ನೋಡಬೇಕೆಂದು, ಕುತೂಹಲ ಪಡುತ್ತಿರುವರು. ನಮಗಾಧರೋ ಮಹಾರಾಜ ಪದವಿಯು ಕರಗತಮಾಗಿಹುದು. ಇಲ್ಲಿ ಒಡ್ಡೋಲಗವಾಗಿ ಮಾಡುವ ಮದುವೆ ಮುಂತಾದ ಪ್ರಸ್ತಂಗಳಂ ನೋಡಿಸಂತೋಷಿಸುವ ಬಾಂಧವರಾರಿರುವರು ? ಬಂಧು ರಹಿತವಾಗಿ ಎನಿತು ವಿಭವವಾಗಿ ನಾವು ಪ್ರಸ್ತುತವುಂ ಮಾಡಿದರೂ ಶೋಭಿಸಲಾರದು. ಆದ್ದರಿಂದ ನಮ್ಮ ಮಾತಾಪಿತೃಗಳನ್ನು ನೋಡಿಕೊಂಡಾ ದೈವಸಂಕಲ್ಪವಿಚ್ಛರಿ ಅನುಕೂಲವಾದ ಬಂಧು ಜಾಲದೊಳು ಕನ್ಯೆಯಂ ನೋಡಿ, ಅಲ್ಲಿಯೇ ಮದುವೆಯಂ ಮಾಡಿ ನಮ್ಮ ವೈಭವವನೆಲ್ಲಮಂ ಬಾಂಧವರಿಗೆತೋರಿ ಸಂತೋಷಗೊಳಿಸೋಣವೆಂದು, ಅಭಿಪ್ರಾಯಂ ಜನಿಸಿಹುದಾದ್ದರಿಂದ ದಯಮಾಡಿ ನಡೆಯಿಸಬೇಕೆಂದು ಬೇಡುವ ಕಾಂತಾಮಣಿಯನ್ನು ಕುರಿತಾ ಪುಷ್ಕರ ಭೂಕಾಂತನು, ಎಲ್ಲೆ ಸುಂದರೀ ಮಣಿಯೇ ! ನೀನಾಶಿಸಿರುವದು ಯುಕ್ತವೇ ಸರಿ ನೀವು ನಾಲ್ವರೂ, ಒಬ್ಬನಂ ಪತಿಯನ್ನಾಗಿ

ಅಂಗೀಕರಿಸಿದ ಭಾಗದೊಳು ಅವರೇಂ ಅನವರತಾಧಾನಗೊಳ್ಳುವರೋ ಮತ್ತೂ ನದಿಯೊಳು ಹೊಡೆದುಕೊಂತು ಹೋದ ನಿಮ್ಮ ಮಕ್ಕಳು ಬಂದಿರುವರೆಂದು ಹೇಳಿ ಕಳುಹಿದರೆ ಎಂತೆಂತು ಭಂಗಪಟ್ಟು ಕೆದ್ದಲ್ಲಿಂದ ಬಂದಿಹರೋ ಎಂದು ಸನ್ನಾನಿಸಿದೆ ಅಲಕ್ಷ್ಯಮಾಡುವರೋ, ಎನಲು ಆ ಸುಗುಣವತಿಯು, ಪ್ರಾಣೇಶನೇ ! ಕೇಳು ವಾಗ್ಮುಖಿ ಅನರಂತುವಾಡಿದ ಬಹುವಾನಿಸುವುದೇ ನಿಜ, ಒಂದುಮೇಳಿ ಹಾಗೆವಾಡದೆ ನಿರಪೇಕ್ಷವಾಡಿದ್ದಾದರೆ, ನಮಗೇನವರಿಂದಾಗಬೇಕಾದ ಫಲಂ, ತಾಯಿತಂದೆಗಳು ಜೀವನಂತರಾಗಿದ್ದರೆ ಸಂಪಭಿಸಿದರೆ, ಮುಂಖವನ್ನಾದರೂ ದೂರವಾಗಿನಿಂತು ನೋಡುವದೇಸಾಲು ಪರಮೇಶ್ವರಾನುಗ್ರಹದಿಂದ ನಮಗೀಗ ಸಕಲ ಸಂಪತ್ತುಗಳೂ ಕರಗತವಾಗಿರುವವು, ಬಹುಕಾಲವಾಗಿ ಪರರಾಯರ ವಶವಾಗಿರುವ, ನಮ್ಮ ಸ್ವಂತರಾಜ್ಯವನ್ನಾದರೂ ಕ್ರಮವಶಮಾಡಿಕೊಂಡು ಕೆಲಕಾಲದಲ್ಲಿ ಸುಖಿಯೆತ್ತಿದ್ದು ಅನಂತರ ವಿಾರಾಜ್ಯಕ್ಕೂ ಬಂದು ಹೋಗುತ್ತ ಕಾಲಕ್ಷೇಪಮಂ ಮಾಡಿಕೋಣ ತಾನೆಷ್ಟು ಮಹದೈಶ್ವರ್ಯ ಸಂಪನ್ನನಾಗಿದ್ದರೂ, ಬಂಧು ಜನಸಾಜವಿಲ್ಲವೆ ಪರದೇಶಗತನಾಗಿ ಬಾಳ್ದರೆ, ಆ ಭೋಗ ಭಾಗ್ಯಂಗಳೆಲ್ಲವೂ, ಅಡವಿಯಲ್ಲಿ ಕಾಸ ಬೆಳದಿಂಗಳಿನಂತೆ ನಿಷ್ಫಲವಾದುದು ಎಂದು ತನ್ನ ಪ್ರಾಣಕಾಂತೆಯು ಹೇಳುವ ಮಾತುಗಳೆಲ್ಲಮಂ ಕೇಳಿ, ಯುಕ್ತಮೇಸರಿಯೆಂದು ಯೋಚಿಸಿ, ಮಂತ್ರಿಯಂ ಕರೆಯಿಸಿ, ಆಯಾ ಸಚಿವ ಶಿರೋಮಣಿಯೇ ನಾನು ಬಂದು ಮಂಪತಿಯಂ ತೊರೆದು ಬಂದು ಬಹುಕಾಲವಾದುದು ಅವರೆಲ್ಲರಿಗೂ ನೋಡಿ ಮನ್ನಿಸಿ ಬರಬೇಕೆಂದು ಯೋಚಿಸಿದೆನೆ. ನಾಂ ಬರುವನರಿಗೂ ಪ್ರಜಾಪರಿಂಪಕನಾಗಿ ರಾಜ್ಯಮಂ ಸುಖಿವಾಗಿ ಪರಿಪಾಲಿಸುತ್ತಾ ಬರಬೇಕೆಂದು ರಾಜ್ಯಭಾರಮಾತನೊಳಿರಿಸಿ, ಮುದ್ರೆಯನ್ನಿತ್ತು, ಅಗಣಿತ ಅವಾರ್ಯ್ಯ ದಿವ್ಯರತ್ನಂಗಳಂ ಸುರಚಿರಾಭರಣಂಗಳಂ ದಿವ್ಯ ಚೀನಾಂಬರಾವಿ ನಾನಾವಿಧದು ಕೂಲಂಗಳಂ ಸಹಕೋಶಾಗಾರದೊಳರಿಸಿ ತೆಗಿಸಿ ಭಂಡಿಗಳೊಳೇರಿಸಿ, ಚತುರಂಗಬಲಸಮೇತನಾಗಿ ನಾಲ್ಕುಮಂದಿ ಕಾಮಿನೀ ಮಣಿಗಳಾದ ಭಾರ್ಯೆಯರನೊಡಗೊಂಮ, ಪುಶ್ರಸಮೇತನಾಗಿ ದಿವ್ಯ ವಿಮಾನಂಗಳನ್ನೇರಿ, ಪುರಮಂ ತೊರೆದು ನಾಲ್ಕಾರು ದಿನಂಗಳು ಮಾರ್ಗಮಂ ನಡೆದು ತನ್ನ ಮಾವನ ರಾಜಧಾನಿಯಾದ ಕಾಂಬಿಲ ನಗರಸೀಮೆಗೈತಂದು, ಪುರೋದ್ಯಾನದೊಳು ಪಟಗೃಹಂಗಳಂ ನೆಡಿಸಿ, ರಾಣಿವಾಸಂಗಳಿಗೆ ಪ್ರತ್ಯೇಕ ಪಟಗೃಹಗಳಂ ಕಲ್ಪಿಸಿ, ಹೊರಭಾಗದ ವನದೊಳು ಸೈನ್ಯಮಂ ನೆಲೆಗೊಳಿಸಿ, ಪ್ರವಾಹದೊಳು ಹೊಡೆದುಕೊಂಮ ಹೋದ ನಮ್ಮ ಕುಮಾರಿಯಾದಿಯಾದವರು ಪತಿಸಮೇತರಾಗಿ ಬಂಮ, ಸಂದರ್ಶನಕ್ಕಾಗಿ ಕಾವಿರ್ಪುವರೆಂಮ ಮೊದಲೇ ದೂತರ ಮುಖೇನ ರಾಯಂಗೆ ವಾರ್ತೆಯಂ ಹೇಳಿ ಕಳುಹಿ ಇವರ ಪ್ರತ್ಯುತ್ತರ ನಿರೀಕ್ಷಣೆಯೊಳು ಕಾದಿರ್ದಂ.

ಅತ್ತಲಾ ಪುಷ್ಕರರಾಯಂ ಕಳುಹಿದ ರಾಜಸೇವಕರು ಬಂದು, ಮಹಾ ಭೋಜರಾಯನಾಸ್ಥಾನಮಂಸಾರಿ, ಸಾಷ್ಟಾಂಗಮೆರಗಿ ಮುಜರೆಯನ್ನೆರ್ಪಿಸಿ ಮುಕುಳಿತ ಹಸ್ತನಾಗಿ, ಸ್ವಾಮಿ ಮಹಾರಾಜರೇ ! ನಾವು ನದಿಯಲ್ಲಿ ಕೊಚ್ಚಿ ಹೋದ ತಮ್ಮ ಸುಕುಮಾರಿಯೇ ಮೊದಲಾದ ನಾಲ್ವರ ಪ್ರಾಣಕಾಂತನಾದ ಪುಷ್ಕರಾವನೀಶನ ದೂತರು, ಆ ಭೂಕಾಂತಂ ತನ್ನ ಪತ್ನಿಯರೊಡಗೂಡಿ, ಪುತ್ರ ಸಮೇತನಾಗಿ ಸನ್ನಿಧಿಯಸಂದರ್ಶನಕ್ಕಾಗಿ ಪುರದೊಳಗಣ ರಾಜೋದ್ಯಾನದೊಳು ನೆಲೆಯಾಗಿರುವಂ, ತಮಗಾತನಂ ಕಾಂಬುದು ಸೂಕ್ತಮೆಂದು ತೋರಿದರೆ, ದಯ ಮಾಡಿಸಬಹುದು, ಅಲ್ಲವಾದರೆ ದೇವರವರ ಮನೋಭಾವವನ್ನಾದರೂ, ಆಜ್ಞಾ ವಿಸಿದರೆ ನಮ್ಮ ರಾಯರಿಗೆ ವಿಜ್ಞಾಪಿಸಿಸುವೆವೆಂದೊರೆಯಲಾಮಾತಂ ಕೇಳುತಾಕ್ಷ ಣಮೇ ಸಂತೋಷಾಮೃತಸಾಗರ ಮಗ್ನನಾಗಿ, ಅಂತೆಯೇ ಮೈಮರೆದೆಚ್ಚ ತ್ತು ಹಾ ! ನದೀಪಾಲಾದವರು ಬದುಕಿರುವರೇ ? ಎಂದತ್ಯಾಶ್ಚರ್ಯಪಡುತ್ತಾ, ಆಕ್ಷಣವೇ ಮಂತ್ರಿ, ಸೇನಾಪತಿ, ವೈಶ್ಯವರ್ಧಕಿ ಕರೆಕಳುಹಿ, ಅವರಿಗೀ ಸುದ್ದಿಯನ್ನರು ಪಲು. ಅವರೂ ಪರಮಾನಂದ ಭರಿತರಾಗಿ ಮಕ್ಕಳಂ ನೋಡಬೇಕೆಂಬ ಕುತೂ ಹಲ ಮುಳ್ಳವರಾಗಿ, ಸಕಲ ನಿಯೋಗದವರಂ ಚತುರಂಗಬಲವನ್ನೂ ಬರಮಾಡಿ ಕೊಂಡು ಪುರೋಹಿತ, ಸಾಮಂತ ಬಂಧುಜನ ಸಮೇತನಾಗಿ, ಪರಮೋ ತ್ಸಾಹದೊಂದಿಗೆ ಪುಷ್ಪಫಲ ತಾಂಬೂಲಾದಿಗಳಂ ವಾರಾಂಗನೆಯರಿಂ ತೆಗೆಯಿಸಿ ಕೊಂಡು ಒಡ್ಡೋಲಗಮಾಗಿ ಪುರಮಂಬಿಟ್ಟು ಹೊರಗೆಬಂದು, ಪುರೋದ್ಯಾ ನಮಂ ಸಾರಿ, ಅತ್ಯಂತ ವಿಭವದೊಡನೆ ಬಂದಿರುವ ತನ್ನ ಆಳಯನ ಸಂಪ ದಮಂ ನೋಡಿ ಪರಮಾನಂದ ತುಂದಿಲನಾಗಿ ಸುವರ್ಣವಿಕಾರಮಾದ ಆಳಿಯನ ಪಟಗೃಹಮಂ ಪ್ರವೇಶಿಸೆ ಎದುರು ನೋಡುತ್ತ ನಿಂತಿದ್ದ ಗುಣವಂತೆಯೇ ಮೊದಲಾದ ನಾಲ್ವರು ಪತ್ನಿಯರೊಡನೆ ರಾಯುಂಗೆಯೂ ಮಿಕ್ಕಮಾವಂದಿರಿಗೂ ನಮಸ್ಕರಿಸಿ ನಿಲ್ಲಲು, ಆ ನಾಲ್ವರೂ ತಮ್ಮ ತಮ್ಮ ತಂದೆಗಳಿಗೆರಗಿ, ಮುಖವಂ ಬಾಗಿ ನಿಂತುಕೊಳ್ಳುವರಾಗೆ, ರಾಜನಾದಿಯಾದ ನಾಲ್ವರೂ ಕಂಬನಿಗಳಂತುಂದಿ ಅಯ್ಯೋ ಪುತ್ರೀರತ್ನಗಳಿರಾ ನೀವು ನಮಿಪಾಲಾಗಿ ಹೋದಿರೆಂದು ದಿವಾರಾತ್ರೀ ಗಳಲ್ಲಿಯೂ ದುಃಖಿಸುತ್ತಿರ್ದೆವಲ್ಲಾ ದೈವಯೋಗದಿಂದ ನಿಮ್ಮಗಳಂ ನೋಡಿ ದವರಾದೆವು. ನಮ್ಮ ಜನ್ಮವು ಸಾರ್ಥಕಮಾದುದು. ನಾವು ಜೀವಿತರಾಗಿದ್ದರೂ ಮನೆಗೆ ಬಂದು ಇಳಿಯದೆ ಇಂತು ಮಾಡಬಹುದೆ, ನಾವೇನು ಅಪರಾಧಂಗಳಂ ಮಾಡಿದವರು, ಎಂದು ಗೋಳಾಡುತ್ತಾ ಮಕ್ಕಳನ್ನಪ್ಪಿ ಶೋಕಿಸುವವರಂ ಕುರಿತಾ ಸುಗುಣಾಭರಣೆಯಾದ ಗುಣವತಿಯು ನಾವು ನಾಲ್ವರೂ ಸೇರಿ ಒಬ್ಬನನ್ನೇ ಪತಿ ಯಾಗಿ ರಹಸ್ಯದೊಳು ವರಿಸಿದ ಭಾವಮಂ ತಮಗರುಹದೆ ಹೋದೆವು, ಇದೊಂ ದು ತಪ್ಪಿತವೆಂದು ನೀವೇನಾದರೂ ಕೋಪಗೊಂಡು ಇವರು ದೋಷಿಗಳೆಂದು

ತಿರಸ್ಕರಿಸುವರೋ ಏನೋ ಎಂಬ ಅನುಮಾನದಿಂದಿಂತು ಗೈದೆವೆಂದೊರೆದು ತಾವು ತಂದೆ ಮನೆಯೊಳಿರುವಾಗಲೇ ಮಾಡಿದ್ದ ಕೃತ್ಯಮಂ ಹೇಳಲು ನಾಚಿದ ವಳಾಗಿ,

ಅವಶ್ಯಮನುಭೋಕ್ತವ್ಯಂಕೃತಂಕರ್ಮಶುಭಾಶುಭಂ । ನಾಭೋಕ್ತಂಕ್ಷೀ
ಯತೇಕರ್ಮ ಕಲ್ಪಕೋಟಿಶತೈರಪಿ ॥

ಎಂಬ ಶ್ಲೋಕವಂ ಬರೆದು ತಂದೆಯ ಕೈಯೊಳಿತ್ತು, ಇದರ ನಾಲ್ಕುಪಾದಂ ಗಳಂ ಒಂದೊಂದು ಪಾದವಾಗಿ ಒರ್ವೊರ್ವರು ಬರೆದುಕೊಟ್ಟಂತೆ ವರನಂ ಹೊಂ ದಿದೆವೆಂದು ಮಿಕ್ಕುದನೆಲ್ಲಮಂ ಸಂಕೇತವಾಗಿ ಅರಿಕೆಮಾಡಲು, ಮಗಳ ಮಾತು ಗಳನೆಲ್ಲಮಂ ಕೇಳಿದಾ ಮಹಾ ಭೋಜರಾಯಂ, ಅಮ್ಮಾ ! ಸುಕುಮಾರಿಯೇ ? ನೀವುಗಳು ಮಾಡಿದ್ದೀನು ದೋಷಾವಹವಾದ ಕಾರ್ಯಮಲ್ಲ. ನಮ್ಮ ಕ್ಷತ್ರಿಯ ಧರ್ಮಕ್ಕನುಸಾರವಾಗಿಯೆ ನಿಮ್ಮ ಇಚ್ಛಾನುಸಾರವಾಗಿ ವರನಂ ಒಪ್ಪಿಸ್ವಯಂ ವರಮಂ ಮಾಡಿಕೊಂಡಿರುವಿರಿ. ತತ್ಕಾಲ ಮಹಾ ಶೂರನಾಗಿಯೂ, ಕ್ಷತ್ರಿಯೋ ತ್ತಮನಾಗಿಯೂ ವಿದ್ಯಾರೂಪಯೌವ್ವನ ಸಂಪನ್ನನಾಗಿಯೂ ರಾಜಪದವಿಯೊಳು ಸುಖಿಸುತ್ತಿರುವನನ್ನೇ ಕೈವಿಡಿದಿರುವಿರೆ ಬಹು ಪತ್ನೀತ್ವ ವಿಕಪುರುಷ ಗ್ರಾಹ್ಯ ಮಾದುದೆಂದು ಶಾಸ್ತ್ರಸಂಮತವಿಹುದು. ಈ ಭಾಗದೊಳು ನೀವೇನೂ ದೋಷಿ ಗಳಾದವರಲ್ಲವೆಂದು ಸವಧಾನಮಂಕೇಳಿ ಅಳಿಯನಂ ಕೈವಿಡಿದು ಎಲ್ಲೆ ಮಹಾ ರಾಯನೇ ! ನೀಂ ನನಗಳಿಯನಾದುದರಿಂದ ನಾನು ಧನ್ಯನಾಟನು, ಇಂಥಾ ಯೋಗ್ಯನಾದವರನಂ ಘಟಿಸಿದ ದೈವವು ನಮ್ಮಿಂದ ಎನಿತು ಕೊಂಡಾಡಲ್ಪಟ್ಟರೂ ಸಾಲದು, ಎಂದು ಉಪಚಾರಮುಂ ಹೇಳಿ ಮಗಳನ್ನೂ ಅಳಿಯನನ್ನೂ ಅವಳ ಸವತಿಯರಾದ ಮೂರು ಮಂದಿಯರನ್ನೂ, ಚಿನ್ನದಂದನಂಗಳೊಳ್ಕೀರಿಸಿಕೊಂಡು, ರಥದೊಳು ತನ್ನೊಂದಿಗೆ ಅಳಿಯನನ್ನೂ ಮಂತ್ರಿಸೇನಾಪತಿ, ವೈಶ್ಯವರ್ಯನನ್ನೂ ಕುಳ್ಳಿರಿಸಿಕೊಂಡು ಪುರಪ್ರವೇಶಮುಂ ಮಾಡಿ ಅರಮನೆಯಂ ಹೊಗಿಸಿ, ಅಂತಃ ಪುರಾಂಗನೆಯರಂ ಕಾಣಿಸಿ, ಎಲ್ಲರಿಗೂ ಅಭ್ಯಂಜನ ಔತಣಗಳಂ ಮಾಡಿಸಿ, ರಾತ್ರಿಯೊಳು ಆರತಿ ಅಕ್ಷತೆಗಳಂ ಮಾಡಿಸಿ, ಉಡುಗೊರೆ ಮುಂತಾದವುಗಳಂ ಕೊಟ್ಟು ಮನ್ನಿಸಲು ಮಿಕ್ಕಮೂರುಮಂದಿಯೂ ಅದೇ ಪ್ರಕಾರವಾಗಿ ತಮ್ಮ ತಮ್ಮ ಮನೆಗಳೊಳು ಉತ್ಸವಂಗಳಂ ಮಾಡಿಸಿ ತಮ್ಮ ಮಗಳಿಗೂ ಅಳಿಯನಿಗೂ ಮಿಕ್ಕ ಮೂರಮಂದಿ ರಾಜಕಾಂತೆಯರಾದವರಿಗೂ ಉಡುಗೊರೆ ಮುಂತಾದವುಗಳಂ ಕೊಟ್ಟು, ಪರಮ ಸಂಭ್ರಮದೊಳು ಸಂತೋಷಯುಕ್ತರಾಗಿ ಕೆಲಕಾಲಂ ಸುಖ ವಾಗಿ ಕಳೆದರು ಅನಂತರ ವೊಂದಾನೊಂದು ದಿನದೊಳು ಮಹಾ ಭೋಜ ರಾಯಂ ತನ್ನ ಮಗಳನ್ನೂ ಅಳಿಯನನ್ನೂ ಕರೆದು ಕುಳ್ಳಿರಿಸಿಕೊಂಡು, ಎಲ್ಲೆ ಸತ್ಯವಂತರುಗಳಿರಾ ! ನಾನು ವೃದ್ಧನಾಗಿಯೂ ಗಂಡು ಮಕ್ಕಳಿಲ್ಲದವನಾಗಿಯೂ

ಇರುವನಾದ್ದರಿಂದ ಈ ರಾಜ್ಯಭಾರವಂ ನಿವೇದಿಸಿ, ನಮ್ಮಂ ಕಾಪಾಡಬೇಕೆಂದೊರೆದು, ಅಳಿಯನಾದ ಪುಷ್ಕರರಾಯಂಗೆ ರಾಜ್ಯಭಾರಮಂ ವಹಿಸಿಕೊಟ್ಟು ತಾನೂ ವಿಶ್ರಾಂತಿಸುವುವಂ ಹೊಂದಿದನು.

ಅನಂತರವಾ ಪುಷ್ಕರರಾವನೀಂದ್ರಂ ಬಹುಕಾಲವಾಗಿ ಶತ್ರುರಾಯರ ಕೈವಶವಾಗಿರ್ದ ತನ್ನ ವಿತ್ರಾರ್ಜಿತವಾದ ಪದ್ಮಾವತಿಯನ್ನು ಸಾಧಿಸಬೇಕೆಂಬ ಬಹುಕಾಲವಾಗಿದ್ದ ಕೋರಿಕೆಯಂ ಈಡೇರಿಸಿಕೊಳ್ಳಬೇಕೆಂದು ಯೋಚಿಸಿದವನಾಗಿ ಅಪರಿಮಿತ ಚತುರಂಗಬಲ ಸಮಾವೃತನಾಗಿ ಹೊರಟು, ಆ ದೇಶಮಂ ಸಾರಿ, ಶತ್ರು ನಿಗ್ರಹಮಂ ಮಾಡಿ, ಆ ರಾಜ್ಯವನ್ನೂ ಮಾವನಿಂದ ದತ್ತವಾದ ರಾಜ್ಯವನ್ನೂ ತಾಂ ಮೊದಲು ಸಾಧಿಸಿದ್ದ ಬರ್ಬರದೇಶವನ್ನೂ, ವಿಕರಾಜ್ಯವಾಗಿ ಮಾಡಿಕೊಂಡು ಪ್ರಜಾರಂಜಕನಾಗಿ ಧರ್ಮೈಕ ಪರನಾಗಿ ಪರಿಪಾಲಿಸುತ್ತಾ, ಪತ್ನೀಪುತ್ರ ಸಮನ್ವಿತನಾಗಿ ಸಕಲ ಭೋಗಂಗಳಂ ಅನುಭವಿಸುತ್ತಾ ಬಹುಕಾಲಂ ಸುಖವಾಗಿ ಬಾಳುತಿರ್ದಂ. ಎಂದೊರೆದಾ ಕಲಾವತಿಯ ಸೀರೆಯು, ವಿಕ್ರಮಾರ್ಕ ಮಹಾರಾಯನನ್ನ ಕುರಿತು, ಎಲೈ ಭೂಮಿಂದ್ರನೇ ಅರವಿಂದಬಾಂಧವನಾದರೋ ಪೂರ್ವ ಪರ್ವತ ಶಿಖರಮಂ ಅಲಂಕರಿಸುತ್ತಿರುವನು. ನಾನಾದರೋ ನಿದ್ದೆಯಿಲ್ಲದೆ, ಕಥೆಯಂ ಹೇಳಿ, ಆಯಾಸಂಹೊಂದಿರುವೆನು, ಕಥೆಯೂ ಪೂರ್ತಿಯಾಯಿತು, ತಮ್ಮ ಮನೋರಥವೂ ಕೈಗೂಡಿ ಸುಖಿಗಳಾದಿರಿ, ಅಪ್ಪಣೆಯಾದರೆ ವಿಶ್ರಮಿಸಿಕೊಳ್ಳುವೆನೆಂದೊರೆದು ಸುಮ್ಮನಾದುದು.

ಈ ವಿಧನಾದುದೆಲ್ಲಮಂ ನೋಡಿ ಮಹಾಶ್ಚರ್ಯ ಪರವಶಳಾದಕಲಾವತಿಯು ಈ ರಹಸ್ಯಂ ಲೋಕ ಶ್ರೇಷ್ಠನಾದವನು, ಅಚೇತನಂಗಳಾದ ಜಡಪದಾರ್ಥಂಗಳಿಗೆ ಚೈತನ್ಯಮಂ ಕೊಟ್ಟು ವ್ಯಾಪಾರಿಸುತ್ತಿರುವದಲ್ಲಾ ? ಇಂಥಾ ಶಕ್ತಿಯುಳ್ಳ ಪುರುಷನಂ ನಾನೀ ಲೋಕದೊಳಿಲ್ಲಿಯೂ ಕೇಳಿನೋಡಿಲಿಲ್ಲವೆಂದು, ಮೆಚ್ಚುತ್ತಾ ತನ್ನ ಕೈಗಳನೆರಡನ್ನೆತ್ತಿಯ ಮೇಲಿಟ್ಟು ಜೋಡಿಸಿಕೊಂಡು ಎಲೈ ಮಹಾರಾಜಾಧಿರಾಜ ವಿಕ್ರಮಾರ್ಕಭೂಜಾನಿಯೇ ನಿನ್ನ ಪರಾಕ್ರಮಾದಿ ಸದ್ಗುಣಂಗಳಿಗೆ ನಾನು ಮೆಚ್ಚಿದ್ದೆನು, ತಿಳಿಯದೆ ಹೊಂದಿದ ಅಹಂಕಾರದಿಂದ ಮಾಡಿದ ಅಪರಾಧಮಂ ಕ್ಷಮಿಸೆಂದು ಪ್ರಾರ್ಥಿಸುತ್ತಿರುವಾಗ ಉಟ್ಟಿದ್ದ ತುಂಡು ಬಟ್ಟೆಯು ನೆಲದೊಳು ಬಿದ್ದುಹೋಗೆ, ನಾಚಿಕೆ ಗೊಂಡವಳಾಗಿ ಅಂತೆಯೇ ಹಿಂದಕ್ಕೆ ಹೋಗಿ, ತಾಂ ಮೊದಲು ಧರಿಸಿದ್ದ ದಿವ್ಯ ಸೀರೆಯಂ ಧರಿಸಿ ರಾಯನ ಸವಿಾಪಕ್ಕೆಬಂದಿ ಸ್ವಾಮಿ ನನ್ನಂ ಪತ್ನಿತ್ವೇನ ಕೈಹಿಡಿದು ಸಂತೋಷಿಸಬೇಕೆಂದು ಪ್ರಾರ್ಥಿಸುತ್ತಾ, ಅಪ್ಪಣೆಯಾದರೆ ಈ ರಾಜನುಪ್ಪೆಯಂ ತಂಗಿಯಾದ ಭೋಗವತಿಯ ಕೈಗಿತ್ತು, ಚರಣಸೇವಾರ್ಥಂ ಬರುವೆನೆಂದು ನುಡಿಯುತ್ತಿರುವ ಕಲಾವತಿಯಂ ನೋಡಿ ಎಲೈ ತಂಗೀ ನೀನಿಂತು ಗರ್ವವಾಂತು ಮಾಡಿದ ಪ್ರತಿಜ್ಞೆಯಿಂದ ಮಾನಮಂ ಕಳೆದು

ಕೊಂಡುದೊಂದೇ ಫಲವೆಂದು ಕಿರುನಗೆಯಿಂ ಸುಮ್ಮನಾಗೆ, ಪುರುಷನ ಮುಂದೆ ಕಾಂತೆಯಾದವಳಾವಳು ತಾನೇ ಮಾನವಂ ಬಿಡದೆ ಯಿರುವಳು ಎಂದುತಾನೂ ಮುಗುಳು ನಗೆಯಂಗೈಯುತ್ತಾ ತನ್ನ ತಂಗಿಯಾದ ಭೋಗವತಿಯ ಅತಿಶಯ ರಮಂ ಕುರಿತ್ತು ಹೊರಟು ಹೋದಳು. ತಂಗಿಯಾದ ಭೋಗವತಿಯಂ ಕಂಡು ನಾನೂ ಆ ಮಹಾರಾಯನ ಕೈಸಾರಿದೆನೊಂದೊರೆದು ಮುದ್ರೆಯನ್ನಾಕೆಗೆ ಕೊಟ್ಟು ನೀಂಸುಖಿಯಾಗೆಂದಾಶೀರ್ವದಿಸಿ ಒಡನೆ ಹಿಂದಿರುಗಿ ವಿಕ್ರಮಾದಿತ್ಯರಾಯನಂ ಸೇರಿ ಪರಮ ಸುಖವನನುಭವಿಸಲುದ್ಯುಕ್ತಳಾಗಿದ್ದಳು.

ಎಲೈ ಮಹಾರಾಜನೇ ಈ ತೆರೆಯೊಳು ಕಲಾವತಿಯು ವಿಕ್ರಮಾದಿತ್ಯರಾಯಂನಂ ಕೈಸಾರಿದಳೆಂದು ವೀರಸೇನ ಮಹಾರಾಯನಿಗೆ ಅತನ ಮಂತ್ರಿಯಾದ ಚಿತ್ರವರ್ಮನೆಂಬವಂ ಪೇಳಿದನೆಂಬಲ್ಲಿಗೆ ಕರ್ನಾಟಕ ಭಾಷಾವಜನರಚಿತ ಸೌಂದರ್ಯಾದ್ಭುತ ಸುಂದರೀಚಿತ್ರ ಬೃಹತ್ಕಥಾಮಂಜರಿಯೊಳು ಕಲಾವತೀ ಮಾನಾಪಹಾರಮುಂಬ, ಮೂರನೆ ಭಾಗದೊಳು ನಾಲ್ಕನೆ ಯಾನುದ ಕಥಾ ಸಮಾಪ್ತಮಾದುದು.

ತದನಂತರಮಾ ಶೂರಸೇಖಪೇಶಾಧಿಪತಿಯಾದ ವೀರಸೇನ ಮಹಾರಾಯನು ತನ್ನ ನಿತ್ಯಕೃತ್ಯಂಗಳನೆಲ್ಲಮಂ ನೆರವೇರಿಸಿದ ನಂತರದೊಳು ಸುಖಾಸೀನನಾಗಿ ತನ್ನಾಪ್ತ ಮಂತ್ರಿಯಂ ಕರೆಯಿಸಿ ಎಲೈ ಮಂತ್ರಿ ಶಿಖಾಮಣಿಯೇ ನೀನಿನಿತು ದಿನಂಗಳೊಳು ಹೇಳುತ್ತಾ ಬಂದಕಥೆಗಳು ಒಂದಕ್ಕೊಂದು ತರ ತರಂಗಳಾಗಿಯೂ ಅತ್ಯಾನಂದಾಶ್ಚರ್ಯ ಜನಕಂಗಳಾಗಿಯೂ ಇದ್ದವು, ಅವುಗಳಂ ಕೇಳಿ ಪರಮಾನಂದ ಭರಿತನಾಂತನಾದೆನು, ಕಲಾವತಿಯಂ ಕೈವಿಡಿದ ಬಳಿಕ ಮತ್ತೊರ್ವಳನ್ನೆಂತು ಸ್ವಾಧೀನಮಾಡಿಕೊಂಡನೋ ಅದಂ ಕೇಳಬೇಕೆಂದು ಕುತೂಹಲಮುಳ್ಳವನಾಗಿದ್ದೇನೆ. ಎನಲಾ ಮಂತ್ರಿನ್ಯಾನಾದ ಚಿತ್ರನಾಮ್ನಿಯನು ಪೇಳಲಾರಂಭಿಸಿದನು. ಲಾಲಿಸ್ಸೈ ಭೂಭುಜಬಲಾಮನೇ ! ಕಲಾವತಿಯನ್ನು ಸ್ವಾಧೀನಮಾಡಿಕೊಂಡನಂತರ ಆಕೆಯೊಂದಿಗೆ, ಕಲೆತು ಬೆರೆತು ಸುಖಸಾಮ್ರಾಜ್ಯಮಂ ತಾಳುತ್ತಿರುವ ಅಂದಿನದಿನವೇ ಅವಳ ತಂಗಿಯಾದ ಭೋಗವತಿಯು ತನ್ನ ಅಕ್ಕನಿಂದ ಕೊಡಲ್ಪಟ್ಟ ರಾಜಮುದ್ರೆಯಂ ಹೊಂದಿದವಳಾಗಿ, ಇಂತೆಂದು ಯೋಚಿಸುತ್ತಾ ಬಂದಳು. ಈ ರಾಜ್ಯಮಾದರೋ ಸ್ತ್ರೀಪರಿತಮಾದುದ್ದು, ಕಾರ್ಯಗೌರವವು ಅತ್ಯಂತ ಪ್ರಯಾಸದೊಳು ನಿರ್ವಹಿಸಬೇಕಾಗಿಹುದು. ನಾನೊರ್ವಳಿದ್ದು ಸಹಾಯಕರಿಲ್ಲದಿರಲು, ಸಾಧ್ಯಮಲ್ಲವು. ನಮ್ಮ ಅಕ್ಕಂದಿರಲ್ಲದೆ ಅನ್ಯರೇ ಸಹಾಯದಿಂದ, ನಿರ್ವಹಿಸಲಸದಳಮಾಗಿಹುದು. ಅವರು ಸಂಸಾರ ಸುಖಾಪೇಕ್ಷೆಗಳಾದ ಬಳಿಕ ನನಗಿದು ಪರಮ ಕಷ್ಟತರವು, ಅತನನ್ನು ಜಯಿಸಿ ಅವರಂ ಹಿಂದಿ

ರುಗಿಸಿಕೊಳ್ಳುವೆನೆಂದರೊ ಆತಂ ಅಸಹಾಯಶೂರನು, ಸಕಲ ಮಂತ್ರತಂತ್ರಮಣ್ಯೌಷಧಿಗಳ ಪ್ರಯೋಗ ಕುಶಲನು, ಜಡಂಗಳಾದ ವಸ್ತುಗಳನ್ನ ಪದಾರ್ಥಂಗಳನ್ನಾಗಿಯೂ ಚೈತನ್ಯಂಗಳಂ ಜಡಂಗಳನ್ನಾಗಿಯೂ ಮಾಡುವ ಘಟನಾಘಟನಕರ್ಮಸಮರ್ಥಂ ನಾನೆನಿತು ಚಡುರೆಯಾದರೂ ಅಬಲೆಯು. ಈ ದಿನ ರಾತ್ರಿಯೊಳೇ ಆ ಮಹಾರಾಯನ ಶಕ್ತಿಯನ್ನು ನೋಡಿ ನನ್ನಿಂದ ಸಾಧ್ಯವಲ್ಲದೊಡೆ ನಾನೂ ಅತನನ್ನೇ ಸೇರಿ ಅವರಂತೆಯೇ ಸಂಸಾರಸುಖವನ್ನನುಭವಿಸುವೆನೆಂದರೆ ಹೊರಗಾಗಿ ಇಂದಿಗೆ ಮೂರನೆ ದಿನವು ನಾಳೆದಿನ ಶುಚಿಸ್ನಾನವಾಗುವದು. ಆ ಒಳಗಾಗಿ ಕಾರ್ಯಾಂತರಾಸಕ್ತನಾಗಿ ಹೊರಟುಹೋದರೆ, ನನ್ನ ಕಾರ್ಯವೆಲ್ಲವೂ ಕೆಟ್ಟು ಹೋಗುವದು ಯೆಂದು ಯೋಚಿಸುತ್ತಾ ತನ್ನೆಡೆಯೊಳಿರ್ದ ಗೌಡಿಯಂ ಕರೆದು, ಎಲೌ ಮಂಗಳಾಂಗಿಯೇ ನೀನತಿಭರದಿಂ ವಿಕ್ರಮಾರ್ಕರಾಯನೆಡೆಗೈದಿ ಆತನ ಸನ್ನಿಧಿಯೊಳು ಹೀಗೆಂದು ನನ್ನ ವಿಜ್ಞಾಪನೆಯನ್ನು ಒರೆಯುವಳಾಗು ನಮ್ಮ ಒಡತಿಯಾದ ಭೋಗವತಿ ತಮ್ಮ ಶಕ್ತಿಸಾಹಸಂಗಳೀ ಮೊದಲಾದ ಅತೋಪ್ಪ ಸಾಮರ್ಥ್ಯಂಗಳಂ ಅನ್ಯರ ಮುಖೇನ ಕೇಳಿಪ್ಪೀ ಹೊರತು ಪ್ರತ್ಯಕ್ಷವಾಗಿ ನೋಡಿದವಳಲ್ಲ. ನಾನಾದರೋ, ನಮ್ಮ ಅಕ್ಕಂದಿರಂತೆ ಚಡುರೆಯಲ್ಲ. ಆದರೂ ತಮ್ಮ ಸಾಹಸಮಂ ಪ್ರತ್ಯಕ್ಷವಾಗಿ ನೋಡಿ ಮೂರುವಾತ್ರಾಮಾಡುವಂತೆ ಮಾಡಿಸಿಕೊಂಡು ತಮ್ಮ ಸೇವಕೀಕೋಟಿಯೊಳು ಸೇರಿ ಚರಣಕಟಾಕ್ಷವೀಕ್ಷಣಕ್ಕೆ ಪಾತ್ರಳಾಗಿ ಧನ್ಯಳಾಗಬೇಕೆಂದಿಹೆನು. ಅದಕ್ಕೆ ಇಂದಿನೊಳು ಯೋಗವಿಲ್ಲದೆ ಇದಕ್ಕೆ ನಿರ್ಬಂಧವಾದ ಕಾರಣವನ್ನಾತೆಯಾಗಿ ನಾಳೆಯೊಳು ಸಂದರ್ಶನ ಕುತೂಹಲಳಾಗಿರುವೆನೆಂದು ಬಿನ್ನೈಸಿದಳೆಂದು, ಹೇಳುವಂತೆ ಆಜ್ಞಾಪಿಸಿ ಕಳುಹಲಾ ದೂತಿಕೆಯಂತೆಯೇ ಬಂದು ವಿಕ್ರಮಾರ್ಕ ಭೂನಿತಾಂದ್ರನ ಸನ್ನಿಧಿಯೊಳರಿಕೆಯಂ ಮಾಡಲು ರಾಯಂ ಮುಂದಣಾಸೆ ಸಂಯುತನಾಗಿ ಈ ಮೂವ್ವರಿಗಿಂತಲೂ, ಅವಳೇ ಮಹಾಪ್ರೌಢಾಂಗನೆಯೆಂದರಿತು ಅವಳನ್ನೋಡಬೇಕೆಂಬ ಲವಲವಿಕೆಯುಳ್ಳವನಾಗಿ ಕಾಲಯುಕ್ತ ಕೃತ್ಯಂಗಳಂ ಮಾಡಿಕೊಂಡು ಆ ಮೂರು ಮಂದಿಯೊಂದಿಗೆ ಸೇರಿ ಸ್ನಾನ ಭೋಜನಾದಿಗಳಂ ಮಾಡಿ ಗಂಧಪುಷ್ಪ ತಾಂಬೂಲಂಗಳಂ ಸೇವಿಸುತ್ತಾ ಸುಖವಾಗಿ ಸರಸಶೃಂಗಾರಂಗಳಂ ಮಾಡುತ್ತಿರುವಲ್ಲಿ ಆ ಮೂರುಮಂದಿ ವೋಹನಾಂಗಿಯರೊಳು ಹಿರಿಯವಳಾವ ಪದ್ಮಾವತಿಯು ತನ್ನ ಪ್ರಾಣಕಾಂತನಾದ ವಿಕ್ರಮಾರ್ಕಾವನೀಶನಂ ಕುರಿತು ಎಲೈ ಪ್ರಾಣನಾಥನೇ ! ನಿನ್ನ ಕೈಯ್ಯಂ ಸಾರಿದ್ದರಿಂದ ನಾವೆಲ್ಲರೂ ಕೃತಕೃತ್ಯರಾದೆವು. ನಮಗಿನ್ನು ಬಯಸಬೇಕಾದ ಭೋಗಂಗಳಾವವೂ ಇಲ್ಲವು. ಎಂದು ಸಂತೋಷದಿಂ ಕೊಂಡಾಡುತ್ತಾ, ಈ ನಗರಕ್ಕೆ ಮೂರು ಗಾವುದದೊಳು, ದಿವ್ಯವಾಗಿಯೂ ರಮಣೀಯವಾಗಿಯೂ ನೋಡುವದಕ್ಕೆ ಅತ್ಯಂತ ಸಂತೋಷಾವಹವಾಗಿಯೂ ಇರುವದೊಂದು ಶೃಂಗಾರೋದ್ಯಾನವನ

ಮಿಹುದು. ಅದು ನನ್ನಿಂದಲೇ ಪಾಲಿತವಾಗಿರ್ಪುದು. ನೀನೊಂದಿಗೆ ಸೇರಿ ಆ ಉದ್ಯಾನವನದೊಳು ವನವಿಹಾರ ಜಲಕ್ರೀಡಾದಿಗಳನ್ಮಾಡಿ ಸುಖಿಸಬೇಕೆಂದಳಿಸಿರುವೆನೆ ನನ್ನ ಮನೋರಥಮಂ ಕೈಗೂಡಿಸೆಂದು ಸವಿನಯಳಾಗಿ ಪ್ರಾರ್ಥಿಸುವಾ ತರುಣೀಮಣಿಯ ಪ್ರಾರ್ಥನೆಯನ್ನಂಗೀಕರಿಸಿ ಅಂತೆಯೇ ಆಗಲೆನಲು ಆ ಸುಂದರಾಂಗಿಯು ತತ್ಕ್ಷಣದಲ್ಲಿಯೇ ಸಕಲ ನಿಯೋಗದವರನ್ನು ಕರೆಯಿಸಿ ಸಮಸ್ತ ಭೋಗೋಪಯೋಗವಸ್ತುಗಳಂ ತಣಿಗೊಳಿಸಿಕೊಂಡಾ ಶೃಂಗಾರೋದ್ಯಾನದ ಬಳಿಯೊಳುಸಿದ್ಧಪಡಿಸಿ ಕಾದುಕೊಂಡಿರಬೇಕೆಂದು ನೇಮಿಸಿ ಕಳುಹಿ, ತಾನೂ ಲೀಲಾವತೀಕಲಾವತಿಯರಂ ಸೇರಿ, ಸಮಾನ ವಯಸ್ಕರಾದ ಸುಂದರೀಶತಮೊಂದಿಗೆ ವಿಕ್ರಮಾರ್ಕರಾಯನಂ ಸೇವಿಸುತ, ರತ್ನ ಖಚಿತಂಗಳಾದ ಅಂದಳಂಗಳನ್ಸೇರಿ ಅಕ್ಕುತ್ಸವದೊಳು, ಆ ಶೃಂಗಾರವನಮಂ ಸಾರಿ ಅಲ್ಲಿರೊಳು ರಚಿತಂಗಳಾದ ಸುಂದರತರ ಭೃಂಗಾರಮಯ ಪಟಗೃಹಂಗಳೊಳು ತಾರತಮ್ಯಾನುಸಾರಮಾಗಿ ಬಿಡಾರಂಗಳಂ ಕಲ್ಪಿಸಿಕೊಂಡು ದಿವ್ಯಾಂಬರಾಭರಣ ಗಂಧಮಾಲಾ ದಿಗಳಿಂದಲಂಕೃತೆಯಾರಾಗಿ ಗಾನವಾದ್ಯವಿದ್ಯಾ ಪರಿಣತರಾದ ಸುಂದರೀ ಮಣಿಗಳಂದವರವರ ವಾದ್ಯಂಗಳಂ ನುಡಿಸುತ ಪತಿಯಾದ ವಿಕ್ರಮಾರ್ಕರಾಯನಂ ತಾನು ಮೂರುಮಂದಿಯೂ ಸುತ್ತರಿದುಕೊಂಡುಪಜಪಿಸುತ ವಿನೋದವಾಗಿ ರಾಸಕ್ರೀಡಾ ಸಮಯದೊಳು ಗೋಪಿಕಾ ಸುಂದರಿಯರು ಪರವಾತ್ಮನಾದಾ ಕೃಷ್ಣಮೂರ್ತಿಯನ್ನೋಲ್ಮೆಸುತ ಆನಂದಗೊಳಿಸಿದಂತೆ ಸಂತೋಷಿಸುತ್ತಾ ಆ ವನದೊಳು ಹೊರಟು, ಅಲ್ಲಲ್ಲಿ ರಮಣೀಯ್ಯತರವಾಗಿ ಕಾಂಬುವ ಪೂಗೊಂಚಲುಗಳಂ ಕೀಳುತ, ಅದರ ಸೊಬಗಂ ಬಣ್ಣಿಸುತಾ ಕಾಂತಂಗೆತೋರುತ್ತಾ, ತರುಣದಳಿತ ತರುಗಳೊಳು ಸಾಂದ್ರವಾಗಿ ತುಂಬಿ ತೂಗುವ ಫಲಗುಚ್ಛಗಳಂನೋಡಿ ಆನಂದಿಸುತ್ತಾ, ಉನ್ನತಂಗಳಾದ ನಿಬಿಡತರತರುಗಳಚ್ಛಾಯಾಂದಕಾರಂಗಳೊಳು ಅತಿಪ್ರಭಳವಾದ ಕಾಂತಿಯುಳ್ಳ ಮಲ್ಲಿಕಾಲತಾ ಸಮೂಹದಿಂ ಚಂದ್ರಿಕಾಭ್ರಾಂತಿಯಂ ತೋರುತ ಕಂಗೊಳಿಪ ರಾಮಣೀಯ್ಯಕಮಂ ಪತಿಗೆತೋರುತ, ಹರುಷಿಸುತ್ತ, ಸುಂದರತಮಾಂಗಳಾದ ಕುಂಜಂಗಳಂ ರನ್ನದಾ ಸರಗಳಂ ನೋಡಿ ವಿಶ್ರಾಂತಿಯುಂ ತಾಳುತ, ಪಾಮುತ್ತಲಾಡುತ್ತ ಜಲಪಕ್ಷಿ ಜಲಚರ ಕಮಲಕಲ್ಹಾರಾದಿಗಳಿಂ ಸಂತೋಷಿಸುವ ಕಮನೀಯ ಸಲಿಲಾವೃತಂಗಳಾದ ಸರೋವರಂಗಳಂ ಪರಮ ಚಿತ್ರ ಜಲಯಂತ್ರ ಶೋಭಿತವಾದ ಎಡೆಗಳಂ ಕಾಣುತ, ಆನಂದಿಸುತ್ತ, ತನ್ನ ಕಾಂತಂಗೆ ತೋರಿ, ಅದರ ಸೊಬಗಂ ಬಣ್ಣಿಸುತ್ತಲೀಪರಿ ಉದ್ಯಾನಕ್ಕೀವಿನೋದಂಗಳಂ ಸಲಪುತ್ತ ಬರಲು, ಪರಮಾಶ್ಚರ್ಯ ಜನಕವಾದ ಚಿತ್ರಮಂಟಪವೊಂದು ಕಣ್ಗೆ ಮಂಗಳವಾಗೆ, ಅದರೊಳು ಪೊಕ್ಕು ಪದ್ಮಗಂಧಿನಿಯಾದಾ ಪದ್ಮಾವತಿಯುಂ ಕುರಿತಾ ವಿಕ್ರಮಾರ್ಕಾವನೀಂದ್ರಂ, ಎಲೈ ಸುಂದರಾಂಗಿಯೇ ಮುಂಗಡೆಯೊಳು ಮಂಗಳ ತರವಾಗಿ ಕಂಗೊ

ಳಿಸುವ ಸಿಂಗರವಾವ ಮುಂದಪಮುಂ ಒಳಹೊಕ್ಕಿನೋಡೆಂದು ಅದರಸೊಬಗ
ತೋರುತ್ತಾ, ಕೆಲಕಾಲ ವಿಚಾರೀತಿಯಂತಾಗಿ ಸಂಚರಿಸಿ, ಆ ಎಡೆಯೊಳು ನೆಲೆಗೊ
ಳಿಸಿದಳ್ ವಿಶ್ರಾಂತಶ್ಯಾಸನಂಗಳೊಳು ಪತ್ನೀ ಸಮೇತನಾಗಿ ಕುಳಿತುಕೊಂಡು ಆ
ಮೂರು ಮುಂದಿಯರೊಳು ಬಹಳ ಚದುರೆಯಾದ ಪದ್ಮಾವತಿಯುಂ ಕುರಿತು,
ಎಲ್ಲೆ ಸುಂದರಾಂಗಿಯೇ ಈ ಮುಂದಿಸವಾವರೋ ನೋಡುವದಕ್ಕೆ ಅತ್ಯಂತ
ರಮಣೀಯ್ಯವಾಗಿಯೂ, ಆಶ್ಚರ್ಯಸಂಜನಕವಾಗಿಯೂ ಕಾಣುತ್ತಿರುವದು,
ಇದು ಯಾವಿಂದ ಕಲ್ಪಿತವಾದುದು, ನಿನಗೇನಾದರೂ ತಿಳಿದಿಹುದೇ ಎಂದುಪ್ರಶ್ನೆವಾ
ಡಲು ಆನುಂದಯಾನೆಯುಂ, ಎಲ್ಲೆ ಪ್ರಾಣನಾಥನೇ? ಲಾಲಸು ಬಹುಕಾಲದಮುನ್ನ
ಈದೇಶದೊಳು ಪರಮ ಧಾರ್ಮಿಕನಾದ ಸತ್ಯವಿಜಯನೆಂಬುವ ಮಣಿಜಶ್ರೇಷ್ಠನೊಪ್ಪಿನಿ
ರ್ದಳ್. ಅತನಾವಿಯೊಳು ಕುಬೇರ ಸಮ್ಮಶವಾದ ಧನಿಕನಾಗಿರ್ದಂ ಅತನಿಂದ ಕಟ್ಟಲ್ಪ
ಟ್ಟವು, ಇವುಅತನೆದೇ, ಅತನ ಚರಿತ್ರೆಯುಂ ಪರಮಾಶ್ಚರ್ಯಜನಕವಾಗಿಹುದು, ಅತ
ನಕಾಲಾನಂತರ ನಮ್ಮ ಕೆಲವಂತರ ದೇವರ ಕೈವಶವಾಪುದು, ನಮ್ಮ ಕೈವಶವಾದ
ಪೊದಲು ಬಂದೇರೀತಿಯಾಗಿ ಕಟ್ಟಿಪಾಡಲ್ಪಡುತ್ತಿರುವದೆನೆ, ಅರಾಯುಂ ಎಲ್ಲೆಸುಂದರೀ
ಮಣಿಯೇ ಆ ಸತ್ಯವಿಜಯುನ ಚರಿತ್ರಮಂಕೇಳಲು, ಅತ್ಯಾದರವಾಗಿಹುದಾಪ್ದರಿಂದ
ಪೇಳುವಳಾಗೆನೆ, ಪದ್ಮಾವತಿಯು ಹೇಳಲಾರಂಭಿಸಿದಳು.

ಪ್ರಾಣಕಾಂತನೆ ಲಾಲಸು ಬಹುಕಾಲದ ಮುನ್ನ ಈ ಮಣಿಪುರದ ರಾಜ್ಯಮುಂ
ರತ್ನಾಂಗದ ಮಹಾರಾಯನೆಂಬೊರ್ವ ಭೂಭುಜಂ ಪಾಲಿಸುತಿರ್ದಂ. ಅದೇ
ಸಮಯುಮೊಳು ಆರ್ಯಾವರ್ತದೊಳು ಬ್ರಹ್ಮದೇಶಕ್ಕೆ ಅಧಿಪತಿಯಾದ ವಿಜಯುಶ
ಶಾಂಕನೆಂಬ ರಾಯುಂ ರಾಜ್ಯಭಾರಮುಂ ಮಾಡುತಿರ್ದಂ. ಹೀಗಿರುವ ಕಾಲದಲ್ಲಿ
ಆ ಬ್ರಹ್ಮದೇಶದ ವ್ಯಾಪಾರಸ್ಥರೊಳಗಾಗಿ ಈ ಸತ್ಯವಿಜಯನೆಂಬುವನೇಮಹಾ ಧನಿಕ
ನಾಗಿಯೂಅನೇಕದೇಶ ವ್ಯಾಪಾರಂಗಳಂ ಮಾಡುವನಾಗಿಯೂ, ಲೋಕಪ್ರಸಿದ್ಧನಾಗಿ
ಯೂಶುಚಿಸ್ಮಿತೆಯೆಂಬ ಸರ್ವಾಂಗಸುಂದರಿಯುಂ ಪಾಣಿಗ್ರಹಣಮಂ ಮಾಡಿಕೊಂಡು,
ಅವಳೊಂದಿಗೆ ಸಮಸ್ತ ಭೋಗಂಗಳಂ ಅನುಭವಿಸುತ್ತಾ, ಸೂರ್ಯಾವರ್ತಮೆಂದು
ಪ್ರಸಿದ್ಧವಾದ ದ್ವೀಪದೊಳು ತನ್ನ ಕಡೆಯ ಮುಖ್ಯಸ್ಥನಿಂದ ವಿಶೇಷ ರತ್ನ
ಕನಕ ವ್ಯಾಪಾರಮುಂ ಮಾಡಿಸುತ್ತಾ, ವಿಶೇಷವಾಗಿ ಬರುವ ಲಾಭದ್ರವ್ಯದಿಂ
ಸಂತೋಷಿಸುತ್ತಾ ಸುಖವಾಗಿದ್ದಳ್. ಹೀಗಿರುತ್ತಿರುವ ಕಾಲದೊಳಾತನ ಧರ್ಮಾಂ
ಗನೆಯಾದ ಶುಚಿಸ್ಮಿತೆಯು ಗರ್ಭವತಿಯಾಗಿ ನವಮಾಸಂಗಳು ತುಂಬಿ, ಪರಮ
ತೇಜೋವಂತರಾದ ಅವಳಿ ಮಕ್ಕಳಂ ಹೆತ್ತಳು ಆ ಬಾಲಕರೀರ್ವರೂ ರೂಪದಲ್ಲಿ
ಯೂ ಪರ್ಣದಲ್ಲಿಯೂ ಇನಿತಾದರೂ ಭೇದಮಿಲ್ಲದೆ, ಒಂದೇ ವಿಧವಾಗಿರುವದಂ
ಕಂಡು, ಮಹದಾನಂದ ಭರಿತನಾಗಿ ಈರ್ವರಿಗೂ ಮದನಸುಂದರರೆಂಬ ಒಂದೇ
ಪೆಸರನ್ನಿಟ್ಟು, ಪರಮ ಪ್ರೀತಿಯಿಂದವರಂ ಕಾಪಾಡುತ್ತಾ ಬರೆ ಶುಕ್ಲಪಕ್ಷದ

ಚಂದ್ರನೆಂತವರೀರ್ವರೂ ಅಭಿವೃದ್ಧಿಯಂ ಹೊಂದುತ್ತಿರುವದಂ ಕಂಡು ಸಂತೋಷಿಸುತ್ತಿರ್ದಂ. ಹೀಗಿರುವಲ್ಲಿ ಅವನೊಂದಿಗೆ ಪಾಲುವ್ಯಾಪಾರಮುಂ ಮಾಪುತ್ತಿರ್ದ ಸೂರ್ಯಾವರ್ತದ್ವೀಪದ, ವೈಶ್ಯವರ್ಯಂ ದೈವಾಧೀನನಾಗೆ ಆ ವರ್ತಮಾನವಂ ತಿಳಿದು, ವಿಶೇಷಮಾದ ತನ್ನ ದ್ರವ್ಯನುಳ್ಳಿದ್ದು ದೇನಾಗುವದೋ ಎಂಬ ಭಯದಿಂದ ಅವನೆಲ್ಲಮುಂ ತರಲು ಯೋಚಿಸಿ ಪುತ್ರರಂ ಬಿಟ್ಟಿರಲು, ಮನೆ ನೊಡಂಬಡದೆ ತಾಂ ಬರುವದಕ್ಕೆ ನಾಲಕ್ಕಾರು ತಿಂಗಳಾಗುವದೆಂದರಿತು, ಸಂಸಾರದೊಂದಿಗೆ ಪ್ರಯಾಣಮುಂಮಾಡಿ, ಸೂರ್ಯಾವರ್ತನುಂ ಸೇರಿದನು ಅಲ್ಲಿ ತನ್ನ ಪಾಲುದಾರನ ಮನೆಯೊಳು ಇಳಿದುಕೊಂಡು ಬರಬೇಕಾಗಿದ್ದ ಬಾಕಿಸಾಕಿಗಳಂ ಲೆಕ್ಕಗಳಿಂದ ತಿಳಿದು ಬರಮಾಡಿಕೊಳ್ಳುತ್ತಾ ವಿಶೇಷ ವರ್ತಕನಡೆಯುವ ಸ್ಥಳವಾದ್ದರಿಂದ ವ್ಯಾಪಾರವನ್ನು ಮಾಡುತ್ತಾ ಇರುವ ಕಾಲದೊಳು, ತನ್ನ ಪಾಲುದಾರನಾಗಿದ್ದವನ ಹೆಂಡತಿಯು ಗಂಡನು ವ್ಯತನಾಗುವಾಗ್ಯೆ ಗರ್ಭಿಣಿಯಾಗಿದ್ದದ್ದರಿಂದ ಅವಳೂ ಅವಳಿ ಗಂಡುಮಕ್ಕಳಂ ಹೆತ್ತು ಆಕೂಡಲೆ ಮೃತಳಾದಳು. ಆ ಶಿಶುಗಳನ್ನೂ ಈ ವರ್ತಕನೇ ಪಾಲಿಸುತ್ತಾ ವ್ಯಾಪಾರವನ್ನು ಮಾಡುತ್ತಾ ವಿಶೇಷ ಲಾಭ ಪ್ರದವಾದ ಸ್ಥಳವಾದುದರಿಂದಲ್ಲಿಯೇ ಬಹುಕಾಲಂ ವಾಸವಾಗಿರ್ದಂ. ರೂಪದಲ್ಲಿಯೂ ವರ್ಣದಲ್ಲಿಯೂ, ಧ್ವನಿ ಮುಂತಾವುಗಳಲ್ಲಿಯೂ ತನ್ನ ಮಕ್ಕಳು ಹೇಗೆ ಒಂದೇ ವಿಧವಾಗಿರುವರೋ, ತಾನು ಸಾಕಿಕೊಂಡವರೀರ್ವರೂ ಹಾಗೆಯೇ ಭೇದವಿಲ್ಲದೆ ಒಂದೇ ವಿಧವಾಗಿದ್ದದ್ದರಿಂದ ಅವರಿಗೆ ಕುಶಲ ತಂತ್ರರೆಂದು ಇರ್ವರಿಗಂನಾಮಂಗಳಂ ಕಲ್ಪಿಸಿ, ಅವರಿರ್ವರೊಳು ಜ್ಯೇಷ್ಠನಂ ತನ್ನ ಜ್ಯೇಷ್ಠ ಪುತ್ರನಿಗೂ, ಕನಿಷ್ಠನಂ ಕನಿಷ್ಠಪುತ್ರನಿಗೂ, ಸೇವಕರಾಗಿರುವಂತೆ ನಿಶ್ಚೈಸಿ ಅವರವರಂ ಜೊತೆಗೊಳಿಸಿ ಅನ್ಯೋನ್ಯ ಮಾಗಿರುವಂತೆ ನೇಮಿಸಲವರು, ಸ್ವಾಮಿಸೇವ್ಯಭೃತ್ಯಭಾವಂಗಳಂ ತಾಳಿ, ಪರಸ್ಪರಾನುರಾಗಯುಕ್ತರಾಗಿ ಏಕದೇಹ ನ್ಯಾಯಮಾಗಿ ಸಕಲ ಕಾರ್ಯಂಗಳಂ ನಡೆಯಿಸಿಕೊಳ್ಳುತ್ತಾ ಇದ್ದರು.

ಹೀಗೆ ನಾಲಕ್ಕಾರು ಸಂವತ್ಸರಂಗಳಂ ಕಳೆಯುಲಾ ಸತ್ಯವಿಜಯನೆಂಬ ವ್ಯಾಪಾರಾಗ್ರಣಿಯು, ತಾಂ ತನ್ನ ದೇಶವಂ ಬಿಟ್ಟು ಬಹುಕಾಲವಾದುದು, ಅಲ್ಲಿನ ವ್ಯಾಪಾರ ಲಾಭವಿಗಳಂ ಕಾಗದ ಮುಖಾಂತರವಾಗಿ ನೋಡುವದೇ ಹೊರತು ಪ್ರತ್ಯಕ್ಷವಾಗಿ ನೋಡಲು ಯತ್ನವಿಲ್ಲ ಅಂತರ್ಯವೆಂತಿರುವೋ ಕಾಣಲರಿಯದು ಇದು ಪರದೇಶವು, ಬಂಧುಮಿತ್ರರು ಯಾರೂ ಇಲ್ಲಿ ಇಲ್ಲ, ಎಷ್ಟುಕಾಲವಿದ್ದರೂ ಅಲ್ಲಿಗೇ ಹೋಗಿ ಬಾಳಬೇಕಾಗಿದೆ. ಆದರಿಂದ ನನ್ನ ಸಕಲ ಸಾಮಗ್ರಿಗಳಂ ತುಂಬಿಕೊಂಡು ಸ್ವದೇಶಮಂ ಸೇರಿಸುವದೇ ಯುಕ್ತವೆಂದು ನಿಶ್ಚೈಸಿ, ತನ್ನ ಎಲ್ಲ ಪದಾರ್ಥಂಗಳಂ ಹಡಗಿನಲ್ಲಿ ತುಂಬಿ, ಆ ದಿನದ ರಾಜ ಕಾರ್ಯಾವಸರದಿಂದ ತಾಂ ಹೊರಡಲು ಸಂದರ್ಭಿಸದೇ ಹೋದದ್ದರಿಂದ ತನ್ನ ಹೆಂಡತಿಯನ್ನೂ, ಹಿರಿ

ಯ ಕುಮಾರನನ್ನೂ, ಸೇವಕನೊಂದಿಗೆ ಆ ನಾವೆಯಂ ಹತ್ತಿಸಿ, ಪ್ರಯಾಣಮುಂ ಮಾಡಿಸಿ ಕಳುಹಿಸಿದನು. ಮರುದಿನದೊಳು ಹೊರಡುವ ಮತ್ತೊಂದು ನಾವೆಯಂ ತಾನೂ ತನ್ನ ಕಿರಿಯಮಗನೂ, ಅವನ ಸೇವಕನೂ ಹತ್ತಿ ಬ್ರಹ್ಮದೇಶಕ್ಕಾಗಿ, ಬರುತ್ತಿರ್ದರು.

ಹೀಗೆ ಸಮುದ್ರ ಮಾರ್ಗಮಾಗಿ ಹೊರಟ ನಾವೆಗಳಿರಡೂ ಬರುತ್ತಿರುವಕಾಲದಲ್ಲಿ ಅಮಿತವಾದ ಚಂಡಮಾರುತಮುದಯಿಸಿ, ಅನೇಕ ಮುಖಮಾಗಿ ಸುಳಿಸುತ್ತುತಾ ಬೀಸಲಾರಂಭಿಸಲು, ಸಮುದ್ರ ಮಧ್ಯದೊಳು ನಡೆಯಿಸಲ್ಪಡುತ್ತಿರ್ದ ನಾವೆಗಳಿರಡೂ ಅನ್ಯದೇಶಗಳಿಂದ ಹೊರಟು ಪ್ರಯಾಣಮಾಗಿ ಬರುತಿರ್ದ ನಾವೆಗಳೂ ಸಹಾ ತಮ್ಮ ಮಾರ್ಗಮಂ ಬಿಟ್ಟವು. ಆ ಹಡುಗುಗಳಂ ನಡೆಸುವವರು ತಮ್ಮ ಸಕಲ ಶಕ್ತಿ ಸಾಹಸಂಗಳಂ ಎತ್ತೆಸ್ತುವ್ಯಯಮಾಡಿ ನೋಡಿದರೂ, ತಮ್ಮ ದಾರಿಯಂಸಾರದೆ, ಆ ಚಂಡ ಮಾರುತದ ಮಾರ್ಗವನ್ನೇ ಆಶ್ರಯಿಸಿ ಹೊಡೆದುಕೊಂಡು ಹೋದವು. ಹೀಗೆ ಕಂಡಕಡೆಗೆ ಕೊಚ್ಚಿಕ್ಕೊಂಡು ಹೋದ ಈ ಹಡಗುಗಳು ಒಂದೊಂದು ಬೇರೊಂದು ದಾರಿಯಂ ಹೊಂದಿ ಹೋಗುತ್ತಿರುವಾಗ ಆ ಹುಚ್ಚು ಗಾಳಿಯು ಶಮನಮಾಗಿ ಒಂದೇ ವಿಧಮಾದ ವೋಡದ ಗಾಳಿಯು ಬೀಸಲಾರಂಭಿಸೆ, ನಾವಿಕರು ತಮ್ಮ ತಮ್ಮ ನಾವೆಗಳಂ ಸ್ವಾಧೀನಪಡಿಸಿಕೊಂಡು ನಕ್ಷತ್ರಗಳ ಮತ್ತು ಕುರುಹಕಂಭಗಳ ಗುರುತುಗಳಂ ಪಿಡಿದು, ತಮ್ಮ ತಮ್ಮ ದೇಶಾಭಿಮುಖಮಾಗಿ ನಡೆಯಿಸುತ್ತಾ, ಬಂದರು ಈ ಸತ್ಯವಿಜಯನ ಪತ್ನೀ ಪುತ್ರರು ಕುಳಿತಿರ್ದ ಹಡಗವು ಬಹುದೂರವಾಗಿ ಹೊಡೆದುಕೊಂಡು ಹೋಗಿದ್ದುದ್ದರಿಂದ ಆ ಪ್ರಾಂತದೊಳು ಮೇಘಾವರಣಮಾಗಿ ಗಾಢಾಂಧಕಾರಂ ಕವಿವಿರಲು, ರಾತ್ರಿಯೊಳು ಯಾವ ಕುರುಹುಮುಂ ಕಾಣಲು ಅನುಕೂಲವಿಲ್ಲದೆ ಒಂದೇ ದಾರಿಯಾಗಿ ನಡಿಸುತ್ತಾ ಬರೆ, ಅವರು ಬರಬೇಕಾಗಿದ್ದ ಬ್ರಹ್ಮದೇಶದ ದಾರಿಯು ತಪ್ಪಿಹೋಗೆ ರಾತ್ರಿಯೊಳೆಲ್ಲಾ ಈ ರೀತಿಯಾಗಿ ನಡೆದು ಮರುದಿನದರುಣೋದಯಕಾಲಕ್ಕೆ ವಜ್ರಾವರ್ತವೆಂಬ ದ್ವೀಪದ ತಡಿಯಂ ಸಾರಲು ಬಹುಕಾಲದಿಂ ಯುಕ್ತಾಹಾರಂಗಳಿಲ್ಲದೆ ಬೇಸತ್ತಿದ್ದವರಾಗಿ ಆ ನಾವೆಯೊಳಿದ್ದವರೆಲ್ಲರೂ ಹೊರಗಿಳಿದು ತಡಿಯಂ ಸಾರಿ ವಿಶ್ರಾಂತರಾಗುತ್ತಾ ಭೋಜನ ಸ್ನಾನಾದಿ ಕಾರ್ಯಂಗಳೊಳು ಸಂಭ್ರಮರಾಗಿರುತ್ತಿರ್ದರು. ಹೀಗಿರುತ್ತಿರೆ ಅನ್ಯದೇಶಕ್ಕೆ ಯುದ್ಧ ಕಾರ್ಯಕ್ಕಾಗಿ ಹೋಗಿದ್ದಾ ವಜ್ರಾವರ್ತದ್ವೀಪದ ಸೈನ್ಯವು ಜಯಮಂ ಹೊಂದಿ, ಪರಮ ಸಂಭ್ರಮದೊಂದಿಗೆ ಹತ್ತಿ ಬರುತ್ತಿದ್ದ ಹಡಗುಗಳು ಆ ಕಾಲದಲ್ಲಿಯೇ ಬಂದು ಅದೇದಡದಲ್ಲಿಯೇ ಇಳಿಯಲು ಅವುಗಳೊಳಗಿನ ಸೈನ್ಯವೆಲ್ಲಂ ಇಳಿದು ಪರೋತ್ಸಾಹದೊಳು ಹೊಳಲಿಗೆ ನಡೆದು ಹೋಗುತ್ತಿರುವ ಸಂಭ್ರಮವಂನೋಡಲು ನಿಂತಿದ್ದ ಆ ಸತ್ಯವಿಜಯನ ಹಿರಿಯ ಕುಮಾರನೂ ಅವನ ಸೇವಕನೂ ಆ ದಂಡಿ

ನೊಳು ಬಿರೆತುಕೊಳ್ಳಲು, ಅಲ್ಲಿಂದಹಾಯುಬರಲು ಅತಿ ಬಾಲ್ಯವಯಸ್ಕರಾದ್ದರಿಂದ ತಿಳಿಯದೆ, ಆ ಸೇನೆಯೊಡನೆಯೇ ಹೋಗುತ್ತಿರೆ, ಸೈನ್ಯದ ಮುಖ್ಯಾಧಿಪತಿಯು ಪರಮ ಸುಂದರನಾಗಿಯೂ, ಬಾಲ್ಯವಯಸ್ಕರಾಗಿಯೂ, ಇರುವ ಅವರೀರ್ವರಂ ಕಂಡು, ಪರಮಾಶ್ಚರ್ಯ ಪರವಶನಾಗಿ, ತನ್ನ ರಥದಮೇಲಕ್ಕೆತ್ತಿ ಕುಳ್ಳಿರಿಸಿಕೊಂಡು ಪಟ್ಟಣಮುಂ ಸಾರಿ, ತಮ್ಮ ಧೊರೆಯಾದ ವಜ್ರಾವರ್ತ ಮಹಾರಾಯನಿಗೆ, ಮೂ ಜರೆಯುಂಮಾಡಿದನು.

ಅತ್ತಲಾ ಸತ್ಯವಿಜಯನ ಧರ್ಮಾಂಗನೆಯಾದ ಶುಚಿಸ್ಮಿತೆಯು, ತನ್ನ ಪತಿಯೂ ಕಿರಿಯಮಗನೂ, ಅವನ ಸೇವಕನೂ, ಕುಳಿತಿರ್ದನಾವೆಯೇನಾಯಿತೋ ಎಂದು ಹಂಬಲಿಸುತ್ತಿರ್ದಳು. ಹಿರಿಯಮಗನೂ, ಅವನ ಸೇವಕನೂ, ತಪ್ಪಿಸಿಕೊಂಡು ಹೋಗಲು ದ್ವಿಗುಣಿತ, ವ್ಯಸನಮುಳ್ಳವಳಾಗಿ, ವಿನೋದವೂ ತೋರದೆ ಗೋಳಾಡುತ್ತ, ಅಲ್ಲಿಂದ ಹೊರಟು, ಅಲ್ಲಲ್ಲಿ ಹುಡುಕುತ್ತಾ ಹೋದಳು.

ಆ ವಜ್ರಮಕುಟರಾಯನು, ತನಗೆ ಮುಜರೆಯಾಗಿ ನಜರುಮಾಡಿದ, ಇರ್ವರು ಬಾಲಕರ ರೂಪಾತಿಶಯಂಗಳಂ ನೋಡಿ, ಪರಮ ಸಂತೋಷಿತನಾಗಿ, ಅವರಿಗೆ ವಿದ್ಯಾಭ್ಯಾಸಮಂ ಮಾಡಿಸುತ್ತಾ ಪುತ್ರವಾತ್ಸಲ್ಯದಿಂದ ಪೋಷಿಸುತ್ತಿರಲು, ವಜ್ರಾವರ್ತ ದೇಶದವರಿಗೂ, ಈ ಮಣಿಪುರದವರಿಗೂ, ಯುದ್ಧಕಾರ್ಯಮಾರಂಭಮಾಗೆ, ಪರಸ್ಪರರಾಯರೂ, ಕೌಲುಮಾಲಕೊಂಡು ಯುದ್ಧವುಂ ನಿಲ್ಲಿಸಿದ ಕಾಲದಲ್ಲಿ ಈ ಇರ್ವರು ಬಾಲರಂ ಅಂದರೆ, ಮೊದನ ಸುಂದರನನ್ನೂ, ಅವನ ಸೇವಕನಾಗಿದ್ದ, ಕುಶಲತಂತ್ರವನ್ನೂ, ರತ್ನಾಂಗದ ಮಹಾರಾಯನಿಗೆ, ಪಾರಿತೋಷಿಕಮಾಗಿ ಮುಜರೆಗುಂ ಕೊಟ್ಟನು. ಆ ಮದನ ಸುಂದರನು, ಬಹು ವಿದ್ಯಾವಂತನಾಗಿ ಇದ್ದುದ್ದರಿಂದ, ವಜ್ರಾವರ್ತ ಭೂಮಿಪನಿಗೆ, ಪ್ರೀತಿಪಾತ್ರನಾಗಿದ್ದು, ಅನೇಕಯುದ್ಧಂಗಳೊಳು, ಜಯಶಾಲಿಯಾಗಲು ಕಂಡು ವಜ್ರಾವರ್ತ ಮಹಾರಾಜಂ ಆತನಂ ಮುಖ್ಯ ಸೇನಾಪತಿಯನ್ನಾಗಿ ಮಾಡಿದಂ, ಹೀಗೆ ಘನತರಮಾದ, ಉದ್ಯೋಗಮುಂ ತಾಳಿ, ಪ್ರಜಾರಂಜಕನಾಗಿ, ಎಲ್ಲರೊಳಂ ಸ್ನೇಹಮುಂ ಬೆಳೆಯಿಸಿ, ಬಹು ಪ್ರಸಿದ್ಧಿಯಂ ತಾಳಿದವನಾಗಿ, ಆನಂದವಲ್ಲಿಯೆಂಬ ಸರ್ವೋತ್ತಮ ಸುಂದರಿಯುಂ ಪಾಣಿಗ್ರಹಣಮುಂ ಮಾಡಿಕೊಂಡು, ಆಕೆಯೊಡನೆ, ಸಕಲ ಭೋಗಂಗಳಂ ಹೊಂದುತ್ತಾ ಸುಖಮಾಗಿದ್ದನು. ಅವನ ಭೃತ್ಯನಾಗಿದ್ದ ಕುಶಲತಂತ್ರನೂ ಓರ್ವಳಂ ಪತ್ನಿಯನ್ನಾಗಿ ಮಾಡಿಕೊಂಡು ಸ್ವಾಮಿಕಾರ್ಯ ಧುರೀಣನಾಗಿ ಸುಖಿಯಾಗಿ ಕಾಲವಂ ಕಳೆಯುತ್ತಿರ್ದಂ.

ಅತ್ತಲಾ ಸತ್ಯವಿಜಯನೆಂಬ ವರ್ತಕಂ ಹತ್ತಿ ಹೊರಟಿದ್ದ ನಾವೆಯು ವಾರಿತಪ್ಪಿ, ಬಹುದೂರವಾಗಿ ಕೊಚ್ಚಿಕೊಂಡು ಹೋಗಿ, ಬೆಳಗಿನಜಾವವಾಗುತ್ತಾ, ಹುಚ್ಚುಗಾಳಿಯು ನಿಂತುಹೋಗಿ ಅನುಕೂಲವಾದ ಗಾಳಿಯು ಬೀಸೆ

ಲಾರಂಭಿಸಲು, ನಾವಿಕರು ಪ್ರಯತ್ನಗೊಂಡವರಾಗಿ ಧ್ವಜಸ್ತಂಭಗಳನ್ನೆತ್ತಿ ಕಟ್ಟಿ, ಕುರುಹುಸ್ತಂಭಗಳಂ ಕಂಡು, ತಮ್ಮ ದ್ವೀಪಾಭಿಮುಖವಾಗಿ, ಪದಗಳನ್ನೆತ್ತಿ ಕಟ್ಟಿ ಹಡಗವಂ ಬಹು ಜಾಗರೂಕತೆಯಿಂ ನಡೆಯಿಸುತ್ತಾ ಬರಲು, ಮೂರು ದಿನ ಸಾಯಂಕಾಲಕ್ಕೆ ಸರಿಯಾಗಿ ಬ್ರಹ್ಮದೇಶದ ದಡಮಂ ಸಾರಲು, ತನ್ನ ಕೆರಿಯ ಮಗನೂ ಅವನ ಸೇವಕನು ತಾನೂ ಸಹಾ, ಆ ನಾವೆಯಿಂದಿಳಿದು, ತನ್ನ ಮನೆಯಂ ಸಾರಿ, ತನ್ನ ಪ್ರಾಣಕಾಂತೆಯೂ, ಹಿರಿಯಮಗನೂ, ಅವನ ಸೇವಕನೂ ಸಹಾ ಹತ್ತಿದ ಹಡಗಮೆಂತಾಯಿತೋ ಯಾವದಾದರೊಂದು ವಿಧದಿಂದ ಪುತ್ರನಂಸಾನೆಂತು ಕಾಂಬೆನು ಅವರನ್ನೊಡಿ ಸಂತೋಷಿಸುವದೆಂತು ಎಂದು ಹಂಬಲಿಸುತ್ತಾ, ಹುಡುಕಲು ಅನೇಕದೇಶಂಗಳಿಗೆ, ತನ್ನ ಸೇವಕರಂ ಕಳುಹಿಸಮಾಜಾರೆ ನಿರೀಕ್ಷಣೆಯೊಳಿರುತಿರ್ದಂ. ಹೀಗೆ ಚಿಂತಿಸುತ್ತ ಅವರ ಹುಡುಕುವಿಕೆಯಲ್ಲಿಯೇ ನಿರೀಕ್ಷಿಸುತ್ತಿರೆ, ಹೋಗಿದ್ದ ಆ ವರ್ತಕನ ಭೃತ್ಯರು ಎಲ್ಲಿ ಎಲ್ಲಿ ಹುಡುಕಿದರೂ ಅವರ ಸುದ್ದಿಯೇ ತಿಳಿಯದೆಹೋಗಲು, ಹಿಂದಿರುಗಿ ಬಂದು ತಮ್ಮ ದಣಿಯೊಳಾಸರಿಯನೆಲ್ಲಮಂ ಅರಿಕೆಯಂ ಮಾಡೆ ದ್ವಿಗುಣವಾದ ದುಃಖಿನಾಮ್ಳವನಾಗಿ, ನಿದ್ರಾಹಾರಂಗಳಂ ತೊರೆದು, ಶೋಕಿಸುತ್ತಾ ಬರಲು, ತಂದೆಯ ಅವಸ್ಥೆಯಂ ಕಂಡಾತನ ಹಿರಿಯಮಗನಾದ ಮದನಸುಂದರನು ಎಲ್ಲೆ ತಂದೆಯೇ ! ನೀನೇತಕಿಂತು ಚಿಂತಿಪುದು, ಬಹುಕಾಲವಾಗಿ ಚಿಂತಿಸುತ್ತಿರುವದರಿಂದ ತನ್ನ ದೇಹವೆಲ್ಲವೂ ಗಳಿತವಾದುದು, ಇನ್ನೀ ಚಿಂತೆಯಂ ತೊರೆದು ಧೈರ್ಯವಾಗಿರುವರಾಗಿ, ನಾನು ಹೋಗಿ ಈ ಭೂಮಂಡಲದೊಳು ಎಲ್ಲಿದ್ದರೂ ಹುಡುಕಿ ಕರತರುತ್ತೇನೆ, ಎಂದು ಸಮಾಧಾನವಂ ಹೇಳಿ, ತಂದೆಯಿಂದ ಅನುಜ್ಞೆಯಂ ಹೊಂದಿ ಬೇಕಾದದ್ರವ್ಯವಂ ಕೊಂಡು ತನ್ನ ಭೃತ್ಯನಾದ ಕುಶಲತಂತ್ರನಂ ಸಹಾಯಾರ್ಥವಾಗಿ ಕರದುಕೊಂಡು ಹುಡುಕುತ್ತ ಹೊರಟು ದೇಶಗಳೆಲ್ಲಮಂ ಸುತ್ತಿ ಅಲ್ಲಲ್ಲಿ ಕೆಲಕಾಲಮಿದ್ದು ತಮ್ಮವರಂ ವಿಚಾರಿಸಿ ಅವರ ನೆಲೆಯಂ ಕಾಣದೆಹೋಗೆ ಮುಂದರಿದು ದ್ವೀಪಾಂತರಗಳೊಳು ಹುಡುಕಲು, ಮನಂಗೈದು, ನಾವೆಯಂ ಹತ್ತಿ ಹೊರಟು, ಕಂಡಕಂಡ ದ್ವೀಪಗಳೊಳಿಲ್ಲಾ ಹುಡುಕುತ್ತಾ ಬಂದನು.

ಅತ್ತಲಾ ಸತ್ಯವಿಜಯನೆಂಬ ವರ್ತಕಂ ಮೊದಲು ಹೋದ ಬಾಲವಯಸ್ಕನಾದ ಪುತ್ರನನ್ನೂ, ಪ್ರಾಣಕಾಂತೆಯನ್ನೂ ಕುರಿತು ಚಿಂತಿಸುತಿದ್ದೊಂದೇ ದುಃಖಮಿರುತ್ತಿರುವಲ್ಲಿ ವಿವೇಕಿಯಾಗಿಯೂ ಪ್ರಾಪ್ತವಯಸ್ಕನಾಗಿಯೂ ಇದ್ದ ಕನಿಷ್ಠಪುತ್ರನೂ ಅವರಂ ಹುಡುಕಿಕೊಂಡು ಕೋದವಂ ಅವರಂತೆ ಯಾದನಲ್ಲಾ ಎಂಬ ಮಹತ್ತರವಾದ ಈ ಶೋಕವೊಂದೊದಗಿತೇ ಎಂದು ಚಿತ್ತಚಂಚಲನಾಗಿ ಒಂದೆಡೆಯೊಳು ನಿಲ್ಲಲು, ಮನವೊಡಂಬಡದೆ ಅವರಂ ಹುಡುಕಿಕೊಂಡು ಬರುವದಕ್ಕಾಗಿ ಉಳಿದಿರ್ದ ದ್ರವ್ಯವನೆಲ್ಲಮಂ ಸಂಗಡ ಕೊಂಡು ಹೊರಟು ದೇಶ

ಕೈಯಲ್ಲಿದ್ದ ಧನಮನೆಲ್ಲಮಂ ಕಳೆದುಕೊಂಡು ದ್ವೀಪಾಂತರಗಳೊಳು ಹುಡು
ಕಲು ಹೊರಟವನಾಗಿ, ಅನೇಕ ಪ್ರಸಿದ್ಧ ದ್ವೀಪಗಳಂ ಸಾರಿ ಅಲ್ಲಲ್ಲಿ ಹುಡು
ಕುತ್ತಾ ಈ ಮಣಿಪುರದ್ವೀಪಕ್ಕೆ ಬಂದುಸೇರಿದಂ.

ಆ ವರ್ತಕಂ ಈ ಮಣಿಪುರಕ್ಕೆ ಬರುವ ಕಾಲಕ್ಕೆ ಅವನು ತನ್ನ ದೇಶಮಂ
ಬಿಟ್ಟು ಎಂಟು ಹತ್ತು ವರುಷಗಳ ಕಾಲಂಕಳೆದಿದ್ದುದು.

ಈ ಸತ್ಯವಿಜಯನು ತನ್ನ ದೇಶಮಂ ಬಿಟ್ಟು ಅರಣ್ಯಮಾರ್ಗಮಂ ಸಾರಿದ
ಒಂದೆರಡು ವರ್ಷಗಳನಂತರ ಬ್ರಹ್ಮದೇಶದ ವ್ಯಾಪಾರಸ್ಥರಿಗೂ, ಮಣಿಪುರದ
ಪ್ರಜೆಗಳಿಗೂ ವಿಶೇಷ ರತ್ನವ್ಯಾಪಾರಂಗಳು ನಡೆಯುತ್ತಿದ್ದುವು, ಕೆಲವು ಕಾರ
ಣಂಗಳಿಂದ ಕಲಹಂಗಳು ಪ್ರಾಪ್ತಿಯಾಗೆ ಈ ಬಲವತ್ತರವಾದ ವಿರೋಧದಿಂದ
ಉಭಯದೇಶದ ಪ್ರಜೆಗಳಿಗೂ ಹಾನಿ ಜನಿಸುವದೆಂದರಿತಾ ದೇಶಾಧಿಪತಿಗಳು ತಮ್ಮ
ಶಕ್ತಿ ಸಾಹಸಂಗಳನ್ನೆಲ್ಲವುಂ ವೆಚ್ಚ ಮಾಡಿ ನೋಡಿದರೂ ಏಕಮುತ್ಯವಾಗದೇ
ವಿರೋಧವೇ ಬೆಳೆಯುತ್ತಾ ಬರಲದಂ ನೋಡಿದಾ ದೇಶಾಧಿಪತಿಗಳು ಪರಸ್ಪರ
ವಾಗಿ ತಮ್ಮ ತಮ್ಮ ದೇಶಂಗಳೊಳು ಬ್ರಹ್ಮದೇಶವನ್ನು ಮಣಿಪುರದ ದ್ವೀಪದ
ವರು ಈ ದ್ವೀಪದವರು ಬ್ರಹ್ಮದೇಶವನ್ನು ಯಾವ ಕಾರಣದಿಂದಲೇ ಆಗಲಿ ಈ
ಮೊದಲಾಗಿ ಪ್ರವರ್ತಿಸಕೂಡದು, ಒಂದುವೇಳೆ ಪ್ರವರ್ತಿಸಿದವರಾದರೆ ಕೂಡಲೆ
ಮರಣದಂಡನೆಯಿಂದ ಶಿಕ್ಷಿಸಲ್ಪಡುವರು, ಒಂದುವೇಳೆ ಪ್ರಮಾದವಶಾತ್ ಅಥವಾ
ಅಕಸ್ಮಾತ್ತಾಗಿ ಬಂದವರಾದರೆ ಅವರ ಕಾರಣಂಗಳು ವಿಚಾರಿಸಲ್ಪಡ್ದು ನಿಜವಾ
ದುದೆಂದು ದೇಶಾಧಿಪತಿಗೆ ತೋರಿಬಂದರೆ ಆಗ್ಯೆ ಅವರ ಶೂಕದ ಚಿನ್ನವನ್ನಾ
ಗಲಿ, ಬೆಳ್ಳಿಯನ್ನಾಗಲಿ ದಂಡವನ್ನಾಗಿ ಪಡದುಕೊಂಡು ಮನ್ನಿಸಿ ಬಿಡಬಹುದು,
ಈ ಎರಡು ವಿಧಂಗಳಾದ ದಂಡನೆಗಳಿಂದಲ್ಲದೆ ಮತ್ತಾ ವ್ಯವಹಿಧದಿಂದಲೂ ಬಿಡು
ಗಡೆಯುಂ ಹೊಂದಲಾರರು, ಎಂದಾಜ್ಞೆಯಂ ವಿಧಿಸಿ, ಅದರಂತೆ ನಡೆಯಿಸುತ್ತಾ
ಬರುತ್ತಿದ್ದರು.

ಈ ಸಂಗತಿಯೇ ಗೊತ್ತಾಗದೆ ಅರಣ್ಯಂಗಳೊಳು ಸಂಚಾರಮಾಡುತ್ತಾ
ಇದ್ದವನಾದಕಾರಣ ನಿರ್ಭಯನಾಗಿ ಮಣಿಪುರದ ರಾಜಬೀದಿಯೊಳು ಸಂಚರಿಸುತ್ತಾ
ಬರಲು, ನೀನಾರೆಂದು ವಿಚಾರಿಸೆ, ಬ್ರಹ್ಮದೇಶವನೆಂದುಸುರಲು ರಾಜಭಟರು
ಕೇಳುತ್ತವನಂ ಆ ಭೂಮೀಶನಾದ ರತ್ನಾಂಗದ ಮಹಾರಾಯನ ಸನ್ನಿಧಿಗೆ ಕರ
ದೊಯ್ಯಲು, ಆ ರಾಯಂ ನೀನಾವದೇಶಸ್ಥನೆಂದು ಪ್ರಶ್ನೆಮಾಡಲು, ಸ್ವಾಮಿ
ರಾಜನೇ ! ನಾನು ಬ್ರಹ್ಮದೇಶದ ನಿವಾಸಿಯು, ಎಂದು ಉತ್ತರವಂ ಪೇಳಿ, ಎಲೈ
ವೃದ್ಧನೇ ! ನೀಂ ನಮ್ಮ ಆಜ್ಞೆಯನ್ನರಿತಿಲ್ಲವೇ ಏಂ ಕಾರಣ ಪ್ರಾಣಮಂ ಕಳೆದು
ಕೊಳ್ಳಲು ಈ ದೇಶಕ್ಕೆ ಬಂದೆ ಎನಲು, ಸ್ವಾಮಿನಾ ಪ್ರಭುಗಳಿರಾ ! ಹೀಗೆ ಬದು

ಕಿರುವದಕ್ಕಿಂತಲೂ ಪ್ರಾಣಮುಂ ಹೋಗಲಾಡಿಸಿಕೊಳ್ಳುವದೇ ಸುಖವೆಂದು ಯೋ
ಚಿಸುವೆನೆನೆಲು, ಆ ರಾಯುಂ ಆ ಸತ್ಯವಿಜಯನ ರೂಪವನ್ನೂ ಅವನ ವಿದ್ವ
ಮಾನವನ್ನೂ ಯೋಚಿಸಿ ನೋಡಿ ಇವಂ ಪರಮ ಬೃದ್ಧನು ಬಹು ಪುಣ್ಯಶಾ
ಲಿಯಾಗಿ ಬಾಳಿದವನಂತೆ ಕಾಂಬುವನು ಅಲ್ಲದೆ, ಮಹಾದುಃಖದೊಳು ಸಿಲುಕಿ
ತಾಪತ್ರಯಂಗಳಂ ಹೊಂದಿರುವನಂತೆ ಕಾಣಬರುತ್ತಾನೆ, ಆದ್ದರಿಂದ ಇವನ ವಿಚಾ
ರವೆಲ್ಲವಂ ತಿಳಿದುಕೊಳ್ಳಬೇಕೆಂದು ನಿಶ್ಚೈಸಿ, ಎಲ್ಲೆ ವೃದ್ಧನೇ ! ನೀನೇ ತಕ್ಕಿಂತು
ಬೇಸರವನ್ನಾಂತಿರುವೆ, ಬ್ರಹ್ಮದೇಶಕ್ಕೂ ಈ ಮಾಣ್ವಿಪ್ರಕ್ಕೂ ನಡೆದಿರುವ ನಿಬಂ
ಧನೆಯುಂ ತಿಳಿಯಲಿಲ್ಲವೆ ಪ್ರಾಣಮುಂ ಅನ್ಯಾಯವಾಗಿ ಹೋಗಲಾಡಿಸಿಕೊಳ್ಳುವದು
ನಿನಗೆ ಸಮ್ಮತವಾಗಿಹುದೆ, ನಿನ್ನನ್ನು ನೋಡಿದರೆ ದೊಡ್ಡವನುಷ್ಯನಂತೆ ಕಾಣುವೆ,
ನಿನ್ನ ನಿಜಸ್ಥಿತಿಯುಂ ಮಾಜದೆ ಹೇಳಿದವನಾದರೆ ಬೇರೊಂದು ಪ್ರಾಗರ್ಥವಾಗಿ
ಬಿಡುಗಡೆಯುಂ ಹೊಂದುವನಾಗುವೆ ಎಂದು ಕೃಪೆಯುಂ ತೋರುತ ನುಡಿಯಲು,
ಆ ಸತ್ಯವಿಜಯನು ನನ್ನ ವಿದ್ವನ್ಮಾನವಂ ಹೇಳಿಕೊಳ್ಳುವಕ್ಕಿಂತಲೂ ಸುಮ್ಮನಿದ್ದು
ಮರಣವಂ ಹೊಂದುವದೇ ಪರಮಸುಖವೆ, ಮತ್ತು ನನ್ನಂಥಾ ಪಾಪಿಯಾದ
ವನ ವೃತ್ತಾಂತವುಂ ಪುಣ್ಯವಂತರಾದ ತಮ್ಮಂಥವರು ಕೇಳಬಾರದು, ಆದರೆ
ಪ್ರಭುಗಳು ಆಜ್ಞಾಪಿಸಿದಮೇಲೆ ಹೇಳದಿದ್ದರೆ ರಾಜಾಜ್ಞಾತಿಕ್ರಮಣದೋಷಕ್ಕೆ ಪಾತ್ರ
ನಾಗುವೆನು, ಕೇಳದಿದ್ದರೂ ನ್ಯಾಯವಾದ ತಮ್ಮ ಪ್ರಭುತ್ವಕ್ಕೆ ನ್ಯೂನತೆಯು
ಎಂದು ಹೇಳುತ್ತಾ, ಸ್ವಾಮಿ ! ನಾನು ಬ್ರಹ್ಮದೇಶದ ಪ್ರಸಿದ್ಧನಾದ ಸತ್ಯವ್ಯಾ
ಪಾರಿಯು ಪ್ರಾಪ್ತ ವಯಸ್ಸನ್ನಳವಾದ ಸದ್ಗುಣ ಸಂಪನ್ನೆಯಾದ ಕನ್ನೆಯಂ
ಕೈವಿಡಿದು ಅವಳೊಂದಿಗೆ ಸಂಸಾರ ಸುಖಂಗಳಂ ಅನುಭವಿಸುತ್ತಾ ವ್ಯಾಪಾರ
ಮುಖಾಂತರವಾಗಿ ವಿಶೇಷ ಧನಲಾಭಮಂ ಹೊಂದುತ್ತಾ ಸಂತೋಷಯುಕ್ತ
ನಾಗಿರುವಾಗ್ಯೆ ಸೋಮವತೀಪುರದೊಳು ನಡೆಯುತ್ತಿದ್ದ ನನ್ನ ಭಾರಿ ವ್ಯಾಪಾ
ರದಮೇಲೆ ಪಾಲುದಾರನಾಗಿದ್ದ, ಧರ್ಮ್ಮಂಗದನೆಂಬುವಂ ಅಕಸ್ಮಾತ್ತಾಗಿ ದೈವಾ
ಧೀನವಾಗಲು, ಆ ವಾರ್ತೆಯುಂ ಕೇಳುತ್ತ, ಬಹುದ್ರವ್ಯ ಹಾನಿಯಾಗುವದೆಂದ
ರಿತು ಭಾರ್ಯೆಯುಂ ಒಪ್ಪಗೊಂಡು, ಆ ಪುರಮುಂ ಸಾರಿ ವ್ಯಾಪಾರದ ಆದಾಯ
ನಷ್ಟಂಗಳಂ ನೋಡಿ ಬರಮಾಡಿಕೊಳ್ಳುತ್ತಿರುವಾಗ ದೈವಯೋಗದಿಂದ ಸಮಾನ
ರೂಪ ಸಂಪತ್ತಿಯುಳ್ಳ ಅವಳಿ ಗಂಡ ಮಕ್ಕಳಂ ನನ್ನ ಧರ್ಮ್ಮಾಂಗನೆಯು ಹಡೆ
ದಳು. ಅವರಂ ನೋಡಿ ಸಂತೋಷಿಸುತ್ತಾ ಅಲ್ಲಿನ ವ್ಯಾಪಾರದ ಲಾಭವು
ಬಹು ವಿಶೇಷವಾಗಿದ್ದದ್ದರಿಂದ ಆ ಪಟ್ಟಣವಂ ಬಿಡದೆ ಅಲ್ಲಿಯೇ ವಾಸಮುಂ
ಮಾಡುತ್ತಿರುವಲ್ಲಿ, ನನ್ನ ಪಾಲುದಾರನ ಕೆಂಡತಿಯಾಗಿದ್ದವಳು ಗಂಡನು ಮೃತ
ನಾಗುವಾಗ್ಯೇನೇ ಗರ್ಭವತಿಯಾಗಿದ್ದದ್ದರಿಂದ ಪೂರ್ಣ ಗರ್ಭಿಣಿಯಾಗಿ ನನ್ನ

ಕುವರರು ಹೇಗೆ ರೂಪಾವಿಗಳಲ್ಲಿ ಭೇದವಿಲ್ಲದೆ, ಹೊಳೆಯುತ್ತಿರುವರೋ ಅಂತೆಯೇ ಒಂದೇ ರೀತಿಯುಳ್ಳ ಗಂಟು ಅವಳಿಮಕ್ಕಳಿಂ ಹತ್ತು ತಕ್ಷಣದಲ್ಲಿಯೇ ಮೃತಳಳಪಳು. ಆ ಶಿಶುಗಳಿಗೆ ಪಾಲಕರಿಲ್ಲದೆ ೞೋದಿದ್ದರಿಂದ ಅವರನ್ನು ನಾನೇ ಪೋಷಿಸುತ್ತಾ ನಾಲಕ್ಕಾರು ವರ್ಷಂಗಳು ಕಳೆಯಲು ಎಲ್ಲರೂ ವೃದ್ಧಿಯಂ ಹೊಂದುತ್ತಾ ಬರಲು ನನ್ನ ಇ ಬ್ಬರು ಪುತ್ರರಿಗೆ, ಆ ಇಬ್ಬರಂ ಕ್ರಮವಾಗಿ ಸೇವಕರನ್ನಾಗಿ ಮಾಡಿ, ಅವರ ಸಹಾಧೀನನಂ ಮಾಡಲವನು ವಿದ್ಯಾಭ್ಯಾಸಾದಿಕಾರ್ಯಂಗಳಿಂಳು ಸಲಮಿ ಭೃತ್ಯಭಾವಂ ತಾಳಿ, ಪರಸ್ಪರರನು ರಾಗಯುಕ್ತರಾಗಿ ಸುಖವಾಗಿ ಬಾಳುತ್ತಿರುವದಂ ಕಂಡು ಸಮಸ್ತ ಸದ್ಗುಣಾಭರಣಳಾದ ನನ್ನ ಕಾಂತೆಯು ಸ್ವದೇಶಕ್ಕೆ ಹೋಗಿ ಸುಖಿಸೋಣೆಂದು ನನ್ನಂ ಬಲಾತ್ಕರಿಸಿದ್ದರಿಂದ, ಅವಳ ಮಾತುಗಳಂ ಕೇಳಿ ಅಲ್ಲಿಂದ ಹೊರಟು ಹಡಗುಗಳನ್ನೇರಿ ಒರುತ್ತಿರುವ ಕಾಲದೊಳು, ಪ್ರಾಣಕಾಂತೆಯೂ ಹಿರಿಯ ಕುಮಾರನೂ ಅವನ ಸೇವಕನೂ ಕುಳಿತಿರ್ದ ನಾವೆಯು ಅಕಸ್ಮಾತ್ತು ಬಂದ ಚಂಡಮಾರುತದ ದೆಸೆಯಿಂದ ದಾರಿಯುಂ ತಪ್ಪಿ ಏನಾಯಿತೋ ! ಈ ವರಿಗಂ ಕಾಣಲೇಇಲ್ಲವ್ವ. ನಾನೂ ಕಿರಿಯಮಗನೂ ಅವನ ಸೇವಕನೂ ಕುಳಿತಿರ್ದ ನಾವೆಯು, ಕಡುಮುದ್ದಿನ ಪಾಲಾಗಿಪ್ಪರೂ ದೈವಯೋಗದಿಂದ ಬ್ರಹ್ಮದೇಶವಂ ಸಾರಿತು. ಅಂದಿನ ಪೊದಲು ಅವರೇನಾದರೊ ಎಂಬುದುಳಿವಿಂದ ಯಾವದನ್ನೊಲ್ಲದೆ ಕುಡುಕೆಳುಡುಕಿ ಬೇಸತು ಶೋಕಿಸುತ್ತಿದ್ದೆನು. ಪ್ರಾಪ್ತವಯಸ್ಕನಾದ ಕಿರಿಯಮಗನು ತನ್ನ ಸಾಯಿ ಸಹೋದರರ ರೀತಿಯುನ್ನೂ, ನನ್ನ ವ್ಯಥೆಯುನ್ನೂ ವಿಚಾರಿಸಿ ನೋಡಿ ನನ್ನಂ ಸಮಾಧಾನಗೊಳಿಸಿ ತನ್ನ ಭೃತ್ಯನಂ ಒಪಡೆಗೊಂಟು ವೀಕಾದ ದ್ರವ್ಯಯುಂ ಸಹಾಯಕರುಂ ಜೊಳಿಗೊಂಡವನಾಗಿ ತಾಯಿ ಅಣ್ಣಂದಿರನ್ನು ಹುಡುಕುತ್ತಾ ಹೋದನು ಈ ವರಿಗೂ ಇದಿಲ್ಲವೋ ಇಲ್ಲವೋ ಎಂಬುವದೇ ತಿಳಿಯುಲಿಲ್ಲ.

ಇವರಂ ಹುಡುಕುತ್ತ ಹೊರಟು ನಾನು ಅರೇಳು ಸಂವತ್ಸರಂಗಳಿಂದ ದೇಶದೇಶಂಗಳು ವನ ಮಾರ್ಗಂಗಳು ಬೆಟ್ಟ ಗುಟ್ಟಂಗಳು ಹುಡುಕಿ ಹುಡುಕಿ ಸಾಕಾಗಿ ಕೈಯಲ್ಲಿದ್ದ ದ್ರವ್ಯವನೆಲ್ಲಮಂ ಕಳಕೊಂಡು ಇಂಥಾ ಸ್ಥಿತಿಯನಾಂತಿರೂ ಆ ವ್ಯಾಮೋಹವು ಬಿಡದೆ ಇರುವದರಿಂದ ಈ ಪ್ರಾಂತದ ದ್ವೀಪಂಗಳೆನ್ನೆಲ್ಲಮಂ ಸುತ್ತಿ ಸುತ್ತಿ ಬಸವಳಿದು ಬೆಂಡಾಗಿ ಈ ದ್ವೀಪದೊಳೇನಾದರೂ ಇರುವರೋ ಏನೋ ಎಂಬ ಭ್ರಾಂತಿಯಿಂದ ಈ ಪುರಮಂ ಕಾಣಿದೆನು. ನಾನು ಆ ದೇಶಮಂ ಬಿಟ್ಟು ಹೊರಡುವಾಗ್ಗೆ, ಈ ಉಭಯ ರಾಜ್ಯವರಿಗೂ ಪರಸ್ಪರ ಅನ್ಯೋನ್ಯವೇ ಇರ್ಪದು, ಎಂದೊರೆಸು ಕಂಬನಿಯುಂ ಕಂಗಳೊಳು ತುಂಬುತ್ತಾ ಎಲ್ಲೆ ಮಕ್ಕಳಾ ಜನೇ ! ಈ ಭಾಗ್ಯಹೀನನಾದ ನಾನು ಭೂಮಿಯೊಳು ಇರುವಷ್ಟಕ್ಕಿಂತಲೂ ಮರಣಮುಂ ತಾಳುವದೇ ಪರಮ ಸುಖವೆನಲು ಆ ರತ್ನಾಂಗದ ಮಹಾರಾಯನು

ಹಾ ! ಇವನ ರೀತಿಯನ್ನು ನೋಡಿದರೆ ಇವನ ಮಾತುಗಳೆಲ್ಲವೂ ನಿಶ್ಚಯವೇ ಎಂದು ನಂಬತಕ್ಕದ್ದಾಗಿಹುದು ಇಂಥಾ ಧೀರನಂ ಕೊಲ್ಲುವದೆಂತು ಮುನ್ನಿಸುವೆನೆಂದರೆ ದಂಡವಂ ಕೊಡಲು ಶಕ್ತನಲ್ಲವೆಂದು ಕಾಂಬುವನು ಎನುತಂ ನಿನಂ ಮಾಡಲೂ ತೋರದೆ ಕೆಲಕಾಲಂ ಸುಮ್ಮನಿರ್ದು ಎಲ್ಲೆ ವೃದ್ಧಶ್ರೇಷ್ಠನೇ ! ನೀನಾದರೋ ಸತ್ಪುರುಷನಂಕೆ ಕಾಣುವೆ ಈ ದೇಶದ ನಿಬಂಧನೆಯಾದರೆ ಬಹು ಕ್ರೂರವಾಗಿಹುದು. ಮುನ್ನಿಸಬೇಕಾಪರೆ ನಾನುವಾಡಿದಾಜ್ಞೆಯಂ ತಿರುಗಿಸಿದಂತಾಗುವದು. ಅಲ್ಲದೆ ದೇಶಸ್ರಜೆಗಳಿಗೆ ರಂಜಕನಾಗಲಾರೆನು. ಕೆಲವುಕಾಲಕ್ಕೆ ವೊದಲು ಈ ದೇಶದವನಂ ಬ್ರಹ್ಮದೇಶಾಧಿಪಂ ಆ ಪುರವಂ ಈ ದೇಶದವಂ ಹೊಗಲು ಮರಣದಂಡನೆಗೆ ಒಳಗಾಗಿಸಿರುವಂ ಆದರೂ ನಿನ್ನ ಸ್ಥಿತಿಯಂ ನೋಡಿ ನನಗೆ ಬಹು ಕನಿಕರಮುಂಟಾಗಿರುವದರಿಂದ ನಿನ್ನ ತೂಕದ ಬೆಳ್ಳಿಯನ್ನಾಗಲಿ, ನಾಣ್ಯವನ್ನುಗಲಿ ತಂದುಕೊಡು ಆಗ ನಿನ್ನಂ ಜೀವವೊಂದಿಗೆ ಬಿಡುವೆನು ನಿನ್ನಲ್ಲಿ ಬೇರೆ ಹಣವಿರಲಾರದು. ಈ ಪಟ್ಟಣದೊಳಾರಾದರೂ ಪರಿಚಯಸ್ಥರಿದ್ದರೆ, ಅಂತೆಮಾಡು. ಸಾಯಂಕಾಲದವರಿಗೂ, ಇಪಕ್ಕಾಗಿ ಅವಧಿಯುಂ ಕೊಟ್ಟಿರುವೆನು ಎಂದೊರೆದು, ತನ್ನ ಮಂತ್ರಿಯಂ ಕರೆಯಿಸಿ ಈ ಪರಿಯನೆಲ್ಲಮುಂ ತಿಳುವಿ ಇವನಿಂದ ದಂಡರೂಪವಾಗಿ ಬರುವ ಹಣವು ಬಾರದಿದ್ದರೆ ಸೂರ್ಯಾಸ್ತಮಾನಕ್ಕೆ ಸರಿಯಾಗಿ ವಧ್ಯಭೂಮಿಗೆ ಸಿದ್ಧಗೊಳಿಸೆಂದೊರೆದು ಅವನಂ ಮಂತ್ರಿವಶಮುಂ ಮಾಡಿ ತನ್ನೊಲಗಮುಂ ತಾಂ ಬೀಳ್ಕೊಟ್ಟನು. ಮಂತ್ರಿವಶನಾದಾ ಸತ್ಯವಿಜಯಂ ತನಗೆ ಪ್ರಾಪ್ತಿಸಿರುವ ದುಃಖಮುಂ ತಾಳಲಾರದೆಯೂ, ತನಗೀಯವಸ್ಥೆ ಬಂದಿರುವಲ್ಲಿ ಯಾರಿಗೂ ಮುಖವಂ ತೋರಬಾರದೆಂದು ನಿಶ್ಚೈಸಿ ಎಲ್ಲೆ ಮಂತ್ರಿಶ್ರೇಖರಾ ! ಈ ಪುರದೊಳು ನನಗಾರೂ ಪರಿಚಯಸ್ಥರಿಲ್ಲವು ಈ ಯವಸ್ಥೆಯುಲ್ಲಿ ನಾನೆಲ್ಲಿಯೂ ಸಂಚರಿಸಲಾರೆನು. ನನಗೆ ಮರಣವನ್ನೇ ನಿರವಿಸುಯೆಂದಾ ಮಂತ್ರಿಯೊಡನೆ ಹೇಳಿ, ಸೆರೆಮನೆಯ ಕಾವಲುಗಾರರಂ ಕರೆಯಿಸಿ ಈತನಂ ಬಹುಮಾನವಾಗಿ ಕಾಪಾಡುತ್ತಿರ್ದು ಸೂರ್ಯಾಸ್ತಮಾನ ಸಮಯಕ್ಕೆ ವಧ್ಯಭೂಮಿಗೆ ಕರೆತರುವಂತಾಜ್ಞಾಪಿಸಿ, ತನ್ನ ಮನೆಗುಂ ಕುರಿತು ತಾಂ ಹೊರಡುಹೋದನು.

ಅತ್ತಲಾ ತನ್ನ ತಾಯಿಯನ್ನೂ ಅಣ್ಣನನ್ನೂ ಹುಡುಕುವದಕ್ಕಾಗಿ ಹೋಗಿದ್ದ ಕರಿಯ ಮದನ ಸುಂದರನು, ಆ ಸತ್ಯವಿಜಯನಂ ಮರಣದಂಡನೆಗೆ ಒಯ್ಯುವಂತಾಜ್ಞಾಪಿಸಿದ ದಿನವೇ ಆ ಮಣಿಪುರವಂ ತನ್ನ ಕಿಂಕರನಾದ ಕುಶಲ ತಂತ್ರನೊಂದಿಗೆ ಪ್ರವೇಶಿಸುತ್ತಿರುವಲ್ಲಿ ಅವನಿಗೆ, ಪೂರ್ವ ಪರಿಚಿತನಾಗಿಯಿದ್ದ ಮಣಿಪುರದ ವಾಸಿಯಾದವನೊರ್ವಂ ಅಕಸ್ಮಾತ್ ಎದುರ್ಬಂದು ಕಂಡವನಾಗಿ ಎಲ್ಲೆ ಮಿತ್ರನೇ ! ನೀನೇಕೀಪುರವಂ ಸಾರಿದೆ ಇಲ್ಲಿನ ಸಂದರ್ಭಗಳೇ ನಿನಗೆ ಗೊತ್ತಾ

ಗಲಿಲ್ಲವೆಂದು ಯೋಚಿಸುವೆನು. ಈ ದಿನದೊಳು ನಿನ್ನಂತೆಯೇ ಬ್ರಹ್ಮದೇಶದಿಂ ಬಂದ ಒಬ್ಬ ಮನುಷ್ಯನಿಗೆ ಮರಣದಂಡನೆಯನ್ನು ವಿಧಿಸಿ ಈ ದಿನ ಸಾಯಂಕಾಲಕ್ಕೆ ವಧಿಸುವರು. ನೀನು ಮಾತ್ರ ಕೇಳಿದವರಿಗೆ ಈ ಪುರದೊಳಿರುವವರಿಗೂ ಬ್ರಹ್ಮದೇಶದವನೆಂದು ಸುರದೆ, ಸೂರ್ಯಾವರ್ತದವನೆಂದು ಹೇಳುವನಾಗು, ಅಲ್ಲಿ ದೊಡೆ ನೀನೂ ಮರಣದಂಡನೆಗೆ ಗುರಿಯಾಗುವೆ, ಎಂದೊರೆದ ಬಹುಕಾಲದ ಮುಂದು ತನ್ನಲ್ಲಿ ಆ ಮದನಸುಂದರಂ ಕೊಟ್ಟಿರ್ದ ರತ್ನಗಳಂ ತುಂಬಿರ್ದ ಪೆಟ್ಟಿಗೆಯಂ ಅತನ ಕೈಯೊಳು ಕೊಟ್ಟು ಹಿಂದಿರುಗಿಹೋಗಲು, ಆ ಮದನಸುಂದರಂ ಆ ಪೆಟ್ಟಿಗೆಯಂ ತನ್ನ ಕಿಂಕರನೊಳು ಕೊಡುತ್ತ ಎಲೈ ಪ್ರಿಯನಾದ ಕುಶಲತಂತ್ರನೇ ! ನೀನೀ ಪೆಟ್ಟಿಗೆಯಂ ಭದ್ರವಾಗಿ ತೆಗೆದುಕೊಂಡು ಹೋಗಿ, ಈ ಪುರದ ಸರ್ವಾಕರದ ಸತ್ರದಬಳಿಯೊಳು ಕುಳಿತಿರು ನಾನುಬೀದಿಗಳಿಂದ ಸುತ್ತಿಕೊಂಡು ಬೇಗನೆ ಆ ಬಳಿಗೆ ಬಂದು ಸೇರುತ್ತೇನೆಂದು ಹೇಳಿಕಳುಹಿಸಿ, ಆ ಪುರದ ಸೊಬಗಂ ನೋಡುತ್ತಾ ಹೊರಟುಹೋದನು. ಈ ಪ್ರಕಾರವಾಗಿ ತನ್ನ ಧಣಿಯ ಆಜ್ಞೆಯಾದುದನ್ನು ಅಂಗೀಕರಿಸಿ, ಆ ರತ್ನದಪೆಟ್ಟಿಗೆಯಂ ಕೈಕೊಂಡು ಬಂದವಂ ಸತ್ರದಬಳಿಗೆ ಬಂದು ಬಹುಕಾಲಂ ಕಾದಿದ್ದರೂ ತನ್ನ ಯಜಮಾನನು ಬರಲಿಲ್ಲವಲ್ಲ ಎಂದು ಚಿಂತಿಸುತ್ತಾ ಅವನಂ ಹುಡುಕಿಕೊಂಡು ಅಲ್ಲಿಂದ ಹೊರಟು ಮತ್ತೊಂದು ಮಾರ್ಗವಾಗಿ ಹೊರಟುಹೋದನು.

ಅತ್ತಲಾ ಮಣಿದ್ವೀಪದೊಳು ಸೇನಾಪತಿಯಾಗಿದ್ದ ಹಿರಿಯ ಮದನಸುಂದರನು ಎಂದಿನಂತಾವಿನ ಉದಯದೊಳೆದ್ದು ತನ್ನ ಉಷಃಪಂ ಧರಿಸಿಕೊಂಡು ಹೊರಗೆ ಹೊರಟವನಾಗಿ ಮತ್ತೊಂದು ಮಾರ್ಗದೊಳು ಬರುತ್ತಾ ಹೀಗೆಂದು ಯೋಚಿಸಿದನು. ನನ್ನ ಪ್ರಾಣಕಾಂತೆಯಾದ ಅನಂದವಲ್ಲಿಯೂ ಧರಿಸಿಕೊಳ್ಳುವಂತೆ ಮಾಡಿ ಹಾಕಿದ್ದ ರತ್ನಖಚಿತವಾದ ಕೈಕಡಗಗಳು ಈದಿನ ಮೆನಿತುಕಾಲ ಮಾದರೂ ಇವನಲ್ಲಿ ಕುಳಿತುಕೊಂಡಿರ್ದು ಪೂರೈಸಿಕೊಂಡು ಬರುವೆನೆಂದು ನಿಶ್ಚೈಸಿ ಮಾಡಲು ಕೊಟ್ಟಿರ್ದ ಶೀಲವಂತನೆಂಬ ಅಕ್ಕಸಾಲೆಯ ಮನೆಯಂ ಸಾರಿ, ಈ ಒಡವೆಯನ್ನೇ ಮಾಡಿಸುತ್ತಾ ಕುಳಿತುಕೊಂಡಿರ್ದನು. ಹೀಗಿರುವಲ್ಲಿ ಆತನ ಧರ್ಮಕಾಂತೆಯಾದ ಅನಂದವಲ್ಲಿಯು ಪತಿಯು ಮನೆಗೆ ಬರುವ ಸಮಯಮಾದುದೆಂದರಿತು ಭೋಜನ ಪದಾರ್ಥಂಗಳಂ ಸಿದ್ಧಗೊಳಿಸಿ, ತನ್ನ ತಂಗಿಯಾದ ಬಿಂಬಾಧರಿಯೊಡನೆ ಕುಳಿತು ಎದುರುನೋಡುತ್ತಿರ್ದು ಆತನು ಎಂದಿಗೂ ಬರುವಕಾಲ ವಿಾರಿಹೋಗುತ್ತಾ ಬಂದುದು, ಏಂ ಕಾರಣಂ ಮನೆಗೆ ಬರಲಿಲ್ಲವ್ವೋ ತಿಳಿಯದು ಪಕ್ವಪದಾರ್ಥಂಗಳು ಆರಿಹೋದ ಬಳಿಕ ರುಚಿಸಲಾರವು ಅವರಿಗೆ ಇಷ್ಟನ್ನೂ ಹುಟ್ಟಲಾರದು, ನಿನುವಾಡಲಿ ಹಸಿವಾದರೋ ತುಂಬಾ ಬಾಧಿಸುವದೆಂದು ಪೇಚಾ

ಡುತ್ತಿರುವ ಆನಂದವಲ್ಲಿಯಂ ಕುರಿತು, ಆಕೆಯ ತಂಗಿಯಾದ ಬಿಂಬಾಧರೆಯ್ಯು ಅಕ್ಕಾ ಅವರೆಂದಿಗೂ ಭೋಜನಕಾಲಮಂ ಮೀರಿರುತಿರಲಿಲ್ಲ, ಏನೋ ಪ್ರಬಲವಾದ ಕಾರಣಂ ಸಂಭವಿಸಿರಬಹುದು, ಅಲ್ಲದೆ, ಎಂದಿಗೂ ನಿಲ್ಲಲಾರರು, ಅಂಥವರಿಗೆ ನಾವು ಕಾಯುವದು ಯುಕ್ತವಲ್ಲವು, ಭೋಜನವಂಮಾಡಿ ಸುಖವಾಗಿರೋಣವೆಂದು ಪೇಳುವ ಬಿಂಬಾಧರೆಯ ಮಾತುಗಳು ರುಚಿಯಾಗದೇ ಯೋಚಿಸುತ್ತ ಮನೆಯೊಳಿದ್ದ ಸೇವಕನಂ ಕುರಿತು, ಎಲ್ಯೆ ಸೇವಕ ! ಯಜಮಾನರು ಈವರಿಗೂ ಭೋಜನಕ್ಕೆ ಬಾರದೆ ಇರುವರು, ಕಾರಣಮೇನೋ ತಿಳಿಯದು, ಎಲ್ಲಿರುವರೋ ನೋಡಿ ಭರದೊಳು ಕರದುಕೊಂಡು ಬರಬೇಕೆಂದು ಹೇಳಿ ಕಳುಹಲಾ ಮಣಿವ್ವೀಪದ ಕುಶಲತಂತ್ರನು ಅಲ್ಲಿಂ ಹೊರಟು ರಾಜಬೀದಿಯೊಳು ನೋಡುತ್ತಾ ಅನ್ನ ಸತ್ರದ ಬಳಿಯೊಳಿರುವ ವಾಡಿಕೆಯುಂಟೆಂದು ಆ ಬಳಿಗೆ ಬಂದು ಹುಡುಕುತ್ತಾ ಇದ್ದನು.

ಆ ಕಾಲಕ್ಕೆ ನಾಲ್ಕಾರು ನಿಮಿಷಗಳು ಮುನ್ನವೇ ಬ್ರಹ್ಮದೇಶದ ಕನಿಷ್ಠ ಮುದನೆಸುಂದರನು ತನ್ನ ಸೇವಕನೀ ಬಳಿಯೊಳಿಲ್ಲದೆ ಎಲ್ಲಹೋದನೋ ರತ್ನಗಳ ಪೆಟ್ಟಿಗೆಯನ್ನೇನುಮಾಡಿದನೋ ಕಾಣೆನಲ್ಲಾ ಎಂದು ಕಳವಳಗೊಂಡವನಾಗಿ ನೋಡುತ್ತಿರುವಲ್ಲ ಸಮೀಪಗತವಾದ ಮಣಿವ್ವೀಪದ ಕುಶಲತಂತ್ರನೆಂಬ ಸೇವಕನಂ ನೋಡಿ ಎಲ್ಯೆ ಮಿತ್ರನೇ ! ನಿನ್ನನ್ನು ನಾನಿಲ್ಲಿರುವಂತೆ ಹೇಳಿಕಳುಹಿಸಿದರೆ ನೀನಿಂತು ಮಾಡಬೆ ಈವರಿಗೂ ಎಲ್ಲಿಹೋಗಿದ್ದೆ ನಿನ್ನಂ ಹುಡಕಿ ಸಾಕಾದುದಲ್ಲಾ ನಿನ್ನ ಕೈಯೊಳಿತ್ತ ರತ್ನಗಳ ಪೆಟ್ಟಿಗೆಯನ್ನೇನುಮಾಡಿದೆ ? ಎಂದು ಪ್ರಶ್ನೆ ಮಾಡಲಾ ಭೃತ್ಯಂ ಅತನಂ ತನ್ನ ಯಜಮಾನನೆಂದು ತಿಳಿದು ಸ್ವಾಮಿ ! ತಮ್ಮ ಬರುವಿಕೆಯಂ ನಿರೀಕ್ಷಿಸುತ್ತ ಭೋಜನ ಕಾಲಾತೀತವಾದುದಿನೆಂದು ಕಳವಳಿಸುತ್ತಾ ಮಾಡಿದ್ದ ಪದಾರ್ಥಂಗಳೆಲ್ಲಾ ತಂಣಗಾಗಿ ಹೋಗುವದೆಂದು ಚಿಂತಿಸುತ್ತಾ ತಮ್ಮ ಕುಟುಂಬವು ಮನೆಯೊಳು, ಹಂಬಲಿಸುತ್ತಿಹಳು, ತಮ್ಮಂ ಜಾಗ್ರತೆಯಾಗಿ ಕರೆತರುವಂತೆ ಆಜ್ಞಾಪಿಸಿ ಕಳುಹಿಸಿದವರಾದ್ದರಿಂದ ಹುಡುಕಿ ಸಾಕಾದೆನು. ಜಾಗ್ರತೆಯಿಂ ಮನೆಗೆ ದಯಮಾಡಬೇಕೆಂದನು ಭೃತ್ಯಂ ಪೇಳುತ್ತಿರುವ ಮಾತುಗಳಂಕೇಳಿ, ಎಲ್ಯೆ ಸೇವಕನೇ! ನಿನ್ನ ಪರಿಹಾಸವಂತಿರಲಿ ಕೇಳಿದ್ದಕ್ಕೆ ಸರಿಯಾಗಿ ಉತ್ತರಮುಂಕೊಡು ಹಾಸ್ಯವಾಡಲು ಕಾಲಂ ಬೇರಿಹುದು. ಮಧ್ಯಾಹ್ನಕಾಲವು ಸಮೀಪಿಸುತ್ತಾ ಬಂತು ಹಸಿವಾದರೋ ಬಾಧೆಗೊಳಿಪುದು, ರತ್ನಗಳು ತುಂಬಿದ ಪೆಟ್ಟಿಗೆಯೇನಾಯಿತು ಹೇಳೆಂದುಕೇಳಲು ಆ ಭೃತ್ಯಂ ಸ್ವಾಮಿ ಇಷ್ಟೇನು? ಎಂದಿಗೂ ಇಲ್ಲದ ಹೊಸಮಾತುಗಳನ್ನಾಡುವಿರಿ ನಾಂ ಸಟೆಯಾಡುವನಲ್ಲವೆಂದು ತಾವರಿಯಿರಾ? ಮನೆಯೊಳು ತಮ್ಮ ಯಜಮಾನಿಯವರು ಹೊತ್ತಾಯಿತೆಂದು ನನ್ನಮೇಲೆ ಕೋಪಿಸಿಕೊಳ್ಳವರು ಸಾವಕಾಶಮಾಡದೆ

ಡಿಯುಮಾಡಿಸಬೇಕು, ಎಂದು ತನ್ನ ಮಾತಿಗೆ ಅನುಕೂಲಮಾದುತ್ತರ ಮಿಲ್ಲದ ವಚನವನ್ನು, ಭೃತ್ಯನಂ ಕುರಿತು ಎಲಾ ಹಿತಾಪಿತ ಕಾಲಾಕಾಲವಾಮರಿಯದ ಅವಿವೇಕಿಯೇ ! ನಾನೇನು ಕೇಳುವೆನು ಅದಕ್ಕೆ ನೀನೇನು ಹೇಳುವೆ ಈಗಲಾದರೂ ನನ್ನ ಮಾತಿಗೆ ಸರಿಯಾದ ಉತ್ತರಮಂ ಕೊಡುವನಾಗು, ಹಾಸ್ಯೋಕ್ತಿಗಳನ್ನಾಡಬೇಡ ಎಂದು ಕೋಪಾರುಣನೇತ್ರನಾಗಿ, ನಿನ್ನ ಕೈಯಲ್ಲಿ ಕೊಟ್ಟ್ಟಿದ್ದ ರತ್ನಗಳ ಪೆಟ್ಟಿಗೆ ಯೇನಾಯಿತು ಜಾಗ್ರತೆಯಾಗಿ ಹೇಳಿಂದು ಗದ್ದಿಸಿ ಕೇಳುವ ತನ್ನ ಯಜಮಾನನಂ ನೋಡಿ ಇವೇನು ಈತಂ ಚಿತ್ತಚಂಚಲನಾದಂತೆ ಕಾಣಬರುವಂ ನಾನೆಷ್ಟು ಬಗೆಯಾಗಿ ಹೇಳಿದರೂ ನನ್ನ ಮಾತುಗಳಂ ನಂಬದೆ ಹೀಗೆ ಅಡುವನು ಎಂದು ಯೋಚಿಸುತ್ತಾ ಸ್ವಾಮಿ ! ನಾಂ ಸತ್ಯವಾಗಿ ಹೇಳುವೆನು, ತಮ್ಮ ಕುಟುಂಬವು ತಮ್ಮ ಬರುವಿಕೆಯುಂ ಎದುರು ನೋಡಿನೋಡಿ ಬೇಸತ್ತು ನನ್ನಂ ಕಳುಹುವಾಗ ಸಾವಕಾಶ ಮಾಡಲಾಗದೆಂದು ಹೇಳಿದನು. ಆದ್ದರಿಂದ ನನ್ನ ಮೇಲೆ ದಯವಿಟ್ಟು ಮನೆಗೆ ದಯಮಾಡಬೇಕು. ನನ್ನ ಕೈಗೆ ಯಾವಾಗಲೂ ತಾವು ರತ್ನದಪೆಟ್ಟಿಗೆ ಕೊಟ್ಟವರಲ್ಲಾ ಇಂದೇಕೆ ಇಂತುಕೋಪಮಂ ತೋರುವಿರಿ. ಎಂದುಸುರಲುಹಾ ! ಬಾಲ್ಯಾವಧಿಯಾಗಿ ಈ ನೀಚನು, ತನ್ನ ಕೆಟ್ಟಭಾವವಂ ಹೊರಪಡಿಸಬೇಕೆಂದು ಸಮಯ ನಿರೀಕ್ಷಣೆಯೊಳಿದ್ದಂತೆ. ಈ ವಿಶೇಷ ಮೌಲ್ಯಮುಳ್ಳ ಪದಾರ್ಥಂ ಕೈವಶವಾಗಲು ವಂಚಿಸಿ ಹೀಗೆನುಡಿಯುವನು, ಎಂದು ದ್ವಿಗುಣಿತ ಕೋಪಮುಳ್ಳವನಾಗಿ ಎಲಾ ಭ್ರಷ್ಟನೇ ? ಮೂರ್ಖಸೇವಕನೇ ಸತ್ಯವನ್ನುಡಿಯಬೇಡ ನಿನ್ನ ಕೈಯಲ್ಲಿ ಕೊಟ್ಟ್ಟಿದ್ದ ಪೆಟ್ಟಿಗೆ ಯೇನಾಯಿತು ಜಾಗ್ರತೆಯಾಗಿ ಹೇಳುವನಾಗು, ಇಲ್ಲದಿದ್ದರೆ ಈ ಚುಮುಕಿಯಿಂದ ಕೊಡೆಯುವೆನೆನಲು, ಸ್ವಾಮಿ ? ತಾವು ಪ್ರಭುಗಳು ನಾನು ಪಾಪಚಾರಕನಾಗಿರುವೆನು, ಆದ್ದರಿಂದ ತಾನು ಹೊಡೆಯಲೂ ಬಹುದು. ನಾನು ಹೊಡಿಸಿಕೊಳ್ಳಲೂ ಬಹುದು. ನಾನು ಸತ್ಯವನ್ನಾಡುವನೆಂದು ತಾವರಿಯಿರಾ ? ನಿಜವಾಗಿ ಆ ಪೆಟ್ಟಿಗೆಯುಂ ತಾವು ನನ್ನ ಕೈಯಲ್ಲಿಕೊಡಲಿಲ್ಲವೆಂದು ಹೇಳಲು ಛೀ ಛೀ ? ಪತಿತನೆ ನಾನೆಷ್ಟು ಬಗೆಯಾಗಿ ಕೇಳಿದರೂ ಕಡೆಗೆ ನಿನ್ನ ನೀಚತನವನ್ನು ತೋರುತ್ತೀಯಾ ಎಂದು ತನ್ನ ಕೈಲಿದ್ದ ಚುಮುಕಿಯಿಂದ ಜೆನ್ನಾಗಿ ಹೊಡೆದು ನೂಕಿದನು. ಆ ಪೆಟ್ಟುಗಳಂ ತಿಂದು ಅಯ್ಯೋ ಎಷ್ಟೋ ದಯಾಳುವಾಗಿದ್ದ ದಣಿಯು ಇದೇತಕಿಂತು ಕ್ರೂರನಾದನು ? ಇವನ ಸ್ಥಿತಿಯನ್ನೋಡಿದರೆ ಹುಚ್ಚು ಹಿಡಿದವನಂತೆ ಕಾಣುವದೆಂದು ಪೇಚಾಡಿಕೊಳ್ಳುತ್ತಾ ತನ್ನ ದಣಿಯಮನೆಯಂಸಾರಿ ಪತಿಯು ಬರುವಿಕೆಯನ್ನೆದುರುನೋಡುತ್ತಿದ್ದ ಆನಂದವನ್ನಿಯಂಕುರಿತು, ಅಮ್ಮಾ ಯಜಮಾನರ ಗತಿಯನ್ನು ನಾನೇನೆಂದು ಹೇಳಲಿ ? ಅವರಿಗೆ ಹುಚ್ಚು ಹಿಡಿದಿರುವಂತೆ ತೋರುತ್ತದೆ. ನಾನೆಷ್ಟು ವಿಧವಾಗಿ ಹೇಳಿಕೊಂಡರೂ ಕೇಳಲಿಲ್ಲ

ಮನೆಗೆ ಬರುವಂತೆಯೂ, ತಮ್ಮ ಹೆಂಡತಿಯು ಭೋಜನಾರ್ಥವಾಗಿ ನಿರೀಕ್ಷಿಸುತ್ತಿಹರೆಂದೂ ನಾನಾ ಪ್ರಕಾರವಾಗಿ ಹೇಳಿದರೂ, ನನಗೆ ಮನೆಯೇ ಇಲ್ಲ. ನಾನು ಮದುವೆ ಮಾಡಿಕೊಂಡಿದ್ದೂ ಇಲ್ಲ. ನಿನ್ನ ಕೈಯ್ಯಲ್ಲಿ ಕೊಟ್ಟಿದ್ದ ರತ್ನದಪೆಟ್ಟಿಗೆ ಏನಾಯಿತು ಬೇಗನೆಕೊಡು ಎಂದು ಗರ್ಜಿಸುತ್ತಾ ಕಡೆಯೊಳು ನನ್ನಂ ತಮ್ಮಕೈಯಲ್ಲಿದ್ದ ಚುಮುಕಿಯಿಂದ ಹೊಡೆದು ಕಳುಹಿದರು, ಎಂದು ತನ್ನ ಮೈ ವೇಲಿನ ಹೊಡೆತದ ಗುರುತುಗಳಂ ತೋರಿ ಸುಮ್ಮನಾಗಲು ಆ ಆನಂದವಲ್ಲಿಯು ತನ್ನ ತಂಗಿಯೊಡನೆ ಎಲ್ಲೆ ತಂಗಿ ಬಿಂಬಾಧರಿಯೇ ಕೇಳಿದೆಯಾ ನನ್ನ ಪ್ರಿಯನ ವಿದ್ಯಮಾನಂಗಳಂ ಅತನ ರೀತಿಯಂ ಯೋಚಿಸಿನೋಡಿದರೆ ಅನ್ಯರೊಳು ಮನಸ್ಸಿಟ್ಟಿರುವಂತೆ ತೋರುವದು. ಅತನಂ ಕೈವಿಡಿದದ್ದು ಮೊದಲು ಇಂದಿನವರಿನಿಗೂ, ಒಂದು ಕಾಲದೊಳಾದರೂ ನನ್ನಂ ತಿರಸ್ಕರಿಸದೆ ಪರಮಾನುರಾಗದೊಳು ಇದ್ದವನು ಇಂದೀಪರಿಯೊಳು ನಾನು ಹೇಳಿ ಕಳುಹಿದರೂ ಲಕ್ಷ್ಯವಿಡದೆ ಹೊಡೆದುಕಳುಹಿಸಿದನಲ್ಲಾ ಮುಂದೇನುಗತಿಯೆಂದು ನುಡಿಯಲು ಆ ಬಿಂಬಾಧರಿಯು, ಅಕ್ಕಾ ! ಭಾವನವರು ಅಂಥಾವರಲ್ಲ ಅವರ ಗುಣಾತಿಶಯಂಗಳು ಪರಮ ಶ್ಲಾಘ್ಯವಾದವುಗಳು ಕಾರಣಾಂತರದಿಂದ ವೇಷಗೊಂಡಿರಬಹುದು. ಆ ಕೋಪವು ನಿನಗೇನೂ ವಿರುದ್ಧವಾಗಿರಲಾರದು ಈಗಲೂ ವಿನಯಭಾವದಿಂದ ಹೇಳಿಕಳುಹಿಸೋಣ ಅದಂ ಕೇಳಿದಮಾತ್ರದಿಂದಲೇ ಬರುವರು ಎನಲು ಭೃತ್ಯನಂ ಕುರಿತು ಕರತರುವಂತೆ ಮತ್ತೆ ಆಜ್ಞಾಪಿಸಲಾ ಭೃತ್ಯಂ ಅಮ್ಮ ವೊಡಲು ಹೋಗಿ ಹೇಳಿದ್ದಕ್ಕೆ ಮೈಮುರಿಯಿ ಪಟ್ಟುಗಳಾದವು ಪುನಃಹೋಗಿ ಕರದರೆ ನನ್ನ ಗತಿಯೇನಾಗುವದೋ ಎಷ್ಟು ಮಾತ್ರವೂ ನಾಂ ಹೋಗಲಾರೆನೆಂದು ಖಂಡಿತವಾಗಿ ನುಡಿಯುವ ಕುಶಲ ತಂತ್ರನಂ ಕುರಿತು, ಎಲೈ ಭೃತ್ಯನೇ ! ನೀಂವುಂದಾಗಿನಡೆ, ನಾವೂ ಹಿಂಗಡೆಯೊಳು ಬರುವೆವು, ಅವರಂ ಸಮಾಧಾನಗೊಳಿಸಿ ಕರೆದುಕೊಂಡು ಬರೋಣ, ಎಂದು ನಯೋಕ್ತಿಗಳಿಂದ ಲಾಲಿಸಿ, ಅವರಾವೆಡೆಯೊಳಿರ್ದರೋ ಅದಂ ಹೇಳೆಂದು ಕೇಳಲು, ಸರಕಾರದ ಸತ್ರದ ಬಳಿಯಿರುವರೆನೆ, ಆ ಸೇವಕನಂ ಮುಂದಾಗಿ ಕಳುಹಿಸಲು, ಅವಂ ಬಂದು ದೂರದಿಂ ನೋಡಿ, ಆ ಯೆಡೆಕಾಣದಿರಲು, ಹುಡುಕುತ್ತಾ ಮತ್ತೊಂದು ಮಾರ್ಗವಾಗಿ ಹೊರಟುಹೋದನು.

ಅತ್ತಲಾ ಬ್ರಹ್ಮದೇಶದ ಮದನ ಸುಂದರಂ ತನ್ನ ಸೇವಕನಿಂತು ವೇಷಮುಂ ಮಾಡಿದನಲ್ಲಾ, ಎಂದು ಚಿಂತಿಸುತ್ತ ಛತ್ರದ ಸುತ್ತಲೂ ತಿರುಗುತ್ತಿರುವಾಗ್ಯೆ, ಈತನಂ ಹುಡುಕಿಕೊಂಡು ಹೋಗಿದ್ದ ಸ್ವಂತ ಭೃತ್ಯನು, ದಣಿಯಂ ಹುಡುಕಿ ಸಾಕಾಗಿ ದೊರೆಯಲಿಲ್ಲವೆಂದು ಚಿಂತಿಸುತ್ತಾ, ಮರಳಿ ಛತ್ರದ ಬಳಿಗೆ ಬರುತ್ತಿರಲು, ದೂರವಾಗಿ ಬರುತ್ತಿರುವ ಸೇವಕನಂ ನೋಡಿ, ಇದೇನು ಈ ಭೃತ್ಯಂ

ಮೊದಲೊಂದು ಪರಿಯಾಗಿ ನುಡಿದಂ, ಈಗ ಕೈಯೊಳಾರತ್ನದ ಪೆಟ್ಟಿಗೆಯಂ ಕೊಂಡು ಬರುತ್ತಿರುವೆನೆಂದು ಯೋಚಿಸಿ ಸಮೀಪ ಗತನಾದಪನಂ ಕುರಿತು, ಎಲ್ಲೆ ಮೈತಾಳಿ ಗಾರನೇ ! ಮೊದಲು ನಿನ್ನಂನೀಬಳಿಯೊಳು ಕೇಳಿದಾಗ ಈ ರತ್ನಪೆಟ್ಟಿಗೆಯನ್ನೇ ನನ್ನ ಕೈಗೆ ಕೊಡಲಿಲ್ಲವೆಂತಲೂ ಭೋಜನಕ್ಕಾಗಿ ಮನೆಯೊಳು ಕಾದುಕೊಂಡಿದಾರೆ, ಮನೆಯ ಯಜಮಾನಿಯವರು ಕರತರುವಂತೆ ಹೇಳಿ ಕಳುಪಿಸಿದರೆಂದುಸ್ಸೂ, ನಾನು ಮದುವೆ ಯಿಲ್ಲದವನೆಂದು ತಿಳಿದಿದ್ದರೂ, ನಾವ್ಯ ಸರಸ್ಯ ಆದಪರಾದರೂ ಸ್ನೇಹವಾಸಿಗಳಂತೆಯೂ ಇಲ್ಲಿ ಸ್ವಂತ ಮನೆಯಿರುವದಾಗಿಯೂ, ನನ್ನ ಪ್ರಾಣಕಾಂತೆ ಇರುವದಾಗಿಯೂ, ಹಾಸ್ಯೋಕ್ತಿಗಳನ್ಯಾಡಿ ಕಡೆಗೆ ಕೋಪಂ ಬಪ್ಪಿಸಿ ನಸ್ಸಿಂಪ ಪೆಡ್ಡುತಂದು ಹೋಗಿ ಈಗಲೇನೂ ಅರಿಯದವನಂತೆ ಪೆಟ್ಟಿಗೆಯಂಕೈಯೊಳಾಂತುಸಿಂದರುವೆ. ಕಾಲಾಕಾಲಂಗಳ ನರಿಯದೆ ಹಾಸ್ಯಮುಂಮಾಡಬೇಡ. ಭೋಜನಮಲ್ಲದೆ ಕೋಣವೇಶವೊದಗಿರುವಾಗಿಂತು ಇನ್ನುಮುಂದೆ ಮಾಡಬೇಡವೆನೆ ಆ ಬ್ರಹ್ಮದೇಶದ ಕುಶಲತಂತ್ರನು ಸ್ವಾಮಿಯಾ ಪ್ರಭುಗಳಿರಾ ! ಇದೇನು, ಇಂತು ನುಡಿಯುವುರಿ, ಈ ಪೆಟ್ಟಿಗೆಯಂ ಮೊದಲು ನನ್ನ ಕೈಲಿ ಕೊಟ್ಟು ಈ ಛತ್ರದ ಬಳಿ ಕಾದಿರುವಂತೆ ಹೇಳಿದಾಗ ತಮ್ಮಂ ನೋಡಿದವನು, ಪುನಃ ಇದೇ ನೋಡಿದ್ದೂ, ಮತ್ತಾವಕಾಲವಲ್ಲಿಯೂ ಈಮಧ್ಯೇ ತಮ್ಮಂನೋಡಿದೆನಲ್ಲಮತ್ಯಾ ವಮಾತುಗಳನ್ನೂ ತನ್ನೊಂದಿಗೆ ನಾನಾಡಿದವನಲ್ಲ. ತಮ್ಮಭಾವನಂತೆ ಬಂದು ಈಬಳಿ ಕಾದುಸಾಕಾಗಿ ಇಷ್ಟುಹೊತ್ತಾದರೂ ಬಾರದಿರಲುಕಾರಣಮೇನೋಯೆಂದುಯಮಲುಹುದು ಕುತ್ತಾ ಹೋಗಿದ್ದವನುಇದೇಬಂದನೇನೆ, ಬಂದು ಆಶ್ಚರ್ಯಪಡುತ್ತಾ ನಿಂತುಮಾತಾಡುತ್ತಿ ರುವಾಗಳೆ, ತನ್ನ ಕಾಂತನಂ ಕರೆತರುವಂತೆ ಸೇವಕನಂಮುಂದಾಗಿ ಕಳುಪಿಸಿದ, ಆ ಆನಂ ದವಲ್ಲಿಯೂ ತನ್ನ ತಂಗಿಯಂ ಬಿಡಗೊಂಡು, ಅದೇಛತ್ರದಬಾಗಿಲಾಗಿ ಹೊಗಿ ಬರುತ್ತಿದ್ದವಳು ಧೂರಮಾಗಿ ಮಾತಾಡುತ್ತಿರುವಬ್ರಹ್ಮದೇಶದ ಮದನಸುಂದರನನ್ನ ಇವನಕಿಂಕರನನ್ನೂ ನೋಡಿತನ್ನ ಪ್ರಾಣನಾಥನಾದ ಮದನಸುಂದರನೆಂತಲೂತನಸೇವಕನೆಂದುನ್ನೂ ಭ್ರಾಂತ ಳಾಗಿಆತಿಭರದಿಂ ಇವರೊಳಿಟ್ಟು ನೋಡಿಮುಳ್ಳಸಳಾಗಿ ತನ್ನ ತಂಗಿಯೊಡನೆ ಬರುವದಂ ಕಂಡು, ಬ್ರಹ್ಮದೇಶದ ಕುಶಲತಂತ್ರನು, ಸ್ವಾಮಿಯಾ ಪ್ರಭುಗಳಿರಾ ! ಇತ್ತನೋಳ್ಪುದು ಯಾರೋ ಇಬ್ಬರು ಸುಂದರ ಪುರುಷರು ನಮ್ಮನ್ನೇ ನೋಡುತ್ತ ಬರುತ್ತಿರುವರು, ಇವರ ರೀತಿಯಂ ನೋಡಿದರೆ ಯಾರೋ ಗುರುತು ಕಂಡಪರೆಂದರಿತು, ಮಾತನಾಡಿಸು ವದಕ್ಕಾಗಿ ಬರುವಂತೆ ಕಾಂಬುದು, ಎಂದು ನುಡಿಯುತ್ತಿರುವ ಸಮಯಕ್ಕಾ ಈರ್ವರು ಕಾಂತಾಮಣಿಯರೂ ಇವರ ಸಮೀಪಗತರಾಗಿ ನಿಂತು, ಮದನ ಸುಂದರನಂನೋಡಿ, ತನ್ನ ಗಂಡನೆಂದರಿತಾ ಆನಂದವಲ್ಲಿಯು, ಎಲ್ಲೆ ಪ್ರಾಣಕಾಂತನೇ ! ನಾನೇನಪರಾ ಧವಂ ಮಾಡಿದವನೆಂದು ನನ್ನೊಳು ಮಾತಾಡದೆ ಇಂತು ಕೋಪಮಾಂತಿರುವ. ನಾಂ ನಿನ್ನ ಕೈಯ್ಯಂ ಪಿಡಿದದ್ದು ಮೊದಲಾಗಿಯೂ ಅದಕ್ಕೆ ಪೂರ್ವದಿಂದಲೂ, ನನ್ನ ಸ್ವಭಾವವಂ ನೀ ನೋಡುತ್ತಿರುವದಿಲ್ಲವೇ ? ಈದಿನ ಮಾತ್ರಮಿಗೂ ಭೋಜನಕ್ಕೆ ಮನೆಗೆ

ಬಾರದಿರೆ ಪದಾರ್ಥಂಗಳಂ ಸಿದ್ಧವಾಗಿ ಇಟ್ಟುಕೊಂಡು ಕಾಯುತ್ತಾ ನೀನು ಬಾರದಿರಲು ಸೇವಕನಂ ಕಳುಹಿದರೂ ಬಾರದೆ ಪೋಗೆ ಕಾರಣಮೇಂತಿಳಿಯದಲ್ಲಾ, ಓಗೆಂದೂ ನಾಂ ಹಸಿದರೆ ನೋಡಿ ಸುಮ್ಮನಿರ್ದುದೇ ಇಲ್ಲವಲ್ಲಾ. ಆ ಕಾರಣಮಂ ಸಾವಕಾಶಮಾಗಿ ಕೇಳಿ ತಿಳಿದುಕೊಳ್ಳುವೆನು ಆದಂತಿರಲಿ, ಭೋಜನಕ್ಕೆ ಕಾಲಾತೀತಮಾದುದು. ದಯಮಾಡಿ ಮನೆಗೆ ಬರಬೇಕೆಂದು ನುಡಿಯುತ್ತಿರುವಾ ಕಾಂತಾ ರತ್ನಮಂ ನೋಡಿದ ಮದನ ಸುಂದರಂ ತನ್ನಲ್ಲಿ ತಾನೂ ಯೋಚಿಸುತ್ತಾ ಬಂದನು. ಈ ನಾರೀಮಣಿಯ ಮುಖವನ್ನು ಜನ್ಮ ಪ್ರಭೃತಿ ಇದೇ ನೋಡಿದ್ದಾಗಿರುವದು. ಈಕೆಯಾದರೋ ತನ್ನ ಗಂಡನನ್ನು ಕುರಿತು ಮಾತಾಡಿಸುವಂತೆ ನನ್ನೊಳು ನುಡಿಯುತ್ತಿರುವಳು, ಇದು ಪರಮಾಶ್ಚರ್ಯವಾಗಿರುವುದೆಂದು ಯೋಚಿಸಿ ಆನಂದವಲ್ಲಿಯಂ ಕುರಿತು, ಎಲ್ಲೆ ರಮಾಮಣಿಯೇ ನೀನಾರೋ ನಾನರಿಯೆ. ನಾಂ ಹುಟ್ಟಿದ್ದು ಮೊದಲುಗೊಂಡು ಈಗಲೇ ನಿನ್ನಂ ನೋಡಿದ್ದು, ನಾಂ ಪರದೇಶಸ್ಥನು,' ಈಗಲೇ ಈ ಊರಿಗೆ ಬಂದವನು, ನನಗಿನ್ನೂ ಮದುವೇ ಆಗಲಿಲ್ಲ, ಓಗಿರುವಲ್ಲಿ ಅಕಾಂಡಶಾಂಡಮಾಗಿ ನೀಂ ಮಾತಾಡಿಸುವದಂ ನೋಡಿ ಆಶ್ಚರ್ಯ ಪಡಬೇಕಾಗಿದೆ. ನಿನಗೇನಾದರೂ ಬುದ್ಧಿ ಭಾಂಜಲ್ಯವೋ ಅಲ್ಲದೆ ಈ ಊರಿನ ಜನಗಳ ನಡತೆಯೇನಾದರೂ ಓಗಿರುವದೋ ಕಾಣೆನು ಎಂದು ಪ್ರತ್ಯುತ್ತರವಂ ಕೊಡಲಾ ಆನಂದವಲ್ಲಿಯು ಅಯ್ಯೋ ವಿಧಿಯೇ ಮೋಸಮಾದುದೇ ಇದೇನೀತಂ ಈಪರಿಯಾದನೆಂದು ಯೋಚಿಸುತ್ತಾ ನಿಂತುಕೊಳ್ಳಲು ಆಕೆಯ ತಂಗಿಯಾದ ಬಿಂಬಾಧರಿಯು ಬ್ರಹ್ಮದೇಶದ ಮದನ ಸುಂದರನ ಮುಂದಾಗಿ ನಿಂತು, ಎಲ್ಲೆ ಭಾವ ನೀನೇತಕೀಪರಿಯೊಳು ವಿರಸೋಕ್ತಿಗಳನ್ನಾಡುವೆ ? ಈ ಮಾತುಗಳು ಕರ್ಣಕಠೋರಮಾಗಿರ್ಪುದಲ್ಲಾ. ನೀ ಮದುವೆಯಾದದ್ದು ಮೊದಲು ಇಂಥಾ ದುಸ್ಸೊಲ್ಕೀಕ್ತಿಗಳಿಂದ ಅಕ್ಕನನ್ನು ತಿರಸ್ಕರಿಸಿದ್ದೇ ನಾನರಿಯೆನು. ಇಂದೇತಕಿಂತಾಡುತಿರುವಿ ? ನೀನಾಡುವ ಮಾತುಗಳಂ ಕೇಳಿದರೆ ಈ ಮಾರ್ಗಸ್ಥರೆಲ್ಲರೂ ಹಾಸ್ಯಮಾಡುವದಿಲ್ಲವೇ ? ಇಲ್ಲಿಗೀಪರಿ ಹಾಸ್ಯೋಕ್ತಿಗಳಂ ನಿಲ್ಲಿಸಿ, ಅಕ್ಕನಂ ಸಮಾಧಾನಗೊಳಿಸುವಂತೆ ಕೆಲವು ಜಿತೋಕ್ತಿಗಳನ್ನಾಡಿ ಆಕೆಯ ಮನಸ್ಸಂತೋಷಗೊಳಿಸು, ನಿನ್ನಂ ಮದುವೆಯಾದದ್ದು ಮೊದಲು ಈ ವರಿವಿಗೂ ಬಂದಾವರ್ತಿಯಾದರೂ ಕಂಣೀರು ಹಾಕಿದವಳಲ್ಲ? ಎಂದು ಮೃದೋಕ್ತಿಗಳಿಂ ವಿನಯಳಾಗಿಪೇಳುವಲಸುಂದರೀಮಣಿಯಂ ಕುರಿತು, ಸಲ್ಲೆರಮಣಿಯೇ! ನಾನಾರೆಂದರಿತಿರುವಿ, ನಾನೀದೇಶದವನೇಅಲ್ಲ ಈಪಟ್ಟಣಕ್ಕೆ ಬಂದು ಸ್ವಲ್ಪಕಾಲವೇಆದುದು, ನಿಮ್ಮಾರ್ವರಂ ಗುರುತೇಕಾಣೆನು, ಇಂಥಾದ್ದರಲ್ಲಿ ಮದುವೆ ಮಾಡಿಕೊಂಡದ್ದಾದರೆ, ನಿಜವೆಂತು?ಈಕೆಯಂನಾಮದುವೆಮಾಡಿಕೊಂಡವನೇ ಅಲ್ಲ, ನೀನೇತಕೆಂತು ಭ್ರಾಂತಳಾಗಿರುವಿ ನನಗೆಮದುವೆಯು ಆಗಲಿಲ್ಲ ನಿಮ್ಮಿಷ್ಟಕ್ಕೆನೀವು ಹೊರಟುಹೋಗಿರೆಂದು ಖಂಡಿತಮಾಗಿನುಡಿಯುತ್ತಾ ಬರಲು, ಆಬಿಂಬಾಧರೆಯು ಅಕ್ಕನ ಕಡೆಗೆತಿರುಗಿ,ಅಕ್ಕಾ ಈಭಾವನವರಿಗೆ ಪಿತ್ತವಿಕಾರಮೇನಾದರೂ ಉಂಟಾಗಿದೆಯೋ ಅಲ್ಲದೆ

ಸ್ನೇಹಿತರಾದ ಹೆಂಗಳಂ ಸ್ವಾಧೀನಮಾಡಿಕೊಳ್ಳಲು ಇಟ್ಟ ಮದ್ದು ತಲೆಗೇನಾದರೂ ಸುರಿದೆಯೋ ಭೂತಾವೇಶಮೇನಾದರೂ ಆವರಿಸಿರುವದೋ, ಯಾವದೂ ತಿಳಿಯಲಾಗದು, ಆದ್ದರಿಂದ ಉಪಾಯಮಂ ಮಾಡಿ ಹೇಗಾದರೂ ಮನೆಗೆ ಕರೆದುಕೊಂಡು ಹೋಗಿ, ಆನ್ನೋದಕಗಳಂ ಕೊಟ್ಟು ಉಪಚರಿಸಿದ ನಂತರ ಹೀಗೆಯೇ ಇದ್ದರೆ ಮುಂದಾಲೋಚಿಸೋಣ ಇದಕ್ಕಿಂತಲೂ ಈಗ ಮಾಡಬೇಕಾದ ಕಾರ್ಯಂ ಮತ್ತೊಂದಿಲ್ಲವೆಂದು ನುಡಿಯಲು, ಆನಂದವಲ್ಲಿಯು ಮರಳಿ ಆ ಕನಿಷ್ಠ ಮದನ ಸುಂದರನಂ ಕುರಿತು, ಎಲ್ಲೆ ಪ್ರಾಣೇಶನೇ ! ನನ್ನೊಳೀತಕೆಂತು ದಯಾಶೂನ್ಯನಾಗಿರುವಿ? ನಿನ್ನಂ ಕುರಿತು ಇನಿತಾದರೂ ವಿರೋಧಮಂ ಯೋಚಿಸಿದವಳೇ ಅಲ್ಲವಲ್ಲಾ, ನೀನರಿಯೆಯಾ ನಿರಪರಾಧಿಗಳೊಳಿಂತು ಅನಾಧರಣೆಯಂ ತೋರಬಹುದೇ ಆದರೂ ಚಿಂತೆಯಿಲ್ಲ, ನಿನಗಾಗಿ ಭೋಜನವಿಲ್ಲದೆ ಹಸಿವಾಂತು ಕಾದಿರುವ ನಮ್ಮಮೇಲೆ ಕರುಣಿಸಿ ಭೋಜನವನ್ನು ಮಾಡಿ ವಿಶ್ರಾಂತನಾಗೆಂದೊರೆದು, ತಾನೊಂದು ಕರವನ್ನೂ, ತನ್ನ ತಂಗಿಯೊಂದು ಕರವನ್ನೂ ಪಿಡಿದುಕೊಂಡು ಬಲಾತ್ಕಾರಪಡಿಸಲು ಪ್ರಾರಂಭಿಸಿದರು.

ಈ ರೀತಿಯಂ ಕಂಡಾ ಬ್ರಹ್ಮದೇಶದ ಕಿಂಕರಂ ತನ್ನ ದಣಿಯನ್ನು ಕುರಿತು, ಸ್ವಾಮಿ ! ಸಮಯವು ಬಹಳ ನಾಜೂಕಾಗಿರುವದು, ದುಡುಕುವ್ವದಾದರೆ ನಮ್ಮ ನಮ್ಮ ಕಾರ್ಯವು ಕೆಡುವದಲ್ಲದೆ ಮಾನ ಪ್ರಾಣಗಳು ನಾಶವಾಗುವವು, ಯೋಚಿಸಲಾಗದು, ಎಂದು ಧೈರ್ಯವಂ ಹೇಳಿದರೂ ಸ್ವಸ್ಥನಾಗಿರದೆ ಎಲ್ಲೆ ಸುಂದರೀಮಣಿಗಳಿರಾ ! ಇದೇನು ನೀವು ಮಾಡುವ ಕೃತ್ಯವು ಸಜ್ಜನ ವಿರೋಧವಾಗಿರುವದು, ನೋಡಿದವರೂ ದೂಷಿಸುವರು, ನೀವು ಗಂಡಸುಳ್ಳ ಗರತಿಯರಾಗಿ ಕಾಂಬಿರಿ. ನಾನೋ ಪರದೇಶದವನು. ಯಾವವಿಧದಲ್ಲಿಯೂ ನಿಮಗೆ ಸಂಬಂಧಿಯಾದವನಲ್ಲ, ನೀವು ನನ್ನ ಕೈಗಳಂ ಬಿಡಿ ನಾನು ಹೊರಟುಹೋಗುವೆನು. ನೀವು ಅಬಲೆಯರಾದ್ದರಿಂದಲೂ ಮಾನನಿಯರಾಗಿರುವದರಿಂದಲೂ ನಿಮ್ಮಂ ಬಲಾತ್ಕಾರದಿಂದ ತಿರಸ್ಕರಿಸಲಾಗದೆಂದು ಹಿಂಜರಿಯುತ್ತಿರುವನಂ ಮೆಲ್ಲಮೆಲ್ಲನೆ ನಯದ ನುಡಿಗಳಿಂ ಸಮಾಧಾನ ಪಡಿಸುತ್ತಾ ತಮ್ಮ ಮನೆಗೆ ಕರೆದುಕೊಂಡು ಹೋಗಿ ಬಾಗಲ್ಗಳಂ ಭದ್ರಪಡಿಸಿ ಮುಂಬಾಗಲೊಳಾ ಭೃತ್ಯನಂ ಕುಳ್ಳಿರಿಸಿ ಎಲ್ಲೆ ಕಿಂಕರನೇ ! ಇದು ಮೊದಲು ಯಾರಾದರೂ ಸರಿಯೆ, ಈ ಬಾಗಿಲುಕಪೆ ಬಂದು ಎಷ್ಟು ಅವಸರಮಾದ ಕೆಲಸಗಳನ್ನೇ ಆಗಲಿ ಮತ್ತಾವ ವಿಧದಿಂದಲಾಗಲಿ ಬಂದವರನ್ನೆಲ್ಲರಂ ಒಳಗೆ ಬಿಡದೆ ಈ ದಿನ ವಿರಾಮ ಮಿಲ್ಲವು, ನಾಳೆ ಪ್ರಾತಃಕಾಲ ಬಂದು ಮಾತಾಡಿಕೊಂಡು ಹೋಗಬೇಕೆಂದು ಹೇಳಬೇಕೇ ಹೊರತು ಒಳಗೆ ಬಿಡಲೇಬಾರದೆಂದು ಭದ್ರಪಡಿಸಿ ಆತನನ್ನಲ್ಲಿಟ್ಟು ತಾವು ಒಳಹೊಕ್ಕು ಭೋಜನಾರ್ಥಮಾಗಿ ಸಕಲ ಪಕ್ವಪದಾರ್ಥಂಗಳಂತರಿಸಿ, ಮುಂದಿಟ್ಟು ಭೋಜನವಂ ಮಾಡುವಂತೆ ನಾನಾ ವಿಧಮಾಗಿ ಉಪಚರಿಸಿ ತಾನೂ ತನ್ನ ತಂಗಿಯೂ ಕುಳಿತು, ಭೋಜನವಂ ಮಾಡಿ ಭೃತ್ಯನಿಗೂ ಭೋಜನವಂ ಮಾಡಿ

ಸಿದಬಳಿಕ ತನ್ನ ಪ್ರಾಣನಾಥನೆಂಬ ಭ್ರಾಂತಿಯನ್ನು ಇಷ್ಟಾದರೂ ಬಿಡದೆ ಮರಳಿ ಎಲ್ಲೆ ಮನೋವಲ್ಲಭನೇ! ನಾನು ಬಂದು ಸತ್ರದಬಳಿ ಸೇವಕನೊಡನೆ ಮಾತಾಡುತ್ತಿದ್ದ ನಿನ್ನಂ ಮನೆಗೆ ಬರುವಂತೆ ಕರೆಯಲು ನೀನಾಡಿದ ಮಾತುಗಳು ಯುಕ್ತವೇ? ಹಾಗಾಡುವಂತೆ ನಿನಗೆ ನಾಂ ಮಾಡಿದಪರಾಧವೇನು? ಎಂದು ಮಂದಹಾಸಮಂ ಗೈಯ್ಯುತ್ತ ನುಡಿಯೆ ಆ ಮದನ ಸುಂದರಂ ಇದೇನು ಈಕೆಯು ನಿಸ್ಸಂದೇಹವಾಗಿ ತನ್ನ ಗಂಡನೆಂದೇ ತಿಳಿದು ಮಾತನಾಡಿಸುವಳಲ್ಲಾ ನಾನು ಖಂಡಿತವಾಗಿ ಮಾತಾಡದಿದ್ದೊಡೆ ಈಕೆಯಸಂದೇಹ ನಿವೃತ್ತಿಯಾಗಲಾರದೆಂದು ಯೋಚಿಸಿಎಲ್ಲೆ ಹುಚ್ಚಳೇ! ನಾನೆಂತು ಹೇಳಿದರೂ ನೀಂ ಕೇಳುವದಿಲ್ಲವೋ ಸಿಶ್ಚಯವಾಗಿ ನಿನ್ನಂ ಮದುವೆ ಮಾಡಿಕೊಂಡವನಲ್ಲ, ನಾನು ಇನ್ನೂ ಬ್ರಹ್ಮಚಾರಿಯು, ನನ್ನ ವಾಸಸ್ಥಾನವೇ ಈ ಪಟ್ಟಣವಲ್ಲ. ನಾಸೀದಿನವೇ ಪ್ರಾತಃಕಾಲದೊಳು ಈ ಊರಿಗೆ ಬಂದೆನು, ನೀಂ ನನ್ನ ಹೆಂಡತಿಯೂ ಅಲ್ಲ, ನಾಂ ನಿನ್ನ ಗಂಡನೂ ಅಲ್ಲ, ವ್ಯಥಾ ನನ್ನನ್ನು ತೊಂದರೆಪಡಿಸಬೇಡ ಇದರಿಂದ ಕೋಪಾವೇಶವು ಹುಟ್ಟಿದರೆ ಅನರ್ಥಕ್ಕೆ ಕಾರಣವಾಗುವದು. ಛೀ ಮೂರ್ಖಳೇ! ನಿನ್ನ ಭ್ರಾಂತಿಯಂ ಬಿಡು ಎಂದು ಖಂಡಿತವಾಗಿ ನುಡಿಯಲು ಆಯ್ಯೋ ವಿಧಿಯೇ ಈ ನನ್ನ ಪ್ರಿಯಸಂ ಇಂತೀಕೆ ಅಪ್ರಿಯನಂ ಮಾಡಿದೆ, ಎಂದು ಶೋಕಿಸುತ್ತಾ ಹೋಗಿ, ತನ್ನ ಮುಂಡದಮೇಲೆ ಮಲಗಿ ನಾನಾವಿಧಮಾಗಿ ಚಿಂತಿಸುತ್ತಿದ್ದಳು.

ಆಗಲವಳ ತಂಗಿಯಾದ ಪಂಚಾಧರೆಯು ಈ ಮದನಸುಂದರನ ಸಮೀಪಗತಳಾಗಿ ಕುಳಿತು ಎಲ್ಲೆ ಭಾವನೇ ನನ್ನ ಅಕ್ಕನು ಎಸಿತುಬಿಗೆಯಾಗಿ ನಿನ್ನಂ ಬೇಡಿಕೊಂಡರೂ, ಅವಳೊಳು ಇಂತೀಕೆ ಕೋಪಾಕ್ರಾಂತನಾಗಿರುವೆ ಆಕೆಯು ನಿರಪರಾಧಿಯಲ್ಲವೇ, ನಿನ್ನಾಜ್ಞಾನುಸಾರವಲ್ಲದೆ ಯಾವ ಕಾರ್ಯವೊಳೂ ನಡೆಯಲಿಲ್ಲವಲ್ಲವೆ, ನೀನೇ ತನ್ನ ಭಾಗದ ನಿಧಿಯೆಂದು ನಂಬಿ ನಿನ್ನಂ ಸೇವಿಸುವಳಲ್ಲಾ ನಿನ್ನಂ ಮದುವೆಯಾದದ್ದು ಮೊದಲೊಂಡು ಹಗಲೂ ರಾತ್ರಿ ನೋಡುವದಿಲ್ಲವೆ, ಹಾಗೇನಾದರೂ ಅಜ್ಞಾನವಶಾತ್ ಮಾಡಿದವಳಾಗಿದ್ದರೆ ಅದಂ ನನ್ನೊಂದಿಗೆ ಹೇಳು, ನಾನು ನಿನಗೆ ಪ್ರೀತಿಪಾತ್ರಳಾದವಳಲ್ಲವೆ, ನನ್ನೊಳಾದರೂ ದಯಮಾಡಿ ಹೇಳು, ಆಕೆಯೊಳು ಕೋಪಮಿದ್ದರೆ ನನ್ನಿಳೀಶಕಿಂತು ಕ್ರೌರ್ಯಮಂ ತೋರುವೆ. ನಿನ್ನಾಜ್ಞೆಯಂ ಮೀರಿ ನಾಂ ನಡೆಯುವಳಲ್ಲವಲ್ಲಾ. ಯೋಗ್ಯನಾದ ವರನಂ ನೋಡಿ ನನಗೆ ಮದುವೆಯಂ ಮಾಡುವಂತೆ ನೀನು ಹೇಳುತ್ತಿದ್ದಮೇರೆ ನಿನ್ನ ಮಾತುಗಳನ್ನೇ ನಂಬಿ ಕಾದಿರುವೆನಲ್ಲಾ. ಹೀಗಿರುವಳೆಂದಾದರೂ ತಿಳಿದು ನನ್ನೊಳು ಕರುಣಿಸಿ ಮಾತನಾಡೆಂದು ಅತಿನಮ್ರಳಾಗಿ ಕೇಳಿಕೊಳ್ಳಲು ಆ ಪಂಚಾಧರೆಯೊಳು ದಯಾಂತವನಾಗಿ ಎಲ್ಲೆ ಸುಂದರೀ ಚೂಡಾಮಣಿಯೇ ಲಾಲಿಸು ನನಗೇನೂ ಯಾವವಿಧದೊಳೂ ಕೋಪವಿಲ್ಲವು. ನಿಜವಾಗಿ ನಾಂ ನಿನ್ನ ಭಾವನು ಅಲ್ಲವು. ನನ್ನ ದೇಶವು ಬ್ರಹ್ಮದೇಶವು. ನಾಂ

ಮದುವೆಯಾದವನಲ್ಲವು. ಈ ಊರಿಗೆ ಈದಿನದುದಯದೊಳೇ ಬಂದೆನು. ಅನ್ಯನಾದ ನನ್ನಂ ಪತಿಯೆಂದು ಬಲಾತ್ಕರಿಸುವ ನಿನ್ನ ಆಕ್ಷನೊಳು ನಾನೆಂತು ಕೂಡಿ ಆಕೆಯಂ ಸುಖಿಗೊಳಿಸಲಿ. ಇದು ಮಹಾ ಪಾಪಕಾರ್ಯವು, ಮತ್ತು ಲೋಕವಿರುದ್ಧವಾದ ಕೆಲಸವು, ನೀನಾದರೋ ಪತಿಯನ್ನು ಸೇರಬೇಕೆಂದು ಆಪೇಕ್ಷೆಯುಳ್ಳವಳಾಗಿರುವೆ. ನಾನು ಮದುವೆಯಿಲ್ಲದವನಾದ್ದರಿಂದ ನನ್ನಂ ಮದುವೆಯಾಗುವಂತೆ ಸಮ್ಮತಿಸು. ಈ ನಿಮಿಷದಲ್ಲಿಯೇ ಏನನ್ನೂ ಯೋಚಿಸದೆ ಪಾಣಿಗ್ರಹಣಮಂ ಮಾಡಿಕೊಳ್ಳುವೆನು. ಈ ಭಾಗದೊಳು ಸಂದೇಹವೇ ಇಲ್ಲ. ನಿನ್ನ ಮನದಣಿಯುವಂತೆ ನನ್ನಂ ಸೇರಿ ಸುಖಿಸು. ಆಕೆಯು ಪರಸ್ತ್ರೀಯಾರ್ದ್ದರಿಂದ ನಾನಾಕೆಯಂ ಸ್ಮರಿಸಲಾರೆನು. ಆ ಸಮಾಚಾರವನ್ನು ಕೇಳಲು ಬೇಸರಿಕೆಯಾಗುವದೆಂದು ಹೇಳುತ್ತಿರ್ದ ಮಾತುಗಳಂ ಕೇಳಿ ಆಯ್ಯೋ ನನ್ನ ಆಕ್ಷನೊಳೀತನಿಗಿದ್ದ ವಿಶ್ವಾಸಮಂ ಯಾವ ದುಷ್ಟಾಂಗನೆಯೋ ಅಪಹರಿಸಿದಳು. ನಾನೆಷ್ಟುವಿಧವಾಗಿ ಹೇಳಿದರೂ ಅತನ ಮನಸ್ಸೇ ಬೇರೆಯಾಗಿಹುದು ಎಂದು ಚಿಂತಿಸಿದವಳಾಗಿ ಪ್ರತ್ಯುತ್ತರವಂ ಹೇಳಲಾರದೆ ಸುಮ್ಮನಾದಳು.

ಹೀಗಿರುವ ಸಮಯದೊಳು ಜ್ಯೇಷ್ಠಮದನಸುಂದರಂ ಆಕ್ಷಸಾಲೆಯವನ ಮನೆಯಲ್ಲಿ ಕುಳಿತಿದ್ದು ಬಹಳ ಹೊತ್ತಾಯಿತೆಂದರಿತು, ಆಯ್ಯಾ ಸ್ವರ್ಣಕಾರನೇ ನಾನು ಇಲ್ಲಿಗೆ ಬಂದು ಬಹಳ ಹೊತ್ತಾಯಿತು, ಇಷ್ಟುಯೊತ್ತು ಈ ಆಭರಣಕ್ಕಾಗಿ ಕಾದು ಕೊಂಡಿದ್ದರೂ ಪೂರ್ತಿಸಿಕೊಡಲಿಲ್ಲ. ಮನೆಗೆಹೋದರೆ ನನ್ನಹೆಂತತಿಯು ಕಡಗಗಳಂ ತರಲಿಲ್ಲವೆಂದು ಅಸಮಾಧಾನಮಂ ತೋರುತ್ತಾಳೆ. ಆದ್ದರಿಂದ ನೀನೂ ನನ್ನ ಜೊತೆಯೊಳೇ ಬಂದು ಸಮಾಧಾನನಂ ಹೇಳಿ ಬಂದನಂತರ ಮಧ್ಯಾಹ್ನದೊಳಗಾಗಿ ಆ ಆಭರಣಮಂ ತಂದು ಖಂಡಿತವಾಗಿ ಕೊಡಬೇಕೆಂದು ಹೇಳಲು ಸೀಲವಂತನೆಂಬ ಆಕ್ಷಸಾಲೆಯವನು ಸ್ವಾಮಿ ತಾವೇತಕೆಂತು ಅನುಮಾನಪಡುವಿರಿ ಆಭರಣದ ಕೆಲಸವೆಲ್ಲವೂ ಪೂರ್ತಿಸಿಹುದು ಬಣ್ಣಹಾಕುವ ಕೆಲಸಮಾತ್ರ ನಿಂತಿರುವದು. ಇದಂ ಬಂದು ಘಂಟೆಯಕಾಲದೊಳಗಾಗಿಯೇ ಪೂರ್ತಿಸಿ ಕೊಡುತ್ತೇನೆ ಎಂದು ಹೇಳಲು, ಆ ಮದನ ಸುಂದರಂ ನೀನಿನೇ ಮಾತುಗಳನ್ನೇ ಆಕೆಯೊಳು ಹೇಳಿಬರುವಂತೆ ಮಾಡೆಂದು ಅತನನ್ನು ಜೊತೆಯೊಳು ಕೊಂಡು ತನ್ನ ಮನೆಯ ಬಾಗಿಲಿಗೆ ಬಂದು ಬಾಗಲಂ ತಟ್ಟಲು ಪ್ರತಿಶಬ್ದಮೇ ಬಾರದಿರಲು, ಕೂಗಿ ಬಾಗಿಲಂ ತೆಗೆಯೆಂದು ತಟ್ಟುವದಕ್ಕೆ ಆರಂಭಿಸಲು, ಮನೆಯೊಳಗಿದ್ದ ಬ್ರಹ್ಮದೇಶದ ಕುಶಲತಂತ್ರಂ ನೋಡಿ ಈ ದಿನದೊಳು ಮಾತಾಡಲು ಸಮಯವಿಲ್ಲವು ನಾಳೆಯದಿನಂ ಬರಬಹುದೆಂದು ಪ್ರತ್ಯುತ್ತರಮಂ ಕೊಡಲು ಎಲಾ ಮೂರ್ಖನೇ ಬಾಗಿಲಂ ಬೇಗನೆ ತೆಗೆ ಹಾಸ್ಯವನ್ನಾಡಬೇಡ. ನಿನ್ನ ಪರಿಹಾಸ್ಯಕ್ಕೆ ಇದು ಸಮಯವಲ್ಲ. ಬೇಗೆನೆ ತೆಗೆಯೆನಲು ಯಾರಾದರೂ ಬಳಲಿ ಎಂಥಾ ಅವಸರಮಾದ ಕಾರ್ಯವನ್ನು ಹೇಳಲಿ ಬಾಗಿಲಂ ತೆಗಿಯಬೇಡವೆಂದು ಯಜಮಾನಿಯವರು ಆಜ್ಞಾಪಿಸಿರುವರು. ಆದ್ದರಿಂದ ನಾಂ ತೆಗಿಯಲಾರೆನು ಎಂದು

ಹೇಳಲು ಎಲಾ ಹಾಸ್ಯಗಾರನೆ ಕಾಲಾಕಾಲಂಗಳಂ ತಿಳಿಯದೆ ಹೀಗೆ ಮಾತಾಡಬೇಡ, ನನ್ನ ಕೋಪವಂ ವೃದ್ಧಿಗೊಳಿಸುವದಕ್ಕೆ ಕಾರಣನಾಗುತ್ತಿ. ಇದೂಕೂಡಿ ಅನೇಕಾ ವೃತ್ತಿ ಈ ಭಾಗದೊಳು ಎಚ್ಚರಿಸಲ್ಪಟ್ಟಿರುವೆ. ಮುಂದೂ ಹೀಗೆಯೇ ಮಾತನಾಡಿದರೆ ದಂಡನೆಗೆ ಗುರಿಯಾಗುವಿ ಎಂದು ಗರ್ಧಿಸಿ ಮಾತನಾಡುತ್ತಾ ಬರಲು ಇವರೀರ್ವರ ಶಬ್ದಮಂ ಕೇಳುತ್ತಾ ಆನಂದವಲ್ಲಿಯು ಒಳಗಿನಿಂದಲೇ ಅದೇನು ಗದ್ದಲವೆಂದು ಕೇಳಲು ಬಾಗಿಲೊಳಿದ್ದ ಬ್ರಹ್ಮದೇಶದ ಸೇವಕಂ ಅಮ್ಮಾ ಯಾರೋ ಪೋಕರಿ ಜನರು ಬಂದು ವಿಧವಿಧವಾಗಿ ಮಾತಾಡುತ್ತಾ ಗದ್ದಲಮಾಡುತ್ತಿರುವರು. ಯಾರೋ ಪೋಕರಿಗಳಾಗಿ ಕಾಣುತ್ತಾರೆಯೇ ಏನಾ ದೊಡ್ಡವರಂತೆ ಕಾಣರು. ಈ ಊರೊಳಗೆ ಇರುವರ ರೀತಿಯಂ ಕಾಣುವುದು ಬಹು ಪ್ರಯಾಸಮೆಂದು ಸುಮ್ಮನಾಗಲು, ಯಾರಾದರೂ ಸಮಯಮಲ್ಲವೆಂದು ಹೇಳು. ಬಾಗಿಲಂ ತೆಗೆಯಬೇಡವೆಂದು ಹೇಳಿ ಸುಮ್ಮನಾಗೆ ಮಣಿದ್ವೀಪದ ಮದನಸುಂದರಂ ಎಲೋ ಪಾಪಿಯಾದ ಸೇವಕನೇ ನಾನು ಮನೇ ಯಜಮಾನನೆಂದು ತಿಳಿಯದೆ ಹೆಂಗಸಿನ ಮಾತಿನಂತೆ ನೀನೂ ದುರ್ಮಾರ್ಗದೊಳು ಪ್ರವರ್ತಿಸುವಿಯಾ. ಅವಳಂ ನಾನು ಮದುವೆಯಾದದ್ದು ಮೊದಲು ಈವರಿಗೂ ಇಂತಹ ಆಪತ್ಸಹಜಗುಣವಂ ತೋರಿಸದೆ ಮಾಚಿ ವಿನಯಮಂ ನಟಿಸುತ್ತಿರ್ದಳು. ಇದೇ ಪ್ರಥಮತಃ ಕಾಣಬಂದುದು. ತನಗೆ ಬೇಕಾದ ಪುಂಡರಂ ಮನೆಯೊಳು ಸೇರಿಸಿಕೊಂಡು ಹೀಗೆ ಮನಸ್ಸಿಯಾಡುವಳು. ಒಳ್ಳಿತು ಛೀ ಛೀ ಮೂಢನೆ ಬೇಗನೆ ಬಾಗಿಲಂ ತೆಗೆ ತಪ್ಪಿದರೆ ಅದರ ಫಲಮನ್ನೀಗಲೇ ಕಾಣುವೆ ಎಂದು ಘಟ್ಟಿಯಾಗಿ ಗದರುತ್ತಾ ಬರಲು ಸಮೀಪದೊಳಿರ್ದ ಶೀಲವಂತನೆಂಬ ಸ್ವರ್ಣಕಾರನೂ ನೆರೆಮನೆಯವಳಾದ ಅತನಿಗೆ ಪರಮ ಪ್ರೀತಿಪಾತ್ರಳಾಗಿದ್ದ ಮಂದಯಾನೆಯೆಂಬುವಳೂ ಆತನನ್ನು ಕುರಿತು ಎಲ್ಲೆ ಮಿತ್ರನೇ ನೀನೇತಕೆಂತು ಕೋಪಾಕ್ರಾಂತನಾಗುತ್ತೀ ಇದು ಸಮಯವಲ್ಲ, ನೀನು ಕೋಪಗೊಳ್ಳುವದಕ್ಕೆ ನಿನ್ನ ಪತ್ನಿಯು ಅಂಥಾ ದುರ್ಗುಣವಂತಳೂ ಅಲ್ಲ. ಆಕೆಯನ್ನು ಬಹುಕಾಲವಾಗಿ ನೋಡುತ್ತಿರುವೆನು, ಇನಿತಾದರೂ ದೋಷಕರಮಾದ ಗುಣವು ಕಾಣಬರುವದೇ ಇಲ್ಲ. ಆಕೆಯು ಏಕಪತಿವ್ರತೆಯು ನೀನೇನರಿಯಾ ? ಆಕೆಯಿಂತು ಮುನಿಸಿಕೊಂಡಿರುವದಕ್ಕೆ ಕಾರಣವೇನೋ ಇರಬಹುದು, ಅದಂ ವಿಚಾರಿಸುತ್ತಾ ಇಲ್ಲಿಯೇ ನಿಂತು ಗದ್ದಲಮಾಡಿದರೆ ನೋಡಿದವರಿಗೆ ಹಾಸ್ಯಾಸ್ಪದಮಾಗಿ ಕಾರ್ಯಕ್ಕೆ ಹಾನಿಯೂ, ನಿನ್ನ ಕೋಪದೇಳಿಗೆಗೆ ಕಾರಣವೂ ಹುಟ್ಟುವದು, ಇದಲ್ಲದೇ ಭೋಜನಮಿಲ್ಲದೆ ಹಸಿವಿನಿಂದ ಆತುರನಾಗಿರುವ ನೀನು ಇಲ್ಲಿ ನಿಂತು ಯಾವದನ್ನೂ ಯೋಚಿಸಬಾರದು. ಆದ್ದರಿಂದ ದಯಮಾಡಿ ನನ್ನ ಮನೆಗೆ ಬಂದು ಭೋಜನವಂ ಮಾಡಿ, ವಿಶ್ರಾಂತನಾಗಿ ಅನಂತರ ಯಾವದನ್ನಾದರೂ ಯೋಚಿಸಬಹುದು, ಎಂದು ವಿನಯಳಾಗಿ ಮೃದೂಕ್ತಿಗಳಿಂದ ಸಮಾಧಾನಗೊಳಿಸಲು, ಬಳಿಯೊಳಿರ್ದ ಶೀಲವಂತನಂ ಕುರಿತಾ ಜ್ಯೇಷ್ಠಮದನಸುಂದರಂ ಅಯ್ಯಾ

ಸ್ವರ್ಣಕಾರನೇ! ನೀನು ಆ ಆಭರಣಮಂ ಆಗಲೇ ಕೊಟ್ಟಿದ್ದರೆ ಈ ಅನರ್ಥಕ್ಕೆ ಕಾರಣವಾಗುತ್ತಿರಲಿಲ್ಲ, ಆದರೆ ಯತ್ನವಿಲ್ಲದೆ ಇಂತಾದುದು. ಈಗಲಾದರೂ ನೀನು ಹೋಗಿ ಭೋಜನವಂ ಮಾಡಿ, ಜಾಗ್ರತೆಯೊಳಾ ಹಸ್ತಕಡಗಂಗಳಂ ತರುವವನಾಗು ಎಂದು ಆತನಿಗೆ ಹೇಳಿಕಳುಹಿ, ತನ್ನ ಪ್ರೀತಿಗೆ ಪಾತ್ರಳಾದ ಭೋಜನಕ್ಕೆ ಬಲಾತ್ಕರಿಸುವ ಮುಂದಯಾನೆಯ ಇಚ್ಛಾನುಸಾರಮಾಗಿ ಆಕೆಯ ಮನೆಯಂ ಸಾರಿ, ಭೋಜನವಂ ಮಾಡುತ್ತಾ ಇದ್ದನು.

ಇತ್ತಲಾ ಜ್ಯೇಷ್ಠಮದನ ಸುಂದರನ ಹೆಂಡತಿಯಿಂದ ಬಲಾತ್ಕರಿಸಲ್ಪಟ್ಟ ಆಕೆಯ ಮನೆಯಂ ಸೇರಿದ್ದ ಕನಿಷ್ಠ ಮದನಸುಂದರನು ತಾನು ಮುಂದು ಮಾಡಬೇಕಾದ ಕಾರ್ಯಮಂ ಯೋಚಿಸಲು ತೋರದೆ, ಚಿಂತಿಸುತ್ತಾ ಕುಳಿತಿರುವಲ್ಲಿ ಬಾಗಿಲೊಳಿರ್ದ ಆತನ ಚಾರನಾದ ಕಿರಿಯ ಕುಶಲತಂತ್ರನು ಗಟ್ಟಿಯಾಗಿ ಕಿರಿಚುತ್ತಾ ಸ್ವಾಮಿ ಯಜಮಾನರೇ! ನಿಮಗಾದ ಗತಿಯೂ ನನ್ನನ್ನೂ ಸುತ್ತಿಕೊಂಡಿತಲ್ಲಾ, ಮುಂದು ನನಗೇನುಗತಿ, ಯಾವಳೋ ಪರಮ ಭಯಂಕರಾಕಾರಳಾದ ಅಂಗನೆಯು ಬಂದು ನನ್ನನ್ನೂ ತನ್ನ ಪತಿಯೆಂದು ಬಲಾತ್ಕರಿಸುವಳು, ಇಂತಹ ಕುರೂಪಿಯನ್ನು ನಾನೆಲ್ಲಿಯೂ ಕಾಣೆನು. ನನ್ನ ಹೆಸರು ಈಕೆಗೆಂತು ತಿಳಿದುದೋ ಕಾಣೆನು, ತನ್ನೊಂದಿಗೆ ಬಂದು ತನ್ನ ಮನೆಯಲ್ಲಿ ಭೋಜನಾದಿಗಳಂ ಮಾಡಿ, ರತಿಕೇಳಿಯೊಳು ತನ್ನೊಂದಿಗೆ ಆನಂದ ಸುಖವಂ ಹೊಂದಬೇಕೆಂದು ರಟ್ಟೆಪಿಡಿದು ಬಲಾತ್ಕಾರ ಪಡಿಸುತ್ತಿರುವಳು, ಇದನ್ನು ನಾನೆಂತು ಪರಿಹರಿಸಿಕೊಳ್ಳುವ ಬಗೆ? ಇದೇನೋ ಪ್ರಮಾದಮಾಗಿರಪದು. ನಾನುಳಿಯುವ ಬಗೆಯಂತು, ಈ ಊರಿನ ಸಡತೆಯೇ ಒಂದುಬಗೆಯಾಗಿ ಕಾಂಬುದು, ನನ್ನಂ ಕಾಪಾಡು ಕಾಪಾಡು ಎಂಬುದೊಂದು ಶಬ್ದಮಂ ಕೇಳಿದಾ ಮದನಸುಂದರಂ ಎಲ್ಲೆ ಕಿಂಕರನೇ! ಭಯಪಡಬೇಡ, ನಾವೀ ಊರಲ್ಲಿರುವದೇ ಅನುಚಿತ, ಬಂದು ಮಧ್ಯಾಹ್ನವಾಗಲಿಲ್ಲ, ಈ ಹೊತ್ತಿಗೇನೆ ಇಷ್ಟು ಬಗೆಯಾದುದು, ಹೇಗಾದರೂಮಾಡಿ ತಪ್ಪಿಸಿಕೊಂಡು ಇಲ್ಲಿಂದ ಹೊರಗೆ ಹೋಗೋಣವೆಂದು ಹೇಳಿ, ಅಲ್ಲಿ ಅಕ್ಕತಂಗಿಯರಾದವೀರ್ವರೂ ಇಲ್ಲದಿರುವದಂ ಕಂಡು ಮೆಲ್ಲನೆ ಭೃತ್ಯನೆಡೆಗ್ಯೈದಿ, ಅವನೂ ತಾನೂ ಸೇರಿ ಬಾಗಲಿನ ಕದಂಗಳಂ ಮೆಲ್ಲನೆ ತೆಗೆದುಕೊಂಡು ಹೊರಗೆಬಂದು, ಅಲ್ಲಿಂದ ಅತಿ ಜಾಗ್ರತೆಯಾಗಿ ಹೊರಟುಬರುತ್ತಾ ಆ ಕನಿಷ್ಠಕುಶಲತಂತ್ರನಂ ಕುರಿತು, ಎಲ್ಲೆ ಪ್ರಿಯನೇ! ಇನ್ನೊಂದು ನಿಮಿಷ ಮಾದರೂ ಈ ಊರೊಳು ನಿಲ್ಲಲಾಗದು, ಮುಂದೇನು ಅಪಾಯಂಗಳು ಸಂಭವಿಸುವವೋ ಕಾಣಲಾರದು, ನೀನಿಲ್ಲಿಂದಲೀಗಲೇ ಹೋಗಿ ಹಡಗವು ನಮ್ಮ ದೇಶಕ್ಕೆ ಯಾವಕಾಲದಲ್ಲಿ ಹೊರಡುವದೋ ತಿಳಿದು ಗೊತ್ತುಮಾಡಿಕೊಂಡು ಬಾ, ಆವರಿಗೆ ನಾನೀ ಊರುಬಾಗಲಿನ ವೈದ್ಯಶಾಲೆಯಮುಂದೆ ನಿಂತು ಕಾದಿರುವೆನು ಎಂದು ಹೇಳಿ ಕಳುಹಿ ತಾನಲ್ಲಿಂದ ಹೊರಟು ಮತ್ತೊಂದು ಮಾರ್ಗಮಾಗಿ ಹೋಗುತ್ತಿದ್ದನು.

ಆ ಕಾಲಕ್ಕೆ ಸರಿಯಾಗಿ ಸ್ವರ್ಣಕಾರನಾದ ಶೀಲವಂತನು ಕೈಕಡಗಗಳಂ ಬಣ್ಣ ಹಚ್ಚಿ ತನ್ನ ಕೈಯಲ್ಲಿ ತೆಗೆದುಕೊಂಡು ಬರುತ್ತಿರ್ದವನು ದೂರದೊಳೀತನಂ ನೋಡಿ, ಹಾ! ಆ ಮದನಸುಂದರಂ ನನ್ನನ್ನೇ ಕುಡುಕಿಕೊಂಡು ಬರುವನೋ ಏನೋ ಎಂದು ಚಿಂತಿಸುತ್ತಾ ಸಮೀಪಕ್ಕೆ ಬಂದು ಸ್ವಾಮೀ ! ನಾನು ಬರುವದಕ್ಕೆ ಸಾವಕಾಶವಾದುದೆಂದು ತಾವೇ ಬಂದವರಾದಿರಿ. ಈ ಪಿಸಲೊಳು ನಾಂ ತಮಗೆ ಕೊಟ್ಟೀಯಪರಾಧಮಂ ಮನ್ನಿಸಿರಿ, ಇದೋ ರತ್ನಕಂಕಣಂಗಳಂ ತಂದಿರುವೆನು, ಪರಿಗ್ರಹಿಸಬೇಕು, ಮೊದಲು ನಿಮ್ಮ ಕಾರ್ಯಮಂ ನೆರವೇರಿಸಿಕೊಳ್ಳಿರೆಂದು ಕೈಗೆ ಕೊಡುವದಕ್ಕೆ ಬರಲು, ಆ ಕನಿಷ್ಠ ಮದನಸುಂದರನು, ಇದೇನು ಈ ಊರಿನ ನಡತೆ, ಇಂತು ವಿಚಿತ್ರಮಾಗಿಹುದು, ಎಂದು ಯೋಚಿಸುತ್ತಿರಲಾ ಅಕ್ಕಸಾಲಿಗಂ ಸ್ವಾಮೀ ! ಕಾರಣಕ್ಕಾಗಿ ನಾನೀಗ ತಮ್ಮಂತೊಂದರೆ ಕೊಡುವೆನೆಂದು ಯೋಚಿಸಬಾರದು, ಸಾವಕಾಶ ಮಾಡಿದನೆಂತಲೂ ಚಿಂತಿಸಲಾಗದು, ಎಂದು ಬಲಾತ್ಕರಿಸಿಕೈಗೆ ಕೊಡಲು, ಇದೇನು ಈತಂ ಅಪರಿಚಿತನಾದ ನನ್ನ ಕೈಯೊಳಗೀ ಯಾಭರಣವನ್ನಿತ್ತು ಇಂತುಪೇಳುವನು, ನೋಡಿದರೆ ಆಶ್ಚರ್ಯಮಾಗುವದೆಂದು ಯೋಚಿಸಿ, ಅಯ್ಯಾವರ್ತಕನೇ! ನೀನೀಯಾಭರಣಮಂ ನನ್ನ ಕೈಯ್ಯೊಳು ಬಲಾತ್ಕರಿಸಿಕೊಟ್ಟ ಮಾತ್ರದಿಂದಲೇ ನಾಂ ತೆಗದುಕೊಳ್ಳುವನಲ್ಲ,ಇದರಮೌಲ್ಯಮಂ ನಿಶ್ಚೈಸಿತೆಗೆದುಕೊಂಡರೇನೇ ನಾನೀ ಯಾಭರಣಮಂ ತೆಗದುಕೊಳ್ಳುವೆನು, ಇಲ್ಲವಾದರೆ ಹಿಂದಕ್ಕೆ ತೆಗೆದುಕೊಳ್ಳುವನಾಗೆಂದು ಖಂಡಿತವಾಗಿ ಹೇಳುವ ಮಾತುಗಳಂ ಕೇಳಿದಾ ಶೀಲವಂತಂ ನಾನೀತನ ಸಮಯಕ್ಕೆ ಕೊಡಲಿಲ್ಲವೆಂದು ಅಸಮಾಧಾನದಿಂದ ಹೀಗೆ ಹೇಳುತ್ತಾನೆಂದು ತಿಳಿದು, ಸ್ವಾಮೀ!ನಿಮ್ಮನ್ನು ಹಣವಂಈಗಲೇ ಕೊಡುವಂತೆ ನಾಂಬಲಾತ್ಕಾರವಂಮಾಡುವದಿಲ್ಲ, ನೀವುಕೊಡದವರೂಅಲ್ಲ, ಸಮಯಬಂದಾಗ ತೆಗೆದುಕೊಂಡು ಯೋಗ್ಯುತ್ತೇನೆಂದು ಹೇಳಿ, ಯಾಭರಣಂಗಳಂ ಆತನಕೈಯ್ಯೊಳಿತ್ತು ತನ್ನ ಮನೆಯಂ ಕುರಿತು ಹೊರಟು ಹೋದನು.

ಅತ್ತಲಾ ಮಣಿಪುರದ ಜ್ಯೇಷ್ಠನಾದ ಮದನ ಸುಂದರನು, ತಾನು ಭೋಜನಾರ್ಥಮಾಗಿ ಹೋಗಿದ್ದ ಮಂದಯಾನೆಯ ಪತಿಯಾದ ನೀತಿಮರುತ್ತನ ಜೊತೆಯೊಳು ಸ್ನಾನಮಂಮಾಡಿ ಕುಳಿತು, ಭೋಜನಮಂ ಮಾಡುವ ಕಾಲದೊಳು ಆತನ ಕಂಠದೊಳಿದ್ದ ದಿವ್ಯರತ್ನಹಾರಮಂನೋಡಿ ಭ್ರಾಂತನಾಗಿ ಆತನಂ ಕುರಿತು, ಅಯ್ಯಾ ಮಿತ್ರನೇ! ನಿನ್ನ ಕಂಠದೊಳು ರಾರಾಜಿಸುತ್ತಿರುವ ಹಾರಮಂ ನನಗೆ ಕೊಡುವೆಯಾ ಇದಕ್ಕೆ ಬದಲಾಗಿ ನಾಂ ಮಾಡಿಸಿರುವ ಘನತರವಾದ ರತ್ನಕಂಕಣಗಳ ಜೊತೆಯಂ ಕೊಡುವೆನೆಂದೊರೆಯಲು, ಆ ನೀತಿಮರುತ್ತನು,ಸ್ವಾಮೀ ಪರಮಾಪ್ತರೇ ! ಇದು ನನ್ನ ಪ್ರಾಣಕಾಂತೆಯ ಪ್ರೀತಿಪಾತ್ರಮಾದಾಭರಣವು. ತಾವು ಕೇಳಿದಮೇಲೆ ಕೊಡಲೇಬೇಕು,ಇದು ನನ್ನ ಅಭಿಪ್ರಾಯವು ನನ್ನ ಅಂಗನೆಯು, ಏನಂ ಹೇಳುವಳೋ ಕೇಳಿ, ಆನಂತರ ಕೊಡುವೆನೆಂದು ಮದನ ಸುಂದರನ ಭಾವವಂ ಆಕೆಯೊಳು ತಿಳುಹಲು, ಆ ಮಂದಯಾನೆಯು ಡೋಲಮಾನಸಳಾಗಿ ಯೋಚಿಸುತ್ತಿರಲದಂ ಕಂಡಾ ಮನದಸುಂದರಂ

ಇದಕ್ಕೆ ಬದಲಾಗಿ ಮತ್ತೊಂದು ದಿವ್ಯಾಭರಣಮಂ ಈಗಲೇ ತಂದು ಕೊಡುವೆನು. ನಿನಗಿಷ್ಟವಿದ್ದಷ್ಟು ದಿನಗಳು ಧರಿಸಿಕೊಂಡಿರ್ದ ನಂತರ ನನಗೆ ಕೊಡು, ಆಗ್ಯೆ ನಿನ್ನೀ ಹಾರಮಂ ನಿನಗೆ ಕೊಡುವೆನು, ಎಂದು ಒಡಂಬಡಿಸಿ, ಆತನಿಂದಾ ಹಾರಮುಂಕೊಂಡು ಹತ್ತು ನಿಮಿಷಗಳೊಳಗಾಗಿಯೇ ರತ್ನ ಕಂಕಣಂಗಳಂ ಅಕ್ಕಸಾಲೆಯವನ ಮನೆಯಿಂದ ತಂದುಕೊಡುವಂತೆ ಹೇಳಿ, ಭೋಜನಾನಂತರ ಮನೆಯಿಂದ ಹೊರಟು ಆ ಶೀಲವಂತನೆಂಬ ಸ್ವರ್ಣಕಾರನಂ ಮಾಡುಕಿಕೊಂಡಾತನ ಮನೆಗಾಗಿ ಹೋಗುತ್ತಿದ್ದನು.

ಇತ್ತಲಾ ಬ್ರಹ್ಮದೇಶದ ಮದನಸುಂದರಂ ಹಡಗವನ್ನು ಗೊತ್ತುಮಾಡಿಕೊಂಡು ಬರುವಂತೆ ತನ್ನ ಸೇವಕನಂ ಕಳುಹಿ ಬರುತ್ತಿರಲು, ಒಬ್ಬ ವ್ಯಾಪಾರಿಯು ಮಣಿದ್ವೀಪದ ಮದನಸುಂದರನಿಗೋಸ್ಕರ ತಾಂ ತರಿಸಿದ್ದ ದಿವ್ಯಮಾದ ಖಡ್ಗಮಂ ತನ್ನ ಕೈಯೊಳಾಂತು ಬರುತ್ತಾ ದಾರಿಯಲ್ಲಿ ಈತನಂ ಕಂಡು, ಇದೇನು ನಾಂ ಹುಡುಕಿಕೊಂಡು ಹೋಗುತ್ತಿರ್ದವರು ಈ ಮಾರ್ಗಮಾಗಿಯೇ ಬರುತ್ತಿರುವರೆಂದು ತಿಳಿದು, ಈ ಮದನಸುಂದರನ ಬಳಿಗ್ಯೆತಂದು ಸ್ವಾಮಿ ಸೇನಾಧಿಪತಿಗಳಿರಾ! ತಮ್ಮಲ್ಲಿ ನಾನು ಮೊದಲು ವಿಜ್ಞಾಪಿಸಿರ್ದ ಆಯುಧವು ಈಗ ತಾನೇ ಒಂದು ಹಡಗಿನೊಳು ಬಂದುದು ತಮಗೆ ಹೇಳಿದ್ದು ಬಹುಕಾಲಮಾಯಿತು. ಸಾವಕಾಶಮಾದದ್ದಕ್ಕಾಗಿ ಚಿತ್ತಕ್ಕೆ ಆಯಾಸಪಡಕೆಲಸವಿಲ್ಲ. ಆದರೆ ಈ ಆಯುಧದ ಗುಣಂಗಳು ಅತ್ಯಂತ ಶ್ಲಾಘನೀಯ್ಯಂಗಳಾದವುಗಳು. ಅದರ ಬಾಯಿಯ ಹದವು ಪ್ರತಿಖಡ್ಗದಿಂದ ಕತ್ತರಿಸಿದರೂ ನಾಶವಾಗಲಾರದು, ಸುತ್ತಿ ಸುತ್ತಿ ನಡುವಿನೊಳು ಸಿಲುಕಿಸಿಕೊಳ್ಳಬಹುದು, ತೂಕದೊಳು ಬಹಳವಾಗಿ ಲಘುವುಳ್ಳದ್ದು, ತಮಗೆ ವಿನಾ ಮತ್ತಾರಿಗೂ ಧರಿಸಿಕೊಳ್ಳಲು ಅರ್ಹಮಾದಲ್ಲವು ಎಂದು ಹೇಳಿ, ಆತನಕ್ಕೈಗೆ ಕೊಟ್ಟು, ಸ್ವಾಮಿ! ಇದರೊಂದಿಗೆ ಬಂದ ಪದಾರ್ಥಗಳನ್ನು ಇನ್ನೂ ತೆಗೆದು ಒಳಗಿಡಲಿಲ್ಲ, ಹಡಗಿನಿಂದ ಬಂದವ್ಯಗಳೆಲ್ಲಾ ಹೊರಗೆ ಭಂಡಿಗಳೊಳು ಹಾಗೆಯೇ ಇಹುದು ಸಾವಕಾಶಮಾಗಿ ಬಂದು ಇದರಜೆಲೆಯಂ ಅರಿಕೆಮಾಡುತ್ತೇನೆಂದುಹೇಳಿ ಅವಸರಮಾಗಿ ಹೊರಟುಹೋದನು. ಆಖಡ್ಗಮಂ ಕೊಂಡಾ ಮದನಸುಂದರಂ ಇದೇನೋ ಈ ದೇಶದ ರೀತಿಯು ಪರಮಾದ್ಭುತಮಾಗಿರುವದು, ಎಂದು ಆಶ್ಚರ್ಯಪಡುತ್ತಾ ಹಾಗೆಯೇ ಘುಂವರಿದು ಬರುತ್ತಿರಲು ಮತ್ತೋರ್ವ ವೇರಿಗಂ ಬಂದು ಸ್ವಾಮಿ ಆಜ್ಞೆಯಾದಂತೆ ಭಂಗಾರದ ನಾಣ್ಯವು ದೊರೆಯಲಿಲ್ಲ. ಏನೂರು ಮಾತ್ರ ದೊರತುದು. ಎಕ್ಕಾದ್ದು ಸಾಯಂಕಾಲಕ್ಕೆ ತಂದು ಕೊಡುವೆನು ಚಿತ್ತಕ್ಕೆ ಆಯಾಸ ಕಲಸಬಾರದು. ಇದರ ಕ್ರಯದ ಹಣವನ್ನು ತಮ್ಮ ಮಿತ್ರರಾದ ಕಾಲವರ್ಮನವರು ನಿನ್ನೆಯದಿನವೇ ತಂದು ಕೊಟ್ಟಿಹರು ಅಂಗಡಿಯೊಳು ವ್ಯಾಪಾರಕ್ಕಾಗಿ ಅನೇಕಜನ ಮನುಷ್ಯರು ಬಂದು ಕಾದುಕೊಂಡಿರುವರು ಸಾವಕಾಶವಾಗಿ ಬಂದುಮಾತಾಡುತ್ತೇನೆ ಅಪ್ಪಣೆಯಾದರೆಹೊರಡುವೆನೆಂದಾವರ್ತಕಂ ಹೊರಟು ಹೋದನು, ಆತನಿಂದ ಕೊಡಲ್ಪಟ್ಟ ಭಂಗಾರದನಾಣ್ಯದ ಚೀಲವಂ

ಬಂದು ಕೈಯೊಳು ಪಿಡಿದುಕೊಂಡು ಬರುತ್ತಾ ಹೀಗೆಂದು ಯೋಚಿಸುವನು. ನಾನೀ ಪಟ್ಟಣಕ್ಕೆ ಹೊಸಬನಾಗಿ ಬಂದಿದ್ದೇನೆ, ಬಹುಕಾಲಮಾಗಿ ಈ ಊರೊಳಿದ್ದು ಪರಿಚಯಸ್ಥನಾದವನಂತೆ ಯೆಲ್ಲರೂಮಾತಾಡಿಸುವರು, ಮತ್ತು ಕೆಲವರು, ಒಹು ಘನವನ್ನು ಹೊಂದಿದವನಂತೆ ಮರ್ಯಾದಿಸುವರು, ಇನ್ನೂ ಕೆಲವರು, ನನ್ನ ತಾಜೇದಾರರಂತೆನಿಂತು ಮರ್ಯಾದೆಯಂ ಮಾಡುತ್ತಿರುವರು. ತಮ್ಮಸಮೀಪಬಾಂಧವನೆಂದು ಕೆಲವರು, ಪರಮಾಪ್ತರಾದವರಂತೆ ಹಲವರೂ ನಿಂತು ಮಾತಾಡಿಸುತ್ತಿರುವರು. ಕೆಲವರ್ಕೆತಂದು ನಾನೇನೋ ದೊಡ್ಡ ಸೈನ್ಯಾಧಿಪತಿಯೆಂದು, ತಮ್ಮ ಕಷ್ಟಂಗಳಂ ಹೇಳಿಕೊಂಡು ತಮ್ಮ ಜೀವನಂಗಳಂ ಹೆಚ್ಚಿಸಿಕೊಡಬೇಕೆಂದು ಪ್ರಾರ್ಥಿಸುತ್ತಾರೆ. ನಾನೇ ಹೇಳಿದ್ದೇನೆಂದು ಸೈನ್ಯಾಧಿಪತಿಯ ಉದ್ಯೋಗದ ಕವಚಮಂ ಹೊಲದು ತಂದು ಒರ್ವಂ ತೊಡಿಸಿ ಹೋದನು. ಮತ್ತೊಬ್ಬನು ಚಿನ್ನದನಾಣ್ಯಮಂತಂದುಬಲಾತ್ಕರಿಸಿ ಕೊಟ್ಟುಹೋದನು. ಮತ್ತೊಬ್ಬನು ಕತ್ತಿಯಂ ತಂದಿತ್ತನು. ಈ ಜನರ್ಯಾರೂ ಇದರ ಬೆಲೆಯನ್ನೇ ಕೇಳಿದವರಾಗಲಿಲ್ಲ. ಇದೇ ನೀದೇಶದ ಮರ್ಯಾದೆಯೋ ಅಲ್ಲದೆ, ನಾನೇನೋ ಅಧಿಕಾರಿಯಾದವನೆಂದು ಭಾವಿಸಿ, ಇಂತುಪಚರಿಸುವರೋ, ಇದು ಯಾವದೂ ಅಲ್ಲದೆ ಸ್ವಪ್ನಾವಸ್ಥೆಯೋ, ಯಾವದೂ ಗೊತ್ತಾಗದು. ಇದೂ ಅಲ್ಲದೆ ಇಬ್ಬರು ಹೆಂಗಸರು ಬಂದು ಆವರೊಳೊರ್ವಳು ತನ್ನ ಗಂಡನೆಂತಲೂ ಮತ್ತೊರ್ವಳು ಭಾವನೆಂತಲೂ. ಹಿಡಿದುಕೊಂಡು ಹೋಗಿ ಬಲಾತ್ಕಾರದಿಂದ ಮನೆಯಂ ಹೊಗಿಸಿ ಭೋಜನಾದಿಗಳಂ ಮಾಡಿಸಿದರು, ಅಲ್ಲದೆ ಗಂಡನೆಂದು ಭಾವಿಸಿದ್ದವಳು ತನ್ನನ್ನು ಬೆರತು ರತಿಸುಖಮಂ ತಾಳುವಂತೆ ಬಲಾತ್ಕರಿಸಿದಳು. ಮತ್ತಿಬ್ಬರು ಸುಂದರಿಯರ್ಕೆತಂದು ತಮ್ಮ ಪರಮಾಪ್ತನಂತೆ ಔತನಕ್ಕೆ ಬಲಾತ್ಕರಿಸಿದರು. ಇವರುಗಳಂ ಪ್ರತ್ಯಕ್ಷಮಾಗಿಯೇ ನೋಡುತ್ತಿರವೆನಲ್ಲದೆ ಭ್ರಾಂತಿಯಿಲ್ಲವು, ಇವುಗಳನ್ನೆಲ್ಲಮಂ ನೋಡಿದರೆ ಈ ಊರೊಳಿರುವದೇ ಪ್ರಯಾಸವಾಗಿ ತೋರುವದು, ಕಳುಹಿಸಿದ ಸೇವಕನು ಇಷ್ಟು ಹೊತ್ತಾದರೂ ಹಡಗವು ಹೊರಡುವದಂ ಗೊತ್ತುಮಾಡಿಕೊಂಡು ಬರಲಿಲ್ಲ ಎಂದು ಯೋಚಿಸುತ್ತಾ ಅಲ್ಲಲ್ಲಿ ಆ ಸೇವಕನನ್ನು ಹುಡುಕುತ್ತಾ ಬರುತ್ತಿದ್ದನು.

ಅತ್ತಲಾ ಮಣಿಪುರದ ಜ್ಯೇಷ್ಠಭುದನ ಸುಂದರಂ ಭೋಜನವಂ ಮಾಡಿ, ಆ ಮನೆಯ ಯಜಮಾನನೊಂದಿಗೆ ಹಸ್ತಕಂಕಣಗಳಂ ತಂದುಕೊಡುವಂತೆ ಹೇಳಿ ಹೊರಟವನು, ಶೀಲವಂತನೆಂಬ ಸ್ವರ್ಣಕಾರನ ಮನೆಗಾಗಿ ಮತ್ತೊಂದು ಮಾರ್ಗದೊಳು ಹೊರಟುಹೋದನು. ಶೀಲವಂತನೆಂಬ ಆಕ್ಕಸಾಲಿಗರವನು ಕೊಡಬೇಕಾಗಿದ್ದ ಸಾಲಕ್ಕಾಗಿ ಕೇಳಲು ಬಂದವನು, ಆಯ್ಯಾ ಶೀಲವಂತನೇ! ನೀನು ಕೊಡಬೇಕಾದ್ದ ಹಣವು ಸಮಯಕ್ಕೆ ಉಪಯೋಗಿಸುವದೆಂದು ನಿನ್ನಮೇಲೆಯೇ ಬಟ್ಟಿದ್ದೆನಷ್ಟೆ ಈಗ ನನಗೆ ಸಂಭವಿಸಿರುವ ಸಮಯಮೆಂಥಾದ್ದೆನ್ನುವಿಯೋ ? ನಮ್ಮ ಮನೆಯವರೆಲ್ಲರೂ ಪ್ರಸ್ತಕ್ಕಾಗಿ ನೀಲವತೀಪಟ್ಟಣಕ್ಕೆ ಹೊರಟುಹೋದರು, ಈ ಊರೊಳು ಕೆಲವಾಳರ

ಣಗಳು ಬೇಕಾಗಿ, ನಾನೂ ನನ್ನಮಗನೂ ನಿಂತೆವು. ಈ ದಿನದೊಳು ಕಾರಣಾಂತರದಿಂದ ನನ್ನ ಮಗನಿಗೆ ರಾಜಸ್ಥಾನದಲ್ಲಿ ನಾಲ್ನೂರು ವರಹಂಗಳಂ ಅಪರಾಧ ಮಾಗಿ ಕೊಡುವಂತೆ ದಂಡನೆಯಂ ವಿಧಿಸಿದ್ದಾರೆ. ಅದಕ್ಕೆ ನಾಲ್ಕು ಗಳಿಗೆ ಅವಧಿಯನ್ನೂ ಕೊಟ್ಟಿರುವರು, ಈ ಕಾಲದೊಳಗಾಗಿಯೇ ಅಪರಾಧ ದ್ರವ್ಯಮಂ ಕೊಡದಿದ್ದರೆ ಜಂಡಶಾಸನವಾದ ರಾಯಂ ಮತ್ತೇನೆಂದಾಜ್ಞಾಪಿಸುವನೋ ಎಂದು ಭಯಗೊಂಡಿರುವೆನಾಗಿ ನೀಂ ಕೊಡಬೇಕಾದ ದ್ರವ್ಯವನ್ನೀಕ್ಷಣವೇ ಕೊಟ್ಟರೆ ಬಹು ಪ್ರಯೋಜನಮಾಗಿರುವದು ಎಂದೊರೆಯಲು, ಆ ಸ್ವರ್ಣಕಾರಕಂ ಅಯ್ಯಾ ವರ್ತಕರೇ ನಿಮ್ಮ ಹಣಕ್ಕಾಗಿ ಒಬ್ಬ ದೊಡ್ಡಮನುಷ್ಯರಲ್ಲಿಆಭರಣಮಂ ಮಾಡಿಕೊಟ್ಟುಆದರ ಮೌಲ್ಯಮಂ ಅವರಮೇಲೆಯೇ ಪಟ್ಟಿರುವೆನು, ಈದಿನ ಅವರು ಹಣಮಂ ತೆಗೆದು ಕೊಂಡುಯೋಗುವಂತೆ ಬಲಾತ್ಕರಿಸಿದರು. ನಿಮಗಾಗಿಯೇ ಪಟ್ಟುಬಂದೆನು. ನನ್ನ ಜೊತೆಯೊಳೇ ಬಂದರೇ ಹಾಗೆಯೇ ಕೊಡಿಸುವೆನು, ತೆಗೆದುಕೊಂಡು ಹೋಗುವರಾಗಿ ಎಂದು ಆ ವ್ಯಾಪಾರಿಯನ್ನೊಡಕೊಂಡು ಹೊರಟು ಬರುತ್ತಾ ದಾರಿಯೊಳು ಆ ಜ್ಯೇಷ್ಠಮದನಸುಂದರನನ್ನು ನೋಡಿ ಬಳಿಗ್ಕೆತಂದು ಸ್ವಾಮಿ ಪೂಜ್ಯರೇ! ನಾನು ಮಾಡಿಕೊಟ್ಟ ಹಸ್ತಕಂಕಣಂಗಳಂ ತಮ್ಮಕ್ಕೆಗೆ ಕೊಟ್ಟಾಗಲೇ ಅದರ ಮೌಲ್ಯಮಂ ತೆಗೆದು ಕೊಳ್ಳುವಂತೆ ತಾವು ಬಲಾತ್ಕರಿಸಿದಿರಿ. ಈ ದೊಡ್ಡಮನುಷ್ಯರಿಗೆ ಕೊಡುವದಕ್ಕಾಗಿಯೇ ತಮ್ಮಲ್ಲಿಯೇ ಇರಲಿ ಎಂದು ಹೇಳಿದ್ದೆನು. ಈಗಲೇನೋ ಈ ದೊಡ್ಡಮನುಷ್ಯರಿಗೆ ಬಹು ಅವಶ್ಯಮಾಗಿರುವ್ರದೆಂದು ಬಂದಿರುವರು. ಆ ಮೌಲ್ಯಮಂ ಕೊಡಬೇಕೆಂದು ತಮ್ಮುಂ ಕೇಳುವದಕ್ಕಾಗಿ ತಮ್ಮನ್ನೇ ಹುಡುಕುತ್ತಾ ಬಂದೆನೆನಲುಆಮದನಸುಂದರಂ ಎಲ್ಲೆ ಶೀಲವಂತನೇ! ಸ್ವಲ್ಪಕಾಲದ ಒಳಗಾಗಿಯೇ ಆಭರಣಮಂ ತರುವಂತೆ ಹೋದವನು ಇಷ್ಟುಹೊತ್ತಾದರೂ ಬಾರದೆ ಹೋಗಲು ನಿನ್ನನ್ನೇ ನಾನೂ ಹುಡುಕುತ್ತಾ ಬಂದೆನು ಸಮಯಕ್ಕೆ ತಂದುಕೊಡುತ್ತಿ ಎಂದು ನಂಬಿದ್ದೆನು. ಹೀಗೆ ಮಾಡುವದು ಯುಕ್ತಮಲ್ಲ, ಒಪ್ಪಿಯದು ಈಗಲಾದರೂ ಕೊಡು ದೊಡ್ಡಮನುಷ್ಯರಿಗೆ ಮಾತುಕೊಟ್ಟು ಬಂದಿರುವೆನು. ಅವರಲ್ಲಿ ನನ್ನ ಮಾತು ಸುಳ್ಳಾಗದಂತೆ ಮಾಡುವೆನು ಎನಲು ಏನ್ರೆ ದೊಡ್ಡಮನುಷ್ಯರೆ, ಇದಕ್ಕೆ ಸ್ವಲ್ಪಕಾಲ ಮುಂಚಿತ ಮಾಗಿಯೇ ತಮ್ಮೊಡವೆಯಂ ತಮಗೆ ತಂದುಕೊಟ್ಟೆನು. ಆಗಲೇ ಹಣವಂ ತೆಗೆದು ಕೊಂಡು ಹೋಗುವಂತೆ ತಾವು ಬಲಾತ್ಕರಿಸಲಿಲ್ಲವೆ? ಈಗಬೇಡಿ, ಮತ್ತೊಂದು ವೇಳೆ ಸಮಯವಿದ್ದಾಗ ತೆಗೆದುಕೊಂಡು ಹೋಗುವದಾಗಿ ನಾನು ಹೊರಟುಹೋಗಲಿಲ್ಲವೆ? ಇದೇನು ಹೀಗೆನುಡಿಯುವಿರಿ ಹಾಸ್ಯಮಾಡಲು ಇದು ಸಮಯವಲ್ಲ ಈ ದೊಡ್ಡಮನುಷ್ಯರಿಗೆ ಹಣವು ಬಹಳ ಅವಶ್ಯಕವಾಗಿರುವದು, ಜಾಗ್ರತೆಯಾಗಿ ಕೊಟ್ಟುಕಳುಹಿಸಬೇಕೆನಲು, ಆ ಜ್ಯೇಷ್ಠಮದನ ಸುಂದರನು ಏನ್ರೆ ದೊಡ್ಡಮನುಷ್ಯನೇ! ಆ ಆಭರಣವಂ ಮಾಡಬೇಕಾದದ್ದು ಇನ್ನೂ ಸ್ವಲ್ಪ ಸಾವಕಾಶ, ತಾವ್ಭೋಜನವಂ

ಮಾಡುವ ಕಾಲಕ್ಕೆ ತರುವಂತೆ ಹೇಳಿಹೋದೆ. ಈವರಿಗೂ ತಾರದೇ ಈಗಬಂದು ಹೀಗೆ ಹಾಸ್ಯದ ಮಾತುಗಳನ್ನಾಡುತ್ತೀಯೆ ಎಲ್ಲಿ ಆಭರಣವಂ ಕೊಡು ನೋಡಿ ಅನಂತರ ಸರಿಯಾಗಿದ್ದ ಪಕ್ಷಕ್ಕೆ ಹಣವಂ ತರಿಸಿಕೊಡುವೆನು ಎನಲಾ ಅಕ್ಕಸಾಲಿಗಂ ಇದೇನುಸ್ವಾಮಿ ಹೀಗೆ ಮಾತಾಡುವಿರಿ ? ಕೈಗೆ ತಂದುಕೊಟ್ಟ ಒಡವೆಯನ್ನೇ ಇಲ್ಲವೆಂದು ತಿರಸ್ಕರಿಸುತ್ತಿರುವಿರಲ್ಲಾ ದೊಡ್ಡಮನುಷ್ಯರಾದ ತಾವೇ ಹೀಗೆಂದು ಸಟೆಮಾಡಿಸಿದರೆ ಮಾಡುವನೇನು ? ಖಂಡಿತವಾಗಿ ಹಣವಂ ಕೊಡಬೇಕು. ಈ ದೊಡ್ಡಮನುಷ್ಯರ ಕಾರ್ಯವು ಭಂಗವಾಗುವದು, ಎಂದೊರೆಯುತ್ತಿರುವಪನಂಕುರಿತು ಎಲ್ಲೈ ಮೂರ್ಖನೇ! ಆಭರಣಮಂ ತಂದುಕೊಡದೇನೇ ಹೀಗೆಗದ್ದಲಮಾಡುತ್ತೀಯೆ, ನನ್ನ ಕೈಗೆಆಭರಣಮಂ ತಂದುಕೊಟ್ಟಹೊರತು ಹಣಮಂಕೊಡಲಾರೆನು ನಿನಗೋಸ್ಕರನಾನಂ ಸುಳ್ಳುಗಾರನಾಗಬೇಕಾಯ್ತು, ಎಂದು ಅವರೀರ್ವರೂ ವಾದಿಸುತ್ತಿರುವದಂ ಕಂಡಾವರ್ತಕಂ ಏನೈ ಸ್ವರ್ಣಕಾರನೇ ನಿನ್ನನ್ನು ನಂಬಿ ಬಂದುದಕೆ ನನ್ನಕಾರ್ಯ ಹಾನಿಯಾಗುವದಲ್ಲಾ ದೊಡ್ಡಮನುಷ್ಯನೆಂತಲೂ ಸಮಯಕ್ಕೆ ಬರುವದೆಂತಲೂ, ನಿನ್ನ ಮೇಲೆ ಬಟ್ಟುದುದಕ್ಕೆ ಕಡೆಗೆ ಮೋಸವಾಯಿತು ಈ ಕ್ಷಣವೇ ಕೊಡಬೇಕು. ತಪ್ಪಿದರೆ ರಾಜಸೇವಕನ ವಶಕ್ಕೆ ಕೊಡಿಸಿ ನಿರ್ಬಂಧದೊಳಿರಿಸುವೆನೆನಲು ಆ ಸ್ವರ್ಣಕಾರಕಂ ಆ ಮದನಸುಂದರನನ್ನು ಕುರಿತು, ಎಲ್ಲೈ ದೊಡ್ಡಮನುಷ್ಯರೇ ! ನೀವೀಗ ಹಣಮಂ ಕೊಡದಿದ್ದರೆ ನನ್ನಗತಿಯೇ ನಿಮಗೂ ಬರುವದರಲ್ಲಿ ಸಂದೇಹವಿಲ್ಲ. ನಾನು ಸಟೆಯಂ ಹೇಳುವೆನೆಂದು ನೀವರಿಯಿರಾ ? ತೆಗದುಕೊಂಡದ್ದಂ ಮರೆತಿರ ಬಹುದು ಬೇಗನೆ ಹಣಮಂ ಕೊಡಿಸಿರೆನಲು ಛೀ ಸುಳ್ಳುಗಾರನೇ ! ಸಟೆಯಂ ಬೊಗಳಬೇಡ ಹೋಗೆಂದು ಗದರುತ್ತಾ ಮಾತಾಡಲು ಸಮೀಪದೊಳಿದ್ದ ರಾಜನ್ಯಾಯಸ್ಥಾನಕ್ಕೆ ಹೋಗಿ ರಾಜದೂತನಂ ಕರೆದು ಶೀಲವಂತನಂ ಆತನ ವಶವಂಮಾಡೆ ಅಯ್ಯಾ ! ನಿಮ್ಮದೆಸೆಯಿಂದ ನನಗೀಯವಸ್ಥೆ ಬಂದುದು, ನೀವೂ ನನ್ನ ಜೊತೆಯೊಳು ಬರಬೇಕು ಇಷ್ಟವಿದ್ದರೆ ಬನ್ನಿ ಇಲ್ಲವಾದರೆ ಹಣಮಂ ಕೊಟ್ಟು ಮಾನಿತರಾಗಿ ಎನ್ನಲು, ಛೀ ಬುದ್ಧಿಹೀನನೇ ನೀನೇಂ ಮಾಡಬಲ್ಲೆ ? ಹೋಗೆನಲು, ಶೀಲವಂತಂ ಮಣಿದ್ವೀಪವು ಅರಾಜಕಮಾದುದಲ್ಲ, ಇಲ್ಲಿನ ಅರಸನು ಪರಮ ನೀತಿವಂತನು. ನಿಷ್ಪಕ್ಷಪಾತಿಯು ಆಗಿದ್ದಾನೆ ಎಂದು ಹೇಳಿ, ಆಯ್ಯಾ ರಾಜಭೃತ್ಯನೇ ಈ ದೊಡ್ಡಮನುಷ್ಯರು ನನ್ನಲ್ಲಿ ರತ್ನಮಯಮಾದ ಹಸ್ತಕಂಕಣಂಗಳಂ ತೆಗೆದು ಕೊಂಡು ಹಣಮಂ ಕೊಡದೆ ತಿರಸ್ಕರಿಸುತ್ತಾರೆ. ಇವರನ್ನು ರಾಜಾಸ್ಥಾನಕ್ಕೆ ಕರೆದೊಯ್ಯಬೇಕಾದ್ದರಿಂದ ನನ್ನಂತೆಯೇ ಇವರೂ ಬರುವರಾಗಬೇಕೆನಲು, ಆ ರಾಜಸೇವಕನು ಮದನಸುಂದರನನ್ನು ಕುರಿತು, ಸ್ವಾಮಿ ನೀವೂ ನಿರ್ಬಂಧದೊಳಿರಬೇಕೆನಲು ಆಯ್ಯಾ ರಾಜಸೇವಕನೇ ಈ ಮೂರ್ಖನಿಗೆ ಅನ್ಯಾಯಮಾಗಿ ತೆರಬೇಕಾದ ಹಣಮಂ ನಿನ್ನಲ್ಲಿ ಕೊಡಿಸುವವರಿಗೂ ಅಂತೆಯೇ ಆಗಲೆಂದೊರೆದು, ಶೀಲ

ವಂತನಂ ಕುರಿತು ಎಲಾ ದುರ್ಮಾರ್ಗನಾದ ನರಾಧಮನೇ ಮನುಷ್ಯರ ಯೋಗ್ಯತೆಯಂ ಕಾಣದೆ ನಿಷ್ಕಾರಣಮಾಗಿ ಮಾನಹಾನಿಯಂ ಮಾಡಿಸುವಿಯಾ ? ನೀನಿಂತು ಮಾಡಿದ್ದಕ್ಕೆ ದೇವರೇ ನಿನಗೆ ಶಿಕ್ಷಕನೆಂದು ತನ್ನ ಕಡೆಯವರಾರೂ ಇಲ್ಲವೆಂದು ಯೋಚಿಸಿರುವನಿತರೊಳು ಬ್ರಹ್ಮದೇಶದ ಕುಶಲತಂತ್ರನು ತನ್ನ ಯಜಮಾನನಂ ಹುಡುಕುತ್ತ ಬರುತ್ತಿದ್ದವನು ದೂರದೊಳೀ ಮಣಿದ್ವೀಪದ ಮದನಸುಂದರನಂ ಕಂಡು ಇದೇನು ನನ್ನ ಯಜಮಾನನು ರಾಜಭಟನ ವಶವರ್ತಿಯಾಗಿರುವನು, ಕಾರಣವೇನೋ ತಿಳಿಯದಲ್ಲಾ ಎಂದು ಚಿಂತಿಸುತ್ತಾ ಸಮೀಪಕ್ಕೆ ಬರಲು ಅವನಂ ಕಾಣುತ್ತಾ ಮಣಿದ್ವೀಪದ ಮದನಸುಂದರಂ ಎಲಾ ದುರುಳನೇ ಎಲ್ಲಿಹೋಗಿದ್ದೆ ? ನಾನಿಂತು ರಾಜಭಟನ ವಶವರ್ತಿಯಾಗಿರುವೆನು, ಇವನಿಗೆ ದಂಡವಾಗಿ ಹಣಮಂ ತೆರಬೇಕಾಗಿ ಇರುವದರಿಂದ ಈ ಬೀಗದಕ್ಕೆಗಳಂ ಮನೆಗೆ ತೆಗೆದುಕೊಂಡುಹೋಗಿ ನನ್ನ ಕ್ಕೈಪೆಟ್ಟಿಗೆಯೊಳು ಹಣದ ಚೀಲಮಿಹುದು, ನನ್ನ ಕಾಂತೆಯೊಳರುಹಿ ಅದಂ ಬೇಗನೆ ತರುವವನಾಗೆಂದು ಬೀಗದಕ್ಕೆಗಳಂ ಕೊಡಲು ಆ ಬ್ರಹ್ಮದೇಶದ ಕುಶಲತಂತ್ರಂ ನಸ್ಸಂ ಮನೆಗೆಹೋಗಿ ಹಣಮಂ ತರುವಂತೆ ಈತಂ ಹೇಳುವನು, ಇ ಊರೊಳು ನಮಗೆ ಮನೆಯಲ್ಲಿಯದು ? ನಾವು ಪರದೇಶದಿಂದ ಈದಿನವೇ ಬಂದೆವಲ್ಲಾ ಎಂದು ಯೋಚಿಸಿ ಒಳ್ಳೆಯದು ನಾವು ಭೋಜನಮಾಡಿದ ಮನೆ ಇರಬಹುದು, ಅಲ್ಲಿಗೆ ಹೋಗಿ ತರುವಂತೆ ಹೇಳಿರಬಾರದೆಂದು ಯೋಚಿಸಿಕೊಂಡು ಆ ಮನೆಗೆ ಹೋಗಿ ಆ ಮನೆಯ ಯಜಮಾನಿಯಾದ ಆನಂದವಲ್ಲಿಯಂ ಕಂಡು ಅಮ್ಮಾ ಯಜಮಾನರು ಹಣದ ಬಾಕಿಗಾಗಿ ಡಾರಿಯೊಳು ರಾಜಭೃತ್ಯನಿಂದ ತಪೆಯಲ್ಪಟ್ಟಿರುವರು ಅವರಿಗೆ ತೆರಬೇಕಾದ ದಂಡಕ್ಕಾಗಿ ಈ ಬೀಗದಕ್ಕೆಗಳಂ ತಪ್ಪುಮಕ್ಕೆಗೆ ಕೊಟ್ಟು, ಕ್ಕೈಪೆಟ್ಟಿಗೆಯೊಳಗಣ ಹಣದ ಚೀಲಮಂ ತರುವಂತೆ ಹೇಳಿ ಕಳುಹಿದರೆಂದು ಬೀಗದಕ್ಕೆಗಳಂ ಆಕೆಯ ಕ್ಕೈಗೆ ಕೊಡಲಾ ಅಂಗನಾಮಣಿಯು ಅಂತೆಯೇ ಹಣದ ಚೀಲಮಂ ತೆಗೆದುಕೊಟ್ಟು ತನ್ನ ಯಜಮಾನನಿರುವ ಸ್ಥಳವಂ ಕೇಳಿ ತಿಳಿದುಕೊಂಡು ಅವನಂ ಕಳುಹಲು ಆ ಕಿಂಕರಂ ತನ್ನ ಸ್ವಂತ ಯಜಮಾನನಾದ ಬ್ರಹ್ಮದೇಶದ ಮದನಸುಂದರಂ ತನಗಭಿಮುಖನಾಗಿ ಬರುತ್ತಿರುವದಂ ಕಂಡು ಮಣಿದ್ವೀಪದ ಮದನಸುಂದರನೆಂದು ಭ್ರಾಂತನಾಗಿ ಸಮೀಪಮಂ ಸಾರಿ, ಸ್ವಾಮಿ ಯಜಮಾನರೇ ತಮ್ಮ ಆಜ್ಞಾನುಸಾರಮಾಗಿ ಹಣದ ಚೀಲಮಂ ತಂದಿರುವೆನು, ಎಂದು ಕ್ಕೈಗೆ ಕೊಡಲು ಎಲಾ ಪರಿಹಾಸಕನೇ ! ನಾಂ ಹೇಳಿದ್ದ ಕೆಲಸಮಂ ಬಿಟ್ಟು ಇದೇಂ ಕೆಲಸಮಂ ಮಾಡಿದೆ ಎನಲು ಸ್ವಾಮಿ ! ನನ್ನೊಡನೆ ಹಣದ ಚೀಲವಂ ತರುವಂತೆ ಹೇಳಿ ಕಳುಹಿಸಲಿಲ್ಲವೇ ? ರಾಜನ ಭೃತ್ಯನ ನಿರ್ಬಂಧದೊಳಿದ್ದವರು ಹೇಗೆ ಹಣವಂ ಕೊಡದೆ ತಪ್ಪಿಸಿಕೊಂಡು ಬಂದಿರಿ ? ರಾಜಭೃತ್ಯರಿಗೆ ಮೋಸಮಂ ಮಾಡಿ ಹೀಗೆ ತಪ್ಪಿಸಿಕೊಂಡು ಬರಬಾರದು. ಪುನಹ ಅವರು ಕಂಡರೆ ಸುಮ್ಮನೆ ಬಿಡುವರೆ ? ಎಂದು ಪ್ರತಿಯಂ ನುಡಿ

ಯಲು ಎಲ್ಲೆ ಕಿಂಕರ! ನಿನ್ನ ರೀತಿಯು ಎಂದಿಗೂ ಒಂದೇಯಾಯ್ತು. ಪ್ರಯಾಣ ಕ್ಕಾಗಿ ಹಡಗವಂ ಗೊತ್ತುಮಾಡಿಕೊಂಡು ಬರುವಂತೆ ಹೇಳಿ ಕಳುಹಿದೆನಲ್ಲಾ, ಅದನ್ನೇಂ ಮರತೆಯೋ, ನೀನೀ ಊರೊಳೇ ಇರಬೇಕೆಂದು ಯೋಚಿಸಿ ಹೀಗೆಮಾಡು ವಿಯೋ ನಿನ್ನ ಮನೋಗತವೇನು? ನಾನಾದರೋ ಮಹದ್ವಿಪಜ್ಜನಕಮಾದೀ ಪಟ್ಟಣದೊಳು ಒಂದು ನಿಮಿಷಮಾದರೂ ಇರಬಾರದೆಂದು ನಿಶ್ಚಯಗೊಂಡಿಹೆನು, ಈ ಪುರದ ನಾರಿಯರಾದರೋ ಘೋರತರಮಾದ ಪಿಶಾಚಕೃತ್ಯಮುಳ್ಳವರು, ಪುರುಷ ರಾದರೋ ಹೇಳಲು ಚಾರದ ಜರಿತರು ಎಂದೆನಲು, ಸ್ವಾಮಿಾ ನೀವು ನನ್ನಕ್ಕೆಗೆ ಬೀಗದಕ್ಕೆಗಳಂ ಕೊಟ್ಟು ಹಣಮಂ ತರುವಂತೆ ಹೇಳುವಕಾಲದಲ್ಲಿ ಆ ನಾವೆಯು ಹೊರಡುವ ಸಮಾಚಾರಮಂ ತನ್ಮೊಳು ವಿಜ್ಞಾಪನೆಯಂ ಮಾಡಿದ್ದೆನು. ತಾವಾ ಗಲೇ ಪ್ರಯಾಣಸನ್ನದ್ಧರಾಗಿದ್ದರೆ ಇಷ್ಟುಹೊತ್ತಿಗೆ ರೇವಿನಬಳಿಯಂ ಸೇರುತ್ತಿ ದ್ದೆವು, ತಾವು ನೇಮಿಸಿದ ಕೆಲಸವನ್ನೇ ಮರೆತು ನನ್ನನ್ನೇ ಹಾಸ್ಯಗಾರನೆಂದು ಎಗತಾಳಿಯಂ ಮಾಡುತ್ತೀರಿ ಎಂದೀರ್ವರೂ ಮಾತನಾಡುತ್ತಾ ಆ ಮುಂದಯಾ ನೆಯ ಮನೆಯಮಾರ್ಗದೊಳು ಬರುತ್ತಿರೆ, ತನ್ನ ಕ್ಕೆಯಿಂ ರತ್ನಹಾರಮಂ ಕೊಂಡೊ ಯ್ದವಂ ಬದಲಾಗಿ ಆಭರಣಮಂ ತಂದುಕೊಡಲಿಲ್ಲವೆಂದು ಜ್ಯೇಷ್ಠಮದನಸುಂದರನಂ ನಿರೀಕ್ಷಿಸುತ್ತಾ ಹೊತ್ತಾದರೂ ಬರಲಿಲ್ಲವೆಂದು ಕಾರಣಮಂ ಯೋಚಿಸುತ್ತಾ ತಲ ಬಾಗಿಲೊಳು ನಿಂತಿರ್ದಾಕೆಯ ಗಂಡನಾದ ನೀತಿಮರುತ್ತನೆಂಬುವ ಪರಿಹಾಸಕರಮಾಗಿ ಮಾತಾಡಿಕೊಂಡು ತನ್ನ ಮನೆಯ ಮುಂಗಡೆಯಲ್ಲಿ ಹೋಗುತ್ತಿರುವ ಈರ್ವರಂಕಂಡು ಇದೇಂ ನಾನೀಯೆಡೆ ನಿಂತಿದ್ದರೂ ಈ ದೊಡ್ಡಮನುಷ್ಯನು ಮಾತಾಡದೆ ಹೋಗು ತ್ತಾನೆ. ಕ್ಕೆಗೆಕೊಟ್ಟ ಒಡವೆಯನ್ನು ತೆಗೆದುಕೊಂಡವಂ ಬದಲು ಒಡವೆಯಂ ತಂದು ಕೊಡಲಿಲ್ಲ ಕಾರಣಮೇನೋ ತಿಳಿಯುವೆನೆಂದು, ಎಲ್ಲೆ ಮಿತ್ರನೇ! ಮಾತಾಡದೇ ಹೋಗುವಿ ಏನ್ರೈ ಎಂದು ಕೂಗುತ್ತಾ ಸಮೀಪಕ್ಕೆ ಬರಲು ಆ ಕನಿಷ್ಠಕುಶಲತಂತ್ರಂ ತನ್ನ ಯಜಮಾನನನ್ನು ಕುರಿತು, ಸ್ವಾಮಿಾ! ಇತ್ತನೋಳ್ಪುದು ನಾವೇನೋ ಈತನೊಳು ಪದಾರ್ಥಮಂ ಕೊಂಡು ಅದಂ ಕೊಡದೆ ಮೋಸಗೊಳಿಸಿದವರಂತೆ ಅಂಗಜೇಷ್ಟೆಯಂ ತೋರುತ್ತಾ ಈ ಮನೆಯಿಂದ ಬರುತ್ತಿರುವಂ. ಇದೇನೋ ಪ್ರಮಾದಂ ಬಂದಂತೆ ತೋರುತ್ತಿರುವದು. ಎಂದು ಮಾತಾಡಿಕೊಳ್ಳುತ್ತಿರುವರಂ ನೋಡಿ ಎಲ್ಲೆ ನಿಮ್ಮ ಪರಸ್ಪರ ಹಾಸ್ಯೋಕ್ತಿಗಳು ಸಾಕು, ನಾಂ ನಿಂತಿದ್ದರೂ ನೀವು ನೋಡಿ ನೋಡದವರಂತೆ ಹೋಗಬಹುದೆ? ಆಭರಣಮಂ ತೆಗದುಕೊಂಡು ಬದಲಾಗಿ ಮತ್ತೊಂ ದಂಕೊಡುವಂತೆ ಹೇಳಿ ಹೋದವರು ಈವರಿಗೂ ಬಾರದೆ ಎದುರುನೋಡುತ್ತಿದ್ದ ನನ್ನೊಳು ಮಾತಾಡದೆ ಹೋಗುತ್ತೀರಲ್ಲಾ ನನ್ನ ಕಾಂತೆಯು ಆಭರಣದ ವಿಷಯ ದಲ್ಲಿ ಅಸಮಾಧಾನಳಾಗಿದ್ದಾಳೆ, ಬೇಗನೆ ಬದಲು ಒಡವೆಯಂ ಕೊಡಿರಿ ಎಂದು ಮಾತಾಡುತ್ತಾ ಬರಲು, ಆ ಮದನಸುಂದರಂ ಆತನಾಡುತ್ತಿರುವ ಮಾತುಗಳಂಕೇಳಿ

ಇದೇನು ಮತ್ತಷ್ಟು ವಿಚಿತ್ರವಾದುದೇ ? ಎಲೈ ಕಿಂಕರನೇ ನಾನು ಮೊದಲೇ ಹೇಳಲಿಲ್ಲವೇ ಈ ಊರೊಳಿದ್ದಷ್ಟು ಹೊತ್ತೂ ಪರಂಪರೆಯಾಗಿ ತೊಂದರೆಗಳು ಬರುತ್ತಿರುವವಲ್ಲಾ, ನನ್ನ ಮಾತುಗಳಂ ಹಾಸ್ಯಕ್ಕೆ ಗುರಿಮಾಡಿದಿಯೇ ಈಗಿದಕ್ಕೇಂ ಹೇಳುವೆ ಎಂದು ಭೃತ್ಯನೊಳು ಮಾತಾಡುತ್ತಾ ಇರಲು, ಆ ನೀತಿಮರುತ್ತನು ಏನೈ ಮಿತ್ರನೆ! ಈಪರಿ ಹಾಸ್ಯೋಕ್ತಿಗಳಂ ಬಿಡು ಎಲ್ಲಿ ಆಭರಣಮಂ ಕೊಡು ಎನಲು, ಆಯ್ಯಾ ನಿಮ್ಮ ಮುಖವನ್ನು ನಾನು ಇದೇ ಪ್ರಥಮತಃ ನೋಡಿದ್ದು, ನಾನೀದೇಶದವನೇ ಅಲ್ಲ. ನಿಮ್ಮಿಂದ ಯಾವ ಒಡವೆಯಂ ನಾಂ ಹೊಂದುವದಕ್ಕೆ ಕಾರಣವೂ ಇಲ್ಲವು, ಅಪರಿಜಯಸ್ಥನಾದ ನನ್ನ ಕೈಯಲ್ಲಿ ಕೊಡುವದಕ್ಕೆ ಕಾರಣವೂ ಇಲ್ಲವು ಎಂದು ಪ್ರತ್ಯುತ್ತರಮಂ ಕೊಡಲು ಇದೇನೈ ದೊಡ್ಡಮನುಷ್ಯರೇ! ಈದಿನ ಮದ್ಯಾಹ್ನದೊಳು ನಾವೀರ್ವರೂ ಕುಳಿತು ಭೋಜನಮಂ ಮಾಡುತ್ತಿರಲು, ನನ್ನ ಕಂಠದೊಳಿದ್ದ ಹಾರಮಂ ನೋಡಿ ಮೋಹಿಸಿ ಅದಕ್ಕೆ ಬದಲಾಗಿ ರತ್ನ ಕಂಕಣಂಗಳಂ ತಂದು ಈ ಕ್ಷಣವೇ ಕೊಡುವಂತೆ ಗೊತ್ತುಮಾಡಿಕೊಂಡು ನನ್ನ ಪತ್ನಿಯಂ ಸಮಾಧಾನಗೊಳಿಸಿ, ಹಾರಮಂ ತೆಗೆದುಕೊಂಡು ಬರಲಿಲ್ಲವೇ ? ಆ ಹಾರವೇನೋ ತಮ್ಮ ಕೊರಳೊಳಿಲ್ಲವು, ನನಗೆ ಕೊಡುತ್ತೇನೆಂದು ಹೇಳಿದ್ದ ಕೈಕಡಗಗಳಂ ಮಾತ್ರ ಕೈಗಳೊಳು ಧರಿಸಿಕೊಂಡಿರುವಿರಿ, ನೀವು ಪರಿಹಾಸ್ಯಮಂ ನನ್ನೊಳೆಂದಿಗೂ ಆಡಿದವರಲ್ಲವಲ್ಲಾ ಇದೇನಿಂತು ಈದಿನದೊಳಾಡುವಿರಿ ಇಲ್ಲಿಗೆ ಸಾಕು, ಅಸಮಾಧಾನಳಾಗಿರುವ ನನ್ನ ಪತ್ನಿಯನ್ನು ಸಮಾಧಾನಗೊಳಿಸೋಣ, ಹಸ್ತಕಡಗಗಳಂ ತೆಗೆದುಕೊಡಿರೆಂದು ಕೈಗಳಿಗಿಟ್ಟುಕೊಂಡಿರ್ದ ಆ ಕಂಕಣಗಳಮೇಲೆ ಕೈಹಾಕಲು, ಕನಿಷ್ಠ ಮದನಸುಂದರನು ಏನೈ ದೊಡ್ಡಮನುಷ್ಯರೇ ! ಮೆಲ್ಲನೆ ಇಲ್ಲದ ಸಂಬಂಧಮಂ ಕಲ್ಪಿಸಿಕೊಂಡು ಸಮೀಪಕ್ಕೆ ಬಂದು ಮೆಲ್ಲನೆ ಕೈಯ್ಯೊಳಿರುವ ಆಭರಣಮಂ ಸೆಳೆಯಲುದ್ಯೋಗಿಸುವಿರಿ, ಈ ಪುರವಾಸಿಗಳಾದವರ ನಡತೆ ಹೀಗೇನೋ. ಸಾಕು ಮುಟ್ಟದಿರಿ. ಎಂದು ಮುಖಮಂ ತಿರುಗಿಸಿಕೊಂಡು ಕೋಪಮಂ ಸೂಚಿಸುತ್ತಾ ಮಾತಾಡುತ್ತಾ ಬರಲು, ಏನೈ ದೊಡ್ಡಮನುಷ್ಯನೇ ! ನಿನ್ನನೀವರಿಗೂ ಪರಮಾಪ್ತನೆಂತಲೂ, ಘನವಾದವನೆಂತಲೂ ನಂಬಿದ್ದೆನು. ನಿನ್ನೊಳಿಂಥಾ ಅಲ್ಪಗುಣಂಗಳಿರುವದಂ ನಾನರಿಯಲಿಲ್ಲ, ಒಳ್ಳೆಯದು ನನ್ನ ರತ್ನಹಾರಮಂ ಅಪಹರಿಸಿ ನೀನೇ ದೊಡ್ಡವನಾಗೆಂದುಸುರಲು, ಛೀ ಮೂರ್ಖ! ಪರಸ್ವತ್ತಂ ಅಪಹರಿಸಲೆಣಿಸುವಿಯಾ ! ದೂರ ಹೋಗೆಂದುಸುರಿ ಗದರುತ್ತಾ ಮುಂದುಹೋಗಲು, ಆ ನೀತಿಮರುತ್ತನು ಚಿಂತಿಸುತ್ತಾ ಹಿಂತಿರುಗಿ ಮನೆಮುಂಗಡೆಯೊಳು ನಿಂತು ನೋಡುತ್ತಾ ನಿಂತಿರ್ದ ತನ್ನ ಕಾಂತೆಯಂ ಕುರಿತು ಎಲೈ ಪ್ರಾಣಕಾಂತೆಯೇ ! ಈತನಂ ಬಹುಕಾಲವಾಗಿ ಸ್ನೇಹಿಸಿದ್ದಕ್ಕೆ ಇದೇ ಕಡೆಯೊಳಾದ ಫಲವು. ನೋಡಿದೆಯಾ ಎನಲು ಆಕೆಯು ಎಲೈ ಪ್ರಾಣನಾಥನೇ ! ಈತನಂ ನಾವು ಬಹುಕಾಲಮಾಗಿ ನೋಡುತ್ತಿರುವೆವು, ದೊಡ್ಡಮನುಷ್ಯನು, ಮಹಾ ಸತ್ಯಸಂಧನ

ಎಂದಿಗೂ ಸಟೆಯನ್ನಾಡುವನಲ್ಲ. ನಮ್ಮಂ ಬಹಳಮಾಗಿ ಪ್ರೀತಿಸುವವನು, ಇಂದೇ ನೋ ಹೀಗೆ ಭ್ರಾಂತನಾಗಿರುವನು. ಯೋಚಿಸಿದರೆ: ಈತನಂ ಈ ಪುರದೊಳನೇಕ ಸ್ತ್ರೀಯರು ಮೋಹಿಸಿರುವರು. ಯಾರೋ ತಮ್ಮ ವಶವಂ ಮಾಡಿಕೊಳ್ಳುವದ ಕ್ಕಾಗಿ ಮಂತ್ರವಾದದಿಂದೇನೋ ಮಾಟವಂ ಮಾಡಿಸಿದ್ದರಿಂದ ಹೀಗೆ ಭ್ರಾಂತನಾಗಿ ದ್ದಾನೆ. ಅಲ್ಲದೊಡೆ ಹೀಗಾಗುವದಕ್ಕೆ ಕಾರಣಮಿಲ್ಲ. ಈ ವಾರ್ತೆಯನ್ನು ಆತನ ಪತ್ನಿಗೆ ಹೇಳಿ ತಕ್ಕ ಚಿಕಿತ್ಸೆಯಂ ಮಾಡಿಸದೋಡೆ ಅನ್ಯಾಯಮಾಗಿ ಬಾಲಕುಟುಂ ಬವು ಕೆಡುವದೆಂದು ಯೋಚಿಸಿ, ಆಕೆಯೊಳು ಈ ಪರಿಯಂ ಹೇಳುವದಕ್ಕಾಗಿ ದಂಪ ತಿಗಳೀರ್ವರೂ ಹೊರಟುಬರುತಿರಲು ತನ್ನ ಗಂಡನಂ ಹುಡುಕಿಕೊಂಡು, ತನ್ನ ತಂಗಿ ಯೊಡನೆ ಬರುತ್ತಿರುವ ಆನಂದವಲ್ಲಿಯನ್ನು ದಾರಿಯಲ್ಲಿಯೇ ನೋಡಿ, ಎಲೈ ಸಖಿ ಆನಂದವಲ್ಲಿಯೇ! ನಿನ್ನ ಗಂಡನ ರೀತಿಗಳನೆಲ್ಲಮಂ ನೋಡಿದರೆ, ಆತನಿಗೆ ಹುಚ್ಚು ಹಿಡಿದಂತೆ ತೋರುತ್ತದೆ, ಅದಕ್ಕೆ ದೃಷ್ಟಾಂತವಾಗಿ ಮಾತನಾಡಿಸಿ ನೋಡಿದ್ದಾ ಯಿತು ಹುಚ್ಚೆಂಬುವದರಲ್ಲಿ ಸಂದೇಹಮೇ ಇಲ್ಲವು. ಉಪಾಯದಿಂದ ಮನೆಗೆಕರೆ ತಂದು ಮಂತ್ರಗಾರನಾದ ಕಾಲಕೇತುವಂ ಕರೆಯಿಸಿ ಆತನಿಂದಲೂ, ಇನ್ನೂ ಒದ್ದಿ ವಂಶರಾದವರಿಂದಲೂ ತಕ್ಕ ಚಿಕಿತ್ಸೆಯಂ ಮಾಡಿಸದೆ ಹೋದರೆ ಕೆಲಸವು ಕೆಟ್ಟು ಹೋಗುವದೆಂದು ಹೇಳಲು, ಆಕೆಯು ಬಹಳವಾಗಿ ಚಿಂತಾಕ್ರಾಂತಳಾಗಿ ಅಲ್ಲಿಂದಾ ತುರಗೊಳುತ್ತಾ ಹುಡುಕಿಕೊಂಡು ಅವರ ಜೊತೆಯೊಳು ಬರುತ್ತಾ ಇದ್ದಳು.

ಅತ್ತಲಾ ಮಣಿದ್ವೀಪದ ಮದನಸುಂದರಂ ತಾನು ರಾಜಭಟರ ನಿರ್ಬಂಧದೊಳು ಸಿಲುಕಿಕೊಂಡು ತನ್ನ ಸೇವಕಂ ಬಾರದಿರುವದಂ ಯೋಚಿಸಿ, ಅಯ್ಯಾ ರಾಜ ಭೃತ್ಯರೇ! ಈ ಸ್ವರ್ಣಕಾರನನ್ನೂ ಆತನ ಸಾಲಗಾರನನ್ನೂ ಜೊತೆಯೊಳು ನಮ್ಮ ಮನೆಯವರಿಗೂ ಕರೆದುಕೊಂಡು ಬಂದರೆ ಈಕ್ಷಣದಲ್ಲಿಯೇ ನಿಮ್ಮ ಹಣಮಂ ಕೊಟ್ಟುಬಿಡುವೆನು, ಮನೆಗೆ ಕಳುಹಿಸಿದ ಸೇವಕನೇತಕೋ ಇಷ್ಟು ಹೊತ್ತಾದರೂ ಬರಲಿಲ್ಲ. ಕಾರಣವೇನೋ ಕಾಣದು, ಎಂದೊರೆದು ಅವರಂ ಜೊತೆಗೊಂಡು ಇವರು ಬರುತ್ತಿರ್ದ ದಾರಿಯೊಳೇ ಬರುತ್ತಿರಲು ಎದುರಾಗಿ ಬರುತ್ತಿರ್ದ ಮಣಿದ್ವೀಪದ ಜ್ಯೇಷ್ಠಕುಶಲತಂತ್ರನಂ ನೋಡಿ ಇಗೋ ಈಗ ಬರುತ್ತಿರುವನು ಪ್ರಾಯಶಹ ಹಣದ ಚೀಲಮಂ ತಂದಿರಬಹುದು ಇಲ್ಲಿಯೇ ನಿಮ್ಮ ಹಣಮಂ ಕೂಟ್ಟು ಕಳುಹುವೆನೆಂದು ಹೇಳುತ್ತಿರುವಲ್ಲಿ ಆ ಕಿಂಕರಂ ಸಮೀಪಗತನಾಗಲು ಎಲೋ ಪಾಪಿಯಾದ ಕಿಂಕರನೆ! ಅತ್ಯವಸರಮಾಗಿ ನಾಂ ಕಳುಹಿದರೆ ಇಷ್ಟು ಸಾವಕಾಶಮಂ ಮಾಡಿದೆಯೋ, ನಾಂ ಹೇಳಿದ ಕಾರ್ಯಮಂ ಮಾಡಿಕೊಂಡು ಬಂದೆಯಾ ಎನಲು, ಸ್ವಾಮಿ, ಇಗೋ ತಾವು ಹೇಳಿದಂತೆ ಹುಡುಕಿ ತಂದಿರುವೆನು, ತಾವು ಹೇಳಿದ್ದ ಬೆಲೆಗೆ ಇಂಥಾದ್ದು ಬೇಗನೆ ದೊರೆಯದೇ ಹೋಗದ್ದರಿಂದಲೂ, ತಾವು ಕೊಟ್ಟ ಮೌಲ್ಯವು ಸಾಲದೇ ಹೋದದ್ದರಿಂದಲೂ ಹೊಣೆಗಾರನಂ ಹುಡುಕಿಕೊಟ್ಟು ತರುವದಕ್ಕೆ ಸಾವಕಾಶವಾಯಿ

ತೆಂದೂ, ತನ್ನ ಕೈಯಲ್ಲಿದ್ದ ನೂಲಿನ ಹಗ್ಗವಂ ಆತನಕೈಗೆ ಕೊಡಲು ಛೀ ಮೂರ್ಖನೇ! ಹಣದ ಚೀಲವಂ ತರುವಂತೆ ಕಳುಹಿದರೆ ಈ ಹಗ್ಗವಂ ತಂದೆಯಾ ಇದೇಕಕ್ಕೆತಂದೆ ಕಾಲವನ್ನರಿಯದೆ ಹಾಸ್ಯವಂ ತೋರುವೆಯಾ ಹಣದ ಚೀಲವೆಲ್ಲಿ ಕೊಡು, ಎನಲು ಆ ಸೇವಕಂ ಸ್ವಾಮಿ! ಹಾಗೆಂದರೆ ಏನು ನನಗೆ ಹಣವಂ ತರುವಂತೆ ಹೇಳಿದಿರಾ ಹಗ್ಗವಂ ಮಾತ್ರ ತರುವದಾಗಿ ಛೀಳೆ ಒಂದು ವರಹವಂ ಕೊಟ್ಟು ಕಳುಹಿದಿರಿ ಎನಲು, ಛೀ ದುಷ್ಟನೇ! ನನ್ನನ್ನು ಈ ನಿರ್ಬಂಧದೊಳು ಸಿಕ್ಕಿಸಬೇಕೆಂದು ಇಂತು ಮಾಡುತ್ತೀಯೋ ಎಂದು ಕಂಗಳಂ ಕೆಂಪಗೆಮಾಡಿಕೊಂಡು ಛೀ ಪಾಪಿಯೇ ನನ್ನೆದುರಿಗೆ ನಿಲ್ಲಬೇಡ, ಹೋಗು, ಮನೆಯಂ ಸೇರಿದಮೇಲೆ ನಿನಗೆ ತಕ್ಕ ಶಿಕ್ಷೆಯಂ ಮಾಡಿಸುವೆನು ಎಂದು ತನ್ನ ಕೈಯಲ್ಲಿದ್ದ ಹಗ್ಗದಿಂದ ಹೊಡೆಯುವದಕ್ಕೆ ಕೈಯೆತ್ತಲು, ಸ್ವಾಮಿ, ತಾವು ಪಾಲಕರು, ಹೊಡೆಯಲೂ ಬಹುದು ನಾನು ಪೆಟ್ಟುಗಳಂ ತಿನ್ನಲೂ ಬಹುದೆಂದು ಹೇಳುತ್ತಿರಲು, ಅವನಂ ನೋಡಿ ಕಟಕಟನೆ ಹಲ್ಲುಗಳಂ ಕಡಿಯುತ್ತಿರುವ ಸಮಯಕ್ಕೆ ತನ್ನ ಗಂಡನಂ ಹುಡುಕಿಕೊಂಡು ಬರುತ್ತಿದ್ದ ಆನಂದವಲ್ಲಿಯು ನೋಡಿ ತನ್ನ ತಂಗಿಯೊಳು ಎಲೌ ತಂಗಿಯೇ! ಇದೋ ನೋಡು ನನ್ನ ಕಾಂತನು ತನ್ನ ಭೃತ್ಯನೊಳು ಕಾದಾಡುವ ರೀತಿಯಂ. ಈತನನ್ನು ನೋಡಿದರೆ ಹುಚ್ಚನಂತೆಯೇ ಕಾಣುತ್ತಾನೆ. ಅಯ್ಯೋ ನನ್ನ ದೆಸೆಯು ಕಡೆಗೆ ಹೀಗಾದುದೇ, ಮುಂದೆಂತಿಹುದೋ ಕಾಣಲಾಗದು ಎಂದು ಹೇಳುತ್ತಾ ತನ್ನ ಏಕ್ಷಣವಂ ಕಂಡು ಶೋಕಿಸುತ್ತಿರುವ ಅಕ್ಕನಂ ಕುರಿತಾ, ಬಿಂಬಾಧರೆಯು ಅಮ್ಮಾ ನೀನೇತಕೆಂತು ಚಿಂತಿಸುವೆ? ಉಪಾಯವಾಗಿ ಭಾವನಂ ಮನೆಗೆ ಕರೆದುಕೊಂಡು ಹೋಗಿ ಮಂತ್ರಜ್ಞರಿಂದ ತಕ್ಕ ಚಿಕಿತ್ಸೆಯಂ ಮಾಡಿಸೋಣ ಗುಣವಾಗುವದು ಎಂದು ಹೇಳುತ್ತಾ ಸಮೀಪಕ್ಕೆ ಬಂದಳು.

ಆ ಮದನಸುಂದರಂ ತನ್ನ ಕಾಂತೆಯನ್ನೂ ಅವಳ ತಂಗಿಯನ್ನೂ ಜೊತೆಯೊಳಿರುವ ತನ್ನ ಸ್ನೇಹಿತರನ್ನೂ ನೋಡಿ ಈ ಪಾಪಿಯಾದವಳು ತಾನು ಮಾಡಿದ ತಪ್ಪಿಗೆ ಮನ್ನಣೆಯಂ ಕೇಳಿಕೊಳ್ಳುವದಕ್ಕೆ ಬಂದಳೆಂದು ಯೋಚಿಸಿ ಅವಳ ಕಡೆಗೆ ತಿರುಗಿನೋಡದೆ ಹಿಂತಿರುಗಿದವನಾಗಿ ನಿಂತುಕೊಂಡಿರಲು ಆತನ ಬಳಿಗ್ಯೆತಂದು ನಿಂತುಕೊಂಡು ಆನಂದವಲ್ಲಿಯೂ ಎಲ್ಲೈ ಕಾಂತನೇ! ನಾನೇನಪರಾಧಮಂ ಮಾಡಿದೆನೆಂದು ನನ್ನೊಳಿಂತು ಕೋಪಾಕ್ರಾಂತನಾಗಿರುವಿ, ಮನೆಗೆ ಬಂದು ಭೋಜನಮಂ ಮಾಡುತ್ತಿರಲು ನಾನೆಷ್ಟು ಬಗೆಯಾಗಿ ಪ್ರಾರ್ಥಿಸಿದರೂ ಮಾತಾಡದೆ ಯಾರು ಮರಿಯದಂತೆ ಸೇವಕನೊಡಗೊಂಡು ಹೊರಟುಬರುವಂಥಾ ಅಪರಾಧಮಂ ಮಾಡಿದ್ದೇನು ತಪ್ಪಿತವನ್ನು ನನ್ನ ಮುಖುಲಿಗೆ ಹಾಕಿ ತಕ್ಕ ಶಿಕ್ಷೆಯಂ ಮಾಡಬಾರದಾಗಿತ್ತೆ. ಕಾರಣವಿಲ್ಲದೆ ಕೋಪಾಕ್ರಾಂತರಾಗಿ ನನ್ನನ್ನಿಂತು ನಿರಾಕರಿಸಬಹುದೆ, ಎಂದು ವಿನಯಳಾಗಿ ಪ್ರಾರ್ಥಿಸುವ ತನ್ನ ಕಾಂತೆಯ ಮುಖಮಂ ನೋಡದೆ

ಸೇವಕನ ಕಡೆಗೆ ತಿರುಗಿ ಎಲ್ಲೆ ಕಿಂಕರನೇ! ನಾವೀದಿನದೊಳು ನಮ್ಮ ಮನೆಯ ಬಳಿ ನಿಂತು ಮಾತಾಡಿದ ಕಾರ್ಯವೇನು ಅದಕ್ಕೇ ದುಷ್ಟಳಾದ ಭ್ರಷ್ಟಾಂಗನೆಯು ಮಾಡಿದ ಕೃತ್ಯಂಗಳೇನು ಅದನೆಲ್ಲಮಂ ವಿಸ್ತಾರಮಾಗಿ ಹೇಳೆಂದು ಆಜ್ಞಾಪಿಸಲಾ ಸೇವಕಂ ಸ್ವಾಮಿಾ, ನಾವೀರ್ವರೂ, ಸ್ವರ್ಣಕಾರಕನೂ, ಮಂದಯಾನೆಯೂ ನಾಲ್ವರೂ ಸೇರಿ ನಮ್ಮ ಮನೆಯ ಬಳಿಗೈದಿ, ಬಾಗಿಲಂ ತೆಗೆಯುವಂತೆ ಕೂಗಿದೆವ್. ಬಾಗಿಲು ಹಾಕಿತ್ತು. ಆನಂತರ ಮಾರುಬಾಗಿಲು ತೆಗೆಯುವದಿಲ್ಲವೆಂದು ಹೇಳಿದರು. ಯಜಮಾನಿಯರು ಚಿಕ್ಕಮನೆಯಿಂದ ಇಂದಿನ ಸಮಯವಿಲ್ಲ ನಾಳೆಯ ದಿನಂ ಬರಬಹುದೆಂದು ಕೂಗಿ ಹೇಳಿದರು. ನಾವೆಷ್ಟು ಬಗೆಯಾಗಿ ಮಾತಾಡಿಸಿದರೂ ಕಡೆಗೆ ಮಾತೇ ಆಡದೆ ಹೋದರು ಎನಲು, ಎಲ್ಲೆ ದುಷ್ಟಳೇ ಕಡೆಗೆ ಈ ಸಾಲ ಗಾರನಾದ ಅಕ್ಕಸಾಲಿಗನ ನಿರ್ಬಂಧದೊಳು ನನ್ನ ಸಿಲುಕಿಸಬೇಕೆಂದು ಯೋಚಿಸಿ ದ್ದೆಯಾ, ಹಣಮಂ ಕೊಟ್ಟು ಕಳುಹಿಸುವಂತೆ ನಾನೀ ಸೇವಕನಂ ಕಳುಹಿಸಿದ್ದರೆ ಕೊಟ್ಟು ಕಳುಹಿಸದೆ ಈ ಜಸರಂ ಗುಂಪು ಸೇರಿಸಿಕೊಂಡು ಬಂದು ನನ್ನ ಮಾನವಂ ಕಳೆಯುವದಕ್ಕೆ ಬಂದೆಯಾ ಎನಲು ಆ ಮದನಸುಂದರನು ತನ್ನ ಸೇವಕನಂನೋಡಿ ನಿನ್ನಂ ಹಣಶರುವಂತೆ ನಾಂ ಕಳುಹಿಸಿರಲಿಲ್ಲವೆ ಎನಲು ಸ್ವಾಮಿಾ! ನನ್ನನ್ನು ಈ ಹಗ್ಗಮಂ ತರುವಂತೆ ಕಳುಹಿಸಿದ್ದರೇ ಹೊರತು ಮತ್ತಾವ ಕಾರ್ಯಕ್ಕೂ ನನ್ನಂ ಕಳುಹಿಸಲಿಲ್ಲ. ಇದಂ ಮೊದಲೇ ತಮ್ಮೊಂದಿಗೆ ಅರಿಕೆಮಾಡಿದೆನಲ್ಲ, ತನ್ನ ಬಳೆಯೊಳೆದರ್ದ ರಾಜಸೇವಕನಂ ಕುರಿತು ನಾನಿಪನೊಂದಿಗೆ ಹೇಳಿಕಳಿಸಿದರೂ ಇಲ್ಲ ವೆಂದು ಬೊಂಕುವನಲ್ಲಾ ಇವನು ಎಂದಿಗೂ ಇಂಥಾ ಸುಳ್ಳಂ ಹೇಳುವನೇ ಎಂದು ಕೋಪಗೊಂಡು ಹೊಡೆಯಲುದ್ಯುಕ್ತನಾಗೆ ಆ ಆನಂದವಲ್ಲಿಯು, ತನ್ನ ತಂಗಿಯೊಡನೆ ಈ ಸೇವಕಂ ಕೆಲವುಕಾಲಕ್ಕೆ ಮುಂಚಿತವಾಗಿ ಮನೆಗೆಬಂದು ಹಣದ ಚೀಲವಂ ನನ್ನಿಂದ ತೆಗೆದುಕೊಂಡು ಹೋದನು. ಅದನ್ನೇನುಮಾಡಿದನೋ ಈಗ ತಾಂ ತರ ಲೆಯಿಲ್ಲವು. ಆ ಕೆಲಸಕ್ಕೇನೇ ತನ್ನಂ ಕಳುಹಿಲಿಲ್ಲವೆಂದು ಹೇಳುತ್ತಾನೆ. ಇವನೂ ಭ್ರಾಂತನಾಗಿರುವಂತೆ ಕಾಣಬರುತ್ತದೆ. ಈಗ ಮಾಡಬೇಕಾದ ಕಾರ್ಯವೇನೋ ತೋರದು. ಆದರೆ ಉಪಾಯವಾಗಿ ಈತನಂ ನಿರ್ಬಂಧದಿಂದ ಕರೆದುಕೊಂಡು ಹೋಗಿ ಮನೆಯಂ ಸೇರಿಸಿ ಚಿಕ್ಕಮನೆಯೊಳು ಕೂಡಿ ಬಾಗಿಲಂ ಭದ್ರಗೊಳಿಸಿದ ಮೇಲೆ, ಈ ಊರೊಳು ಪ್ರಸಿದ್ಧನಾಗಿರುವ ಮೂರ್ಖವಂತನೆಂಬ ಮಂತ್ರಜ್ಞನಂ ಕರೆಯಿಸಿರುವರಷ್ಟೆ, ಆತನಿಂ ಚಿಕಿತ್ಸೆಯಂ ಮಾಡಿಸೋಣವೆನಲಾ ಬಿಂಬಾಧರೆಯು, ಅಕ್ಕಾ! ಆ ಮಂತ್ರಮೂರ್ಖ ಇಲ್ಲೇ ಬಂದಿರುವನೆನಲು, ಆತನಂ ಕುರಿತು ಅಯ್ಯಾ ನೀವು ದೊಡ್ಡಮನಸ್ಸು ಮಾಡಿ ಬುದ್ಧಿ ವಿಕಲನಾಗಿರುವೀ ನನ್ನ ಪತಿಯಂ ಮುನ್ನಿನಂತೆ ಮಾಡಿದವರಾದರೆ ತಮ್ಮ ಪ್ರಯಾಸವು ವಿಫಲಮಾಗಲಾರದೆನಲಾ ಮಂತ್ರಜ್ಞನು ನೀವು ಯೋಚಿಸಬೇಡಿ, ನನಗಿದೇನೂ ದೊಡ್ಡಕಾರ್ಯವಲ್ಲ, ಇಂಥಾ

ಚಿಕಿತ್ಸೆಗಳನೆಷ್ಟೋ ನೋಡಿ ಗುಣಪಡಿಸಿರುವೆನು. ಎಂದೊರೆದು ಆ ಮದನಸುಂದರನ ಬಳಿಗೈದಿ ಕೈಪಿಡಿದು ನೋಡಿ, ಅಮ್ಮಾ ? ಇದೇನೂ ಕೈಮಿಸುಕಲ್ಲ. ಯಾವದೋ ಮಹಾ ಭೂತವು ಆವೇಶಮಾಗಿಹುದು, ಎಂದು ಭೂತಾಕರ್ಷಣ ಮಂತ್ರಗಳಂ ಉಚ್ಚರಿಸುತ್ತಾ ಮಂತ್ರಿಸಿ ಜೇಸತ್ತರೂ ಆವೇಶ ಬಾರದಿರೆ, ಈತನಿಗೆ ಪಿಡಿದಿರುವ ಭೂತವು ಮಹಾ ಕ್ರೂರತರಮಾಗಿಹುದು. ಇದನ್ನು ದಿಗ್ಬಂಧಿಸಿ ಇಲ್ಲಯೇ ಮರಣಮಂ ಮಾಡುವೆನೆನೆಲು, ಆ ಮಂತ್ರಗಾರನ ಜಯಮನೆಲ್ಲಮಂ ನೋಡುತ್ತಾ ಮದನಸುಂದರಂ ಕೋಪಾರುಣ ನೇತ್ರನಾಗಿ ಎಲವೆಲವೋ ಮಾಯಗಾರನೇ ! ಛೀ ಛೀ ಮೂಢ ! ಪರಮ ಪಾಪಿಯೇ ! ನೀಂ ಮಾಡುವ ವಿದ್ಯವೆಲ್ಲವೂ ಪರರನ್ನು ಮೋಸಗೊಳಿಸುವದಕ್ಕಾಗಿ ಮಾಡುವದೇ ಹೊರತು ನಿಶ್ಚಯಮಾದುದೊಂದೂ ಇಲ್ಲವು ನನಗೆ ಯಾವ ಭೂತಾವೇಶವೂ ಇಲ್ಲವ, ಸ್ತ್ರೀಯಂ ಸರುಸು ಮಾಡುವುದಕ್ಕೆಂ ತುಪಾಯಮಂ ಮಾಡುವೆ, ಛೀ ಛೀ ಹೊಲೆಯಾ ದೂರ ತೊಲಗೆಂದು ಗರ್ಜಿಸುತ್ತ ವನಂ ಹೊಡೆಯಲು ಉದ್ಯುಕ್ತನಾಗೆ ಅಷ್ಟರೊಳಾ ಆನಂದವಲ್ಲಿಯು ಈಗ ಮತ್ತಾವ ಉಪಾಯವೂ ಪ್ರಯೋಜನಕಾರಿಯಲ್ಲ, ಈತನಂ ನಿರ್ಬಂಧಿಸಿ ಮನೆಗೆ ಕರೆದು ಕೊಂಡು ಹೋಗುವದೇ ಮೊದಲನೇ ಕೆಲಸವೆಂದು ತನ್ನ ತಂಗಿಯೊಳು ಯೋಚಿಸುತ್ತಿರಲಾ ಮಾತುಗಳಂ ಕೇಳುತ್ತಾ ಮದನಸುಂದರಂ ದ್ವಿಗುಣಿತ ಕೋಪಮುಳ್ಳವನಾಗಿ ಎಲ್ಲೆ ಸ್ವೈರಿಣಿಯೇ ! ನಿನ್ನಿಚ್ಛಾನುಸಾರಮಾಗಿ ದುರ್ಮಾರ್ಗದೊಳು ನಡೆಯುವುದಕ್ಕಾಗಿ ಈ ಪ್ರಯತ್ನಮಂ ಮಾಡಿದೆಯೋ, ಈ ದುಷ್ಕರಂ ಗುಂಪುಸೇರಿಸಿಕೊಂಡು ಬಂದಿರುವ ಕಾರ್ಯಮದೇನೋ ನನ್ನಂ ಕತ್ತಲೆಯ ಮನೆಯೊಳು ಕಟ್ಟಿಹಾಕಿ, ನಿನ್ನ ಮನಸ್ಸು ಬಂದವರಂ ಸೇರಿ ಸುಖಿಸುವದಕ್ಕೋ ಈ ತಂತ್ರಗಳೆಂದು ಬೈಡುಗಳಂ ಕಜ್ಜುತ್ತಾ ತನ್ನ ಕೈಯಲ್ಲಿರುವ ಹಗ್ಗಮಂ ಜೋಡಿಸಿಕೊಂಡು ಹೊಪೆಯಲು ಆಟ್ಟಿಸಿಕೊಂಡು ಬರಲು ಭಯಾಕ್ರಾಂತಳಾದಾ ಆನಂದವಲ್ಲಿಯು ಅಯ್ಯೋ ನನ್ನಂ ಕೊಂದುಹಾಕುವನಲ್ಲ, ನಿಮ್ಮಂ ಜೊತೆಯೊಳು ಕರೆದುಕೊಂಡು ಬಂದದ್ದು ಇದಕ್ಕೇನೇ ಎಂದು ವಿಕಾರಧ್ವನಿಯಂ ಮಾಡೆ ಸಂಗಡ ಬಂದಿದ್ದವರೆಲ್ಲರೂ ಅಡ್ಡ ಹಾದು ಬಂದು ಅತನಂ ಪಿಡಿದು ಬಂಧಿಸಿದರು. ಆಗಲೀ ಆನಂದವಲ್ಲಿಯು ಇವರಂ ನೋಡಿ, ಉಪಾಯಮಾಗಿ ಮನೆಗೆ ಕೊಂಪೊಯ್ಯಿರಿ, ಕೋಪಿಸಿಕೊಂಡು ಯೋದಾ ಮಂತ್ರಮೂರ್ತಿಯಂ ಕರತರುವೆನೆಂದು ತನ್ನ ತಂಗಿಯೊಡನೆ ಕೂಡಿ ಹೊರಡುವ ಕಾಲಕ್ಕೆ ಸ್ವರ್ಣಕಾರನ ಸಾಲಗಾರನು, ಆಯ್ಯಾ ದೊಡ್ಡಮನುಷ್ಯನೇ ಈ ಮಹಾತ್ಮರ ಋಣವಂ ಕೊಡುವದಾಗಿ ಆದಂ ನನಗೆ ಕೊಡುತ್ತೇನೆಂದು ಹೇಳಿ ಕರೆದ, ಈ ದೊಡ್ಡಮನುಷ್ಯರ ಗತಿಯು ಹೀಗಿರುವದು, ನನ್ನ ಕಾರ್ಯವು ಕೆಡುವಕಾಲ ಮೊದಗಿತಲ್ಲಾ ಇದುವಮಲ್ಲದೇ ರಾಜ್ಯಭೃತ್ಯನ ವಶವರ್ತಿಯಾಗಿರುವಲ್ಲಿ ಈತನೆಂತು ಬಿಡಲ್ಪಡುವನೆಂದು ಅವರೀರ್ವರೂ ಮಾತಾಡಿಕೊಳ್ಳುತ್ತಿರುವದಂ ಕೇಳುತ್ತಾ ಆನಂ

ನವಲ್ಲಿಯು, ಎಲ್ಲೆ ವರ್ತಕಶ್ರೇಷ್ಠರೇ ಆತನಿಗೆ ಬದಲಾಗಿ ನಾನಿರುವೆನು, ಈ ದುರವಸ್ಥೆಯಲ್ಲಿರುವಾತನಂ ನಿರ್ಬಂಧಿಸುವಿರಾ, ಕೊಡಬೇಕಾಗಿದ್ದ ಹಣಮಂ ನಾನೇ ಕೊಡುವೆನು ನನ್ನ ಜೊತೆಯೊಳೇ ಬರುವರಾಗಿ ನಾನು ಮಂತ್ರಗಾರನಾದ ಮೂರ್ತಿವಂತನಂ ಕರೆತರುವದಕ್ಕಾಗಿ ಹೋಗುವೆನೆಂದು ಹೇಳಿ ಹೊರಟುಹೋಗಲು, ಅಂತೆಯೇ ಆಗಲಿ ನೀವು ಮನೆಗೆ ಸೇರುವಕಾಲಕ್ಕೆ ನಾವೂ ಬರುವೆವೆಂದು ಹೇಳಿ, ಮುಂದಾಗಿಹೊರಟು ಬರುತ್ತಿರುವಲ್ಲಿ ಓರ್ವಳಿಂದ ಭೋಜನಕ್ಕಾಗಿ ಬಲಾತ್ಕಾರಮಂ ಹೊಂದಿದವನಾಗಿ ಅಕೆಯೊಂದಿಗೆ ಕಲಹಮಂ ಮಾಡಿ, ಬೇಸತ್ತು ಬರುತ್ತಿರ್ದ ಬ್ರಹ್ಮದೇಶದ ಮದನಸುಂದರಂ ತನ್ನ ಸೇವಕನೊಡಗೊಂಡು ಬರುತ್ತಿರಲು, ಆತನ ಕೈಗಳೊಳು ತಾನು ಮಾಡಿಕೊಟ್ಟಿರ್ದ ರತ್ನಕಂಕಣಂಗಳಂ ಕಂಡು, ಸಮೀಪಕ್ಕೆ ಬಂದು ಏನ್ರೀ ದೊಡ್ಡಮನುಷ್ಯರೇ ನಾನು ಹಣಮಂ ಕೇಳಿದರೆ ಒಡವೆಯಂ ತಂದುಕೊಡು, ಆವರಿಗೂ ಹಣವಂ ಕೊಡುವದಿಲ್ಲವೆಂದು ಮನಸ್ಸಿಗೆ ಬಂದಂತೆ ವ್ಯಾಜ್ಯಮಾಡಿದಿರಿ, ನಾಂ ಮಾಡಿಕೊಟ್ಟಿರ್ದ ಒಡವೆಯಂ ಕೈಗಳೊಳಿಟ್ಟುಕೊಂಡು ಬಂದಿರುವಿರಿ ಇಂಥಾ ದೊಡ್ಡಮನುಷ್ಯರೆಂತಲೂ ಸುಳ್ಳುಹೇಳಿ ಬಾಯಿ ಬಡಿಯುವಿರೆಂದೂ ನನಗೆ ತಿಳಿಯದೆ ಹೋಯಿತು, ಎಂದು ಪೇಳಲು ಆ ಮಾತುಗಳಿಗೆ ಕೋಪಾಕ್ರಾಂತನಾಗಿ ಏನ್ರೀ ದೊಡ್ಡಮನುಷ್ಯನೇ ನಿನ್ನಂ ನೋಡಿದಾಗ ಮೊದಲೇ ಇದರ ಜೆಲೆಯಂ ತೆಗೆದು ಕೊಂಡು ಹೋಗುವಂತೆ ನಾಂ ಹೇಳಿಲ್ಲವೆ ? ಅದು ಏನಾ ಮೊಂಡಾವೃತ್ತಿ ನಿನ್ನಂ ನೋಡಿದ್ದೇನೆಯೇ ? ಆಗ ಆಭರಣಮಂ ತೆಗೆದುಕೊಂಡಾ ನಿನ್ನವೆಂದು ನಿನ್ನೊಡನೆ ಹೇಳಿದ್ದೇನೆಯೇ ? ಇದೊಂದೂ ಅಲ್ಲದೆ ನಿಷ್ಕಾರಣವಾಗಿ ನನ್ನಂ ಅಲ್ಪಮನುಷ್ಯನಂ ಮಾತಾಡಿಸುವಂತೆ ನುಡಿಯುತ್ತೀಯೆ ? ನಾನು ದೊಡ್ಡಮನುಷ್ಯನೆಂದು ನಿನಗೆ ಕಾಣುವುದಿಲ್ಲವೋ ? ನೀನಲ್ಪನಾದ್ದರಿಂದ ನಿನ್ನ ಅಲ್ಪಬುದ್ಧಿಯಂ ತೋರುತ್ತೀಯೆಲ್ಲ ಎನಲು, ತನ್ನ ಜೊತೆಯೊಳಿರ್ದ ತನ್ನ ಸಾಲಗಾರನಾದ ವರ್ತಕನಂ ಕುರಿತು, ಏನ್ರೀ ದೊಡ್ಡಮನುಷ್ಯನೇ ನೀನೇ ನನ್ನ ಜೊತೆಯೊಳಿದ್ದು ಈ ಮಹಾತ್ಮರಾದವರು ಮೊದಲು ನಿರಾಕರಿಸಿರ್ದ ಭಾಗವನೆಲ್ಲಮಂ ಕೇಳಿರುವಿಯಷ್ಟೆ ? ನಾನೇ ಹೀನಮನುಜನೆಂದೂ, ತಾವು ಪುನಃ ನನ್ನಂ ನೋಡಲೇ ಇಲ್ಲವೆಂದೂ ಹೇಳುತ್ತಾರಲ್ಲಾ, ನೀವಾದರೂ ಕಂಡಿದ್ದಂ ಹೇಳಿರೆನ್ನಲು, ಅಯ್ಯಾ ಮದನಸುಂದರರೇ ಈತನಾಡುವ ಮಾತುಗಳೆಲ್ಲವೂ ನಿಜ. ತಾವು ಈಗ ಮಾತ್ರ ಈ ಕೈಕಡಗಗಳಂ ಧರಿಸಿಕೊಂಡಿರುವಿರಿ ಎನಲು ಛೀ ಛೀ ಮೂರ್ಖರೇ ಈ ಪುರವಾಸಿಗಳೆಲ್ಲರೂ ನಿಮ್ಮಂತೆಯೇ ದುಷ್ಟರು. ಮನುಷ್ಯರ ರೀತಿಯಂ ಕಾಣದೆ, ಆವಮಾನ ಪಡಿಸುವದಕ್ಕಾಗಿ ಬಂದಿರುವಿರೋ, ನಿಮ್ಮಾವರಂ ಈಗಲೇ ತರಿದು ಬಿಸಾಡುವೆನೆಂದು ತನ್ನ ಕೈಯೊಳಿರ್ದ ಕತ್ತಿಯಂ ಒರೆಯೊಳಗಿನಿಂದ ಕಿತ್ತು ಝಳಿಪಿಸುತ್ತಲೆತ್ತಿಕೊಂಡು ಬರಲು, ನೋಡು ತಲಾ ಇವರುಂ ಪಲಾಯನಂಗೈಯ್ಯುತ್ತಿರುವ ಸಮಯಕ್ಕೆ ಸರಿಯಾಗಿ ಮಂತ್ರ

ಗಾರನಂ ಕರತರುವಂತೆ ಬರುತ್ತಿರ್ದ ಆನಂದವಲ್ಲಿಯೂ, ಈ ಪರಿಯನೆಲ್ಲಮಂ ದೂರ ಮಾಗಿಯೇ ನೋಡಿ, ಆಹಾ ಇದೇನು ನನ್ನ ಪತಿಯನ್ನು ಬಂಧಿಸಿ, ಈಗತಾನೇ ಮನೆಗೆ ಕರೆದುಕೊಂಡು ಹೋದರಲ್ಲಾ, ಅವರನ್ನೆಲ್ಲರಂ ಮೋಸಗೊಳಿಸಿ, ತನ್ನ ಕಿಂಕರನೊಂದಿಗೆ ಇಲ್ಲಿಗೆ ಬಂದಿರುವನು, ಈಗ ಕೈಯ್ಯೊಂದು ಖಡ್ಗವಿರುವದು, ಈ ಮಹದವಸ್ಥೆಯೊಳು ಇದೆಲ್ಲಿ ದೊರೆತುದು, ಈಗ ನಾಂ ಸಭಾಪಕ್ಕೆ ಹೋದರೆ ತಲೆಯಂ ಕತ್ತರಿಸಿ ಹಾಕುವದರಲ್ಲಿ ಸಂದೇಹವೇ ಇಲ್ಲವ್ವ, ಪಟ್ಟುಬಡುವದೆಂತು, ಸುಮ್ಮನಿರುವದು ತಾನೇ ಹೇಗೆಯೆಂದು ತನ್ನ ತಂಗಿಯಾದ ಪೆಂಬಾಧರೆಯೊಳು ಹೇಳುತ್ತಿರುವಾಗ್ಯೆ ದಾರಿಯಲ್ಲಿ ಹೋಗಿ ಬರುತ್ತಿರುವರೆಲ್ಲರೂ ಗುಂಪಾಗಿ ನಿಂತು ನೋಡುತ್ತಿರಲು, ಮೆಲ್ಲನೆ ತಮಗೆದುರಾಗಿ ಜನಸಮೂಹದೊಂದಿಗೆ ಬರುತ್ತಿರುವ ತರುಣೀ ಮಣಿಯರಿರ್ವರಂ ನೋಡಿದಾ ಬ್ರಹ್ಮದೇಶವ ಕುಶಲತಂತ್ರನು, ಸ್ವಾಮಿ! ಇತ್ತನೋಳ್ಪುದು ಮೊದಲು ಬಂದು, ನಮ್ಮಂ ಬಲಾತ್ಕಾರವಾಗಿ ಪಿಡಿದು, ತನ್ನ ಮನೆಗೆ ಕರದುಕೊಂಡು ಹೋಗಿ ಭೋಜನಮಂ ಮಾಡಿಸಿ ತನ್ನ ಗಂಡನೆಂದು ನಮ್ಮಂ ಬಲಾತ್ಕರಿಸಿದ ಪಿಶಾಚಿಯೂ ಅವಳ ತಂಗಿಯೂ ಜನಂಗಳಂ ಗುಂಪು ಸೇರಿಸಿಕೊಂಡು ಬರುತ್ತಿರುವದು ನೋಡಿದರೆ ನಮ್ಮನ್ನು ಬಲಪದ್ಬಂಧದಿ ಪಿಡಿದುಕೊಂಡು ಹೋಗದೆ ಪಿಡಲಾರರೆಂದು ತೋರುತ್ತದೆ ಮುಂದೇನು ಮಾಳ್ಪುದೋ ಯೋಚಿಸಿರೆಂದು ಹೇಳಲು, ಆ ಕನಿಷ್ಠ ಮದನಸುಂದರಂ ಅವರಂ ನೋಡುತ್ತಲೇ, ಎಲ್ಲೆ ಪ್ರೀತಿಪಾತ್ರನೇ ಈ ಊರೊಳಿರಬಾರದೆಂದು ನಾಂ ಹೇಳಿದರೆ ನೀಂ ಹಾಸ್ಯಮಾಡಿದೆಯೇ ಆಗ ಬಂದಿರ್ದ ಪಿಶಾಚಿನಿಯು ತೊಲಗಿದಕೂಡಲೆ ಈ ಪಿಶಾಚಗಳು ಬಂದವ್ವ, ಇವರಂ ತೊಲಗಿಸುವದು ಪರಮದುರ್ಘಟಮಾಗಿರುದು, ಇವರು ಬರುವದರೊಳಗಾಗಿ ನಾವು ಓಡಿಹೋಗದಿದ್ದರೆ ನಮ್ಮ ಗತಿಯು ನೀರು ಪಾಲಾದಂತೆಯೇ ನಿಶ್ಚಯವೆಂದು ಅಲ್ಲಿಂದ ಪಿಡಲಾರಂಭಿಸಿ, ದಾರಿಯ ಸಮೀಪದೊಳು ಬಂದಾನೊಂದು ಆಶ್ರಮವಂ ಹೊಕ್ಕು ಅದರಲ್ಲಿನ ಮಂಟಪಮಂ ಸಾರಿ, ಅಲ್ಲಿ ನೆಲೆಯಂ ಮಾಡಿಕೊಂಡಿರ್ದ ತಪಸ್ವಿನಿಯಂ ಕಂಡು ಅಮ್ಮಾ ಮಹನೀಯ್ಯರೇ ಭಯಗ್ರಸ್ತರಾಗಿರುವ ನಮ್ಮಂ ಕಾಪಾಡಬೇಕೆಂದು ಪ್ರಾರ್ಥಿಸಲಾ ವೃದ್ಧತಾಪಸಿಯು ಎಲ್ಲೆ ಸುಕುಮಾರಾಂಗರೇ! ಭಯವಂಬಡಿ, ನನ್ನ ಆಶ್ರಮದಲ್ಲಿರುವವರಿಗೂ, ನಿಮಗಾವ ಅಪಾಯವೂ ಸಂಭವಿಸಲಾರದೆನಲು, ಸಂತೋಷಚಿತ್ತರಾಗಿ, ಅಮ್ಮಾ ನಮಗುಂಟಾದ ಭಯಕಾರಣಮಂ ಸಾವಕಾಶಮಾಗಿ ತಿಳಿಸುವೆವೆಂದೊರೆಯೆ ಅವರಿರ್ವರಂ ಒಂದೆಡೆಯೊಳು ಹೊಗಿಸಿ ಬಾಗಿಲಂ ಭದ್ರಪಡಿಸಿರುವ ಸಮಯಕ್ಕೆ ಆನಂದವಲ್ಲಿಯೂ ತನ್ನ ತಂಯೊಂದಿಗೆ ಬಂದು, ಆಶ್ರಮದ ಬಾಗಿಲೊಳು ನಿಂದಿರುವ ತಪಸ್ವಿನಿಯಂ ಕುರಿತು, ಅಮ್ಮಾ ನನ್ನ ಪತಿಗೆ ಹುಚ್ಚುಹಿಡಿದು ತನ್ನ ಸೇವಕನೊಂದಿಗೆ ಮನಸ್ವಿಯಾಡುತ್ತ ತಮ್ಮಾಶ್ರಮವಂ ಈಗ ತಾನೇ ಒಳಯೊಕ್ಕರು, ಅವರಂ ದಯಮಾಡಿ ನನ್ನ ಸ್ವಾಧೀನರಂಮಾಡಿ ಪುಣ್ಯ ಧರ್ಮಂಗಳಂ ತಾವು ಹೊಂದಬೇಕೆಂದು ಪ್ರಾರ್ಥಿಸುವ ಕಾಲಕ್ಕೆ ಸೂರ್ಯಾಸ್ತ

ಮಯ ಸಮಯಂ ಸಮೀಪಮಾಗುತ್ತಾ ಬರಲು ಆ ಕಾಲಕ್ಕೆ ಸರಿಯಾಗಿ ಅದೇಮಾ ರ್ಗಮಾಗಿ ಆ ದ್ವೀಪಾಧಿಪಂ ಅಶ್ವಾರೂಢನಾಗಿ ಬರುತ್ತಿದ್ದವನು ಆ ಆಶ್ರಮದ ಬಾಗಲ ಬಳಿ ಗ್ಗೆ ತಂದನು.

ಆ ಕಾಲಕ್ಕೆ ಸರಿಯಾಗಿ ಬ್ರಹ್ಮದೇಶದ ವರ್ತಕನಾದ ಸತ್ಯವಿಜಯನೆಂಬುವ ನನ್ನು ಮರಣದಂಡನೆಗಾಗಿ ಅದೇ ದಾರಿಯೊಳು ಭಟರು ವಧ್ಯಸ್ಥಾನಕ್ಕೆ ಕರೆದು ಕೊಂಡು ಬರುತ್ತಿದ್ದರು. ಆ ತಪಸ್ವಿನಿಯ ಆಶ್ರಮದ ಬಾಗಲು ಬಳಿ ಉಂಟಾಗುತ್ತಿದ್ದ ಗದ್ದಲಮಂ ನೋಡಿ ಅವರೂ ಈ ಬಳಿಗೆ ಬಂದು ನಿಂತುಕೊಂಡರು. ಆಗಲಾ ಆನಂ ದವಲ್ಲಿಯು ಸಮೀಪಗತವಾಗುತ್ತಿರುವ ಆ ದ್ವೀಪಾಧೀಶನನ್ನು ನೋಡಿ ಆತನ ಸಮೀ ಪಸ್ಥಳಾಗಿ ನಮಸ್ಕರಿಸಿ ಸ್ವಾಮೀ ಮಹಾರಾಜರೇ ನನಗೆ ಮಹದ್ವಿಪತ್ತೊಂದು ಸಂಭ ವಿಸಿರುವದು. ಅದಂ ಪರಿಹರಿಸಿಕೊಡಬೇಕೆಂದು ವಿಜ್ಞಾಪಿಸುವೆನು, ಅದೇನೆಂದರೆ ನನ್ನ ಪತಿಗೆ ಈದಿನದುದಯದಾರಭ್ಯ ಬುದ್ಧಿಜಂಜಲವಾಗಿ ಮನಸ್ಸಿ ಕಾರ್ಯಗಳಂ ನಡೆಯಿ ಸುತ್ತಾ ಕಂಡ ಕಡೆಗಳೊಳು ತಿರುಗುತ್ತಾ ಬಂದು ಕಡೆಯೊಳೀ ಆಶ್ರಮಂ ಸೇರಿಕೊಂ ಡರು ಇವರಂ ಬಡುವಂತೆ ಈ ಮಹಾತ್ಮಳಂ ಪ್ರಾರ್ಥಿಸಿದರೆ ಕರುಣಿಸದೆ ಸುಮ್ಮನಿರು ವಳು ತಾವು ದಯವಿಟ್ಟು ನನ್ನ ವಿಜ್ಞಾಪನೆಯಂ ಲಾಲಿಸಬೇಕೆಂದು ಪ್ರಾರ್ಥಿಸುತ್ತಿ ರುವನಿತರೊಳು ಮಣಿ ದ್ವೀಪದ ಜ್ಯೇಷ್ಠಮದನ ಸುಂದರನು ಮನೆಯೊಳು ಕಟ್ಟಿಹಾ ಕಿದ್ದ ಕಟ್ಟುಗಳಂ ಬಲಾತ್ಕಾರವಾಗಿ ಬಿಚ್ಚಿಕೊಂಡು ಅಲ್ಲಿನವರೆಲ್ಲರಂ ಧಿಕ್ಕರಿಸಿ ಕಳುಹಿ ಪಾಪಿಯಾದ ತನ್ನ ಕಾಂತೆಯಿಂದೀ ಯನಸ್ಥೆಯಾದುದೆಂಬ ರೋಷಾ ಕ್ರಾಂತನಾಗಿ, ತನ್ನ ಭೃತ್ಯನೊಡನೆ ಆಕೆಯಂ ಹುಡುಕುತ್ತಾ, ಅದೇಮಾರ್ಗಮಾಗಿ ಹೊರಟವನು ಆ ತಪಸ್ವಿನಿಯ ಆಶ್ರಮದ ಮಾರ್ಗಮಾಗಿಯೇ ಸಮೀಪಕ್ಕೆ ಬರುತ್ತಿರಲು ಅವರಂ ನೋಡಲಾ ಆ ಆನಂದವಲ್ಲಿಯು, ಪರಮಾಶ್ಚರ್ಯಭಯಸಾಗರ ಮಗ್ನಳಾಗಿ ಇದೇನು ತಂಗಿಯೇ ಇತ್ತ ನೋಡು ಈಗತಾನೇ ಈ ಆಶ್ರಮವಂ ಪ್ರವೇಶಿಸಿದ ಆರ್ಯಪುತ್ರನು ಈ ಮಾರ್ಗದೊಳು ಹಾದು ಬರುವನು ಕೈಯಲ್ಲಿ ಕೃಪಾಣವೊಂದನ್ನಾಂಪಿರುವನು ಮುಖರಸಮಂ ನೋಡಿದರೆ ಬಹು ರೌದ್ರಾಕಾರಮಾಗಿಹುದು ಮುಂದೇನು ಗತಿಎಂದು ಪರಮ ಭೀತಳಾಗಿ ಗಡಗಡನೆ ನಡುಗುತ್ತಾ ಸಮೀಪದೊಳಿರ್ದ ರತ್ನಾಂಗದ ಮಹಾ ರಾಯನಂ ಕುರಿತು ಸ್ವಾಮೀ ನನ್ನ ಪತಿಯು ಈಗಲೀ ಮಾರ್ಗಮಾಗಿ ರೌದ್ರಾಕಾ ರಮಂ ತಾಳಿ ಕೈಯೊಳು ಖಡ್ಗಮಂಧರಿಸಿ ಬರುತ್ತಿರುವನು. ಈತನಿರುವ ವಿದ್ಯಮಾ ನವಂ ನೋಡಿದರೆ ನನ್ನ ಪ್ರಾಣವೇ ನಿಲ್ಲುವಂತಿಲ್ಲವು. ಈಗತಾನೇ ಈ ಯಾಶ್ರಮದ ಒಳಹೊಕ್ಕನು. ಈ ದಾರಿಯಲ್ಲದೆ ಈ ತಪೋವನಕ್ಕೆ ಮತ್ತೊಂದು ದಾರಿಯು ಇರು ವದೇ ಇಲ್ಲ, ಎಲ್ಲಿಂದ ಹೊರಟುಹೋದರೋ ಕಾಣದು ಇದಂ ನೋಡಿದರೆ ಪರಮಾ ಶ್ಚರ್ಯಮಾಗಿ ಕಾಣುವದು ಮುಖ್ಯಮಾಗಿ ಭಯಾಕ್ರಾಂತಳಾದ ನನ್ನಂ ಕಾಪಾಡುವಿ ರೆಂದು ಪ್ರಾರ್ಥಿಸುತ್ತಿರುವಳಂನೋಡಿ ಭಯಪಡಬೇಡವೆಂದು ಹೇಳಿ ತನ್ನ ಕಿಂಕರರಂ

ಅಕೆಯಬಳಿ ಕಾಪಲನ್ನಿಟ್ಟು ಯಾರನ್ನೂ ಇವರ ಸಮೀಪಕ್ಕೆ ಬಿಡಬೇಡಿರೆಂದಾ ಕಿಂಕರರಿಗಾಜ್ಞೆಯಂ ಅಜ್ಞಾಪಿಸಿದಂ,

ಅತ್ತಲಾ ಪುಣ್ಡ್ರದ್ವೀಪದ ಜ್ಯೇಷ್ಠ ಮದನ ಸುಂದರನು ತನ್ನ ಕಿಂಕರನಂ ಒಡಗೊಂಡು ಆ ರಾಯನ ಸನ್ನಿಧಿಯಂ ಸೇರಿ ನಮಸ್ಕರಿಸಿದವನಾಗಿ ಸ್ವಾಮೀ ಮಹಾರಿಜನೇ! ನನ್ನ ಪತ್ನಿಯು ಈ ದಿನದೊಳು, ಕೆಲವು ಪುಂಡರಂ ತನ್ನ ಮನೆಯೊಳು ಸೇರಿಸಿಕೊಂಡು ನಾನು ಹೋದರೂ ಲಕ್ಷ್ಯಮಿಡದೆ ಒಳಹೋಗಿಸದಹಾಗೆ ಮಾಡಿ ಅನಂತರ ನನಗೆ ಹುಚ್ಚು ಹಿಡಿದಿರುವಂತೆ ಪ್ರವಾದಮಂ ಹುಟ್ಟಿಸಿ ಈ ವ್ಯಾಜದಿಂದ ನನ್ನನ್ನೂ ಕಟ್ಟಿಹಾಕಿಸಿ ಇಚ್ಛಾನುಸಾರವಾಗಿ ಕಂಡಕಂಡೆಯೊಳು ಸಂಚರಿಸುತ್ತಾ ನನ್ನಂ ಪದಚ್ಯುತನಂ ಮಾಡಬೇಕೆಂದು ಸನ್ನಿಧಿಯೊಳಗೂ, ವಿಜ್ಞಾಪಿಸಿರುತ್ತಿದ್ದುದಂ ನಾಂ ಕೇಳಿದವನಾದೆನು. ಇಂಥಾ ದುಶ್ಚಾರಿಣಿಯಂ ತಕ್ಕಶಿಕ್ಷೆಗೆ ಪಾತ್ರಳನ್ನಾಗಿ ಮಾಡದೆ ಹೋದರೆ ಮಿಕ್ಕ ಸ್ತ್ರೀಯರಿಗೂ ಇನೇ ಧೈರ್ಯವು ಹುಟ್ಟಿ ಲೋಕಕ್ಕೆ ಹಾನಿ ಸಂಭವಿಸುವದು. ನನ್ನ ಬಳಿಯೊಳಿರುವೀ ನೀತಿಪುರುತ್ತನನ್ನೂ ಸ್ವರ್ಣಕಾರನನ್ನೂ ವಿಚಾರಿಸೆ ಈ ದುಷ್ಟಳು ಈ ದಿನದೊಳು ನಡೆಯಿಸಿದ ವಿಷಯಗಳೆಲ್ಲವೂ ಸೊತ್ತಾಗುವದು, ಎಂದು ಹೇಳಲು ಅವರಿರ್ವರೂ ಆ ಮದನಸುಂದರನ ಮಾತುಗಳೆಲ್ಲವೂ ಸಟೆಯಲ್ಲವೆಂತಲೂ ತಮ್ಮ ಮನೆಯೊಳಿಂದು ಮದನಸುಂದರಂ ಭೋಜನವಂ ಮಾಡಿದನೆಂದು ನೀತಿಪುರುತ್ತನೂ, ಆಭರಣಮಂ ಮಾಡಿಕೊಂಡು ಬಂದು ಕೊಡುವಂತೆ ಸಮಾಧಾನವಂ ಹೇಳುವದಕ್ಕಾಗಿ ಈ ಮದನಸುಂದರನೊಂದಿಗೆ ಹೋಗಿದ್ದಾಗ ಮನೆಯೊಳು ಕದಗಳಂ ಭದ್ರಪಡಿಸಿಕೊಂಡು ತೆಗೆಯದಲೇ ಹೋದಳೆಂದಾ ಸ್ವರ್ಣಕಾರಕನೂ, ಆ ರಾಜನೊಳು ವಿಜ್ಞಾಪಿಸಲಾರಾಯಂ ಇರ್ವರೂ ಹುಚ್ಚು ಹಿಡಿದವರಂತೆ ಕೂರುತ್ತೀರಿ ನಿಮ್ಮಿಬ್ಬರ ಮಾತುಗಳೂ ಅನುಮಾನಕರವೆಂದು ಯೋಚಿಸಬೇಕಾಗಿದೆ. ಎಂದು ಯೋಚಿಸುತ್ತಾ ಸಮಾಪದೊಳಿದ್ದ ತನ್ನ ಸೇವಕನಂ ಕುರಿತು ಎಲ್ಲೆ ಕಿಂಕರನೇ! ಈ ಯಾಶ್ರಮವಾಸಿನಿಯಾದ ಯೋಗಿನಿಯಂ ಈ ಕ್ಷಣದೊಳು ಕರೆದುಕೊಂಡು ಬಾ ಯೆಂದಾಜ್ಞಾಪಿಸಿದಂ.

ಮರಣದಂಡನೆಗಾಗಿ ತರಲ್ಪಟ್ಟಿರ್ದ ಸತ್ಯವಿಜಯನು ಆ ಗುಂಪಿನ ಜನರು ದೂರ ಹೋದ ಸಮಯಮಂ ನೋಡಿ ರಾಜನ ಸಮೀಪಕ್ಕೆ ಬಂದು ತಾನಾಲೋಚಿಸಿದ್ದ ಪರಿಯಂ ರಾಯಂಗೆ ಅರುಹುತ್ತಾ ಒಂದನು, ಸ್ವಾಮೀ ಪ್ರಭುಗಳಿರಾ! ಮದನಸುಂದರನು, ನಮ್ಮವನೆಂದು ನಿಶ್ಚೈಸಿದ್ದೇನೆ, ಇವನಂ ಕುರಿತು ಕೆಲವು ಮಾತುಗಳಂ ಕಡಿಬರುವೆನೆನಲು ಎಲ್ಲೆ ವೃದ್ಧ ವಯಸ್ಕನೇ ನಿನ್ನಿಷ್ಟಪ್ರಕಾರಂತೆ ಮಾಣೆಂದು ಅಪ್ಪಣೆಯಂ ಕೊಡಲಾ ವೃದ್ಧಂ ಮದನಸುಂದರಂ ನಿಂತಿರ್ದ ಬಳಿಯಂಸಾರಿ ಅವನನ್ನೇ ಕಿಪ್ಪೆಹಾಕದೆ ನೋಡುತ್ತಾ ಎಲ್ಲೆ ನೀಂ ಬ್ರಹ್ಮದೇಶಸ್ಥನಲ್ಲವೇ ನಿನ್ನ ಹೆಸರು ಮದನಸುಂದರನಲ್ಲವೆ ಈ ನಿನ್ನ ಸೇವಕನ ಹೆಸರು ಕುಶಲತಂತ್ರನಲ್ಲವೆ, ನೀಂ ದೇಶಮಂ

ಬಿಟ್ಟು ಆರೇಳು ಸಂವತ್ಸರಂಗಳಾದ್ದರಿಂದಲೂ ಬಹು ಕಷ್ಟಂಗಳಿಂದ ನನ್ನಂ ರೀತಿ ಮೊಗಿದ ಲಾದ್ದು ಬಹುದೀನಸ್ಥಿತಿಯಲ್ಲಿರುವದರಿಂದಲೂ, ನಾಂ ಇಂಥಾವನೆಂದು ನೀಂ ಮರೆತಿರ ಬಹುದು ನೀಂ ನನ್ನ ಮಗನಲ್ಲವೇ ಎಂದು ಪೇಳಲು ಆ ವೃದ್ಧ ವಯಸ್ಸನ ಮಾತು ಗಳಿಂ ಕೇಳಿ, ಈ ವೃದ್ಧನು ತನ್ನಂ ಮರಣಗೊಳಿಸುವರೆಂಬ ಚಿಂತಾಲೋಲನಾಗಿ ನನ್ನ ನೋಡಿ ತನ್ನಂ ಬದುಕಿಸಿಕೊಳ್ಳಲಿಯೆಂದು ಇಂತಾಡುವನೆಂದರಿತಾಮಣಿ ದ್ವೀಪದಮದನ ಸುಂದರಂ ಆ ವೃದ್ಧನನ್ನು ಕುರಿತು ಎಲ್ಲೆ ವೃದ್ಧನೇ ನಾನು ಜನ್ಮಾರಭ್ಯ ಬ್ರಹ್ಮ ದೇಶವನ್ನೇ ನೋಡಿದವನಲ್ಲ ಈ ಪರಿಗೂ, ನನ್ನ ತಂದೆ ಇಂಥಾವನೆಂದು ನಾಂ ಕಾಣ ಲೇಯಿಲ್ಲವು ನಿನ್ನ ಮುಖವನ್ನೆಂತೂ ಎಂದೆಂದಿಗೂ ಅರಿತವನೇ ಅಲ್ಲ. ನೀನು ಮರಣ ಭೀತನಾಗಿ ಮನಃಸ್ಥೈರ್ಯಮಿಲ್ಲದೆ ಯಾರಾದರೂ ಒದುಕಿಸುವರೋ ಏನೋ ಎಂದು ಕಂಡವರನ್ನೆಲ್ಲಾ ನಿನ್ನ ಸಂಬಂಧಿಯರೆಂದು ಪೇಚಾಡುತ್ತೀಯೆ, ಬಹುಕಾಲಮಾಗಿ ಈ ಊರಂ ಬಿಟ್ಟು ನಾನೆಲ್ಲಿಯೂ ಹೋದವನೇ ಅಲ್ಲವೆಂಬಂಶಮೊಳು ನಮ್ಮಾ ಮಹಾರಾ ಜರೇ ಸಾಕ್ಷಿಯಾಗಿರುವರು. ಅರತ್ನಾಂಗದ ಮಹಾರಾಯಂ ಆ ಸತ್ಯವಿಜಯನಂ ಕುರಿತು ಎಲ್ಲೆ ವೃದ್ಧನೇ ನೀನು ಭೀತನಾದ್ದರಿಂದ ನಿನ್ನ ಚಿತ್ತವು ಚಾಂಚಲ್ಯಮುಂ ತಾಳಿ, ಕಂಡವರನೆಲ್ಲರಂ ನಿನ್ನವರೆಂದು ಯೋಚಿಸುವೆ ಎನಲಾ ಸತ್ಯವಿಜಯಂ ದುಃಖಾ ಕ್ರಾಂತನಾಗಿ ಕಂಬನಿಯಂ ತುಂಬಿ ಮಾತಾಡಲು ಮಾರ್ಗಮರಿಯದೆ ಸ್ತಬ್ಧನಾಗಿ ನಿಂತಿರ್ದಂ.

ಅತ್ತಲಾ ಆಶ್ರಮ ವಾಸಿಯಾದ ಯೋಗಿನಿಯನ್ನೂ ಅವಳಸ್ವಾಧೀನದಲ್ಲಿದ್ದ ಕನಿ ಷ್ಕಮದನಸುಂದರನನ್ನೂ, ಕನಿಷ್ಕ ಕುಶಲ ತಂತ್ರನನ್ನೂ ಕರೆದುಕೊಂಡು ಬಂದು ರಾಜ ಸನ್ನಿಧಿಯೊಳು ನಿಲ್ಲಿಸಲು ಅವರರೂಪಂಗಳಂ ನೋಡಿ ತನ್ನ ದೇಶದ ಮದನಸುಂದರ ನನ್ನೂ, ಅವನ ಸೇವಕನನ್ನೂ ನೋಡಿ ಕಿಂಚಿತ್ತಾದರೂ ಆ ನಾಲ್ವರೊಳು ಭೇದಮರಿ ಯದೆ ಒಂದೇ ವಿಧಮಾಗಿರುವದಂ ಕಂಡು ಪರಮಾಶ್ಚರ್ಯಮಗ್ನನಾಗುತ್ತ ಸ್ತಬ್ಧನಾಗಿ ಕರ್ತವ್ಯಂ ತೋರದೆ ಸುಮ್ಮನಿರ್ದನು. ಆ ಒಳಿಯೊಳು ನಿಂತಿರ್ದ ಸಮಸ್ತಜನರೂ ಜ್ಯೇಷ್ಠ ಕನಿಷ್ಕ ಮದನ ಸುಂದರ ಕುಶಲ ತಂತ್ರರನ್ನೂ ನೋಡಿ ಭೇದಮುಂ ಇನಿತಾ ದರೂ ಕಾಣದೆ ಅನಿಮಿಷರಂತೆ ನೋಡುತ್ತಾ ಆಶ್ಚರ್ಯಸಾಗರ ಮಗ್ನರಾದರು.

ಆ ವೃದ್ಧಾಂಗನೆಯಾದ ಯೋಗಿನಿಯು ಆ ಮಹಾರಾಯನಂ ಕುರಿತು ಸ್ವಾಮಿ ಭೂಮೀಂದ್ರರೇ! ತಮ್ಮಾಜ್ಞಾನುಸಾರಮಾಗಿ ಈಪರದೇಶಸ್ಥರಾದ ಇರ್ವರಂ ಸನ್ನಿಧಿ ಯೊಳು ಸಮರ್ಪಿಸಿರುವೆನು ಎಂದೊರೆದಳು. ಆ ವೃದ್ಧನಾದ ಸತ್ಯವಿಜಯನಂ ರೆಪ್ಪೆಹಾ ಕದೆ ನೋಡುತ್ತಾ ಸ್ವಲ್ಪಕಾಲದಮೇಲೆ ಈ ಇರ್ವರೂ ಮದನ ಸುಂದರನಂ ನೋಡುತ್ತಾ ಇರಲು ಮುಖಚೆಷ್ಟೆಗಳಿಂ ವೃದ್ಧನಂ ತನ್ನ ಪ್ರಾಣಕಾಂತನೆಂದು ನಿಶ್ಚೈಸಿ ಆತನ ಬಳಿಯಂ ಸಾರಿ ಎಲ್ಲೆ ಆರ್ಯರೇ ತಾವು ಶುಚಿಸ್ಮಿತೆಯೆಂಬೋರ್ವ ಅಂಗನೆಯಂ ಮದುವೆಯಂ ಮಾಡಿಕೊಂಡದ್ದು ನೆನಪಿರುವದೋ ಅವರೊಳು ಏಕಾಕಾರರಾದ

ಮುಮುಳರಂ ಪಡೆದದ್ದು ನಿಜವೋ ಎನಲು ಅದಂ ಕೇಳುತಲಾ ವೃದ್ಧಂ ಕಂಣೀರು ಸುರಿಸುತ್ತಾ ಹೌದು ಎನಲು, ಈ ಯೋಗಿನಿಯು ಆ ಭಾಗ್ಯಹೀನಳಾದ ಅಂಗನೆಯು ನಾನೇ ಎಂದುಹೇಳಿ, ಪ್ರಾಣೇಶನೇ ನಿನ್ನ ಮುಖಾರವಿಂದಮಂ ನೋಡುವೆನೋ ಇಲ್ಲವೋ ಎಂದು ನಿಮ್ಮಿಂ ಅನೇಕ ದೇಶಂಗಳೊಳು ಹುಡಿಕಿ ಸಿಕ್ಕದೆ ನಿರಾಶೆಯುಳ್ಳವಳಾಗಿ ಈಯವಸ್ಥೆಯೊಳಿರುವೆನೆಂದು ಬಿಕ್ಕಿಬಿಕ್ಕಿ ಅಳುತ್ತಾ ಆನಂದಬಾಷ್ಪಗಳಿಂದಾತನ ದೇಹಮನೆಲ್ಲಮಂ ತೋಯಿಸುವಂತೆ ಅಲಿಂಗಿಸಿ ಅಂತೆಯೇ ಬಹುಕಾಲಮಾಗಿ ಅಗಲಿದ್ದ ಪತ್ಯಂಗಸಂಸರ್ಗದಿಂದ ಪರವಶಳಾಗಿ ಸ್ತಬ್ಧಳಾಗೆ, ಆ ವೃದ್ಧಕಾಂತೆಯು ಮುಖಮಂ ನೋಡಿ, ತನ್ನ ಹೆಂಡತಿಯೇ ಎಂದರಿತು, ಹಾ ಪ್ರಾಣಕಾಂತೆಯೇ ಜ್ಯೇಷ್ಠಪುತ್ರನಾದ ಮದನಸುಂದರಂ ಅವನ ಸೇವಕನೊಂದಿಗೆ ಹಡಗನ್ನು ಹತ್ತಿದಾಗ ನಿನ್ನ ಮುಖವಂ ನೋಡಿದ್ದು ದೈವವು ಇಂದು ನೋಡುವಂತೆ ಮಾಡಿತೇ, ಹಾ ಎಂದು ಪ್ರಲಾಪಿಸುತ್ತಾ ತಮ್ಮ ಪೂರ್ವಚರಿತ್ರೆಗಳೆಲ್ಲಮಂ ಗಟ್ಟಿಯಾಗಿ ಎಲ್ಲರೂ ಕೇಳುವಂತೆ ಹೇಳಿಕೊಳ್ಳುತ್ತಾ ಅಂತೆಯೇ ಸಮಾಧಾನನಾಗುವ ಕಾಲಕ್ಕೆ, ಕನಿಷ್ಠಮದನಸುಂದರಂ ತಂದೆ ತಾಯಿಗಳ ಬಳಿಯಂ ಸಾರಿ ತಂದೆಯನ್ನು ಆಲಿಂಗಿಸಿಕೊಂಡು, ಹಾ ತಂದೆಯೇ ಬಹು ಸಂವತ್ಸರಂಗಳಿಂ ನಿನ್ನಂ ನೋಡವೆ ಹೋದದ್ದರಿಂದ ಚಿಂತಾಕ್ರಾಂತನಾಗಿ ದೇಶದೇಶಂಗಳಂ ಸುತ್ತಿದ್ದರಿಂದಲೂ ವೃದ್ಧನಾದ ನೀನು ಒಡವಾಂತಿರುವದರಿಂದಲೂ, ಬೇಗನೆ ಕಂಡುಪಿಡಿಯಲು ಆಗದೆ ಹೋಯಿತು. ಹಾ ಜನನೀ ಎಂದು ನೀನೂ ತನ್ನ ಸೇವಕನೊಂದಿಗೆ ಅಣ್ಣನೂ ಹಡಗವಂ ಹತ್ತಿದಕಾಲದಲ್ಲಿ ನಿಮ್ಮ ಮುಖವಂ ಕಂಡದ್ದೇ ಹೊರತು ಎಷ್ಟು ದೇಶಂಗಳಂ ಸುತ್ತಿದರೂ ನೋಡಲು ಇಲ್ಲದೆ ಹೋಯಿತು. ಎಪರೀತಮಾದವಯೋ ಧರ್ಮದಿಂದಲೂ, ಏಯೋಗದುಃಖದಿಂದಲೂ ನಿಮ್ಮಂ ಕಂಡುಪಿಡಿಯುವದಕ್ಕೆನೆ ಅಸಾಧ್ಯವ. ತಂದೆಯವರ ಮುಖೇನ ತಾಯಿ ಎಂದರಿತೆನು. ಅಯ್ಯೋ ದೈವವು ನಮ್ಮನ್ನೆಲ್ಲರಂ ಹೀಗೆ ಅಗಲಿಸಿದ್ದಕ್ಕೆ ನಾವೇಂ ದೋಷಿಗಳೋ ಅದೃಷ್ಟವಶಾತ್ ಒಂದಾದೆವೆಂದು ಹಂಬಲಿಸುತ್ತಾ, ತಾಯಿತಂದೆಗಳಂ ಆಲಿಂಗಿಸಿ ಸುಮ್ಮಯಾಗಿ ನಿಂತಿದ್ದನು.

ಆಶ್ಚರ್ಯ ಪರವಶನಾಗಿದ್ದಾ ರತ್ನಾಂಗದ ಮಹಾರಾಯನು ಆ ಸತ್ಯಂಜಯನಂ ಕುರಿತು ಎಲೈ ಮಹಾತ್ಮನೇ ನಿನ್ನುಗಳೀಪರಿಯ ಚಿತ್ರಚರಿತ್ರಮುಂ ನೋಡಿ ಪರಮಾನಂದಾಶ್ಚರ್ಯ ಸಾಗರ ಮಗ್ನನಾದೆನು ಜನ್ಮಪ್ರಭೃತಿ ಈಪರಿಗೂ ನೋಡಲೂ ಇಲ್ಲ. ಕೇಳಿದ್ದೂ ಇಲ್ಲ, ಇನ್ನುಮುಂದೂ ಕೇಳುವದೂ ಇಲ್ಲ, ನೋಡುವದೂ ಇಲ್ಲ. ನೀನು ಮೊದಲು ನಿನ್ನ ವೃತ್ತಾಂತಮಂ ಹೇಳಿದಾಗ ಅವುಗಳ ಕೆಲವು ಭಾಗಗಳೊಳು ನಾಂ ಸಂದೇಹ ಗೊಂಡಿದ್ದೆಂ. ಈಗ ನೀವುಗಳು ಪರಸ್ಪರಮಾಗಿ ಮಾತಾಡಿಕೊಂಡಿದ್ದರಲ್ಲಿ ಆ ಸಂಶಯಗಳೆಲ್ಲಾ ನಿವೃತ್ತಿಯಂ ಹೊಂದಿದವ. ಈ ಜ್ಯೇಷ್ಠಮದನಸುಂದರನು ನಿಮ್ಮ ಕುಮಾರನೆಂಬುದರಲ್ಲಿ ಸಂದೇಹನೇ ಇಲ್ಲ. ಇವರಿರ್ವರೂ ನಿಮ್ಮ ಅವಳಿ ಮಕ್ಕಳೇ ಹೌದು, ಈ ಇರ್ವರು ಕುಶಲತಂತ್ರರೂ ನೀವು ಪಾಲಿಸಿದವರೇ ನಿಜವೆಂದೊ

ರೆಯುತ್ತಿರುವನಿತರೊಳಾ ಜ್ಯೇಷ್ಠಮದನಸುಂದರಂ ಇವರ ಸಮೀಪವನ್ನೈದಿ ತಂದೆ ತಾಯ್ಗಳಂ ವಂದಿಸಿ ಮುಕುಳಿತಕರಕಂಜನಾಗಿ ತಂದೆಯೇ ಅರಿಯದೆ ನೀನಾರೋ ಎಂದು ತಿರಸ್ಕರಿಸಿದ ನನ್ನ ಅಪರಾಧಮುಂ ಕ್ಷಮಿಸಬೇಕು ಬಹು ಬಾಲ್ಯದೊಳೇ ತಮ್ಮನ್ನಗಲಿ ದೇಶಾಂತರಗತನಾದೆನು. ಎಲೌ ಜನನೀ ನೀನೀಪುರದೊಳಿದ್ದರೂ ಅಜ್ಞಾನದಿಂದ ತಿಳಿಯದೆ ವಿಚಾರಹೀನನಾಗಿದ್ದ ನನ್ನ ಅಪರಾಧಮುಂ ಮನ್ನಿಸಬೇಕೆಂದು ಪ್ರಾರ್ಥಿಸುತ್ತಿರೆ, ಆ ಸೇವಕರೂ ಅಣ್ಣತಮ್ಮಂದಿರೂ ಸತಿಪತಿಗಳೂ ಪರಸ್ಪರಾಲಿಂಗನ ಸರಸಪೂರ್ವಕಕಥಾಪ್ರಸಂಗ ಲೋಲರಾಗಿರುವದಂ ಕಾಣುತ್ತಾ ರತ್ನಾಂಗದ ಮಹಾರಾಯಂ ನಿಲ್ಲುವದಕ್ಕೆಡೆಯಿಲ್ಲದೆ ಉಕ್ಕುತ್ತಿರುವ ಹರ್ಷಮುಳ್ಳವನಾಗಿ ಆ ಸತ್ಯವಿಜಯನಂ ಸಮೀಪಕ್ಕೆ ಕರೆದು ನಿಲ್ಲಿಸಿಕೊಂಡು, ಎಲ್ಲೈ ಮಹನೀಯ್ಯನೇ! ನೀನು ನೋಡಬೇಕಾದವರನ್ನೆಲ್ಲರಂ ನೋಡಿದೆ. ಅವರೊಂದಿಗೂ ಸೇರಿದವನಾದೆ ನಿನ್ನನೀವರಿಗಂ ಭಾಗ್ಯಹೀನನೆಂದರಿತಿದ್ದೆನು. ನಿನ್ನಂಥಾ ಪುಣ್ಯಶಾಲಿಯು ಸೃಷ್ಟಿಯೊಳ್ಳಿಯೂ ಇಲ್ಲವು. ಮುಂದೂ ಜನಿಸುವದಿಲ್ಲ ಎಂದು ಪ್ರೋತ್ಸಾಹಗೊಳಿಸಿ ಆ ಮದನಸುಂದರರಿರ್ವರನೊಂದೆಡೆಯೊಳು ಸೇವಕರನೊಂದೆಡೆಯೊಳಂ ನಿಲ್ಲಿಸಿ ಬ್ರಹ್ಮದೇಶದ ಮದನಸುಂದರನಂ ಕುರಿತು ಎಲ್ಲೈ, ಈ ಮೈದ್ದ ಸತ್ಯವಿಜಯನಂ ನೋಡಿ ನೀಂ ನನ್ನ ತಂದೆಯೇ ಅಲ್ಲವೆಂದು ನಿರಾಕರಿಸಬಹುದೆ? ಎನಲಾ ಮದನಸುಂದರಂ ನಾನಾ ಮಾತನ್ನೆ ಆಡಲಿಲ್ಲವೆನಲು, ಆ ರತ್ನಾಂಗದಮಹಾರಾಯಂ ತಾನೂ ಭ್ರಾಂತನಾದೆನೆಂದು ನಸುನಗುತ್ತಾ ಆ ಇರ್ವರನ್ನೂ ಅವರ ಸೇವಕರನಿರ್ವರನ್ನೂ ಪ್ರತ್ಯೇಕ ಪ್ರತ್ಯೇಕವಾಗಿ ದೂರದೂರದೊಳು ನಿಲ್ಲಿಸಿ ಆ ಆನಂದವಲ್ಲಿಯಂ ಸಮೀಪಕ್ಕೆ ಕರೆತರುವಂತೆ ತನ್ನ ದೂತಂಗಾಜ್ಞಾಪಿಸಿದನು.

ಆ ರಾಜದೂತಂ ಬಂದು ಅಮ್ಮಾ, ಆನಂದವಲ್ಲಿಯೇ! ಮಹಾರಾಯರು ತಮ್ಮಂ ಸಮೀಪಕ್ಕೆ ಕರೆತರುವಂತೆ ಆಜ್ಞಾಪಿಸಿದ್ದಾರೆನೆ, ಹಾ ವಿಧಿಯೇ! ಇದೇನು ನನಗೆ ಇಬ್ಬರ್ಗಂಡಂದಿರಾದರಲ್ಲಾ ನಾನು ಮದುವೆಯಾದದ್ದು ಒರ್ವನನ್ನೇ. ಈಗ ನೋಡಿದರೆ ಇಬ್ಬರಾಗಿ ಕಾಣುತ್ತಿರುವರೇ ಇದೇಂ ಸ್ವಪ್ನವೋ ಅಲ್ಲದಿರ್ದೊಡೆ ನಾನೂ ಭ್ರಾಂತಳಾಗಿ ಅವರಂತೆ ಮನೋವಿಕಾರಳಾದೆನೋ ತೋರದಲ್ಲಾ! ಎನುತ ಚಿಂತಾಪರವಶಳಾಗಿ ನಿಂತಿರ್ದವಳ ಕಿವಿಗಳಲ್ಲಿಯೇ ಆ ಮಾತು ಬೀಳದೆ ಸುಮ್ಮನೆ ನಿಂತಿರಲು, ಮರಳಿ ರಾಜದೂತನು ಅಮ್ಮನವರೇ ಏತಕಿಂತು ನಿಂತಿರುವಿರಿ? ಮಹಾರಾಜರು ತಮ್ಮ ಸಮೀಪಕ್ಕೆ ಬಂದು ನಿಲ್ಲುವಂತೆ ಆಜ್ಞಾಪಿಸಿರುವರೆಂದು ಹೇಳಲು, ಅದಂ ಕೇಳುತ್ತಾ ಭರದಿಂ ಆ ರಾಯನೆಡೆಗೈದಿ ಮುಕುಳಿತ ಕರಕಮಲಳಾಗಿ ನಿಂತು ಸ್ವಾಮಿ ಮಹಾರಾಯರೇ ಆಜ್ಞಾಪಿಸಬೇಕೆನೆ ರಾಯಂ ನಿಂತಿರುವೀ ಇರ್ವರೊಳು ನಿನ್ನೊಂದಿಗೆ ಕುಳಿತು ಇಂದು ಭೋಜನಮಂ ಮಾಡಿದವನಾರು ಎಂದು ಪ್ರಶ್ನೆಮಾಡಲು, ಸ್ವಾಮಿ ಈ ಇರ್ವರಂ ನೋಡಿದರೆ ನನ್ನ ಪತಿ ಇಂಥಾವನೆಂದೇ ನಿಶ್ಚಯಿಸಲಾರದೆ ಅಗಿದೆ, ಇವರಿಬ್ಬರೂ ವಿಕಾಕಾರರಾಗಿ ಭೇದವೇ ಕಾಣದವರಾಗಿ ತೋರುತ್ತಿರುವರು, ಎಂದನುಮಾನಿಸುತ ಈಶ

ನೇ ಈ ದಿನದೊಳು ನಮ್ಮ ಮನೆಯೊಳು ಭೋಜನಮಂ ಮಾಡಿದಾತನು ಎಂದು ಒರ್ವನೆ ತೋರಲು, ಆ ಜ್ಯೇಷ್ಠ ಚಿರಂಜೀವಿಯು ಸ್ವಾಮಿ ನಾನಿಂದು ಇವಳ ಮನೆಯಲ್ಲಿ ಭುಂಜಿಸಿದವನಲ್ಲವ್ರ. ಸತ್ಯಮರುತ್ತನ ಮನೆಯಲ್ಲಿ ಊಟಮಾಡಿದಿವೆನಲು ಆಮಾತಿಗೆ ಆ ಸತ್ಯಮರುತ್ತಮನು ಹೌದು ಎಂದನುಮೋದಿಸಿದನು. ಬಿಂಬಾಧರೆಯಂ ಕರೆದು ಎಲ್ಲೈ ಬಿಂಬಾಧರೆಯೇ ಇವರೊಳು ನಿನ್ನ ಭಾವನಾರು, ಇವನಿಗೂ ನಿನಗೂ ನಡೆದ ಮಾತುಗಳೇನು, ಹೇಳೆಂದು ಆಜ್ಞಾಪಿಸಲು, ಸ್ವಾಮಿ ಈತನಂ ಕುರಿತು ನವ್ಮೊಳು ಕುಪಿತನಾಗಿ ಇರುವದಕ್ಕೆ ಕಾರಣವೇನ್ರೈ ಭಾವನವರೇ ಎಂದು ನಾನಾ ಬಗೆಯಾದ ವಿನಯೋಕ್ತಿಗಳಿಂದ ಮನ್ನಿಸುತ್ತಾ ಬರಲು, ಈತಂ ನಾಂ ಮದುವೆಯಾದವನೇ ಅಲ್ಲ, ನಾನೀಕೆಯ ಪತಿಯೇ ಅಲ್ಲ. ನಾಂ ಪರದೇಶದಿಂದ ಈದಿನವೇ ಬಂದಿರುವೆನು ನೀನೆನ್ನಂ ಮದುವೆಯಾಗು ಎಂದು ಪೇಳಿದನೆಂದು ಕನಿಷ್ಠಮದನಸುಂದರನಂ ತೋರಲು ಮಹಾರಾಜರೇ ನಾನಾಮಾತುಗಳಂ ಆಡಿದ್ದು ನಿಜವ್ರ, ಎಂದು ಆ ಕನಿಷ್ಠಮದನಸುಂದರಂ ಹೇಳಿದನು.

ಅನಂತರ ಆ ಸ್ವರ್ಣ ಕಾರನನ್ನೂ, ಆ ಸತ್ಯಮರುತ್ತನನ್ನೂ, ಮದಯಾನೆಪುಂತ್ರಿಯೇ ಮೊದಲಾದವರೆಲ್ಲರಂ ಕರೆಯಿಸಿ ನಾಲ್ವರನ್ನೂ ಮುಂಗಡೆಯೊಳು ನಿಲ್ಲಿಸಿ ನಿಮಗೂ ಈ ಮದನಸುಂದರರಿಗೂ ನಡೆದ ಮಾತುಗಳೇನು? ಯಾರಾರು ಇವರಿಗೆ ಯಾವ ಯಾವ ಪದಾರ್ಥಂಗಳಂ ಕೊಟ್ಟಿರುವಿರಿ ಏನೇನು ಮಾತುಗಳಂ ಆಡಿದಿರಿ ಅದನ್ನೆಲ್ಲಮಂ ಹೇಳಿ ದೃಷ್ಟಾಂತಮಾಗಗೊಳಿಸಿರೆಂದು ಆ ರತ್ನಾಂಗದ ಮಹಾರಾಯನು ಪ್ರಶ್ನೆ ಮಾಡಲು, ಆ ಜನರೆಲ್ಲರೂ ಯಾರಿಗೆ ಯಾವ ಆಭರಣಮಂ ಕೊಟ್ಟಿದ್ದರೋ ಅವನನ್ನಲ್ಲದೆ ಅನ್ಯನಂ ತೋರುತ್ತಾ ಬರಲು, ಅದಕ್ಕವಂ ನಿರಾಕರಿಸೆ ಮತ್ತೊರ್ವಂ ಅದಂ ನಾಂ ತೆಗೆದುಕೊಂಡವನೆಂದು ಹೇಳುವನು, ಯಾರಸಂಗಡ ಯಾರು ಕಲಹಮಂ ಮಾಡಿದರೋ ಅವರನ್ನಲ್ಲದೆ ಅನ್ಯರಂ ತೋರಲು ನಾನಲ್ಲವೆಂದು ನಿರಾಕರಿಸುತ್ತಾ ಬರಲು ಅನ್ಯನು ನಾನವರಸಂಗಡ ವಾಗ್ವಾದಮಂ ಗೈದವನೆಂದು ಹೇಳುತ್ತಾ ಬರುವಂ. ಹೀಗೆ ಸಂಬಂಧ ವಿಲ್ಲದೆ ಭ್ರಾಂತರಂತೆ ನಟಿಸುತ್ತಾ ನುಡಿಯುತ್ತಾ ಬರುವ ಜನರಂನೋಡಿ ರಾಯಂ ಹೊಂದಿದ ಆಶ್ಚರ್ಯಕ್ಕೆ ಪಾರವನ್ನರಿಯದವನಾಗಿ ಮಂದಹಾಸಮಂ ಗೈಯ್ಯುತ್ತ ನಿಂತಿರುವವನಂ ಕುರಿತಾ ಯೋಗಿನಿಯೆಂಬ್ಪೆಸರನ್ನಿಟ್ಟುಕೊಂಡಿರ್ದ ಮಂದಸ್ಮಿತೆಯು ಕೈಯ್ಮುಗಿದಂ ಜೋಡಿಸಿಕೊಂಡು, ಸ್ವಾಮಿ ರತ್ನಾಂಗದಮಹಾರಾಜರೇ ನಾನೀವರಿಗೂ ಭಾಗ್ಯಹೀನಳೆಂದು ನಿಜವಾಗಿ ನಂಬಿದ್ದೆನು ದೈವ ಯೋಗದಿಂದ ಬಹುಕಾಲದ ಹಿಂದೆ ಅಗಲಿದ್ದ ಪತಿಯನ್ನೂ ಪುತ್ರರನ್ನೂ ಈ ದಿನದೊಳು ಹೊಂದಿದವಳಾದ್ದರಿಂದ ನನ್ನಂಥಾ ಭಾಗ್ಯಶಾಲಿನಿಯು ಈ ಭೂಮಂಡಲದೊಳಗಾಗಿಯೇ ಇಲ್ಲವೆಂದು ತಿಳಿದವಳಾಗಿದ್ದೇನೆ. ಭಗವದನುಗ್ರಹದಿಂದ ಸೇರಿದ ಈ ಬಾಂಧವರೊಂದಿಗೂ ತವ್ಮೊಡನೆಯೂ ಸೇರಿ ಈ ರಾತ್ರಿಯೊಳು ಭೋಜನಾದಿಗಳಂ ಮಾಡಿ ವಿನೋದಮಾಗಿ ಕಾಲಮಂ ಕಳೆ

ಯಜೀಕೆಂದು ಅಭಿಪ್ರಾಯಗೊಂಡವಳಾಗಿರುವೆನ್ನು, ನನ್ನ ಕೋರಿಕೆಯಂ ನೆರವೇರಿಸ ಬೇಕೆಂದು ಪ್ರಾರ್ಥಿಸುತ್ತಾ ಬರಲು ಆ ರಾಯಂ ಅದಕ್ಕನುಮತಿಯನ್ನಿತ್ತು ಜಿಂಬಾ ಧರೆಯಂ, ಕುರಿತು ಎಲ್ಲೆ ಮಂಗಳಾಂಗಿಯೇ ನಿನ್ನ ನೀಕನಿಷ್ಕಮದನಸುಂದರಂ ಏನೆಂದು ಪ್ರಶ್ನೆಮಾಡಿದಂ! ನಾ ಮದುವೆಯೇ ಇಲ್ಲದವನೆಂತಲೂ ನನ್ನಂ ಮದುವೆಯಾಗುವದಕ್ಕೆ ಇಷ್ಟವು ನಿನಗಿದ್ದರೆ ತಿಳಿಸುವಳಾಗು ಯಾವ ಅಭ್ಯಂತರವನ್ನೂ ಕೋರದೆ ಈ ಕ್ಷಣದ ಲ್ಲಿಯೇ ಮದುವೆಯಾಗುವೆನೆಂದು ಹೇಳಿದನೋ! ಎಂದು ಕೇಳಲಾ ಮಾತಿಗಾ ಜಿಂಬಾ ಧರೆಯು ಲಜ್ಜಾಭರನ ಮ್ರಿತಾಸ್ಯಳಾಗಿ ಮುಗುಳು ನಗೆಯಂ ಸೂಸುತ್ತಾ ಕಾಲ್ಬೆರಲಿ ನಿಂದ ಭೂಮಿಯಂ ಕೆರೆಯುತ್ತ ನಿಂತಿರುವ ಚಾತುರ್ಯಂಗಿಯ ಅಂಗಜೇನ್ಯಾದಿಗಳಂ ನೋಡಿ ಈಕೆಯ ಮನೋಭಾವವು ಅತನಂ ಮದುವೆಯಂ ಮಾಡಿಕೊಳ್ಳುವದಂಗಿರುವೆದೆಂದಾ ಭೂರಮಣಂ ತಿಳಿದವನಾಗಿ, ಜಿಂಬಾಧರೆಯಂ ಕುರಿತು ಎಲ್ಲೆ ಸುಂದರೀಮಣಿಯೇ ! ನಾಳೆಯ ಈಹೊತ್ತಿನೊಳಗಾಗಿಯೇ ಈಕನಿಷ್ಕಮದನಸುಂದರನಂ ಕ್ಕೈಪಿಡಿದು, ಮನೋ ರಥ ಸಿದ್ಧಿಯಂ ಹೊಂದಿ ಸುಖಿಯಾಗುಳಿಯೆಂದು ಹೇಳಿ, ಆ ಜನರೊಂದಿಗೆ ಆ ತಪೋ ವನವಂ ಪ್ರವೇಶಿಸಿ, ಆ ದಿನರಾತ್ರಿಯೆಲ್ಲಂ ದಿವ್ಯಭೋಜನ ಪರಿಹಾಸೋಕ್ತಿಗಳಿಂದ ಸುಖವಾಗಿ ಕಾಲಯಾಪಂ ಕಳೆಯುತ್ತಿರ್ದ್ದ ಮರುದಿನದುದಯದೊಳು ಆ ತಪೋವನ ದೊಳು ದಿವ್ಯತರವಾಗಿ ವಿವಾಹಮಂಟಪಮಂ ರಚಿಸಿ, ಸಕಲ ಸಂಭಾರಂಗಳಂ ಅಣಿಗೊ ಳಿಸಿ ಸಕಲ ಜನರಂ ಕರೆಯಿಸಿ, ಮಹಾ ಸಂಭ್ರಮದೊಳು ಆ ಜಿಂಬಾಧರೆಗೂ, ಕನಿಷ್ಕ ಮದನಸುಂದರನಿಗೂ ಪಾಣಿಗ್ರಹಣೋತ್ಸವಮಂ ಮಾಡಿಸಿ, ಎಲ್ಲರೂ ಪರಮಾನಂದ ಭರಿತರಾದರು.

ಅನಂತರ ಆ ರತ್ನಾಂಗದ ಮಹಾರಾಯಂ ಅವರಿಗೆಲ್ಲಾ ತಕ್ಕ ಮಂದಿರಗಳನ್ನೂ ನಿಯೋಗದ ಜನರನ್ನೂ ಅಣಿಮಾಡಿಕೊಟ್ಟು ಆ ವೃದ್ಧ ಸತ್ಯವಿಜಯನನ್ನೂ ಮುಖ್ಯ ಮಂತ್ರಿಸ್ಥಾನದೊಳಿಟ್ಟುಕೊಂಡು ರಾಜ್ಯಭಾರಮಂ ಮಾಡುತ್ತಿರಲು, ಕೆಲವುಕಾಲಕ್ಕೆ ಆ ರಾಯಂ ವೃದ್ಧನಾದ್ದರಿಂದ ರಾಜ್ಯಭಾರಮಂ ನಿರ್ವಹಿಸಲಾರದೆ ಕನಿಷ್ಕಮದನಸುಂ ದರನಿಗೆ ವಹಿಸಿಕೊಟ್ಟು ತಾಂ ವಿಶ್ರಾಂತಿಸುಖಮಂ ತಾಳಲು, ಆ ಮದನಸುಂದರನು ಪ್ರಜಾರಂಜಕನಾಗಿಯೂ, ನೀತಿಮಾರ್ಗ ತತ್ಪರನಾಗಿಯೂ ರಾಜ್ಯಮಂ ಸುಖವಾಗಿ ಪಾಲಿಸುತ್ತಿರುವ ಕಾಲದೊಳಾ ಸತ್ಯವಿಜಯಂ ತನ್ನ ಕಷ್ಟನಿವಾರಣೆಯಾದೀಪನಂ ಅತಿ ರಮಣೀಯ್ಯತರವಾಗಿ ಮಾಡಿಸಿ, ಅನೇಕ ವಿಚಿತ್ರತರ ಸರೋವರಂಗಳಂ ಮಾಪೀ ಕೂಪಂಗಳಂ ರಮಣೀಯ್ಯತರಮಾದ ಲೋಕೈಕ ಸುಂದರಮಾದೀ ಮಂಟಪಮಂ ರಚಿಸಿ, ತನ್ನ ಹೆಸರಿನಿಂದ ಶಾಸನವನ್ನೂ ಸಂಕ್ಷೇಪವಾಗಿ ತನ್ನ ಚರಿತ್ರೆಯನ್ನೂ ಈ ಎಡೆ ಬರಿಸಿದ್ದಾನೆಂದು ಆ ಪದ್ಮಾವತಿಯು ಹೇಳುತ್ತಾ ಆ ಬರಹಮಂ, ತೋರಿಸುತ್ತಾ ಬರಲು ಆ ಕೆಲಸಂಗಳೆಲ್ಲಮಂ ನೋಡುತ್ತಾ, ವಿಕ್ರಮಾರ್ಕಾವನೀಂದ್ರಂ ಪರಮಾಶ್ಚರ್ಯ ಪರವಶನಾಗಿ. ಆಮೂರುಸುಂದರಾಂತೆಯರೊಂದಿಗೆ ಅಲ್ಲಿನಕ್ಕೆ ಕೆಲಸಂಗಳಂನೋಡುತ್ತಾ

ಹೊರಟು ತಮ್ಮ ಪಟಗೃಹದೆಡೆಗೈತಂದನು. ಎಲ್ಲೈ ಪ್ರಾಣಕಾಂತನೇ! ಆರಾಯನ ಕಾಲಾನಂತರಮಿಾ ರಾಜ್ಯಂ ನಮ್ಮ ಹಿರಿಯರಕ್ಕೈವಶಮಾಗಿಅವರಿಂದಲೂಕ್ರಮವಾಗಿ ಈ ಉದ್ಯಾನವನಂ ಪಾಲಿಸುತ್ತಾ ಬಂದುದೆಂದು ಹೇಳಿ ಸುಮ್ಮನಾಗಿಲಿ ಕಾಲಕ್ಕೆ ಅರವಿಂದಬಾಂಧವನು, ಆಯಾಸ ಪರಿಹಾರಾರ್ಥವಾಗಿ, ಜಲಪೂರ್ಣಾಂಗನಾವಾಸಮಂ ಸೇರುವ ಸಮಯವಾಗದಂ ನೋಡುತ್ತಾ ರಾಯಂ ಸಮಸ್ತ ಪರಿವಾರದೊಂದಿಗೆ ಅಲ್ಲಿಂದ ಹೊರಟು ಅತ್ಯಂತ ರಮಣೀಯಮ್ಯಾಗಿ ಕೋಭಿಸುತ್ತಿರುವಜೀದಿಂಗಳೊಳು ಜಂದ್ರಿಕಾಮಹೋತ್ಸವವಂ ಅನುಭವಿಸುತ್ತಾ ರಾತ್ರಿಯ ಕಾಲಕ್ಕೆ ಮಣಿಪುರ ಮಂಸಾರಿ ಅಂತಃಪುರಮುಂ ಪ್ರವೇಶಿಸಿ ಸ್ನಾನಭೋಜನಾದಿಗಳಂ ಮಾಡಿಕೊಂಡುತನ್ನ ಪತ್ನಿಯರೊಂದಿಗೆ ಸರಸಸಲ್ಲಾಪಂಗಳನ್ನಾಡುತ್ತಾ ಕೇಳೀ ವಿನೋದವನ್ನನುಭವಿಸಿ ನಿದ್ರಾಂಗನಾವಶನಾಗಿ ನಿದ್ರಿಸುತ್ತಾ ರಾತ್ರಿಯಂ ಕಳೆದನೆಂಬಲ್ಲಿಗೆ ಕರ್ನಾಟಕಭಾಷಾವಿಜನರಚಿತ ಸೌಂದರ್ಯೋದ್ಭುತ ಶುಕರೀಜಿತ್ರಿಯಪೇಕ್ಷಿತಾಪಂಜರಿಯೆಂಬಲು ಪದ್ಮಾವತೀವನವಿಹಾರ ಕಥಾಪ್ರಸಂಗವೆಂಬ ನಾಲ್ಕನೆಯ ಭಾಗಂ ಸಂಪೂರ್ಣಮಾಯಿತು.

ಭೋಗವತೀ ಪರಾಭವವೆಂಬ ಐದನೆಯ ಭಾಗ.

ತದನಂತರಮಾ ವೀರಸೇನನೆಂಬ ರಾಯಂ ಮರುದಿನ ದುದಯದೊಳೆದ್ದು ನಿರ್ವರ್ತಿತಕಾಲ್ಯಕೃತ್ಯನಾಗಿ ಸಮಸ್ತ ಪರಿವಾರ ಪರಿವೃತನಾಗಿ ಒಡ್ಡೋಲಗದೊಳು ಕುಳಿತುಕೊಂಡು ತನ್ನ ಮುಖ್ಯಮಂತ್ರಿಯಾದ ಚಿತ್ರಸರ್ಮನಂ ಕುರಿತು ಎಲ್ಲೈ ಮಂತ್ರಿಶೇಖರಾ! ಈ ಪರಿಗೆ ನಿನ್ನು ಹೇಳಿದ ಕಥೆಗಳೆಲ್ಲ ಒಂದಕ್ಕಿಂತಲೂ ಮತ್ತೊಂದು ಸರ್ವೋತ್ತಮವಾಗಿಯೂ ಚಿತ್ರತರವಾಗಿಯೂ ಇತ್ತು ಪದ್ಮಾವತಿಯ ತಂಗಿಯರಲ್ಲಿ ಸೂರನೆ ಯುವಳು ಪೃಥ್ವಿವಾದತ್ಯರಾಯನಿಗೆನಿತು ದಿನಕ್ಕೆವಳಾದಳೋ ಆ ಪರಿಯಂ ಅರುಕೆವಾಡೆಂದು ರಾಯಂ ಸ್ಪಷ್ಟವಾಗಲಾ ಮಂತ್ರಿಯ ಹೇಳಲಾರಂಭಿಸಿದನು.

ಎಲ್ಲೈ ಮಹಾರಾಯನೇ ಲಾಲಿಪ್ಪರು! ಆ ವಿಕ್ರಮಾರ್ಕರಾಯಂ ವನವಿಹಾರಮುಂ ಮಾಡಿಕೊಂಡು ಬಂದ ಪೂರನೆ ದಿನದೊಳೆದ್ದು ಸ್ನಾನಾಹ್ನಿಕ ಜಪತಪಂಗಳಂ ಮಾಡಿಕೊಂಡು ದಿವ್ಯ ಭಕ್ಷ್ಯ ಭೋಜ್ಯಲೇಹ್ಯ ಚೋಷ್ಯಾದಿಗಳಿಂದೊಡಗೂಡಿದ ಮೃಷ್ಟಾನ್ನ ಭೋಜನಮುಂ ಮಾಡಿ ಗಂಧ ಕುಸುಮಾಂಬರಾಲಂಕೃತಗಾತ್ರನಾಗಿ ಪ್ರಾಣಕಾಂತೆಯರೊಂದಿಗೆ ಕುಳಿತು ತಾಂಬೂಲಮುಂ ಸವಿಯುತ ಸರಸಸಲ್ಲಾಪಗಳಿಂದ ಸೂರ್ಯಾಸ್ತಮಯಮುಂ ಕಂಡನು ಅನಂತರ ಕಾಲೋಚಿತ ಕರ್ಮಂಗಳಂ ನೆರವೇರಿಸಿಕೊಂಡು ರಾತ್ರಿಯ ಭೋಜನಮುಂ ಮಾಡಿ ಅಲಂಕೃತೆಯರಾದ ಕಾಂತಾತ್ರಯದೊಂದಿಗೆ ಪೊರಟು ಭೋಗವತಿಯ ಅಂತಃಪುರಮಂ ಸೇರಿ ಆಕೆಯಿಂದಣೆ ಮಾಡಿಸಲ್ಪಟ್ಟು ಅಲಂಕಾರವಾಗಿ ಶೋಭಿಸುತ್ತಿರುವ ಮಣಿಮಂಚಾರೂಢನಾಗಿ ಕಾಂತೆಯರೊಂದಿಗೆ ಕುಳಿತುಕೊಳ್ಳಲು ಈ ಸಮಾಚಾರವನ್ನರಿತಾ ಭೋಗವತಿಯು ತನ್ನ ಕಾಲೋಚಿತ ಕೃತ್ಯಂಗಳಂ ನೆರವೇರಿಸಿಕೊಂಡು ಭೂಷಣಾಂ

ಬರ ಭೂಷಿತಳಾಗಿ, ರಾಯನ ಬರುವಿಕೆಯಂ ನಿರೀಕ್ಷಿಸುತಿದ್ದವಳು ಅಂತೆಯೇ ಅಂತಃಪುರಮಂಸಾರಿ ತನಗಾಗಿ ಪರುಠವಿಸಿರ್ದ ಮಂಚಾರೂಢಳಾಗಿ ಎರಡು ಮುಂಡಗಳ ಮಧ್ಯಭಾಗದೊಳು ದಿವ್ಯ ತರಮಾದ ಚಿತ್ರದ ಪರ್ದೆಯಂ ಬಿಡಿಸಿ ಮೌನಧಾರಿಣಿಯಾಗಿ ಕುಳಿತುಕೊಳ್ಳಲು ಈ ಪರಿಯನ್ನರಿತಾ ವಿಕ್ರಮಾರ್ಕಾವನೀಂದ್ರನು ಭೇತಾಳನಂ ಸ್ಮರಿಸಲು ಆ ಭೂತಾಧಿಪತಿಯಾದ ಭೇತಾಳನು ಪ್ರತ್ಯಕ್ಷನಾಗಿ ನಿಂತು ಸ್ವಾಮಿ ಮಹಾರಾಜರೇ ? ಕಾರ್ಯಮನ್ನಾಜ್ಞಾಪಿಸಬೇಕೆಂದು ವಿಜ್ಞಾಪಿಸೆ ವಿಕ್ರಮಾದಿತ್ಯರಾಯಂ ಅಯ್ಯಾ ಮಹಾನುಭಾವನೇ ಈ ಮೂರುಮಂದಿಯರಂ ನಿನ್ನ ಸಹಾಯದಿಂದ ಸ್ವಾಧೀನವಾಡಿಕೊಂಡು ಸುಖಿಯಾದೆನು. ಈಕೆಯೊರ್ವಳು ನಿಂತಿರುವಳು ಈಕೆಯು ಈ ಮುವ್ವರಿಗಿಂತಲೂ ಜದುರೆಯೆಂದು ತೋರುವದು, ಅದರೂ ಗರ್ವಿತೆಯಾದವಳಲ್ಲವು ಆದ್ದರಿಂದ ಉಪಾಯವಾಗಿ ಈಕೆಯಂ ಪರಾಭವಮಂ ಹೊಂದಿಸಿ ನನ್ನ ಕೈವಶಳಂ ಮಾಡಬೇಕೆಂದು ರಹಸ್ಯದೊಳೊರೆದು ಕಳುಹಿ ಆ ಅಂತಃಪುರದ ಗೋಡೆಗಳಂ ನೋಡಲು ವಿಧವಿಧಮಾದ ಪಕ್ಷಿಗಳ ರೂಪಗಳಂ ಅನೇಕ ವಿಧಂಗಳಾದ ಮೃಗರೂಪಂಗಳಂ ಚತುರಂಗ ಬಲದಾಕಾರಂಗಳಂ ಬಹು ಚಿತ್ರಮಾಗಿ ಸಜ್ಜೀವಭಾವಮಂ ಗೊಳಿಸಿ ಚಿತ್ರಿಸಿರುವದಂನೋಡಿ ಆ ಚಿತ್ರಪ್ರತಿಮೆಗಳೊಳೊರ್ವ ಸೇನಾ ನಾಯಕನಂ ನೋಡಿ ಎಲ್ಲೆ ಸ್ಯೆನ್ಯಾಧಿಪತಿಯೇ ಹೊತ್ತು ಹೋಗುವಂತೆ ಮಹದಾಶ್ಚರ್ಯಕರವಾಗಿರುವದೊಂದು ಕಥೆಯಂ ಹೇಳೆಂದಾಜ್ಞಾಪಿಸಲು ಭೇತಾಳನಾ ಚಿತ್ರಪ್ರತಿಮೆಯೊಳು ಸೇರಿ ಕಥೆಯಂ ಹೇಳಲಾರಂಭಿಸಿದನದೆಂತೆನೆ.

ಎಲ್ಲೆ ವಿಕ್ರಮಾರ್ಕಾವನೀಂದ್ರನೇ ! ಲಾಲಿಸು ಈ ಭರತಖಂಡದೊಳು ಜ್ಯೋತಿಷ್ಮತೀ ಎಂಬುವದೊಂದು ಪ್ರಸಿದ್ಧ ಪಟ್ಟಣಮಿರ್ದುದು, ಆ ಪಟ್ಟಣವಂ ಚಂದ್ರಜನೆಂಬ ಮಹಾರಾಯನು ಪರಿಪಾಲಿಸುತಿರ್ದಂ. ಆತನು ಧೈರ್ಯದಲ್ಲಿ ಹಿಮವಂತನನ್ನೂ ಶೌರ್ಯದಲ್ಲಿ ಚಂದ್ರಚೂಡನನ್ನೂ ಪರಾಕ್ರಮದಲ್ಲಿ ಶ್ರೀರಾಮಮೂರ್ತಿಯನ್ನೂ ಸಕಲ ಸಂಪತ್ತಿನಲ್ಲಿಯೂ ದುರ್ಯೋಧನನನ್ನೂ ಶಾಂತದಲ್ಲಿ ಹರಿಶ್ಚಂದ್ರಮಹಾರಾಯನನ್ನೂ ಚಂದ್ರನನ್ನೂ ಮನೋ ದೃಢದಲ್ಲಿ ಬಲಿಚಕ್ರವರ್ತಿಯನ್ನೂ ನೀತಿಯಲ್ಲಿ ಮನುಚಕ್ರವರ್ತಿಯನ್ನೂ ಜೈಸಿರುವನಾಗಿಯೂ, ಪರಸ್ತ್ರೀಮುಖಾವಲೋಕನವಂ ಸ್ವಪ್ನದಲ್ಲಾದರೂ ಸ್ಮರಿಸದವನಾಗಿಯೂ ಶಮದಮಾದಿಗಳಿಂದೊಪ್ಪುತ್ತಾ ಸರ್ವೋತ್ತಮ ಮಹಾರಾಯನೆಂದು, ಯಶಸ್ಸಂ ಹೊಂದಿ ಪ್ರಜಾರಂಜನೈಕ ಪರನಾಗಿ ರಾಜ್ಯಭಾರಮಂ ಮಾಡುತ್ತಾ ಬರುತ್ತಿರೆ ಪ್ರಜೆಗಳೆಲ್ಲರೂ ದೈವಭಕ್ತಿ ಯುಕ್ತರಾಗಿಯೂ ವರ್ಣಾಶ್ರಮ ಚಾರ ತತ್ಪರರಾಗಿಯೂ ಸ್ವಧರ್ಮ ವ್ಯಾಪಾರಲಬ್ಧಲಾಭ ಸುಖಿಗಳಾಗಿಯೂ ಬಾಳುತ್ತಿದ್ದರು. ಆತನ ದೇಶದೊಳು ಕಳವು ಪಾದರ ಮುಳಿಸು ಬಂದಿದಳ ಉಳ ಪಳವನ್ಯಾಯ ಆರಡಿಗಳೆಂಬುವದೇ ತಲೆದೋರದೆ ಕಾಲಕಾಲಕ್ಕೆ ವರ್ಷಂಗಳು ಸುರಿಯುತ್ತಾ ಸ್ವೇಚ್ಛೆಯಾಗಿ ಭೂಮಿಗಳು ಬೆಳೆಯುತ್ತಾ ನದೀತಟಾಕಕಾಸಾರ ಸರೋವರಂಗಳು

ಬತ್ತದೆ, ಜಲಪೂರಿತಂಗಳಾಗಿ ಶೋಭಿಸುತ್ತಿರ್ದವು. ಹೀಗಿರುವ ರಾಜ್ಯಮಂ ಪಾಲಿಸುತ್ತಿರುವ ಕಾಲದೊಳು ಸರ್ವಾಂಗಸುಂದರಿಯಾಗಿಯೂ ಸರೋತ್ತಮ ಗುಣಾಭರಣೆಯಾಗಿಯೂ ಇದ್ದ ಜ್ಯೋತಿರ್ಮತಿಯೆಂಬ ಕಾಂತಾಮಣಿಯಂ ಪಾಣಿಗ್ರಹಣಮಂ ಮಾಡಿಕೊಂಡು ಅವಳೊಂದಿಗೆ ಸಕಲ ಭೋಗಂಗಗಳಂ ಅನುಭವಿಸುತ್ತಾ ಕ್ಲುಪ್ತರತಿಯುಳ್ಳವನಾಗಿ ಸುಖದಿಂದಿರುತ್ತಿರುವಲ್ಲಿ, ಆಕೆಯ ಗರ್ಭಾಂಬುಧಿಯೊಳು ಮಣಿವರ್ಮ ಚಿತ್ರವರ್ಮರೆಂಬಿರ್ವರು ಸುಕುಮಾರರುದಯಿಸಿದರು. ಈ ಕುಮಾರರ ಪೂರ್ವಕರ್ಮ ಬಲದಿಂದ ತಂದೆಯಾದ ಜಂದ್ರಧ್ವಜ ಮಹಾರಾಯನಿಗೆ ಸಕಲ ಶಕ್ತಿಗಳೂ ಅಂತರ್ಧಾನಂಗಳಾಗುತ್ತಾ ಬಂದವು, ಈ ಸಮಯಮಂತರಿಸಿದ ಶತ್ರುರಾಯರುಂ ಸೈನ್ಯಸಮಾವೃತರಾಗಿ ಈ ರಾಜನಂ ಜಯಿಸಬೇಕೆಂದು ಚತುರಂಗ ಸಮಾವೃತರಾಗಿ ಬಂದು ಪಟ್ಟಣವಂ ಮುತ್ತಿಕೊಳ್ಳಲು, ರಾಯನಿಗೆ ದುರ್ಯೋಗಪ್ರಾಬಲ್ಯಾವಸ್ಥೆಯಿಂದ ಬುದ್ಧಿಯು ನಾಶವಾಗೆ ಸಕಲ ಸಹಾಯ ಸಂಪತ್ತಿಯೂ ತಲೆದೋರದೆ ಹೋಗಲು, ಶತ್ರುಗಳಂ ಜಯಿಸುವ ಮಹಾ ಪ್ರಯತ್ನಮಂ ಮಾಡದೆ ಪಲಾಯನಸೂಕ್ತಮಂ ಮಾಡುವ ಬುದ್ಧಿಯು ನೆಲಗೊಳ್ಳಲು, ತನ್ನ ಸಮಸ್ತ ಶಸ್ತ್ರ, ಪದಾರ್ಥಂಗಳಂ ನೆಲದೊಳು ಭದ್ರಪಡಿಸಿ, ಜೊತೆಯೊಳು ಬೇಕಾದ ಅಮೂಲ್ಯ ರತ್ನಾಭರಣ, ಧನಕನಕಾದಿಗಳಂ ಕೊಂಡು, ಪತ್ನೀ ಪುತ್ರ ಸಮನ್ವಿತನಾಗಿ ಜೋರಪೂಗರ್ದೊಳು ಹೊರಟು, ಸಾಮ್ರಾಜ್ಯ ಲಕ್ಷ್ಮಿಗೆ ಮೊಗತಿರುಗಿ ಕಾಡುಪಾಲಾದಂ.

ಹಾಗೆ ಅರಣ್ಯಮಾರ್ಗವಾಗಿ ಬಹುದೂರಂ ಬಂದು ಪದ್ಮಸಾಗರವೆಂಬ ಒಂದ ಗ್ರಹಾರಮಂ ಸಾರಿ ಬ್ರಾಹ್ಮಣ ವೇಷಧಾರಿಯಾಗಿ ತನ್ನ ಹೆಸರು ಗಿರೀಜೇಶನೆಂತಲೂ, ತನ್ನ ಹೆಂಡತಿಗೆ ಜಾನಕೀ ಎಂತಲೂ, ನಾಗಕುಮಾರ, ಶ್ರೀಪತಿಗಳೆಂದು ಕುಮಾರರಿಗೂ ಪೆಸರುಗಳಂ ಕಲ್ಪಿಸಿಕೊಂಡು, ಬ್ರಾಹ್ಮಣ ವೃತ್ತಿಯಂ ಹೊರತೋರುತ್ತಾ, ತನ್ನ ಮಕ್ಕಳಂ ಪೋಷಿಸುತ್ತಾ ತಕ್ಕ ಕೆಲಸಗಾರರಂ ನೇಮಿಸಿಕೊಂಡು ಕಾಲಮಂ ಕಳೆಯುತಿರ್ದಂ. ಹೀಗೆ ಹದಿನಾರು ಸಂವತ್ಸರಂಗಳು ಕಳೆಯಲು, ತಾಂ ತಂದಿರ್ದ ಪದಾರ್ಥಂ ಮುಗಿದು ಹೋಗುತ್ತಾ ಬರಲು, ಒಂದಾನೊಂದು ರಾತ್ರಿಯೊಳು ತನ್ನ ಕಾಂತೆಯೊಡನೆ ಸೇರಿ, ರತಿಕ್ರೀಡಾ ಸಮಾಲೋಲನಾಗಿರುವ ಕಾಲದೊಳು ಕಾಂತೆಯಂ ಕುರಿತು, ಎಲ್ಲೆ ಪ್ರಾಣಕಾಂತೆಯೇ! ನನ್ನ ನೀವರಿಗೂ ಒಂದೇ ಘನಮಾದ ಚಿಂತೆಯು ಅವರಿಸಿಕೊಂಡಿರ್ದುದು, ಈಗಲಾದರೋ ಅನೇಕ ಮುಖಂಗಳೊಳು ವಿಧ ವಿಧಮಾದ ಯೋಜನೆಗಳು ಅವರಿಸಿ ಮುಂದಂ ಹಾಯಲೀಸದು, ಪುತ್ರರಾದರೋ ಪ್ರಾಪ್ತವಯಸ್ಕರಾಗಿರುತ್ತಾರೆ, ತಂದಿರ್ದ ದ್ರವ್ಯಮಂ ವ್ಯಯಮಾಡಿ, ವಿದ್ಯಾಭ್ಯಾಸಮಂ ಮಾಡಿ ಈವರೆಗಂ ಪೋಷಿಸಿದೆನು. ಇದೇರೀತಿಯಾಗಿ ಕಾಲಕ್ಷೇಪಮಂ ಮಾಡಲು ದ್ರವ್ಯೋಪಪತ್ತಿಯಿಲ್ಲದೆ ಇಹುದು. ಈಗಿರುವದನೆಲ್ಲಮಂ ಕಾಸು ಕರಗಿಸಿದರೆ ಮೂರು ನಾಲ್ಕು ಸಂವತ್ಸರಗಳೊಳಗಾಗಿ ಎಲ್ಲವೂ ಮುಗಿದು ಹೋಗುವುದು.

ಈ ಮಕ್ಕಳಾದರೋ ವ್ಯಾಯ ಸಮರ್ಥರಾಗಿ ದ್ರವ್ಯಾರ್ಜನೆಯುಂ ಮಾಡಿ, ನಮ್ಮುಂ ಕಾಪಾಡಬೇಕು. ಅವರಿಗೆ ಈರೀತಿಗಳೊಂದೂ ತಿಳಿಯದು, ಆಟಂಗಳಂ ಆಡುತ್ತಾ ಕಾಲಮುಂ ಕಳೆಯುತ್ತಿರುವರು. ಅವರಂ ಮಾತಾಡಿಸುವದಕ್ಕೆ ಹೋದರೆ ಮೇಲೆ ಒರುವರು ಡಂಡಿಸುವ ಕಾಲಮಲ್ಲಂ.

ಶ್ಲೋ ॥ ಸ್ವಾಮಿವತ್ಪಂಚವರ್ಷಾಣಿ ದಶವರ್ಷಾಣಿದಾಸವತ್ ।
ಪ್ರಾಪ್ತೇತುಷೋಡಶೇವರ್ಷೇ ಪುತ್ರಂಮಿತ್ರವದಾಚರೇತ್ ॥

ಹುಟ್ಟಿದ ಮಕ್ಕಳನ್ನು ೫ ಸಂವತ್ಸರಗಳವರಿಗೂ, ದೇವರಂತೆ ಭಾವಿಸಿ, ಸಂರಕ್ಷಿಸಬೇಕು. ಹತ್ತುಸಂವತ್ಸರಗಳವರಿಗೂ, ದಾಸಭಾವದಿಂ ಪೊರೆಯಬೇಕು ಹದಿನಾರು ವರುಷಂಗಳು ತುಂಬಿದ ಒಳಿಕ ಆ ಪುತ್ರನಂ ಮಿತ್ರನಂತೆ ಭಾವಿಸಿ, ನಡೆದುಕೊಳ್ಳುತ್ತಾ ಬರಬೇಕು. ಎಂದು ಧರ್ಮಶಾಸ್ತ್ರವಿರುವದರಿಂದ ಅದಕ್ಕೆ ವಿರೋಧವಾಗಿ ನಡೆಯಿಸಿದರೆ, ಅವರು ಕೈಗೆ ಸಿಕ್ಕದೆ ಸ್ವೇಚ್ಛೆಯಾಗಿ ದೇಶಾಂತರಗತರಾಗಿ ಕೆಟ್ಟು ಹೋಗುತ್ತಾರೆ. ನಮ್ಮ ಮುಂದಿನ ಸ್ಥಿತಿಯೆ ಅವರಿಗೆ ತಿಳಿಯುವು. ತಾವು ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದವರೆಂತಲೇ ತಿಳಿದಿದ್ದಾರೆ. ನಮ್ಮ ದುರ್ಯೋಗದಿಂದ ಸಕಲ ರಾಜ್ಯ ಕೋಶಂಗಳಂ ಕಳೆದುಕೊಂಡು, ಈ ದುರವಸ್ಥೆಯಂ ಹೊಂದಬೇಕಾಗಿದ್ದದ್ದರಿಂದಲೇ ಹೀಗಾಯ್ತು, ಮುಂದು ಮಾನವಾಗಿ ದೈವಮೆಂತು ಪಾಲಿಪನೋ ಕಾಣೆನು. ಮಕ್ಕಳ ಸಹಾಯಮಾದರೋ ಕಿಂಚಿತ್ತಾದರೂ ನನಗಿಲ್ಲನು. ರಾಜ್ಯಭ್ರಷ್ಟತನಾಗಿ ಈ ಅವಸ್ಥೆಯೊಳಿರುವದೊಂದು ಚಿಂತೆಯೂ, ಮಕ್ಕಳು ಒಂದು ವಿಧದಲ್ಲಿಯಾದರೂ ಪ್ರಯೋಜನಕ್ಕೆ ಬಾರದಿರುವದೊಂದು ಚಿಂತೆಯು. ಈ ಅವಸ್ಥೆಯಲ್ಲಿ ಮುಂದೆಂತು ಮಾನವಾಗಿ ಮತ್ತೊಬ್ಬರ ಹೊಸಲಿಗೆ ಕೋಡದೆ ಜೀವಿಸುವದೆಂಬುದೊಂದು ಚಿಂತೆಯು, ಹೀಗೆ ತರಂಗ ತರಂಗವಾಗಿ ಚಿಂತಾಂಬುಧಿಯ ತೆರೆಗಳೊಳು ತೇಲಾಡುತಿರುವ ನನ್ನ ದೇಹವು ದಹಿಸಿ ಹೋಗುತ್ತಿರುವದು. ಈ ಚಿಂತೆಯು ದೇಹಮಂ ದಹಿಸುವಂತೆ ಸಾಕ್ಷಾದಗ್ನಿಯೂ ಕೂಡ ದಹಿಸಲಾರದು,

ಶ್ಲೋ ॥ ಚಿಂತಾಯಾಶ್ಚಿತಾಯಾಶ್ಚಿಬಿಂದು ಮಾತ್ರಂವಿಶೇಷತಃ ।
ಚಿತಾದಹತಿನಿರ್ಜೀವಂ ಚಿಂತಾದಹತಿಜೀವಿನಂ ॥

ಚಿಂತೆಯೆಂಬುವದಕ್ಕೂ, ಚಿತೆಯೆಂಬುವದಕ್ಕೂ, ಒಂದು ಬಿಂದುವೇ ಹೆಚ್ಚು ಕಮ್ಮಿಯು. ಚಿತೆಯು ನಿರ್ಜೀವವಾದ ದೇಹವನ್ನು ದಹಿಸುತ್ತದೆ. ಚಿಂತೆಯು ಜೀವ ಸಹಿತವಾದ ಶರೀರವನ್ನೇ ಸುಡುವದೆಂದು, ನ್ಯಾಯಶಾಸ್ತ್ರವು ಹೇಳುವುದು. ಅದ್ದರಿಂದೀಚಿಂತೆಯೇ ನನ್ನಂಕೊಲ್ಲುವದೆಂದುತನ್ನದುಃಖವನ್ನು ತನ್ನ ಪ್ರಾಣಕಾಂತೆಯೊಡನೆ ಹೇಳಿಕೊಳ್ಳುತ್ತಿರುವದನ್ನು ಹಜಾರದೊಳು ಮಲಗಿದ್ದ ಇವರು ಕುಮಾರರೂ ಕೇಳಿಚಿಂತಾವರವಶರಾದರು. ಆಜ್ಯೋತಿರ್ಮತಿಯುಕೇಳಿ ಪ್ರಾಣೇಶನೇ! ಪಣೆಯೊಳು ಬರೆದದೃಷ್ಟಿಣನ

ಬರಹಮೆಂತಿಹುದೋ, ಅಂತಾಗುವದೇಹೊರತು ಅದಂ ಮಾರುವದಕ್ಕೆ ಯಾರಿಗೆತಾನೇ ಸಾಧ್ಯವು ? ಅವರು ಯೋಗ್ಯರಾಗಿ ಬಾಳುವಂತಿಹುದೋ, ಅಯೋಗ್ಯರಾಗಿ ನಾಶರಾಗುವಂತಿಹುದೋ ಕಾಣಲರಿಯದು, ವೃಥಾ ಚಿಂತಾಕ್ರಾಂತರಾಗಿ ದೇಹಾಯಾಸಂ ತಾಳಲಾಗದೆಂದು ಸಮಾಧಾನಮಂ ಹೇಳಿ. ಸುಖಸಲ್ಲಾಪಗಳಿಂ ರಾತ್ರಿಯಂ ಸುಖಮೂ ಕಳೆದು ಕೆಲದಿನಗಳ ನಂತರಮಾಸುದತೀಮಣಿಯು, ತನ್ನ ನಂದನರಿ ರ್ವರಂ ಕರೆದು ಬಳಿಯೊಳು ಕುಳ್ಳಿರಿಸಿಕೊಂಡು, ಎಲ್ಲೆ ಸುಕುಮಾರರೇ ನೀವೀವರಿಗೂಬಾಲರಾಗಿರುವದರಿಂದಹೇಗಾಡಿದರೂ ಸರಿಯಾಗಿತ್ತು, ಈಗಪ್ರಾಪ್ತವಯಸ್ಕರಾಗಿರುತ್ತೀರಿ ನಿಮ್ಮ ಜಾತಿಪದ್ಧತಿಗಳೇ ನಿಮಗೆ ತಿಳಿಯದು, ಬ್ರಾಹ್ಮಣರೆಂದು ನೀವು ಹೊಂದಿರುವ ಅಭಿ ಪ್ರಾಯವು ನಿಜವಾದುದಲ್ಲ, ಜಾತಿಯಲ್ಲಿ ನಾವಕ್ಷತ್ರಿಯರು ನಮ್ಮರಾಜ್ಯವು, ಜ್ಯೋತಿಷ್ಮತೀ ಪಟ್ಟಣವು ನಿಮ್ಮತಂದೆಯು ನಳ, ಹರಿಶ್ಚಂದ್ರಾದಿಮಹಾರಾಯರಿಗಿಂತಲೂ, ಸತ್ಯವಂತನಾಗಿಯೂ, ಪ್ರಜಾರಂಜಕನಾಗಿಯೂ ದೇಶಮಂ ಪಾಲಿಸುತ್ತಿರ್ದಂ. ಪ್ರಾರಬ್ಧ ಕರ್ಮಬಲದಿಂದ ರಾಜ್ಯಲಕ್ಷ್ಮಿಯುಶತ್ರುಗಳ ಕೈಸಾರಿ, ಈದುರವಸ್ಥೆಯು ಪ್ರಾಪ್ತಿಯಾದುದು, ನೀವಾದರೋ ವಿದ್ಯಾಸಂಪನ್ನರಾಗಿಯೂ, ಪ್ರಾಪ್ತವಯಸ್ಕರಾಗಿಯೂ ಆದಿರಿ, ಇನ್ನು ಮುಂದಾದರೂ ವಿವೇಕವಂ ತಾಳಿ, ನಿಮ್ಮ ಕುಲಪದ್ಧತಿಯಂತೆ ತಕ್ಕ ಪ್ರಯತ್ನಮುಂ ಮಾಡಿದರೆ, ಭವಿತವ್ಯತೆಯು ಭಗವಂತನ ಯತ್ನವಾಗಿರುವದು. ಯೋಗ್ಯಮಾದ ನಿಮ್ಮಾ ಕಾಲಮಂ ವ್ಯರ್ಥಾ ಮಾಡಬಾರದೆಂದು ನಯೋಕ್ತಿಗಳಿಂದ ಬುದ್ಧಿ ಹೇಳುತ್ತಾ ಬಹುದುಃಖಾಕ್ರಾಂತಳಾಗಿ ತನ್ನ ಪೂರ್ವಸ್ಥಿತಿಯಂ ಸ್ಮರಿಸಿಕೊಂಡ ಳಾದ್ದರಿಂದ ಪಾರವಿಲ್ಲದೇ ಶೋಕಿಸುತ್ತಾ ಒರಲಾ ಇರ್ವರೂ ಅಕೆಯಂ ಕುರಿತು, ಅಮ್ಮಾ ! ಈವರಿಗೂ ನಮ್ಮ ಜಾತಿಯ ಮರ್ಮವೇ ನಮಗೆ ತಿಳಿಯಲಿಲ್ಲ. ವಿದ್ಯೆ ಏನ್ನಾದರೋ ತಾತನವರು ಕಲಿಸಿದ್ದಾರೆ, ತಾವು ಹೇಳಿದ್ದರಿಂದಲೇ ಕ್ಷತ್ರಿಯರೆಂದು ತಿಳಿದವರಾದೆವು. ನಾವ್ರ ಮಾತಾಪಿತೃಗಳ ಸೇವೆಯಿಂದಲ್ಲದೆ ಮತ್ತಾವುದರಿಂದಲೂ, ಈ ಋಣವಿಮುಕ್ತರಾಗಲಾರೆವು, ತಾವು ಶೋಕಿಸಲಾಗದು, ನಾವು ವಿದ್ಯಾವಂತರಾಗಿಯೂ, ಪ್ರಾಯ ಸಮರ್ಥರಾಗಿಯೂ, ವೀರಕ್ಷತ್ರಿಯರಾಗಿಯೂ ಇದ್ದಮೇಲೆ ತಕ್ಕ ಪ್ರಯತ್ನಮಂ ಮಾಡದೆ ಹೋದರೆ ನಾವು ಪಶುಗಳೇ ಹೊರತು ಮನುಷ್ಯರಾಗಲಾರೆವು, ಇಷ್ಟರ ಮೇಲೆ ದೈವಯೋಗವೆಂತಿಹುದೋ ಕಾಣೆವು. ಇತಃಪರಂ ತಾವು ಕಂಣೀರಂ ಹಾಕಬಾರದೆಂದು ತಾಯಿಯಂ ಸಂತೈಸಿದವರಾಗಿ ಒಂದಾನೊಂದು ಕಾಲದೊಳು ಇರ್ವರೂ ಕುಳಿತು ಯೋಚಿಸುತ್ತಾ ಬಂದರದೆಂತೆನೆ.

ಶ್ಲೋ॥ ಉದ್ಯೋಗೇ ಪ್ರಾಪ್ತು ಯಾದರ್ಥಂ ಯಶೋವಾಮೃತ್ಯುಮಾಪ್ನು ಯಾತ್ ।
ನಿರುದ್ಯೋಗೇಲಭೇನ್ಮೃತ್ಯುಂ ನಯಶೋನಾರ್ಥಸಂಪದಃ ॥

ಎಲ್ಲೆ ಅಣ್ಣನೇ ಯಾವದಾದರೂ ಒಂದು ಕಾರ್ಯಮಂ ಮಾಡಲು ಮನುಷ್ಯನು ಯತ್ನಿಸಿದವನಾದರೆ, ಆ ಕಾರ್ಯಮೂಲವಾಗಿ ದ್ರವ್ಯವಂ ಸಂಪಾದಿಸು

ವನು. ಒಂದುವೇಳೆ ಅರ್ಥಪ್ರಾಪ್ತಿಯಾಗದಿದ್ದರೂ ಕೀರ್ತಿಯನ್ನಾದರೂ ಹೊಂದುತ್ತಾನೆ. ಇವೆರಡೂ ಉಂಟಾಗದೆ ಹೋದರೆ ಮರಣವನ್ನು ಹೊಂದುವನು. ಯಾವ ಕಾರ್ಯಕ್ಕೂ ಪ್ರಯತ್ನವನ್ನೇ ಮಾಡದವನು, ಕೆಡೆಯೊಳು ಹಣವಿಲ್ಲದೆಯೂ ಕೀರ್ತಿರಹಿತನಾಗಿಯೂ ಮೃತನಾಗುತ್ತಾನೆಯಾಗಿ ಮನುಷ್ಯನಾಗಿ ಹುಟ್ಟಿದಮೇಲೆ ತಕ್ಕ ಕೆಲಸವನ್ನು ಪ್ರಯತ್ನಿಸದೆ ಬಿಡಲಾಗದು, ಎಂದು ತಮ್ಮನಾದ ಚಿತ್ರವರ್ಮನು ಯೋಚಿಸುತ್ತಾ ಬರಲು ಹೀಗೆ ಯೋಚಿಸುವ ತಮ್ಮನನ್ನು ಕುರಿತು, ಎಲ್ಲೆ ಭ್ರಾತೃವತ್ಸಲನೇ! ನೀನು ಹೇಳುವ ಯೋಜನೆಯು ಯುಕ್ತವಾಗಿಯೇ ಇರುವದು, ಆದು ಹೇಗೆನ್ನುವಿಯೋ?

ಶ್ಲೋ॥ ಉದ್ಯೋಗಿನಂ ಪುರುಷಸಿಂಹಮುಪೈತಿ ಲಕ್ಷ್ಮೀಃ ದೈವೇನದೇಯಮಿತಿಕಾ
ಪುರುಷಾವದಂತಿ । ದೈವಂನಿಹತ್ಯ ಕುರುಪೌರುಷ ಮಾತ್ಮಶಕ್ತ್ಯಾ ಯತ್ನೇಕೃ
ತೇಯದಿನಸಿಧ್ಯತಿಕೋತ್ರದೋಷಃ ॥

ಲಾಭವಂ ಹೊಂದಬೇಕೆಂಬ ಪುರುಷ ಶ್ರೇಷ್ಠನು ಕಾರ್ಯಮಂ ಮಾಡಲು ಅದರ ಲಾಭಮಂ ಆತಂ ಹೊಂದುವನು. ಹೀಗಿಲ್ಲದೆ ಅದೃಷ್ಟವಿದ್ದರೆ ಬರುತ್ತದೆಂದು ಯೋಚಿಸುವರು, ಪುರುಷಾಧಮರಾದವರು. ತಾನು ಮಾಡಬೇಕಾದ ಪ್ರಯತ್ನವನ್ನೇನೋ ಮಾಡಿ ಸಿದ್ಧಿಸದ ಪಕ್ಷಕ್ಕೆ ಆಗ್ಯ ತನಗೆ ಅದೃಷ್ಟವಿಲ್ಲವೆಂದು ತಿಳಿಯಬೇಕೇ ಹೊರತು ಸುಮ್ಮನೆ ಇರಬಾರದು, ಎಂಬ ನ್ಯಾಯವು, ಲೋಕದಲ್ಲಿ ಪ್ರಸಿದ್ಧಿಯಾಗಿರುವುದರಿಂದ ನಾವಂತೆ ಪ್ರಯತ್ನಿಸುವದೇ ಯುಕ್ತವ.

ಶ್ಲೋ॥ ಸ್ಥಾನಮುತ್ಸೃಜ್ಯಗಚ್ಛಂತಿ ಸಿಂಹಾಸ್ಸತ್ಪುರುಷಾಗಜಾಃ ।
ತತ್ರೈವನಿಧನಂಯಾಂತಿಕಾಕಾಃ ಕಾಪುರುಷಾಮೃಗಾಃ ॥

ಆನೆಗಳೂ, ಸಿಂಹಗಳೂ, ಸತ್ಪುರುಷರಾದವರೂ ಸಹ ತಾವು ಹುಟ್ಟಿದ ದೇಶವಂ ಬಿಟ್ಟು ಅನ್ಯದೇಶವಂ ಸಾರಿ ಪ್ರಸಿದ್ಧಿಯಂ ಹೊಂದಿ ಸುಖವಾಗಿ ಜೀವಿಸುವರು. ಕಾಗೆಗಳೂ, ನೀಚರಾದ ಪುರುಷರೂ, ಮೃಗಗಳೂ ತಮ್ಮ ಜನ್ಮಭೂಮಿಯಂಬಿಟ್ಟು ಹೊರಗೆಹೋಗಿ ಬಾಳಲಾರದೆ ಹುಟ್ಟಿದಕಡೆಯೊಳೇ ಮೃತಿಯಂ ಹೊಂದುವರು. ಆದ್ದರಿಂದ ನಾವಿಲ್ಲಿಂದಹೊರಟು ದೇಶಂಗಳೊಳು ಸಂಚರಿಸಿ ತಕ್ಕ ಪ್ರಯತ್ನಂಗಳಂ ಮಾಡಿ ರಾಜ್ಯಮಂ ಸಾಧಿಸುವ ಪ್ರಯತ್ನಮಂ ಮಾಡೋಣವೆಂದು ಅಣ್ಣ ತಮ್ಮಂದಿರೀರ್ವರೂ ಮಾತಾಡಿಕೊಂಡು ಸ್ವಲ್ಪ ದ್ರವ್ಯಮಂ ಕೊಂಡು ಧನು ಭ್ಯಾಣಂಗಳಂ ಪಿಡಿದು ತಂಮತಾಯಿಗಳಿಗೆ ಈ ವಾರ್ತೆಯನ್ನೇ ಅರುಹದೆ ಅಲ್ಲಿಂದ ಹೊರಟು ಕೆಲವು ದೂರ ದೇಶಸಂಚಾರಮಂ ಮಾಡುತ್ತಾ ಹಾಗೆಯೇ ಮಹಾ ಘೋರವಾದ ಅರಣ್ಯಮಂ ಹೊಂದಿ ಆ ಕಾಂತಾರದೊಳು ಎದುರಾದ ಮೃಗಗಳಂ ಕೊಲ್ಲುತ್ತಾ, ಕಂಡ ಪಕ್ಷಿಗಳಂ ಕೆಡಹುತ್ತಾ ಅವುಗಳಂ ಬೇಯಿಸಿ ಭಕ್ಷಿಸುತ್ತಾ ಹೀಗೆಯೇ ಕೆಲವು ದಿನಂಗಳು ಸಂಚರಿಸುತ್ತಿರ್ದು ಒಂದಾನೊಂದು ದಿನದೊಳು

ಮ್ಯಾಹ್ನ ಸಮಯದೊಳು ಒಂದು ನದೀತೀರಕ್ಕೆ ಬಂದು ಜಂಬೂ ವೃಕ್ಷದ ನೆಳಲೊಳು ರೂ ಸೇರಿ ಮಲಗಿಕೊಂಡರು. ಜ್ಯೇಷ್ಠನಾದ ಮಣಿವರ್ಮನಿಗೆ ಪಹಾರ್ಗಾ ಸದಿಂದ ನಿದ್ದೆಹತ್ತಿದುದು. ಕಿರಿಯನಾದವಂ ಎಚ್ಚರಗೊಂಡಿರ್ದಂ.

ಹೀಗಿರುವ ಸಮಯದೊಳು, ಅವರು ಮಲಗಿರ್ದ ನೇರಳೆಮರದಿಂದೊಂದು ಾರಮಯವಾದ ಪಕ್ಷಿಯು ನೆಲದೊಳು ಮೃತನಾಗಿ ಬಿದ್ದುದು. ಅದಂ ಡುತ್ತಾ ಚಿತ್ರವರ್ಮಂ ಪರಮಾಶ್ಚರ್ಯಮಂ ಹೊಂದಿದವನಾಗಿ ಆ ಪಕ್ಷಿಯ ಕೆಯೇ ಮುಚ್ಚಿ ಇದಂ ಯಾರಾದರೂ ಹುಡುಕಿಕೊಂಡು ಬರುವರೆಂದು ತಿಳಿದು ೀನೂ ಅರಿಯದವನಂತೆ ಮಲಗಿ ನಿದ್ರಿಸುವವನಂತೆ ಸುಮ್ಮನಿರುತಿರ್ದಂ.

ಹೀಗಿರುತ್ತಿರಲು ಗರ್ತಾಕ್ಷನೆಂಬ ಶಬರನೊರ್ವಂ ತಾನು ಬಾಣದಿಂ ಹೊಡೆದ ಯಂ ಹುಡುಕುತ್ತಾ ಎಲ್ಲಿಯೂ ಕಾಣದೆ ಈ ಗಿಡದ ಬುಡದೊಳು ಬಿದ್ದಿರಬೇ ು ಯೋಚಿಸಿ ಯಾ ಬಳಿಗ್ಯೆದಿ ಮಲಗಿ ನಿದ್ರಿಸುತ್ತಿರುವವರಂ ಕಂಡು ಎಲ್ಲೆ ಾರಾಯರೇ ನಾನೀ ಗಿಡದೊಳೊಂದು ಪಕ್ಷಿಯಂ ಬಾಣದಿಂ ಹೊಡೆದು ಕೆಡಹಿ ಅದೀ ಕೆಳಗಡೆಯೊಳು ಬಿದ್ದುದು. ತಮ್ಮ ಕೈಗೇನಾದರೂ ದೊರಕಿದ್ದರೆ ಿಜೇಕೆಂದು ಪ್ರಾರ್ಥಿಸುವೆನೆನಲಾ ಚಿತ್ರವರ್ಮಂ ಎಲ್ಲೆ ವ್ಯಾಧನೇ ನಾನಿಲ್ಲಿಯೇ ಗಿರುವೆನು. ಈ ಯೆಡೆಯೊಳು ಯಾವ ಹಕ್ಕಿಯೂ ಬೇಳಲಿಲ್ಲವೆಂದು ಸಟೆಯಂ ಯಲಾ ವ್ಯಾಧಂ ಪರಮಚಿಂತಾಕ್ರಾಂತನಾಗಿ ಸ್ವಾಮಿ ಈ ಹಕ್ಕಿಗಾಗಿ ಬಹು ಮಂ ನಿರೀಕ್ಷಿಸಿ ಕೊಂದೆನು. ಆದರೂ ಲಭಿಸದೆ ಹೋದುದು, ಎಂದು ಾಡುತ್ತಾ ತನ್ನ ಮನದೊಳು ಹೀಗೆಂದು ಯೋಚಿಸಿದಂ ನಾನೊರ್ವಂ ಇವರಾ ೀ ನನ್ನಂತೆ ಭನುರ್ಧಾರಿಗಳಾಗಿ ಇರ್ವರಿರುವರು. ಮತ್ತೇನಂ ಯೋಚಿಸ ದೆಂದು ಸುಮ್ಮನಂತೆಯೇ ನಿಂತುಕೊಳ್ಳಲಾ ಚಿತ್ರವರ್ಮಂ ಎಲ್ಲೆ ಮೃಗಜೀವಿ ! ನೀನೇಕಿಂತು ಚಿಂತಿಸುವಿ ಆ ಹಕ್ಕಿ ಹೋದರೆ ಮತ್ತೊಂದಾಯಿತು. ಬಾಣವಂ ು ಅತ್ತನೋಡು ಎದುರುಗಿಡದೊಳು ಅನೇಕ ವಿಧಂಗಳಾದ ದೊಡ್ಡದಾದಾಕಾರಂ ಳ್ಳ ಹಕ್ಕಿಗಳಿಹುವ. ಅವುಗಳಂ ಹೊಡೆ, ಬೇಕಾದಷ್ಟು ಮಾಂಸ ದೊರೆಯು ! ಆ ವ್ಯಾಧಂ ಅಯ್ಯಾ ದೊಡ್ಡ ಮನುಷ್ಯರೇ ಈ ಪಕ್ಷಿಯು ಸಾಮಾನ್ಯವಾದು ಈ ವೃಕ್ಷದೊಳು ಸರ್ವಕಾಲವೂ ಹಣ್ಣುಗಳು ತುಂಬಿಯೇ ಇರುವವ. ಇವು ತಿನ್ನಲೋಸುಗವಾ ಪಕ್ಷಿಯು ಯಾವದೋ ಒಂದು ದ್ವೀಪದಿಂದ ಬಂದು ನಿತ್ಯವೂ ಈ ಗಿಡದ ಮೇಲೆಯೇ ತಿರುಗುತ್ತಾ ತನ್ನ ಹಸಿವಂ ಪೋಕ್ಕಿಸುವಂತೆ ುಗಳಂ ಸವಿದು ಅಂತೆಯೇ ಹೋಗುತ್ತಿರ್ದುದು. ಅದಂ ಹೊಡೆಯಬೇಕಂದು ೨೦ ವರುಷಗಳಂ ಕಾದು ಈದಿನಂ ಸಮಯ ದೊರೆತದ್ದರಿಂದ ಹೊಡೆದೆನು. ಾ ಪಾಯವಾಗಿಯೇ ಹೋಯಿತು. ಆ ಪಕ್ಷಿಯ ತಲೆಯಂ ಯಾರು ತಿನ್ನುವೋ ಅವರು ನಕ್ಕರೆ ಕೆಳಗೆಲ್ಲಾ ರತ್ನಂಗಳೂ ಮುಕ್ತಾಫಲಂಗಳೂ ರಾಸಿಯಾಗಿ

ಬಾಯಿಂದ ಬೀಳುವಂತಾಗುವದು. ಶರೀರವಂ ಯಾರು ತಿನ್ನುತ್ತಾರೊ "ವರು ರಾಜ್ಯಾಧಿಪತ್ಯವಂ ಹೊಂದುವರು. ಭಾಗ್ಯಹೀನನಾದ್ದರಿಂದ ನನಗದು ಲಭಿಸದೆ ಹೋದುದೆಂದು ಹೇಳಿ ಚಿಂತಿಸುತಿರಲಾ ಚಿತ್ತವರ್ಮಂ ಅಂಥಾ ಮಹಿಮೆಯುಳ್ಳದ್ದಾದ್ದರಿಂದಲೇ ಮಾಯವಾಗಿ ಹೋದುದು. ಮುಖ್ಯವಾಗಿ ಯೋಗವಿಲ್ಲದ್ದಕ್ಕೆ ಚಿಂತಿಸಿಫಲವೇನೆಂದೊರೆದು ಕೆಲವು ವರಹಂಗಳನವನಿಗಿತ್ತು ಸಂತೈಸಿ ಅವನಂ ಕಳುಹಿ, ಅದರ ತಲೆಯಂ ಕತ್ತರಿಸಿ ತಾಂ ನುಂಗಿದವನಾಗಿ ಆ ಪಕ್ಷಿಶರೀರವಂ ಬೇಯಿಸಿ ತನ್ನ ಅಣ್ಣನಾದ ಮಣಿವರ್ಮನಿಗೆ ಭೋಜನಕ್ಕಾಗಿ ಕೊಡಲವಂ ಅದನ್ನು ಭಕ್ಷಿಸಿದನು. ಈ ಪಕ್ಷಿಸಮಾಚಾರವನ್ನೇ ತನ್ನ ಅಣ್ಣನಿಗೆ ಹೇಳದೆ ಅವನೊಂದಿಗೆ ಅಲ್ಲಿಂದ ಹೊರಟು ಆ ದಿನ ಸೂರ್ಯಾಸ್ತಮಯ ಕಾಲದವರೆವಿಗೂ ಪ್ರಯಾಣಮಂ ಮಾಡಿ ರಾತ್ರಿಯಾಗುವಕಾಲಕ್ಕೆ ಸಮೀಪಮಾಗಿದ್ದ ಕಮಲಾಕರವೆಂಬೊಂದು ಅಗ್ರಹಾರಂ ಕಣ್ಣಿಕಾಣಲವರಿರ್ವರಾ ಗ್ರಾಮಕ್ಕೆ ಪ್ರವೇಶಿಸಿ ಒಬ್ಬ ಬ್ರಾಹ್ಮಣನ ಮನೆಯೊಳು ಮಲಗಲು ಸ್ಥಳವಂ ಕೇಳಿ ಆ ಮನೆಯೊಳು ಮಲಗಿ ಆ ರಾತ್ರಿಯಂ ಸುಖಮಾಗಿ ನಿದ್ರೆಯಿಂದ ಕಳೆದರು. ಮರುದಿನದುದಯದೊಳೆದ್ದು ಅಣ್ಣನಂ ಕುರಿತಾ ಚಿತ್ರವರ್ಮಂ ಎಲೈ ಅಣ್ಣನೇ ನನಗೆ ಹಸಿವ ಬಹಳವಾಗಿ ಬಾಧೆಯಂ ಉಂಟುಮಾಡುತ್ತಿರುವದು. ಭೋಜನವಂ ಮಾಡಿಕೊಂಡವರಾಗಿಯೇ ಇಲ್ಲಿಂದ ಮುಂದಕ್ಕೆ ಹೊರಡೋಣ ಇಲ್ಲವಾದರೆ ಕಾಲ್ಗಳು ಸೋತು ವಿಶೇಷ ಆಯಾಸಕ್ಕೆ ಕಾರಣಮಾಗುವದೆಂದು ಯೋಚಿಸುವೆನು ಎನಲಾ ಮಣಿವರ್ಮಂ ಅದಕ್ಕೆ ಸಮ್ಮತಿಸಿ ಬೇಕಾದ ಪದಾರ್ಥಂಗಳಂ ತರುವದಕ್ಕಾಗಿ ಅಂಗಡಿಯ ಸಾಲಿಗಾಗಿ ಹೊರಟುಹೋದನು. ಆ ಮಣಿವರ್ಮಂ ಬರುತ್ತಾ ಇರಲು ದಾರಿಯೊಳು ಗುಂಪುಗುಂಪಾಗಿ ಸಂಭ್ರಮದೊಂದಿಗೆ ಓಡಹೋಗುತ್ತಿರುವವರಂ ಕಂಡು ತಾಂ ವ್ಯಾಪಾರಾರ್ಥಮಾಗಿ ಕುಳಿತಿರ್ದ ಅಂಗಡಿಯ ವರ್ತಕನಂ ಕುರಿತು- ಇದೇನ್ಯೆ ಜನಗಳು ಅತಿಸಂಭ್ರಮದಿಂ ಓಡಿಹೋಗುತ್ತಿರುವರೆನೆ ಆ ವರ್ತಕಂ ಹೇಳಲಾರಂಭಿಸಿದಂ. ಅಯ್ಯಾ ಲಾಲಿಸಿರಿ ಈ ಊರಿಗೆ ಇರ್ಗಾವ್ಯದದೊಳು ಕನಕಾಲವಾಲವೆಂಬುವದೊಂದು ಪುಟಭೇದನಮಿರ್ಪುದು. ಆ ಪುರಾಧೀಶನಾದ ಇಂದ್ರಧ್ವಜನೆಂಬೊರ್ವರಾಯಂ ಪುತ್ರರಹಿತನಾಗಿರ್ದವಂ ಅಂತೆಯೇ ಮೃತನಾದನು. ಆ ರಾಯನಿಗೆ ಬಹುಮಂದಿ ಜ್ಞಾತಿಗಳಿರುವದರಿಂದ ಆ ರಾಜ್ಯಭಾರವಂ ನವಂಗಾಗಬೇಕು ತಮಗಾಗಬೇಕೆಂದು ಆರು ತಿಂಗಳಿಂದಲೂ ಕಲಹವಾಡುತ್ತಾ ಇರುವರು, ಈ ವಿಧವಾದುದು. ಆ ದೇಶದ ಪ್ರಜಾಸಮೂಹದವರೆಲ್ಲರೂ ಸೇರಿ ಆ ರಾಜ್ಯದ ಮಂತ್ರಿಯಂ ಸೇರಿಸಿಕೊಂಡು ಸಭೆಯಂ ಮಾಡಿದರು. ಆ ಸಭೆಯೊಳು ಮುಂದಾಗಬೇಕಾದ್ದಕ್ಕೆ ಮಹಾರಾಜರ ಪಟ್ಟಮಹಿಷಿಯರ ಅಭಿಪ್ರಾಯವಂ ತಿಳಿದ ಹೊರತು ಯತ್ನಿಸಲಾಗದೆಂದು ತೀರ್ಮಾನವಂ ಮಾಡಿದವರಾಗಿ ಆ ಮಂತ್ರಿಯಂ ರಾಜಾಂಗನೆಯರ ಅಭಿಪ್ರಾಯಮಂ ತಿಳಿಯುವದಕ್ಕಾಗಿ ಕಳುಹಲು ತಮ್ಮ ರಾಜಪತ್ನಿಯರ ಸಮೀಪಗತನಾದ

ಮಂತ್ರಿಯು ಅಮ್ಮಾ ರಾಜ್ಯವು ಈಗ್ಯೆ ಆರುತಿಂಗಳು ಮೊದಲ್ಗೊಂಡು ಅರಾಜಕ ವಾಗಿರ್ಪುದು. ರಾಜಜ್ಞಾತಿಗಳು ರಾಜ್ಯಾಧಿಪತ್ಯಕ್ಕಾಗಿ ತಹತಹಪಡುತ್ತಿರುವರು. ಈ ಭಾಗದೊಳು ಮುಂದು ಹೇಗೆ ನಡಸಬೇಕೆಂದು ಏರ್ಪಡಿಸುವದಕ್ಕೆ ತಮ್ಮ ಮನೋ ಗತಮಂ ತಿಳಿಯಬೇಕೆಂದು ಪ್ರಜಾಸಮೂಹದವರು ಬಯಸುವರಾಗಿ ನನ್ನಂ ಸನ್ನಿಧಿಗೆ ಕಳುಹಿದರೆನಲು ಅಗಲಾ ಇಂದ್ರಧ್ವಜ ಮಹಾರಾಜಾಂಗನೆಯು ಅಯ್ಯಾ ಮಂತ್ರಿ ಶೇಖರನೇ ! ಈ ರಾಜ್ಯಾಧಿಪತ್ಯಮಂ ಜ್ಞಾತಿಗಳ ಕೈವಶಮಾಡಿದರೆ ಮುಂದವರು ನಮ್ಮಂ ನಷ್ಟಮಾಡರು: ಗತಿಸಿದ ಮಹಾರಾಜರು ತಮ್ಮಾ ಬಾಲವಯಸ್ಕಳಾದ ಸುಕುಮಾರಿಗೆ ತಕ್ಕ ವರನಂ ತಂದು ವಿವಾಹಮಂ ಮಾಡಿಕೊಟ್ಟು ದೌಹಿತ್ರ ಸಂತತಿಗೆ ಈ ರಾಜ್ಯಪದವಿಯಂ ಸೇರಿಸಬೇಕೆಂದು ಯೋಚಿಸುತ್ತಿದ್ದರೆಂದು ನೀನೇನರಿಕಿಲ್ಲವೆ ? ಈಗಲೂ ಯೋಗ್ಯನಾದ ವರನಿಗೆ ಈ ಬಾಲೆಯನ್ನಿತ್ತು ವಿವಾಹಮಂ ಮಾಡಿ ಆ ರಾಜ ಕುಮಾರಂ ಪ್ರಾಪ್ತವಯಸ್ಕನಾಗುವವರಿಗೂ ನೀನೇ ಆ ಭಾರಮಂ ವಹಿಸಿದ್ದು ಅನಂ ತರ ಯೋಗ್ಯನಾದ ಅಳಿಯನಂ ಈ ರಾಜಪದವಿಯಂ ಸೇರಿಸುವದು ಯುಕ್ತವಾಗಿದೆ, ಎಂದಾ ರಾಜಪತ್ನಿಯು ತನ್ನ ಅಭಿಪ್ರಾಯಮಂ ಪೇಳಲಾ ಮಂತ್ರಿಯು ಅದೇ ಅಭಿಪ್ರಾ ಯವನ್ನೇ ಪ್ರಜಾಸಮೂಹವೂ ಅಂಗೀಕರಿಸುವಂತೆ ತೀರ್ಮಾನವಂ ಮಾಡಿಸಿ ಸಮ್ಮಂ ಧಿಕರಾದ ರಾಜಾತ್ಮಜರನ್ನೆಲ್ಲರಂ ಸೇರಿಸಿ ಪಟ್ಟದಾನೆಯ ಕೈಯೊಳು ಪೂಮಾಲೆಯ ನ್ನಿತ್ತು ಆ ರಾಜಪುತ್ರಮಂಡಲಿಯೊಳು ನಿಲ್ಲುವದು. ಆ ಆನೆಯು ಸ್ವೇಚ್ಛೆಯಾಗಿ ಆ ಪೂಮಾಲೆಯನ್ಯಾರ ಕೊರಳಲ್ಲಿ ಹಾಕುವದೋ ಅವರಿಗೆ ವೃದ್ಧ ಮಹಾತ್ಮಜೆ ಯನ್ನಿತ್ತು ಮದುವೆಯಂ ಮಾಡಿ ಈ ರಾಜ್ಯಾಭಿಷೇಕವನ್ನೂ ಆತನಿಗೇನೆ ಮಾಡು ವದಾಗಿ ತೀರ್ಮಾನಿಸಿ ಅದೇ ಪ್ರಕಾರಮಾಗಿ ಈ ದಿನದೊಳು ನೆರವೇರಿಸುವಂತೆ ರಾಜ ಪುತ್ರರನ್ನೆಲ್ಲರನ್ನೂ ಸೇರಿಸುತ್ತಾರೆ. ನಿಮ್ಮನ್ನು ನೋಡಿದರೆ ಕ್ಷತ್ರಿಯಜಾತಿಯವ ರಂತೆ ಕಾಣುವಿರಿ. ಇಷ್ಟವಿದ್ದರೆ ಹೋಗಿ ನೋಡಬಹುದು. ಪ್ರಯತ್ನಿಸಲೂ ಬಹುದೆನಲಾ ಮುನಿವರ್ಯಂ ತಾಂ ಬಂದಿರ್ದ ಕಾರ್ಯವಂ ಬಿಟ್ಟು ಆ ಜನಸಮೂಹ ದೊಳು ಸೇರಿ ಹೊರಟು ಆ ಪಟ್ಟಣವಂ ಹೊಂದಿ ಮಂತ್ರಿಯು ಬಳಿಗ್ಯೆದಿ ತಾನೂ ಕ್ಷತ್ರಿಯನಂದನನೆಂದು ಹೇಳಿದವನಾಗೆ, ಆತನ ಆಕೃತಿಯಂ ನೋಡಿ ನಿಜವೆಂದರಿತು ಆ ರಾಜಪುತ್ರರೊಳು ಕುಳಿತುಕೊಳ್ಳುವಂತೆ ಆಜ್ಞಾಸ್ತನಾಗಿ ಹೋಗಿ ಕುಳಿತುಕೊಂ ಡನು, ಅನಂತರಮಾ ಮಂತ್ರಿಶೇಖರಂ ಪಟ್ಟದಾನೆಯಂ ತರಿಸಿ, ಅದರ ಕೈಯೊಳು ದಿವ್ಯತರಮಾದ ಸುಗಂಧ ಪುಷ್ಪವಿರಚಿತಮಾದೊಂದು ಪೂಮಾಲೆಯನ್ನಿತ್ತು ರಾಜ ಕುಮಾರರ ಸಮಾಜದೊಳು ಹೊಗಿಸಲು, ಆ ರಾಜಾತ್ಮಜರೆಲ್ಲರೂ ಈ ಗಜವು ಪೂ ಮಾಲೆಯಂ ನನ್ನ ಕೊರಳೊಳು ಹಾಕುವದು ತನ್ನ ಕೊರಳೊಳು ಹಾಕುವದೆಂದು ಅತ್ಯಂತ ಸಂಭ್ರಮದೊಂದಿಗೆ ಸಂಯತರಾಗಿ ಅನಿಮಿಷರಂತೆ ಆ ಆನೆಯು ತಿರುಗಿದ ಕಡೆಯೊಳೆಲ್ಲಾ ತಮ್ಮ ನೋಟವಂ ಬಿಡುತ್ತಾ ತದೇಕಾಯತ್ತ ಚಿತ್ತರಾಗಿರಲು, ಆ

ಮುದಕಲಭವು ಕೆಲವು ಹೆಜ್ಜೆಗಳನ್ನಿಟ್ಟು ನಡೆದು, ಸ್ವಲ್ಪಹೊತ್ತು ಮುಂದೆ ಹಾಯದೆ ನಿಂತು, ಸುತ್ತಲೂ ನೋಡುತ್ತಾ ಮರಳಿ ಅಂತೆಯೇ ಮಾಡುತ್ತಾ ಆ ರಾಜನಂದನರು ಕುಳಿತಿರ್ದ ಪ್ರದೇಶಂಗಳನೆಲ್ಲಮಂ ಬಿಟ್ಟು, ದೂರದೊಳು ಕುಳಿತಿರ್ದ ಆ ಮುನಿವರ್ಮನೆಂಬ ರಾಜಕುಮಾರ ನೆಡೆಗ್ಯೈತಂದು ತನ್ನ ಕರದೊಳಿದ್ದ ಆ ಪುಷ್ಪ ಮಾಲಿಕೆಯಂ ಅತನ ಕಂಠದೊಳು ಹಾಕಿ ತನ್ನ ಸೊಂಡಿಲದಿಂದಾತನಂ ಎತ್ತಿ ತನ್ನ ಮೇಲೆ ಕುಳ್ಳಿರಿಸಿಕೊಂಡು ಹೊರಡಲು, ಮಂತ್ರಿ ಮೊದಲೇ ಪರುಠವಿಸಿರ್ದ ಚತುರಂಗಬಲವೂ ಅತನಂ ಸುತ್ತೂ ಆವರಿಸಿಕೊಂಡು ಮರ್ಯಾದೆಯಂ ಮಾಡಲು, ಮಂತ್ರಿಸೇನಾಪತಿ ದಂಡನಾಯಕ ಪ್ರಭೃತಿಯಾದವರು ತಮ್ಮ ತಮ್ಮ ಮರ್ಯಾದೆಗಳಂ ತೋರುತಾತನಂ ರಾಜಮಂದಿರಮಂ ಸಾರಿಸಿ, ರಾಜಮಹಿಷಿಯಾಜ್ಞಾನುಸಾರಮಾಗಿ ಅಂದಿನೊಳು ಸ್ನಾನಭೋಜನಾದಿಗಳಂ ಮಾಡಿಸಿ ಮರುದಿನದೊಳೇ ಮಹದುತ್ಸವದೊಂದಿಗೆ ಆ ರಾಜನಂದನೆಯಾದ ರಾಜವದನೆಯನ್ನು ಮದುವೆಯಂ ಮಾಡಿಕೊಡಲು, ಆಕೆಯ ಪಾಣಿಗ್ರಹಣಮಂ ಮಾಡಿಸಿ ನೆರದಿರ್ದ ಸಕಲಜನಂಗಳಿಗೂ ವಿಶೇಷಮಾಗಿ ಮಾನಸನ್ಮಾನಂಗಳಂ ಮಾಡಿಸಿ, ಎಲೈ ರಾಜಾತ್ಮಜನೇ! ನೀನಿಂದು ನಮ್ಮ ಮಗಳಂ ಮದುವೆಯಂ ಮಾಡಿಕೊಂಡದ್ದರಿಂದ ನನ್ನ ಮನಂ ಸಂತೋಷಗೊಂಡುದು, ಮಗನಾದರೂ ನೀನೇ, ಅಳಿಯನಾದರೂ ನೀನೇ, ಗಂಡು ರಕ್ಷಕರಿಲ್ಲದ ನನ್ನಂ ಸಂರಕ್ಷಿಸಬೇಕೆಂದು ಉಪಚಾರಮಂ ಪೇಳುತ್ತಿರುವ ರಾಜಮಹಿಷಿಯ ಚರಣಂಗಳೊಳು, ಸಾಷ್ಟಾಂಗಮಾಗಿ, ಅಮ್ಮಾ! ತಾಯಿಯಾದರೂ ನೀವೇ, ತಂದೆಯಾದರೂ ನೀವೇ, ನಿಮ್ಮ ಚರಣಸೇವೆಯಿಂದ ನಾಂ ಧನ್ಯನಾಗುವೆನು, ತವಾಜ್ಞೆಯಂ ಎಳ್ಳಷ್ಟಾದರೂ ಮೀರಿ ನಡಿಯುವನಲ್ಲವೆಂದೊರೆದು, ಮಂತ್ರಿಗನುಸಾರವಾಗಿ ಪ್ರಜಾರಂಜಕನಾಗಿ ರಾಜ್ಯಭಾರಮಂ ಮಾಡುತ್ತಾ ತನ್ನ ಪೂರ್ವಸ್ಥಿತಿಯನ್ನೇ ಮರೆತು ರಾಜ್ಯವ್ಯಾಪ್ತ್ಯಹಾಲ್ಲಾದವಂತನಾಗಿರ್ದಂ. ಅತ್ತಲಾ ಅಗ್ರಹಾರದೊಳಿರ್ದಾತನ ತಮ್ಮನಾದ ಚಿತ್ರವರ್ಮನೆಂಬುವನು ಪದಾರ್ಥಂಗಳಂ ತರುವದಕ್ಕಾಗಿ ಪೇಟೆಗೆ ಹೋಗಿರ್ದ ತನ್ನ ಅಣ್ಣನು ಮಧ್ಯಾಹ್ನವಾದರೂ ಬಾರದೆ ಹೋಗಲು ಕಾರಣಮಂ ತಿಳಿಯದೆ ಹುಡುಕುತ್ತಾ ಬಂದು ಊರೊಳೆಲ್ಲಾ ಕಂಡವರನ್ನು ಕೇಳುತ್ತ ಕಂಡಕಡೆಯೊಳೆಲ್ಲಾ ಹುಡುಕಿ ಹುಡುಕಿ, ಸಾಕಾಗಿ ಬೇಸತ್ತು, ಅಯ್ಯೋ ಪಾಪಿಯಾದಾವ್ಯಾಧನ ಮಾತುಗಳಂ ನಿಜವೆಂದು ನಂಬಿ. ಆ ಪಕ್ಷಿಮಾಂಸಮಂ ಬೇಯಿಸಿಟ್ಟದ್ದರಿಂದ ಹುಚ್ಚು ಹಿಡಿದು ದೇಶಾಂತರಗತನಾದನು, ನನಗೆಂತು ದೊರೆಯುವನು, ಎಲ್ಲಿ ಹುಡುಕಲಿ, ನನ್ನ ಗತಿ ಏನಾಗುವದೋ ಎಂದು ವಿಧ ವಿಧವಾಗಿ ಚಿಂತಿಸುತ್ತಾ ಸಾಯಂಕಾಲಕ್ಕೆ ತಾನಿಳಿದಿರ್ದ ಬ್ರಾಹ್ಮಣನ ಮನೆಯಂ ಸೇರಿ, ಆ ಮನೆಯಲ್ಲಿ ಯಾಚಿಸಿ, ಭೋಜನ ಮುಂಮಾಡಿ, ಆ ರಾತ್ರಿಯಲ್ಲಿಯೇ ಇದ್ದು ಮಾರನೆದಿನ ಮಲ್ಲಿಂ ಹೊರಟು ಅಣ್ಣನಂ ಹುಡುಕುತ್ತಾ, ಅನೇಕ ಪುರ ಗ್ರಾಮ ವನ ನದೀ ದೇಶಂಗಳಂ ಸಂಚರಿಸುತ್ತಾ, ತನ್ನ

ಅಣ್ಣನನೆಲ್ಲಿಯುಂ ಕಾಣದೆ ಜುಜ್ಜುಹಿಡಿದವನಂತೆ ಅನ್ಯಾದಿಗಳನ್ನೊಲ್ಲದೆ ಅಲೆಯುತ್ತಾ ಬರಲು, ಅಂತೆಯೇ ಗಂಧೇಭ ನಗರವೆಂಬ ಸಿಂಗಾರಮಾದೊಂದು ಪಟ್ಟಣಮುಂ ಸಾರಿ, ಆ ಪುರ ರಾಜಮಾರ್ಗದೊಳು ಹೊರಟು ಒರುತ್ತಾ, ಒಂದು ಭವನದ ಸೌಧಾಂತರದೊಳು ದಾರಿಯೊಳು ಬರುತ್ತಿರುವೀ ಚಿತ್ರಪರ್ಮ ರೂಪಾತಿಶಯಮುಂ ಕಂಡು, ಮೋಹಿಸಿದವಳಾದ ವಾರನಾರೀಮಣಿಯು, ಆತಂ ಮೋಹಗೊಳ್ಳುವಂತೆ ದಿವ್ಯತರವಾಗಿ ಸುಸ್ವರದೊಳು ಒಂದು ಪದವಂ ಹಾಡುತ್ತಾ, ವೀಣೆಯೊಳು ಅದನ್ನೇ ನುಡಿಸುತ್ತಾ ಬಂದಳು. ದಾರಿಯೊಳು ಬರುತ್ತಿರ್ದವಂ ಆ ಶಬ್ದಮುಂಕೇಳಿ, ಗೀತೆಯಂ ಕೇಳಿ, ಬಹುಕಾಲಮಾದುದೆಂದನುರಕ್ತನಾಗಿ ಆ ದಾರಿಯೊಳೇ ನಿಂತು ಕಿವಿಗೊಟ್ಟು ಕೇಳುತ್ತಾ, ಆ ಹಾಡುಗಾರಿಕೆಗೆ ಕಾಲಮುಂ ಹಿಡಿದು ತನ್ನ ಕೈಗಳಿಂದ ತಾಳಮುಂ ಪಾಕುತ್ತ, ಮೂರ್ಛನಾಗತಿಯಂ ಕಂಡು, ತಲೆಯುಂ ಅಲ್ಲಾಡಿಸುತ್ತಾ, ವಿಶೇಷ ಸ್ವಾರಸ್ಯಮುಂ ತಿಳಿದಾಗ ಭಲಾ, ಶಾಬಾಸ್, ಎಂದು ಮೆಚ್ಚಿಕೆಯ ನುಡಿಗಳಂ ನುಡಿಯುತ್ತಾ, ಏಕೇಕಾಯತ್ತಚಿತ್ತನಾಗಿ ನಿಂತಿರುವವನಂ ಕಾಣುತ್ತಾ, ಅಳಿಕುಂತಳೆಯೆಂಬಾ ವೇಶ್ಯಾಂಗನೆಯು ನನ್ನ ಗಾನಕ್ಕೀ ಸುಂದರಪುರುಷಂ ಭ್ರಾಂತನಾಗಿರುವನೆಂದರಿತು ಸೌಧದಿಂದ ಆತಿ ಭರದಿಂದಿಳಿದುಬಂದು ದಾರಿಯೊಳು ನಿಂತಿರ್ದಾತನಂ ಕುರಿತು ಸ್ವಾಮಿ ಪುರುಷಶ್ರೇಷ್ಠರೇ ! ಮನೆಗೆ ದಯಮಾಡಿ ಕುಳಿತುಕೊಂಡವರಾಗಿ ಗಾನಮುಂ ಕೇಳಿ ಸುಖಮುಂ ತಾಳಬಹುದು, ಇದು ರಾಜವೀದಿಯು ನಿಂತುಕೊಂಡು ಎಷ್ಟು ಹೊತ್ತಾದರೂ ಕೇಳುತ್ತಿದ್ದರೆ ಕಾಲ್ಗಳು ನೋಯುವದಲ್ಲದೆ ದೂರಮಾದ್ದರಿಂದ ರಾಗ ಜಮತ್ಕಾರವೂ ಜನ್ಯಾಗಿ ಕೇಳಲಾರದೆಂದು, ಮೆಲ್ನುಡಿಗಳಿಂದ ಬಹು ವಿನಯಳಾಗಿ ಮುಗ್ಧಳುನಗೆಯಂ ತೋರುತ್ತಾ ನುಡಿಯಲು, ಆವಳ ಮಾತುಗಳಂ ಕೇಳುತ್ತಾ ಮೋಹಮುಳ್ಳವನಾಗಿ, ಅವಳ ಹಿಂದೆಯೇ ಹೊರಟು ಹೋಗಲು ಸೌಧದೊಳು ದಿವ್ಯಮಾದ ವಿಶ್ರಾಂತಾಸನದೊಳು ಕುಳ್ಳಿರಿಸಿ, ಮತ್ತಷ್ಟು ಜಮತ್ಕಾರವಾಗಿ ಸಿಂಗರಮಾಗಿ ಹಾಡುತಾ ಕೆಲಕಾಲಂ ಕಳೆದು, ಅನಂತರ ಮಂದಹಾಸ ಸಂಯುತಳಾಗಿ ಹಾಸ್ಯ ಪರಿಹಾಸೋಕ್ತಿಗಳಂ ಆಡುತ್ತಲಾತನ ಮನವಂ ಉಲ್ಲಾಸಗೊಳಿಸುತ್ತಾ ಬರಲು, ಆ ವಾರನಾರೀಮಣಿಯ ಸೌಂದಯಾತಿಶಯಮುಂ ಅವಳ ವಿನಯ ಹಾಸೋಕ್ತಿಗಳ ಜಮತ್ಕಾರಂಗಳಂ ನೋಡಿ ಸಂತೋಷ ಪರವಶನಾಗಿ ಘಕ್ಕನೆ ನಕ್ಕನು. ಆ ಕೂಡಲೆ ಅವನ ಬಾಯಿಂದ ರತ್ನಂಗಳು ಸುರಿದುವು. ಅದಂ ಆತಂ ಕಾಣದಂತೆ ಆರಿಸಿಕೊಂಡವಳಾಗಿ ನೋಡಿ, ಈತಂ ಯಾರೋ ಮಹಾಪುರುಷನಿರಬಹುದು, ಉಪಾಯವುಮಾಗಿ ಸ್ವಾಧೀನ ಪಡಿಸಿಕೊಂಡರೆ ಕೆಲವುಕಾಲದೊಳಗಾಗಿಯೇ ನಾಂ ಕುಬೇರ ಸದೃಶ ಭಾಗ್ಯಶಾಲಿಯಾಗುವೆನೆಂದರಿತು, ಆ ರಾಜನಂದನನಂ ಕುರಿತು, ಸ್ವಾಮಿಗೆ ಮಧ್ಯಾಹ್ನಕಾಲಮಾಗುತ್ತಾ ಬಂಮದು, ಇಲ್ಲಿಯೇ ಸ್ನಾನಭೋಜನಾದಿಗಳಂ ತೀರಿಸಿಕೊಳ್ಳಬೇಕು, ತಾವು ಬರಸ್ಥಳದವರಂತೆ ತೋರುವದು, ಇಲ್ಲಿಂದ ಹೋಗಿ ಪ್ರಯತ್ನಮುಂ ಮಾಡಿಕೊಳ್ಳ

ಜೀಕಾಗಿರುವದು, ಆದ್ದರಿಂದ ಈ ಹೊತ್ತಿಗೆ ಇಲ್ಲಿಯೇ ಆಗಲಿ, ತಕ್ಕ ಸ್ಥಳವೂ ಜನರೂ ಸಿದ್ಧವಾಗಿಯೇ ಇರುವರೆಂದೊರೆದು ಆತನಂ ಸಮ್ಮತಗೊಳಿಸಿ ಬೇರೆಡೆಯೊಳು ತಕ್ಕ ಜನಂಗಳಂ ಸಿದ್ಧಗೊಳಿಸಿ ದಿವ್ಯತರಮಾದ ರುಚಿಕರಮಾದ ಭೋಜನ ಪದಾರ್ಥಮುಂಮಾಡಿಸಿ ಆತನಂ ಸ್ನಾನಭೋಜನಂಗಳಂ ಮಾಡಿಸಿ, ಸಂತೋಷಗೊಳಿಸಿ ದಿವ್ಯ ಗಂಧ ಪುಷ್ಪ, ತಾಂಬೂಲಂಗಳಿಂದುಪಭೋಗಂ ಗೊಳಿಸಿ ಆತನೊಳು ಹಂಸತೂಲಿಕಾ ತಲ್ಪದೊಳು ಸೇರಿ, ರತಿತಂತ್ರಕುಶಲಳಾದ್ದರಿಂದ ಮದನ ಕೇಳಿಯೊಳಾತನಂ ಮರುಳು ಮಾಡಿ, ತನ್ನೊಳು ಸಿಲುಕಿದ ಮನಮುಳ್ಳವನಂತೆ ಮಾಡಿಕೊಂಡು ಪ್ರತಿದಿನದಲ್ಲಿಯೂ ಆತನಿಗೆ ಬೇಕಾದ ಸ್ನಾನ ಭೋಜನ ಶಯನ ವಸ್ತ್ರಾಭರಣಂಗಳಿಂದ ತೃಪ್ತಿಗೊಳಿಸುತ್ತಾ ಸರ್ವದಾ ನಗುತ್ತಿರುವಂತೆ ಹಾಸ್ಯಂಗಳಾಡುತ್ತಾ ಆಗ ಆತನ ಬಾಯಿ ಇಂದ ಕೆಳಗೆ ಬೀಳುವ ರತ್ನಂಗಳಂ ಆತನರಿಯದಂತೆ ಆರಿಸಿಕೊಳ್ಳುತ್ತಾ ಅದಂ ಮಾರಿ ವಿಶೇಷ ಧನಮುಂ ಹೊಂದುತ್ತಾ ಆತನಂ ಪಡೆದೆ ಸರ್ವದಾ ಮನೆಯೊಳೇ ಇಟ್ಟುಕೊಂಡು ಸುಖಿಸುತ್ತಾ ಬಂದಳು. ಹೀಗಿರುತ್ತಿರುವ ಕಾಲದೊಳಾ ವೇಶ್ಯಾಸುಂದರಿಯ ತಾಯಿಯಾದ ವೃದ್ಧಾಂಗನೆಯು ತನ್ನ ಮಗಳಂ ಕುರಿತು, ಎಲೆ ಮರುಳು ಮಗಳೇ! ಬಹು ಕಾಲಮಾಗಿ ನೀಂ ನಿನ್ನ ಏಟನೊಳು ಸೇರಿ ರತಿಯಂ ಗೈಯ್ಯುತ್ತಿದ್ದರೆ, ನಿನ್ನ ಯೌವನವು ವೃಥಾ ಜೋಗುವದಲ್ಲಾ ನಮ್ಮ ಜಾತಿಧರ್ಮಕ್ಕೆ ವಿರೋಧಮಂ ನಡಿಸುವಿಯಾ ಹೀಗೆ ಮಾಡುವದರಿಂದ ನಿನ್ನ ವಿದ್ಯಾ ಬುದ್ಧಿ ಚಮತ್ಕಾರಂಗಳೆಲ್ಲ ಬೂದಿಯಲ್ಲಿ ಹೋಮ ಮಾಡಿದಂತಾಯಿತು, ಧನಿಕನಾದ ಏಟನಂ ಸೇರಿ ತನ್ನ ಬುದ್ಧಿಯನೆಲ್ಲಮಂ ವ್ಯಯಮಾಡಿ, ತನ್ನ ಮೆಲ್ನುಡಿ, ಮಂದಹಾಸ ಸರಸೋಕ್ತಿಗಳಿಂದಲೂ ಅಂಗಚೇಷ್ಟೆ ಬಹಿಸ್ಸುರತಾದಿ ಏನೋದ ಕೇಳಿಯಿಂದಲೂ ಅವನ ಮನಸ್ಸು ಎಲ್ಲಿಯೂ ಜಲಿಸದಂತೆ ಮಾಡಿ, ಅವನ ಸರ್ವಸ್ವಮಂ ಹೀರಿದರೂ ಅವನಂ ಕೊರೆಯದೆ ಮನೆಯ ಕೆಲಸಂಗಳೊಳು ಸಿಲುಕಿಸಿ ಕನ್ನಡಿಯ ಗಂಡಿನಂತೆ ತನ್ನ ಚೇಷ್ಟೆಗಳಿಂದ ಮೋಹಗೊಳಿಸುತ್ತಾ ಮತ್ತೊಬ್ಬ ಧನಿಕನಂ ಅವನಂತೆ ಮಾಡಲು ಅದೇ ರೀತಿಯೊಳು ಯತ್ನಿಸುತ್ತಾ ಬಂದ ವರನೆಲ್ಲರಂ ಪರಸ್ಪರ ವಿರೋಧಂ ಸಂಭವಿಸದಂತೆ ಉಪಾಯಂಗಳಂ ಕಲ್ಪಿಸಿಕೊಳ್ಳುತ್ತಾ ದ್ರವ್ಯಾರ್ಜನಾಪರಳಾಗದೆ ನೀನೇತಕೆಂತು ಮರುಳಾದೆ, ಈ ನಿನ್ನ ಏಟನಂ ಕೊರೆಯುವದಕೊಂದುಪಾಯಮುಂ ಪೇಳುವೆನು ಕೇಳು, ಈ ರಾತ್ರಿಯೊಳು ಆತನಂ ಸೇರಿ ವಿಧವಿಧಮಾದ ಜುಂಬನಂಗಳಂ ಮಾಡುತ್ತ, ಅನೇಕ ವಿಧಂಗಳಾದ ಬಂಧಂಗಳಂ ಸಲುವುತ್ತ, ರತಿ ಕ್ರೀಡೆಯಂ ಅನುಭವಿಸುವ ಕಾಲದೊಳು ಪುರುಷಂ ವಶವರ್ತಿಯಾಗಿರುವನು ಆ ಕಾಲದೊಳು ಲಾಲಿಸುತ ಆತನ ಬಾಯಿಂದ ರತ್ನಂಗಳು ಬೀಳಲು ಕಾರಣಮಂ ತಿಳಿದುಕೊಂಡವಳಾಗು ಅನಂತರಂ ಅದಕ್ಕೆ ತಕ್ಕುಪಾಯಮುಂ ಯೋಚಿಸುವೆನೆನಲು, ಆ ವೇಶ್ಯಾರಮಣಿಯು ಆ ದಿನದ ರಾತ್ರಿಯೊಳು ತನ್ನ ಪ್ರಿಯನೊಳು ಪರಮ ಚಮತ್ಕಾರಮಾಗಿ ; ಜುಂಬನಾದಿಗಳಂ ವಿಧವಿಧಮಾದ ಬಂಧಂಗಳಂ ನಡೆ

ಅಂದಿನಿಂದಾ ವೇಶ್ಯೆಯು ರಾಜಕುಮಾರನ ಬಾಯಿಯಿಂದ ರತ್ನಂಗಳು ಬೀಳದೆ ಹೋದುದಂ ಕಂಡನಳಾಗಿ ಆತನ ಮೇಲೆ ಉದಾಸೀನಮಂ ತೋರುತ್ತಾ ಬಂದಳು. ರಾತ್ರಿಕಾಲಂಗಳೊಳು ಆತನಂ ಬಿಟ್ಟು ಬೇರೆ ಮಲಗಲಾರಂಭಿಸಿದಳು, ಈತನನ್ನು ಸ್ನೇಹಿತನಂತೆ ಭಾವಿಸಿ ಕೇಳಿದಾಗ ದ್ರವ್ಯಮಂ ಕೊಡುತ್ತಿದ್ದವರು ಲಕ್ಷ್ಯಮಾಡದೆ ಹಣಮಂ ಕೇಳಿದರೆ ಕಿವಿಯ ಮೇಲೆ ಹಾಕಿಕೊಳ್ಳದೆ ಬಿಡುತ್ತ ಬಂದರು. ತನ್ನ ಬಾಯಿಂದ ರತ್ನಂಗಳು ಬೀಳುವದು ಬಿಟ್ಟುಹೋದುದು ಇದರಿಂದಲೇ ಹೀಗೆ ಅನಾದರಣೆಗೆ ಗುರಿಯಾದನು,

ವೇಶ್ಯಾಸ್ತ್ರೀಯರು ದ್ರವ್ಯ ಹೀನನಾದ ಪುರುಷನನ್ನು ಲಕ್ಷ್ಯಮಾಡಲಾರರು. ಅರಸನು ಅಸಮರ್ಥನೆಂದು ತೋರಿದರೆ ಪ್ರಜೆಗಳು ಅನನಂ ಲಕ್ಷ್ಯ ಮಾಡರು. ಕಾಡುಕಿಚ್ಚಿನಿಂದ ಅರಣ್ಯವು ಸುಟ್ಟುಹೋದರೆ ಅಲ್ಲಿದ್ದ ಮೃಗಗಳೆಲ್ಲಾ ಮತ್ತೊಂದು ಅರಣ್ಯಮಂ ಸೇರುತ್ತವೆ. ಜಾರಪುರುಷರು ಜಾರಿಣಿಯಂ ಹೊಂದಿ ಅವರನ್ನು ಪ್ರಾಯ ಮಿರುವವರಿಗೂ, ಇಟ್ಟುಕೊಂಡಿದ್ದು ಅನಂತರ ದೂರಮಾಡುವರು. ಈ ವಾರಾಂಗನೆಯರಾದರೊ ದ್ರವ್ಯವಂತನು, ಸಿಕ್ಕಿದರೆ ಮೆಲ್ಲನೆ ಕಪಟೋಪಾಯಗಳಂ ನಟಿಸುತ್ತಾ ಅವನ ಧನವನ್ನೂ ಶಕ್ತಿಯನ್ನೂ ಸೆಳೆದುಕೊಂಡು ಅವರಲ್ಲಿ ಋಣ ವ್ರಣ ರೋಗವೆಂಬ ಶಕ್ತಿಯಂ ಅವರಿಗೆ ಕೊಟ್ಟು ದೂರಮಾಡುವರು ಈ ವೇಶ್ಯಾಸ್ತ್ರೀಯರಲ್ಲಿ ಆಕರ್ಷಣಾಶಕ್ತಿಯೊಂದು ಮಾತ್ರವಿಶೇಷ ಪ್ರಬಲಮಾಗಿರುವದು. ಮೋಸಗೊಳಿಸುವದೆಂಬುವದಾದರೋ ಅವರಿಗೆ ಸಹಜ ಗುಣವು. ಈ ಎರಡು ಗುಣಗಳು ಹೊರತು ಮಿಕ್ಕ ಗುಣಗಳೆಲ್ಲವೂ ಕುಲಸ್ತ್ರೀಯರಲ್ಲಿಯೂ, ಇರುವವು. ಲೋಕದ ಜನರೆಲ್ಲರೂ, ನನ್ನಂಥಾವನು ಈ ನೀಚರಾದ ವಾರನಾರಿಯರಂ ಮೋಹಿಸಿ ಈ ಯವಸ್ಥೆಯಂ ಹೊಂದಿದನೆಂದರಿತು ಇವರ ವಶವರ್ತಿಗಳಾಗದೆ ಇರುವರೇ ? ಈ ನೀಚರು ಕಾಮಾಂಧರಾದವರನು, ತಮ್ಮ ಬಲೆಯೊಳು ಸಿಲುಕಿಸಿಕೊಂಡು ಕಡೆಯೊಳು ನನ್ನಂತೆಯೇ ಮಾಡುವದು ನಿಶ್ಚಯವು, ಇತಃಪರಮಿಾಜನರ ಸಹವಾಸವನ್ನೇ ಸ್ಮರಿಸಬಾರದೆಂದು ಬೇಸರನನ್ನಾಂತವನಾಗಿ ಅಲ್ಲಿರದೆ ಹೊರಟು ದೇಶದೇಶಗಳಂ ಸುತ್ತುತ ಕಡೆಯೊಳು ಹಿಮವತ್ಪರ್ವತದ ಕಾಂತಾರಮಂ ಪ್ರವೇಶಿಸಿದಂ, ಆ ಘೋರಾರಣ್ಯದೊಳು ಕಂದಮೂಲ ಫಲಗಳಂ ಆಹಾರವಂ ಮಾಡುತ್ತಾ, ಋಷ್ಯಾಶ್ರಮಂಗಳೊಳು ಸಂಚರಿಸುತ್ತಾ ಇರಲು ಆ ಪರ್ವತದ ಕಿಬ್ಬಟ್ಟೆಯೊಳೊಂದು ಗುಹೆಯಲ್ಲಿ ವಾಲಖಿಲ್ಯನೆಂಬೊರ್ವ ಮುನಿವರಂ ತನ್ನ ಶಿಷ್ಯವರ್ಗರಸಿ ವಾಸಮಾಡುತ್ತಿರ್ದಂ, ಆ ಮುನೀಂದ್ರಂ ಶಿಷ್ಯರಿಗೆ ಜ್ಞಾನವಿದ್ಯಾಬೋಧೆಯಂ ಮಾಡುತ್ತಿರುವ ಸಮಯದೊಳಿ ರಾಜಕುಮಾರನಾದ ಚಿತ್ರವರ್ಮಂ ಅಮುನೀಂದ್ರರ ಸನ್ನಿಧಿಯಂ ಸಾರಿ ಸಾಷ್ಟಾಂಗ ದಂಡಪ್ರಣಾಮವಂ ಗೈದು ಮುಕುಳಿತ ಕರಕಮಲನಾಗಿ ನಿಂತುಕೊಂಡು ಎಲ್ಲೆ ಮುನೀಂದ್ರರೇ? ನನ್ನ ಮನೋರಥಸಿದ್ಧಿಯಿಂದ ಧನ್ಯನಂ ಮಾಡಬೇಕೆಂದು ವಿನಯಯುತನಾಗಿ ಬೆಡಿಕೊಳ್ಳುತ್ತಿರುವುದಂಕಂಡು ಕನಿಕರಮಾಂತು

ತನ್ನ ತಪಃಶಕ್ತಿಯಿಂದ ಅವನ ವಿದ್ಯಮಾನವನೆಲ್ಲವಂ ತಿಳಿದವನಾಗಿ ಎಲ್ಲೆ ಬಾಲ ಕನೇ ? ಕೇಳು.

ಯಾಸ್ಯಾಸ್ತಿ ವಿತ್ತಂ ಸನರಃ ಕುಲೀನಸ್ಸಪಂಡಿತಸ್ಸಶ್ರುತವಾ೯ ಗುಣಜ್ಞಃ ॥ ಸ ಏ
ವವಕ್ತಾಸಜದರ್ಶನೀಯಃ ಸ್ಸರ್ವೇಜನಾಃಕಾಂಚನಮಾಶ್ರಯಂತಿ ॥

ಲೋಕದಲ್ಲಿ ಹಣಗಾರನಾದವನಾರೋ ಅಮನುಷ್ಯನು ಕಲಹೀನನಾದರೂ ಸತ್ಕುಲ ದಲ್ಲಿ ಹುಟ್ಟಿದವನಾಗುತ್ತಾನೆ. ವಿದ್ಯಾಹೀನನಾದರೂ, ಪಂಡಿತನೆನ್ನಿಸಿ ಕೊಳ್ಳುವನು ಅ ನಾಮಧೇಯನಾದರೂ, ಪಂಡಿತನೆಂದುಯೊರಪಡಿಸಿಕೊಳ್ಳುವನು. ಗುಣಹೀನನಾದರೂ ಗುಣವಂತನೆನ್ನಿಸಿಕೊಳ್ಳುತ್ತಾನೆ. ಮಾತಾಡುವದಕ್ಕೆ ಬಾರದವನಾದರೂ, ವಾಚಾಳು ವಾಗುವನು. ಕುರೂಪಿಯಾದರೂ, ನೋಡುವದಕ್ಕೆ ಯೋಗ್ಯನೆಂಧೆನಿಸಿಕೊಳ್ಳುವನು. ಅದ್ದರಿಂದ ಲೋಕವೆಲ್ಲಾ ಹಣವನ್ನೇ ಆಶ್ರಯಿಸುತ್ತಿರುವರು.

ಮಾತಾನಿಂದತಿನಾಭಿವಂ ದತಿಪಿತಾಭ್ರಾತಾನ ಸಂಭಾಷತೆಭೃತ್ಯಃಕುಪ್ಯತಿ
ನಾನುಗಚ್ಛತಿಸುತಃ ಕಾಂತಾಜನಾಲಿಂಗತೆ ॥ ಅರ್ಥಪ್ರಾರ್ಥನಶಂಕಯಾ
ನಕುರುತೇ ಹ್ಯಾಲಾಪಮಾತ್ರಂ ಸುಹೃತ್ತ ಸ್ಮಾದರ್ಥಮುಪಾರ್ಜಯ
ಪ್ರಿಯಸಖೇ ಹ್ಯರ್ಥೈರ್ಹತುಸರ್ವೇವಶಾಃ

ಎಲ್ಲೆ ಪ್ರಿಯಸ್ನೇಹಿತನೇ ಕೇಳು ? ಲೋಕದಲ್ಲಿ ಮನುಷ್ಯನಾದವನು ಧನರಹಿತ ನಾದರೂ ಸಂಪಾದನೆಯಂ ಮಾಡದವನಾದರೂ ಸರಿಯೆ, ಅವನು ತಾಯಿಯ ದೂಷ ಣೆಗೆ ಗುರಿಯಾಗುತ್ತಾನೆ. ತಂದೆಯ ಪ್ರೀತಿಗೆ ಪಾತ್ರನಾಗಲಾರನು. ಅವನೊಡನೆ ಅಣ್ಣತಮ್ಮಂದಿರು ಮಾತುಗಳನ್ನೇ ಆಡಲಾರರು, ಸೇವಕನು ಕೋಪಗೊಳ್ಳುವನು. ಮಗನಾದವನು ತಂದೆಯ ಆಜ್ಞಾನುಸಾರವಾಗಿ ನಡೆಯದೆ ಬೇರೆ ಬೇರೆ ದಾರಿಯ ಹುಡುಕುವನು. ಹೆಂಡತಿಯಾದವಳು ಸಹ ಆಲಿಂಗನೆಯಂ ಮಾಡಿಕೊಳ್ಳಲಾರಳು. ಸ್ನೇಹಿತನಾದವನು ಸಹ ಹಣವನ್ನು ಯಾಚಿಸುತ್ತಾನೆಂಬ ಯೋಚನೆಯಿಂದ ವಿಶ್ವಾಸ ವಾಗಿ ಮಾತುಗಳನ್ನೇ ಆಡದೆ ಹೋಗುತ್ತಾನೆ. ಅದ್ದರಿಂದ ಹಣವಂ ಸಪಾದಿಸುವ ನಾಗು. ಈ ಹಣದಿಂದ ಸಮಸ್ತವೂ, ಸ್ವಾಧೀನವಾಗುತ್ತದೆ. ಎಂದು ಅಭಿಜ್ಞರಾದ ವರು ನಿಶ್ಚಯಿಸಿ ಹೇಳಿರುವರು ಅದಕ್ಕನುಸಾರವಾಗಿಯೇ ಲೋಕದನಡತೆಯೂ ಇರುವ ದು. ಗಣಿಕಾ ಸ್ತ್ರೀಯರಾದರೋ ಕಿಂಚಿತ್ತಾದರೂ, ಸಾಪಭೀತಿಯಿಲ್ಲದೆ ಧರ್ಮವೆಂ ಬುದಂ ಸ್ಮರಿಸದೆ ದ್ರವ್ಯಾಕರ್ಷಣ ತತ್ಪರಾಗಿ ನಂಬಿಕೆಯಂ ತೋರುತ ವಿಶ್ವಾಸಘಾತುಕ ತ್ವಮಂಮಾಡಿ ವಿಟನಂ ಆಡವಿಪಾಲು ಮಾಡುವರು. ಇದು ಜನಜನಿತವಾಗಿದ್ದರೂ ದೀಪ ಪತಂಗನ್ಯಾ ಯಾನು ಸಾರಮಾ ಜನರೆಲ್ಲರೂ. ನಿನ್ನ ಸ್ಥಿತಿಯನ್ನೇ ಹೊಂದುವರೆನೆ. ಆ ಚಿತ್ರವರ್ಮಂ, ಸ್ವಾಮಿಾ, ಪರಮ ಮುನೀಂದ್ರರೇ? ತಾವೇ ಪರದೈವವೆಂದು ನಾ ನು ನಂಬಿದ್ದೇನೆ, ಕರುಣಿಸಿ ಪರಿಪಾಲಿಸಬೇಕು ಉಪೇಕ್ಷಿಸುವರಾದರೆನನ್ನ ಅಥೃಷ್ಟವೇ ಇಂತೆಂದು ಈ ಪರ್ವತದೊಳೇ ವಾಸಿಪೆನೆನಲಾ ಮುನೀಂದ್ರನು ದಿವ್ಯದೃಷ್ಟಿಯಿಂ ಈ

ರಾಜಕುಮಾರನಭಿವಿತವ್ಯತೆಯಂಕೆಂಡವನಾಗಿ ಅವನೊಳು ಕರುಣೆಯನ್ನಾಂತು ಎಲ್ಲೈ ರಾಜನಂದನನೇ ನಿನಗೀಶಿಲೆಯೊಂದನ್ನು ಕೊಡಬೇಕೆಂದು ಸಂಕಲ್ಪ ಹುಟ್ಟಿದುದು. ಇದಂ ಪ್ರರಿಗ್ರಹಿಸುವನಾಗು. ಈಶಿಲೆಯಂ ಪ್ರತಿನಿತ್ಯವೂ ರಾತ್ರಿಯ ಪೂರ್ವಯಾಮದೊಳಗಾಗಿಯೇ ತುಲಸೀವನದ ಮೃತ್ತಿಕೆಯೊಳಿಟ್ಟು ಬೆಳಗೆದ್ದು ಶುಚಿರ್ಭೂತನಾಗಿ ಈ ಶಿಲೆಯಂ ಶುಚಿರ್ಭೂತನಾಗಿ ತೆಗೆದರೆ ಇದರಡಿಯೊಳೀಶಿಲೆಯ ತೂಕದ ಸುವರ್ಣವುಸಿಕ್ಕುವದು. ಅದಂ ಕೊಂಡವನಾಗಿ ಅದರೊಳರ್ಧಮಂ ಧರ್ಮಕಾರ್ಯದೊಳು ವಿನಿಯೋಗಮಂ ಮಾಡಿ ಮಿಕ್ಕಅರ್ಧಭಂಗಾರಮಂ ನಿನ್ನ ಸ್ವಂತ ಉಪಯೋಗಕ್ಕೆ ಬಳಸಿಕೊಳ್ಳುತ್ತಾ ಜೀವನಮಂಮಾಡು ಎಂದೊರೆದಾಶಿಲೆಯಂ ತನ್ನ ಕಮಂಡಲದಿಂದ ತೆಗೆದು ಕೊಡಲು ಆ ಚಿತ್ರವರ್ಮಂ ಮಹಾ ಪ್ರಸಾದವೆಂದು ತನ್ನೆರಡು ಕೈಗಳಿಂಕೊಂಡವನಾಗಿ, ಮಿತಿಯಿಲ್ಲದ ಸಂತೋಷಮಂ ಹೊಂದಿ, ಅಲ್ಲಿಂ ಹೊರಟು ಗಂಧೇಭ ನಗರಕ್ಕೆ ಬಂದು ಆ ವಾರಾಂಗನೆಯ ಬಾಗಲಿಗೆ, ಬರುವಷ್ಟರಲ್ಲಿಯೆ ಮಹಡಿಯಮೇಲೆ ಕುಳಿತಿರ್ದವಳು ದೂರದಿಂ ನೋಡುತ್ತಲೇ ಏನೋಸಂಪಾದಿಸಿಕೊಂಡು ಬಂದಿರುವನಂತೆ ಕಾಣುತ್ತಾನೆ, ಉಪಾಯಮಾಗಿ ಅದನೆಲ್ಲಮಂಸಂಗ್ರಹಿಸಿ, ವಿಸರ್ಜಿಸೋಣವೆಂದು, ನಿಶ್ಚಯಿಸಿದವಳಾಗಿ ಅಲ್ಲಿಂದತಿ ಭರದೊಳಿಳಿದ್ರೈತಂದು ಮನೆಯಬಾಗಲಿಗೆ ಬಂದಾಚಿತ್ರವರ್ಮನಂ ಕಂಡು, ಎಲ್ಲೈ ಪ್ರಾಣನಾಥನೇ! ನೀನಿಷ್ಟುದಿನಂಗಳು ಆವೆಡೆಗ್ಯೆದಿರ್ದೇ! ನೀಂಪೋಗುವಾಗ ಎನಗೆ ಪೇಳದೆ ಹೋಗಬಹುದೆ, ನಾನೇಂದ್ರೋಹಮಂ ಮಾಡಿದವಳೆಂದು ಭಾವಿಸಿಅಂತೆ ಮಾಡಿದೆ, ಎಂದು ಪಶ್ಚಾತ್ತಪ್ತತೆಯಂ ನಡಿಸುತ್ತಾ ಇಂದು ನೀಂ ಕರುಣಿಸಿ ನನ್ನ ಮನೆಗೆ ಬಂದುದರಿಂದ ನಾಂ ಪುಣ್ಯಶಾಲಿಯಾದೆನು. ನೀಂ ಹೇಳದೆ ಹೋದಂದಿನಿಂದ ನಿದ್ರಾಹಾರಂಗಳೇ ಹಿತಂಗಳಾಗಿರಲಿಲ್ಲ. ನಿನ್ನ ಹುಡುಕಿಸಿ ಸಾಕಾದೆನು. ಈ ವರಿಗೂ ನಿನ್ನಂ ಹುಡುಕುವಂತೆ ಕಳುಹಿಸುತ್ತಲೇ ಯಿರುವೆನು. ಎಂದು ಕೃತ್ರಿಮ ಸಂತೋಷಮಂ ತೋರುತ್ತ ಕೈ ಪಿಡಿದು ಮನೆಯೊಳು ಕರೆದುಕೊಂಡು ಹೋಗಿ ಮಂಜದೊಳು ಕುಳ್ಳಿರಿಸಿ ಹಾಸ್ಯ ಪರಿಹಾಸೋಕ್ತಿಗಳನ್ನಾಡುತ್ತ ಬಾರಿಬಾರಿಗೂ ಆಲಿಂಗಿಸುತ್ತ ಆಗ ಮುಖಚುಂಬನಾದಿ ವಿಧಿಸ್ಸುರತ ತಂತ್ರಗಳಂ ಸಲುಪುತ್ತ ಸರ್ವದಾ ತನ್ನೊಳನುರಾಗಮುಳ್ಳವಳಾಗಿದ್ದಳೆಂಬುದಂ ತೋರುತ್ತ ಬರಲು, ಭ್ರಾಂತನಾಗಿ ಪೂರ್ವದೊಳಾದುಷ್ಪಳು ಮಾದುದನೆಲ್ಲಮಂ ಮರೆತು ಅವಳೊಳು ಯಥಾಸ್ಪ್ರಕಾರಮಾದ ನಂಬುಗೆಯನ್ನಿಟ್ಟು, ತಾಂ ಹೋಗಿ ಬಂದ ಪರಿಯನೆಲ್ಲಮಂ ಅವಳೊಳು ತೇಳಿದನು. ಕೇಳುತದನೆಲ್ಲಮಂ ಮನಸಮುನದೊಳು ಇವನ ಆಸ್ತಿಯೆಲ್ಲಮಂ ಸುಲುಕೊಂಡು ಕಳುಹಲು ಯೋಚಿಸುತ್ತಾ ತಕ್ಕ ಕಾಲಮಂ ನೋಡುವೆನೆಂದು ನಿಶ್ಚೈಸಿ ಹೊರಗಡೆಯೊಳು ಆಯ್ಯೋ ದೇಶಸಂಚಾರದಿಂದ ಕಾಲಕಾಲಕ್ಕೆ ಅನ್ನಾ ಹಾರಂಗಳಿಲ್ಲದೆ ಎಷ್ಟು ಬಳಲಿದಿರೋ ಎಂದು ತಾಪಮಂ ತಾಳುತ್ತ ಸ್ನಾನಭೋಜನಾದಿ ಸಾಮಗ್ರಿಗಳಂ ಆಣಿಗೊಳಿಸಿರುವೆನು. ಏಳಿ ಆಯಾಸ ಪರಿಹಾಸಮಂ ಮಾಡಿಕೊಂಡನಂತರ ಸಾವಕಾಶಮಾಗಿ ಕುಳಿತು ಮಾತಾಡೋಣವೆಂ

ದು ಹೇಳಿ ಕಳುಹಿ ಅತಂ ಸ್ನಾನವಂ ಮಾಡಿ ದಿವ್ಯತರವಾಗಿ ಮಾಡಿಸಿದ್ದ ಷಡ್ರಸಾನ್ನ ವುಂ ಭುಂಜಿಸಲು ಗಂಧ ಪುಷ್ಪ ತಾಂಬೂಲಗಳಿಂದುಪಚರಿಸಿ ಸ್ವಲ್ಪಕಾಲಂ ಆತನಿಗೆ ಹಿತಮಾದ ಕೆಲವು ರಾಗಂಗಳಿಂ ಪದಂಗಳಂ ಹಾಡುತ್ತಲಿರ್ದು ಅಂತಿಯೇ ರಾಜನಂದನಂ ಮಲುಗಲು ಆತನ ಪಕ್ಕದೊಳು ಮಲಗಿ ಹಾಸ್ಯಮಾಡುತ್ತ ಮುಖ ಚುಂಬನ ನಖಕ್ಷತ ದಂತಗಳೇ ಮೊದಲಾದ ಬಾಹ್ಯ ಸುರತ ತಂತ್ರದಿಂ ಆನಂದಗೊಳಿಸುತ್ತ ಅಂತೆಯೇ ವಿಧವಿಧಮಾದ ಬಂಧಂಗಳಂ ತೋರುತ ಮನ್ಮಥಯುದ್ಧ ಸ್ತ್ರಾವೀಣ್ಯತೆಯಂ ತೋರಿ ಕೇಳೀ ವಿಳಾಸದೊಳು ತೃಪ್ತನಂ ಮಾಡಿದಳು. ಅದೇ ಪ್ರಕಾರಮಾಗಿ ಆತನಂ ಎಡೆಬಿಡದೆ ಸರ್ವದಾ ವಿನೋದಮಾಗಿ ಕಾಲಮುಂ ಕಳೆಯುವಂತೆ ಮಾಡುತ್ತಾ ಬಂದಳು, ಆ ರಾಜಕುಮಾರನಾದ ಚಿತ್ರವರ್ಮನು ರಾತ್ರಿಯಾಗೆ ಯಥಾಪ್ರಕಾರವಾಗಿ ತುಲಸೀತೋಟದಲ್ಲಿ ಆ ಗಿಡಗಳ ಮಧ್ಯದಲ್ಲಿನ ಮೃತ್ತಿಗೆಯಂತಂದು ಮುನೀಂದ್ರನೀಂ ಕೊಡಲ್ಪಟ್ಟಿರ್ದ ಶಿಲೆಯನ್ನದರೊಳಿರಿಸಿ ಭದ್ರಪಡಿಸಿ, ಮಾರನೆಯ ದಿನದೊಳೆದ್ದು ಶುಚಿಯಾಗಿ ಆ ಭದ್ರಪಡಿಸಿದ ಶಿಲೆಯಂ ತೆಗೆದು ನೋಡಲು, ಅದರಡಿಯೊಳು ಆ ಶಿಲೆಯ ತೂಕದಷ್ಟು ದಿವ್ಯಮಾದ ಸುವರ್ಣವು ಅಂದರೆ (೧೦ ಹತ್ತು ತೊಲೆ ಭಂಗಾರವು) ದೊರಯಲು ನೋಡುತಲಾ ವಾರನಾರಿಯು, ಅವಳ ತಾಯಿಯೂ, ಪರಮಾಶ್ಚರ್ಯ ಪರವಶರಾಗಿ, ಈತಂ ತರುವ ಪದಾರ್ಥಗಳು ಒಂದಕ್ಕಿಂತಲೂ, ಮತ್ತೊಂದು ಅಮೂಲ್ಯಂಗಳಾದವಲ್ಲಾ ಎಂದು ಮೆಚ್ಚುತ್ತಾ ಅಲ್ಪಕಾಲದೊಳಗಾಗಿಯೇ ಇದಂ ಅಪಹರಿಸಿ ಇವನಂ ತೊರೆಯಬೇಕೆಂದು ಯೋಚಿಸಿದವರಾಗಿ, ಆ ಭಾವಂ ಹೊರದೋರದೆ ಯಥಾಪ್ರಕಾರಮಾಗಿ, ಉಪಚರಿಸುತ್ತಾ ಬಂದರು.

ಹೀಗಿರುತ್ತಾ ಒಂದು ದಿನದೊಳು ಆ ಶಿಲೆಯಂ ಅಪಹರಿಸಬೇಕೆಂದು ಯೋಚಿಸಿ ಎಲ್ಲೆ ರಾಜಾತ್ಮಜನೇ! ಇಂದಿನ ರಾತ್ರಿಯೊಳು ಉದ್ಯಾನವನದೊಳು ಜಂದ್ರಿಕಾಮಹೋತ್ಸವವಂ ನಿನ್ನೊಡಗೂಡಿ ಹೊಂದಬೇಕೆಂದು ಅಪೇಕ್ಷೆಯುಂಟಾಗಿರುತ್ತದೆ. ಇದಂ ನೀಂ ನೆರವೇರಿಸಿ ಕೊಡಬೇಕೆಂದು ಹೇಳಿ ಒಡಂಬಡಿಸಿ ಅದಕ್ಕೆ ತಕ್ಕ ಪರಿವಾರಮನೆಲ್ಲಮುಂ ಅಣಿಮಾಡಿಕೊಂಡು ಹೊರಟು ಹೋಗುವಾಗ ಶಿಲೆಯಂ ಆತನು ಭೋಜನಮಾಡುವ ಮನೆಯೊಳೇ ಭದ್ರಪಡಿಸದೆ ಹೊರಡುವ ಸಂಭ್ರಮದೊಳು ಪದ್ಧತಿಯಂತೆ ದೇವರ ಬಳಿಯೊಳೇ ಇಟ್ಟು ಹೊರಟು ಬರಲು ಈ ಸಂಭ್ರಮಂ ತಿಳಿಯುವಂತೆ ಮೊದಲೇ ಏರ್ಪಾಟು ಮಾಡಿದ್ದಳಾದ್ದರಿಂದ ಅದಂ ತಿಳಿದ ಒಡನೆ ಎಲ್ಲರೂ ಜೊತೆಯೊಳು ಸ್ವಲ್ಪ ದೂರ ಹೋಗಿ ಬೇಕಾದುದಂ ತಾರದೆ ಮರೆತವಳಂತೆ ಅಭಿನಯಿಸಿ ರಾಜಕುಮಾರನಂ ಕುರಿತು ಎಲ್ಲೆ ಪ್ರಿಯನೇ ನನ್ನ ಕೈ ಪೆಟ್ಟಿಗೆಯನ್ನೇ ಮರೆತು ಬಂದೆನು. ಅದರಲ್ಲಿ ಆಭರಣಂಗಳೂ ಸುಗಂಧದ್ರವ್ಯಗಳೂ ಇದ್ದವು. ಆದ್ದರಿಂದ ಹೋಗಿ ಬೇಗನೆ ತರುತ್ತೇನೆ ಎಲ್ಲರೂ ಇಲ್ಲಿ ನಿಂತಿರುವರಾಗಿ ಎಂದುಹೇಳಿ ಅತಿವೇಗದಿಂದ ಬಂದು ಆಶಿಲೆಯಂ ತೆಗೆದು ತನ್ನ ಮನೆಯೊಳು ಭದ್ರಪಡಿಸಿ ಅಲ್ಲಿಂ ಭರದಿಂದ ಬಂದು ಜೊತೆಯಂ ಸೇರಿ

ಎಲ್ಲರೊಂದಿಗೆ ಊರಿಗೆ ದೂರದೊಳಿರುವ ರಾಜೋದ್ಯಾನವಂ ಸೇರಿ ಅಲ್ಲಿ ತನ್ನ ಸ್ನೇಹಿತರೊಂದಿಗೆ ಪ್ರಕಾಶಮಾದ ಬೆಳತಿಂಗಳೊಳು ವಿನೋದಮಾಗಿ ಆಡುತ್ತಾ ಪಾಡುತ್ತಾ ಈ ರಾಜಾತ್ಮಜನಂ ಆನಂದಗೊಳಿಸುತಿರ್ದು ಅನಂತರ ಭೋಜನಕ್ಕಾಗಿ ಆ ಬೆಳತಿಂಗಳೊಳು ಸಿದ್ಧಗೊಳಿಸಿರಲು ಅವರವರು ಪದ್ಧತಿಯಂತೆ ಪ್ರತ್ಯೇಕ ಪ್ರತ್ಯೇಕಮಾಗಿ ಕುಳಿತು ಭೋಜನಮಂ ಮಾಡುತ್ತಿರಲಾ ವಾರಾಂಗನೆಯು ಆ ವನಪಾಲರೊಳು ತನಗಾಪ್ತರಾದ ಕೆಲವರಂ ಕರೆದು ರಹಸ್ಯದೊಳು ಈ ರೀತಿಯಾಗಿ ನುಡಿದಳು. ಅಯ್ಯಾ ವನಪಾಲಕರೇ ಈ ರಾತ್ರಿಯೊಳು ನಾನೋರ್ವನಂ ನಿಮ್ಮ ಗುಡಿಸಲ ಬಳಿಗೆ ಕಳುಹುವೆನು. ಆತನು ಬಂದ ಕೂಡಲೆ ನಿವ್ಯಾರಣಮಾಗಿ ವ್ಯಾಜ್ಯವನ್ಯಾಡಿ ಆತನಂ ಹಿಡಿದು ಈ ತೋಟದ ಹಿಂದಿರುವ ಹಾಳುಭಾವಿಯೊಳು ಹಾಕಿ ಪಡಬೇಕು. ನಿಮ್ಮಂ ಸುಮ್ಮನೆ ನೋಡುವದಿಲ್ಲ. ನಿನ್ನ ಮನಸ್ಸಂ ಸಂತೋಷಗೊಳಿಸುತ್ತೇನೆಂದು ಹೇಳಿ ಒಂದೊಂದು ಹಿಡಿಯ ವರಹಂಗಳಂ ಕೊಟ್ಟು ಈ ಕೆಲಸ ಮಾಡಿದನಂತರ ವಿಶೇಷ ಸಂತೋಷಮಂ ಮಾಡುವೆನೆಂದೊರೆಯಲು ಅದಕ್ಕೊಪ್ಪಿ, ಅಂತೆಯೇ ಮಾಡುವೆವೆಂದು ಹೊರಟು ಹೋಗಲು ಆ ವೇಶ್ಯೆಯು ತನ್ನ ಮನೆಯಿಂದ ಜೊತೆಯಲ್ಲಿ ಕರತಂದಿರ್ದ ಜಂಕೆಯ ಮರಿಯಂ ತನ್ನ ಆಪ್ತಭೃತ್ಯನಿಂದಲಾರು ಮರಿಯದಂತೆ ಮನೆಗೆ ಕಳುಹಿ ತಾನೂ ಭೋಜನಮಂ ಮಾಡಿ ಗಂಧ ಪುಷ್ಪ ತಾಂಬೂಲಂಗಳಿಂ ಅಣಿಮಾಡಿಕೊಂಡು ಕುಳಿತಿರಲು ಭೋಜನಾದಿಗಳಂ ಪೂರ್ತಿಸಿಕೊಂಡು ಬಂದು ರಾಜಾತ್ಮಜನೇ ಮೊದಲಾದ ಅವನ ಸ್ನೇಹಿತರಂ ಕುಳ್ಳಿರಿಸಿ ಆ ಭೋಗವಸ್ತುಗಳಂ ಕೊಟ್ಟು ಸಂತೋಷಗೊಳಿಸಿ ಎಲ್ಲರೂ ಕುಳಿತು ಸರಸೋಕ್ತಿಗಳನ್ಯಾಡುತ್ತಿರ್ದು ಅಲ್ಲಿಂದ ಹೊರಟು ಮನೆಗೆ ಬರಬೇಕೆಂದು ಆ ವನದ ಹೊರಗೆ ಬಂದು ಅಲ್ಲಿಂ ನೂರಾರು ಬಾರು ಬಂದು, ಮುಂದಿರಿದು ಪಾ! ನನ್ನ ಪ್ರೀತಿಪಾತ್ರವಾದ ಜಿಂಕೆಯ ಮರಿಯು ಹಿಂದೆ ಬರುತ್ತಾ ಇರ್ದುದು ಕಾಣದಲ್ಲಾ ಏನಾದುದೋ ! ಎಂದು ಗಾಬರಿಯಂ ತೋರುತಾ ತನ್ನ ಸಮಾಜದೊಳಿರ್ದವರನ್ನೆಲ್ಲರಂ ಒಂದೊಂದು ಮಾರ್ಗದೊಳು ಹುಡುಕುವಂತೆ ಒರೆದೊರ್ವರಂ ಕಳುಹಿಸುತ್ತಾ ಹುಡುಕುವದಕ್ಕೆ ಹೋದವರೆಲ್ಲರೂ, ಕಡೆಗೆ ಇದೇ ಸ್ಥಳಂ ಬಂದು ಸೇರಬೇಕೆಂದು ಗೊತ್ತು ಮಾಡಿದವಳಾಗಿ ಎಲ್ಲರಂ ಕಳುಹಿ ಆ ರಾಜಾತ್ಮಜನಂ ನೋಡಿ ಸ್ವಾಮಿ! ತಾವಿಲ್ಲಿಯೇ ನಿಂತುಕೊಳ್ಳಿರಿ ನಾಂ ಹೋಗಿ ಈ ತೋಟದೊಳು ಹುಡುಕಿಕೊಂಡು ಬರುವೆನೆನಲು, ಆ ರಾಜನಂದನಂ ಎಲ್ಲೆ ಸುಂದರೀ ನೀಂ ಹೆಂಗಸು ಒಂಟಿಯಾಗಿ ಈವನವಂಸಾರಿದರೆ ಅಬಲೆಯಾದ್ದರಿಂದ ಭಯಪಡುವೆ ಗಿಡಗಳು ಗುಂಪುಗುಂಪಾಗಿ ಕಾಂಬುದು ಅದಂ ನೋಡಲು ರಾತ್ರಿಯೊಳು ಭಯಂಕರಮಾಗುವದು ನಾಂ ಹೋಗಿ ಹುಡುಕಿಕೊಂಡು ಬರುವೆನು ನೀನಿಲ್ಲಿಯೇ ನಿಲ್ಲೆನಲು ಆ ಕೃತ್ರಿಮಿಯಾದ ವಾರನಾರಿಯು ಹಾಗಾದರೆ ನಾನೀರಾಜ ಮಾರ್ಗದೊಳು ಹುಡುಕುವೆನು. ಎಂದೊರೆದು ಮುಂದರಿಯಲು ಅವಳ ಮೋಸವಂ ತಿಳಿಯದಾ ರಾಜನಂದನಂ ಆ ವನದೊಳು ಹುಡುಕುತ್ತಾ ಹುಲಿಯ

ಬಾಯಿಗೆ ಎದುರಾದ ಜಿಂಕೆಯಂತೆ ಆ ಚಂಡಾಲರ ಗುಡುಸಲ ಬಳಿಯಂ ಸಾರಿ ಆ ಬಳಿಯಿದ್ದ, ವನಪಾಲರಂ ಕಂಡು ಎಲ್ಲೆ ವನಪಾಲಕರಿರಾ! ಈ ಬಳಿಯೊಳೊಂದು ಹುಲ್ಲೆಯ ಮರಿಯೇನಾದರೂ, ಬಂದಿಹುದೇ ಎಂದು ಕೇಳಲಾ ಕ್ರೂರಚಿತ್ತರು ಆ ಹುಲ್ಲೆಯು ಸೂಸಿಗಳನ್ನೆಲ್ಲಾ ಮೇದು ಕೆಡಿಸಿತು ಅದಂ ಕಟ್ಟಿ ಹಾಕಿದ್ದೇವೆಂದು ಗರ್ಜಿಸಿ ನುಡಿಯಲು ಅಯ್ಯಾ! ಆದು ಎಳೆಮರಿಯು ಎಷ್ಟು ಸೊಸಿಗಳಂ ಕೆಡಿಸಿದುದೋ ಅದರ ನಷ್ಟವಂ ಕೊಡುವೆವು ಬಿಡೆನಲು ಛೀ ಮೂರ್ಖ ಹೋಗು ಅರಸನ ತೋಟವು ಇದು ನಮ್ಮಂ ದಂಡಿಸದೆ ಬಿಡುವನೇ ನಿನ್ನ ಮಾತಿಗೊಳಪಡಲಾರೆವು ಹೋಗೆಂದು ಕತ್ತಂಹಿಡಿದು ದಬ್ಬುತ್ತಾ ಮೂರುಮಂದಿಯೂ ಬಂದಾರಾಜಾತ್ಮಜನಂ ಪಿಡಿದುಕೊಂಡು ಹೋಗಿ, ಆ ತೋಟದ ಸಿಂದಣ ಹಾಳುಭಾವಿಯೊಳು ಹಾಕಿಬಿಟ್ಟರು. ಎಂದು ಹೇಳದಾ ಚಿತ್ರಾರ್ಪಿತಪುಯೂರಂ ಸ್ಯಾಮಿಾ ವಿಕ್ರಮಾರ್ಕ ಭೂಮೀಂದ್ರನೇ! ಪೂರ್ವಯಾಮವ ಕಳೆಯುತ್ತಾ ಬಂದುದು ಅನುಜ್ಞೆಯಾದರೆ, ವಿಶ್ರಾಂತಿ ಸುಖಮಂ ಹೊಂದುವೆನೆಂದು ಹೇಳಿ ಸುಮ್ಮನಾದಂ ಎಂಬಲ್ಲಿಗೆ ಕರ್ನಾಟ ಬಾಷಾವಜನ ರಚಿತ ಸೌಂದರ್ಯಾದ್ಭುತ ಧುರೀಚಿತ್ರ ಬೃಹತ್ಕಥಾ ಮಂಜರಿಯೊಳ್, ಭೋಗವತೀ ಪರಾಭವ ವೆಂಬ, ಐದನೆ ಭಾಗದೊಳು ಪೂರ್ವಯಾಮದ ಕಥಾ ವಿರಾಮವಾದುದು.

ತದನಂತರಮಾ ವಿಕ್ರಮಾರ್ಕ ಸಾರ್ವಭೌಮಂ ಅದೇಗೋಡೆಯೊಳುಚಿತ್ರಿತಮಾಗಿದ್ದ ಕುದುರೆಯನ್ನು ನೋಡಿ, ಎಲ್ಲೆ ಅಶ್ವಮೇ! ನೀನೊಂದು ಯಾಮದವರಿವಿಗೂ, ರಮಣೀಯ್ಯ ತರಮಾದೊಂದು ಕಥೆಯಂಹೇಳಿ ಕಾಲಮಂ ಸುಖಮಾಗಿ ಕಳೆಯುವ ತೆರದಿಂ ಮಾಡೆಂದಾಜ್ಞಾಪಿಸಲುಛೇತಾಳನಾ ಕುದುರೆಯೊಳು ಪ್ರವೇಶಿಸಿ ಚಿತ್ರವರ್ಮನ ಕಥೆಯಂ ಬಿಟ್ಟು ಅನ್ಯಮಾದ ಕಥೆಯಂ ಹೇಳಲುಪಕ್ರಮಿಸಲು, ಆ ಭೋಗವತಿಯಾಕಥೆಯಂ ಕೇಳುತ್ತ, ಅಯ್ಯೋ ದೇವರೆ! ಆ ರಾಜಕುಮಾರಂ ಬಾವಿಯೊಳುಬಿದ್ದು ಯಾವ ಅವಸ್ಥೆಯಂ ಹೊಂದಿದನೋ ಅದಂ ಪೇಳದೆ ಸಮಯೋಚಿತ ಮಲ್ಲದ ಮತ್ತೊಂದು ಕಥೆಯಂ ಹೇಳಲಾರಂಭಿಸಿದುದಲ್ಲಾ ಎಂದು ಸಂತಾಪಯುಕ್ತಳಾಗಿ ವಿಕ್ರಮಾರ್ಕರಾಯನಂ ಕುರಿತು ಎಲ್ಲೆ ಮಹಾರಾಯನೇ! ಭಾವಿಯೊಳು ಹಾಕಲ್ಪಟ್ಟ ಆ ರಾಜಾತ್ಮಜನೇನಮ್ಮೃತನಾದನೊ? ಜೀವಿಸಿದನೋ? ಅವನವಸ್ಥೆಯಂ ಕೇಳಬೇಕೆಂದು ಮನಂ ಕಳವಳಿಪುದು, ದಯಮಾಡಿ, ಅದೇ ಕಥೆಯನ್ನೇ ಮುಂದೊರೆಯುವಂತೆ ಅಶ್ವಕ್ಕೆ ಆಜ್ಞಾಪಿಸ ಬೇಕೆಂದು ವಿನಯಾ ವನತಳಾಗಿ ಕೈಗಳಂಜೋಡಿಸಿಕೊಂಡು ಬೇಡುತ್ತಾ ನಿಂತಿರಲಾ ಕಾಂತಾ ಮಣಿಯೊಳು ಕರುಣೆಯಂತಾಳಿ ಮುನ್ನಿನ ಕಥೆಯನ್ನೇ ಹೇಳುವಂತಾಜ್ಞಾಪಿಸಲು ಆ ಚಿತ್ರಾಶ್ವಂ ಹೇಳಲಾರಂಭಿಸಿತು.

ಎರಡನೆ ಯಾಮದೊಳು ಚಿತ್ರಾಶ್ವಂ ನುಡಿಯುವ ಕಥೆ

ಎಲ್ಲೆ ಕರುಣಾಸಾಗರನೇ! ಲಾಲಿಸು? ಆ ರಾಜಾತ್ಮಜನಾದ ಚಿತ್ರವರ್ಮನನ್ನು ಬಾವಿಯೊಳು ದಬ್ಬಿದವರಾದಾ ಪಾಪಿಗಳು ಆ ಸುದ್ದಿಯಂತಿಳುಹಲೋಸುಗಂ ಅದಾ

ರಾಂಗನೆಯಬಳಿಗೈತಂದು ನಿಮ್ಮಿಷ್ಟಾನುಸಾರ ಮಾಗ ಗೊಳಿಸಿದೆ ವೆಂದೊರೆಯಲು ನೀ ಜಳಾದಾ ವೇಶ್ಯಯು ಇವರಾಕೃತ್ಯಮಂ ಗೈದರೋ ಇಲ್ಲವೋ ಒಂದುವೇಳೆ ಮಾಡಿದ್ದೀ ನಿಜವಾದರೆಭಾವಿಯೊಳು ಬಿದ್ದವಂ ಮೃತನಾದನೋ ಉಪಾಯಾಂತರದಿಂದ ಜೀವಿಸಿಹ ನೋ ಒಂದುವೇಳೆ ಜೀವವಂತನಾಗಿ ಮರಳಿ ಬಂದರೆ ಈ ಶಿಲೆಯಂಕೇಳೆದೇ ಸುಮ್ಮನಿ ರಲಾರನು ಆದ್ದರಿಂದ ಈಗಲೇ ಈ ಮನೆಗೆ ಕಳ್ಳರು ಬಿದ್ದರೆಂದು ಕನ್ನ ಗಂಡಿಯಂ ಹೊ ಡಿಸಿ ಕೆಲವು ಆಭರಣಂಗಳಂ ಈಶಿಲೆಯಸಂಪುಟಮಂ ಸಹಾಕದ್ದೊಯ್ದರೆಂದುಹೇಳೋಣ ವೆಂದು ಯೋಜನೆಯಂ ಮಾಡಿ ನಿಶ್ಚೈಸಿಕೊಂಡು ಬಂದಿದ್ದ ಆ ವನಪಾಲಕರಿಗೆ ಬಹು ಪ್ರತಿಯನ್ನಿತ್ತು ಕಳ್ಳರುತನ್ನ ಮನೆಗೂ ಆ ರಾಜಾತ್ಮಜಂ ಭೋಜನಮಂ ಮಾಡುತ್ತಿದು ಮನೆಗೂ ಗೋಡೆಗಳೊಳು ಕನ್ನ ಗಂಡಿಗಳಂ ಹೊಡೆಯಿಸಿ ಸುಲಗಿಸುಖವಾಗಿ ನಿದ್ದೆಯಂ ಮಾಡಿ ಮಾರನೆ ದಿನ ಅರುಣೋದಯಕ್ಕೆ ಮುಂಚಿತವಾಗಿಯೇ ಎದ್ದು ಬಾವಿಯೊಳ ಹಾಕಿಸಿದ ತನ್ನ ವಿಟಂ ಮೃತನಾಗಿದ್ದರೆ ಹೊರತೆಗೆಸಿ ಜಸಾಡಿಸೋಣವೆಂದು ಯೋಚಿ ಸುತ್ತಾ ಆ ತೋಟಕ್ಕೆ ಹೋಗಿಆ ವನಪಾಲಕರನ್ನೇ ಕರೆದುಕೊಂಡು ಹೋಗಿ ಆ ಭಾವಿ ಯಬಳಿಯನ್ನೈದುವ ಕಾಲಕ್ಕೆ ರಾತ್ರಿಯೊಳು ಭಾವಿಯಲ್ಲಿ ಹಾಕಲ್ಪಟ್ಟ ಆರಾಜಸುತಂ ಆಭಾವಿಯೊಳಂ ನೀರು ಕಮ್ಮಿಯಾಗಿದ್ದ ದ್ದರಿಂದಲೂ, ದೈವಯೋಗದಿಂದಲೂ ಇನಿತಾ ದರೂ ಗಾಯ ವೊದಲಾದದ್ದು ತಾಕದೆ ನೀರಿನಮಧ್ಯದಲ್ಲಿ ಧುಮುಕಿ ದಂತಾಗಿ ಅಂತೆ ಯೇ ಅನ್ನಿರೊಳು ಆ ರಾತ್ರಿಯಲ್ಲಾ ಜಳಿಯಂ ಸಹಿಸಿಕೊಂಡು ಕಾಲಮಂ ಕಳೆ ದವನಾಗಿ ಬೆಳಕು ಹರಿಯುತ್ತಾ ಬಂದ ಕುರುಹಂಕಂಡು ಧೈರ್ಯಗೊಂಡವನಾಗಿ ಮೆ ಲ್ಲನೆ ತಲೆಯೆತ್ತಿ ನೋಡಲು ಭಾವಿಯ ದಡದ ಗಿಡಗಳ ಬೇರುಗಳೊಳಗೆ ಜಟ್ಟಿರುವದುಂ ಕಂಡು ಅದಂಹಿಡಿದು ಹತ್ತು ತ್ತಾಯಿದ್ದನು, ಆ ಸೂಳೆಯು ಭಾವಿಯೊಳು ತನ್ನ ವಿಟ ನೇನಾದನೋ ಎಂದಿನಿಕಿ ಭಾವಿಯೊಳು ನೋಡಲು ಹತ್ತಿಬರುತ್ತಾ ಯಿದ್ದವನಂ ಕಂಡು ಓಹೋ ಯಿನ್ನೂ ಬದುಕಿದ್ದಾನೆಯೇ ಯಿದಕ್ಕೆ ತಕ್ಕ ಉಪಾಯಮುಂಮಾಡಿ ನನ್ನ ಮೋ ಲೆಯಥಾಪ್ರಕಾರಮಾದ ಸಂಬುಗೆಯನ್ನೇನಿಲ್ಲಿಸಿಕೊಳ್ಳಬೇಕೆಂದು ಯೋಚಿಸಿ ಅಯ್ಯೋ ದೇವರೇ ಮುಂದೆನುಗತಿ ನನ್ನ ಪ್ರಾಣಕಾಂತನಿಗೆ ಕಡೆಗೆ ಈಗತಿ ಬಂದುದೇ ಯೆಂದುಗ ಟ್ಟಿಯಾಗಿ ಅಳುತ್ತಾ ಅಯ್ಯಾ ಧರ್ಮಾತ್ಮರೇ ! ಈಹಾಳುಭಾವಿಯೊಳು ಬಿದ್ದಿರುವನನ್ನ ಕಾಂತನಂ ಮೇಲಕ್ಕೆ ತೆಗದುನನ್ನ ಂಉದ್ಧಾರ ಮಾಡಬೇಕೆಂದು ಕಪಟಶೋಕಮಂ ತೋ ರುತ್ತೆ ಆವನಪಾಲರಿಗೆ ಮೇಲಕ್ಕೆಯೆತ್ತುವಂತೆ ಕಣ್ಣಿನಸ್ಯೆಗೆಯಂ ಮಾಡಲಾತೋಟಗಾ ರರು ಅರ್ಧ ಭಾವಿಗೆ ಹತ್ತಿಬಂದವನಂ ಮೇಲಕ್ಕೆ ಎತ್ತಿ ನಿಲ್ಲಿಸಲು ಆ ರಾಜನಂದನನಂ ಆಲಿಂಗಿಸಿಕೊಂಡು ಅಯ್ಯೋ ದೇವರೇ ! ನನಗೆ ಸಂಭವಿಸಿದ ಕಷ್ಟಂಗಳೊಳುಈ ಪ್ರಾಣ ಕಾಂತನನ್ನೂ ನಾಶಗೊಳಿಸುತ್ತಿದ್ದೆಯಾ ಎಂದು ಕಂಠೀರವಂಸುರಿಸುತ ಸ್ವಾಮಿ ರಾಜ ನಂದನನೇ ! ನೀಂ ಬದು ಕಿದರಿಂದ ನಾನೇನಿಪುಣ್ಯಶಾಲಿ ಯೆಂದೆಣಿಸುವೆನು, ಈ ಬಾವಿ ಯೊಳು ಬಂದು ಬೀಳಲು ಕಾರಣಮೇನು ನಾನೂ ತಮ್ಮಂ ಹುಡು ಕುತ್ತಾ ಎಲ್ಲಿಹೋ ದರೊಎಂದುಪೇಚಾಡುತ್ತಾ ಇರುವ ಕಾಲದೊಳು ನನ್ನ ದುರದೃಷ್ಟವಿಂದ ಮನೆಗೆಕನ್ನ

ವಂ ಹೊಡೆದು ವಿಶಿಷ್ಟ ಪದಾರ್ಥಗಳಂ ದೊಚಿಕೊಂಡು ಹೊದರೆಂದು ಕಾವಲುಗಾರರು ಬಂದು ಹೇಳಿದರು. ಮನೆಗೆ ಹೋಗಿ ನೋಡುವಲ್ಲಿ ಬಳಕೆಯ ಸಾಮಾನುಗಳನೆಲ್ಲಮಂ ಬಿಟ್ಟು ಮುಖ್ಯಮಾ ಆಭರಣಂಗಳನ್ನೂ ದ್ರವ್ಯಂಗಳನ್ನೂ ಹೊತ್ತುಕೊಂಡು ಹೋದರು. ಇನ್ನೂ ಏನೇನು ಹೊತ್ತುಕೊಂಡು ಹೋದರೋ ಜನ್ಮಾಗಿ ನೋಡುವದಕ್ಕೆ ಸಹಾ ಮನವೊಡಂಬಡದೆ ನಿನ್ನುಗತಿ ಏನಾದುದೋ ಎಂಬ ಚಿಂತೆಯೊಳೇ ಮುಳುಗಿ ಕಂಡಕಡೆಯೊಳು ತಿರುಗುತ್ತಾ ಹಡುಕುತ್ತಾ ಈಬಳಿಗೆ ಬರುವಾಗ್ಯೆ ಬೆಳಗಾಯಿತುಮುಖ್ಯಮಾಗಿ ಏನಾದರೂ ಹೋಗಲಿ ದೇವರು ನಿನ್ನುಂ ಬದುಕಿಸಿದನಲ್ಲಾ ಇಂದುನಾಂ ಭಾಗ್ಯಶಾಲಿಎಂದು, ನಿಶ್ಚಯಿಸಿದೆನು; ಎಂದು ಕಪಟಾಂಗನೆಯು ನಟಿಸುತ್ತಾ ಓರಲು ಯೌನಸ್ಥ ನಾದ್ದರಿಂದಲೂ, ಸ್ತ್ರೀಲೋಲನಾದ್ದರಿಂದಲೂ, ಕಾಂತಮುಖಸಂದರ್ಶನದಿಂದ ಭ್ರಾಂತನಾಗಿ ಅವಳ ಕೃತ್ರಿಮ ಭಾವವಂ ತಿಳಿಯದೆ ನಿಜಮೆಂದು ನಂಬಿ ಎಲ್ಯೆ ವೇಶ್ಯಾರತ್ನವೇ ! ನಾನೇನು ಹೇಳಲಿ ನಿನ್ನ ಮಾತಿನಂತೆ ಮೃಗಶಾಬವಂ ಹುಡುಕುತ್ತಾ ಬಂದೆನು ಮುಂದಿನತೋಟಕ್ಕೆ ಬಂದು ಅಲ್ಲಿನ ಕಾವಲ ಗಾರರಂ ವಿಚಾರಿಸಲು ಇದು ರಾಜೋದ್ಯಾನವು ಇಲ್ಲಿನ ಹೂಗಿಡಗಳನ್ನೆಲ್ಲಮಂ ಮೇದು ಹಾಳು ಮಾಡಿದ್ದರಿಂದಾಜಿಂಕೆಯ ಮರಿಯಂ ಕಟ್ಟಿಹಾಕಿರುವೆವು ಬಿಡುವದಿಲ್ಲವೆಂದುಹೇಳಿ ನನ್ನಂ ಬೈಯ್ಯುತ್ತ ಬಂದು ಕೈಕಾಲ್ಗಳಂ ಹಿಡಿದು ತಂದು ಈ ಬಾವಿಯೊಳುಹಾಕಿದರು, ಎಂದು ಹೇಳಲ್ಕೆ ಅಯ್ಯೋ ನೀವೇತಕೀ ಹಾಳುತೋಟಮಂಸಾರದಿರಿ ಇದು ಪಿಶಾಚಾವಾಸವೆಂದುಕಾವಲುಗಾರರು ಸುದಾ ರಾತ್ರಿಯಾಗೆ ಯಾರೂ ಇರುವದಿಲ್ಲ. ಆದ್ದರಿಂದಲೇ ಇದಂ ಬಿಟ್ಟು ಮುಂಗಡೆಯೊಳು ಮನವಂ ಕಲ್ಪಿಸಿರುತ್ತಾರೆ, ತಿಳಿಯದೇ ಬರಬಹುದೆ ನಿಮ್ಮುಂ ಹಿಡಿದು ಭಾವಿಯೊಳು ಹಾಕಿದ್ದು ಪಿಶಾಚಿಗಳೇ ಹೊರತು ಮನುಷ್ಯರಲ್ಲ ಜಿಂಕೆಯಮರಿಯು ಹೋದರೆ ಹೋಗಲೆಂದು ಹಿಂತಿರುಗಿ ಬರಬೇಕಾಗಿತ್ತು ಎಂದು ನಟನೆಯಂ ತೋರುತ್ತ ಜೊತೆಯೊಳೇ ಮನೆಗೆ ಕರತಂದು ಕನ್ನ ಗಂಡಿಗಳಂ ತೋರಿ ಸಾಮಾನುಗಳೆಲ್ಲಾ ಕಳ್ಳರ ಪಾಲಾಯಿತೇಎಂದು ದುಃಖಿಸುತ್ತಾ ಬರಲು ಅವಳಂ ಸಮಾಧಾನಗೊಳಿಸುತ್ತಾ ತಾನಿಟ್ಟಿದ್ದ ಕನಕ ಪ್ರದಶಿಲೆಯನ್ನಿಟ್ಟಿರ್ದ ಸಂಪುಟಮಂ ಹುಡುಕಲು ಕಾಣದೆ ಹೋಗೆ ಅಯ್ಯೋ ಇದನ್ನೂ ಹೊತ್ತುಕೊಂಡು ಹೋದರೆಂದುಹೇಳಲು ಮತ್ತಷ್ಟು ದುಃಖಮಂ ಹೊಂದಿದವಳಂತೆ ನಟಿಸುತ್ತಾ ಬಂದಳು. ಪ್ರಾಯ ಮದಾಂಧನಾದ್ದರಿಂದ ಅವಳ ಕೃತ್ರಿಮೋಪಾಯಮುಂಕಂಡುಕೊಳ್ಳಲು ಬುದ್ಧಿ ಆರಿಯದವನಾಗಿ ಅವಳ ದುಃಖವು ನಿಜಮೆಂದರಿತು ಎಲ್ಯೆ ನಾರೀಮಣಿಯೇ ! ಹೋದರೆ ಹೋಗಲಿ ನೀನೇತಕಿಂತು ಗೋಳಾಡುತ್ತೀಯ್ಯೇ ಇದಂ ಕೊಟ್ಟ ಮುನಿಂದ್ರನ ಒಳಿಯಂ ಸಾರಿಇದಕ್ಕಿಂತಲೂ ಮಹತ್ತುಳ್ಳ ಮತ್ತೊಂದು ಪದಾರ್ಥಮಂ ಸಂಪಾದಿಸಿಕೊಂಡುಬಂದು ಆಮೂಲಕವಾಗಿನಿನ್ನಂಕುಬೇರ ಸದೃಶಭಾಗ್ಯಶಾಲಿನಿಯಂ ಮಾಡುವೆನೆಂದು ಸಂತೈಸುತ್ತಾ ಬರಲು ತನ್ನ ಮೇಲಿನಸಂಶಯ ನಿವೃತ್ತಿಯಾದುದೆಂದರಿತು ನಿಮ್ಮಂಥಾ ಮಹಾನುಭಾವರಂ ನಂಬಿದ

ನನಗೇನೂ ಅತಿಶಯಮಲ್ಲ. ಹಾಗೆ ಭಾಗ್ಯಶಾಲಿಯಾಗುವದೇ ನಿಜ. ದೈವಯೋಗದಿಂದ ನೀವು ಬದುಕಿದ್ದೀ ದೊಡ್ಡದು. ಇನ್ನು ನಾಂ ದುಃಖಿಸಲಾರೆನೆಂದು ಹೇಳಿ ಆವ್ಯಥೆಯಂ ಬಿಟ್ಟವಳಂತೆ ನಟಿಸುತ್ತಾ ಆರಾಜಾತ್ಮಜನ ಗಲ್ಲಮಂ ಪಿಡಿದು ಮುಗುಳು ನಗೆಯಿಂದ ನೀನೇ ನನ್ನ ಭಾಗ್ಯದ ನಿಧಿಯೆಂದು ಮುಖಮಂ ಜುಂಬಿಸುತ್ತಾ ಬರಲು ಇದಂ ನಿಜವೆಂದರಿಕವನಾಗಿ ಅಲ್ಲಿಂದ ಹೊರಟು ಸ್ನಾನಭೋಜನಾದಿಗಳಂ ಮಾಡಿಕೊಂಡು ಯಥಾಪ್ರಕಾರವಾಗಿ ಆವಾರನಾರಿಯೊಂದಿಗೆ ಸೇರಿ ರತಿಕ್ರೀಡಾಲೋಲನಾಗಿದ್ದನು.

ಅಂತೆಯೇ ನಾಲ್ಕಾರು ದಿನಂಗಳಿರ್ದು ಒಂದಾನೊಂದು ರಾತ್ರಿಯೊಳು ಮಲಗಿ ಆತನೊಳು ಸುಖಿಸುತ್ತಿರುವಾಗ! ಪ್ರಾಣನಾಥಳೇ! ಈಗೆಇದ್ದರೆ ನಾಸುಅಭಿವೃದ್ಧಿಯಂ ಹೊಂದುವದೆಂತು? ಜಾಗ್ರತೆಯೊಳುತಾವು, ಹೊರಟು ಆ ಮುನೀಂದ್ರರ ಬಳಿಯಂ ಸೇರಿ ಅವರ ದಯೆಯಂಸಂಪಾದಿಸಿ ಮಹದ್ಸೈಶ್ವರ್ಯ ಪ್ರಾಪ್ತಿಕರಮಾದ, ಪದಾರ್ಥಮಂ ಸಂಪಾದಿಸಿಕೊಂಡು ಬರಬೇಕೆಂದು ಬೋಧಿಸಲು ಬುದ್ಧಿಹೀನನಾದ್ದರಿಂ ಅವಳತಂತ್ರವ್ಯನರಿಯದೆ ನಾಳೆಯೇ ಹೊರಟು ಹೋಗುವೆನೆಂದು ಹೇಳಿ ಮರುದಿನ ಸೂರ್ಯೋದಯಕ್ಕೆ ಸರಿಯಾಗಿ ಮನೆಯಂ ಬಿಟ್ಟು ಹೊರಟವನಾಗಿ ದೇಶದೇಶಂಗಳ ಸುತ್ತುತ ಹಿಮಾಲಯದ ತಪ್ಪಲೊಳಿರ್ದತನಗೆ ಸುವರ್ಣ ಪ್ರದತಿಲೆಯನ್ನಿತ್ತ ಮುನೀಂದ್ರನಾಶ್ರಮಕ್ಕೆ ಬರುತ್ತಿರ್ದನು.

ಆತ್ತ ಇವನ ಅಣ್ಣನಾದ ಮಣಿವರ್ಮ ನೆಂಬುವಂ ಕನಕಾಲಯವಾದಪುರಾಧೀಶನ ಮಗಳಂ ಮದುವೆಯಂ ಮಾಡಿಕೊಂಡು ಅವಳು ಬಾಲೆಯಾದ್ದರಿಂದ ಗಂಧೇಭನಗರದಾವಾರಾಂಗನೆ ಅಳಕುಂತಳೆಯ ತಂಗಿಯಾದ ಪದ್ಮಗಂಧಿನಿ ಎಂಬುವಳನ್ನು ಇಟ್ಟುಕೊಂಡು ಅವಳೊಂದಿಗೆ ಸಕಲಭೋಗಂಗಳಂ ಅನುಭವಿಸುತ್ತ ಬಂದನು. ಈ ವಾರ್ತೆಯನ್ನು ಆತನಅತ್ತೆಯು ಕೇಳುತ್ತ, ಅಯ್ಯೋ ನಾಂ ಯೋಚಿಸಿದ ಯೋಜನೆಯು ಕಡೆಗೆ ಹೀಗಾದುದೇ ಈಅಳಯನಿಗೆ ಬುದ್ಧಿ ಹೇಗೆ ಕ್ರಮಪಡುವುದು, ಕುಮಾರಯು ನೆರೆಯುವ ಕಾಲಂ ಬಹು ಸಮೀಪವಾಯಿತಲ್ಲಾ ಯಿವನಿಂದ ನನ್ನ ಮಗಳೆಂತು ಸುಖಿಸುವಳು ಯಾರೊಂದಿಗೆ ಹೇಳಿದರೆ ಆಸೂಳೆಯಂ ಬಿಟ್ಟುಏಹಿತನಾಗುವನೆಂದು ಪರಮಚಿಂತಾಕ್ರಾಂತಳಾಗಿರುವಲ್ಲಿ, ದೈವಯೋಗದಿಂದ ಆ ರಾಜಪುತ್ರಿಯಾದ ಕನ್ಯಾಮಣಿಯು, ವೃಷ್ಣವತಿಯಾದಳು. ಕೇಳುತ್ತಾಕೆಯ ತಾಯಿಯಾದ ವೃದ್ಧರಾಜಪತ್ನಿಯು ಪರಮ ಸಂತೋಷಸಾಂತಳಾಗಿ ಸ್ನಾನಮಾಡಿ ಮರುದಿನದೊಳೇ ನಿಷ್ಕೇಪಪ್ರಸ್ತುತಕ್ಕೆ ಪ್ರಯತ್ನಮಂ ಮಾಡಿ ಪ್ರಸ್ತಮಂ ಬೆಳೆಯಿಸಲು, ತನ್ನ ಪತ್ನಿಯಂ ಸೇರಿ ಸುಖಿಸುತ್ತಾ, ಸೂಳೆಯಂ ಬಿಟ್ಟ ತನ್ನ ಪತ್ನಿಯೊಳು ಪರಮಾನುರಾಗಯುಕ್ತನಾಗಿರಲು ಆ ರಾಜನಿಟ್ಟುಕೊಂಡಿರ್ದ ವೇಶ್ಯಾಂಗನೆಯಾದ ಪದ್ಮಗಂಧಿನಿಯು ಅಯ್ಯೋ ಪಾಪಿನಿಯಾದೆನಲ್ಲಾ, ನನ್ನಲ್ಲಿರ್ದ ಪ್ರೀತಿಯು ಇನ್ನೂ, ಕೆಲವು ಕಾಲಮಾರಾಜನಿಗೆ ಇದ್ದದ್ದೀ ಆದರೆ ಲಕ್ಷಾಂತರ ವರಹಗ

ಳಂ ಸಪಾದಿಸಿ ಕೊಳ್ಳುತ್ತಿರ್ದನು. ನನ್ನಂಕಂಡರೆ ಆಗದಂತಾದುದೇ ಪುನಃ ರಾಜನಿಗೆ, ನನ್ನೊಳು ಯಥಾಪ್ರಕಾರವಾಗಿ ವಿಶ್ವಾಸಂವುಟ್ಟುವಂತೆ ಏನುಮಾಡಲಿಎಂದು ಯೋಚಿಸುತ್ತಾ ಅವರ್ತಾಕ್ಷನೆಂಬು ಹೆಸರುಳ್ಳ ಕರ್ಕಗೆಮಿಂಜುತ್ತಿರುವ ದೇಹಕಾಂತಿಯಿಂದೊಪ್ಪುವ ಅಡವೋರೆಯ ಗಂಟುಮೂಗಿನ, ಗುಜ್ಜಗೊರಳಿನ ದೊಡ್ಡದಾದ ಗುಡಾಣ ಹೊಟ್ಟೆಯ ಉದರಿನ ರೋಮಮಿಸೆಗಳ ಉದ್ದವಾದ ಕಾಲುಕ್ಕೈಗಳಗೂನು ಬೆನ್ನಿನಗಾರ್ದಭ ಸ್ವರದಸಣಬಿನಂದದ ತಲೆಕೂದಲಿನ ಅತಿಶಯದಿಂದೊಪ್ಪುತ್ತಿರುವವನಂ ನೋಹದ ಮಿಂಡನನ್ನಾಗಿ ಮಾಡಿಕೊಂಡಿದ್ದ ಪಳಾದಕಾರಣ ಅವನೊಳು ಸೇರಿರತಿಕ್ರೀಡೆಯಂ ಸಲುಪುತ್ತಿರುವಾ ಸುಂದರಾಂಗಿಯು, ಅವನಂ ಕುರಿತು, ಹೇಳಿದಳು. ಎಲ್ಲೈನನ್ನ ಮೋಹದ ಗಣಿಯೆ ! ಆಲಿಸು ಈ ದೇಶಾಧೀಶನು ಈವರಿಗೂ ನನ್ನೊಳು ವಿಶ್ವಾಸಮುಳ್ಳವನಾಗಿ ನನ್ನಂ ಕ್ಷಣಮಾದರೂ ಬಿಡಲಾರದೆ ಇದ್ದನು. ಆತನಿಗೆ ಶೋಭನಪ್ರಸ್ತುತವಾದುದರಿಂದ ನನ್ನೊಳು ವಿಶ್ವಾಸಮಂ ಕೊರೆದು ನನ್ನಂ ಸ್ಮರಿಸುವುದೇ ಇಲ್ಲವು ಇದಕೇನುಪಾಯಮುಂ ಮಾಡಬೇಕೋ ತೋರದು. ಎಂದು ತನ್ನಂತರಂಗಮುಂ ಆ ಮೋಹದಮಿಂಡನೊಳು ಹೇಳಿಕೊಂಡಳು. ಲೋಕದೊಳು ರೂಪವಂತರು ಕುರೂಪಿಗಳನ್ನು ನೋಹಿಸುವುದು ಸಹಜಮಾಗಿರುವುದು, ಅದು ಹೇಗೆಂದರೆ ?

ಶ್ಲೋ॥ ಲಕ್ಷ್ಮೀರ್ಲಕ್ಷಣಹೀನೇಜ ಕುಲಹೀನೇ ಸರಸ್ವತೀ ।
ವಿಕಾರವಂತಂ ಸುಭಗಾಗಿರ್ವಷ್ಣತಿವಾಸವಃ ॥

ಸಲ್ಲಕ್ಷಣಮಲ್ಲದವಪಂ ಲಕ್ಷ್ಮಿಯು ಒಲಿಯುತ್ತಾಳೆ ಕುಲಹೀನನನ್ನು ಸರಸ್ವತಿಯು ಮೆಚ್ಚುವಳು ಕುರೂಪಿಯಾದವನನ್ನು ರೂಪಾತಿಶಯಮುಳ್ಳ ಸ್ತ್ರೀಯು ಮೋಹಿಸುವಳು ಬೆಟ್ಟಗಳಲ್ಲಿಯೇ ಮಳೆಯು ಸುರಿಯುವದು ವಿಶೇಷವು. ಹೀಗೆ ಇರುವದರಿಂದ ಪದ್ಮನೀಜಾತಿಸ್ತ್ರೀಯಾದವಳು, ಆ ಕುರೂಪಿಯಂ ಮೋಹದಮಿಂಡನನ್ನಾಗಿ ಮಾಡಿಕೊಂಡು ಆವನೊಳು ಸುಖಿಸುತ್ತಾ ತನ್ನ ಅಂತರಂಗಕ್ಕೆ ಮುಖ್ಯನನ್ನಾಗಿಮಾಡಿಕೊಂಡಿದ್ದರಿಂದ ಅವಳ ಮಾತುಗಳಂ ಕೇಳುತಲೇ ಅವಳಿಗೆ ಹಿತಕರಮಾಗುವಂತೆ ಉಪಾಯವಂ ಹೇಳಿದನು.

ಹೇಗೆಂದರೆ ಈ ಊರುಹೊರಗಿನ ಸ್ಮಶಾನದೊಳು ವಾಸವಾಗಿರುವ ಮಂತ್ರಿಕನಿಂದ ರಾಜಪತ್ನಿಗೆ ಮಾಟವಂ ಮಾಡಿಸಿದರೆ ಮೃತಿಯಂ ತಾಳುವಳು. ಅನಂತರ ಮಹಾರಾಜನು ಮುನ್ನಿನಂತೆ ನಿನ್ನಂ ವಿಶ್ವಾಸಿಸುವನು, ಎಂದು ದುರ್ಬೋಧನೆಯಂ ಮಾಡಲು ಆ ವಾರಾಂಗನೆಯು ಆ ಮಾರನೇದಿನದುದಯಮಾಗಲಲ್ಲಿಂ ಹೊರಟು ಆ ಸ್ಮಶಾನದೊಳಿರುವ ಮಾಂತ್ರಿಕನೆಡೆಯಂಸೇರಿ ಅವನಿಗೆ ಸಾಷ್ಟಾಂಗವೆರಗಿ ತಾಂ ಕೊಂಡೆಯ್ದಿದ್ದ ಫಲಾದಿಗಳಂ ಮುಂದಿಟ್ಟು ಸ್ವಾಮಿಾ ನನ್ನಮನೋರಥಸಿದ್ಧಿಯಿಂದ ಧನ್ಯಳಂಮಾಡೆಂದು ಕೈಮುಗಿದು ಪ್ರಾರ್ಥಿಸಲಾ ಮಂತ್ರಜ್ಞಂ ಆದೇಂ ತಿಳುಹಿದರೆ ಅವಶ್ಯಕಮಾಗಿ ಆಗಗೊಳಿಸುವೆನೆಂದು ಪೇಳಲಾ ವೇಶ್ಯಾಚೇಟಿಯು ತನ್ನ ಮನೋಗತ

ವಂಪೇಳಿದವಳಾಗೆ ಆ ಮಾಂತ್ರಿಕಂ ಈ ಕೆಲಸಕ್ಕೆ ಒಂದುಸಾವಿರ ವರಹಂಗಳು ಬೇಕು ತಂದುಕೊಟ್ಟರೆ ಆಕೆಯು ಇದ್ದೆಡೆಯೊಳೇ ಮೃತಳಾಗುವಂತೆ ಮಾಳ್ಪೆನೆನಲದಕ್ಕೆ ಸಂಮತಿಸಿ ಅಂತೆಯೆಕೊಂಡೊಯ್ದು ಕೊಡಲು ಅಮಂತ್ರಜ್ಞನು ವಾರಾಹೀಮಾರಣ ಪ್ರಯೋಗಮುಂಅಥರ್ವಣಾಗಮರೀತ್ಯಾ ಮಾಡಲು ಮಹದಾಯುರ್ಯೋಗದೊಳು ಹುಟ್ಟಿದ ಆರಾಜಪತ್ನಿಯಂ ಏನಂಮಾಡಲು ಶಕ್ತಿಸಾಲದ ಸುಮ್ಮನಾದುದು. ಆ ಮಂತ್ರಗಾರನ ಹೇಳಿಕೆಯಂತೆ ಏನೂ ನಡೆಯಲಿಲ್ಲವೆ, ಯೆಂದು ಚಿಂತಿಸುತ್ತಾ ಒಂದಾತನಂ ಪ್ರಾರ್ಥಿಸೆ ಎಲ್ಲೆ ವೇಶ್ಯಾರತ್ನವೇ ! ನಾಂ ನೀರಂ ಮಂತ್ರಿಸಿ ಕೊಡುವೆನು ಈ ನೀರಿನಿಂದ ಆ ರಾಜಪತ್ನಿಯಂ ಸ್ನಾನಮಾಡಿಸಿದರೆ, ಆಕೆಯು ಶಿಲಾರೂಪಮಾದ ಏಗ್ರಹಮಾಗಿ ಹೋಗುವಳು ಅನಂತರ ಮಾರಾಯನು ನಿನ್ನನ್ನೇ ಮೋಹಿಸಿ ಯಥಾ ಪ್ರಕಾರಮಾಗಿ ನಿನ್ನೊಳನುರಾಗಯುಕ್ತನಾಗಿರುವನು ಯೆಂದೊರೆದು ಒಂದುಪಾತ್ರೆಯೊಳು; ನೀರುತುಂಬಿ ಅಭಿಮಂತ್ರಿಸಿ ಕೊಡಲು ಆದಂ ತಂದು ಮನೆಯೊಳು ಭದ್ರಪಡಿಸಿ ತನಗೆ ಸ್ನೇಹಿತಳಾಗಿದ್ದ ಆ ರಾಜಮಹಿಷಿಯ ಪರಿಚಾರಿಣಿಯಂ, ಕರೆದು ರಹಸ್ಯದೊಳಿದಂ ಆಕೆಯಕ್ಕೈಗೆ ಕೊಟ್ಟು ರಾಜಭಾರ್ಯೆಗೆ ಸ್ನಾನಮಂ ಮಾಡಿಸೆಂದು ಹೇಳಿ ಪಾರಿತೋಷಿಕ ದ್ರವ್ಯಮುತ್ತು ಕಳುಹಿದಳು. ಆ ಪರಿಚಾರಿಣಿಯು ರಾಜಪತ್ನಿಗೆ ಅಭ್ಯಂಗಮಂ ಮಾಡಿಸುತ್ತಿರುವ ಕಾಲದೊಳು ಈ ಪಾತ್ರೆಯೊಳಗಿನ ನೀರಂ ಮೇಲೆಸುರಿಯಲು ಆ ಕ್ಷಣದೊಳೇ ದಿವ್ಯಸುಂದರಮಾದೊಂದು ಶಿಲಾಪ್ರತಿಮೆಯಾದಳು. ಆದಂ ಕೇಳುತಾರಾಯಂ ಪರಮಶೋಕಾಕುಲನಾಗಿ ಹೋಗಿನೋಡಿ ಗೋಳಾಡುತ್ತಾ ಆ ಪ್ರತಿಮೆಯಂ ತನ್ನ ಅಂತಃಪುರದೊಳಿಟ್ಟುಕೊಂಡು ನೋಡಿ ನೋಡಿ ಅಳುತ್ತಾ ಹತ್ತಾರುದಿನಮಿರ್ದು ಅನಂತರಮಾ ಪದ್ಮಗಂಧಿನಿಯೆಂಬ ವೇಶ್ಯಾಂಗನೆಯೊಳು ಕಲೆತು ಮುನ್ನಿನಂತೆಯೇ ಸುಖಿಸುತ್ತಾ ಆಕೆಯೊಳು ವಿಶ್ವಾಸಿಯಾಗಿರ್ದನು.

ಅತ್ತಲಾ ಚಿತ್ರನರ್ಮಂ ಮುನೀಂದ್ರನಂ ನೋಡಬೇಕೆಂಬ ಲಪಲಪಿಕೆಯಿಂದಾಶ್ರಮಮಂ ಪ್ರವೇಶಿಸಿ ವಿಚಾರಿಸಲು ಆ ಯೋಗೀಂದ್ರಂ ಪರಮಪದಮಂ ಹೊಂದಿದನೆಂದು ಕೇಳಿ ಖಿನ್ನಮಾನಸನಾಗಿ ಆವರ ಶಿಷ್ಯರಾದ ಪ್ರತಿಬಿಂದಕನೆಂಬುವನನ್ನೂ ಜಯಸೋಮನೆಂಬುವನನ್ನೂ ಕಂಡು ಮಾತಾಡಿಸಲವರ್ಪರೂ ತಮ್ಮ ಗುರುವಿನ ಬಳಿ ಇದ್ದ ಪದಾರ್ಥಂಗಳಿಗಾಗಿ ಕಲಹಮಾಡುತ್ತಿದ್ದವರು ಇವನಂ ಕಂಡು ಮಧ್ಯಸ್ಥಗಾರನಂತೆ ಗೊತ್ತುಮಾಡಿಕೊಂಡು ತಮ್ಮ ತಮ್ಮ ವ್ಯಾಜ್ಯವುಂ ಹೇಳುತಾವಿಂದರು.

ಎಲ್ಲೆ ರಾಜನಂದನನೇ ! ನಮ್ಮ ಗುರುವರೇಣ್ಯನು ಪರಂಧಾಮವನ್ನೈದುವಾಗ್ಯೆ ತಮ್ಮ ಬಳಿಯ ವಸ್ತುಗಳಂ ಸಮವಾಗಿ ಇವರೂ ತೆಗೆದುಕೊಳ್ಳಿರೆಂದು ಆಜ್ಞೆಯಂಕೊಟ್ಟರು. ಅಂತೆಯೇ ಒರೊರ್ವರು ಒಂದೊಂದು ತೆಗೆದುಕೊಂಡೆವು ಈ ಪಾದುಕೆಗಳಂ ಒಂದೊಂದಂ ತೆಗೆದುಕೊಂಡರೆ ಯಾರಿಗೂ ಪ್ರಯೋಜನಮಿಲ್ಲವು. ಒಬ್ಬನಿಗಿದ್ದರೇನೇ ಉಪಯೋಗವು. ತಪ್ಪಿದರೆ ಇದರಿಂದ ಪ್ರಯೋಜನಮಿಲ್ಲವು. ಇವ್ವುಗಳ ಗುಣಂಗಳೇನೆಂದರೆ,

ಕಮಂಡಲಮಂ ತೊಳೆದು, ಕ್ರಮವಾಗಿ ವೂಜೆಗೈದು ಎಷ್ಟುವುಂದಿಗೆ ಭೋಜನಮಾಗಬೇಕೆಂದು ತಿಳಿದಿರುವನೋ ಆದಂ ಸ್ಮರಿಸಿ ಆ ಕಮಂಡಲಮಂ ಮೊಗಚಿಟ್ಟರೆ ಅಷ್ಟು ಜನಕ್ಕೆ ಸಂಪೂರ್ತಿಯಾಗಾಗುವಂತೆ ನಿಖಿಲಭಕ್ಷ್ಯ ಭೋಜ್ಯಂಗಳೊಡನೆ ಮೃಷ್ಟಾನ್ನವು ಸಿದ್ಧಮಾಗುವದು. ಈ ಯೋಗದಂಡಮಂ ನೆಲದೊಳೊಂದಾವೃತ್ತಿ ಎತ್ತಿ ಕುಕ್ಕಿದ ಮಾತ್ರಕ್ಕೆ ನವರತ್ನಂಗಳಂ, ಒಂದು ಜೊಗಸೆಯ ವರಹಂಗಳಂ ತುಂಬಿದ ತಟ್ಟೆಯನ್ನೂ ಸ್ತ್ರೀದೇವತೆಯೊಂದು ತಂದು ದಂಡವಂತಿ ಡಿದಿರ್ದವನ ಮುಂದಿಟ್ಟುಹೋಗುವದು. ಈ ಎರಡು ಪಾದುಕೆಗಳಂ ಮೆಟ್ಟಿದವನಾಗಿ ತಾನಾವೆಡೆಯಂ ಸಾರಬೇಕೆಂದು ಚಿಂತಿಸಿದರಾಕ್ಷಣಮೇ ಆ ಸ್ಥಲಂ ಮುಟ್ಟಿಸುವದು. ನಿನಗೆ ಕೊಟ್ಟ ಸುವರ್ಣಪ್ರದ ಶಿಲೆಯು ಸೇರಿ ಗುರುಗಳೆಡೆಯೊಳಿರ್ದುದು ನಾಲ್ಕು ವಸ್ತುಗಳು. ಈ ಪಾದುಕೆಗಳ ವಿಷಯವಾಗಿ ಕಲಹವು ತನುಗುಂಟಾಗಿರುವದು. ಪಕ್ಷಪಾತವಿಲ್ಲದೆ ನೀಂ ಪರಿಹರಿಸೆಂದು ಅವರಿರ್ವರೂ ಆ ರಾಜಾತ್ಮಜನಂ ಮಧ್ಯಸ್ಥಗಾರನನ್ನಾಗಿ ಗೊತ್ತುಮಾಡಿಕೊಂಡು ಹೇಳುತ್ತಾ ಬರಲು ಆ ಚಿತ್ರವರ್ಮಂ ಪಾದುಕೆಗಳ ವುಹಿಮೆಯಂ ಕೇಳುತ ತಾನದಂ ಅಪಹರಿಸಬೇಕೆಂದು ಯೋಚಿಸಿ, ಆ ಭಾವಮಂ ಹೊರತೋರದೆ ಅವರಂ ಕುರಿತು, ಅಯ್ಯಾ ಮುನಿಪುತ್ರರೇ! ನಾನೊಂದು ನ್ಯಾಯಮಂ ನೆನೆದಿರುವೆನು ಆದರಂತೆ ನೀವಿರ್ವರೂ ಸಮ್ಮತಿಸಿದರೆ, ಈ ವಿಷಯಮಾದ ನಿಮ್ಮ ವ್ಯಾಜ್ಯಮಂ ಬಗೆ ಹರಿಸುವೆನೆನಲದರಂತೆಯೇ ಆಗಲೆಂದೊಡಂಬಡಲು, ಆಯ್ಯಾ ಆದೋ ಅತ್ತನೋಡಿ ಎದುರಾಗಿ ಕಾಣುವ ಬಿಲ್ವವೃಕ್ಷದೊಳಗಿನ ಒಂದು ಫಲಮಂ ಮುಂದಾಗಿ ಯಾರು ತರುವರೋ ಅವರೀಪಾದುಕೆಗಳಂ ಹೊಂದಲರುಹರೆಂದು ಹೇಳಿದನು. ಅಂತೆಯೇ ಆಗಲೆಂದು ಒಪ್ಪಿದವರಾದಿರ್ವರೂ ಆ ವೃಕ್ಷ ದಡಿಗ್ಗೈದಲು ಈ ಪಾದುಕೆಗಳೆರಡಂ ತನ್ನೆರಡು ಕಾಲುಗಳಿಗೆ ತೊಟ್ಟುಕೊಂಡು ತನ್ನ ಸೂಳೆಯ ಮನೆಯ ಬಾಗಲು ಮುಂಗಡೆಯೊಳಿರಲು ಸ್ಮರಿಸಿದಂ ಆ ಕ್ಷಣದೊಳೇ ಅಲ್ಲಿಂದವನಂ ಆಂತರಿಕ್ಷಮಾರ್ಗವಾಗಿ ತೆಗೆದುಕೊಂಡು ಬಂದು, ಗಂಧೇಭಪುರದ ವಾರಾಂಗನೆಯಾದ ಅಳಿಕುಂತಳೆಯ ಮನೆಯ ತಲಬಾಗಿಲೊಳು ಇಳಿಸಿದವು. ಆ ಕೂಡಲೆ ಯಾ ವಾರಾಂಗದೆಯ ಹೆಸರನ್ನಿಟ್ಟು ಕೂಗಲು, ರಾಜನಂದನನ ಶಬ್ದಮೆಂದರಿತು, ಪುನಃ ಮತ್ತೇನಂ ಸಂಪಾದಿಸಿಕೊಂಡು ಬಂದಿದ್ದಾನೋ ಎಂದು ಅತಿಸಂಭ್ರಮದೊಳು ಬೇಗನ್ನೆತಂದು ಬಾಗಿಲಂ ತೆಗೆದು ನಿಂತಿರ್ದ ರಾಜಕುಮಾರನಂ ಮರ್ಯಾದೆಯಾಗಿ ಮೃದೂಕ್ತಿಗಳಿಂದ ಮನ್ನಿಸುತ್ತಾ ತನ್ನ ಅಂತಃಪುರಕ್ಕೆ ಕರೆದುಕೊಂಡು ಹೋಗಿ ಮಂಜದೊಳು ಕುಳ್ಳಿರಿಸಿ, ಎಲ್ಲೆ ಮೋಹನಾಂಗನೇ! ನಿನ್ನಂ ಬಿಟ್ಟು ಹೋಗಿ ಬಹುದಿನಗಳಾದವು. ತಾವು ಹೊರಟು ಹೋದ ಕಾಲದಿಂದ ಎಲ್ಲಿರುವರೋ ಕಷ್ಟಪಡುವರೋ ಸುಖಿಯಾಗಿದ್ದಾರೋ, ಎಂಬ ಚಿಂತೆಯಿಂದ ಅನ್ನಾದಿಗಳು ಸದಾ ರುಚಿಸದೆ ಇತ್ತು, ನಿನ್ನಂ ಸ್ಮರಿಸಿ ರಾತ್ರಿಯೊಳು ನಿದ್ದೆ ಸಹ ಬಾರದಿತ್ತು. ಅಯ್ಯೋ ಸ್ವಾಮಿ ನನಗಾಗಿ ನೀವಿಷ್ಟು ಕಷ್ಟಮಂ ಹೊಂದಬೇಕಾಯ್ತು ಯೆಂದು ಬಗಿಯುಪು

ತ್ತಾ ತದ್ಸ್ನು ಕುಜಂಗಳಂ ಆತನೆದೆಯೊಳಿಟ್ಟು ಅಪ್ಪುತ್ತ ತುಟಿಯಂ ಕಚ್ಚುತ್ತ, ಹೀಗೆ ನಿಮ್ಮಿ ಷಮಾತ್ರದೊಳಾ ರಾಜಕುಮಾರನಂ ವೆರಗುಮಾಡಿ, ಅಂತೆಯೇ ಪ್ರಾಣೇಶನೇ ಏಳು. ಹೊತ್ತಾದುದು ಅಡಿಗೆಯು ಸಿದ್ಧವಾಗಿಹುದು, ಸ್ನಾನ ಭೋಜನಾದಿಗಳಂ ಮಾಡಿ, ಸ್ವಲ್ಪವಿಶ್ರಾಂತಿಯಂ ಹೊಂದು ಬಹು ದಣಿದಿರುವೆಯೆಂದು ಕಪಟ ನಟನೆಯಂ ನಟಿಸು ಸುತ ಬಲುಮೆಯಂ ತೋರುತ್ತ ಬರಲು, ಪ್ರಾಯಸ್ಥನಾದರಿಂದ ಕಾಮ ಮುದಾಂಧನಾಗಿ ಅವಳ ಕೃತ್ರಿಮಭಾವಮನ್ನರಿಯದೆ ಸಹಜಮಾದ ಪ್ರೀತಿಯಂ ತೋರುವಳೆಂದರಿತು ಸಂತೋಷಸ್ವಾಂತನಾಗಿ ಅಲ್ಲಿಂ ಹೊರಟು ಬಂದು ಸ್ನಾನ ಭೋಜನಾದಿಗಳಂ ಮಾಡಿಕೊಂಡು ವಾರಾಂಗನೆಯು ಶಯ್ಯಾ ಗೃಹಮಂಸಾರಲು, ಆ ಕಾಲಕ್ಕೆ ತನ್ನ ಭೋಜನಾದಿಗಳಂ ತೀರಿಸಿಕೊಂಡು ದಿವ್ಯಾಲಂಕಾರಮಂ ಮಾಡಿಕೊಂಡವಳಾಗಿ, ಗಂಧ ಪುಷ್ಪ ತಾಂಬೂಲಗಳಂ ಅಣಿ ಗೊಳಿಸಿಕೊಂಡು ಕಾದಿರ್ದವಳು, ಕೈಪಿಡಿದೆಳದು ಮಂಚ ದೊಳು ಕುಳ್ಳಿರಿಸಿ, ಆತನ ತೊಡೆಯಮೇಲ್ ತಾಂ ಕುಳಿತು ಗಂಧಪುಷ್ಪಾದಿಗಳಿಂದಾ ತನಂ ಭೂಷಿಸಿ ದಾಂಬೂಲಮಂ ಸವಿಯಲೀಯುತ್ತ ಹಿತಮಾಗಿಯೂ ಮೃದುವಾಗಿ ಯೂ ಪ್ರಿಯೋಕ್ತಿಗಳಿಂದ ಸಂತೋಷಿಸುತ್ತಾ ಹಾಸ್ಯಂಗಳಂ ಸಲುಪುತ್ತ ಮುಂದಹಾ ಸನ ಸಂಯುತಳಾಗಿ ಜುಂಬನಾದಿಗಳಂ ಗೈಯುತ್ತಾ ಆತನಂ ಪರವಶನಂ ಮಾಡಿ, ಎಲ್ಲೈ ಪ್ರಾಣೇಶನೆ! ಇಷ್ಟು ದಿನಗಳೂ ಹೋಗಿ ಯಾವ ಶ್ರೇಷ್ಠಮಾದ ಪದಾರ್ಥಮಂ ತಂದಿ ರುವಿರಿ, ಅದರಿಂದೇನು ಸುಖಂಗಳಾಗಬಹುದೆಂದು ಮರ್ಮೋದ್ಘಾಟನದ ಮಾತುಗಳ ನ್ಯಾಡುತ್ತು ಬರಲಾ ಕಾಮಾಂಧಂ, ಇವಳ ದುಷ್ಟಭಾವಮನ್ನರಿಯದೆ ತನಗೆ ಮುಂದಾ ಗುವದಂ ಯೋಚಿಸದೆ ಹೇಳುತ್ತಾ ಬಂದನು. ಎಲ್ಲೈ ಪ್ರಾಣಪದಕಮೇ! ಕೇಳು ನಿನ್ನಿಂದ ಸಮ್ಮತಿಗೊಂಡು ಹೊರಟವಂ ಪಿರೂಲಯಕ್ಕೆ ಹೋಗಿ ಅಲ್ಲಿ ತಪೋಧನನಾ ಗಿದ್ದ ಮೊದಲು ನಮಗೆ ಸುಗುಣಾದ ಪ್ರವರ್ತಿಸಲಿಯನ್ನು ಸುಗ್ರಹಿಸಿದ ಮುನೀಂದ್ರನ ಆಶ್ರ ಮಕ್ಕೆ ಹೋಗುವಲ್ಲಿ ಆ ತಾಪಸೇಂದ್ರಂ ಪರಲೋಕಾತಿಥಿಯಾದನೆಂದು ಅವರ ಶಿಷ್ಯ ರಿಂದ ಕೇಳುತ್ತಲಯ್ಯೋ ನನ್ನ ಮನೋರಥಂ ಕೈಸಾರದೆ ಹೋದುದೇ ಎಂದು ಚಿಂತಿ ಸುತ್ತಲಿರುವ ಕಾಲದೊಳು ಅವರ ಶಿಷ್ಯರಿಂದ ಈ ಪಾದುಕೆಗಳು ಪ್ರಾಪ್ತಿಯಾಗಿ ಕೊಂಡ ಬಂದೆನೆಂದೂ ಈ ಪಾದುಕೆಗಳಂ ಕಾಲ್ಗಳಿಗೆ ತೊಟ್ಟು ಯಾವ ಪ್ರದೇಶಕ್ಕೆ ಹೋಗಬೇ ಕೆಂದು ಸ್ಮರಿಸಿದರೆ ಆ ಕ್ಷಣಕ್ಕೆ ಆ ಬಳಿಯಂ ಸೇರಿಸುವದು, ಮರಳಿ ಹಿಂತಿರುಗಿ ಬರ ಬೇಕೆಂದು ಸ್ಮರಿಸಿದರೂ ಅಂತೆಯೇ ಆಗುವದೆಂದೂ ಅದರ ವಿಧಿಯನ್ನು ಹೇಳಲುಕೇ ಳಿದಾ ವೇಷಗಾರಳು ಇವನಂ ಕಾಡುಪಾಲುಮಾಡಿ ಈ ಪಾದುಕೆಗಳಂ ಅಪಹರಿಸಬೇ ಕೆಂದು ಯೋಚಿಸಿ ಎಲ್ಲೈ ಪ್ರಾಣಕಾಂತನೇ! ನಿನ್ನಂ ಸೇರಿದ್ದರಿಂದ ನನಗೊಂದು ಕಾರ್ಯ ಮುಂಕೈಗೂಡಿಸಿಕೊಡು. ನಾಂ ಧನ್ಯಳಾಗುವೆ. ರತ್ನ ದ್ವೀಪದೊಳು ವೇಕ್ಷದಾಂ ಬಿಕೆಯಂ ಪೂಜಿಸಿದವರಿಗೆ ವೇಕ್ಷ ಮೇ ಸಂಭವಿಸುವದೆಂದು ಅನೇಕ ಪುರಾಣಂ ಗಳು ಹೇಳುತ್ತವೆ ನನಾ ದೇವಿಯಂ ಪೂಜಿಸಿದರೆ ನಸ್ಮ ಮರಣಾನಂತರ ನನಗೂ ಮೋ

ಕ್ಷಲೋಕ ಪ್ರಾಪ್ತಿಯಾಗು ವದು ನಿಮ್ಮಿಂದ ಸಕಲಭೋಗಂಗಳಂ ಹೊಂದಿದೆನು. ಈ ಕೆಲಸಮಂ ಮಾಡಿಸಿ ಕೃತಾರ್ಥಳಂಮಾಡಬೇಕೆಂದು ಕೃತ್ರಿಮ ವಿನಯಮಂ ತೋರುತ್ತ ಬೇಡಿಕೊಳ್ಳಲುಅಂತೆಯೇ ಮಾಡುವೆನೆಂದು ಹೇಳಿ ಮರುದಿನದುದಯದೊಳ್ ಪೂಜಾ ಸಾಮಗ್ರಿಗಳಂ ಸಿದ್ಧಗೊಳಿಸಿಕೊಂಡು ಕೆಲವು ಮತ್ತು ಪದಾರ್ಥಂಗಳಂ ರಹಸ್ಯಮಾಗಿ ಅಣಿಮಾಡಿಕೊಂಡು ಆ ರಾಜನಂದನನಂ ಪ್ರಾರ್ಥಿಸಲು ಆ ವಾರಾಂಗನೆಯುಂ ಹೆಗಲು ಮೇಲೆ ಕುಳ್ಳಿರಿಸಿಕೊಂಡು ಪೂಜಾ ಸಾಮಗ್ರಿಯ ಪಾತ್ರೆಯುಂ ತಲೆಯಮೇಲೆ ಯಿಟ್ಟು ಕೊಂಡು ಆಪಾದುಕೆಗಳಂ ಕಾಲ್ಗಳಿಗೆ ಮೆಟ್ಟಿಕೊಂಡಪನಾಗಿ ರತ್ನದ್ವೀಪದ ಮೋಕ್ಷಾಂ ಬಿಕಾಲಯದ ಬಳಿಗೆ ಹೋಗಬೇಕೆಂದು ಸ್ಮರಿಸಿಕೊಳ್ಳಲು ಆ ಕ್ಷಣದೊಳೇ ಅವರಿರ್ವ ರಂ ಆ ಮೋಕ್ಷದಾಯಿನಿಯ ದೇವಾಲಯದ ಮುಂಗಡೆಯೊಳು ನಿಲ್ಲಿಸಲು ಆ ರೀತಿ ಯಂ ನೋಡುತಾ ವೇಶ್ಯಾಂಗನೆಯು ಮಹದಾಶ್ಚರ್ಯಮಂ ಹೊಂದುತ್ತ ಆ ದೇವಿ ಯಂ ಕ್ರಮಮಾಗಿ ಪೂಜಿಸಿತಾಂ ಕೊಂಡೊಯ್ದಿರ್ದ ಪದಾರ್ಥಂಗಳಂ ನೈವೇದ್ಯಮುಂ ಮಾಡಿ ಮಂತ್ರಪುಷ್ಪಾದಿ ಉತ್ತಮಪೂಜೆಯಂ ಸಮರ್ಪಿಸಿದ ಬಳಿಕ ಕೆಲವು ಹೊತ್ತು ಕ ಣ್ಮುಚ್ಚಿಕೊಂಡು ಪ್ರಾರ್ಥಿಸಿದವಳಂತೆ ನಟಿಸಿದವಳಾಗಿ ಮತ್ತು ಪದಾರ್ಥ ಬರುವಮು ಶ್ರಿತಮಾದ ಪದಾರ್ಥಂಗಳಂ ಅತನಿಗೆ ತಿನ್ನಿಸಿ ತಾನೂ ಅವನ ಜೊತೆಯೊಳು ಕುಳಿತು ಮತ್ತೊಂದು ಪಾತ್ರೆಯೊಳಿರ್ದುದಂ ತಿಂದು ಅಂತೆಯೇ ಕುಳಿತಿರೆ ಆ ರಾಜಾತ್ಮಜನುಆ ಪದಾರ್ಥ ಶಕ್ತಿಯಿಂದ ಪ್ರಜ್ಞೆ ತಪ್ಪಿದವನಾಗಿ ಭೂಮಿಯೊಳು ಬಿದ್ದು ಮೃತನಾದನಂತೆ ನಿಶ್ಚೇಷ್ಟಿತನಾಗಲು ಕಾಣುತಾ ವಾರನಾರಿಯು ಯಿದೇ ಸಮಯವೆಂದರಿತವಳಾಗಿ ಆ ಪಾದುಕೆಗಳಂ ತಾಂ ಮೆಟ್ಟಿಕೊಂಡು ಗಂಧೇಭಪುರದಲ್ಲಿನ ತನ್ನ ಮನೆಯುಂ ಸೇರಬೇ ಕೆಂದು ಸ್ಮರಿಸಿಕೊಳ್ಳಲು ಆ ನಿಮಿಷದೊಳೇ ಅಂತರಿಕ್ಷ ಮಾರ್ಗಮಾಗಿ ಒಂದು ತನ್ನ ಮ ನೆಯಂಸೇರಿಕೊಂಡಳು. ಎಂದು ಹೇಳಿದ ಚಿತ್ರಾರ್ಪಿತ ಸೇನಾಪತಿಯ ರೂಪದ ಗೊಂಬೆ ಯು ಸ್ವಾಮಿ ಮಹಾರಾಜಾಧಿರಾಜರೆ ! ಎರಡನೆ ಯಾಮವು ಮುಗಿದು ಮೂರನೆ ಯಾಮವು ತಲೆದೋರುತ್ತಾ ಇರುವದು. ನಿದ್ದೆಯು ಬಾಧೆಯೂ ಆಯಾಸವೂ ಅತಿಶಯ ವಾಗಿರುವದರಿಂದ ಅಸುಖ್ಖಿಯಾದರೆ ವಿಶ್ರಮಿಸಿಕೊಳ್ಳುವೆನೆಂದು ಸುಮ್ಮನಾದುದೆಂಬಲ್ಲಿ ಗೆ ಕರ್ನಾಟಕಭಾಷಾವಧಾನಕವಿಸರಜಿತ ಸೌಂದರ್ಯಾದ್ಭುತ ಸುರೀಚಿತ್ರ ಬೃಹತ್ಕಥಾಮಂಜರಿ ಯೊಳು ಐದನೆ ಭಾಗವಾದ ಭೋಗವತೀ ಅಭಿಮಾನಭಂಗವೆಂಬುವದರೊಳುಎರಡನೆ ಯಾಮದ ಕಥಾಸಮಾಪ್ತಿಯಾದು.

ಆನಂತರಂ ಆ ವಿಕ್ರಮಾರ್ಕಾವನೀಂದ್ರಂ ಆ ಭವನದಭಿತ್ತಿಯೊಳುಚಿತ್ರಿಸಿದ ಸುಂದರಸ್ತ್ರೀಚಿತ್ರಮುಂ ಕಂದು ಎಲ್ಲೆ ಚಿತ್ರನಾರೀಪಣಿಯೇ ! ಭೋಗವತಿಯು ನಿದ್ರಿ ಸುತ್ತಿರುವಂತೆ ಕಾಂಬುದು. ಹೊತ್ತಾದರೋ ಕಳೆಯುವದು ಪರಮಜೀವರವಾಗಿರ್ಪ ದು. ನೀನಾದರೂ ಕರುಣಿಸಿ ಒಂದು ಕಥೆಯಂ ಹೇಳೆಂದು ಪೇಳಲು ಭೇತಾಳಂ ಆ ಚಿತ್ರ ಪ್ರತಿಮೆಯಂ ಕಾಣದಂತೆ ಮಾಡಿ ಗೋಡೆಯೊಳಗಿನಿಂದಾ ಸ್ತ್ರೀರೂಪಂ ಹೊರಗೆ ಬಂ

ದಂತೆ ಆ ಭೋಗವತಿಗೆ ಕಾಣಿಸುವಂತೆ ಗೈದು ತಾನೇ ಆ ರೂಪದಂತೆ ಸುಂದರಸ್ತ್ರೀರೂಪನಾಗಿ ವಿಕ್ರಮಾದಿತ್ಯ ಮಹಾರಾಯ ನಮುಂಗಡೆಯೊಳು ಬಂದುನಿಂತು ಕೈಗಳಂ ಜೋಡಿಸಿಕೊಂಡು ಸ್ವಾಮಿ ಮಾ ಭೂಮಿಂದ್ರರೇ ! ತಾವು ಮಹನೀಯ್ಯರಾದ ಶಕಪುರುಷರು. ನಾನಾದರೋತೃಣಕ್ಕಾದರೂ ಹೋಲಿಸಲು ಯೋಗ್ಯಳಾದವಳಲ್ಲ. ನನ್ನಂ ಇಂತು ಮರ್ಯಾದೆಯಿಂದ ಕೇಳಿಕೊಳ್ಳುವದು ಯುಕ್ತಮಲ್ಲ. ತಮ್ಮಾಜ್ಞಾನುಸಾರಮಾಗಿ ತಮ್ಮ ಚರಣಸೇವೆಯಂ ಮಾಡಿ ನಾಂ ಧನ್ಯಳಾಗುವೆನು. ಎಂದೊರೆದು ಕಥೆಯಂ ಹೇಳಲು ಉಪಕ್ರಮಿಸಿದುದು. ಈ ಪರಿಯನೆಲ್ಲಮಂ ನೋಡುತ್ತಾ ಭೋಗವತಿಯು ಪರಮಾಶ್ಚರ್ಯಪರವಶಳಾಗಿ ಈ ರಾಜನು ಸಾಮಾನ್ಯರಾಜ ಪುರುಷನಲ್ಲ. ಈತನೊಳೇನೋ ಮಹಾಸಿದ್ಧ ಕ್ರಿಯಾಶಕ್ತಿಯು ಇರುವದು. ಅಲ್ಲದಿದ್ದೊಡೆ ಇಂಥಾ ಘಟನಾಘಟನ ಸಾಮರ್ಥ್ಯವುಇರಲಾರದು ಎಂದು ನಿಶ್ಚೈಸಿ ಮತ್ತೊಂದು ಕಥೆಯಂ ಹೇಳುತ್ತಿರುವದಂ ಕೇಳಿ, ರಾಜರಾಜನೇ ! ಆ ಇರ್ವರು ರಾಜಾತ್ಮಜರು ತಂದೆತಾಯಿಗಳಂಬಿಟ್ಟು ಬಂದವರು ಒರ್ವಂ ತನ್ನು ಕಾಂತೆಯಂ ಶಿಲೆಯಂ ಮಾಡಿಸಿಕೊಂಡು ಸೂಳೆಯರ ಸಾಲಾದನು. ಮತ್ತೊರ್ವಂ ದ್ವೀಪಾಂತರದೊಳು ಜನಸಹಾಯ ರಹಿತನಾಗಿ ಜೀವಿಸಿದ್ದ ರೂಪತ್ತವನಂತೆ ಆಗಿ ಜ್ಞಾನಶೂನ್ಯನಾದಂ. ಇವರಗತಿ ಏನಾದುದೋ ಆ ಕಥೆಯನ್ನೇ ಮುಂದಕ್ಕೆಹೇಳಿಸಬೇಕೆಂದು ಕೈಗಳಂಜೋಡಿಸಿಕೊಂಡು ಪ್ರಾರ್ಥಿಸುತ್ತಾ ಬರಲು ವಿಕ್ರಮಾರ್ಕಂ ಅದೇ ಕಥೆಯಂ ಹೇಳಿಂದಾಜ್ಞಾಪಿಸಲು ಹೇಳಲಾರಂಭಿಸಿದನು.

ಮೂರನೆ ಯಾಮದೊಳು ಚಿತ್ರಾರ್ಪಿತ ಸ್ತ್ರೀ ಪಗ್ರಹಂ
ಹೇಳುವ ಕಥೆ.

ಲಾಲಿಸೈ ದಯಾಸಮುದ್ರನಾದ ವಿಕ್ರಮಾದಿತ್ಯ ರಾಜೇಂದ್ರನೆ ! ಪರಮ ಪಾಪಿಯಾದ ನಾರನಾರೀ ವಿಷಾನ್ನ ಭೋಜನದಿಂದ ಮತ್ತನಾಗಿ ದ್ವೀಪಾಂತರ ಮಧ್ಯದೊಳು ಏಕಾಕಿಯಾಗಿ ಬಿದ್ದಿರ್ದ ರಾಜಾತ್ಮಜನಾದ ಚಿತ್ರವರ್ಮಂ ರಾತ್ರಿಯೊಳೆಲ್ಲಾ ಜ್ಞಾನವಿಲ್ಲದೆ ಬಿದ್ದಿರ್ದವಂ ಪ್ರಾತಃಕಾಲ ಸೂಚಕನಾದ ಮುಂದಮಾರುತಂ ತಣ್ಣನೆ ಬೀಸುತ್ತಾ ಬರಲು ಮತ್ತಪದಾರ್ಥವು ಆ ಸಮಯಕ್ಕೆ ಜೀರ್ಣಮಾಗಿ ಹೋಗಿರಲು ಪ್ರಜ್ಞೆಯಂ ತಾಳಿ, ಕಂಗಳಂ ಬಿಟ್ಟುನೋಡಿ ಸುತ್ತಲೂ ಸಮುದ್ರದಿಂದ ಸುತ್ತಲ್ಪಟ್ಟಿರ್ದ ದ್ವೀಪವಾಗಿ ಕಾಣಬರೆ ಅಂತೆಯೇ ಎದ್ದು ಕುಳಿತು ದಿಗ್ಭ್ರಾಂತನಂತೆ ಸುತ್ತಲೂ ನೋಡಿ, ಇದು ದ್ವೀಪಾಂತರವೇ ಹೌದು ಎಂದು ನಿಶ್ಚಯಿಸಿದವನಾಗಿ, ಅಯ್ಯೋ ಆ ಪರಮ ಪಾಪಿಯಾದ ಸೂಳೆಯು ಆ ಪಾದುಕೆಗಳಂ ಅಪಹರಿಸಬೇಕೆಂದು ಈ ತಂತ್ರಮಂ ಮಾಡಿವಳೇ ಹೊರತು ಬೇರೊಂದೂ ಅಲ್ಲ, ವೇಶ್ಯಾಂಗನೆಯರೊಳು ಎಂದೆಂದಿಗೂ ನಿಶ್ಚಯಮಂ ಹೇಳಬಾರದು, ನಾಂ ಯಥಾರ್ಥಮಂ ಹೇಳಿದ್ದರಿಂದಲೇ ನನಗೀಯವಸ್ಥೆ ಬಂದುದು, ಮೊದಲು ನನ್ನಿಂದ ರತ್ನರಾಶಿಗಳಂ ಹೊಂದಿ, ಮಹದ್ಐಶ್ವರ್ಯ ಸಂಪನ್ನೆಯಾದಳು, ಹಾಗಾದರೂ ಅಂತಃಕೃತ್ರಿಮವನ್ನೇ ಇಟ್ಟುಕೊಂಡು ಹೊರಗೆ

ವಿಶ್ವಾಸಮುಂ ನಟಿಸುತ್ತಿರ್ದು ಕಡೆಯೊಳು ನನ್ನೊಳು ರೋಗೋತ್ಪತ್ತಿಯುಂ ಮಾಡಿ, ಅದಕ್ಕೆ ತಾನೇ ಔಷಧ ಕೊಡುವವಳಂತೆ ನಟಿಸಿ, ಆ ರತ್ನ ಪಕ್ಷಿಯ ತಲೆಯುಂ ಹೊರ ಬೀಳುವಂತೆ ಮಾಡಿ, ಕಡೆಗೆ ನನ್ನುಂ ಅಲಕ್ಷ್ಯಮಾಡಿ ಸುವರ್ಣಪ್ರದಶಿಲೆಗಾಗಿ ಅಟ್ಟಿದಳು. ಅದಂ ತಂದ ಬಳಿಕ ಆ ಶಿಲೆಯಂ ಅಪಹರಿಸಿ, ನನ್ನುಂ ಬಾವಿಯೊಳು ತಳ್ಳಿಸಿ ಕೊಲ್ಲುವಂತೆ ಮಾಡಿದಳು. ಈಗಲಾದರೋ ನಾಂ ಮರಳಿ ಮನುಷ್ಯನ ಮುಖವನ್ನೇ ನೋಡದೆ ಈ ಸಮುದ್ರದ ಮಧ್ಯದಲ್ಲಿ ಸಾಯುವಂತೆ ಮಾಡಿದಳು. ಕಾಮಾಂಧರಾದ ಪುರುಷರು ಕುರುಡರು ಭಾವಿಯೊಳು ಬೀಳುವಂತೆ ಇವರ ಪರಮ ಮೋಸಕರಮಾದ ಕೃತ್ರಿಮ ನಟನೆಗೆ ಬೆರಗಾಗಿ ಕಡೆಯೊಳು ಭ್ರಷ್ಟರಾಗುವದೇ ನಿಶ್ಚಯ. ಲೋಕದೊಳು ಈ ಜಾತಿಜನರಂ ನಿರ್ಮಿಸುವಾಗ ವಿಧಾತೃವು ಮೋಸ ವಿಶ್ವಾಸಘಾತಕ, ವಂಚನೆ, ಮೊದಲಾದ ಪರಹಿಂಸಾ ಸ್ವರೂಪ ಭಾಗಂಗಳ ಸರ್ವಶಕ್ತಿಯನ್ನೂ ಇನ್ನೆಲ್ಲಿಯೂ ನಿಲ್ಲದಂತೆ ಮಾಡಿಕೊಂಡು ನಿರ್ಮಿಸಿದನೆ ಹೊರತು ಅಲ್ಲದೊಡೆ ಇನಿತು ಈ ವಿಧಮಾದ ಶಕ್ತಿಯು ಬರಲಾರದು. ಎಂದು ಯೋಚಿಸುತ್ತಾ ಬಹುಕಾಲಂ ಏನೂ ತೋರದೆ ಸುಮ್ಮನಿರ್ದು, ಅಯ್ಯೋ ವಿಧಿಯೇ! ನಾನಿಲ್ಲಿಂದ ಹೋಗಲು ಯಾವದಾರಿಯೂ ಇಲ್ಲ. ದುರ್ಮರಣವೇ ಹಿತಮಾಯಿತೇ ಎಂದು ಅಲ್ಲಿಂದ ಒಂದು ದೇವಾಲಯದ ಮುಂಗಡೆಯ ಸರೋವರದ ಸೋಪಾನದ ಮೇಲೆ ಕುಳಿತುಕೊಂಡು ಅಂತೆಯೇ ಚಿಂತಿಸುತ್ತಿರಲು ಒಂದು ಕೋಡಗಂ ಬಂದು, ಆ ಸರೋವರದ ದಡದೊಳಿರ್ದ ನೇರಳೆ ಮರವಂ ಹತ್ತಿ ಒಂದು ರೆಂಬೆಯೊಳಗಣ ಫಲಗಳಂ ಕಿತ್ತು ತಿಂದು, ಅಲ್ಲಿಂದಿಳಿದು ಬಂದು ಆ ಸರೋವರದೊಳು ನೀರಂ ಕುಡಿಯೆ ಅದರ ಕಪಿರೂಪವು ನಾಶವಾಗಿ ಮನುಜಾಕಾರಂ ತಾಳ್ದುದು, ಅಂತೆಯೇ ಮರಳಿ ಅದೇಗಿಡಮಂ ಹತ್ತಿ, ಮತ್ತೊಂದು ರೆಂಬೆಯೊಳು ಫಲಂಗಳಂ ಸವಿದಿಳಿದುಬಂದು, ಸರೋವರದನೀರಂ ಕುಡಿಯಲು ಶುಕಮಾದುದು, ಆ ಶುಕಂ ಅಲ್ಲಿಂದ ಹಾರಿ ಯೋಗಿಯದೇ ಗಿಡದ ಇನ್ನೊಂದು ಶಾಖೆಯೊಳಗಣ ಹಣ್ಣಂಮೆದ್ದು ಬಂದು, ಅನೀರಂ ಕುಡಿದು, ಯಥಾಪ್ರಕಾರಮಾಗಿ ಕಪಿರೂಪಮಂ ಹೊಂದಿ, ಹೊರಟು ಹೋದುದು, ಇದಂ ನೋಡುತಾ ಚಿತ್ರವರ್ಮಂ ಪರಮಾಶ್ಚರ್ಯಮಂ ತಾಳಿ, ಓಹೋ ಪ್ರಾಣತ್ಯಾಗವುಂ ಮಾಡುವದು ಯುಕ್ತಮಲ್ಲ, ಇದೇನೋಚಿತ್ರವೊಂದಿಲ್ಲಿಹುದು, ಇದಂ ಕಂಡುಕೊಂಡರೆ ಬಲದಿಂದನಾಂ ಮರಳಿ ಭೂಮಂಡಲಮುಂ ಹೊಂದಬಹುದುಎಂದು ನಿಶ್ಚಯಿಸಿ ಅಲ್ಲಿಂದೆದ್ದು ನಿಂತುಕೊಳ್ಳಲಾವೇಳೆಗೆ ಆ ದ್ವೀಪದೊಳು ಆಶ್ರಮಮಂ ಕಲ್ಪಿಸಿಕೊಂಡು ತಪಮಂ ಗೈಯ್ಯುತ್ತಿರ್ದ ವಾಲಖಿಲ್ಯನೆಂಬೊರ್ವ ತಾಪಸೇಂದ್ರನ ಧರ್ಮಾಂಗನೆಯು ಮೋಕ್ಷದಾಕ್ಷಾಯಣೀ ಸಂದರ್ಶನಾರ್ಥಮಾಗಿ ಬರುತ್ತಿರಲಾಕೆಯಂ ನೋಡುತ್ತ ಭರದೊಳ್ಪೈತಂದು ಪ್ರದಕ್ಷಿಣನಮಸ್ಕಾರಮಂಮಾಡಿ, ಕೈಗಳಂ ಕಟ್ಟಿಕೊಂಡು ನಿಲ್ಲುತ್ತಾ, ಅಮ್ಮಾ ಲೋಕಮಾತೆಯೇ! ನನ್ನಂ ಉದ್ಧಾರಮಾಡಬೇಕೆಂದು ಪ್ರಾರ್ಥಿಸಲು, ಆ ತಾಪಸಿಯು ಅವನಂ ನೋಡಿ, ತನ್ನ ತಪಃಶಕ್ತಿಯಿಂದ

ಅವನ ವಿದ್ಯಮಾನವನೆಲ್ಲಮಂ ತಿಳಿದು, ಎಲೈ ರಾಜನಂದನನೇ ! ನಿನಗೊಂದು ಪಾತ್ರೆಯಂ ಕೊಡುವೆನು, ಆ ಪಾತ್ರೆಯೊಳು ಈಸ್ಥರೋವರೋದಕಮಂ ತುಂಬಿ, ಅದರೊಳು ಈ ನೇರಿಳೆಮರದ ನಾಲ್ಕುರೆಂಬೆಗಳೊಳಗಿನ ಹಣ್ಣುಗಳ ರಸಮಂ ಬೆರಸಿ, ಈಪಾತ್ರೆಯಲ್ಲಿರುವ ನಾಲ್ಕುಮುಖಗಳೊಳು ತ್ರಾವ್ರುಮಯಮುಖದಿಂ ಬೊಗ್ಗಿಸಿದ ನೀರಂ ಕುಡಿಯಲು ಮನುಷ್ಯನು ಕಪಿಯಾಗುವನು ಹಿತ್ತಾಳೆಯಮುಖದಿಂದ ಬೊಗ್ಗಿಸಿದ ನಿರಂ ಕುಡಿದರೆ ಆಕಪಿಯು ಮುನ್ನಿನಂತೆಮನುಜನಾಗುವನು,ಚಿನ್ನದ ಮುಖದ ಕಡೆಯಿಂದ ನೀರಂಬೊಗ್ಗಿಸಿ ಕುಡಿಯೆ ಮನುಜನು ಶುಕರೂಪಮಂತಾಳುವನು, ಲೋಹದ ಮುಖದಕಡೆ ನೀರಂ ಬೊಗ್ಗಿಸಿಕೊಂಡು ಕುಡಿದರೆ ಗಿಣಿಯರೂಪವಡಗಿ ಮನುಜರೂಪಮಂತಾಳುವನು ಎಂದು ಹೇಳಿ ನಾಲ್ಕುಮುಖಗಳಾಗಿದ್ದ ಪಾತ್ರೆಯಂಕೊಟ್ಟು, ಎಲೈ ರಾಜಕುಮಾರನೇ ! ಈಸಿದ್ಧರಸಮಂ ನಿನ್ನ ಅಂಗಾಲುಗಳಿಗೆ ಲೇಪಿಸಿಕೊಳ್ಳುವನಾಗು, ನೀನೆಲ್ಲಿಗೆ ಹೋಗಬೇಕೆಂದುಯೋಚಿಸಿದರೆ ಅಲ್ಲಿಗೆ ಆಕಾಶಮಾರ್ಗವಾಗಿ ಮುಹೂರ್ತಮಾತ್ರದೊಳು ಹೋಗಿ ಸೇರುವೆ, ನಿನ್ನ ಕಾಲ್ಗಳು ಭೂಮಿಯಂ ಮುಟ್ಟಿದಮಾತ್ರದಿಂದಲೇ ಈಸಿದ್ಧರಸಶಕ್ತಿಯು ನಾಶವಾಗುವದೆಂದೊರೆದು, ಕೈಯೊಳುಹಾಕಲು ಅದಂ, ಅಂತೆಯೇಹಿಡಿದು ಮತ್ತೊಂದು ಕೈಯೊಳಾಪಾತ್ರೆಯಂಕೊಂಡುಬಂದು ಅಸರೋವರದ ನೀರಂತುಂಬಿ, ಆ ವೃಕ್ಷದಶಾಖೆಗಳ ಫಲಗಳಂ ಕಿತ್ತು, ಆ ಪಾತ್ರೆಯೊಳುಹಾಕಿ ಅನಂತರ ಪಾತ್ರೆಯಂಕೊಂಡುಸಿದ್ಧರಸಮಂ ಅಂಗಾಲುಗಳಿಗೆ ಲೇಪಿಸಿಕೊಂಡು ಗಂಧೇಭನಗರಕ್ಕೆ ಹೋಗಬೇಕೆಂದು ಸ್ಮರಿಸಿದಮಾತ್ರಕ್ಕೆ ಆ ರಾಜನಂದನಂ ಅಂತರಿಕ್ಷಮಾರ್ಗಮಾಗಿಬಂದು ನಿಮಿಷಮಾತ್ರದೊಳು ಗಂಧೇಭನಗರಮಂಸೇರಿ ಪುನಃ ಆ ವೇಶ್ಯಾಂಗನೆಯ ಮನೆಗೈತಂದು ಬಾಗಿಲೊಳು ನಿಂತುಕೂಗಲು ಧ್ವನಿಯಂ ಕೇಳುತಾ ವಾರನಾರಿಯು ಹೋ ಮರಳಿ ಬಂದನಲ್ಲಾ, ಆ ದ್ವೀಪದಿಂದ ಹೇಗೆಬಂದನೋ ಕಾಣೆನಲ್ಲಾ, ನಾಂ ಮೋಸಮಾಡಿ ಬಂದೆನೆಂದು ತಿಳಿದಿರುವ ಇವನ ಮನೋಭಾವವಂ ಎಂತು ಸರಿಮಾಡಲಿ, ಎಂದು ತಕ್ಕಉಪಾಯಮಂ ಯೋಚಿಸಿ ಬಂದು ಬಾಗಿಲಂತೆಗದು, ಎಲೈ ಪ್ರಾಣಕಾಂತನೇ ! ನೀನೇತಕಿಂತು ಆತುರಗೊಂಡು ಬಂದೆ, ನಾನಾ ದೇವಿಗೆ ಸಮರ್ಪಿಸುವ ಕ್ಕಾಗಿ ಮಾಡಿಸಿರ್ದ ರತ್ನಾಭರಣಮಂಮರತು ಬಂದಿರ್ದೆನಾದ್ದರಿಂದ ಅದಂ ತರಲೋಸುಗ ಸ್ಮರಿಸಿಕೊಂಡುಇಲ್ಲಿಗೆ ಹೊರಟು ಬಂದೆನು, ಈದಿನ ಸಾಯಂಕಾಲಂ ಇಲ್ಲಿಂ ಹೊರಟುಬರಬೇಕೆಂದು ಯೋಚಿಸಿದ್ದೆನುನೀನೇ ಬಂದುದು ಸರ್ವೋತ್ತಮವಾಯ್ತು ನೀಂಹೇಗೆಬಂದೆ ಪಾದುಕೆಗಳಂ ನಾಂ ತಂದಿರ್ದೆನಲ್ಲವೆ, ಎಂದು ಸವಿನಯವಾಗಿ ಮುಗುಳುನಗೆಯಂ ತೋರುತ್ತಾ ಕೇಳಲು, ಆ ರಾಜನಂದನಂ ಈ ಪಾಪಿಯಾದವಳಿಗೆ ನಿಜಮುಂ ಹೇಳಿದ್ದಕ್ಕೆ ಫಲಮುಂ ಅನೇಕಾವೃತ್ತಿ ಹೊಂದಿದ್ದಾಯಿತಲ್ಲ, ಸುಳ್ಳಂ ಹೇಳಿ ಇವಳಂ ಮೋಸಗೊಳಿಸಬೇಕೆಂದು ನಿಶ್ಚಯಿಸಿದವನಾಗಿ ಎಲೈ ಸುಂದರಾಂಗಿಯೇ ! ಈಗ ನಾನೊಂದು ವಿದ್ಯೆಯನ್ನು ಓರ್ವ ಸಿದವುರುಷನಲ್ಲಿ ಸಂಪಾದಿಸಿಕೊಂಡು ಬಂದಿರುವೆನು, ಆ

ವಿದ್ಯೆಯಿಂ ಮುದುಕರಂ ಹೋಡಶವರುಷ ವಯಸ್ಕರಂಮಾಡಬಲ್ಲೆನು, ಇನ್ನೂ ಲಶ್ಚ ರ್ಯಕರಮಾದ ಕೆಲಸಂಗಳಂ ಮಾಡುವದಕ್ಕೆಸಹಾ ಈಪಾತ್ರೆಯೊಳಗಿನ ನೀರೇ ಪ್ರಯೋ ಜನಕಾರಿಯು ಇದಂಉಪಯೋಗಿಸುವ ಕ್ರಮವು ಪ್ರತ್ಯೇಕಮಾಗಿರುವದು, ನಾನಾ ಮ ಹನೀಯರ ಮಹಾತ್ಮೆಯಿಂದಲೇ ಇಲ್ಲಿಗೆ ಬಂದೆನೆಂದು ಹೇಳಲು, ಸಂತೋಷಮಂತಾಳಿ ದವಳಂತೆ ನಟಿಸುತ್ತಾ, ಎಲ್ಲೆ ಪ್ರಾಣೇಶನೇ ! ನಾನು ನಿನ್ನಂಸೇರಿದ್ದರಿಂದ ಸಕಲ ಭೋ ಗಂಗಳಂ ಅನುಭವಿಸಿದೆನು, ವಿಶೇಷದ್ರವ್ಯಲಾಭವನ್ನೂ ಹೊಂದಿದವಳಾದೆನು. ವಯ ಸ್ಸಿನಲ್ಲಿ ಅಧಿಕಳಾದ್ದರಿಂದ ದೇಹವೆಲ್ಲವೂ ಗಳಿತವಾಗುತ್ತಾ ಬಂದುದು, ನನಗೆ ಆ ರಸ ವುಂ ಕೊಟ್ಟು, ಹುಡುಗಿಯನ್ನಾಗಿ ಮಾಡಿದರೆ, ನಿನ್ನೊಳು ಸೇರಿ, ಇನ್ನೂ ಬಹುಕಾ ಲಂ ರತಿಸುಖವಂ ಹೊಂದಬೇಕೆಂದು, ಅಪೇಕ್ಷಿಸುತ್ತಿರುವೆನೆಲ್ಲದೆ ನಮ್ಮ ತಾಯಿಯೂಬ ಹಳ ಮುದುಕಿಯಾಗಿ ಕಾಲುಕ್ಕೈಗಳು ನಡುಗುತ್ತಾ ಮುದಿತನದ ಬಾಧೆಯಿಂದ ವಿಶೇಷ ವಾಗಿ ನರಳುತ್ತಿರುವಳು ಅವಳಿಗೂ ಕೊಟ್ಟು ಉದ್ಧಾರಮಂ ಮಾಡಬೇಕೆಂದು ಅವ ನಭಾವವನ್ನರಿಯದೆ ಮುನ್ನಿನಂತೆ ಯಥಾರ್ಥ ವಾಡಯಾದವನೆಂದು ನಂಬಿದವಳಾಗಿ ಪ್ರಾರ್ಥಿಸಲು, ಇದೀಗ ಸಮಯಮೆಂದರಿತು, ಇದರಿಂದ ಈ ಪಾಪಿಯಂ ನಾಶಗೊಳಿ ಸುವೆನೆಂದು ಗೊತ್ತುಮಾಡಿಕೊಂಡವನಾಗಿ ಹಾಗೆಯೇ ಆಗಲಿ ನಾಳೆಯ ದಿನಂ ನೀವಿರ್ವ ರೂ ತಟಾಕಸ್ನಾನಮಂ ಮಾಡಿಕೊಂಡು ಶುಚಿಯಾಗಿ ಯಾರೊಂದಿಗೂ ಮಾತಾಡದೆ ಮೌನವಾಗಿ ಬಂದರೆ ಈ ರಸಮಂ ಕೊಡುವೆನೆಂದು ವಾಗ್ದಾನ ಮಿಯ್ಯಲಾಗಣಿಕಾಮ ಣಿಯು, ಪರಮ ಹರ್ಷಿತಳಾಗಿ ಆರಾಜಾತ್ಮಜನಂ ಎಂದಿಗಿಂತಲೂ, ಅಧಿಕಾದರಣೆಗಳಿಂ ದುಪರಿಚರಿಸುತ್ತಾ ಆತನೊಳು ಸೇರಿ ವಿಧವಿಧವಾದ ಹುಂಬನ ಬಂಧಂಗಳಿಂದ ಕಾಮ ಕೇಳೀ ಸಾಮ್ರಾಜ್ಯಸುಖದೊಳು ಮುಳುಗಾಡಿಸುತ್ತಿದ್ದು ಮರುದಿನದುದಯಮಾಗೆ ಎ ದ್ದು ತಾನಿಂದು ತರುಣಿಯಾಗುವೆನೆಂದು ಸಂತೊಷಿಸುತ್ತಾ, ತನ್ನ ತಾಯಿಯೊಂದಿಗೆ ತ ಟಾಕಕ್ಕೆ ಸ್ನಾನಾರ್ಥವಾಗಿ ಹೋಗಿ ಈರ್ವರೂ ಸ್ನಾನಮಂಮಾಡಿ ಮಡಿಗಳನ್ನುಟ್ಟು ಅಲ್ಲಿಂದಹೊರಡಲು ತಾಂ,ಮುಂದಾಗಿ ಬಂದು ಆರಾಜಕುಮಾರನ ಮುಂಗಡೆಯೊಳು ಕೈಗಳಂ ಜೊಡಿಸಿ ನಿಂತುಕೊಳ್ಳಲು ಆ ರಾಜಕುಮಾರಂ ಇವಳಂ ಕಪಿಯನ್ನಾಗಿಮಾಡಿ ಕಟ್ಟಿಹಾಕಬೇಕೆಂದು ಯೋಚಿಸಿ ಆ ತಾಪಸಿಯಿಂದ ದತ್ತವಾದ ಪಾತ್ರೆಯ, ತಾಮ್ರ ಮುಖದಕಡೆಯಿಂ ನೀರಂ ಬೊಗ್ಗಿಸಿ, ಒಂದು ಪಾತ್ರೆಯೊಳು ಹಾಕಿ ಕುಡಿಯುವಂತೆ ಆ ವೇಶ್ಯೆಗೆ ಕೊಡಲು ಭಕ್ತಿಪೂರ್ವಕಮಾಗಿ ಆ ನೀರಂ ಕುಡಿದಕ್ಷಣದೊಳೇ ಆ ವಾನಾರಿ ಯು ವಾನರರೂಪಾದಳು, ಆಮುಂಗನಂ ಪಿಡಿದು ಹಗ್ಗದಿಂ ಕಟ್ಟಿಹಾಕಿ ಆಮುದಿಗೂ ಗೆಯಾದ ಸೂಳೆಯಂ ಗಿಣಿಯನ್ನಾಗಿ ಮಾಡುವಂತಾಲೋಚಿಸಿ, ಲೋಹಮಯಮಾ ಗಿರುವ, ಆಪಾತ್ರೆಯ ಮತ್ತೊಂದು ಮುಖದಿಂದ ಬೊಗ್ಗಿಸಿಕೊಂಡು ಕುಳಿತಿರೆ ಆಷ್ಟು ಹೊತ್ತಿಗೆ ಎದುರಾಗಿ ಬಂದು, ನಿಂತಾಮುದುಕಿಗೆ ಕುಡಿಸಲು, ಆವಳೊಂದು, ಶುಕರೂ ಪಾದಳು. ಮನೆಯದಾದಿಯರೆಲ್ಲರೂ ಸ್ವಲ್ಪಕಾಲದಮೇಲೆ ಬಂದು, ತಮ್ಮ ಯಜಮಾ

ನಿಯುರಂ ತಾಣದೆ ಕಂಡಕಡೆಯೊಳು, ಆ ರಾಜನಂದನನಂಕೇಳಲು ನಾಂ ತಾಣೆನೆಂದು ಹೇಳಿದವನಾಗೆ, ಆ ಬಳಿಯೊಳಿರ್ದ. ಪುಂಗನನ್ನೂ ಗಿಳಿಯನ್ನೂ, ನೋಡಿ ಇವೆಲ್ಲಿಯವೆಂದು ಕೇಳಿದ್ದಕ್ಕೆ ಸರಿಯಾದ ಉತ್ತರವನ್ನೀಯದೇ ಹೋಗಲು ಈ ಪುರುಷಂಬಹು ಸಮರ್ಥಂ, ಸಕಲಕಲಾ ಪ್ರವೀಣನು ಸಮಸ್ತ ಸಿದ್ಧ ಕ್ರಿಯೆಗಳನ್ನೂ ಬಲ್ಲವನು, ಇವನೇನೋ ತಂತ್ರಮಂ ಮಾಡಿ ಅಪರೀಕ್ಷ್ಯರಂ ಇಂತಾಗಿಸಿರಬಹುದೆಂದು ಯೋಚಿಸಿದವರಾಗಿ ಆಕ್ಷಣದೊಳಲ್ಲಿಂ ಹೊರಟು, ಕನಕಾಲವಾಲವೆಂಬ ಪುರಮಂ ಸಾರಿ, ಪುರದೊಳಿಪಂ ತಮ್ಮ ಒಡತಿಯ ತಂಗಿಯಾದ ಪದ್ಮಗಂಧಿನಿಗೆ ಈ ಪರಿಯನೆಲ್ಲಮಂ ಹೇಳಲು ಅವಾರನಾರೀಮಣಿಯು ವ್ಯಾಕುಲಚಿತ್ತಳಾಗಿ ಆ ಪುರಾಧೀಶನಾದ ತನ್ನ ಮಂಡನ ಬಳಿಗ್ಯೈದು ಸ್ವಾಮಿ ಯಾರೋ ಒಬ್ಬ ಮಾಂತ್ರಿಕನು ಬಂದು ಗಂಡೇಳ್ ಪುರುಷೊಳಿರ್ದ ನನ್ನ ಅಕ್ಕನನ್ನೂ, ತಾಯಿಯನ್ನೂ ಕಪಿಮನ್ನಾಗಿಯೂ, ಗಿಳಿಯನ್ನಾಗಿಯೂ ಮಾಡಿ ಮನೆಯೊಳೇ, ಇರುವನೆಂದು ದಾದಿಯುತ್ಸೈತಂದು ತಿಳುಹಿದರು. ಅವನಂ ಹಿಡಿತರಿಸಿ ಏಚಾರಣೆಮಾಡಿ ಶಿಕ್ಷಿಸಬೇಕೆಂದು ಬೇಡಿಕೊಳ್ಳಲಾ ಮಣಿವರ್ಮನಂತನ್ನ ಭಟರೊಳುದ್ಧೀರರಾಗಿಯೂ ಸಮರ್ಥರಾಗಿಯೂ ಇರುವರಂ ಕಳುಹಿ ಪಿಡಿಸು ತರುವಂತೆ ಮಂತ್ರಿಮುಖೇನ ಆಜ್ಞಾಪಿಸಿ ಕಳುಹಿದನು.

ಆ ರಾಜದೂತರು ಮಹಾ ವೇಗದಿಂದಲಿ ಹೊರಟು ಗಂಧೇಭಪುರಮುಂ ಸೇರಿ ಆ ವಾರಾಂಗನೆಯ ಮನೆಯೊಳಿರ್ದ, ಚಿತ್ರವರ್ಮನಂ ಹಿಡಿದು ಅಲ್ಲಿಂದ ಹೊರಟು ತಮ್ಮ ರಾಜಸನ್ನಿಧಿಯನ್ಸೈದಿ ರಾಯನ ಮುಂದೆ ನಿಲ್ಲಿಸಿದರು. ಯಮದೂತರಂತೆ ಬಂದು ತನ್ನ ಯಾವ ಪದಾರ್ಥಗಳಂ ತರಲು ಅವಕಾಶಕೊಡದೆ ಹೋದರಾದ್ದರಿಂದ ಕಾಲುಗಳಲ್ಲಿ ಆ ಪಾದುಕೆಗಳಂ ಮಾತ್ರ ಮೆಟ್ಟಿಕೊಂಡು ಬಂದಿರ್ದವನು ಆ ರಾಜನಂ ನೋಡುತ್ತ ಇವನೇ ತನ್ನ ಅಂಣನಾದ ಮಣಿವರ್ಮನೆಂದು ಅರಿತು ಧೈರ್ಯವಾಗಿಯೂ ಸಂತೋಷಮಾಗಿಯೂ ನಿಂತುಕೊಂಡರಲು ಪಲರೊಳೊಳ್ಳೊಲಗಮಾಗಿ ಕುಳಿತಿರುವಾ ಮಣಿವರ್ಮಂ ಬಹುಕಾಲಪರಾದ್ದರಿಂದಲೂ, ಸಂಪತ್ತಿನ ಮದದಿಂದಲೂ ಇವನಂ ತಮ್ಮನೆಂದರಿಯದೇ ಎಲ್ಲೆ ಮಾಂತ್ರಿಕನೇ ನೀನಾ ವೇಶ್ಯಾಂಗನೆಯ ಮನೆಯೊಳೇ ವಾಸಿಸುತ್ತಿರ್ದು ಕಡೆಯೊಳು ಅವರಂ ನಾಶಮಾಡಬಹುದೆ ? ಕಾರಣಮಂ ತೃಪ್ತಿಯಾಗಿ ತಿಳಿಸದಿರ್ದರೆ ನಿನಗೆ ತಕ್ಕ ದಂಡನೆಯುಂ ವಿಧಿಸುತ್ತೇನೆಂದು, ಆಜ್ಞಾಪಿಸಲಾ ಚಿತ್ರವರ್ಮಂ ಈ ರಾಯಂ ತನ್ನ ಅಂಣನಾದ್ದರಿಂದ ತನಗೇನಂ ಮಾಡಲಾರನೆಂದು ಯೋಚಿಸಿ ಎಲ್ಲೆ ರಾಜನೇ ! ಆ ಪಾಪಿಷ್ಠಳಾಗ, ವಾರನಾರಿಯು ನನಗೆ ಈ ಬಧಮಾದ ಸೂಂದರೆಯಂ ಕೊಟ್ಟದ್ದರಿಂದ ನಾನಿಂತು ಮಾಡಿದೆನೆಂದು ನಿರ್ಭಯಮಾಗಿ ಹೇಳುತ್ತಾ ಬರುವದಂ ಕಂಡಾರಾಯಂ ತನ್ನ ತಮ್ಮನೆಂದು ತಿಳಿಯದ ಕಾರಣ ಇದೇನು ರಾಜನ ಮರ್ಯಾದೆಯಂ ಮೀರಿ, ಇವನಿಂತೀ ಭಯರಹಿತನಾಗಿ ರಾಜಾಸ್ಥಾನವೆಂಬ ಭಯಮುಂ ಬಿಟ್ಟು ಮನಸ್ವೀ ನುಡಿಯುತ್ತಾನೆ ಇವನ ನಡತೆಯಿಂದಲೇ, ಇವಂ ಧೂರ್ತನೆಂದು ಕಾಂಬುದೆಂದರಿತು ಎಲ್ಲೆ

ಮಂತ್ರಿಯೇ ಈ ದುರಾತ್ಮಕನಾದ ಇವನ ರೀತಿಯಿಂದಲೇ ಇವನು ಆ ವಾರಾಂಗನೆಯಂ ನಾಶಗೊಳಿಸಿದನೆಂದು ಕಾಣುವನಾದ್ದರಿಂದ ಇವನಂ ಮರಣದಂಡನೆಗೆ ಗುರಿಮಾಡಿಸುವಂತೆ ಆಜ್ಞಾಪಿಸಿರುವೆನು. ನನ್ನಾಜ್ಞೆಯಂ ಕ್ಷಿಪ್ರಮಾಗಿ ಪೂರೈಸೆಂದೊರೆಯಲು, ಆ ರಾಜಾಜ್ಞಾನುಸಾರಮಾಗಿ ರಾಜದೂತರು ಬಂದು ಚಿತ್ರವರ್ಮನ ಕೈ ಹಿಡಿಯುತ್ತಿರುವಾಗ ರಾಜನಂಕುರಿತು ಎಲೈ ರಾಜನೇ ರತ್ನಪಕ್ಷಿಯ ತಲೆಯಂ ನಾಂತಿಂದು ರಾಜ್ಯಪ್ರಾಪ್ತಿಯಾಗಲಿಯೆಂದು ಅಣ್ಣನೆಂಬ ಭ್ರಮೆಯಿಂದ ಆ ಪಕ್ಷಿಯ ದೇಹಮಾಂಸಮಂ ಬೇಯಿಸಿ ನಿನಗೆ ಉಣಿಸಿದ ಉಪಕಾರಕ್ಕೆ ನೀಂ ರಾಜ್ಯಪದವಿಯಂ ಹೊಂದಿ, ಮದಾಂಧನಾಗಿ ತಮ್ಮನೆಂಬ ಮಮತೆಯನ್ನು ಬಿಟ್ಟು ಈ ಮಹಾಪಾತಕದಂಡನೆಯಂ ವಿಧಿಸಿದೆಯಾ ! ಒಳ್ಳೆತು, ನೀನಾದರೂ ಸುಖಿಯಾಗಿ ಬಾಳೆಂದು ಹೇಳಿ ಅಲ್ಲಿಂ ಹಿಂತಿರುಗಿ ಹೊರಡಲು, ಆ ಮಣಿವರ್ಮಂ ಆ ಮಾತುಗಳಂ ಕೇಳುತ್ತ ತನ್ನ ಪೂರ್ವಸ್ಥಿತಿಯನೆಲ್ಲಮಂ ಸ್ಮೃತಿಪಥದೊಳು ತಾಳಿ ಚಿತ್ರವರ್ಮನಂ ಜೆನ್ನಾಗಿ ನೋಡಿ ತನ್ನ ಸಹೋದರನೆಂದರಿತು ಧಿಗ್ಗನೆ ಸಿಹಾಸನದಿಂದಿಳಿದು ಹೋಗಿ ಅವನಂ ತನ್ನೆರಡು ಕೈಗಳಿಂದಾಲಿಂಗಿಸಿಕೊಂಡು ಅಲ್ಲಿಂದೆತ್ತಿಕೊಂಡು ಬಂದವನಾಗಿ ತನ್ನ ಸಿಹಾಸನಾರ್ಧದೊಳು ಕುಳ್ಳಿರಿಸಿಕೊಂಡು ಅಯ್ಯೋ ಚಿತ್ರವರ್ಮನೇ ! ನೀನೆಂದರಿಯದೆ ಅಂತಾಜ್ಞಾಪಿಸಿದೆನು. ಮದಾಂಧನಾದ ನಾನು ತಿಳಿಯದೆ ಮಾಡಿದ ತಪ್ಪಂ ಮನದೊಳು ಎಣಿಸಬೇಡ ಎಂದು ಗಟ್ಟಿಯಾಗಿ ಬಿಕ್ಕಿ ಬಿಕ್ಕಿ ಅಳುತ್ತಾ ಕಂಣೀರ್ಧಾರೆಯಂ ಸುರಿಸುತ್ತಾ ಎಲ್ಲೆ ಸಹೋದರನೇ ! ಬಹುಕಾಲದ ಹಿಂದೆ ಆಗಲಿದನಾವು ದೈವಯೋಗದಿಂದ ಈ ದಿನದೊಳು ಸೇರಿದೆವು. ನಿನ್ನ ಮುಖಮಂ ನೋಡಿದ ಈ ದಿನವೇ ಸುದಿನವು. ಎಂದು ಪರಮಾನಂದ ತುಂದಿತನಾಗಲು, ಈರ್ವರೂ ಅಂತೆಯೇ ಮುಖಾವಲೋಕನಾಲಿಂಗನಾದಿಗಳಿಂದ ಸ್ವಲ್ಪಕಾಲಂ ಮೈಮರೆತವರಾಗಿದ್ದು. ಎಚ್ಚತ್ತವರಾಗಿ, ತಾವೀರ್ವರೂ ಸೇರಿ, ನೀರಳೆಯಮರದಡಿ ಮಲಗಿ ರತ್ನಪಕ್ಷಿಯಂ ಸಂಗ್ರಹಿಸಿರ್ದುದು ಮೊದಲಾದ ಅಂದಿನವರಿಗಿನ ಪರಸ್ಪರ ಯೋಗಕ್ಷೇಮಾದಿಗಳಂ ಮಾತಾಡುತ್ತಾ ಸುಖವಾಗಿರ್ದು ಗಂಧೇಭಪುರದೊಳಾ ವೇಶ್ಯಾಂಗನೆಯ ಮನೆಯೊಳಿರ್ದ ತನ್ನ ತಮ್ಮನ ಪದಾರ್ಥಂಗಳಂತರಿಸಿಕೊಂಡು ಈರ್ವರೂ ಸ್ನಾನಭೋಜನಾದಿಗಳಂ ಮಾಡಿ ಕುಳಿತುಕೊಂಡು ಸುಖಸಲ್ಲಾಪಂಗಳಂ ಗೈಯ್ಯುತ್ತಿರಲು ಚಿತ್ರವರ್ಮಂ ಅಣ್ಣನಂ ಕುರಿತು ಎಲ್ಲೆ ಅಣ್ಣಾ ತಂದೆತಾಯಿಗಳಂ ಬಿಟ್ಟು ಬಂದು ಬಹುಕಾಲವಾಯ್ತು, ಪುತ್ರರೇನಾದರೋ ಎಂಬ ವಿಯೋಗದುಃಖದಿಂದ ಸಂತಾಪಗೊಳ್ಳುತ್ತಿರುವರಂ ಸಂತೈಸಬೇಕಾದದ್ದಲ್ಲವೇ, ನಮ್ಮ ಮುಖ್ಯಕಾರ್ಯವು ? ಎಂದು ಪೇಳಲಾ ಮಣಿವರ್ಮನು ಎಲ್ಲೆ ಭ್ರಾತೃವತ್ಸಲನೇ ಕೇಳು, ಅದಕ್ಕಿಂತಲೂ ಅಧಿಕವಾದ ನಮ್ಮ ಕಾರ್ಯವು ಮತ್ತೊಂದಲ್ಲ. ನನಗುಂಟಾಗಿರುವ ಮಹಾದುಃಖದಲ್ಲಿ ಯಾವದೂ ತೋರುವದಿಲ್ಲವು. ಅದೇನನ್ನವಿಯೊ ನಾನು ಪೇಟೆಗೆ ವ್ಯಾಪಾರಾರ್ಥಮಾಗಿ ಬಂದಿರ್ದವನು. ಈ ಪಟ್ಟಣದ ಸಮಾಚಾರಮಂ ಕೇಳಿ ಹುಡುಕಿ ಹಿಡಿದವನಂತೆ ಏನೂ ತೋರದೆ ಹೊರಟು ಬಂದೆನು. ಈ ಪುರ

ಧೀಶಂ ವ್ಯತಿಯಾಗಿ ಆಗ್ಯೆ ಅರುತಿಂಗಳಾದುದರಿಂದ ಆ ರಾಜಮಹಿಷಿಯರನುಮತಿಯಿಂದ ನನಗೆ ಅವರ ಮಗಳಂ ಕೊಟ್ಟು ವಿವಾಹಮುಂಮಾಡಿ, ಈ ರಾಜ್ಯಾಭಿಷೇಕಮುಂ ಮಾಡಿದರು. ಅದು ಮೊದಲು ಕೆಲವುಕಾಲವುಾಕಾಂತೆಯೊಂದಿಗೆ ಸುಖವುಾಗಿ ರಾಜ್ಯವುಾಳುತ್ತಾ ಇದ್ದೆನು. ನಿಷ್ಕಾರಣವುಾಗಿ ಆ ನಿನ್ನ ಅತ್ತಿಗೆಯು ಶಿಲಾಸ್ತಿಮೆಯಾಗಿದ್ದಾಳೆ. ಈ ಕಾರಣದಿಂದೀಕೆಯ ತಾಯಿಯಾದ ನನ್ನತ್ತಿಗೆಯು ನಿದ್ರಾಹಾರಗಳಂ ಬಿಟ್ಟು ಹಗಲೂ ರಾತ್ರೆಯೊಳು ವೇಧಿಸುತ್ತಿರುವಳು. ಈಶಿಲಾರೂಪಮುಂ ತೊರೆದು ಮುನ್ನಿನಂತಾಗುವದಕ್ಕೆ ಪ್ರತಿಕ್ರಿಯೆಯಸ್ನೇನಾದರೂ ಕಂಡಿರುವೆಯಾ ಎಂದು ಪ್ರಶ್ನೆವುಾಡಲಾ ಚಿತ್ರವರ್ಮಂ ಸಿದ್ಧರಸಮುಂ ತಂದು ಅತ್ತಿಗೆಯಂ ಮುನ್ನಿನಂತಾಗಿಸುವೆನೆಂದೊರೆದು ಅಲ್ಲಿಂದೆದ್ದು ತನ್ನ ಪಾದುಕೆಗಳಂ ತೊಟ್ಟುಕೊಂಡು ತಾಂ ಮುನ್ನಾಸಿದ್ಧರಸಮುಂ ಹೊಂದಿದ ದ್ವೀಪಕ್ಕೆ ಹೋಗಿ ಆ ತಾಪಸಿಯನ್ನಲ್ಲಿ ಕಾಣದೆ ಅಲ್ಲಿಂದ ಹೊರಟು ಅನೇಕ ದ್ವೀಪಂಗಳನ್ನೂ ಬೆಟ್ಟಗಳೊಳಿರುವ ಋಷ್ಯಾಶ್ರಮಂಗಳಂ ಹುಡುಕಿ ಎಲ್ಲಿಯೂ ಸಿದ್ಧರಸಂದೊರಿಯದೆ ಹೋಗಲು ಅಂತೆಯೇ ಕಣ್ಮುಚ್ಚಿ ನನ್ನ ಮನೋರಥಮುಂ ಕೈಗೂಡಿಸುವ ತಪೋಧನರ ಆಶ್ರಮವುಂ ಹೊಂದಿಸೆಂದು ಸ್ಮರಿಸಿಕೊಳ್ಳಲು ಆ ನಿಮಿಷಮೇಣಿಮವತ್ಪರ್ವತ ಪೂರ್ವಪಿಶುರಕ್ಕೆ ಕೊಂಡೊಯ್ದುದೆಂದು ಎಂದು ಹೇಳಿದಾ ಚತ್ರಾರ್ಪಿತಪ್ರತಿಪಯು ಎಲೈ ಮಹಾರಾಜಾಧಿರಾಜನೇ ಇನೇ ಯಾಮುಂ ಮುಗಿಯುತ್ತಾ ಬಂದುದುಏಳ್ತಂತಿಗೊಳ್ಳಲು ಆಜ್ಞಾಪಿಸಬೇಕೆಂಬೊರೆದು ಸುಮ್ಮನಾದುದು,ಎಂಬಲ್ಲಿ ಕರ್ನಾಟಕ ಘಾಷಾವುಾಚನರಚಿತ ಸೌಂದರ್ಯಾದ್ಭುತಶುಕಚಿತ್ರ ಬೃಹತ್ಕಥಾಮಂಜರಿಯೊಳು ಭೋಗವತೀಪರಾಭವಮೆಂಬ ಈನೆಭಾಗದ ರಾತ್ರೆಯ ಮೂರನೆ ಯಾವುದ ಕಥಾಸಮಾಪ್ತಿಯಾದುದು.

ಬಳಿಕಾ ವಿಕ್ರಮಾರ್ಕವಿಶ್ವಂಭರಾವಲ್ಲಭಂ ಭೋಗವತಿಯಮುಂಗಡೆಯೊಳು ಕಟ್ಟಿರ್ದ ನಿಗಳೆಮಾಗಕನ್ನಡಿಯೊಳುಕಾಣುತ್ತಿರ್ದ ಆಭೋಗವತಿಯ ಪ್ರತಿಬಿಂಬಮುಂ ನೋಡಿ ಎಲೈ ಪತಿಬಿಂಬಮೇ ! ನೀನೊಂದು ಯಾವುುಮುಂ ಕಥೆಯಂ ಹೇಳಿ ಹೊತ್ತುಕಳೆಯುವಂತೆ ಮಾಡೆಂದೊರೆಯಲಾ ಭೋಗವತಿಯ ಪ್ರತಿಬಿಂಬಗತನಾದಭೇತಾಳಂ ಮಣಿವರ್ಮ ಚಿತ್ರವರ್ಮರ ಕಥೆಯಂ ಹೇಳುವದಕ್ಕೆ ಒಡಲಾಗಿ ಬೇರೊಂದುಕಥೆಯಂ ಹೇಳಲುಸಕ್ರಮಿಸಲು ಕಳುಹುತ್ತಲಾ ಭೋಗವತಿಯು ತಾಂ ಕುಳಿತಿರ್ದತಾಣಮುಂತೊರದು ರಾಜನ ಮಂಚಮುಂ ಹತ್ತಿ ವಿಕ್ರಮಾರ್ಕನ ಎದುರಲ್ಲಿಸವಿಾಪದೊಳು ಕುಳಿತು ಎಲೈ ಭೂಮಿಾಂವ್ಯನೇ ! ನಿನ್ನೊಳು ಲೋಕಾತಿಶಯಮಾದ ಮಹಾತ್ಮ್ಯವಿರುವದು. ಇಂಥಾ ಪರಮ ಪುರುಷನಂ ನಾಂ ಕೇಳಿದವರುಾಕೂಡ ಅಲ್ಲವು ನಿನ್ನ ಸ್ವಭಾವವು ಕೊಂಡಾಡತಕ್ಕದಾಗಿರುವುದು, ಆ ರಾತ್ರಾತ್ಮಜನ ಪತ್ನಿಯು ಶಿಲಾರೂಪಳಾಗಿರ್ದವಳ ಗತಿ ಏವಾದುದೋ ಅವಳ ತಾಯಿಯು ಸುಮ್ಮಾನವೆಂತು ಹೊಂದಿದಳೋ ತನ್ನಣ್ಣನಂ ಆಗಲಿದ ರಾಜಕುವರಂ ಮರಳಿ ತನ್ನಣ್ಣನಂ ಎಂತು ಸೇರುವನೋ ಪುತ್ರವಿಯೋಗ ದುಃಖ

ತಂಗೆ ಅರಿಕೆ ಮಾಡೆಂದು ಹೇಳಿ ಕಳುಹಲಾ ದೂತಿಯು ಆ ರಾಜನೊಳು ಅಂತೆಯೇ ಅರಿಕೆ ಮಾಡಲಾ ಸಿಂಹವಿಕ್ರಮರಾಯಂ ಮಹದಾನಂದ ಭರಿತನಾಗಿ ತನ್ನ ಕಾಂತೆಯು ನೊಡಗೊಂಡು ಪುತ್ರಿಯ ಅಂತಃಪುರಮಂ ಸಾರಿ ಅಳಿಯನಂ ನೋಡಿ ಆನುರೂಪನಾದ ಪತಿಯನ್ನೇ ವರಿಸಿದಳೆಂದು ಸುತೆಯಂ ಮೆಚ್ಚುತ್ತ ಅಳಿಯನ ವೃತ್ತಾಂತಮಂ ವಿಚಾರಿಸಿ ಕೇಳಿ ತಿಳಿದು ಸಂತೋಷಿಸುತ್ತಾ ಅಲ್ಲಿಂ ಬಂದು ಮಂತ್ರಿಯಂ ಬರೆಯಿಸಿ ಕುಮಾರಿಯ ವಿವಾಹೋತ್ಸವವ ನಾಳೆಯೊಳೆ ನಡಿಯುವಂತೆ ಪರುಠವಿಸಬೇಕೆಂದಾಜ್ಞೆಯಂ ಮಾಡಿ ಯೆಲ್ಲರೊಂದಿಗೆ ಸ್ನಾನಾದಿಗಳಂ ಮಾಡಿಕೊಂಡು ದಿವ್ಯಪಕ್ವಭಕ್ಷ್ಯಾನ್ನಂಗಳಂ ಭುಜಿಸಿ ಯಾದಿನಮುಂ ಸುಖವಾಗಿ ಕಳೆದು ಮರುದಿನದುದಯದೊಳು ಆ ಇರ್ವರಿಗೂ ಸಕಲ ಸಂಭ್ರಮದಿಂದ ಪಿಡ್ಡೋಲಗವಾಗಿ ಪರಮೋಲ್ಲಾಸದೊಳು ಮಹಾ ವೈಭವಾತಿಶಯ ವಾಗಿ ವಿಧ್ಯುಕ್ತವಾದ ಮೊದುವೆಯಂ ಮಾಡಿ ನಾಲ್ಕು ದಿನಗಳೂ ಕ್ರಮವಾಗಿ ವಿವಾಹ ಪ್ರಸ್ತುತಮುಂ ಮಾಡಿದನು, ಆ ಚಿತ್ರವರ್ಮಂ ಲೋಕೈಕ ಸುಂದರಿಯಾದಾ ಭಾಮಾಮಣಿಯಂ ಕೂಡಿ ಸಕಲ ಸೌಖ್ಯಂಗಳಂ ಅನುಭವಿಸುತ್ತಿದ್ದು ಹದಿನೈದಿಪ್ಪತ್ತು ದಿನಂಗಳಾದ ಅನಂತರ ತನ್ನ ವೃತ್ತಾಂತಮುಂ ಅತ್ತೆಮಾವಂದಿರೊಳರುಹಿ ಅವರಿಂದನುಜ್ಞಾತನಾಗಿ ಸಕಲ ಪರಿವಾರ, ಚತುರಂಗ, ಸಮೂಹ್ಯತನಾಗಿ, ತನ್ನ ಕಾಂತೆಯನ್ನೊಡಗೊಂಡು ಕನಕಾಲವಾಲ ಪುರಮಂ ಸೇರಿ ಅಣ್ಣನಂ ನೋಡಿ, ತನ್ನ ಕಾಂತೆಯೊಡನೆ ನಮಸ್ಕರಿಸಿ, ತನ್ನ ವಿಶಿಷ್ಟ ಸಮಾಚಾರಂಗಳಂ ಜೆನ್ನೈಸಿ, ಸ್ನಾನದ ಮನೆಯೊಳು ನೀರು ಕಾಯಿಸುವಂತೆ ಪರಿಚಾರಿಕೆಯರಿಗಾಜ್ಞಾಪಿಸಿ. ಸಿದ್ಧರಸವನ್ನೂ ಅಘುಟಿಕೆಯನ್ನೂ, ಆ ನೀರಿನ ಕೊಪ್ಪರಿಗೆಯೊಳು ಹಾಕಿ, ಶಿಲಾರೂಪವಾದ ತನ್ನ ಅತ್ತಿಗೆಯ ವಿಗ್ರಹಮಂ ತರಿಸಿ ಸ್ನಾನಮಂ ಮಾಡಿಸೆಂದು ಪರಿಚಾರಿಕೆಯರಿಗೆ ಆಜ್ಞಾಪಿಸಿ ತಾಂ ಅಣ್ಣನೊಂದಿಗೆ ಸೇರಿ ಕುಳಿತಿರೆ, ಆ ಪರಿಚಾರಿಕೆಯರಾ ಬಿಸಿನೀರಂ ಆ ಶಿಲಾಪ್ರತಿಮೆಗೆ ಸ್ನಾನಮಂ ಮಾಡಿಸಲು ಸಿದ್ಧರಸ ಪ್ರಭಾವದಿಂ, ಮುನ್ನಿನಂತೆ ರಾಜಾತ್ಮಜೆಯಾಗಿ ಈ ಸುದ್ದಿಯಂ ಕೇಳುತ ಮಹದಾನಂದ ತುಂದಿಲನಾದ ಮಣಿವರ್ಮಂ ತನ್ನ ಅತ್ತೆಯೇ ಮೊದಲಾದ ಆಪ್ತಬಂಧುವರ್ಗಮುಂ ಕರೆಯಿಸಿಕ್ಕೊಂಡು ಕುಳಿತಿರುವ ಕಾಲದೊಳು ಸ್ನಾನಮಂ ಮಾಡಿದ ಶಿಲಾರೂಪಮುಂ ತೊರೆದ. ಮಣಿವರ್ಮನ ಧರ್ಮಕಾಂತೆಯು ತನ್ನ ಅಂತಃಪುರಮುಂ ಸಾರಿ ದಿವ್ಯಾಲಂಕಾರಭೂಷಿತ ಗಾತ್ರಳಾಗಿ, ಬಂದು ತಂನ ಕಾಂತನಿಗಭಿವಂದಿಸಿ ತಾಯಿಗೆ ಪೊಡಮಟ್ಟು ನಿಲ್ಲಲು, ಮಣಿವರ್ಮಂ ಸಂತೋಷದಿಂದ ಕಾಂತೆಯಂ ತೆಗದಪ್ಪಿ ತೊಡೆಯಮೇಲೆ ಕುಳ್ಳಿರಿಸಿಕೊಂಡು ಚಿತ್ರವರ್ಮನಂ ತೋರಿ ಎಲ್ಲೆ ಮೋಹನಾಂಗಿಯೇ! ಈತಂ ನಿನ್ನ ಮೈದುನನು ಅವನ ಬಳಿಯೊಳು ನಿಂದಿಹಳು ನಿನ್ನ ತಂಗಿಯು, ಇವನ ಪ್ರಯಾಸದಿಂದ ನೀಂ ಮರಳೀ ಮನುಜಳಾದೆ ಎಂದೊರೆದು ಆ ಸುಂದರಿಯುಂ ತನ್ನ ತಾಯಿಯುಂ ಸಮಾಧಾನಗೊಳಿಸೆಂದು ಹೇಳಿ ಸವಿಾಪದೊಳು ನಿಂದಿರ್ದ ತನ್ನ ಅತ್ತೆಯ ಬಳಿಗೆ ಕಳುಹಲು ತಾಯಿ ಮಕ್ಕಳು ಪರಸ್ಪರಮಾಗಿ ಮಹದಾನಂದವತಿಯರಾಗಿ ಮಾತುಗಳನ್ನಾಡುತ್ತ ನಿಂತಿರ್ದರು.

ಅತ್ತಲಾ ಮಣಿವರ್ಮಂ ತನ್ನ ಕಾಂತೆಯು ಶಿಲೆಯಾದ ದಿನದೊಳಾಕೆಗೆ ನೀರೆಶದವ ರಾರೆಂದು ವಿಚಾರಣೆಯಂ ಮಾಡಿ ಆ ದಾದಿಯಂ ಕಂಡುಹಿಡಿದು ಹಿಡಿತರಿಸಿ ವಿಚಾರಿಸಲು ಸ್ವಾಮಿ ಮಹಾರಾಜರೇ ! ಆ ದಿನದೊಳು ನಾಂ ಅಮ್ಮನವರಿಗೆ ಮಜ್ಜನಮಂ ಮಾಡಿ ಸುತ್ತಿರುವ ಕಾಲದೊಳು ಪದ್ಮಗಂಧಿನಿಯೆಂಬ ವಾರಾಂಗನೆಯು ಯಾವದೋ ಒಂದೇ ಬಗೆಯಾದ ನೀರಂ ತಂದು ಅಮ್ಮನವರ ಮೇಲೆ ಚೆಲ್ಲಿದಳು ಆಗಲೇ ಶಿಲಾಮಯವಾದ ದ್ದು. ಆ ಕೂಡಲೆ ಆ ಪರಿಯಿಂ ಅರಿಕೆ ಮಾಡದೆ ಹೋದ ನನ್ನ ತಪ್ಪಂ ಕ್ಷಮಿಸಬೇ ಕೆಂದು ಪ್ರಾರ್ಥಿಸುತ್ತೇನೆಂದು ಭಯಗೊಂಡವಳಾಗಿ ನಡದ ಪರಿಯನೆಲ್ಲಮಂ ಪೇಳಲವ ಳಂ ಅಂತೆಯೇ ಜೋಪಾನದೊಳು ನಿಲ್ಲಿಸಿ ಆ ವಾರನಾರಿಯಾದ ಪದ್ಮಗಂಧಿನಿಯಂ ಕರೆ ಯಿಸಿ, ವಿಚಾರಿಸೆ ಭೀತಿಗೊಂಡವಳಾಗಿ ನಡೆದುದಂ ಮಾಜದೆ ತಾನಾಕೃತ್ಯಮಂ ಮಾಡಿ ದ್ದುಂಟೆಂದು ತಪ್ಪಿಗೆ ಒಪ್ಪಿಕೊಳ್ಳಲು, ಈ ಪರಮದ್ರೋಹಿಗಳಾದಿರ್ವರಂ ಆನೆಗಳ ಕಾಲ್ಗ ಳಿಗೆ ಕಟ್ಟಿ ಊರೊಳೆಲ್ಲಾ ಎಳೆಯುವಂತೆ ಆಜ್ಞಾಪಿಸಲು ಮಣಿವರ್ಮನಂ ನೋಡುತ್ತ ತನ್ನ ಪರಿಚಾರಿಣಿಯಂ ಬಿಡಿಸೆಂದು ಬೇಡಿಕೊಳ್ಳಲು ಹೆಂಡತಿಯ ಮಾತು ಲಾಲಿಸಿ ಆ ಪರಿಚಾರಿಣಿಗೆ ಶಿಕ್ಷೆಯಂ ಕ್ಷಮಿಸಿ ಆ ಸೂಳೆಯಂ ಅಂತೆಯೇ ದಂಡನೆಗೆ ಗುರಿಮಾಡಿದಂ.

ತದನಂತರಂ ತನ್ನ ಬಂಧು ಜಾಲ ಸಮೂಹಮೃತನಾಗಿ ಚತುರಂಗಬಲವಂ ಒಡ ಗೊಂಡು ಬೇಕಾದ ವಸ್ತ್ರಾಭರಣಂಗಳನ್ನೂ ಸಕಲ ಸಾಮಗ್ರಿಗಳನ್ನೂ ಅಣಿಗೊಳಿಸಿ ಗೊಂಡು ತಾನೂ, ತನ್ನ ತಮ್ಮನೂ, ತನ್ನ ಪತ್ನಿಯರಂ ಜೊತೆಗೊಂಡ ತಮ್ಮ ತಂದೆ ತಾಯಿಗಳಂ ನೋಡಲೋಸುಗಂ ಅಲ್ಲಿಂ ಪೊರಟು ರಾಜ್ಯಭಾರಮಂ ಮಂತ್ರಿಯೊಳಿರಿಸಿ ಒರುತ್ತಾ ದಾರಿಯೊಳು ಕೆಲವು ರಾತ್ರಿಗಳಂ ತೊರೆದು ಆ ಅಗ್ರಹಾರದೊಳಿರ್ದ ವೃದ್ಧ ರಾದ ಮಾತಾ ಪಿತೃಗಳಂ ಕಂಡಭಿವಂದಿಸಿ ತಮ್ಮ ಪತ್ನಿಯರಿಂದ ನಮಸ್ಕಾರಂಗಳಂ ಮಾಡಿಸಿ ತಮ್ಮ ವೃತ್ತಾಂತಗಳನೆಲ್ಲಮಂ ಏಸ್ಕಾರವಾಗಿ ತಿಳಿಪಲು ಕೇಳುತ್ತಲಾ ಚಂದ್ರ ಧ್ವಜರಾಯಂ ಜೋತಿರ್ಮತಿಯೂ ಪರಮಾನಂದ ಭರಿತರಾಗಿ ದೈವಯೋಗದಿಂದ ಪ್ರಾ ಪ್ತರಾಜ್ಯಪದವಿಗಳಾದ ಮಕ್ಕಳನ್ನೂ ಪರಮ ಭಾಗ್ಯಶಾಲಿನಿಗಳಾಗಿಯೂ ಸುಂದರಿಯ ರಾಗಿಯೂ, ಇರುವ ಸೊಸೆಯರನ್ನೂ, ನೋಡಿ, ಆಲಿಂಗಿಸಿಕೊಳ್ಳುತ್ತಾ, ಮೈದಡವ ತ್ತಾ, ತಲೆಯಂ ನೀವುತ್ತ ಅಂತೆಯೇ ತನಂದದಿಂ ಮೈಮುರಿದು ಎದ್ದವರಾಗಿ ಎಲ್ಲರೂ ಸೇರಿ ಕುಳಿತು ಸರಸಸಲ್ಲಾಪಗನ್ನಾಡುತ್ತಿದ್ದು, ಸ್ನಾನಭೋಜನಾದಿಗಳಂ ಮಾಡಿ. ಸಮ ಸ್ತರೂ, ಸುಖಿಯಾಗಿ ಯಾ ದಿನಂ ಕಳೆದು ಮರುದಿನದೊಳು, ಜ್ಯೋತಿಷ್ಮತೀ ಪುರದ ಮೇಲೆ ದಂಡೆತ್ತಿ ಹೊರಟು ಶತ್ರುರಾಯರಂ ಜಯಿಸಿ, ತಮ್ಮ ಪೂರ್ವರಾಜ್ಯಮಂ ಸಾ ಧಿಸಿ ತಂದೆಗೆ ರಾಜ್ಯಾಭಿಷೇಕಮಂ ಗೈಸಿ ಅಲ್ಲಿಂ ಪೊರಟು ಕನಕಾಲವಾಲಪುರಮಂಸಾರಿ ತಾನಲ್ಲಿ ಅಭಿಷಿಕ್ತನಾಗಿ ತಮ್ಮನಂ ತಂದೆಯಒಳಿಯೊಳು ಯುವರಾಜನನ್ನಾಗಿ ನೆಲೆಗೊಳಿ ಸತಾಂ ತನ್ನ ರಾಜ್ಯದ ಕಪ್ಪಮಂ ಪ್ರತಿಶರದಾನವರಾತ್ರಿಯೊಳು ತಂದೆಗೆ ತಂದು ಸಮ ರ್ಪಿಸುತ್ತಾ ಆ ರಾಜ್ಯಂಗಳಂ ಒಂದೇ ರಾಜ್ಯಮಾಗಿ ಮಾಡಿಕೊಂಡು ಸಕಲ ಧರ್ಮ

ನಾರಾಯಣರಾಗಿ ಪ್ರಜಾರಂಜಕರಾಗಿ ಬಾಳುತ್ತಿದ್ದರು ಎಂದು ಹೇಳುವಷ್ಟರಲ್ಲಿ ಬೆಳಿಗಾಯಿತು, ಕಥೆ ಹೇಳುತ್ತಿದ್ದ ಪ್ರತಿಬಿಂಬವು ಇನ್ನು ವಿಶ್ರಾಂತಿಸುಖವನ್ನು ಪಡಿಯುತ್ತೇನೆಂದು ಸುಮ್ಮನಾದುದು. ಭೋಗವತಿಯು ಪ್ರತಿಕ್ಷಣದಲ್ಲಿಯೇ ಎದ್ದು ಬಂದು ಕೈ ಹಿಡಿಯಬೇಕೆಂದು ಬೇಡಿಕೊಳ್ಳಲು ಅವಳಲ್ಲಿ ಸೇರಿ ೮ ದಿನದಲ್ಲಿ ಆಕೆಯನ್ನು ರತಿಸುಖದಲ್ಲಿ ಸಂತೋಷಗೊಳಿಸಿದನು.

ಅನಂತರ ಒಂದೊಂದು ದಿನವೋರ್ವೊಳುಸೇರಿ ಸಕಲ ಸೌಖ್ಯಂಗಳಂ ಹೊಂದುತ್ತಾ, ಅವರೊಳೊ ರ್ವರಿಗೂ ಮಮತೆಯುಗಲದಂತೆಯಲ್ಲರಂ ಸಂತೋಷಿಸುತ್ತಿರುವಂತೆ ಕ್ರಮುಂ ಮೀರಲು ಸರಿಯಲ್ಲವೆಂದುಯೋಚಿಸಿದವನಾಗಿ, ಪ್ರಯಾಣೋನ್ಮುಖನಾಗಲು ಆ ನಾಲ್ವರೂ ಭೂತೆಯೊಳು ಹೊರಟು ಬರಲು ಪ್ರಯಾಣಂಗಳಂ ಮಾಡಿಕೊಳ್ಳಲದಂ ಕಂಡವನಾಗಿ ಎಲ್ಲೆತರುಣೀಮಣಿಗಳಿರಾ ? ನೀವೆಲ್ಲರೂ ನನ್ನೊಂದಿಗೆ ಬಂದವರಾದರೆಈ ರಾಜ್ಯವ ಅನಾಯಕಮಾಗಿ ಹಾಳಾಗುವದು ನೀವಂತ ಮಾಡದೇ ಸರ್ದಿಯಂ ಕಲ್ಪಿಸಿಕೊಂಡು ಕೆಲಬರುನನ್ನ ವೊಡನೆಹೊರಡುವರಾಗಿರೆ, ಮತ್ತೆ ಕೆಲಬರು ರಾಜ್ಯಪರಿಪಾಲನಾಕಾರ್ಯದೊಳಿರಬೇಕು ಅವರುಬಂದ ಬಳಿಕ ನನ್ನೆಡೆಯೊಳಿರ್ದವರು ರಾಜ್ಯಪರಿಪಾಲನಾರ್ಥವಾಗಿ ಹೋಗಬೇಕು, ಓರೋರ್ವರಿರ್ದೂ ರಾಜ್ಯಮಂ ಪಾಲಿಸುವೆನೆಂದೊಡೆ ನಡೆಯಲಾರದೆಂದು ಸಮ್ಮತಿಯಂ ಕೇಳಿ ಅವರಂ ಸಮ್ಮತಗೊಳಿಸಿದಮ್ಮಾವತೀ, ಲೀಲಾವತಿಯರಂ ಸಂಗಡ ಬರುವಂತೆ ಗೊತ್ತುಮಾಡಿ ಕಲಾವತೀ ಭೋಗವತಿಯರಂ ಮಣಿದ್ವೀಪದ ರಾಜ್ಯಭಾರಕಾರ್ಯಕ್ಕಾಗಿರುವಂತೆ ಪರುಠವಿಸಿ, ತನ್ನೀರ್ವರುಕಾಂತೆಯರಂ ಜೊತೆಗೊಂಡು, ಮಂತ್ರಿಯಾದಭಟ್ಟಿಯೊಂದಿಗೆ ಪಲ್ಲಕಿಯನ್ನೇರಲು ಬೆತಾಳಂ ಆರಿಗೂಗೋಚರಮಾಗದೇ ಆ ವಿಮಾನವಂ ತಲೆಯೊಳು ಹೊತ್ತುಕೊಂಡು ಆಕಾಶಮಾರ್ಗವಾಗಿ ಬರುತ್ತಿರೆ ಕುಬೇರಪುಷ್ಪಕದಂತೆ ರಾರಾಜಿಸುತ್ತಿರ್ದಾಪಲ್ಲಕ್ಕಿಯುಮಾಳವದೇಶದ ಸುಂದರೀ ಮುಖೇಂದೀವರದಂತೆ ಶೋಭಿಸುತ್ತಿರುವ ಉಜ್ಜಯಿನೀ ಪುರಮಂಸೇರಿ ಸುಖವಾಗಿರ್ದರು.

ಈಪರಿಯೊಳುಕಥೆಗಳನ್ನು ಹೇಳಿದ ತನ್ನ ಮಂತ್ರಿಯಂ ಕುರಿತು ಎಲ್ಲೆಮಂತ್ರಿಶಿಖಾಮಣಿಯೇ ? ನೀಂಪೇಳಿದ ಆಶ್ಚರ್ಯಕರಮಾದೀ ವಿಕ್ರಮಾರ್ಕರಾಯನ ಚರಿತ್ರೆಯಂ ಕೇಳಿಆಹ್ಲಾದ ಹೃಯನಾದೆನು ಇಂತಿಹ ಅತಿಶಯಮಾಗಿಯೂ ಸುಂದರಮಾಗಿಯೂ ಇರುವ ಕಥೆಗಳಂ ನಾನೀವರಿಗಂ ಕೇಳಲೇಯಿಲ್ಲವು ನಿನ್ನಿಂದ ಕೇಳಿದವನಾದೆನು ಎಂದು ಆ ಮಂತ್ರಿಯಂ ಬಹುಮಾನಿಸಿ ಅಂದಿನೋಲಗಮಂ ಬೀಳ್ಕೊಟ್ಟನೆಂಬಲ್ಲಿಗೆ ಕರ್ನಾಟಕ ಭಾಷಾವಹಜನರಚಿತ ಸೌಂದರ್ಯಾದ್ಯುತ್ತುರೀಚಿತ್ರಬೃಹತ್ಕಥಾಮಂಜರಿಯೊಳು ಎರಡನೆ ಭಾಗವ ಸಂಪೂರ್ಣಮಾದುದು.